MICROFILMED BY
NEHRU MEMORIAL MUSEUM AND LIBRARY
TEEN MURTI HOUSE
NEW DELHI

SWADESHABHIMANI
KANNADA WEEKLY
PUBLISHED FROM
MANGALORE

ROLL No. 5

CONTD

1916

P.K.G

18.2.80

Registered No M. 40

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವು ಪ್ರಕಟಿಸಲ್ಪಡುವುದು.

ಚಂದಾನಿರ್ಣಯ — ಸಾಲಿಯಾನಕ್ಕೆ ರೂ 1—4—0 ಟಪ್ಪಾಲು ಹಾಸಿಲು ಸಹಿತ 2—1—0

ಪುಸ್ತಕ X ಮಂಗಳೂರು ತಾ 16ನೇ ಜೂನ್ ಶುಕ್ರವಾರ 1916. ಸಂಚಿಕೆ 24

ಅತ್ತರು ಮತ್ತು ಸುರಭಿಗಳಲ್ಲಿ ಮುಕುಟವರ್ಧನದಂತಿರುವ



ಒಟ್ಟೋ ಮೋಹಿನಿ



(ರಿಜಿಸ್ಟರ್ಡ್.)

ಅನೇಕ ವಸ್ತುಪ್ರದರ್ಶನಗಳಲ್ಲಿ ಪ್ರದರ್ಶಿಸಲ್ಪಟ್ಟು ಕಡೆಗೆ ಅದರ ರಮ್ಯವಾದ ಅತ್ಯಂತ ಶಾಶ್ವತವಾದ ಪರಿಮಳಕ್ಕಾಗಿ ಚಿನ್ನ ಬೆಳ್ಳಿಯ ಪದಕಗಳನ್ನು ಪಡೆದಿದೆ. ಎಲವಸ್ತ್ರದಲ್ಲಿ 4 ತಟಕುಗಳನ್ನು ಹಾಕುವುದರಿಂದ ಹಿಡಿ ತುಂಬಾ ಮಲ್ಲಿಗೆ ಹೂ ಇದ್ದ ಪರಿಮಳವುಂಟಾಗುವುದು. ಈ ಹೂಗಳು ಕೃತಕವಾದವುಗಳಾದರೂ ನೈಸರ್ಗಿಕ ಹೂವಿನಂತೆ ಪ್ರತಿ ಸಾಯಂಕಾಲ ಬಾಡಿಹೋಗದು. ಅದರೆ ತನ್ನ ಪರಿಮಳವನ್ನು 4 ದಿವಸಗಳಿಗಿಂತಲೂ ಹೆಚ್ಚಿಗೆ ಕೊಡುತ್ತಿರುವದು. ಆದುದರಿಂದ ಒಟ್ಟೋ-ಮೋಹಿನಿಯು ಶಾಶ್ವತವಾದ ಸುರಭಿಯೆಂದು ಕರೆಯಲ್ಪಟ್ಟು ಈ ಕಾಲಕ್ಕೆ ತಕ್ಕುದಾದ ಬಹುಮಾನವಾಗಿ ಕೊಡತಕ್ಕ ದ್ರವ್ಯವಾಗಿದೆ ಇದರ ಪರಿಮಳವು ಶಾಶ್ವತವಲ್ಲವೆಂದು ದೃಢಮಾಡಿಕೊಡುವವಗೆ 100 ರೂಪಾಯಿಗಳ ಬಹುಮಾನ ಕೊಡಲಾಗುವದು. ಆದುದರಿಂದ ಯಾಕೆ ಈ ಬಹುಮಾನವನ್ನು ಪಡೆಯಲು ಪ್ರಯತ್ನಿಸಲಾಗದು?

ಕ್ರಯ ಅರ್ಧ ಔನ್ಸ್ ಸೀಸೆಗೆ 2—0—0 1 ಡ್ರಾಮ್ ಸೀಸೆಗೆ 0—12—0 ಪರಿಮಳದ ಕಾರ್ಡುಗಳು ಡಜನ್ 1ಕ್ಕೆ 0—12—0

ಒಟ್ಟೋ ಆಲ್ಬಿನಿಯಾ, ಮಿನರ್ವಾ, ಸಬೀನಿಯಾ ಮತ್ತು ರೊಬ್ಬಿನಿಯಾ ಇವುಗಳು ನಮ್ಮಲ್ಲಿ ಯಥೇಷ್ಟವಾಗಿ ಬಂದಿವೆ!

Proprietors:—The Oriental Drug & Chemical Co
Sole Agents —MOHINI AGENCY,
~~3 Fida Building, Jumma Musjid~~ BOMBAY.
Agents —Bhagavandas Choonilal & Co.,
177 China Bazar Road, MADRAS

ಪ್ರೊಪ್ರೈಟರರು: — ಓರಿಯಂಟಲ್ ಡ್ರಗ್ ಎಂಡ್ ಕೆಮಿಕಲ್ ಕೋ
ಪ್ರಾಮುಖ್ಯ ಏಜಂಟರು: — ಮೋಹಿನಿ ಏಜನ್ಸಿ,
3 ಫಿದಾ ಬಿಲ್ಡಿಂಗ್, ಜುಮ್ಮಾ ಮಸೀದ್, ಬೊಂಬೈ
ಏಜಂಟರು: — ಭಗವಾನ್‌ದಾಸ್ ಚೂನಿಲಾಲ್ ಎಂಡ್ ಕೋ,
177 ಚೀನಾ ಬಜಾರ ರಸ್ತೆ, ಮದ್ರಾಸು.

15 ದಿವಸಗಳೊಳಗೆ 500. ಪೆಟ್ಟಿಗೆ ಬತ್ತಿಗಳು ಮಾರೋಣವಾದವು.

ನಮ್ಮ ಸುಣುಪಾದ ಚಲೋ ಮೇಣದ ಬತ್ತಿಗಳು ಅದ್ವಿತೀಯ ಖ್ಯಾತಿಯನ್ನು ಹೊಂದುತ್ತಿವೆ ಪ್ರತಿಸ್ಥಳಗಳಲ್ಲಿಯೂ ಇವುಗಳ ವಿಕ್ರಿತವು ಬಹಳವಾಗಿ ಆಗುತ್ತಿರುವವು

ನಿರಾಶೆ ಹೊಂದದಂತೆ ಬೇಕಾದವರು ಈ ದಿನವೇ ಬರೆಯಿರಿ.

ಈ ಮೇಣದ ಬತ್ತಿಯ ಮಾರಾಟದ ಏಜನ್ಸಿಯನ್ನು ಅಪೇಕ್ಷಿಸುವವರು ಕೆಳಗಿನ ವಿಳಾಸದವರಿಗೆ ಬರೆಕೊಳ್ಳಬಹುದು.

ಕೆ. ದಯಾ ಮತ್ತು ಕಂಪೆನಿ,
ಹಂಪನಕಟ್ಟೆ, ಮಂಗಳೂರು.

ಪ್ರಧಾನ ಆಫೀಸು ಮತ್ತು ಬತ್ತಿಗಳನ್ನು ತಯಾರಿಸುವ ಕಾರಖಾನೆಯು ಮುಂಬಯಿಯಲ್ಲಿಯೂ ಇದರಿಂದ ಶಾಖೆಯು ಕೊಲಂಬೋದಲ್ಲಿಯೂ ಇರುತ್ತದೆ

ಮೈಸೂರು ಊದಬತ್ತಿಗಳು.

ಇಂಡಿಯಾ ದೇಶದಲಿ ನಡದಿರುವ ಯಗ್ಜಬೀಶನ್‌ಗಳಲ್ಲಿ ಸುಮಾರು 95 ಸರ್ಟಿಫಿಕೇಟುಗಳನ್ನು 32 ಮೆಡಲುಗಳನ್ನು - ಹೊಂದಿರುವ ನಮ್ಮ ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕಸಮಯದಲ್ಲಿಯೂ ರತಿಕರ ಉಲ್ಲಾಸ ಸಮಯದಲ್ಲಿಯೂ ಸಹ ಅತ್ಯವಶ್ಯಕವಾದ್ದರಿಂದ ಪ್ರತಿ ಒಬ್ಬರು ಈ ಕೆಳಗೆ ಇರುವ ಸುಗಂಧ ದ್ರವ್ಯಗಳನ್ನು ತರಿಸಿ ಆನಂದ ಹೊಂದುವದಲ್ಲದೆ ಸ್ವದೇಶ ವ್ಯಾಪಾರಕ್ಕೂ ಪ್ರೋತ್ಸಾಹಿಸುವರೆಂದು ನಂಬಿರುತ್ತೇವೆ

ಊದಬತ್ತಿಗಳು 24 ರೂ ತೂಕದ ಶೇರು 1ಕ್ಕೆ ರೂ 12 0-0, 5-0-0, 3-0-0 2—8 0, 1—4—0, 1—0—0

ಅರಗಜ ಮತ ಬಿಲ್ಲೆಗಳು ತೊಲಾ 1ಕ್ಕೆ 2—0 0, 1—0—0 0—12—0, 0—6—0

ಸುಗಂಧಿ ಕಾಪುರ 1ಕ್ಕೆ 0—1—0 **ಬಾಲಗ್ರಹ** ದೂಪ ಟಿನ್ 1ಕ್ಕೆ 0—8—0 **ಸುವಾಸನೇ ಸುಣ್ಣ** ಶೀಸೆ 1ಕ್ಕೆ 0-2 0, ಇವಲ್ಲದೆ ಇನ್ನು **ಅನೇಕ ತರಹ ಸೆಂಟ್ಸು**ಗಳು, ಯಸೆನ್ಸ್‌ಗಳು, ಸುಗಂಧ ದ್ರವ್ಯಗಳು, ಬೆಳ್ಳಿಯಿಂದ ತಯಾರಿಸಿದ ಸಣ್ಣ ಸಣ್ಣ ವಿಗ್ರಹಗಳು, ಬೆಳ್ಳಿಯ ಸಾಮಾನುಗಳು ಸಹ ಇರುತವೆ ಮತ್ತು ವರ್ಷಕ್ಕೆ ಎರಡಾವರ್ತಿಗೆ ಕಡಿಮೆ ಯಿಲ್ಲದೆ

ಬಹುಮಾನ ಹಂಚಲ್ಪಡುತ್ತೆ.

ಟಿ. ಎಲ್. ಉಪಾಧ್ಯಾಯರು ಎಂಡ್ ಸನ್ಸ್

ಸುಗಂಧಕಾರಿ, ಮೈಸೂರ

ಕನ್ನಡ ಗ್ರಂಥಗಳು.

	ರೂ	ಅ		ರೂ	ಅ.
ದ್ವಾದಶಸ್ಕಂದ ಭಾಗವತ	4	0	ತೊರವೆರಾಮಾಯಣ ಅವ್ವಲ್	1	8
ದಶಮ ಸ್ಕಂದ ಭಾಗವತ	1	8	ದಯ್ಯಂ	1	0
18 ಪರ್ವ ಮಹಾಭಾರತ	3	8	ರಾಮಾಯಣ ಕಥಾಸಂಗ್ರಹ	0	12
ದಶಪರ್ವ ಭಾರತ	2	0	ಜೈಮುನಿ ಕಥಾಸಂಗ್ರಹ	0	12
ಅಷ್ಟಪರ್ವ ಭಾರತ	1	0	18 ಪರ್ವ ವಚನಭಾರತ ಕಥಾಸಂಗ್ರಹ	0	8
ಸಟೀಕ ಜೈಮುನಿ ಭಾರತ	4	0	ಸಟೀಕ ಭಗವದ್ಗೀತೆ	0	8
ಡಿಟೊ ಮೂಲ	0	12	ಸಟೀಕ ತ್ರಿಕಾಂಡ ಅಮರ	0	12
			ಬೃಹತ್ಕಥಾ ಮಂಜರಿ	0	12

ಇವುಗಳಲ್ಲದೆ ಬೇರೆ ಅನೇಕ ಗ್ರಂಥಗಳು ವೇದಾಂತ, ನಾಟಕ ಜ್ಯೋತಿಷ್ಯ, ವೈದ್ಯ, ಯಕ್ಷಗಾನ ಮೊದಲಾದ ಗ್ರಂಥಗಳು, ಮೈಸೂರು ಸುಗಂಧ ದ್ರವ್ಯಗಳು, ಅಮೃತಾಂಜನ ಮೊದಲಾದ ಪೇಟೆಂಟ್ ಔಷಧಗಳು ವಗೈರೆ ಎಲ್ಲಾ ನಮೂನೆ ಸಾಮಾನುಗಳು ಕಡಮೆ ಕ್ರಯದಲ್ಲಿ ಮಾರಲಡುತ್ತವೆ ಟಪ್ಪಾಲು ಖರ್ಚು ಬೇರೆ ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರಿಯಿರಿ

ದಿ ಜನರಲ್ ಟ್ರೇಡಿಂಗ್ ಏಜನ್ಸಿ,
ವಿಟ್ಲ, ದಕ್ಷಿಣ ಕನ್ನಡ.

ಆತಂಕನಿಗ್ರಹ ಗುಳಿಗೆಗಳು.

ಅಯ್ಯಾ ವಾಚಕಮಹಾಶಯರೇ,—

ತಾವು ಅತಿ ಉತ್ತಮ ದೇಹದಿಂದ ಪ್ರಕಾಶಿಸುವಿರಾಗಬೇಕಾದರೆ, ಪ್ರಸ್ತುತದಲ್ಲಿ ಹಾಗು ತಮ್ಮ ದೇಹದಲ್ಲಿರುವ ಅನೇಕ ರೋಗಗಳನ್ನು ಹೋಗಲಾಡಿಸ ವ ಪ್ರಯತ್ನಪಡತಬೇಕ ಅಂಥಾ ಪ್ರಯತ್ನಗಳು ಹಾಗು ಉತ್ತಮಕರವಾದ ಔಷಧವನ್ನು ಸೇವಿಸುವಲ್ಲಿ ಗುಣ ಹೊಂದುವಿರಿ. ಅದಕ್ಕಾಗಿಯೇ

ಆತಂಕನಿಗ್ರಹ ಗುಳಿಗೆಗಳನ್ನು

ಹಗಲಿರುಳೂ ಪ್ರಿಯಬಂಧುವನಾಗಿ ಮಾಡಿ ಸೇವಿಸುವಲ್ಲಿ ಉತ್ತಮರಾಗುವಿರಿ

ಕ್ರಯ ೩೨ ಗುಳಿಗೆಗಳಿಗೆ ರೂ ೧—೦—೦

ವಿಳಾಸ — ಮೈಸೂರು ಏಜಂಟರು —

ಮ ಯಂ. ಸಿ. ಪದ್ಮನಾಭಯ್ಯಂಗಾರ್ಯರವರು,

ದಿ ಚಾಂಪಿಯನ್ ಅಥಲೈಟಿಕ್ ಏಜನ್ಸಿ ಮೈಸೂರು

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,

ಆತಂಕನಿಗ್ರಹ ಔಷಧಾಲಯ, 157, ಬ್ರಾಡ್ವೇ, ಮದರಾಸು

Estd 1888 ಸ್ಥಾಪನೆ 1888

K. B. RELE & Cos.,—BOMBAY

ಕೆ. ಬಿ. ರೇಳೆ ಕಂಪೆನಿಕೃತ

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲಿನ ಮಲಮು.

ಎಷ್ಟೋ ಹಳತ, ಕರಿ ಮತ್ತು ಹಟಮಾರಿ ಗಜಕರ್ಣವು ಈ ಮಲಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತದೆ ೨೦-೨೫ ವರ್ಷಗಳ ಹಳತ, ಪ್ರಯತ್ನ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ ಬೆಲೆ ಬಾಟ್ಲಿ ೧ಕ್ಕೆ ೪ ಆಣೆ ಟಪ್ಪಾಲು ಖರ್ಚು ೪ ಬಾಟ್ಲಿಗಳ ವರೆಗೆ ನಾಲ್ಕೇ ಆಣೆ

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು.

ಸಾಸಾರ್ಪರಿಲ್ಲೆಯು.

ಇದರಲ್ಲಿ ಪಾರಜವಿಲ್ಲಾ!

ಈ ಸಾಸಾರ್ಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳಷ್ಟು ನಷ್ಟವಾಗುತ್ತವೆ ಬಹಳ ದಿವಸದಿಂದ ಮೈಯಲ್ಲಿ ಶೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ಯಿಂದ ಮೈಮೇಲೆ ಉಬ್ಬುವ ಚಪ್ಪೆಗಳೂ, ಜಖಮುಗಳೂ, ಬಾಯಿಗೆ ಮತ್ತು ಅಂಗಳಿಗೆ ತೂತು ಬೀಳೋಣ, ಪಿನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ, ಕೈಕಾಲು ಬಾತುಕೊಳ್ಳೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವೋಣ, ತಲೆ ಕೈಕಾಲುಗಳುರಿಯೋಣ, ಕೈ ಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ ಸಾಸಾರ್ಪರಿಲ್ಲೆಯು. ಕ್ರಯ ಬಾಟ್ಲಿ ೧ಕ್ಕೆ ರೂ ೧—೪—೦. ಅಂಚೆ ವೆಚ್ಚ ೪ ಆಣೆ

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರಪೂರ ಕಮಿಷನ್

ಕೆ. ಬಿ. ರೇಳೆ ಸನ್ಸ ಕಂಪೆನಿ, ಗಿರಗಾಂವ ನಂ. ೪ ಮುಂಬಯಿ.

1,000 ರೂಪಾಯಿಗಳು ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

(ಗವರ್ನ್‌ಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ)

ಈ "ಸಾಲಾಮಿಸ್ರಿ ಮುರಬ್ಬಾ"ವಿನ ಸೇವನೆಯಿಂದ — ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಮೂತ್ರದಲ್ಲಿ ಹೋಗುತ್ತಿದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ ಈ ಸಾಲಾಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವು ಒಳ್ಳೇ ಸ್ಥಿತಿಯಲ್ಲಿ ಡುವುದು ಈ ಮುರಬ್ಬಾವು ಸಾಲಾಮಿಸ್ರಿಯಿಂದ ತಯಾರಿಸಲ್ಪಟ್ಟಿದ್ದಲ್ಲವೆಂದು ವ್ಯಕ್ತಪಡಿಸುವವರಿಗೆ —

1,000

ರೂಪಾಯಿಗಳು ಬಹುಮಾನಾಗಿ ಕೊಡಲ್ಪಡುವುದು ಹಾಗೆ ವ್ಯಕ್ತಪಡಿಸಿಯೂ ಬಹುಮಾನದ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರಕಾರದ ಮೂಲಕ ನನ್ನಿಂದ ಪಡೆಯಬಹುದು

ಕ್ರಯ ಡಬ್ಬಿ 1ಕ್ಕೆ ರೂ. 2—0—0 ಟಪ್ಪಾಲು ಖರ್ಚು ಗ ಡಬ್ಬಾದಿಂದ ೩ ಡಬ್ಬಿಗಳ ವರೆಗೆ 0—6—0. ಉಪಯೋಗಿಸುವ ವಿಧ ಡಬ್ಬಿಯ ಜೊತೆಯಲ್ಲಿರುವುದು.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,
೫ ಅವೆನ್ಯೂ ರೋಡ್, ಬೆಂಗಳೂರು ಸಿಟಿ

ಸಂತೋಷಕರವಾದ ಪ್ರಕಟನೆ!

ಹೊಸ ನಮೂನೆ ಗಡಿಯಾರ!   ಸಂತೋಷಕರವಾದ ಬಹುಮಾನ!!

ಸುಂದರವಾದ ಜೂಬಿಲಿ ಪಾಕೆಟ್ ವಾಚ್.

9 ಬಹುಮಾನಗಳ ಸಹಿತ ರೂ. 3—0—0.

6 ವರ್ಷದ ಗ್ಯಾರಂಟಿ ಕೊಡಲ್ಪಡುತ್ತೆ

ಅಯ್ಯಾ, ಈ ನಕ್ಷೆಯಲ್ಲಿ ತೋರಿಸಿರುವ ಭಾರೀ ಕ್ರಯದ ಘಡಿಯಾರ ನಾವು ಸೀಮೆಯಿಂದ ಸ್ವಲ್ಪ ಮಾತ್ರ ತರಿಸಿರುತ್ತೇವೆ ಈ ಗಡಿಯಾರ ಕಂಪೆನ್‌ಸೇಷನ್ ಬಲಿಷ್ಠವಾದ ಸಾಮಾನಗಳಿಂದಲೂ ನಾಜೂಕಾದ ಯಂತ್ರದಲ್ಲಿಯೂ ತಯಾರಿಸಲ್ಪಟ್ಟಿದ್ದು ಈ ಗಡಿಯಾರವನ್ನು ಭಾರಿಭಾರಿ ಉದ್ಯೋಗಸ್ಥರ, ಬ್ಯಾಂಕಿನಲ್ಲಿರುವ ದೊರೆಗಳು, ಕೊಂಡುಕೊಳ್ಳುತ್ತಾ ಇದ್ದಾರೆ ಇಂಡಿಯಾ ದೇಶದಲ್ಲಿ ಪ್ರತಿ ದಿನ ನೂರಾರು ಗಡಿಯಾರಗಳು ಖರ್ಚು ಆಗುತ್ತವೆ ಜಾಗ್ರತೆ ಈ ಸೊಗಸಾದ ಗಡಿಯಾರವನ್ನು ತರಿಸಿಕೊಂಡು ಸಂತೋಷಪಡುವಿರಿ ಬಹುಮಾನ ತಪಸೀಲು — (1) ಸರಪಣಿ, (2) ಕಂಪಾಸ್, (3) ಜಪಾನ್ ಕರವಸ್ತ್ರ, (4) ಕೈ ಉಂಗುರ, (5) ಷರಟು ಗುಂಡಿ, (6) ಸುವಾಸನೆ ಸೆಂಟ್, (7) ಕೈಗುಂಡಿಗಳು, (8) ರೇಷ್ಮೆ ಕೆಲಸ ಮಾಡಿದ ಪೆಟ್ಟಿಗೆ, (9) ಗಿಲೀಟ್ ಬಟನ್.



ವಿಳಾಸ:— ರಾಸ್ ವಾಚ್ ಅಂಡ್ ಕಂಪೆನಿ,
3, ಇರುಳಪ್ಪನ ಬೀದಿ, ಮದರಾಸು.

ಪಾಳದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ

ಪ್ರತಿ ವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.



ಇಂಡಿಯಾದವರು ಮಾತ್ರವಲ್ಲ, ಬರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವಾ, ಫೀಜಿಲೆಂಡ್, ಆಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ.

ಮಹಾಭಾಗ ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತುಮಾತಿಗೂ ವೈದ್ಯರ ಸಮಯವನ್ನು ಕಾದು ಮೊರೆಯಿಡುವುದು ನಿಜವಾಗಿಯೂ ತಪ್ಪುವುದು

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸ್ಖೀನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತ ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 260

ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ ಮಾತ್ರ

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—8—0
ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—12—0
ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ ೫—0—0

ಯೋಗ್ಯತಾ ಪತ್ರಗಳು

ಮ|| ರಾ|| ಡಾಕ್ಟರ್ ಪ್ರಭಾಕರ್ ಫೆಲೊ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರ್ಯಾಜುಯೇಟ್ ಎನ್ ವೈ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ, ಐ ಎನ್. ಆಫ್ ದಿ ಸ್ಯಾನಿಟರಿ ಇನ್‌ಸ್ಟಿಟ್ಯೂಟ್ ಲಂಡನ್ ಕನ್‌ಸಲ್ಟಿಂಗ್ ಕೆಮಿಸ್ಟ್ ಎಗಿಯರಿವೇನ್ ನಂ. 2. ಬೊಂಬೈ ಇವರು ಬರೆದಿರುವುದು ತಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ ಅಜೀರ್ಣ, ಮಲಬದ್ಧತೆ, ಪಕ್ಕೆಯ ನೋವು, ಹೊಟ್ಟೇನೋವು, ದಿನತಪ್ಪಿಬರುವ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ ತಮ್ಮಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ, ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡುತ್ತೇನೆ

ಮ|| ರಾ|| ಪಿ ಎಸ್ ಅಚ್ಯುತರಾವ್ ಸೀನಿಯರ್ ಸರ್ಜನ್, ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನ್‌ಮೆಂಟ್ ಇವರು ಬರೆದಿರುವುದು ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ, ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ ವೈದ್ಯಶಾಲೆಯಲ್ಲಿ ಅನೇಕ ತರದ ಉಪಯುಕ್ತವಾದ ಕರ್ಣಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರು ಮಾಡುತ್ತಿರುತ್ತಾರೆ

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ ಕ್ಯಾಟಲಾಗು ಉಚಿತ

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಆರೋಗ್ಯಕ್ಕೆ ಮೊದಲು ಸೋಪಾನವು.



ನಮ್ಮ ಅಪೂರ್ವವಾದ

ಕ್ರಯ ಹಾಸಲು ಇಲ್ಲದೆ ಉಚಿತವಾಗಿ ಕಳುಹಿಸಲ್ಪಡುವ ವೈದ್ಯ ಬೋಧನೆಗಳಿರುವ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಓದುವದೇ ಯಾಗುವದು ಈ ಪುಸ್ತಕ ಲೋಕ ಹಿತಾರ್ಥವಾಗಿ ಛಾಪಿಸಲ್ಪಟ್ಟು ಮುಫತ್ತಾಗಿ ಕಳುಹಿಸಲ್ಪಡುತ್ತೆ.

ಸಂಪೂರ್ಣ ಪುರುಷತ್ವಕ್ಕೆ ಮೊದಲು ಸೋಪಾನವು.

ಮದನಮಂಜರಿ ಮಾತ್ರೆಗಳು.

ಉಪಯೋಗಿಸುವದೇ ಯಾಗುವುದು ಈ ಮಾತ್ರೆಗಳು ಬಲಹೀನತ್ವವನ್ನು ಹೋಗಲಾಡಿಸಿ ನರಗಳಿಗೆ ಬಲವನ್ನುಂಟು ಮಾಡಿ ರಕ್ತವನ್ನೂ, ಪುರುಷನ ವೀರ್ಯವನ್ನೂ ವೃದ್ಧಿಗೊಳಿಸಿ ಸಂಪೂರ್ಣ ಪುರುಷತ್ವವನ್ನು ಕೊಡುವವು. ೪೦ ಮಾತ್ರೆಗಳು ರೂ. 1.

ರಾಜವೈದ್ಯ ನಾರಾಯಣಜಿ ಕೇಶವಜಿ.
ಆಯುರ್ವೇದೋದಯ ಔಷಧಾಲಯ,
ಪ್ರಧಾನ ಆಫೀಸು:— ಜಾಮನಗರ (ಕಾಥ್ಯಾವರ್).

ಶಾಖೆ:—
ಮದನಮಂಜರಿ ಪಿಲ್ಸ್ ಆಫೀಸು,
20 ಚೈನಾಬಜಾರ್ ರಸ್ತೆ,
ಮದರಾಸು

Rajavaidya Narayanji Keshavaji,
Ayurvedodaya Aushadhalaya,
Head Office:— JAMNAGAR, (KATHIAWAR).
Branch: — 20 CHINA BAZAAR ROAD, MADRAS.

ESTABLISHED JULY 1906.

THE CANARA BANK, LIMITED., MANGALORE.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು;

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs	300,000—0—0	ನಿಯಮಿತ ಮೂಲ ಧನವು ರೂಪಾಯಿ	300,000—0—0
Issued Capital	225,000—0—0	ಹುಟ್ಟಿಬಂದ ಮೂಲ ಧನವು „	225,000—0—0
Subscribed Capital	219,100—0—0	ಪ್ರತಿಜ್ಞಾತ ಮೂಲ ಧನವು „	219,100—0—0
Paid up Capital	194,100—0—0	ಬಂದ ಮೂಲ ಧನವು „	194,100—0—0
Deposits ...	371,976—4—4	ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು ...	371,976—4—4
Reserve Fund	33,500—0—0	ರಕ್ಷಿತ ಧನವು	33,500—0—0

Besides the uncalled capital of Rs. 25,000/ 25% of the net profits are added annually to the Reserve Fund Rs 28,485/ have been invested in Government Paper of the face value of Rs 29,300/-

Dividends of not less than 6% paid during the past years and a bonus of 1% to 2% paid in addition during the last three years.

Fixed Deposits of Rs 50/ and above in multiples of Rs. 5/ received for 3, 6, 12 and 24 months @ 4, 4½, 5 and 5½% respectively at the discretion of the managing committee

Short-notice Deposits requiring one weeks notice of withdrawal after one month received @ 2½% per annum at the discretion of the managing committee

Current Deposit Account opened free of charge.

Savings Bank Account opened for any sum not less than 4 A and multiples thereof and interest paid @ 4½%.

Loans granted on proper securities and pledges.

Sealed Parcels for safe custody received on a moderate charge

Canara Bank Ltd.,
Mangalore, 1st December 1915.

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸಂಬಂಧ ಮೊಬಲಗು ಕೂಡಿಸಲ್ಪಡುವುದಲ್ಲದೆ ಹಿಸೆ ಮೌಲ್ಯಗಳಿಂದ ಕೇಳಲ್ಪಡದಿರುವ ರೂ 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 28,485—0—0 ನ ಕಾರದ ರೂ. 29,300ರದ ಭದ್ರತಾಪತ್ರಗಳಲ್ಲಿ ಠೇವಣಾತಿ ಮಾಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಸೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುದಾರರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ ಮೂರು ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ್' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

"ಕರೆಂಟ್ ಎಕೌಂಟ್" ಎಂಬ ಚಾಲ್ತಿ ಠೇವಣಾತಿಗಳು ಠೇವಣೆದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾದೀತು. ಈ ಠೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡೋಣಾಗುವುದು. ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ.

ಮೊಹರು ಹಾಕಲ್ಪಟ್ಟ ಡಬ್ಬಿ ಪೆಟ್ಟಿಗೆ ಮೊದಲಾದವುಗಳನ್ನು ಭದ್ರ ರಕ್ಷಣೆಗಾಗಿ ಸಾಧಾರಣ ದರದಲ್ಲಿ ಪಡಕೊಳ್ಳಲಾದಾವು.

P. Gopal Naik,
Secretary.

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳ-ಕಾಂತಿ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ಹಲವು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ ೩ ಬಾಟ್ಲಿಗೆ ೩ ರೂ. ೧೦ ಆಣೆ

೨ ಪ್ರಮೇಹರಿಪು ಬಿಂದು. ಬರೆಯುವ ಯಾವ ರೋಗವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಚಿತವಾಗಿ ಗುಣ ಕೊಡುವದು. ಬಾಟಿಗೆ ೧ ರೂ ೮ ಆ

೩. ಪ್ರಂಪಜೀರಕ ಪಾಕ. ಎಲ್ಲ ಪ್ರದರಗಳನ್ನೂ ಗುಟ್ಟು ಕಟ್ಟಳೆಯ ದೋಷಗಳನ್ನೂ ಈ ವಿಕಾರಗಳನ್ನೂ ತಪ್ಪದೆ ಗುಣಪಡಿಸುವದು. ಡಾಕಲಿಗೆ ೨ ರೂ.

೪ ಸುಧಾರಣಾವ ಲೇಹ. ರಕ್ತ ಅಥವಾ ಮೊಳೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪ್ರಸಿದ್ಧವಾಗಿದೆ ಡಾಕಲಿಗೆ ೨ ರೂ

೫ ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ಕಾಲಜ್ವರದ ಜ್ವರದ ದುಷ್ಟಯಕೃತ್ತು ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು ತಿಂಗಳ ಔಷಧಕ್ಕೆ ಬೆಲೆ ೩ ರೂ. ೮ ಆಣೆ.

೬. ಬಿಗಿಮೊಸ್ಲೇಹದ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ಪದಾರ್ಥಗಳಿಂದ ತಯಾರಿಸಿಯದೆ. ೧೦ ತೊಲಿಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲಿಗೆ ೨ ರೂ.

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ಪರಿಸೆಯ ಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲಿಗೆ ೨ ರೂ

೯. ವಾಸಾವ ಲೇಹ. ಕೆಮ್ಮು, ಗೂರ್ಲುಬ್ಬಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ಡಾಕಲಿಗೆ ೨ ರೂ.

೧೦. ಅಶ್ವಗಂಧೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ಸುಖಿಸೇವನೆಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಲಾಡಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ಡಾಕಲಿಗೆ ೨ ರೂ

೧೧. ವಾತಮುರಾರಿ ಚಾಪ್ಸ್. ತಲೆನೋವು, ಎದೆನೋವು, ಸೊಂಟನೋವು, ಸಂಧಿವಾತ, ಬೀಗು ವಾತ ಬಾಧೆಗಳನ್ನೂ ಕೂಡಲೆ ಗೆಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೨ ಗಜಕರ್ಣ ಕೇಸರಿ ಮುಲಾಮು. ತುರುಕಜ್ಜಿ, ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ದಿವಸದೊಳಗಾಗಿ ಗೆಲ್ಲುವದು. ಉರಿಯೇನು ಇಲ್ಲ ಸುಖಕರವಾಗಿದೆ. ಕರಡಿಗೆಗೆ ೪ ಆಣೆ.

೧೩ ಸವ್ಮೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲಿಗೆ ೧ ರೂ.

೧೪. ಬ್ರಹ್ಮಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಬುದ್ಧಿ ಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲಿಗೆ ೨ ರೂ. ೮ ಆಣೆ

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯ ನಾನಾ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಪಟ್ಟಿ ಕೇಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

ತಮ್ಮ ವಿಳಾಸ:—ಬಿ ಎಮ್. ನಾಥ್ ಮತ್ತು ಕಂಪೆನಿ,

ವೆಪರಿ ಪೋಸ್ಟು ಮದರಾಸು

B. M. Nath & Co., *Ayurvedic Chemists*
Vepery Post, MADRAS.

ಸ್ವದೇಶಾಭಿಮಾನಿ

ಮಂಗಳೂರು, ಶುಕ್ರವಾರ ತಾರೀಕು 16ನೇ ಜೂನ್ 1916

ಲೊಾರ್ಡ್ ಕಿಚನರ್.

ಲೊಾರ್ಡ್ ಕಿಚನರರ ಶೋಕಜನಕವಾದ ಮರಣದ ಸುದ್ದಿಯನ್ನು ನಾವು ಹಿಂದಿನ ಸಂಚಿಕೆಯಲ್ಲಿಯೇ ಪ್ರಕಟಿಸಿದ್ದೇವೆ. ಇವರ ಸಾಮ್ರಾಜ್ಯ ತತ್ಪರತೆ, ಧೋರಣೆ, ದೃಢ ನಿಶ್ಚಯ, ರಾಜಕಾರಣಪಟುತ್ವ ಮುಂತಾದ ಗುಣಗಳನ್ನು ನೋಡಿದರೆ ಇವರ ಮರಣ ದಿಂದ ನಮ್ಮ ಸಾಮ್ರಾಜ್ಯ ಸರಕಾರವು ತುಂಬಾ ಹಾನಿಯನ್ನು ಹೊಂದಿದೆಂಬುದಕ್ಕೆ ಸಂದೇಹವಿಲ್ಲ. ಇವರಲ್ಲಿ ಜರ್ಮನಿಯ ಸೊಕ್ಕಿ ಹೋದ ಕ್ಷಾತ್ರವೃತ್ತಿಯನ್ನು ನಿಃಶೇಷ ಮಾಡುವ ದೃಢನಿಶ್ಚಯವಿತ್ತು. ಮತ್ತು ಆ ನಿಶ್ಚಯದಂತೆ ಈ ಯುದ್ಧದಲ್ಲಿ ಅವರು ಪೂರ್ಣ ಯಶಸ್ಸನ್ನು ಹೊಂದುತ್ತಿದ್ದರು ಎಂಬುದಕ್ಕೇನೂ ಅಡ್ಡಿ ಇಲ್ಲ. ಈಗ ಇವರು ಗತಿಸಿದ ಮಾತ್ರದಿಂದಲೇ ಅವರ ದೃಢನಿಶ್ಚಯವು ವಿಫಲವಾಯಿತೆಂತ ಯಾರೂ ತಿಳಿಯಬೇಕಾಗಿಲ್ಲ. "ಇಂಗ್ಲೆಂಡ ದೇಶದಲ್ಲಿ ಲೊಾರ್ಡ್ ಕಿಚನರರನ್ನು ಅನುಸರಿಸುವ ಮತ್ತು ಸಾಮ್ರಾಜ್ಯದ ಮಾನವನ್ನೂ ವೈಭವವನ್ನೂ ಕಾಪಾಡುವ ದೇಶಭಕ್ತರಿಗೆ ನ್ಯೂನತೆ ಇಲ್ಲದ ಕಾರಣ ಲೊಾರ್ಡ್ ಕಿಚನರರ ಜರ್ಮನಿಯ ದುರಹಂಕಾರವೃತ್ತಿಯನ್ನು ನಿಗ್ರಹಿಸುವ ದೃಢನಿಶ್ಚಯವು ಪೂರ್ಣವೇ ಆದೀತು." ಆದರೆ ಇದನ್ನೆಲ್ಲ ನೋಡುವವರೆಗೆ ಅವರು ಇದ್ದುದಾದರೆ ಅವರಿಗೆ ತಮ್ಮ ದೃಢನಿಶ್ಚಯವು ಸಫಲವಾದುದು ನೋಡಿ ತುಂಬಾ ಸಂತೋಷವಾಗುತ್ತಿತ್ತು. ಇವರ ಮರಣವನ್ನು ಕೇಳಿ ಶತ್ರುಪಕ್ಷದವರಿಗೆ ಸಂತೋಷ ವಾಗಿರಬಹುದು. ಆದರೆ ಅದು ಬಹಳ ದಿವಸ ನಿಲ್ಲಲಿಕ್ಕಿಲ್ಲ. ಕಾರಣವೇನೆಂದರೆ: ಈ ಮಹಾ ಯುದ್ಧದಲ್ಲಿ ಮಿತ್ರಸಂಘದವರಿಗೆ ಜಯಪ್ರಾಪ್ತಿಯಾಗಿ ಯಾವ ಯಾವ ಉಪಾಯಗಳನ್ನೂ ವ್ಯವಸ್ಥೆಗಳನ್ನೂ ಅವರು ರೂಪಿಸಿಟ್ಟಿರುವರೋ ಅವು ಮಿ| ಆಸ್ಕ್ವಿತ್, ಸರ್ ಎಡ್ವರ್ಡ್ ಗ್ರೇ ಮುಂತಾದವರಿಗೆ ತಿಳಿದೇ ಇದ್ದಾವು. ಅವರು ಅದೇ ಮಾರ್ಗ ದಿಂದ ಮುಂದರಿಸಿ ಜರ್ಮನಿಯು ರಣಮದವನ್ನು ಬೇಗನೆ ಕಳಗಿಸದೆ ಇರರು. ಆಗ ತಾನೆ ಜರ್ಮನಿಯ ಈ ಆಸುರೀ ಸಂತೋಷಕ್ಕೆ ಭಂಗಬರುವದು. ಇರಲಿ.

ಲೊಾರ್ಡ್ ಕಿಚನರರ ಹೆಸರು ನಮ್ಮ ಹಿಂದೀ ಜನರಿಗೆ ಈ ಯುದ್ಧದಲ್ಲಿ ಮಾತ್ರ ತಿಳಿದುದಲ್ಲ. ಅವರು ಮೊದಲು ನಮ್ಮ ಹಿಂದುಸ್ಥಾನದ ಕಮೆಂಡರ್ ಇನ್ ಚೀಫ ಎಂದರೆ ಮುಖ್ಯ ಸೇನಾನಾಯಕರ ಹುದ್ದೆಯಲ್ಲಿ ಕೆಲವು ವರ್ಷಗಳ ತನಕ ಇದ್ದರು. ಅಂದಿನಿಂದಲ ಇವರು ನಮಗೆ ಸಾಕ್ಷಾತ್ ಪರಿಚಿತರಾಗಿದ್ದಾರೆ. ಇವರ ಸಂಗತಿಗಳನ್ನು ಸ್ವಲ್ಪಮಟ್ಟಿಗಾದರೂ ವಾಚಕರಿಗೆ ತಿಳಿಸುವುದು ಯೋಗ್ಯವಾದ ಕಾರಣ ಅದರ ಕುರಿತು ನಾಲ್ಕು ಮಾತುಗಳನ್ನು ಬರೆಯುತ್ತೇವೆ. ಇವರು 1850ನೆ ಇಸವಿಯಲ್ಲಿ ಹುಟ್ಟಿದರು. ಬಾಲ್ಯಪ್ರಾಯದಲ್ಲಿ ಮಾಡಬೇಕಾದ ವಿದ್ಯಾಭ್ಯಾಸವನ್ನು ಮುಗಿಸಿದ ನಂತರ ಇವರು ರೊಯಲ್ ಉಲ್‌ವಿಚ್ ಎಕೊಡೆಮಿಕ್ ಎಂಬುದರಲ್ಲಿ ಸೇರಿದರು. ಮೊದಲು ನಡೆದಿರುವ ಫ್ರೆಂಕೊ ಜರ್ಮನ ಯುದ್ಧದಲ್ಲಿ ಫ್ರೆಂಚರ ಕಡೆಗೇನೇ ಇವರ ಸಹಾನುಭೂತಿ ಇತ್ತು. ಕೆಲವು ಸಮಯದ ನಂತರ ಕಿಚನರರವರು ರೊಯಲ್ ಇಂಜಿನಿಯರ ಕೆಲಸದ ಮೇಲೆ ಇದ್ದರು. ಮುಂದೆ 1882ರಿಂದ ಇಜಿಪ್ತಿನಲ್ಲಿ ಕೆಲವು ವರ್ಷಗಳನ್ನು ಕಳೆದರು. ತರುವಾಯ ಅವರು ರೆಡ್ ಸೀ (ಕೆಂಪು ಸಮುದ್ರ) ಲಿಟೊರಲ್ ಎಂಬ ಕಡೆಯಲ್ಲಿ ಗವರ್ನರ್ ಜನರಲಿನ ಕಲಸವನ್ನು ಕೈಕೊಂಡು ಅಲ್ಲಿ ಅನೇಕ ಉಪಯುಕ್ತವಾದ ತಿದ್ದುಪಾಟುಗಳನ್ನು ಮಾಡಿದರು. ತಿರುಗಿ ಅವರಿಗೆ ಇಜಿಪ್ತಿನಲ್ಲಿ ಹೋಗಬೇಕಾಯಿತು. ಆ ಸಮಯದಲ್ಲಿ ಅವರು ಮಾಡಿದ ಕೆಲಸದ ಕುರಿತು ಲೊಾರ್ಡ್ ಸಾಲಿಸ್‌ಬರಿಯವರು ಕೂಡ ಹೊಗಳಿರುವರು. ಲೊಾರ್ಡ್ ರೊಬರ್ಟ್ಸರ ತರುವಾಯ ಆಫ್ರಿಕೆಯಲ್ಲಿ ಇವರೇ ಹೋದರು. 1902ರಿಂದ 1909ರ ವರೆಗೆ ಇವರು ಹಿಂದುಸ್ಥಾನದಲ್ಲಿ ಕಮೆಂಡರ್-ಇನ್-ಚೀಫ್ ಈ ಕೆಲಸದ ಮೇಲೆ ಬಂದರು. ಇಲ್ಲಿ ಬಂದಿರುವಾಗ ಸೇನೆಗೆ ಸಂಬಂಧಪಟ್ಟ ಇವರ ಆಲೋಚನೆಗಳು ಇಲ್ಲಿಯ ಮುಲಕಿ (ಸಿವಿಲಿಯನ್) ಅಧಿಕಾರಿಗಳಿಗೆ—ವಿಶೇಷತಃ ಆಗಿನ ಕಾಲದ ವೈಸರಾಯರಾದ ಲೊಾರ್ಡ್ ಕರ್ಜನ ದೊರೆಗಳಿಗೆ ಮಾನ್ಯವಾಗದಿದ್ದರೂ ಇವರ ಏರ್ಪಾಟುಗಳು ಹಿತಕರವಾಗಿಯೇ ಪರಿಣಮಿಸಿವೆ. ಮತ್ತು ಇದೇ ಪ್ರಸಂಗದಲ್ಲಿ ಕ್ಷತ್ರಿಯರಿಗೆ ಸಹಜವಾಗಿ ಇರಬೇಕಾದ ಇವರ ಮಾನಿಸ್ವಭಾವವು ಪೂರ್ಣವಾಗಿ ವ್ಯಕ್ತವಾಗಿದೆ. ಇಲ್ಲಿಂದ ಅವರು ಇಜಿಪ್ತಿಗೆ ತಿರುಗಿ ಹೋದರು. ಅಲ್ಲಿಂದ ಅವರು ಇದೇ ಯುದ್ಧದ ಪ್ರಾರಂಭದಲ್ಲಿ ಎಂದರೆ 1914ನೇ ಅಗೊಸ್ತ ತಿಂಗಳಿನ 3ನೇ ತಾರೀಕಿನಲ್ಲಿ ಸಾಮ್ರಾಜ್ಯ ಸೇವೆಗಾಗಿ ಹಿಂದಕ್ಕೆ ಕರೆಯಿಸಲ್ಪಟ್ಟರು. ಈ ಯುದ್ಧದ ದೀಕ್ಷೆಯನ್ನು ವಹಿಸಿದಂದಿನಿಂದ ಕಿಚನರರು ಇಟ್ಟಿರುವ ನಮ್ಮ ಬ್ರಿಟಿಷ್ ಸೇನೆಯ ವ್ಯವಸ್ಥೆಯನ್ನೂ ಮತ್ತು ಕ್ರಮೇಣ ಸೈನ್ಯವನ್ನು ಹೆಚ್ಚಿಸಲು ಮಾಡಿರುವ ಉಪಾಯವನ್ನೂ ನವೀನವಾಗಿ ವಿವರಿಸಬೇಕೆಂತ ಇಲ್ಲ. ಈ ಎಲ್ಲ ಸಂಗತಿಗಳು ಈಗ ಎರಡು ವರ್ಷಗಳ ಈಚೆಗೆ ನಮ್ಮ ವಾಚಕರ ಕಣ್ಣೆದುರಿನಲ್ಲಿಯೇ ಇವೆ. ಕೊನೆಗೆ ಒಂದು ಸಂಗತಿಯನ್ನು ಹೇಳಿ ಈ ವಿಷಯವನ್ನು ಮುಗಿಸುತ್ತೇವೆ. ಅದೇನೆಂದರೆ ಕಿಚನರರವರಿಗೆ ಈ ಲೋಕವನ್ನು ಬಿಟ್ಟು ಹೋಗಬೇಕಾದರೂ ಅವರು ಆರಂಭಿಸಿದ ಕಾರ್ಯಗಳು ಪೂರ್ತಿಯಾಗಿ ಇಂಗ್ಲಂಡಕ್ಕೂ ಇಡೀ ಸಾಮ್ರಾಜ್ಯಕ್ಕೂ ಅವು ಹಿತಕರವಾಗಿಯೇ ಪರಿಣಮಿಸುವವು. ಇದೇ ನಮ್ಮ ದೃಢವಾದ ನಂಬಿಕೆ.

ಮುನ್ಸಿಪಲ್ ಚೇಯರ್‌ಮೇನರ ಚುನಾವಣಿ.

ಇತ್ತಲಾಗೆ ನಾಲ್ಕೈದು ವರ್ಷಗಳಿಂದ ಆಗಿರುವ ಮಂಗಳೂರು ಮುನ್ಸಿಪಲ್ ಚೇಯರ್‌ಮೇನರ ಚುನಾವಣೆಯ ಸಮಯ ಪಟ್ಟಣದಲ್ಲಿ ವಿಶೇಷ ಚಳವಳಿ ತಲೆದೋರುತ್ತಿರುವುದು, ಚುನಾವಣೆಗಳ ಸಮಯದಲ್ಲಿ ಚಳವಳಿ ಇರುವಂಥಾದ್ದು ಸಾಮಾನ್ಯವಾಗಿದೆ. ಆದರೆ ಈ ಪಟ್ಟಣದಲ್ಲಿ ತೋರಿದ ಇಂಥ ಚಳವಳಿಯ ಸ್ವಭಾವವು ಇಲ್ಲಿಯ ಪ್ರಜೊಐಕ್ಯಕ್ಕೂ ಕ್ಷೇಮಕ್ಕೂ ಹಿತಕರವಲ್ಲದ್ದರಿಂದ ಒಂದೆರಡು ಮಾತುಗಳನ್ನು ಈ ಸಂದರ್ಭದಲ್ಲಿ ಹೇಳುವುದು ಉಚಿತವೆಂತ ತೋರುತ್ತದೆ.

ಸರ್ಕಾರವು ಲೋಕಲ್ ಸೆಲ್ಫ್ ಗವರ್ನಮೆಂಟ್ ಎಂದರೆ ಸ್ವಾತಂತ್ರ್ಯಕ್ಕೆ ಬೇಕಾದ ಅರ್ಹತೆಯನ್ನು ಪ್ರಜಾವರ್ಗದವರು ಕಲಿಸಿಕೊಳ್ಳಲು ಮುನ್ಸಿಪಲ್ ಕೌನ್ಸಿಲ್ ಮತ್ತು ಲೋಕಲ್ ಬೋರ್ಡುಗಳು ನಮಗೆ ಸರಕಾರದವರಿಂದ ಕೊಡಲ್ಪಟ್ಟಿವೆ. ಈ ಸಂಸ್ಥೆಗಳಿಗೆ ಬೇಕಾದ ಮೆಂಬರರಲ್ಲಿ ಒಂದು ಪಕ್ಷವನ್ನೂ ಚೇಯರ್‌ಮೇನರನ್ನೂ ಆರಿಸುವ ಸ್ವಾತಂತ್ರವನ್ನು ಸರಕಾರದವರು ಪ್ರಜೆಗಳಿಗೆ ಕೊಟ್ಟಿರುವರು. ಎಲ್ಲಾ ವಿಧದ ಪ್ರಜೆಗಳ ಪ್ರತಿನಿಧಿಗಳಿಗೆ ಈ ಕೌನ್ಸಿಲುಗಳಲ್ಲಿ ಎಡೆ ದೊರೆಯಬೇಕೆಂಬ ಕಾರಣದಿಂದ ಸರಕಾರದವರು ತಾವಾಗಿಯೇ ಕೆಲವರನ್ನು ಕೌನ್ಸಿಲರನ್ನಾಗಿ ನೇಮಿಸುತ್ತಾರೆ. ಮತ್ತು ಸರಕಾರದ ಕಡೆಯಿಂದ ಆಯಾ ರಾಜ್ಯಗಳ ಡಿವಿಜನಲ್ ಆಫೀಸರರನ್ನು ಕೌನ್ಸಿಲ ಮೆಂಬರಿಕೆಯ ವಿಶೇಷ ಅಧಿಕಾರವನ್ನು ಕೊಟ್ಟಿರುತ್ತಾರೆ. ಈ ರೀತಿ ಪ್ರಜೆಗಳಿಂದ ಆರಿಸಲ್ಪಟ್ಟವರು ಕೆಲವರು, ಸರಕಾರದಿಂದ ನೇಮಿಸಲ್ಪಟ್ಟವರು ಕೆಲವರು, ಸರಕಾರದ ಆಫೀಸರರು ಕೆಲವರು, ಈ ತ್ರಿವಿಧಗಳು ಕೌನ್ಸಿಲರಾಗಿರುವರು. ಈ ತ್ರಿವಿಧದ ಮೆಂಬರರಲ್ಲಿ ಐಕ್ಯವಿರುವದು ಅಸಾಧ್ಯವೆಂಬುದು ಸ್ಪಷ್ಟವಾಗಿ ಇನ್ನೂ ಹಲವು ಮುನ್ಸಿಪಲ್ ಕೌನ್ಸಿಲುಗಳಿಂದ ಆಗಿಂದಾಗ್ಯೆ ಕೇಳಬರುವ ಅತೃಪ್ತಿಕರ ವೃತ್ತಾಂತಗಳಿಂದ ದಿನೇ ದಿನೇ ಸ್ಪಷ್ಟವಾಗುತ್ತಿರುವದು. ತನ್ನ ಪ್ರಯೋಜನದ ಮುಂದೆ ತನ್ನನ್ನು ಆರಿಸಿದ ಪ್ರಜೆಗಳ ಪ್ರಯೋಜನವನ್ನು ಮರೆತುಬಿಡುವ ದುರಭಿಮಾನವು ಆರಿಸಲ್ಪಟ್ಟ ಕೌನ್ಸಿಲರುಗಳಿಂದ ಇನ್ನೂ ಪೂರ್ಣವಾಗಿ ಮಾಯವಾಗದೆ ಇರುವದರಿಂದ ಕೌನ್ಸಿಲುಗಳಲ್ಲಿಯ ಅನೈಕ್ಯವು ಮತ್ತಷ್ಟು ಭೀಕರವಾಗುವದು. ಹೀಗೆ ಸ್ವಾರ್ಥ ಬಿಡಲಾರದೆ ಸರಕಾರದ ಆಫೀಸರರಾದ ಮೆಂಬರರನ್ನು ತಮ್ಮ ಮುಂದರಿಸಿಕೊಂಡು ಸರಕಾರದವರಿಂದ ನೇಮಿಸಲ್ಪಟ್ಟ ಕೌನ್ಸಿಲರರನ್ನು ತಮ್ಮ ಹಿಂದುಗಡೆಯಲ್ಲಿಯೂ ಕಟ್ಟಿಕೊಂಡು ಸ್ವರಾಜ್ಯದ ಪಾತ್ರತೆಯನ್ನು ಪಳಿಸುವ ಐಕ್ಯ ಮಾಡಬೇಕಾದ ಯಾತ್ರೆಯನ್ನು ಆರಿಸಲ್ಪಟ್ಟ ಮೆಂಬರರು ಮಾಡುವದೆಂದರೆ ಕಷ್ಟಸಾಧ್ಯವೇ ಸರಿ. ಕೌನ್ಸಿಲಿನ ಇಂಥಾ ಜೀವಿತಕಾಲದಲ್ಲಿ ಸರಕಾರದ ಅಧಿಕಾರಿಗಳಾದ ಮೆಂಬರರ ಕರ್ತವ್ಯವಿರುವದು. ಒಂದು ಪಕ್ಷ ಇವರು ಆರಿಸಲ್ಪಟ್ಟ ಮೆಂಬರರ ಮೇಲೆ ನಿರ್ಬಂಧನವಾಗಿರುತ್ತಾರೆ. ತಮ್ಮ ಬ್ರಾತೃಗಳಾದ ಆರಿಸಲ್ಪಟ್ಟ ಕೌನ್ಸಿಲರುಗಳಲ್ಲಿ ಕಲಹವು ಸಂಭವಿಸುವ ಸಂದರ್ಭಗಳು ಒದಗುವ ಕಾಲದಲ್ಲಿ ಇಂಥಾ ಕಲಹಗಳು ಹುಟ್ಟದಂತಾಗಿಸುವಂತೆ ಇವರು ಪ್ರಯತ್ನಿಸಬೇಕಾಗಿದೆ. ಈ ತಮ್ಮ ಕರ್ತವ್ಯವನ್ನು ಹಿಂದೊಮ್ಮೆ ಮಂಗಳೂರು ಮುನ್ಸಿಪಲ್ ಕೌನ್ಸಿಲಿನಲ್ಲಿಯ ಸರಕಾರದ ಅಧಿಕಾರಿಗಳು ಮರೆತಬಿಟ್ಟದ್ದರಿಂದ ಆರಿಸಲ್ಪಟ್ಟ ಕೌನ್ಸಿಲರರ ಅವಿವೇಕವು ಹೊರಬಿದ್ದು ಚೇಯರ್‌ಮೇನರನ್ನು ತಾವಾಗಿ ಆರಿಸುವ ಬದಲಿಗೆ ತಮ್ಮ ಅಧಿಕಾರವನ್ನು ಸರಕಾರಕ್ಕೆ ಬಿಟ್ಟುಕೊಡಬೇಕಾಯಿತು. ಪ್ರಕೃತಕಾಲಕ್ಕೆ ಸರಕಾರದ ನೌಕರರೆಂದರೆ, ಪ್ರಜೆಗಳ ನೌಕರರಲ್ಲ, ಪ್ರಜೆಗಳ ಮಾಲೀಕರೆಂಬ ಭಾವನೆಯೇ ಇಲ್ಲಿ ಪ್ರಬಲವಾಗಿರುವದು. ಇವರೆದುರು ಹಲವರ ಮನಸ್ಸಾಕ್ಷಿಯನ್ನೂ ಸಹ ಸಂಕೋಚಗೊಳಿಸುವರು. ಇಂಥಾ ವಿಷ್ಯಮಾನಗಳಲ್ಲಿ ಸರಕಾರದ ಆಫೀಸರರುಗಳಾದ ಮೆಂಬರರು ಯಾವ ಪಕ್ಷವನ್ನಾದರೂ ತಮ್ಮ ಪಕ್ಷವೆಂತ ಅಂಗೀಕರಿಸದೆ, ಪಟ್ಟಣಿಗರ ಕ್ಷೇಮದಲ್ಲಿ ತಮ್ಮ ದೃಷ್ಟಿಯನ್ನಿಟ್ಟು ತಮ್ಮ ಮುಂದೆ ಒದಗಬಹುದಾದ ಮನಕ್ಲೇಶಗಳ ಕಾರಣವೇನೆಂಬುದನ್ನು ತಿಳಿದು ಜನರೊಳಗೆ ಐಕ್ಯವನ್ನು ಸಾಧಿಸಲು ಯತ್ನಿಸುವದು ಇವರ ಧರ್ಮವಾಗಿರುವದು. ಈ ಧರ್ಮಮಾರ್ಗವನ್ನು ಬಿಟ್ಟು ಸರಕಾರದ ನೌಕರರಲ್ಲದ ಪ್ರಜೆಗಳ ಒಪ್ಪಿ ಕೊಟ್ಟಂಥ ಅಧಿಕಾರವನ್ನು ಸಹ ತಮ್ಮ ಕೈಕೆಳಗೆ ತಂದುಕೊಳ್ಳುವಂಥ ಸಾಧನೆಯು ನಮಗೆಂದಿಗೂ ಉಚಿತ ತೋರುವದಿಲ್ಲ. ಆದ್ದರಿಂದ ಮಂಗಳೂರು ಮುನ್ಸಿಪಲ್ ಕೌನ್ಸಿಲಿನ ಮೆಂಬರರೆಲ್ಲರೂ ತಮ್ಮ ಕರ್ತವ್ಯಗಳೇನೆಂಬುವದನ್ನು ತಿಳಿಕೊಂಡು ಸಮರ್ಪಕವಾದ ಮುನ್ಸಿಪಲ್ ಆಡಳಿತೆಗೆ ಅಭ್ಯಂತರವು ಬಂದೊದಗದಂತೆಯೂ ತಮ್ಮಲ್ಲಿರಬೇಕಾದ ಐಕ್ಯಕ್ಕೆ ಭಂಗವಾಗದಂತೆಯೂ ಚೇಯರ್‌ಮೇನರ ಚುನಾವಣೆ ಕಾಲದಲ್ಲಿ ವರ್ತಿಸುವರೆಂತ ದೃಢವಾಗಿ ನಂಬಿರುವೆವು.

ಸಾರ್ವಜನಿಕ ಮುಖಂಡರು ಯಾರು?

(೨)

ಸಾರ್ವಜನಿಕ ಮುಖಂಡರ ಮುಖ್ಯ ಲಕ್ಷಣವನ್ನು ಹೇಳುವುದಾದರೆ, ಸಾರ್ವಜನಿಕ ಹಿತಕ್ಕಾಗಿ, ಸಾಹಸಪಡುವವರು, ಅವಶ್ಯವಿದ್ದರೆ ಸ್ವಾರ್ಥತ್ಯಾಗವನ್ನು ಕೂಡ ಮಾಡುವವರು ಎಂದು ಹೇಳಬಹುದು. ಸಾರ್ವಜನಿಕ ಹಿತವು ರಾಜಕೀಯವಿರಬಹುದು, ಸಾಮಾಜಿಕವಿರಬಹುದು, ಉದ್ಯೋಗಿಕವೂ ಇರಬಹುದು. ಈ ಮೂರು ತರದ ಕಾರ್ಯಗಳಲ್ಲಿ ಯಾವುದಾದರೂ ಒಂದನ್ನು, ತಮ್ಮ ಜೀವನ ಧ್ಯೇಯವಾಗಿ ತೆಕ್ಕೊಂಡು ಅದರ ಅಭಿವೃದ್ಧಿಗಾಗಿ ಆತ್ಮಸಮರ್ಪಣಪೂರ್ವಕ ಯಾರು ಯತ್ನಿಸುವರೋ ಅವರೇ ಒಂದನೇ ತರಗತಿಯ ಮುಖಂಡರು. ಇಂತಹ ಮುಖಂಡರೇ ದೇಶದ ಸಂಪತ್ತುಗಳು. ದೇಶದ ಉದ್ಧಾರವು ಇವರಿಂದಲೇ ಆಗಬೇಕಾದುದು. ಇಲ್ಲಿ ನಮ್ಮ ವಾಚಕರಿಗಾಗಿ ಇಂತಹ ಮುಖಂಡರ ಒಂದೆರಡು ದೃಷ್ಟಾಂತಗಳನ್ನು ತೋರಿಸಬಹುದೆಂತ ಕಾಣುತ್ತದೆ.

ಇಟಲಿ ದೇಶದಲ್ಲಿ ಇಂತಹ ಮುಖಂಡರು ಮೊದಲು ಅನೇಕರಾಗಿ ಹೋಗಿದ್ದಾರೆ. ಅವರಲ್ಲಿ ದೇಶದ ರಾಜಕೀಯ ವಿಷಯವನ್ನೇ ಹಿಡಿದುಕೊಂಡು ಇಟಲಿದೇಶದ ಉದ್ಧಾರಮಾಡಿದವರಲ್ಲಿ ಡ್ಯಾಂಟಿ, ಮೆಝಿನಿ, ಗೆರಿಬಾಲ್ಡಿ, ಕಾವ್ಹೂರ ಮೊದಲಾದವರು ಮುಖ್ಯಸ್ಥರು.

ರೋಮನ ಅರಸ್ಥಾನವು ಒಂದು ಸಮಯದಲ್ಲಿ ಆ ಕಾಲದಲ್ಲಿ ಜ್ಞಾತವಾದ ಸಂಪೂರ್ಣ ಪ್ರದೇಶದ ಮೇಲೆ ಹಬ್ಬಿಕೊಂಡಿತ್ತು. ಆದರೆ "ನೀಚೈರ್ಗಚ್ಛತ್ಯುಪರಿಚ ದಶಾಚಕ್ರನೇಮಿಕ್ರಮೇಣ" ಕಾಲಚಕ್ರದ ನೇಮಿಯು ಮೇಲಿದ್ದುದು ಕ್ರಮೇಣ ಕೆಳಗಾಗುತ್ತದೆ ಎಂಬ ಮಹಾಕವಿ ಕಾಳಿದಾಸನ ಮಾತಿನಂತೆ ಇಟಲಿಯ ಕಾಲಗತಿಯು ತಿರುಗಿತು, ಅದರ ವೈಭವವೆಲ್ಲ ನಷ್ಟವಾಯಿತು, ಬಹು ಶೋಚನೀಯ ಸ್ಥಿತಿಯು ಒದಗಿತು. ಆ ರೋಮದೊಳಗಿನ ಚಿಕ್ಕ ರಾಜ್ಯಗಳು, ಅನಿಯ ಮೃತ ಶರೀರವನ್ನು ಹುಲಿ, ಕರಡಿ, ತೋಳ, ನರಿ ಮುಂತಾದ ಪ್ರಾಣಿಗಳು ಹರಿದು ತಿನ್ನುವಂತೆ, ಈ ಇಟಲಿಯ ವಿಭಾಗಮಾಡಿ ತಂತಮ್ಮ ಅಧಿಕಾರದೊಳಗೆ ಆ ದೇಶವನ್ನು ಸೇರಿಸಹತ್ತಿದವು. ಇದರ ಪರಿಣಾಮವೇನಾಯಿತೆಂದರೆ, ಇಟಲಿಯೊಳಗೆ ಕೆಲಕೆಲವು ಕಡೆಯಲ್ಲಿ ಸ್ವತಂತ್ರ ಸಂಸ್ಥಾನಗಳು, ಕೆಲವು ಕಡೆಯಲ್ಲಿ ಪ್ರಜಾಸತ್ತಾತ್ಮಕ ತತ್ವದಿಂದ ನಡೆಯುವ ರಾಜ್ಯಗಳು, ಇನ್ನೂ ಕೆಲವು ಕಡೆಯಲ್ಲಿ ಸ್ವಯಂಶಾಸಿತ ಸ್ವತಂತ್ರ ಪಟ್ಟಣಗಳು ಅಸ್ತಿತ್ವದಲ್ಲಿ ಬಂದವು. ಮುಂದೆ ಫ್ರಾನ್ಸಿನ ನೆಪೋಲಿಯನ್ನನು ಇಟಲಿಯನ್ನು ಸ್ವಾಧೀನಪಡಿಸಲು ಯತ್ನಿಸಿದಾಗ ಅವನ ಆ ಪ್ರಯತ್ನವು ಸಾಧ್ಯವಾಗದೆ ಹೋಯಿತು. ನೆಪೋಲಿಯನ್ನನ ತರುವಾಯ ಇಟಲಿಯ ಉತ್ತರಭಾಗವು ತಿರುಗಿ ಆಸ್ಟ್ರಿಯದ ಕೈ, ದಕ್ಷಿಣ ಭಾಗ ಮತ್ತು ಸಿಸಿಲಿ ಫ್ರಾನ್ಸಿಗೆ, ಮಧ್ಯದ ಭಾಗವು ಪೋಪನಿಗೆ ಮತ್ತು ಸಾರ್ಡಿನಿಯಾ ಭಾಗವು ಆ ದೇಶದ ಮೂಲ ರಾಜವಂಶದ ವಶಕ್ಕೆ ಸೇರಿದವು. ಈ ಪ್ರಕಾರ ವಿಭಜನದ ತತ್ವವನ್ನಂಗೀಕರಿಸಿಕೊಂಡು ಬೇರೆ ಬೇರೆ ರಾಜ್ಯಗಳು ಇಟಲಿ ದೇಶವನ್ನು ಹೋಳು ಹೋಳಾಗಿ ಹಂಚಿಕೊಂಡರೂ ಫ್ರಾನ್ಸಿನ ಸುಪ್ರಸಿದ್ಧವಾದ ರಾಜ್ಯಕ್ರಾಂತಿಯಾದಂದಿನಿಂದ ಇಡಿ ಯುರೋಪದಲ್ಲಿ ಲೋಕಸತ್ತೆಯ ಗಾಳಿಯು ಆಗಾಗ್ಗೆ ಬೀಸುತ್ತಿದ್ದಂತೆ ಇಟಲಿಯಲ್ಲಿ ಕೂಡ ಸಂಚರಿಸಿ ಆ ಇಡೀ ದೇಶದ ಏಕೀಕರಣ ಮಾಡುವುದಕ್ಕಾಗಿ ಆಗಾಗ್ಗೆ ದಂಗೆಗಳೂ ಚಳವಳಿಗಳೂ ಆಗುತ್ತಲೇ ಇದ್ದವು. ಇಂತಹ ಪ್ರಯತ್ನಗಳು ಇಟಲಿಯಲ್ಲಿ ಹಲವಾರು ಸಾರೆ ಆದವು. ಆದರೆ ಅವುಗಳಿಗೆ ಯಶಸ್ಸು ಬರಲಿಲ್ಲ. ಗಲಬಲನೆ ಇವರಿಯ ನಂತರ ಮಾತ್ರ ಮೆಝಿನಿ, ಗೆರಿಬಾಲ್ಡಿ, ಕಾವ್ಹೂರ ಮುಂತಾದ ದೇಶಭಕ್ತರು ಉದಯಕ್ಕೆ ಬಂದರು. ಈ ದೇಶಭಕ್ತರು ದೇಶಕ್ಕಾಗಿ ಸ್ವಾರ್ಥತ್ಯಾಗಪೂರ್ವಕ ಮಾಡಿದ ಲೋಕಸೇವೆಯ ಇತಿಹಾಸವು ಬಹು ಪಠನೀಯವಾಗಿ ಇದೆ. ಅದನ್ನೆಲ್ಲ ಇಲ್ಲಿ ಪ್ರಸ್ತಾಪಿಸುವಷ್ಟು ಸ್ಥಳವಿಲ್ಲದ ಕಾರಣ ಮುಖ್ಯ ಸಂಗತಿಗಳನ್ನು ಹೇಳುವುದೇನೆಂದರೆ, ಇಟಲಿಯು ಒರೇ ನಾಲ್ವತ್ತು ವರ್ಷಗಳೊಳಗೆ ತನ್ನ ಸ್ವಾತಂತ್ರ್ಯವನ್ನು ಸಾಧಿಸಿಕೊಂಡಿತು. ಒಂದು ದೇಶದ ಉನ್ನತಿಗೆ ಕವಿ, ಭವಿಷ್ಯವಾದಿ, ಯೋದ್ಧಾ, ರಾಜಕಾರಣಪಟು (ಮುತ್ಸದ್ದಿ), ಅರಸು ಈ ಐದು ಜನರು ಅವಶ್ಯವಿರುವಂತೆ ಇಟಲಿಯಲ್ಲಿ ಕೂಡ ಕವಿಯಾದ ಡೆಂಟಿಯು, ಭವಿಷ್ಯವಾದಿಯಾದ ಮೆಝಿನಿಯು, ಯೋದ್ಧನಾದ ಗೆರಿಬಾಲ್ಡಿಯು, ಮುತ್ಸದ್ದಿಯಾದ ಕಾವ್ಹೂರನು ಮತ್ತು ಅರಸನಾದ ವ್ಹಿಕ್ಟರನು ಈ ಪ್ರಕಾರ ಐದು ಜನ ಮುಖಂಡರಿದ್ದರು. ಇವರೆಲ್ಲ ಉಚ್ಚತರಗತಿಯ ಮುಖಂಡರೆ ಸರಿ. ಇವರ ಪ್ರಯತ್ನದ ಮಾರ್ಗಗಳು ಒಂದುವೇಳೆ ಕೊಂಚ ಕೊಂಚ ಭಿನ್ನವಾಗಿದ್ದರೂ ಅವರು ಒಬ್ಬರಿಗೊಬ್ಬರು ವಿರೋಧಿಗಳಾಗದೆ ಒಂದೇ ಸಾಧ್ಯವನ್ನು—ತಮ್ಮ ದೇಶದ ಸ್ವಾತಂತ್ರ್ಯವನ್ನು ಸಾಧಿಸುವುದರಲ್ಲಿ ಬೇಕಾದ ಸಾಹಸವನ್ನು ಮಾಡಲಿಕ್ಕೆ—ಅಲ್ಲ, ಆತ್ಮಸಮರ್ಪಣವನ್ನು ಕೂಡ ಮಾಡಲಿಕ್ಕೆ ತತ್ಪರರಾಗಿದ್ದರು, ಮಾತ್ರವಲ್ಲ, ಇವರೆಲ್ಲರು ಆತ್ಮ ಸಮರ್ಪಣವನ್ನು ಮಾಡಿಯೇ ಇದ್ದಾರೆ. ಇರಲಿ.

ಸಾಮಾಜಿಕ ವಿಷಯವನ್ನು ಕೈಕೊಂಡು ಅದರ ಉನ್ನತಿಯನ್ನು ಸಾಧಿಸಿದವರು ಜಗತ್ತಿನಲ್ಲಿ ಬಹಳ ಮಂದಿ ಇದ್ದಾರೆ. ಯುರೋಪದಲ್ಲಿ ಧರ್ಮದ ಹೆಸರಿನಿಂದ ಅನೇಕ ದುರಾಚಾರಗಳು ನಡೆಯುತ್ತಿದ್ದವು. ಅರಸರು ಒರೇ ನಾಮಧಾರಿಗಳಾಗಿದ್ದರು. ಪೋಪನ ಅಧಿಕಾರ ಸಾಮ್ರಾಜ್ಯವೇ ಬಹುಶಃ ಎಲ್ಲ ಕಡೆಯಲ್ಲಿ ನಿರಂಕುಶವಾಗಿ ನಡೆಯುತ್ತಿತ್ತು. ಆ ಕಾಲದ ಯುರೋಪಿನ ಸಮಾಜದಲ್ಲಿ ಧರ್ಮದ ಹೆಸರಿನಿಂದ ಬೆಳೆದುಹೋದ ಹೊಲಸುಗಳನ್ನು ನಿರ್ಮೂಲಿಸಲಿಕ್ಕೆ ಮಾರ್ಟಿನ್ ಲೂಥರನು ಅವತರಿಸಿದನು. ಇವನ ಸಾಹಸವೂ, ನಿಗ್ರಹವೂ, ಸಮಾಜಸೇವೆಯೂ ಮತ್ತು ಸ್ವಾರ್ಥತ್ಯಾಗವೂ ನಿಜವಾಗಿ ಮನನೀಯವೂ ಅಪೂರ್ವವಾಗಿವೆ.

ಇದೇ ರೀತಿಯಿಂದ ದೇಶದಲ್ಲಿ ಸಂಪತ್ತನ್ನು ಬೆಳೆಸಿ ವ್ಯಾಪಾರದ ಮೂಲಕವಾಗಿ ಹೊರಗೆ ಹೋಗುವದನ್ನು ನಿಲ್ಲಿಸಿ ದೇಶದ ಆರ್ಥಿಕ ಸಮೃದ್ಧಿಯನ್ನು ಮಾಡಿದ ಮುಖಂಡರು ಜರ್ಮನಿ, ಅಮೆರಿಕಾ ಮತ್ತು ಇತ್ತಲಾಗೆ ಜಪಾನ ಈ ದೇಶಗಳಲ್ಲಿ ಅನೇಕರು ಆಗಿಹೋಗಿದ್ದಾರೆ.

ಒಂದನೆ ತರಗತಿಯ ದೇಶಭಕ್ತರು ನಮ್ಮ ಹಿಂದುಸ್ಥಾನದಲ್ಲಿ ಮೊದಲು ಶಿವಾಜಿ, ರಾಮದಾಸ ಮುಂತಾದವರ ಅವತರಿಸಿ ಹೋದರೂ ಪ್ರಕೃತ ಕಾಲದಲ್ಲಿ ದೇಶಸೇವೆಯ ಮತ್ತು ಸಮಾಜಸೇವೆಯ ಪದ್ಧತಿಯು ಈಗಿನ ೨೦ನೇ ಶತಮಾನಕ್ಕನುಸಾರವಾಗಿ ಬೇರೆ ವಿಧವಾಗಿದ್ದುದರಿಂದ ಅಂತಹ ಮುಖಂಡರು ಅಸ್ತಿತ್ವದಲ್ಲಿ ಬರುವುದು ಸಾಧ್ಯವಿಲ್ಲ. ಅಲ್ಲದೆ ಈಗಿನ ಸರಕಾರದ ರಾಜ್ಯಶಾಸನ ಕ್ರಮವೂ ಕೂಡ ಉದಾರ ತತ್ವವನ್ನು ಹಿಡಿದು ನಡೆಯುತ್ತಿದ್ದ ಕಾರಣ ಅಂತಹ ಮುಖಂಡರ ಅಪೇಕ್ಷೆ ಕೂಡ ಇಲ್ಲ. ಈಗಿನ ಕ್ರಮಕ್ಕೆ ಸರಿಯಾಗಿ ಉದ್ದಿಷ್ಟ ಹೇತವನ್ನು ಸಾಧಿಸುವುದಕ್ಕಾಗಿ ಸ್ವಾರ್ಥತ್ಯಾಗವನ್ನು ಮಾಡಿದವರು ಮತ್ತು ಮಾಡುವ ಮುಖಂಡರು ಯಾರು ಎಂಬದನ್ನು ನಿರೀಕ್ಷಿಸುವುದೇ ಈ ಲೇಖನದ ನಮ್ಮ ಮುಖ್ಯ ಉದ್ದೇಶವಾದ ಕಾರಣ ಅದನ್ನು ಬರುವ ಲೇಖಾಂಕದಲ್ಲಿ ವಿವರಿಸೋಣ.

ಮಾಗಣೆ ದೇವಸ್ಥಾನವೂ ಪಾರ್ಲಿಮೆಂಟು ಸಭೆಯೂ.

(ಕಳದ ಸಂಚಿಕೆಯಿಂದ ಮುಂದರಿಸಿದುದು)

ಈಗ ಈ ಗ್ರಾಮ ದೇವಸ್ಥಾನದ ಸಂಸ್ಥೆಗಳಲ್ಲಿರುವ ಪರಸ್ಪರ ಅಂಕುಶಗಳು ಯಾವುವೆಂದು ವಿಚಾರಿಸೋಣ. ಮಾಗಣೆ ಸಭೆಯವರೆಂಬ, ಪಾರ್ಲಿಮೆಂಟು ಮೊಕ್ತೇಸರರೆಂಬ ಮಂತ್ರಿ ಸಭೆಯನ್ನು ಆರಿಸುವರು. ಈ ಮೊಕ್ತೇಸರರು ತಮ್ಮ ಕೈಕೆಳಗೆ ಕಾಯಂ ನೌಕರರನ್ನು ಆಯಾಯ ಕೆಲಸಕ್ಕೆ ಇಡುವರು. ಈ ಮೊಕ್ತೇಸರರು ತಮ್ಮ ಸಭೆಯಲ್ಲಿ ಸಭಾನಾಯಕನಾಗಿ ಸ್ಪೀಕರನಾಗಿ ಆವೇಶ ಬರುವ ಪಂಬದನನ್ನೊ, ಪರವನನ್ನೊ, ನಲ್ಕೆಯವನನ್ನೊ ಆರಿಸುವರು. ಆದರೆ ಆರಿಸಲ್ಪಟ್ಟ ಈ ಆವೇಶಗಾರನು ಆವೇಶ ಕಾಲದಲ್ಲಿ ಈ ಮೊಕ್ತೇಸರರ ಮತ್ತು ಮಾಗಣೆ ಸಭೆಯ ಮೇಲ್ವಿಚಾರಕನಾಗುವನು. ಒಂದುವೇಳೆ ಅವನು ನೀತಿ ತಪ್ಪಿ ನಡೆದರೆ ಅವನ ಆವೇಶ ನಿಂತ ಮೇಲೆ ಅವನಿಗೆ ಅಲ್ಲಿಯೇ ದಂಡನೆ ವಿಧಿಸುವರು. ಅವನಿಗೆ ಇದೊಂದು ಅಂಕುಶ.

ಮಾಗಣೆ ಸಭೆಯವರಿಂದ ಆರಿಸಲ್ಪಟ್ಟ ಮೊಕ್ತೇಸರರನ್ನು ನೀತಿ ತಪ್ಪಿ ಮಾಗಣೆಯವರು ನಡೆಸಿದರೆ ಮುಂದಿನ ಹಬ್ಬಗಳಿಗೆ ಆ ಮೊಕ್ತೇಸರರು ಬರುವುದೇ ಇಲ್ಲ. ಅವರಲ್ಲಿಯೂ ಮೇಲ್ ಮೊಕ್ತೇಸರನು ಬಂದು ಭಂಡಾರ ಒಪ್ಪಿಸದಿದ್ದರೆ ಪೂಜಾರಿಗೆ ಆವೇಶ ಬರುವುದಿಲ್ಲ. ಪೂಜಾರಿಗೆ ಆವೇಶ ಬರುವ ಮುಂಚೆ ಪೂಜಾರಿಯು ತನ್ನ ಕೈಯಲ್ಲಿದ್ದ ಕತ್ತಿ, ಘಂಟೆ ಮತ್ತು ಚಮರಿಯನ್ನು ಭೂತದ ಮುಖವನ್ನೂ (ಭಂಡಾರ) ಪಂಬದನಿಗೆ ಒಪ್ಪಿಸಿಕೊಡುವುದಕ್ಕೆ ಸಾಧ್ಯವಿಲ್ಲ. ಅದು ಸಿಕ್ಕದೆ ಪಂಬದನಿಗೆ ಆವೇಶ ಬರುವುದಿಲ್ಲ. ಅವನಿಗೆ ಆವೇಶ ಬಂದು ಸಭೆಯ ನುಡಿಗಟ್ಟು ಆದ ವಿನಹಾ ಮಾಗಣೆ ಸಭೆಯು ಕ್ರಮವಾಗಿ ಸೇರಿದಂತಾಗುವುದಿಲ್ಲ. ಆವೇಶ ಬಾರದೆ ಯಾವುದೊಂದು ಚರ್ಚೆಯನ್ನು ಇತ್ಯರ್ಥಿಸಿದರೂ ಮಂಜೂರು ಅಲ್ಲ. ಹಾಗಾದರೆ ನೀತಿ ತಪ್ಪಿ ಮೊಕ್ತೇಸರರನ್ನು ತುಚ್ಛೀಕಾರಮಾಡದಂತೆ ಇದೊಂದು ಅಂಕುಶ.

ಮೊಕ್ತೇಸರರು ಸ್ವೇಚ್ಛೆಯಿಂದ ನಡೆದು ಮಾಗಣೆ ಸಭೆಯವರನ್ನು ಉಲ್ಲಂಘಿಸಿದರೆ ಮಹಾ ಸಭೆಯಲ್ಲಿ ಈ ಚರ್ಚೆಯನ್ನು ಪಂಬದನು ಆವೇಶ ಬಂದ ಮೇಲೆ ಇತ್ಯರ್ಥಿಸಿ ಮೊಕ್ತೇಸರರ ತಪ್ಪನ್ನು ತೋರಿಸಿಕೊಡುವನು. ಅವನ 'ಅಪ್ಪಣೆ'ಯನ್ನು ಮೀರಿದರೆ

ಮುಂದಿನ ಹಬ್ಬಕ್ಕೆ ಭೂತ ಕಟ್ಟುವುದೇ ಇಲ್ಲ. ಮತ್ತೊಬ್ಬನಿಗೆ ಆ ಕೆಲಸಕ್ಕೆ ಬರಲೀಸುವುದಿಲ್ಲ. ಹೇಗೆಂದರೆ ಈ ಸಂಬಂಧರಲ್ಲಿಯೂ ಒಬ್ಬರ ಪ್ರಾಂತ್ಯದಲ್ಲಿ ಇನ್ನೊಬ್ಬನು ಕೈಹಾಕಬಾರದಾಗಿ ಜಾತಿಕಟ್ಟು ಇದೆ. ಹಾಗಿದ್ದರೆ ಮುಂದಿನ ಹಬ್ಬದಲ್ಲಿ 'ಕೋಲವೊ' ತಂಬಿಲವೊ ಯಾವುದೂ ನಡೆಯುವುದೇ ಇಲ್ಲ. ಇದರಿಂದ ದೇವಸ್ಥಾನದ ಮತ್ತು ಭೂತಸ್ಥಾನದ ಉತ್ಪತ್ತಿ ಕಡಿಮೆಯಾಗುವುದು ಮಾತ್ರವೇ ಅಲ್ಲ, ಭೂತದ ಉಪದ್ರವು ತೋರಿ ಬರುತ್ತದೆಂದು ಜನರಲ್ಲಿ ದೃಢವಾದ ನಂಬಿಕೆ ಇದೆ. ಇದೊಂದು ಮಹಾ ಸಭೆಗೆ ಅಂಕುಶ.

ದೇವರು ನಿರಾಕಾರ ವಸ್ತು. ಪ್ರತಿಮೆಯಲ್ಲಿ ಮೂರ್ತಿಮಂತನಾದರೂ ಯಾವುದೊಂದು ಶುಭಾಶುಭದಲ್ಲಿ ತಾನು ಕೈಹಾಕುವುದಿಲ್ಲವೆಂದು ಜನರ ವಿಶ್ವಾಸ. ಹಾಗಿದ್ದರೆ ಪೂಜೆ ಸಂಸ್ಕಾರಗಳನ್ನು ಅರ್ಚಕರೂ ಪೂಜಾರಿಗಳೂ ನಿಲ್ಲಿಸಿಬಿಟ್ಟು ಆಗಲಿ ಬಂಡಾರದ ಹಣವನ್ನು ದುರ್ವ್ಯಯ ಮಾಡಿ ಆಗಲಿ ಕೆಲಸಗಳಿಗೆ ಲೋಪ ಬರಬಹುದಲ್ಲ! ಅದಕ್ಕೆ ಅಂಕುಶವೇನು? ದೇವರು ತಾನು ಹಾಳುಮಾಡದಿದ್ದರೂ ಅವನ ಬಂಟನಾದ ದೈವವು ಆ ತಪ್ಪಿತಸ್ಥನಿಗೆ ಆಗಲಿ ಅವನ ಮನೆಯವರಿಗೆ ಆಗಲಿ ಆವೇಶವಾಗಿ ಬಂದು ನಡೆದ ತಪ್ಪನ್ನು ಬಹಿರಂಗವಾಗಿ ಹೇಳಿಬಿಡುವುದು ಮತ್ತು ಅದನ್ನು ಸರಿಗೊಳಿಸದಿದ್ದರೆ ತಪ್ಪಿತಸ್ಥನ ಕುಟುಂಬಕ್ಕೆ ಬಾಧಕವುಂಟೆಂದು ಎಚ್ಚರಿಸುವುದು, ಅದನ್ನು ಲಕ್ಷ್ಯಮಾಡದಿದ್ದರೆ ತಪ್ಪಿತಸ್ಥನಿಗೆ ಅಥವಾ ಮನೆತನದವರಿಗೆ ಹಲವು ಬಗೆಯ ವ್ಯಾಧಿಗಳು ತಲೆದೋರುವವು. ಅವುಗಳ ಉಪಶಮನಾರ್ಥವಾಗಿ ಹರಿಕೆಯೋ ದಂಡವೋ ಕೊಟ್ಟು ಅವನು ವಿಮೋಚನೆ ಪಡೆಬೇಕಾಗುವುದು. ಹೀಗೆ ಬೇರೆ ಬೇರೆ ಅಂಕುಶಗಳಿರುವುದರಿಂದ ಈ ಕಾರ್ಯಭಾರವು ಸಾಂಕುಶಪ್ರಭುತ್ವವೆನ್ನಿಸುವುದು.

(ಮುಂದರಿಯುವದು)

ಧರ್ಮದ ಅವಶ್ಯಕತೆ.

ಪಾಂಡವರು ವನವಾಸಕ್ಕೆ ಸಿದ್ಧರಾಗಿ ದ್ವೈತವನವನ್ನು ಕುರಿತು ತೆರಳಿದನಂತರ, ಆ ವನದಲ್ಲಿ ದ್ರೌಪದಿ ಮತ್ತು ಯುಧಿಷ್ಠಿರರೊಳಗೆ ನಡೆದ ಸಂವಾದವು ಮಹಾಭಾರತದ ವನಪರ್ವದಲ್ಲಿ ವಿವರಿಸಿಯದೆ. ಒಂದಾನೊಂದು ದಿನ ಪಾಂಚಾಲಿಯಾದ ದ್ರೌಪದಿಯು ಧರ್ಮರಾಯನನ್ನು ಕುರಿತು ಇಂತೆಂದಳು—"ಪ್ರಾಣಕಾಂತ! ನೀವು ಯಾವಾಗಲೂ ಧರ್ಮವನ್ನು ಅನುಸರಿಸಿ ನಡೆಯುತ್ತೀರಿ. ಧರ್ಮವನ್ನು ಪಾಲಿಸುವುದಕ್ಕೆ ಭೀಮಸೇನ, ಅರ್ಜುನ ಇತ್ಯಾದಿ ಬಾಂಧವರನ್ನೂ, ಅರ್ಧಾಂಗಿಯಾದ ನನ್ನನ್ನೂ ತ್ಯಜಿಸಲಿಕ್ಕೆ ಸಿದ್ಧರಿರುವಿರಿ. ಧರ್ಮಕ್ಕಿಂತ ಶ್ರೇಷ್ಠವಾದದ್ದು ನಿಮಗೆ ಯಾವುದೂ ಇಲ್ಲ. ಹೀಗಿದ್ದೂ ನಿಮಗೀದುರ್ದಶೆ. ಅರಣ್ಯದಲ್ಲಿ ಅನೇಕ ಸಂಕಷ್ಟಗಳನ್ನೂ, ಕ್ಲೇಶಗಳನ್ನೂ ಅನುಭವಿಸುವುದೂ ನಿಮ್ಮ ಪಾಲಿಗೆ ಬಂದಿದೆ. ಅತ್ತ ದುರ್ಯೋಧನನು ಧರ್ಮವನ್ನು ಮೂಲೆಗೊತ್ತಿ ಅಧರ್ಮವನ್ನಾಚರಿಸಿ ಸಾಮ್ರಾಜ್ಯ ಸಂಪತ್ತನ್ನು ಅನುಭೋಗಿಸುತ್ತಾನೆ. ಹೀಗಾದರೆ ಧರ್ಮದ ಉಪಯೋಗವೇನು? ಧರ್ಮವು ಏಕೆ ಬೇಕು. ಅಧರ್ಮವನ್ನಾಚರಿಸಿದರಿಂದ ಕೆಟ್ಟದ್ದೇನು?"

ಇದಕ್ಕೆ ಉತ್ತರವಾಗಿ ಧರ್ಮರಾಯನು ಹೀಗೆಂದನು—"ನಾಹಂ ಫಲಾಕಾಂಕ್ಷೀ ರಾಜಪುತ್ರಿ ಚರಾಮ್ಯುತ" ರಾಜಪುತ್ರಿ! ಧರ್ಮದಿಂದ ನನಗೆ ಫಲಪ್ರಾಪ್ತಿಯಾಗಬೇಕೆಂಬೀ ಇಚ್ಛೆಯಿಂದ ನಾನು ಧರ್ಮಾಚರಣೆಯನ್ನು ಮಾಡುವುದಿಲ್ಲ.—ಅಸ್ತು ವಾಸ್ತು ಫಲಂ ಕಿಂಚಿತ್ ಕರ್ತವ್ಯಂ ಪುರುಷೇಣ ಯತ್ । ಗೃಹೇವಾನಸತಾಕೃಷ್ಣೇ ಯಥಾಶಕ್ತಿ ಕರೋಮಿತತ್ ॥—ಹೇ ಕೃಷ್ಣೇ! ಫಲವಿರಲಿ ಅಥವಾ ಇಲ್ಲದಿರಲಿ ಪುರುಷನ ಕರ್ತವ್ಯವೇನಿದೆಯೋ ಅದನ್ನು ನಾನು ಯಥಾಶಕ್ತಿಯಿಂದ ಮಾಡುತ್ತೇನೆ. ಫಲಪ್ರಾಪ್ತಿಯ ಇಚ್ಛೆಯಿಂದ ಆಚರಿಸುವ ಧರ್ಮದಂತೆ ಧರ್ಮವಿಕ್ರಯವನ್ನು ನಾನು ಎಂದಿಗೂ ಮಾಡೆನು"

ಈ ರೀತಿ ನಿಷ್ಕಾಮವಾದ ಧರ್ಮಾಚರಣೆಯನ್ನು ಮಾಡುವುದೇ ನಿಜವಾದ ಮಾರ್ಗವೆಂದು ಹೇಳಿ ಧರ್ಮರಾಯನು ಪುನಃ ಇಂತೆಂದನು—"

ಅಫಲೋಯದಿ ಧರ್ಮಃಸ್ಯಾಚ್ಚರಿತೋ ಧರ್ಮಚಾರಿಭಿಃ ।
ಅಪ್ರತಿಷ್ಠೇ ತಮಸ್ಯೇತ ಜ್ಜಗನ್ಮಜ್ಜೇದಾ ನಿಂದಿತೇ ॥
ನಿರ್ವಾಣಂನಾಧಿಗಚ್ಛೇಯಃ ಜೀವೇಯುಃ ಪಶುಜೀವಿಕಾ ।
ವ್ಯಾಘಾತೇನ್ಯೈವ ಯುಜ್ಯೇಯು ನಚಾರ್ಥಂಕಂಚಿದಾಪ್ನುಯುಃ ॥

ಹೇ ಆನಂದ ಸ್ವರೂಪಳೇ! ಧರ್ಮದಿಂದ ಏನೂ ಫಲಪ್ರಾಪ್ತಿಯಾಗದೆಂದು ಅದನ್ನು ಪರಿತ್ಯಜಿಸಿ ಮನುಷ್ಯನು ಅಧರ್ಮ ಪ್ರವರ್ತನಾದರೆ (ಎಂದರೆ ಅಧರ್ಮವನ್ನಾಚರಿಸಿದರೆ) ಈ ಜಗತ್ತು ಅಂಧಕಾರದಲ್ಲಿ ಮುಳುಗಿಹೋಗುವುದು, ಮತ್ತು ಮನುಷ್ಯನಿಗೆ ಶಾಶ್ವತವಾದ ಸುಖವು ಎಂದಿಗೂ ಲಭಿಸದು. ಪಶುಗಳಂತೆ ಅವರು ಜೀವಿಸಬೇಕಾಗುವುದು. ಅಧರ್ಮದಿಂದಾಚರಿಸಿದ ಕಾರ್ಯವು ನಾಶವನ್ನೇ ಹೊಂದುವುದು. ಹೀಗೆ ಈ ಪ್ರಪಂಚವು ಅಧರ್ಮದಿಂದ ಎಂದಿಗೂ ಸ್ಥಿರವಾಗಿರಲಾರದು"

ಪ್ರಪಂಚದಲ್ಲಿ ಮಾನವನು ಅವನಿಗೆ ಇಷ್ಟವಿದ್ದಂತೆ ಆಚರಿಸಿದರೆ ಅವನಲ್ಲಿದ್ದ ಕಾಮಕ್ರೋಧಾದಿಗಳು ಬಲವಾಗಿ ಪರಸ್ಪರ ದ್ವೇಷ, ನಿಷ್ಠುರತೆ ಮೊದಲಾದವುಗಳು ಮಾನವ ವರ್ಗದಲ್ಲುಂಟಾಗಿ ಸಮಾಜವು ಲಯವಾಗಿ ಪಶುಗಳು ಹೇಗೆ ಪರಸ್ಪರ ಸಂಬಂಧವಿಲ್ಲದೆ ಪ್ರತ್ಯಪ್ರತ್ಯೇಕವಾಗಿ ಇರುತ್ತವೋ ಹಾಗೆಯೇ ಮಾನವ ಸ್ಥಿತಿಯಾಗುವುದು. ಸತ್ಯ ಮತ್ತು ನ್ಯಾಯ ಇವೆರಡರ ಮೇಲೆ ಮಾನವವರ್ಗವು ಪ್ರತಿಷ್ಠಿತವಾಗಿದೆ. ಸರ್ವ ಸತ್ಯೆ ಪ್ರತಿಷ್ಠಿತಃ ಎಂಬಂತೆ ಸತ್ಯದ ಆಧಾರದ ಮೇಲೆ ಈ ಜಗತ್ತು ನಿಂತಿದೆ. ಎಲ್ಲಿ ಸತ್ಯ ಮತ್ತು ನ್ಯಾಯ ಇವೆರಡು ಲೋಪವಾಗುವವೋ ಅಲ್ಲಿ ನಾಸ್ತಿಕ ಸ್ಥಾನವೆನ್ನಬಹುದು. ಸತ್ಯ, ನ್ಯಾಯ, ದಯೆ ಅಥವಾ ಪ್ರೇಮ ಮನುಷ್ಯರಲ್ಲಿ ಇಲ್ಲವಾದರೆ ನಿರ್ವಾಣ ಎಂದರೆ ಮೋಕ್ಷ ಅಥವಾ ಪ್ರಪಂಚದಲ್ಲಿ ಶಾಶ್ವತವಾದ ಸುಖವು ಮನುಷ್ಯನಿಗೆ ಎಂದಿಗೂ ಪ್ರಾಪ್ತವಾಗದು. ಹೀಗೆ ಧರ್ಮದಿಂದ ನಡೆಯದ ಸಮಾಜವು ನಾಶವನ್ನೇ ಹೊಂದುವುದು.

ಮನುಷ್ಯ ವರ್ಗದಲ್ಲಿ ಬೇರೆ ಬೇರೆ ಜಾತಿಭೇದಗಳಿದ್ದು ಉತ್ತಮ ವರ್ಣದವರು ಕನಿಷ್ಠ ವರ್ಣದವರನ್ನು ತಮಗಿಂತ ನೀಚರೆಂದು ಭಾವಿಸಿ ಅವರೊಡನೆ ಅದರಂತೆಯೇ ವರ್ತಿಸುವುದು ಹೆಚ್ಚು ಕಡಿಮೆ ಎಲ್ಲಾ ದೇಶಗಳಲ್ಲಿ ಕಾಣಬರುತ್ತದೆ. ಹೀಗೆ ಭಿನ್ನ ಭಿನ್ನ ವರ್ಗದಲ್ಲಿ ವೈಮನಸ್ಸು ಉಂಟಾಗಿ ಸಮಾಜದ ಅಭಿವೃದ್ಧಿಗೆ ಕುಂದುಂಟಾಗುವುದು. ಹೀಗೆ ಉಂಟಾಗುವ ಪರಿಣಾಮವನ್ನು ಅನುಭವದಿಂದರಿತ ವಾಶ್ಚಾತ್ಯರು ತಮ್ಮ ರಾಷ್ಟ್ರಗಳಲ್ಲಿ ಈ ಭಿನ್ನ ಭಿನ್ನ ಜಾತಿಯಲ್ಲಿದ್ದ ಭೇದವನ್ನು ಹೋಗಲಾಡಿಸಲು ಪ್ರಯತ್ನಿಸಿ ಸರ್ವರಲ್ಲಿಯೂ ಐಕ್ಯವನ್ನು ಸಂಪಾದಿಸಿದರು. ಈ ಸತ್ಪ್ರಯತ್ನದಿಂದಲೇ ಆ ರಾಷ್ಟ್ರಗಳು ಉದಯಕ್ಕೆ ಬಂದವು. ಆದರೆ ನಮ್ಮ ಭರತಖಂಡದಲ್ಲಿ ಈ ವಿಧದ ಭಿನ್ನ ವರ್ಗದಲ್ಲಿ ಐಕ್ಯವುಂಟಾಗುವುದರ ಬದಲಿಗೆ ಆ ವರ್ಗಗಳಲ್ಲಿ ಭಿನ್ನ ಭಿನ್ನವಾದ ವರ್ಗಗಳೇ ಹೆಚ್ಚುತ್ತಾ ಬಂದವು. ಒಂದಾನೊಂದು ಕಾಲದಲ್ಲಿ ಈ ಹಿಂದು ಸಮಾಜಕ್ಕೆ ಭರತಖಂಡದ ಪೂರ್ಣ ಸಾಮ್ರಾಜ್ಯ ಸಂಪತ್ತಿಯು ಪ್ರಾಪ್ತವಾಗುವ ಸಂಭವವಿತ್ತು. ಆದರೆ ರಾಜಕುಲದಲ್ಲಿಯೇ ಮುಖ್ಯ ಪ್ರಮುಖರಾದ ಪ್ರಧಾನರು ಮತ್ತು ಸರದಾರರು ಇವರೊಳಗೆ ಪರಸ್ಪರ ವೈಮನಸ್ಸು, ಸ್ವಾರ್ಥತೆ, ಮತ್ತು ಅನ್ಯಾಯ ಇವುಗಳು ಪೂರ್ಣವಾಗಿ ಪ್ರವೇಶಿಸಿ ಆ ಸಂಭವವು ಕೊನೆಗಾಣದೆ ಹೋಯಿತು. ಮತ್ತು ಯಾರಲ್ಲಿ ನ್ಯಾಯದ ಆಧಾರದಿಂದ ಸರ್ವ ವ್ಯವಸ್ಥೆಯು ನಡೆಯುತ್ತದೋ ಆ ಒಂದು ಪರಕೀಯವಾದ ಜನಾಂಗಕ್ಕೆ ಜಯವಾಯಿತು. ಹೀಗೆ ಐಕ್ಯಮತ್ಯದಿಂದಲೇ ಆ ಜನಾಂಗವು ಉನ್ನತ ಸ್ಥಿತಿಗೆ ಬಂತು. ಎಲ್ಲಿ ಅಸತ್ಯ, ಅನ್ಯಾಯ ಮತ್ತು ಸ್ವಾರ್ಥತೆ ಇರುವುದೋ ಅಲ್ಲಿಯ ಪರಿಣಾಮವು ನೆಟ್ಟಗಾಗದು. ನ್ಯಾಯ, ಸ್ವಾಮಿಭಕ್ತಿ, ದೇಶಪ್ರೀತಿ ಯಾವ ಸಮಾಜದಲ್ಲಿರುವುದೋ ಆ ಸಮಾಜವು ಉನ್ನತಿಯನ್ನೈದುವುದರಲ್ಲಿ ಲೇಶವಾದರೂ ಸಂಶಯವಿಲ್ಲ.

ಪ್ರಕೃತ ನಮ್ಮ ಹಿಂದು ಸಮಾಜದಲ್ಲಿ ಪ್ರಾಚೀನ ಕಾಲದ ಧರ್ಮವಿಧಿಯ ಮೇಲಿನ ವಿಶ್ವಾಸವು ಕಡಿಮೆಯಾಗುತ್ತಾ ಬರುತ್ತದೆ. ಸದ್ಧರ್ಮವನ್ನು ದೂರವಾಡಿ ಅಧರ್ಮಕ್ಕೆ ಕೈನೀಡಿದಂತಾಯಿತು. ಈಗೀಗ ಸ್ವರಾಜ್ಯದ ವಿಷಯದಲ್ಲಿ ಇಡೀ ಜನಾಂಗವು ಎಚ್ಚರವಾಗಿದೆ. ಈ ಹಕ್ಕನ್ನು ನಾವು ಇಚ್ಛಿಸುವವರಾದರೆ ನಮ್ಮಲ್ಲಿ ಸತ್ಯ, ನ್ಯಾಯ, ಮತ್ತು ರಾಜಭಕ್ತಿ ಬೇಕೇಬೇಕು. ಇವುಗಳನ್ನು ನಾವು ಯಾವಾಗ ವಶಪಡಿಸಿಕೊಂಡೆವೋ ಆಗಲೇ ನಮ್ಮ ಆಶೆಯು ಫಲಕಾರಿಯಾಗುವುದು.

ಸಮಾಜ ಸುಧಾರಣೆಯು ನಮ್ಮ ದೇಶಕ್ಕೆ ಶುಭಸೂಚಕ ಚಿಹ್ನೆಯೇ ಎನ್ನಬೇಕು. ಪತಿತರಾದವರನ್ನು ಉದ್ಧರಿಸಲು ಮಾಡುವ ಸತ್ಪ್ರಯತ್ನವು ಶ್ಲಾಘನೀಯವಾದುದೇ ಸರಿ. ಇದರಿಂದ ಇಡೀ ಜನಾಂಗವು ಐಕ್ಯಭಾವದಿಂದಿರಲು ಅವಕಾಶವಾಗುವುದು. ಇದೇ ದೇಶದ ಅಭ್ಯುದಯ ಸಾಧನವು.

ದೇಶವು ಉನ್ನತಸ್ಥಿತಿಗೆ ಬರಬೇಕಾದರೆ ಅನೇಕ ಸಾಧನಗಳಿವೆ. ದೇಶಗಳಲ್ಲೆಲ್ಲಿಯೂ ಕೈಗಾರಿಕೆ ಕಾರ್ಖಾನೆಗಳನ್ನು ಸ್ಥಾಪಿಸಬೇಕು. ಹೊಸ ಹೊಸ ಶೋಧನೆಗಳನ್ನು ಕಂಡು ಹಿಡಿಯಬೇಕು. ಇಂತಹ ಘನವಾದ ವಿಚಾರಗಳು ಭಾರತೀಯರಲ್ಲಿ ಈಗೀಗ ಉಂಟಾಗಹತ್ತಿವೆ. ಆದರೆ ಮೂಲವಾದ ಸಾಧನವು ಎಂದರೆ ಪರಸ್ಪರ ವಿಶ್ವಾಸ, ನಿಷ್ಕಪಟವಾದ ಮನಸ್ಸು, ಸತ್ಯ ಮತ್ತು ನ್ಯಾಯ ಇವೆಲ್ಲವೂ ನಮ್ಮಲ್ಲಿ ನೆಲಸಬೇಕು. ಆಗಲೇ ನಮ್ಮ ಉದ್ದೇಶವು ಫಲಕಾರಿಯಾಗಿ ಜನಾಂಗವು ಉನ್ನತ ಸ್ಥಿತಿಗೆ ಬಂದು ಧರ್ಮವು ಎಲ್ಲೆಲ್ಲಿಯೂ ಪ್ರವರ್ಧಿಸುವುದು.

ಸರ್ವಸಾಧಾರಣವಾಗಿ ಮಾನವನು ಸ್ವಭಾವದಲ್ಲಿ ಸ್ವಾರ್ಥತೆಗೆ ಎಡೆಕೊಟ್ಟು ಕಾಮಕ್ರೋಧಾದಿಗಳಿಗೆ ವಶನಾಗುತ್ತಾನೆ. ಇಂಥವನು ಧರ್ಮಕಾರ್ಯವನ್ನು ಎಂದಿಗೂ ಮಾಡಲಿಚ್ಛಿಸನು. ಧರ್ಮವಾಯನು (ಮೇಲೆ ಹೇಳಿದಂತೆ ನಿಷ್ಕಾಮ ಎಂದರೆ ಫಲ ಇಚ್ಛೆ ಇಲ್ಲದೆ ಧರ್ಮಾಚರಣೆಯನ್ನು ಮಾಡುವುದು ಸಾಮಾನ್ಯವಾದುದಲ್ಲ. ಇಂತಹ ಧರ್ಮವನ್ನು ಆಚರಿಸುವ ಮಾನವನು ಸದ್ಧರ್ಮದ ವಿಷಯದಲ್ಲಿ ಶ್ರದ್ಧೆಯನ್ನಿಟ್ಟ ಎಂದರೆ ಸತ್ಯ, ನ್ಯಾಯ, ದಯೆ, ದಮ, ಶಾಂತಿ ಮತ್ತು ಸಮಾಧಾನ ಇವುಗಳನ್ನು ಮನಸ್ಸಿನಲ್ಲಿ ಆಗಾಗ್ಗೆ ಭಾವಿಸಿ ಅವುಗಳಿಂದುಂಟಾಗುವ ಸಹಜವಾದ ಪ್ರೀತಿಯನ್ನು ತನ್ನಲ್ಲಿ ದೃಢಪಡಿಸಿಕೊಳ್ಳಬೇಕು. ಮತ್ತು ಸದ್ಧರ್ಮ ಸ್ವರೂಪಿಯಾದವನೂ, ಸತ್ಯ ನ್ಯಾಯ ಮತ್ತು ದಯೆ ಈ ತ್ರಿಗುಣಗಳಿಂದ ಕೂಡಿದವನೂ, ಪರಮ ದಯಾಳೂ, ಸರ್ವವಿಶ್ವದ ಅಧಿಪತಿಯಾದವನೂ ಆದ ಶ್ರೀ ಪರಮೇಶ್ವರನನ್ನು ಅನನ್ಯ ಭಾವದಿಂದ ಪ್ರೀತಿಸಬೇಕು. ಆ ಮಾಯಾತೀತನಾದ ಪರಮಾತ್ಮನನ್ನು ಶುದ್ಧವಾದ ಮನಸ್ಸಿನಿಂದ ಧ್ಯಾನಿಸಬೇಕು. ಇದೇ ಸದ್ಧರ್ಮವನ್ನಾಚರಿಸುವ ಸುಲಭವಾದ ಉಪಾಯವು. ಶ್ರೀ ಕೃಷ್ಣ ಪರಮಾತ್ಮನು ಭಗವದ್ಗೀತೆಯಲ್ಲಿ ಹೀಗೆಂದು ಹೇಳಿರುವನು —

ಅಪಿಚೇತ್ಸು ದುರಾಚಾರೋ ಭಜತೇಮಾಮನನ್ಯಭಾಕ್ ||
ಸಾಧುರೇವ ಸಮಂತವ್ಯಃ ಸಮ್ಯಗ್ ವ್ಯವಸಿತೋಹಿಸಃ ||
ಕ್ಷಿಪ್ರಂಭವತಿ ಧರ್ಮಾತ್ಮಾ ಶಶ್ವಚ್ಛಾಂತಿ ನಿಗಚ್ಛತಿ ||

ಎಂದರೆ ದುರ್ಜನನ ದುರಾಚಾರಿಯಾದ ಮನುಷ್ಯನು ಕೂಡಾ ನನ್ನನ್ನು ಅನನ್ಯ ಭಾವದಿಂದ ಭಜಿಸಿದರೆ ಆತನು ಸಾಧುವೇ ಆಗುವನು. ಆತನ ವ್ಯವಸಾಯವು ಉತ್ತಮವಾಗಿ ಕೂಡಲೆ ಆತನು ಧರ್ಮಾತ್ಮನಾಗುವನು ಮತ್ತು ಶಾಶ್ವತವಾದ ಸುಖವನ್ನು ಪಡೆಯುವನು. ಹೀಗೆ ಶ್ರೀ ಕೃಷ್ಣ ಪರಮಾತ್ಮನ ಭಕ್ತಿಸ್ವರೂಪವಾದ ಧರ್ಮವನ್ನು ಎಂದರೆ ಈ ಧರ್ಮಕ್ಕೆ ಏಕೇಶ್ವರಿ ಧರ್ಮವೆಂದಾಗಲೀ, ಪ್ರಾರ್ಥನಾಸಮಾಜದ ಧರ್ಮವೆಂದಾಗಲೀ, ಬ್ರಾಹ್ಮಣ ಧರ್ಮವೆಂದಾಗಲೀ, ಅಥವಾ ಉಪನಿಷತ್ ಮತ್ತು ಭಗವದ್ಗೀತೆಯ ಸಾರಭೂತವಾದ ಧರ್ಮವೆಂದಾಗಲೀ, ಸನಾತನ ಧರ್ಮವೆಂದಾಗಲೀ, ಅಥವಾ ಆರ್ಯಧರ್ಮವೆಂದಾಗಲೀ ಹೀಗೆ ಹೇಗೂ ಸಂಬೋಧಿಸಿದರೂ ಇಂತಹ ಧರ್ಮವನ್ನೇ ಪಡೆಯುದಕ್ಕೆ ಪ್ರಯತ್ನಿಸಬೇಕು. ಇದೇ ವಾಪಷ್ಟೋನ್ನತಿಯ ಮೂಲ ಸಾಧನವು.

G. R. Shenai.

ಪತ್ರ ವ್ಯವಹಾರ.

ಇದೇನು ಗದ್ದಲ!

ಅಯ್ಯಾ ಪತ್ರಕರ್ತರೇ,

ನಮ್ಮೂರಲ್ಲಿ ಇದೇನು ಗದ್ದಲ! ಜಟಕಾ ಗಾಡಿಗಳೂ ಮೋಟರುಗಳೂ ಏನೇನೋ ಅಲ್ಲಲ್ಲಿ ಚಲಿಸುತ್ತಿವೆ. ಈ ಮಳೆಗಾಲದಲ್ಲಿ ಛತ್ರಿಹಿಡಿದು ಕಂಬಳಿ ಹೊದ್ದಿರುವ ನಾನು ಕೂಡಾ ಎಚ್ಚತ್ತು ಏನು ವಿಶೇಷವೆಂದು ವಿಚಾರಿಸಿದೆ. ಒಂದು ಕಡೆಯಲ್ಲಿ,—ನಮ್ಮ ಜಿಲ್ಲೆಯು ವಿಭಜನೆಯಾಗುತ್ತದಂತೆ, ಕೊಡಗು ಜಿಲ್ಲೆಯನ್ನು ನಮ್ಮೂರಿಗೆ ಸೇರಿಸುವ ಯೋಜನೆಯಂತೆ, ತೆಂಕಲಾಗಿನವರು ನಮ್ಮನ್ನು ಬಿಟ್ಟು ಆಗಲಿ ಹೋಗುವರಂತೆ. ಈ ವಿಷಯ ಸಭೆಗೂಡುವ ಗಾಜಿಯೋ, ಕಲೆಕ್ಟರ್ ದೊರೆಗಳನ್ನು ಕಾಣುವ ಆಡಂಬರವೋ, ಈ ಕಾರಣಗಳಿಂದ ಪಟ್ಟಣಿಗರು ಉತ್ಸಾಹವುಳ್ಳವರಾಗಿರಬಹುದೆಂದು ತಿಳಿದೆ. ಆದರೆ ಈ ವಿಷಯಕ್ಕೇನೇ ಎಲ್ಲಾ ಕಡೆಗಳಲ್ಲಿ ಜನರು ಊರ್ಧ್ವಮುಖಸ್ಥರಾಗಿ ಮಾತುಕಥೆಯಾಡುತ್ತಿರುವರೇ ಎಂದು ಒಬ್ಬ ನಾಗರಿಕನನ್ನು ವಿಚಾರಿಸಿದೆ. ಆತನು ಮುಗುಳುನಗೆಯಿಂದ ನನ್ನ ಅಜ್ಞಾನತೆಯನ್ನು ತಿಳಿಸಿ ಈ ಗದ್ದಲಕ್ಕೆ ಕಾರಣ ಮುನ್ಸಿಪಾಲಿಟಿಯ ಚೆಯರ್ಮೇನ ಚುನಾವಣೆಯು ಸಮೀಪಿಸುತ್ತದೆ. ಆ ಬಗ್ಗೆ ಪಟ್ಟಣವಾಸಿಗಳು ತುಂಬಾ ಉತ್ಸುಕತೆಯಿಂದ ಹಾರ್ಯಾಡುತ್ತಾರೆ. ಈ ವಿಷಯಕ್ಕಾದರೂ ಅವರು ಹೆಚ್ಚಿನ ಮನಸ್ಸು ಕೊಡಕೂಡದೇ ಎಂದು ಹೀಯ್ಯಾಳಿಸಿದನು. ಕೌನ್ಸಿಲರ ಚುನಾವಣೆಯ ಸಮಯ, ಓಟರರ ಪಟ್ಟಿಯಲ್ಲಿ ಹೇಗೋ ಹೆಸರು ಬೀಳದ ವೃದ್ಧ ವಯಸ್ಸಿನವನಾದ ನಾನು ಒಂದು ಗಳಿಗೆ ಕುದುರೆಗಾಡಿಯಲ್ಲಿ ಓಡ್ಯಾಡಿದ ನೆನಪು ನನಗೆ ಬಂತು. ಆನಂತರ ನಾನೆಲ್ಲಿಯೋ, ನನ್ನ ವಾರ್ಡಿನ ಶಾತರೆಲ್ಲಿಯೋ,—ಕಂಡ ಜ್ಞಾಪಕವಾಗುವದಿಲ್ಲ. ನಮ್ಮಲ್ಲಿಯ ರಸ್ತೆಗಳೂ ಲಾಂದರುಗಳೂ ಸದರಿಯವರನ್ನು ಗುರ್ತಿಸಬಹುದು. ಅದು ಹೇಗೂ ಆಗಲಿ. ಚೆಯರ್ಮೇನರ ಹುದ್ದೆಯು ತುಂಬಾ ಜವಾಬ್ದಾರಿಯುಳ್ಳದ್ದೂ ಗೌರವಾಸ್ಪದವಾದದ್ದೂ ಆಗಿರುತ್ತದೆ. ಅವರು ಪ್ರಜಾ ಹಿತಚಿಂತಕರೂ ನಾಗರಿಕರ ಬಗ್ಗೆ ತನ್ನ ಕಿಂಚಿತ್ ತನುಮನವನ್ನಾದರೂ ವೆಚ್ಚಮಾಡುವವರೂ ಆಗಿರಬೇಕು. ಬುದ್ಧಿ ಕುಶಲತೆಯಲ್ಲಿಯೂ, ಪ್ರಾಯಪ್ರಬುದ್ಧತೆಯಲ್ಲಿಯೂ ಆಫೀಸು ಮ ಇತರ ಕೆಲಸದ ಮಾಹೀತಿಯಲ್ಲಿಯೂ ಹೆಸರುವಾಸಿಯುಳ್ಳವರಾಗಿದ್ದು ಅಸ್ವಾರ್ಥಭಾವದಿಂದ ಪ್ರಜಾಹಿತವನ್ನು ಬಯಸುವ ಮುಂದಾಳುಗಳಿಗೆ ಸಂದರ್ಭವಿದು! ಅಂಥವರು ನಿವಾಸಿಕರಾದ ನಮ್ಮನ್ನು ಬಿಟ್ಟುಹಾಕಲಿಕ್ಕಿಲ್ಲವೆಂದೂ, ಪಟ್ಟಣವಾತರು ಅಂಥ ಮಹನೀಯರನ್ನೇ ಹೆಕ್ಕಿ ಹಿಡಿದು ವಿಜ್ಞಾಪಿಸಿಕೊಳ್ಳುವದರಲ್ಲಿ ಆಸಕ್ತಿಯನ್ನು ಪ್ರದರ್ಶಿಸುವರೆಂದೂ ಸ್ವಲ್ಪ ಸಂತುಷ್ಟಿಗೊಂಡೆನು. ಅಷ್ಟರಲ್ಲಿ ನಮ್ಮ ದಾಕ್ತರ್ ಮಹಾಶಯರೇ ಪಟ್ಟಣದ "ಲೋರ್ಡ್ ಮೇಯರ್" ಆಗಬೇಕೆಂದು ಹಲವು ಪಟ್ಟಣವಾತರ ಅಪೇಕ್ಷೆಯೆಂದು ಕೇಳಿ ಸ್ತಬ್ಧನಾದೆ. ಪಟ್ಟಣವಾತರು ತಮ್ಮ ಓಟರುಗಳ ಯಾ ಪ್ರಜೆಗಳ ಆಲೋಚನೆಯನ್ನು ಕೇಳಿದ್ದಾರೋ ಏನೋ ನಾನರಿಯೆ. ಈ ಸಂದರ್ಭದಲ್ಲಿ ಮದ್ರಾಸ್ ಗವರ್ನಮೆಂಟಿನ ಕಾರ್ಯನಿರ್ವಾಹಕ ಸಭೆಯ ಮೆಂಬರರಾದ ಸರ್ ಶಿವಸ್ವಾಮಿ ಅಯ್ಯರರೇ ಮದ್ರಾಸ್ ಯುನಿವರ್ಸಿಟಿಯ ವೈಸ್ ಚೆನ್ಸಲರ್ ಕೆಲಸಕ್ಕೆ ನೇಮಕಪಟ್ಟ ವಿಷಯವು ಜ್ಞಾಪಕ ಬರುತ್ತೆ. ಆ ಸಮಯ ದೇಶೀಯ ಪತ್ರಿಕಾಕರ್ತರೆಲ್ಲರೂ ಜರಿದಿದ್ದರು. ಅಯ್ಯಾ ಪತ್ರಿಕಾಕರ್ತರೇ, ನೀವು ಕೂಡಾ ಆ ಕ್ರಮಕ್ಕೆ ಅಸಂತೃಪ್ತಿಪಟ್ಟು ಈಗ ಮಾತ್ರ ಮೌನರಾಗಿರುವಿರಾ? ನಮ್ಮ ವೆನ್‌ಲಕ್ ಮತ್ತು ಮಕ್ಕಳ ಮ ಸ್ತ್ರೀಯರ ಆಸ್ಪತ್ರೆಗಳು, ಸೆನಿಟರಿ, ಪ್ಲೇಗ್ ಪಾಸ್‌ಪೋರ್ಟ್ ಇಲಾಖೆ ಎಲ್ಲವೂ ಮನಿಸಿಪಾಲಿಟಿ ಸಂಸ್ಥೆಗಳಂತೆ. ತೆರಿಗೆಗಳಲ್ಲಿ ಹೆಚ್ಚಿನ ಅಂಶವು ಅವುಗಳಿಗೇನೇ ವೆಚ್ಚವಾಗುತ್ತದಂತೆ. ಸದರಿ ಆಸ್ಪತ್ರೆ ಮ ಸಂಸ್ಥೆಗಳ ವೈದ್ಯ ಉದ್ಯೋಗಸ್ಥರೇ ಚೆಯರ್ಮೇನರಾದರೆ ಈ ಔಷಧಾಲಯ ಸಂಸ್ಥೆಗಳ ಮೇಲ್ವಿಚಾರಣಾ ಕಾರ್ಯವನ್ನೇ ಉಳಿಸಿದಂತಾಗುವದು. ಹೆಚ್ಚಿನ ದ್ರವ್ಯಾಸ್ಪದವಿಲ್ಲದ ನಮ್ಮ ಮುನ್ಸಿಪಾಲಿಟಿಗೆ ಈ ಕಾರ್ಯವುಳಿದು ಪ್ರಯೋಜನವಾಗುವದೋ ಎಂತ ಊಹಿಸಿದೆ. ಓಹ್ಹೋ ಎಂಥಾ ತಪ್ಪು ಗ್ರಹಿಕೆ! ಚೆಯರ್ಮೇನ್ ಉದ್ಯೋಗವು ತಲೆಬಿಸಿ ವಿರಹಿತವಾಗಿ ಬಹುಮಾನಾರ್ಥವಾದದ್ದು. ಅವರ ಕಾರ್ಯವೇ ಮುನಿಸಿಪಾಲಿಟಿಯ ಎಲ್ಲಾ ಸಂಸ್ಥೆಗಳ ಪರಿಪಾಲನೆ ಮ ಮೇಲ್ವಿಚಾರಣೆ ನೋಡುವಂಥಾದ್ದು ಮತ್ತು ಪ್ರಜಾಭಿವೃದ್ಧಿ ಬಗ್ಗೆ ಅಹೋರಾತ್ರಿ ಚಿಂತಿಸಿ ತನ್ನ ಪ್ರಜಾಪ್ರೀತಿಯನ್ನು ಕಾರ್ಯರೂಪಕ್ಕೊಳಿಸುವಂಥಾದ್ದು. ಆದುದರಿಂದ ತನ್ನ ಇತರ ಜವಾಬ್ದಾರಿ ಕೆಲಸಕ್ಕೆನೇ ಸಮಯ ದೊರಕದ ಸರಕಾರಿ ನೌಕರರನ್ನು ನಾವು ಹಾರೈಸುವದಕ್ಕಿಂತ ನಮ್ಮ ಚುನಾವಣೆ ಹಕ್ಕನ್ನೇ ಬಿಟ್ಟುಕೊಟ್ಟು ಗವರ್ನಮೆಂಟಿನವರೇ ಯೋಗ್ಯ ಕಂಡವರನ್ನು ನೇಮಿಸುವದು ಮತ್ತಷ್ಟೂ ಗೌರವವು! ಆದರೆ ಅಂಥ ದುರವಸ್ಥೆಯಲ್ಲಿ ನಾವು ಇನ್ನೂ ಒಂದು ಸೇರಲಿಲ್ಲ. ಪಟ್ಟಣದ ಅನುಭವಶಾಲಿಗಳೂ, ಹಿತಚಿಂತಕರೂ, ಸರಕಾರಿ ಉದ್ಯೋಗದಿಂದ ನಿವೃತ್ತಿಹೊಂದಿ ತನ್ನ ಎಲ್ಲಾ ಸಮಯವನ್ನು ಪ್ರಜೆಗಳ ಸಂತೃಪ್ತಿ ಬಗ್ಗೆ ವಿನಿಯೋಗಿಸುತ್ತಿದ್ದ ನಮ್ಮ ಪಟ್ಟಣದ ಮಾಜಿ ಚೇಯರ್ಮೇನರಂತಹ ಸದ್ಗೃಹಸ್ಥರು ಇನ್ನೂ ನಮ್ಮ ಪಟ್ಟಣದಲ್ಲಿ ಸಿಕ್ಕುವದು ದುರ್ಲಭವಿಲ್ಲ. ಪಟ್ಟಣವಾತರೇ, ಈ ಬಡ ನಿವಾಸಿಕನ ವಿಜ್ಞಾಪನೆಗೆ ಕಿವಿಕೊಡಬಾರದೇ?

ಮಂಗಳೂರು,)
ತಾ॥ 15—6—1916.)

ಮಂಗಳೂರು ನಿವಾಸಿಕ.

ಅಯ್ಯಾ,

ಗುಡ್ಡಗೆ ಮೇಯ ಹೋದ ಜಾನುವಾರುಗಳನ್ನು ಭಯಭೀತಿಯಿಲ್ಲದೆ ದುಷ್ಟ ಮೃಗಗಳಾದ ಹುಲಿಗಳು ಹಿಡಿದು ಭಕ್ಷಿಸುವಂತೆ ನಮ್ಮ ಇಲ್ಲಿಯ ಟೌನಿನ ನಿವಾಸಿಕರು ಗುಡ್ಡೆಗೆ ಮೇವಿಗೆ ಹೋಗ ಬಿಟ್ಟು ಮ ಮೇದು ವಾಪಸ್ ಬರುವ ಜಾನುವಾರುಗಳನ್ನು ರಾಜರಸ್ತೆಗಳಲ್ಲಿ ಕಂಡಾಕ್ಷಣ ಜನರ ಕ್ಷೇಮಕಾಪಾಡುವ ಸರಕಾರದ ಕಡೆ ದೂತರಾದ ಇಲ್ಲಿಯ ಪೋಲಿಸಿನವರು ಹಿಡಿದು ದೊಡ್ಡಿಗೆ ಒಯ್ಯುವ ಕೆಲಸ ಆರಂಭಿಸಿರುವರು. ಈ ಹೊಸಕಾಯಿದೆ ಜ್ಯಾರಿಗೆ ತಂದದ್ದರಿಂದ ಜಾನುವಾರುಗಳನ್ನು ಮೇವಿಗೆ ಬಿಡುವ ನಿವಾಸಿಕರಿಗೆ ದೊಡ್ಡಿ ಫೀಸು ತೆರುವ ಸಂಕಷ್ಟಗಳು ಒದಗಿರುವದು.

ಪುತ್ತೂರು.)
ತಾ 12—6—16)

ನಿವಾಸಿಕರಲ್ಲೊಬ್ಬ.

ಮಾರಾಟಕ್ಕೆ ತಯ್ಯಾರದೆ.

ಕಾಸರಗೋಡು ತಾಲೂಕು ಮೊಗ್ರಾಲ್ ಮಾಗಣೆ ಕಸಬಾ ಗ್ರಾಮದಲ್ಲಿರುವ ಸಾವುಕಾರ ಕುಂಞಿಪಕ್ಕಿ ಬ್ಯಾರಿಗಳವರ ಬಾಬತು ಸದರಿ ತಾಲೂಕು ಪುತ್ತೂರು, ಕುಂಬುಡಾಜೆ, ಕನ್ನೂರು, ಬಾರ್ಕೆ, ಕೂಡ್ಲು, ಪಳ್ಳಿಕೆರೆ ಈ ಗ್ರಾಮಗಳಲ್ಲಿರುವ ಆಸ್ತಿಗಳನ್ನು ಮಾರಾಟಮಾಡುವ ಬಗ್ಗೆ ಮಂಗಳೂರ ಶಹರ ಗೋಳಿಕಟ್ಟೆ ಬಜಾರದಲ್ಲಿರುವ ಸಿ. ಅಬ್ದುಲ್‌ರಹಿಮಾನ ಹಜಾರ ಬ್ಯಾರಿಗಳ ಮಗ ಸಿ. ಮಹಮೂದ ಬ್ಯಾರಿಯಾದ ನಾನು ಪವರ್ ಓಪ್ ಯೆಟರ್ನಿ ಮೂಲಕ ಅಧಿಕಾರಪಟ್ಟಿರುತ್ತೇನೆ. ಅವಶ್ಯವಿರುವ ಎಲ್ಲಾ ಮಾಹಿತಿಯನ್ನು ನನ್ನ ಕೂಡೆ ಕೇಳಿ ತಿಳಕೊಳ್ಳಬಹುದು.

C. Mohomood,
C/o C. Abdul Rahiman Koragappa
Hoige Bazar Mangalore.

ಯುದ್ಧ ಸಮಾಚಾರ.

ತಾ. ೭ನೇ ಜೂನು.

ಮೇ ತಾ ೩೧ರಲ್ಲು ಜಟ್‌ಲೇಂಡ್ ಬಳಿ ಆದ ನೌಕಾವಳಿ ಕದನದಲ್ಲಿ ಬ್ರಿಟಿಷರ ೩ ದೊಡ್ಡ ಕ್ರೂಜರ್ಸ್, ೩ ಸಣ್ಣ ಕ್ರೂಜರ್ಸ್, ೮ ಡಿಸ್ಟ್ರೋಯರ್ಸ್ ನಾವೆಗಳು ನಾಶವಾದವು ಎಂಬದಾಗಿ ಸರಕಾರದ ಕಡೆಯಿಂದ ಪ್ರಕಟಿಸಲ್ಪಟ್ಟಿದೆ. ಜರ್ಮನರ "ಪೋಮೆರೇನ್" "ವೈಸ್ ಬೇಡೆನ್" ಮತ್ತು "ರೆವನ್ ಲೋಬ್" ಎಂಬ ಯುದ್ಧನಾವೆಗಳು ಈ ಯುದ್ಧದಲ್ಲಿ ನಾಶವಾಗಿರುವವು ಎಂತ ಜರ್ಮನರು ಪ್ರಕಟಿಸಿರುತ್ತಾರೆ ಆದರೆ ಜರ್ಮನರ ಒಂದು ಡ್ರೆಡ್‌ನೋಟ್ ಯುದ್ಧ ಹಡಗವನ್ನು ಬ್ರಿಟಿಷರ ಡಿಸ್ಟ್ರೋಯರ್ ನಾವೆಯು ಹಾರಿಸಿ ಬಿಟ್ಟಿರುವದನ್ನೂ ಅದೇ ತರದ ಮತ್ತೊಂದು ಜರ್ಮನ ನಾವೆಯು ಬ್ರಿಟಿಷರ ಹಡಗದ ಫಿರಂಗಿಗಳ ಹೊಡೆತದಿಂದ ಮುಣುಗಿರುವದನ್ನೂ ಬ್ರಿಟಿಷರು ಕಂಡಿರುವರು ೬ ಡಿಸ್ಟ್ರೋಯರುಗಳೂ ಒಂದು ಜರ್ಮನ ಜಲಂತರ್ಗಾಮಿಯೂ ಮುಣುಗಿರುವವು. ಎರಡು ಕಡೆಗಾದ ನಷ್ಟವು ವಿಪರೀತವಾಗಿದೆ. ಬ್ರಿಟಿಷರ ಮತ್ತು ಜರ್ಮನ್ ಕ್ರೂಜರ್ ನಾವೆಗಳಿಗೆ ಪ್ರಥಮತಃ ಕದನ ಪ್ರಾರಂಭವಾಯಿತು ಬ್ರಿಟಿಷರ ಮುಖ್ಯ ನೌಕಾವಳಿಯು ತಲಪಿದ್ದರಿಂದ ಜರ್ಮನರ ನೌಕಾವಳಿಗೆ ಬಹಳ ನಷ್ಟವಾಗಿ ಅವುಗಳು ಓಡಿಹೋದವು ಈ ನೌಕಾವಳಿ ಕದನದಲ್ಲಿ ತಮಗೆ ಹೆಚ್ಚಿಗೆ ನಷ್ಟವಾಗಲಿಲ್ಲ ಎಂದು ಹೇಳುವ ಜರ್ಮನರ ಮಾತು ಸುಳ್ಳಾಗಿದೆ. ಜರ್ಮನರಿಗೆ ಕಮ್ಮಿಯೆಂದರೆ ೧೮ ಹಡಗಗಳ ನಷ್ಟವಾಗಿದೆ ಎಂಬ ಮಾತಿಗೆ ಅನುಮಾನವಿಲ್ಲ ಬ್ರಿಟಿಷರ ೧೪ ಹಡಗಗಳು ನಷ್ಟವಾಗಿದೆ ಎಂತ ಬ್ರಿಟಿಷ ಸರಕಾರದವರು ಪ್ರಕಟಿಸಿರುವರು

ರಷ್ಯನರಿಗೆ ಪ್ರಿಪೆಟ್ ರಣರಂಗದಲ್ಲಿ ಮತ್ತು ರುಮೇನಿಯನ್ ಸರಹದ್ದಿನಲ್ಲಿ ಒಂದು ಮಹತ್ತಾದ ಜಯವಾಗಿದೆ ಇಲ್ಲಿ ರುಷ್ಯನರು ೧೩ ಸಾವಿರ ಶತ್ರು ಸೈನಿಕರನ್ನು ಸೆರೆ ಹಿಡಿದಿರುತ್ತಾರೆ. ಸೆರೆ ಬಿದ್ದ ೧೩ ಸಾವಿರ ಸೈನಿಕರ ವಿನಹಾ ಬಹಳ ಫಿರಂಗಿಗಳೂ ಯುದ್ಧ ಸಾಮಗ್ರಿಗಳೂ ರುಷ್ಯನರಿಗೆ ದೊರಕಿರುವವು. ರುಷ್ಯನರ ತೋಫುಗಳು ಬಲಪಡಿಸಿಕೊಂಡಿದ್ದ ಶತ್ರುಗಳ ಕೆಲಸಗಳನ್ನು ಹಾಳುಮಾಡಿದ್ದರಿಂದ ರುಷ್ಯನರ ಕಾಲಾಳು ಸೈನಿಕರು ಸುಲಭವಾಗಿ ಮುಂದರಿದು ಶತ್ರುಗಳ ನೆಲೆಗಳನ್ನು ಹಿಡಿದುಕೊಂಡರು. ರುಷ್ಯಾ ರಣರಂಗವು ನೈರುತ್ಯ ದಿಕ್ಕಿನಲ್ಲಿ ೨೫೦ ಮೈಲಿಗೆ ವಿಸ್ತರಿಸಿಯದೆ ಶತ್ರುಗಳ ೪೦ ಕಾಲಾಳು ಡಿವಿಜನ್‌ಗಳೂ ೧೨ ಕುದುರೆ ಸವಾರರ ಡಿವಿಜನ್‌ಗಳೂ ಈ ರಣರಂಗದಲ್ಲಿ ಇವೆ. ಅಂದರೆ ಒಟ್ಟಿಗೆ ಶತ್ರುಗಳ ೬,೨೫,೦೦೦ ಸೈನಿಕರು ಈ ರಣರಂಗದಲ್ಲಿರುವರು.

ಇಟಲಿ ರಣರಂಗದ ಮೊಂಟೆ ಸೇನಿಗೋ ಎಂಬಲ್ಲಿ ಶತ್ರುಗಳು ದೊಡ್ಡ ಸೇನೆಯನ್ನು ತಂದೊಡ್ಡಿ ಮೇಲ್ಪಾಯಿದುದರಿಂದ ಇಟಲಿಯನರು ಆ ನೆಲೆಯನ್ನು ಬಿಟ್ಟು ಹಿಂದಕ್ಕೆ ಸರಿದಿರುವರು.

ಕೌಕಸಸಿನ ಎರ್ಜಿನ್‌ಜಾನಿನಲ್ಲಿ ತುರ್ಕರು ನುಗ್ಗಿ ಬಂದು ಕದನ ಮಾಡುತ್ತಿದ್ದಾರೆ. ಆದರೆ ಅವರು ಎಲ್ಲಿಯೂ ಜಯಹೊಂದಲಿಲ್ಲ

ಚೀನಾದೇಶದ ಪ್ರೆಸಿಡೆಂಟರಾದ ಯುಆನ್ ಸಿಕಾಯಿರವರು ಕಾಲವಾದರೆಂಬ ವಾರ್ತೆ ಬಂದಿರುವದು.

ತಾ. ೮ನೇ ಜೂನ್.

ಮುಣುಗಿಹೋದ "ಹೆಮ್‌ಶಯರ್" ನಾವೆಯಲ್ಲಿ ಕಿಚನರ್ ಪ್ರಭುಗಳು ಲೆಫ್ಟಿನೆಂಟ ಕರ್ನಲ್ ಫಿಜ್ಜರಾಲ್ಡರವರು, ಸೆಕೆಂಡ್ ಲೆಫ್ಟಿನೆಂಟ್ ಆರ್. ಡಿ ಮೆಕ್‌ಫರ್ಸನ್, ವಿದೇಶಿ ಆಫೀಸಿನ ಜೆ ಓ. ಬೆರ್ನ್, ಸರ್ ಎಚ್ ಎಫ್ ಡೊನಾಲ್ಡ್‌ಸನ್, ಮೆ ಎಲ್ ರೋಬರ್ಟ್‌ಸನ್, ಕೆಲವು ಗುಪ್ತ ಪೋಲಿಸ್ ಇಲಾಖೆಯವರು, ಕೆಲವು ಕ್ಲಾರ್ಕರು, ಮತ್ತು ಚಾಕರರು ಇದ್ದರು

ಕಿಚನರ್ ಪ್ರಭುಗಳ ಮರಣಕ್ಕಾಗಿ ಒಂದು ವಾರ ಶೋಕ ~~ಪಾಲಿಸಬೇಕೆಂತ ಸೇನೆಗೆ ಆಜ್ಞೆಯಾಗಿದೆ.~~

ಮಿ। ಅಸ್ಕ್ವಿತರವರು ಸದ್ಯಾ ಯುದ್ಧ ಆಫೀಸಿನ ಚಾರ್ಜು ತೆಕ್ಕೊಂಡಿರುವರು.

ವಾಕ್ಸ್ ಮತ್ತು ಡೊಮ್‌ಲುಪಿನಲ್ಲಿ ರಾತ್ರಿಕಾಲ ಹಲ್ಲೆಮಾಡಿದ ಜರ್ಮನರು ಪೂರ್ಣವಾಗಿ ಸೋತುಹೋಗಿರುವರು.

ಪ್ರಿಪೆಟ್‌ನಿಂದ ರುಮೇನಿಯ ಸರಹದ್ದಿನವರೆಗೆ ರುಷ್ಯನರು ಜಯಶೀಲರಾಗುತ್ತಿದ್ದಾರೆ. ರುಷ್ಯನರು ಈವರೆಗೆ ೪೮೦ ಆಫೀಸರರನ್ನೂ ೨೫ ಸಾವಿರ ಸೇನಿಕರನ್ನೂ ೧೭ ಫಿರಂಗಿಗಳನ್ನೂ ೫೦ಕ್ಕಿಂತ ಹೆಚ್ಚಿಗೆ ಯಂತ್ರ ಚಾಲಿತ ಫಿರಂಗಿಗಳನ್ನೂ ಸೆರೆಹಿಡಿದಿರುವರು.

ತಾ. ೯ನೇ ಜೂನ್.

ಕಿಚನರ್ ಪ್ರಭುಗಳವರ ಮರಣದಿಂದ ಫ್ರಾನ್ಸ್‌ದೇಶದವರೂ, ಇಟಲಿ ದೇಶದವರೂ ಸಹಸಂತಾಪ ಪಡುತ್ತಾರೆಂಬ ತಂತಿಗಳು ಆಯಾ ದೇಶಗಳ ಸರಕಾರದಿಂದ ಬಂದಿರುತ್ತವೆ

ವಾಕ್ಸ್ ಕೋಟೆಯ ಬಳಿ ಜರ್ಮನರು ಕಠಿಣವಾಗಿ ಹಲ್ಲೆ ಮಾಡಿದರು ಆದರೆ ವಿಶೇಷ ನಷ್ಟಪಟ್ಟು ದಿಕ್ಕಾಪಾಲಾಗಿ ಹಿಮ್ಮೆಟ್ಟಿದರು ಫ್ರೆಂಚರ ಮೊದಲನೇ ಸೇನಾಸಾಲಿಗೆ ಶತ್ರುಗಳು ಕಠಿಣವಾಗಿ ಗುಂಡು ಹಾರಿಸುತ್ತಲಿದ್ದಾರೆ ಮ್ಯೂಸಿನ ಎಡಕಡೆಯಲ್ಲಿ ಶತ್ರುಗಳ ತೋಫುಗಳು ಅತಿ ತೀಕ್ಷ್ಣತೆಯಿಂದ ದಿನ್ನೆ ೩೦೪ರ ಮೇಲೆ ಗುಂಡು ಹಾರಿಸುತ್ತಲಿವೆ ಮ್ಯೂಸಿನ ಬಲಕಡೆಯಲ್ಲಿ ಡೌವೊಮೊಂಟ್ ಮತ್ತು ಡಾಮ್‌ಲೋಪ್ ಕಡೆಯಲ್ಲಿರುವ ಫ್ರೆಂಚರ ೧ನೇ ೨ನೇ ಸೇನಾಸಾಲುಗಳ ಮೇಲೆಯೂ ಜರ್ಮನರು ಎಡೆಬಿಡದೆ ಗುಂಡು ಹಾರಿಸುತ್ತಲಿದ್ದಾರೆ ಕಳೆದ ಮಂಗಳವಾರ ಸಾಯಂಕಾಲ ವಾಕ್ಸ್ ಕೋಟೆಯು ಜರ್ಮನರ ವಶವಾಗಿರುವದೆಂದು ಜರ್ಮನ ವಾರ್ತೆಯಿಂದ ತಿಳಿದುಬರುತ್ತದೆ ಕೋಟೆಯು ಇನ್ನೂ ಫ್ರೆಂಚರ ಕೈವಶದಲ್ಲಿಯೇ ಇದೆ ಆದರೆ ಶತ್ರುಗಳ ಫಿರಂಗಿಗಳ ಹೊಡೆತವು ಅತಿ ತೀಕ್ಷ್ಣವಾಗಿರುವದರಿಂದ ವಾಕ್ಸ್ ಕೋಟೆಗೆ ವ್ಯವಹಾರಗಳೇನೂ ನಡಿಯುವದಿಲ್ಲವೆಂತ ಫ್ರೆಂಚ ಸರಕಾರದವರು ಪ್ರಕಟಿಸಿದ ವಾರ್ತೆಯಿಂದ ತಿಳಿದು ಬರುತ್ತದೆ

ವೈಪ್ರಿಸಿನಲ್ಲಿಯೂ ಕಠಿಣ ತೋಫುಕಾಳಗವು ನಡೆಯುತ್ತಿದೆ ಶತ್ರುಗಳು ನಿನ್ನೆಯ ದಿನ ಹೂಗೆ ಗ್ರಾಮದ ಆಗ್ನೇಯ ಪ್ರದೇಶಗಳಲ್ಲಿದ್ದ ಬ್ರಿಟಿಷ ಸೇನೆಯು ಮುಂಚಿನ ಸಾಲನ್ನು ಹಿಡಿದಿದ್ದರು ಅದೇ ಸೇನಾಸಾಲಿನ ಮತ್ತೊಂದು ಕಡೆಯಲ್ಲಿ ಹಲ್ಲೆಮಾಡಿದ ಶತ್ರುಗಳು ಹಿಮ್ಮೆಟ್ಟಿರುವರು ಆಸ್ಟ್ರೇಲಿಯನ ಸೇನಿಕರು ಬ್ಯೂಗ್ರೈವಿಯರಿನಲ್ಲಿ ರಾತ್ರಿಕಾಲ ಜರ್ಮನರ ಕಂದಕಗಳನ್ನು ನುಗ್ಗಿ ಶತ್ರುಸೇನೆಯಲ್ಲಿ ವಿಶೇಷ ನಷ್ಟಪಡಿಸಿ ಕೆಲವರನ್ನು ಸೆರೆಹಿಡಿದು ಹಿಂತಿರುಗಿರುವರು ಎಂತ ಜನರಲ್ ಹೇಗರವರು ಪ್ರಕಟಿಸಿರುತ್ತಾರೆ

ವಾಕ್ಸ್ ಕೋಟೆ ಪೂರ್ಣವಾಗಿ ಹಾಳಾಗಿದೆ ಅದನ್ನು ಶತ್ರುಗಳು ಹಿಡಕೊಂಡದ್ದರಿಂದ ಶತ್ರುಗಳಿಗೆ ಹೇಳತಕ್ಕದನ್ನು ನಷ್ಟವಾಗಿರುವದು ಆದರೆ ಪ್ರಯೋಜನವಾಗಲಿಲ್ಲ ವೆರ್ಡನನ್ನು ಹಿಡಕೊಳ್ಳುವದಕ್ಕಾಗಿ ಹತ್ತರ ಸಮೀಪಿಸಲು ಶತ್ರುಗಳಿಗೆ ಸಾಧ್ಯವಿಲ್ಲವೆಂತ ತಿಳಿದುಬರುತ್ತದೆ

ವೈಪ್ರಿಸಿನಲ್ಲಿ ಘೋರ ಕಾಳಗವು ನಡಿಯುತ್ತಿದೆ ಒಕ್ಲಿರ ಮತ್ತು ಜಿಲ್ಬೇಕೆಯಿಂದ ~~ಕೋ~~ರ್ಟರಾಯಿ ವರೆಗೆ ರಾತ್ರಿಹಗಲ ಫಿರಂಗಿಗಳು ಕ್ಷಣಬಿಡದೆ ಹಾರುತ್ತಲಿವೆ. ಶತ್ರುಗಳಲ್ಲಿ ಹತರಾದವರ ಸಂಖ್ಯೆ ವಿಪರೀತವಾಗಿರುವದು ಉಭಯ ಪಕ್ಷದಲ್ಲಿಯೂ ವಿಪರೀತ ನಷ್ಟವಾಗಿರುವದು

ರುಷ್ಯನರು ಪ್ರಿಪೆಟ್ ಮತ್ತು ರುಮೇನಿಯ ರಣರಂಗದಲ್ಲಿ ಸೆರೆಹಿಡಿದ ಆಸ್ಟ್ರಿಯ ಸೇನಿಕರ ಸಂಖ್ಯೆ ೪೦,೦೦೦, ಆಫೀಸರರ ಸಂಖ್ಯೆ ೯೦೦, ಫಿರಂಗಿಗಳ ಸಂಖ್ಯೆ ೭೭, ಯಂತ್ರಚಾಲಿತ ಫಿರಂಗಿಗಳ ಸಂಖ್ಯೆ ೧೩೪

ಆಸ್ಟ್ರಿಯನರು ಲುತ್ಸ್ ಪ್ರಾಂತ್ಯದಿಂದ ಹಿಂದೆ ಸರಿದಿರುವರೆಂದೂ ರುಷ್ಯನರು ಕಮ್ಮಿ ಎಂದರೆ ಒಂದು ದಿನದಲ್ಲಿ ಏಳಾವರ್ತಿ ಹಲ್ಲೆ ಮಾಡಿರುವರೆಂದೂ ಆಸ್ಟ್ರಿಯನರು ಪ್ರಕಟಿಸಿರುತ್ತಾರೆ

ದಕ್ಷಿಣ ರಣರಂಗದಲ್ಲಿ ಆಸ್ಟ್ರಿಯನರು [illegible]ಲ್ಲಸರ್, ಮೊಂಟೆ ಸ್ಪಿನ್ ಆಣಿನ್ನೆ, ಕಂಪೊಲೋಂಗು ಮೊದಲಾದ ಸ್ಥಳಗಳಲ್ಲಿ ದಾಳಿ ಮಾಡಿ ಹಿಮ್ಮೆಟ್ಟಿರುವರು

ಕೌಕಾಸಸಿನಲ್ಲಿ ಎರ್ಜಿಂಜಾನಿನಲ್ಲಿ ನುಗ್ಗಿ ಬರುತ್ತಿದ್ದ ತುರ್ಕರ ದೊಡ್ಡ ಸೇನೆಯನ್ನು ರುಷ್ಯನರ ತೋಫುಗಳು ತಡೆದಿರುವವು. ಬಗ್ದಾದಿನ ದಿಕ್ಕಿನಲ್ಲಿರುವ ಹೆನಿಕಿನ್ ಡಿಸ್ಟ್ರಿಕ್ಟಿನಲ್ಲಿ ರುಷ್ಯನರು ತುರ್ಕರ ಕೋಟೆ ಕೊತ್ತಲಗಳಿದ್ದ ಸ್ಥಳವನ್ನು ಹಿಡಿದಿರುತ್ತಾರೆ.

ಪೂರ್ವ ಆಫ್ರಿಕದಲ್ಲಿ ಬ್ರಿಟಿಷರ ಸೈನಿಕರು ನಮಿಡನ ಕೋಟೆಯಲ್ಲಿದ್ದ ಶತ್ರುಗಳನ್ನು ಸೋಲಿಸಿರುವರು. ಶತ್ರುಗಳ ಸೇನಾಧಿಪತಿಯು ಗಾಯಹೊಂದಿ ಬ್ರಿಟಿಷರ ಸೆರೆಬಿದ್ದಿರುವನು.

ತಾ. ೧೦ನೇ ಜೂನು.

ಕಿಚನರ್ ಪ್ರಭುಗಳವರು ಮುಣುಗಿಹೋದ ಹೆಮ್‌ಶಯರ್ ನಾವೆಯಲ್ಲಿದ್ದವರಲ್ಲಿ ಒಬ್ಬ ವಾರಂಟ್ ಆಫೀಸರನೂ ೧೧ ಜನರೂ ಒಂದು ತೆಪ್ಪದಲ್ಲಿ ಕರೆ ಸೇರಿರುವರು ಎಂಬದಾಗಿ ತಿಳಿದು ಬರುತ್ತದೆ.

ಜರ್ಮನರು ಕೆಲವು ವಾರಗಳಿಂದ ವಾಕ್ಸ್ ಕೋಟೆಯನ್ನು ಪಡೆಯುವದಕ್ಕಾಗಿ ಜೀವದ ಮರವೆ ಇಲ್ಲದೆ ಹೋರಾಡಿ ಕಡೆಗೆ ಕೋಟೆಯ ಅಳಿದುಳಿದ ಭಾಗವನ್ನು ಸ್ವಾಧೀನಮಾಡಿಕೊಂಡರು ಆದರೆ ಫ್ರೆಂಚರು ಕೋಟೆಯ ಎಡಬಲ ಭಾಗದಲ್ಲಿರುವ ಕಂದಕಗಳನ್ನು ಇನ್ನೂ ಹಿಡಿದುಕೊಂಡಿರುತ್ತಾರೆ. ಥಿಯಾಮೊಂಟ್, ಡೊವಾಮೊಂಟ ಮತ್ತು ಹರ್ಟಮಾನ್‌ವಿಲ್ಲರ್ ಎಂಬ ಸ್ಥಳಗಳ ಆಜುಬಾಜಿನಲ್ಲಿ ಶತ್ರುಗಳ ತೋಫುಗಳು ಬಹಳ ತೀಕ್ಷ್ಣತೆಯಿಂದಿರುವವು ಎಂತ ಫ್ರೆಂಚರ ವಾರ್ತೆಯಿಂದ ತಿಳಿದು ಬರುತ್ತದೆ.

ವಾಕ್ಸ್ ಕೋಟೆಯನ್ನು ಡೋವಾಮೊಂಟದಿಂದ ಪ್ರತ್ಯೇಕಿಸುವರೆ ಜರ್ಮನರಿಗೆ ೧೦೪ ದಿವಸಗಳ ಕಾಲ ಬೇಕಾಯಿತು. ಜರ್ಮನರು ಇಲ್ಲಿ ತಮ್ಮ ಹೆಚ್ಚಿನ ಸೇನೆಗಳನ್ನೂ ದೊಡ್ಡ ದೊಡ್ಡ ಫಿರಂಗಿಗಳನ್ನೂ ಪ್ರಯೋಗಿಸಿದರು ಆದರೂ ಈ ವಾಕ್ಸ್ ಕೋಟೆಯು ೯೦ ದಿವಸಗಳ ವರೆಗೆ ಫಿರಂಗಿಗಳ ಹೊಡತವನ್ನು ತಡಕೊಂಡಿತು. ಈಗ್ಗೂ ಜರ್ಮನರು ವಾಕ್ಸ್ ಕೋಟೆಗೆ ಬೇಗದ ಕೈಯಂತಿರುವ ನೆಲೆಯನ್ನು ಹಿಡಿಯಲಿಲ್ಲ ವಾಕ್ಸ್ ೧,೧೫೦ ಅಡಿ ಎತ್ತರವಿದೆ ನೆಲೆಯು ೧೨೭೫ ಅಡಿ ಎತ್ತರವಿದ್ದು ಶಿಖರದಲ್ಲಿ ಸೊವಿಲ್ಲೆ ಎಂಬ ಕೋಟೆ ಇದೆ ಈ ಕೋಟೆಗೆ ಟಾವನ್ನೆಸ್ ಮತ್ತು ಫ್ಲೋಡೆಟ್ರೆ ಎಂಬ ಕೋಟೆಗಳು ಸೇರಿಕೊಂಡಿವೆ. ಇಲ್ಲಿ ಫ್ರೆಂಚರು ಮುಖ್ಯಸ್ಥಾನವನ್ನು ಮಾಡಿಕೊಂಡು ಎದುರಾಡುತ್ತಿದ್ದಾರೆ ಈ ಬಲವಾದ ನೆಲೆಯನ್ನು ಪೂರಾ ಸ್ವಾಧೀನ ಮಾಡಿಕೊಳ್ಳಬೇಕಾದರೆ ಶತ್ರುಗಳು ಇನ್ನೂ ಬಹಳ ಬಲಿಕೊಡಬೇಕಾಗುವದು

ಜೆರೂಸಲೇಮದ ಮಹಾರಾಜ ಸರ್ ಪ್ರತಾಪ ಸಿಂಘರವರು ಇಜಿಪ್ತಿಗೆ ಲೆಫ್ಟಿನೆಂಟ ಜನರಲರಾಗಿಯೂ ಬಿಕಾನೇರಿನ ರಾಜರವರು ಒನರರಿ ಲೆಫ್ಟಿನೆಂಟ ಕರ್ನಲರಾಗಿಯೂ ಬಡ್ತಿ ಹೊಂದಿರುತ್ತಾರೆ.

ರಷ್ಯನರು ಲುತ್ಸಿನಲ್ಲಿ ಆಸ್ಟ್ರಿಯನರ ಹೊಸ ನೆಲೆಗಳನ್ನೆಲ್ಲಾ ಒಡೆದು ಮುಂದರಿಯುತ್ತಿದ್ದಾರೆ ಹಿಂದೆ ಹಿಡಿದ ೪೦,೦೦೦ ಸೇನಿಕರ ಹೊರತು ಪುನಃ ೧೧ ಸಾವಿರ ಸೇನಿಕರನ್ನೂ ೫೮ ಆಫೀಸರರನ್ನೂ ಸೆರೆ ಹಿಡಿದಿರುವರು

ಇಟಲಿ ರಣರಂಗದಲ್ಲಿ ಕಠಿಣ ಕಾಳಗವು ನಡೆಯುತ್ತಿದೆಂಬ ವಾರ್ತೆ ಪುನಃ ಬಂದಿರುತ್ತದೆ ಇಟಲಿಯನರು ಎಲ್ಲಿಯೂ ಹಿಂದೆ ಸರಿಯಲಿಲ್ಲ

ತಾ. ೧೨ನೇ ಜೂನ್.

ಇಟಲಿಯನರ ಸೇನೆಯನ್ನು ಸಾಗಿಸಿಕೊಂಡು ಹೋಗುತ್ತಿದ್ದ ೩ ಹಡಗಗಳ ಮೇಲೆ ಆಸ್ಟ್ರಿಯನರ ಜಲಂತರ್ಗಾಮಿ ನಾವೆಗಳು ಆಡ್ರಿಯಾಟಿಕಿನಲ್ಲಿ ದಾಳಿಮಾಡಿದವು ಇಟೆಲಿಯನರ ಒಂದು ನಾವೆಯು ಮುಣುಗಿಹೋಗಿಯದೆ ಅದರಲ್ಲಿದ್ದ ಸೇನಿಕರಲ್ಲಿ ಸುಮಾರ ಅರೆವಾಸಿ ಮಂದಿ ಮುಣುಗಿರುವರು

ನಿನ್ನೆಯ ದಿನ ಬ್ರಿಟಿಷರ ಡಿಸ್ಟ್ರೋಯರ್ ಯುದ್ಧ ನಾವೆಗಳು ಜೀಬ್ರಗ್ಗಿಯಲ್ಲಿ ಶತ್ರುಗಳ ಡಿಸ್ಟ್ರೋಯರ್ ನಾವೆಗಳ ಮೇಲೆ ಗುಂಡು ಹಾರಿಸಿರುತ್ತವೆ ಶತ್ರುಗಳ ನಾವೆಗಳು ಬಂದರಕ್ಕೆ ಹಿಂತಿರುಗಿದವು

ಜಟ್‌ಲೇಂಡಿನ ಬಳಿ ಆದ ನೌಕಾವಳಿ ಕದನದಲ್ಲಿ ಜರ್ಮನರ ೫ ಜಲಂತರ್ಗಾಮಿ ನಾವೆಗಳು ಮುಣುಗಿಹೋಗಿರುತ್ತವೆ ಎಂತ ಕೀಲಿನಿಂದ ವಾರ್ತೆ ಬಂದಿದೆ

ಜರ್ಮನರ ೬ ಯುದ್ಧ ನಾವೆಗಳು ಈ ಸ್ಮಕಿ ೨೦,೦೦೦ ಟನ್ ಭಾರವುಳ್ಳ "ವೆಸ್ಟ್‌ಫೆಸ್‌ಲೆಂಡ್" ಎಂಬ ಯುದ್ಧನಾವೆಯೂ ೧೭ ಡಿಸ್ಟ್ರೋಯರ್ ನಾವೆಗಳೂ ಕಾಣದೆ ಹೋಗಿವೆ ಎಂತ ವಾರ್ತೆ ಇದೆ.

ಕಿಚನರ್ ಪ್ರಭುಗಳು ಮುಣುಗಿಹೋದ "ಹೆಮ್‌ಶಯರ್" ನಾವೆಯು ಸಾಯಂಕಾಲ ೮ ಘಂಟೆಗೆ ಸಿಡಿದ ದ್ವಿನ ಗಣಿಗೆ ತಾಗಿ ೧೦ ನಿಮಿಷಗಳೊಳಗೆ ಮುಣುಗಿಹೋಯಿತೆಂದೂ ಈ ನಾವೆಯೊಡನೆ ಇದ್ದ ೨ ಡಿಸ್ಟ್ರೋಯರ್ ನಾವೆಗಳು ಸಮುದ್ರದಲ್ಲಿ ವಿಶೇಷ ತುಫಾನು ಇದ್ದುದರಿಂದ ಪ್ರಯಾಣದ ಮಧ್ಯಕಾಲ ಹಿಂದೆ ಉಳಿದಿದ್ದವೆಂದೂ ಬ್ರಿಟಿಷ ಸರಕಾರದವರು ಪ್ರಕಟಿಸಿರುವರು.

ನೋರ್ವೇಯರ "ಬರ್ಕೆಡಲ್" "ಫ್ರೊಸ್‌ಪರ್ ಫೆರ್ಡ್" ನಾವೆಗಳೂ ಸ್ವೀಡನಿನವರ "ವಾರ" "ಹೈಡಿ" ನಾವೆಗಳೂ ಮುಣುಗಿಸಲ್ಪಟ್ಟಿರುವವು ಮೆಡಿಟರೇನಿಯನ್ ಸಮುದ್ರದಲ್ಲಿ ನೋರ್ವೇಯವರ "ರುಮೆನಾ" ನಾವೆಯನ್ನು ಎಚ್ಚರ ಕೊಡದವೇ ಜರ್ಮನರು ಮುಣುಗಿಸಿರುವರು

ಫ್ರಾನ್ಸ್ ರಣರಂಗದ ಮ್ಯೂಸ್, ವೆರ್ಡನ್ ಪ್ರಾಂತ್ಯಗಳಲ್ಲಿ ತೋಫುಕಾಳಗವು ಅತಿ ತೀಕ್ಷ್ಣವಾಗಿರುವದು.

ರುಷ್ಯನರಿಗೆ ಒಲ್ಹಿನಿಯದಲ್ಲಿ ದಿನೇ ದಿನೇ ಜಯವಾಗುತ್ತಲಿದೆ. ಈ ಪ್ರಾಂತ್ಯದಲ್ಲಿ ಈವರೆಗೆ ರುಷ್ಯನರ ಸೆರೆಬಿದ್ದ ಶತ್ರುಗಳ ಸಂಖ್ಯೆ ೬೪,೦೦೦ಕ್ಕೆ ಮಿಕ್ಕಿರುವದು. ರುಷ್ಯನರು ಪುನಃ ೫೫,೦೦೦ ಮಂದಿಯನ್ನು ಸೆರೆಹಿಡಿದಿರುವರು.

ಸ್ಟೈರ ನದಿಯ ಬಳಿ ರುಶ್ಯನರು ಸೇತುವೆಯನ್ನು ಸ್ವಾಧೀನ ಮಾಡಿಕೊಂಡು ೨೫೦೦ ಮಂದಿಯನ್ನ ಸೆರೆ ಹಿಡಿದಿರುವರು ರುಶ್ಯನರು ಸ್ಟೈರ ನದಿಯನ್ನು ದಾಟಿ ಜ್ಲೋಟಾಪ್ರೋಟ್ನ ನದಿಯ ಬಳಿಗೆ ತಲಪಿರುತ್ತಾರೆ. ಜರ್ಮನರ ಜನರಲ್ ಪಿಕ್ಕಕುಲೈನ್ ಎಂಬವರಿಗೆ ಗಾಯವಾಗಿದೆ. ಟಾರ್ನಾಪೋಲಿನಲ್ಲಿಯೂ ಕಠಿಣ ಕಾಳಗ ನಡೆದಿರುವದು. ಸ್ಟೈರ ನದಿಯ ಪೂರ್ವದಿಕ್ಕಿನ ಕೋಟೆಗಳು ರಶ್ಯನರ ವಶವಾಗಿರುವವು. ರಶ್ಯನರು ಸೆರೆಹಿಡಿದ ಒಟ್ಟು ಸಂಖ್ಯೆ ೧೨೪೦ ಆಫೀಸರರ, ೭೧,೦೦೦ ಸೇನಿಕರ, ೯೪ ಫಿರಂಗಿಗಳು, ೧೬೭ ಯಂತ್ರಚಾಲಿತ ಫಿರಂಗಿಗಳು ೫೩ ಮೊರ್ಟರ್

ಲುಟ್ಸ್ಕಿನಲ್ಲಿ ಜರ್ಮನರು ಆಸ್ಟ್ರಿಯನರಿಗೆ ಸಹಾಯಮಾಡಲು ಯತ್ನಿಸಿದರು ಆದರೆ ಸೋತ ಓಡಿಹೋದರು ೨೦೦೦ ಜರ್ಮನ ಸೇನಿಕರು ರಶ್ಯನರ ಸೆರೆಯಾಳಾಗಿರುತ್ತಾರೆ ರಶ್ಯನರು ಒಂದೇ ಸ್ಥಳದಲ್ಲಿ ೩೦ ಸರ್ಚ್‌ಲೈಟುಗಳನ್ನೂ ಸಾಮಗ್ರಿಗಳನ್ನು ಸಾಗಿಸುತ್ತಿದ್ದ ೨ ಟ್ರೇನು ಬಂಡಿಗಳನ್ನೂ ೪೭ ಯಂತ್ರಚಾಲಿತ ಫಿರಂಗಿಗಳನ್ನು ವಿಶೇಷ ಕೋಟ್ಯಂತರ ಮದ್ದುಗುಂಡುಗಳನ್ನು ಸೆರೆಹಿಡಿದಿರುವರು ೧೯೧೫ನೇ ಇಸವಿಯ ಸಪ್ಟಂಬರ ತಿಂಗಳಿಂದ ಕಳಕೊಂಡ ಎಲ್ಲಾ ಪ್ರಾಂತ್ಯಗಳನ್ನು ರುಶ್ಯನರು ತಿರಿಗಿ ಪಡಕೊಂಡಿರುತ್ತಾರೆ ಶತ್ರುಗಳಿಗೆ ೩೦೦,೦೦೦ ಸೇನಿಕರ ನಷ್ಟ ಆಗಿರಬಹುದೆಂತ ಅಂದಾಜಾಗಿದೆ

ನಿನ್ನೆಯ ದಿನ ರುಶ್ಯನರಿಗೆ ಶತ್ರುಗಳ ೩೫,೧೦೦ ಸೇನಿಕರು ಒಬ್ಬ ಜನರಲ್ ೪೦೯ ಆಫೀಸರರು, ೩೦ ಫಿರಂಗಿಗಳು, ಸೆರೆ ಬಿದ್ದಿರುವವು ಜೆರ್ನೋವಿಟ್ಝ್ ಒಂದೇ ಪ್ರಾಂತ್ಯದಲ್ಲಿ ರಶ್ಯನರು ೧೮,೦೦೦ ಮಂದಿಯನ್ನ ಸೆರೆಹಿಡಿದಿರುತ್ತಾರೆ

ಇಟಲಿ ರಣರಂಗದಲ್ಲಿ ಕಠಿಣ ಕಾಳಗ ನಡೆಯುತ್ತಿದೆ ಶತ್ರುಗಳು ವಿಶೇಷ ನಷ್ಟಪಟ್ಟು ಹಿಮ್ಮೆಟ್ಟಿರುತ್ತಾರೆ ಕೆಲವು ದಿವಸಗಳೊಳಗೆ ೫೬೭ ಮಂದಿ ಶತ್ರುಸೇನಿಕರು ಇಟಲಿಯನರ ಸೆರೆ ಬಿದ್ದಿರುವರು

ಪೂರ್ವ ಆಫ್ರಿಕದಲ್ಲಿ ಬ್ರಿಟಿಷ ಸೇನಿಕರು ಮೊಂಬೊ ಎಂಬ ಜರ್ಮನರ ಸ್ಥಳವನ್ನ ಹಿಡಿದಿರುತ್ತಾರೆ ಶತ್ರುಗಳು ಬಲಕಾಯಿಸಿಕೊಂಡ ಪ್ರೊಟೊಟೋ ಪರ್ವತದ ಮೇಲೆ ದಾಳಿಮಾಡಿ ೨ ಫಿರಂಗಿಗಳನ್ನು ಕೈಫಲ್ ಕೋವಿಗಳನ್ನೂ ಮದ್ದುಗುಂಡುಗಳನ್ನೂ ಹಿಡಿದಿರುತ್ತಾರೆ ಕರ್ನೇಲ್ ಮೂರ್ತಿಯವರು ಬಿಸ್ಮಾರ್ಕಬರ್ಗ ಎಂಬ ಸ್ಥಳವನ್ನು ಸ್ವಾಧೀನ ಮಾಡಿಕೊಂಡಿರುವರು

ಉತ್ತರ ಹಿಂದೂಸ್ಥಾನ.

ಜೂನು ತಾ ೩ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ೪೪೫ ಮಂದಿಗೆ ಪ್ಲೇಗಬೇನೆಯು ಸೋಂಕಿ ೩೫೭ ಮರಣಗಳಾಗಿರುವವು ಈ ಪೈಕಿ ಮುಂಬಾಯಿ ೯೭, ಮದ್ರಾಸ್ ೧೦, ಬಂಗಾಳ ೪, ಬಿಹಾರ ಮತ್ತು ಒರಿಸ್ಸ ೨೩, ಸಂಯುಕ್ತ ಸಂಸ್ಥಾನ ೩೮, ಮಧ್ಯ ಸಂಸ್ಥಾನ ೪ ಮೈಸೂರು ೬೭, ಹೈದರಾಬಾದ್ ೪೦, ಮರಣಗಳಾಗಿರುವವು

ಬೆನಾರಸಿನಲ್ಲಿ ಟಪ್ಪಾಲು ಬಟ್ವಾಡೆ ಪ್ಯಾದೆಯನ್ನು ಕೊಂದನೆಂಬದಾಗಿ ವಿಚಾರಣೆಗೆ ಗುರಿಮಾಡಲ್ಪಟ್ಟ ಪರೇಶ ಚಂದ್ರಬೋಸನಿಗೆ ಫಾಶಿ ಶಿಕ್ಷೆಯು ವಿಧಿಸೋಣಾಗಿರುವದು

೧೯೧೦ನೇ ಪ್ರೆಸ್ ಆಕ್ಟನ್ನು ಈಚೆಗೆ ಕೆಲವು ವರ್ತಮಾನ ಪತ್ರಿಕೆಗಳ ಮೇಲೆ, ಮುಖ್ಯವಾಗಿ ಈಗ ತಾನೇ "ನ್ಯೂ ಇಂಡಿಯಾ" ಪತ್ರಿಕೆಯ ಮೇಲೆ ಜಾರಿಗೆ ತಂದ ರೀತಿಯಿಂದ ಜನಸಮುದಾಯದಲ್ಲಿ ಅಸಂತೃಪ್ತಿಯುಂಟಾದ್ದರಿಂದ ಪ್ರೆಸ್ ಆಕ್ಟನ್ನ ತಿದ್ದುಪಡಿ ಮಾಡಬೇಕೆಂಬದಾಗಿ ಸರಕಾರದವರನ್ನು ಕೇಳಿಕೊಳ್ಳಬೇಕೆಂಬ ನಿರ್ಣಯವು ಇದೇ ತಾ. ೯ರಲ್ಲು ಮುಂಬಾಯಲ್ಲಿ ಕೂಡಿಬಂದ "ಬೊಂಬೆ ಪ್ರೆಸಿಡೆನ್ಸಿ ಪ್ರೆಸ್ ಎಸೋಸಿಯೇಶನಿ"ನಲ್ಲಿ ಆಗಿರುತ್ತದೆ ಈ ಸಂಬಂಧ ಸರಕಾರದವರಿಗೆ ಒಂದು ವಿಜ್ಞಾಪನಾ ಪತ್ರಿಕೆಯನ್ನು ತಯಾರಿಸುವರೆ ಸರ್ ನಾರಾಯಣ ಚಂದಾವರಕರ್, ಮೆಸ್ಸರ್ಸ್ ಬಿ. ಜಿ. ಹೋರ್ನಿಮನ್, ಬಿ ಎನ್ ಬಹದುರ್ಜಿ, ಎಮ್ ಎ. ಜಿನ್ನ, ಮತ್ತು ಈ ಎಸೋಸಿಯೇಶನಿನ ಒನರರಿ ಸೆಕ್ರೆಟರಿಗಳು ಕೂಡಿದ ಒಂದು ಕಮಿಟಿಯು ನೇಮಕವಾಗಿದೆ.

ಹಿಂದೀ ಜನರ ರಾಜಭಕ್ತಿಯ ಸಂಬಂಧವಾದ ತಮ್ಮ ಅಭಿಪ್ರಾಯವನ್ನು ಹಿಂದೂಸ್ಥಾನದ ಸ್ಟೇಟ ಸೆಕ್ರೆಟರಿಯವರು ಅಮೇರಿಕಾ ದೇಶದ ವರ್ತಮಾನ ಪತ್ರಿಕೆಯ ಪ್ರತಿನಿಧಿಗಳೊಡನೆ ಹೀಗೆ ಹೇಳಿರುವರು:—"ಹಿಂದೂಸ್ಥಾನವು ರಾಜ ವಿಪ್ಲವದ ತುದಿಯಲ್ಲಿದೆ" ಎಂದಾಗಿ ಆಗಾಗ್ಗೆ ರೂಟರ್ಸ್ ಏಜನ್ಸಿಯವರು ಪ್ರಕಟಿಸಿದ ವರ್ತಮಾನಗಳನ್ನು ಜರ್ಮನಿಯು ನಂಬಿ ಬ್ರಿಟಿಷರು ಈ ಘೋರ ಯುದ್ಧಕ್ಕೆ ಸೇರಿದ ಕಾಲದಲ್ಲಿ ಹಿಂದೂಸ್ಥಾನವು ಬ್ರಿಟಿಷ ಅಧಿಕಾರವನ್ನು ತಳ್ಳಿ ಬಿಡುವರೆ ಪ್ರಯತ್ನಿಸುವದು ಎಂಬ ನಿರ್ಣಯವನ್ನು ಮಾಡಿಕೊಂಡರು ಈ ಭ್ರಮೆಯಿಂದ ಜರ್ಮನರು ಹಲವು ಬಗೆಯ ಪ್ರಯತ್ನಗಳನ್ನು ಮಾಡಿ ಹಿಂದೂಸ್ಥಾನದಲ್ಲಿ ನಾನಾ ತೊಂದರೆಗಳನ್ನ ಹುಟ್ಟಿಸಲು ನೋಡಿದರು ಆದರೆ ಹಿಂದೂಸ್ಥಾನದ ೩೦೦ ಮಿಲಿಯ ಜನರಲ್ಲಿ ಸ್ವಾಭಾವಿಕವಾಗಿ ಕೆಲವು ಮಂದಿ ಮಾತ್ರವೇ ಬ್ರಿಟಿಷ ಸರಕಾರದ ಕಡೆಗೆ ಅಸಂತೃಪ್ತಿಯುವರಿದ್ದರು. ಅವರಲ್ಲಿಯೂ ಸರಕಾರದ ಕಡೆಗೆ ವಿಶೇಷ ದ್ವೇಷ ಕಟ್ಟಿಕೊಂಡವರು ಸ್ವಲ್ಪ ಕೆಲವು ಮಂದಿ ಇದ್ದರು. ಈ ಪೈಕಿ ಕೆಲವರು ಸರಕಾರಕ್ಕೆ ವಿರೋಧವಾಗಿ ಪಿತೂರಿ ನಡಿಸುವರೆ ಒಂದು ಮಂಡಲಿಯನ್ನ ಸ್ಥಾಪಿಸಿಕೊಂಡಿದ್ದರು ಈ ಪಿತೂರಿ ಮಂಡಲಿಯು ಯುದ್ಧಕ್ಕೆ ಒಂದೆರಡು ವರ್ಷಗಳ ಮೊದಲೇ ಅಮೇರಿಕಕ್ಕೆ ಸೇರಿದ ಕೆಲಿಫೋರ್ನಿಯದಲ್ಲಿದ್ದ ಹಿಂದೂ ಜನರಿಂದ ಸ್ಥಾಪಿಸಲ್ಪಟ್ಟಿತ್ತು ಯುದ್ಧ ಪ್ರಾರಂಭವಾಗುತ್ತಲೇ ಈ ಗುಪ್ತ ಮಂಡಲಿಯ ಕೆಲವು ಜನರು ಹಿಂದೂಸ್ಥಾನಕ್ಕೆ ಬಂದು ಹಿಂದೀ ಸೇನಿಕರನ್ನು ಸರಕಾರಕ್ಕೆ ವಿರೋಧವಾಗಿ ಹುರಿದುಂಬಿಸುವರೆ ಪ್ರಯತ್ನಿಸಿದರು ಹೀಗೆ ೧೯೧೫ನೇ ಫೆಬ್ರವರಿ ತಿಂಗಳಲ್ಲಿ ಈ ಪ್ರಯತ್ನವು ಪಂಜಾಬಿನಲ್ಲಿ ಮಾಡಲ್ಪಟ್ಟಿತು ಆದರೆ ಪಂಜಾಬಿನ ಗ್ರಾಮ ನಿವಾಸಿಗಳು ಕಠಿಣವಾಗಿ ಈ ಪಿತೂರಿ ಮಂಡಲಿಯವರನ್ನು ಎದುರಿಸಿದ್ದರಿಂದ ಹಿಂದೀ ಸೇನೆಯನ್ನು ಸರಕಾರಕ್ಕೆ ವಿರೋಧವಾಗಿ ಎಬ್ಬಿಸುವ ಪ್ರಯತ್ನವು ಅವರಿಂದ ಸಾಧ್ಯವಾಗಲಿಲ್ಲ ಬಂಗಾಳದಲ್ಲಿ ಕೆಲವು ಬಲಾತ್ಕಾರದ ಕೃತ್ಯಗಳು ನಡೆದರೂ ಬಂಗಾಳಿಯ ಪ್ರಮುಖ ಜನರು ಈ ಕೃತ್ಯವನ್ನು ಖಂಡಿಸಿದರು. ಈ ವಿಷಯಗಳನ್ನು ಬಿಟ್ಟರೆ ಹಿಂದೂಸ್ಥಾನದ ಸ್ಥಿತಿಯು ಪೂರ್ಣ ತೃಪ್ತಿಕರವಾಗಿಯೇ ಇದೆ. ಹಿಂದೂಸ್ಥಾನದ ವಿಷಯ ಸರಕಾರದವರು ಚಿಂತೆಪಡುವ ಅವಶ್ಯವಿಲ್ಲ. ಅದು ಸಾಮ್ರಾಜ್ಯಕ್ಕೆ ವಿಶೇಷವಾದ ಸಹಾಯವನ್ನು ಮಾಡಿದೆ ಫ್ಲಾನ್ಡರ್ಸಿನಲ್ಲಿ ನಡೆದ ಭೀಕರವಾದ ಕದನಗಳ ಕಾಲ, ಜರ್ಮನರು ಕೆಲೈಗೆ ಮುಂದರಿಯಲು ಸಾಹಸಪಡುತ್ತಿದ್ದ ಆ ಆಪತ್ತಿನ ಸಮಯ ಹಿಂದೂಸ್ಥಾನವು ತನ್ನ ಸೇನೆಯನ್ನು ಕಳುಹಿಸಿಕೊಟ್ಟಿತು ಅದಲ್ಲದೆ ಹಿಂದೂಸ್ಥಾನವು ಈಜಿಪ್ತ, ಗೆಲಿಪೊಲಿ, ಪೂರ್ವ ಆಫ್ರಿಕ, ಮೆಸಪೊಟಾಮಿಯ, ಪರ್ಶಿಯಾ, ಮತ್ತು ಚೀನ ದೇಶಗಳಿಗೂ ಸೇನೆಯನ್ನು ಬ್ರಿಟಿಷ ಸರಕಾರದ ಸಹಾಯವಾಗಿ ಕಳುಹಿಸಿಕೊಟ್ಟದೆ ಹಿಂದೂಸ್ಥಾನದ ೨೧ ರೆಜಿಮೆಂಟ್ ಅಶ್ವಪಡೆಯೂ ೮೭ ಬೆಟಲಿಯನ್ ಕಾಲಾಳು ಸೇನಿಕರೂ ರಣರಂಗಗಳಲ್ಲಿರುವರಲ್ಲದೆ ಇದಕ್ಕೆ ಕೂಡಿಸಿ ಹಿಂದೂಸ್ಥಾನದ ದೇಶೀಯ ರಾಜ್ಯಗಳ ಎಷ್ಟೋ ಸೇನೆಗಳು ಹಿಂದೂಸ್ಥಾನದ ಗಡಿಗೆ ಬಹಳ ದೂರದಲ್ಲಿ ನಡೆಯುವ ಕದನಗಳಲ್ಲಿ ಸೇರಿಕೊಂಡು ಸಾಮ್ರಾಜ್ಯದ ಪರವಾಗಿ ಕಾದಾಡುತ್ತಿವೆ.

ದಕ್ಷಿಣ ಹಿಂದೂಸ್ಥಾನ.

ಮದ್ರಾಸಿನಲ್ಲಿರುವ ಸರಕಾರಿ ವೀವಿಂಗ್ ಕಾಲೇಜಿಯ ಪ್ರಿನ್ಸಿಪಾಲರ ಮನೆಯ ಆಳನ್ನು ಒಂದು ವಿಷಸರ್ಪವು ಕಡಿಯಿತು. ಪ್ರಿನ್ಸಿಪಾಲರು ಆ ಸುದ್ದಿಯನ್ನು ಕೇಳುತ್ತಲೇ ಸರ್ಪವು ಕಡದಿದ್ದ ಸ್ಥಳದ ಮೇಲ್ಗಡೆಯಲ್ಲಿ ಬಲವಾಗಿ ಕಟ್ಟಿ, ಕಡಿದಿದ್ದ ಸ್ಥಳದಲ್ಲಿ ಚೂರಿಯಿಂದ ಸ್ವಲ್ಪ ಕೊಯಿದು ಗಾಯಮಾಡಿ ಪೊಟಾಸಿಯಂ ಪೆರ್ಮಂಗೆನೇಟ್ ಎಂಬ ಔಷಧಿಯನ್ನು ಅಲ್ಲಿಗೆ ಹಚ್ಚಿದರು. ಬಳಿಕ ಬಾಳೇದಿಂಡಿನ ರಸವನ್ನು ಹಿಂಡಿ ಕುಡಿಸಿದರು ಅದು ಕುಡಿದನಂತರ ಸರ್ಪದಷ್ಟನು ಎಚ್ಚತ್ತುಕೊಂಡನು. ಸ್ವಲ್ಪ ಹೊತ್ತಾದ ನಂತರ ಯಜಮಾನರು ಆ ಕಡಿದಿದ್ದ ಸ್ಥಳದ ಗಾಯವನ್ನು ಚೆನ್ನಾಗಿ ತೊಳೆದು ಮರುದಿನ ಕಟ್ಟು ಬಿಚ್ಚಿದರು. ಈಗ ಆ ಆಳು ಸೌಖ್ಯವಿದ್ದಾನೆ

ಮೈಸೂರು ಅರ್ಥಸಾಧಕ ಸಮಾಜದ ೬ನೇ ವರ್ಷದ ಸಮ್ಮೇಳನವು ಕಳೆದ ತಾ. ೯ರಲ್ಲು ಮೈಸೂರ ರಾಜಧಾನಿಯಲ್ಲಿ ದಿವಾನ್ ಸರ್ ವಿಶ್ವೇಶ್ವರಯ್ಯನವರ ಅಧ್ಯಕ್ಷತೆಯಲ್ಲಿ ಕೂಡಿಬಂತು. ಈ ಸಭೆಗೆ ಮೈಸೂರು ಯುವರಾಜರವರೂ ಕೌನ್ಸಿಲ್ಲರುಗಳೂ ಶಾಖಾಧಿಕಾರಿಗಳೂ ಸಮಾಜದ ಮೆಂಬರರೂ ಬಂದಿದ್ದರು. ದಿವಾನ್ ಸರ್ ವಿಶ್ವೇಶ್ವರಯ್ಯನವರು ಕಳೆದ ವರ್ಷದ ಈ ಸಂಘದ ಕಾರ್ಯಕರ್ತವ್ಯಗಳನ್ನು ಕುರಿತು ಕಾಲೋಚಿತ ಭಾಷಣಮಾಡಿದರು.

ದಕ್ಷಿಣ ಕನ್ನಡ.

P. D. LIMA.

Dental Surgeon, Mangalore.

ಇವರು ಈಗ ತಾನೇ ಸರ್ಕೀಟಿನಿಂದ ಹಿಂತೆರಳಿ ಬಂದಿರುವರು. ಅಮೇರಿಕದಿಂದ ಭಾರೀ ಕೃತಕ ದಂತಗಳನ್ನು ತರಿಸಿಕೊಂಡಿಟ್ಟಿರುವರು. ಈ ಸುಸಮಯವನ್ನು ಕಳಕೊಳ್ಳಬೇಡಿರಿ. ಮಿತವಾದ ದರದಲ್ಲಿ ಹಲ್ಲುಗಳನ್ನು ಸರಿಪಡಿಸಿಕೊಡುವರು.

ಪಿ. ಡಿ. ಲಿಮಾ.

ದಂತ ವೈದ್ಯರು, ಒಡೆಯರರ ಶಾಪಿನ ಬಳಿ,

ಮಂಗಳೂರು.

ನೋಟೀಸು.

'ವರ್ತಮಾನ ಪತ್ರಿಕೆ'ಯ ಇತಿಹಾಸವನ್ನು ನೋಡಿದರೆ, ಈ ವರ್ತಮಾನ ಪತ್ರದ ಕಲ್ಪನೆಯು ಮೊದಲಾಗಿ ಚೀನಾ ದೇಶದಲ್ಲಿ ಹುಟ್ಟಿದ್ದು ಕಂಡುಬರುತ್ತದೆ. ಇದರ ಜನ್ಮವು ಚೀನಾ ದೇಶದಲ್ಲಿ ಉಂಟಾದರೂ ಇದರ ಪ್ರಸಾರಣೆ, ಸುಧಾರಣೆ, ಅಭಿವೃದ್ಧಿ ಮುಂತಾದ ಸಂಗತಿಗಳು ಪಾಶ್ಚಾತ್ಯ ದೇಶದಲ್ಲಿಯೇ ಉಂಟಾದವು. ಇಂಗ್ಲಿಷರು ಇಲ್ಲಿ ಬರುವಾಗ ತಂತಿ, ರೈಲು, ಹೊಗೆ ಹಡಗ ಮೊದಲಾದ ಸುಧಾರಣೆಗಳೊಟ್ಟಿಗೇ ಈ 'ವರ್ತಮಾನ ಪತ್ರಿಕೆ'ಯ ಸಂಸ್ಥೆಯನ್ನೂ ಕೂಡ ತಂದರು. ವರ್ತಮಾನ ಪತ್ರಿಕೆಗಳಿಂದ ದೇಶದ ಜ್ಞಾನಾಭಿವೃದ್ಧಿಗಾಗಲಿ, ಹಿತಸಂವರ್ಧನೆಗಾಗಲಿ ಎಷ್ಟು ಸಹಾಯವುಂಟಾಗುತ್ತದೆಂಬುದನ್ನು ಪಾಶ್ಚಾತ್ಯರಿಗಾದರೂ ಹೇಳಬೇಕಾದ ಅಗತ್ಯವಿಲ್ಲ. ಕಾರಣವೇನೆಂದರೆ, ಪಾಶ್ಚಾತ್ಯರು ಪತ್ರಿಕೆಗಳ ಮುಖಾಂತರ ತಮ್ಮ ದೇಶದಲ್ಲಿ ಸಾತ್ವಿಕ ಮತ್ತು ರಾಜಸ ಚಳವಳಿಗಳಿಂದ ಲೋಕಮತದಲ್ಲಿ ಸಜೀವತ್ವವನ್ನು ತಂದು ಸುಖಸಾಧನಗಳನ್ನು ಬೆಳೆಸಿದ್ದಷ್ಟು ಇನ್ನಾರೂ ಬೆಳೆಸಲಿಲ್ಲವೆಂದು ಹೇಳಿದರೆ ಅದು ಅತಿಶಯೋಕ್ತಿಯಾಗಲಾರದು. 'News-paper' ಎಂಬ ಶಬ್ದವನ್ನಾಗಲಿ ಅಥವಾ 'ವೃತ್ತ ಪತ್ರಿಕೆ' ಇತ್ಯಾದಿ ಶಬ್ದಗಳನ್ನಾಗಲಿ ವ್ಯುತ್ಪತ್ತಿಯ ಮೂಲಕವಾಗಿ ವಿಂಗಡಿಸಿದರೆ 'ಸುದ್ದಿಯನ್ನು ಹಬ್ಬಿಸುವ ಪತ್ರಿಕೆಗಳು' ಇಷ್ಟೇ ಅರ್ಥವು ಬರುತ್ತದೆ. ಇದರ ಜನ್ಮಕಾಲದಲ್ಲಿ ಒಂದುವೇಳೆ ಇದು ಇಷ್ಟೇ ಕೆಲಸವನ್ನು ಮಾಡುತ್ತಿತ್ತೋ ಏನೋ? ಆದರೆ ಕಲ್ಪಕರೂ, ಸಮರ್ಥರೂ ಆದ ಪಾಶ್ಚಾತ್ಯರು ಮಾತ್ರ ಇದಕ್ಕೆ ಪ್ರೌಢ ಮತ್ತು ಉಪಯುಕ್ತವಾದ ಸ್ವರೂಪವನ್ನು ಕೊಟ್ಟರು. ಇರಲಿ, ಈ ಸಂಸ್ಥೆಯು ಆಸಿಯಾ ಖಂಡದ ಚೀನಾ ದೇಶದಲ್ಲಿ ಹುಟ್ಟಿದ್ದಾದರೂ ನಮ್ಮ ಹಿಂದೂಸ್ಥಾನದಲ್ಲಿ ಮೇಲೆ ಹೇಳಿದಂತೆ, ಇಂಗ್ಲಿಷರ ಸಂಗಡ ಎಂದರೆ ಚೀನಾದಿಂದ ಪಶ್ಚಿಮಕ್ಕೆ ಹೋಗಿ ಅಲ್ಲಿಂದ 'ದ್ರಾವಿಡಪ್ರಾಣಾಯಾಮ'ದಂತೆ ಸುತ್ತಿಕೊಂಡು ಬಂದಿರುತ್ತದೆ. ಎಂದ ಮೇಲೆ ನಮ್ಮ ಜನರಿಗೆ ಈ ಸಂಸ್ಥೆಯು ನವೀನವಾಗಿಯೇ ಇದ್ದೀತು. ಇದರಲ್ಲೇನೂ ಆಶ್ಚರ್ಯವಿಲ್ಲ. ಪಾಶ್ಚಾತ್ಯ ದೇಶದಲ್ಲಿ ಒಂದೊಂದು ಉದ್ದೇಶದಿಂದ ಒಂದೊಂದು ಪತ್ರಿಕೆಯು ಹೊರಟಿರುತ್ತದೆ; ಅಥವಾ ಪ್ರಸಂಗ ಮತ್ತು ಸಾಮರ್ಥ್ಯಾನುಸಾರವಾಗಿ ಒಂದೇ ಪತ್ರಿಕೆಯು ಹಲವು ಉದ್ದೇಶಗಳನ್ನೂ ಸಾಧಿಸುವದಾಗಿರುತ್ತದೆ. ಮತ್ತು ಸಾಧಿಸುತ್ತದೆ. ರಾಜಕೀಯ ವಿಷಯಕ್ಕಾಗಿ ಹೊರಟ ಪತ್ರವು ಧಾರ್ಮಿಕದಂತಹ ಸ್ವೋದ್ದೇಶ್ಯಭಿನ್ನವಾದ ವಿಷಯವನ್ನೂ ಸಾಮಾಜಿಕ ಪ್ರಶ್ನೆಯನ್ನೂ ಕುರಿತು ಚರ್ಚಿಸಕೂಡದು ಎಂಬ ನಿರ್ಬಂಧವು ಪಾಶ್ಚಾತ್ಯ ದೇಶದಲ್ಲಿ ಇಲ್ಲ. ಈ ತರದ ನಿರ್ಬಂಧವು ಇಲ್ಲಿಯೂ ಇಲ್ಲ. ಆದರೂ ಇಲ್ಲಿ ಪತ್ರಿಕೆಗಳಿಗೆ ಅನೇಕ ಬೇರೆ ನಿರ್ಬಂಧಗಳಿವೆ.

ಲೇಖನ ಸ್ವಾತಂತ್ರ್ಯವು ಪತ್ರದ ಜೀವನವು. ಇದು ಪಾಶ್ಚಾತ್ಯದೇಶದಲ್ಲಿ ಇರುವಷ್ಟು ಇಲ್ಲಿ ಇಲ್ಲ. ಪಾಶ್ಚಾತ್ಯದೇಶದ ರಾಜ್ಯಕಾರಭಾರಗಳೆಲ್ಲ ಉದಾರತತ್ವವನ್ನಾಶ್ರಯಿಸಿಕೊಂಡು ನಡೆಯುತ್ತಿದ್ದ ಕಾರಣ ಪ್ರಜಾಸತ್ತಾಕ ರಾಜ್ಯಶಾಸನ, ವಾಕ್ ಸ್ವಾತಂತ್ರ್ಯ ಮುಂತಾದವುಗಳೊಡನೆಯೆ ಲೇಖಕರಿಗೆ ತಮ್ಮ ಪ್ರಾಮಾಣಿಕ ಮತಗಳನ್ನು ಲೇಖನಮೂಲಕವಾಗಿ ಪ್ರಚಾರಗೊಳಿಸಲು ಬೇಕಷ್ಟು ಇಂಬು ಅಲ್ಲಿ ದೊರಕುತ್ತದೆ. ಈಗ ರಸಿಯಾದೇಶದಂತಹ ರಾಜ್ಯಕ್ರಮವು ಒಂದುವೇಳೆ ಈ ನಿಯಮಕ್ಕೆ ಅಪವಾದವಾಗಿದ್ದೀತು. ಮತ್ತು ಈ ಕಾರಣದಿಂದಲೇ ಸುಧಾರಿಸಿದ ದೇಶಗಳಲ್ಲಿ ರಸಿಯಾ ದೇಶದ ಗಣನೆಯು ಆಗುವುದಿಲ್ಲ. ಇಂತಹ ಒಂದೆರಡು ದೇಶಗಳನ್ನು ಬಿಟ್ಟರೆ ಮೇಲೆ ನಾವು ಅಭಿಪ್ರಾಯಪಟ್ಟಂತೆ ಯುರೋಪ, ಅಮೇರಿಕಾ ಈ ಖಂಡಗಳಲ್ಲಿ ಲೇಖನ ಸ್ವಾತಂತ್ರ್ಯವು ಶ್ಲಾಘ್ಯವಾದ ಮಾದರಿಯಲ್ಲಿಯೇ ಇದೆ. ಆದರೆ ನಮ್ಮ ಸರಕಾರವು ಯುರೋಪಖಂಡದೊಳಗಿನ ಸುಧಾರಿಸಿದ ಮತ್ತು ಉದಾರ ಹಾಗು ಉದಾತ್ತ ತತ್ವಗಳನ್ನು ಪ್ರೀತಿಸುವ ರಾಷ್ಟ್ರಗಳಲ್ಲಿ ಪ್ರಮುಖವಾದ್ದಾದರೂ ಇಲ್ಲಿಯ ಲೇಖನ ಮತ್ತು ವಾಕ್ ಸ್ವಾತಂತ್ರ್ಯಗಳನ್ನು ಕಾಯಿದೆಗಳ ಮೂಲಕ ಆದಷ್ಟು ಸಂಕೋಚಪಡಿಸಿದೆ. ಈ ಪರಿಸ್ಥಿತಿಯಲ್ಲಿ ಪತ್ರಕಾರರಿಗೆ ತಮ್ಮ ಪ್ರಾಮಾಣಿಕ ಮತಗಳನ್ನು ಹೊರಪಡಿಸುವುದು ಪ್ರಯಾಸವಾಗುತ್ತದೆ. ಈ ಸಂಗತಿಯಂತು ಇರಲಿ.

ಇನ್ನೊಂದು ಕಷ್ಟವೇನೆಂದರೆ, ಇಲ್ಲಿ ದೇಶಿಪತ್ರಕಾರರಿಗೆ ಸರಕಾರವು ಸ್ವಲ್ಪ ಉದಾರಬುದ್ಧಿಯಿಂದ ಕೊಟ್ಟ ಸ್ವಾತಂತ್ರ್ಯವನ್ನು ಉಪಯೋಗಿಸಿಕೊಳ್ಳುವುದೂ ಸಹ ಕೆಲಕೆಲವು ಅಧಿಕಾರಿಗಳ—ಲೇಖನ ಸ್ವಾತಂತ್ರ್ಯಕ್ಕೆ ಸಂಬಂಧಪಟ್ಟ ಕಾಯಿದೆಗಳ ಅಜ್ಞಾನದಿಂದಲೂ, ಅವರು ತಮ್ಮಲ್ಲಿ ಮಿತಿಮೀರಿ ಆರೋಪಿಸಿಕೊಳ್ಳುವ ಮಹತ್ತ್ವದಿಂದಲೂ, ಸಾರ್ವಜನಿಕ ಹಿತವು ಯಾವುದು ಎಂಬುದನ್ನು ಸರಿಯಾಗಿ ತಿಳಿಯುವಷ್ಟು ಜನಸಾಮಾನ್ಯಕ್ಕೆ ಶಿಕ್ಷಣವಿಲ್ಲಾದುದರಿಂದಲೂ ಅಸಾಧ್ಯವಾಗುತ್ತದೆ. ಈ ಕಷ್ಟಗಳನ್ನು ತಪ್ಪಿಸಿಕೊಳ್ಳಲು ಪತ್ರಕಾರರು 'ರಾಜಕೀಯ ವಿಷಯವನ್ನೇ ಬಿಟ್ಟು ಮುನಿಸಿಪಾಲಿಟಿಯಂತಹ ಸಾಮಾನ್ಯ ವಿಷಯವನ್ನು ತೆಕ್ಕೊಂಡರೂ ಅಲ್ಲಿಯೂ ಅವರಿಗೆ ಕೆಲಕೆಲವು ವೇತಾಲದರ್ಶನವೂ ಆಗಿಯೇ ಆಗುತ್ತದೆ! ಇಂತಿಂತಹ ಪತ್ರಕಾರರು ಹೀಗೆ ಹೀಗೆ ಬರೆದುದು ಯಾಕೆ? ಇವರಿಗೆ ಯಾರು ಕೇಳುವವರಿಲ್ಲವೇ? ಎಂದು ಅತ್ತೆಯು ಹೊಸ ಸೊಸೆಯ ಮೇಲೆ ಕ್ರೋಧವಿಶ್ರವಾದ 'ದರಬಾರ' ತೋರಿಸುವಂತೆ ಕಂಡ ಕಂಡವರು ಪತ್ರಕಾರರ ಮೇಲೆ ಶಸ್ತ್ರಗಳನ್ನೆತ್ತುವರು. ಆಗ ಅದನ್ನು ಬಿಟ್ಟು ಧಾರ್ಮಿಕ, ಸಾಮಾಜಿಕ ಮೊದಲಾದ ವಿಷಯಗಳನ್ನು ಬರೆಯಲು ಉಪಕ್ರಮಿಸಿದರೆ ಆ ವಿಷಯಗಳಲ್ಲಿಯು ಆಯಾ ಪಕ್ಷದ ಧುರೀಣರಿಗೆ ಅದು ಅಸಹ್ಯವಾಗಿ ಅವರ ರೋಷಕ್ಕೆ ನಮ್ಮಂತಹ ಪತ್ರಿಕಾಕರ್ತರು ಪಾತ್ರರಾಗಬೇಕಾಗುತ್ತದೆ. ಸಾರಾಂಶ, ರಾಜಕೀಯ ವಿಷಯವು ಕೂಡದು, ಮುನಿಸಿಪಾಲಿಟಿಯ ಸಂಗತಿಯು ಬೇಡ, ಧಾರ್ಮಿಕ ಸಾಮಾಜಿಕ ಚರ್ಚೆಗಳನ್ನು ಬಿಡತಕ್ಕದ್ದು. ಹೀಗಾದ ಮೇಲೆ ವರ್ತಮಾನ ಪತ್ರಕಾರರು ಯಾವುದನ್ನು ಬರೆಯಬೇಕು? ದೇಶದೇಶಗಳಲ್ಲಿ ಸಂಭವಿಸಿದ ಶುಭಾಶುಭ ವರ್ತಮಾನಗಳನ್ನು ಪ್ರಕಟಿಸಿ ತಮ್ಮ ಹೆಸರನ್ನು ಅನ್ವರ್ಥಗೊಳಿಸುವುದೇ ಯುಕ್ತವೋ? ಇದರಲ್ಲಿ ನಿಜವಾದ ಕರ್ತವ್ಯಪವಿತ್ರತೆಯು ಇಲ್ಲ. ಒಂದೇ ಶಬ್ದದಿಂದ ಈಗಿನ ದೇಶಿಪತ್ರಕಾರರ ಸ್ಥಿತಿಯನ್ನು ಹೇಳುವುದಾದರೆ ಅವರ ಕರ್ತವ್ಯಕ್ಕೆ 'ಅಸಿಧಾರಾ'ವ್ರತದ ಉಪಮೆಯನ್ನು ಕೊಡಬಹುದು.

ಆದರೂ ಒಂದು ನಂಬಿಕೆಯು ಪತ್ರಕಾರರಾದ ನಮ್ಮಲ್ಲಿ ಇರಬೇಕಾಗಿದೆ. ಪತ್ರಕಾರರಾದ ನಾವು ರಾಜಕೀಯ, ಸಾಮಾಜಿಕ, ಧಾರ್ಮಿಕ, ಔದ್ಯೋಗಿಕ, ಶೈಕ್ಷಣಿಕ ಮೊದಲಾದ ಯಾವ ವಿಷಯವನ್ನೇ ಟೀಕಿಸಿದರೂ ಆ ಟೀಕೆಯಲ್ಲಿ ನಮ್ಮ ಶುದ್ಧ ಭಾವನೆಯೂ, ಸಾರ್ವಜನಿಕ ಹಿತಬುದ್ಧಿಯೂ, ಸಾತ್ವಿಕ ಉಪಾಯವೂ ಪ್ರತಿಬಿಂಬಿತವಾಗಿರಬೇಕು; ಸ್ವಾರ್ಥದ ಕಣಗಳು ಅಸ್ಪೃಶ್ಯರಂತೆ ದೂರದಲ್ಲಿಯೇ ಇರಬೇಕು. (ಇಲ್ಲಿ 'ಅಸ್ಪೃಶ್ಯರೆಂದರೆ ಹೊಲೆಯರು ಪಂಚಮರೆಂದು ತಿಳಿಯಬಾರದು.) ಈ ತರದ ಸದ್ಭಾವನೆಯಿಂದ ನಾವು ನಮ್ಮ ಟೀಕೆಯ ಕರ್ತವ್ಯವನ್ನು ಮಾಡುತ್ತಿರುವಾಗ ಈಶ್ವರನ ಸಹಾಯವೂ ಪ್ರಬುದ್ಧಲೋಕಮತದ ಬೆಂಬಲವೂ ನಮ್ಮ ಕಡೆಗೇ ಇರುವವು. ಇದೇ ನಮ್ಮ ದೃಢವಾದ ನಂಬಿಕೆಯು.

ಇರಲಿ; ಈ ಹೊತ್ತು ಈ ಪ್ರಸ್ತಾಪಗಳನ್ನು ನಡಿಸಲು ಕಾರಣವೇನೆಂದರೆ, ನಮ್ಮ ಪತ್ರಿಕೆಯಲ್ಲಿ ಯಾವುದಾದರೊಂದು ಸಾರ್ವಜನಿಕ ಪ್ರಶ್ನೆಯನ್ನು ಕುರಿತು ಆಗಾಗ್ಗೆ ಹೆಚ್ಚಿನ ದಾಕ್ಷಿಣ್ಯವಿಡದೆ ನಮ್ಮ ಅಭಿಪ್ರಾಯವನ್ನು ಪ್ರಕಟಿಸುತ್ತಲಿದ್ದೇವೆ. ಇದು ಕೆಲವರಿಗೆ ಇಷ್ಟತೋರಲಿಕ್ಕಿಲ್ಲೆಂದು, ಈ ವಾರದಲ್ಲಿ ನಮ್ಮ ಕಡೆಗೆ ಬಂದ ನಾಲ್ಕೈದು ಪತ್ರಗಳಿಂದ ಕಂಡುಬರುತ್ತದೆ. ಪ್ರತಿಯೊಂದು ಸಾರ್ವಜನಿಕ ಪ್ರಶ್ನೆಯು ಲೋಕಹಿತದ ದೃಷ್ಟಿಯಿಂದಲೇ ನಾವು ಚರ್ಚಿಸುತ್ತೇವೆ, ಟೀಕಿಸುತ್ತೇವೆ, ಕೊಂಚ ಕಠೋರವಾಗಿಯೂ ಬರೆಯುತ್ತೇವೆ. ಆದರೂ ನಮ್ಮ ಉದ್ದೇಶವು ಲೋಕಹಿತವಲ್ಲದೆ ಬೇರೆ ಯಾವುದೂ ಅಲ್ಲ. ಈ ನಮ್ಮ ಹೃದಯಾವಿಷ್ಕರಣದಿಂದ ಬೇರೆ ಬೇರೆ ಸದ್ಗೃಹಸ್ಥರು ಸದ್ಯ ಸಮಾಧಾನ ಪಟ್ಟಾರೆಂದು ನಾವು ಆಶಿಸುತ್ತೇವೆ.

ಸಾರ್ವಜನಿಕ ಮುಖಂಡರು ಯಾರು?

(೨)

ಪ್ರಕೃತಕಾಲದ ಮುಖಂಡರು ಯಾರು ಈ ಪ್ರಶ್ನೆಯನ್ನು ಚರ್ಚಿಸುವುದಾದರೆ ಮೊದಲು ಈಗಿನ ಕಾಲದ ನಮ್ಮ ರಾಜಕೀಯ, ಸಾಮಾಜಿಕ ಮತ್ತು ಔದ್ಯೋಗಿಕ ಕೆಂಬಹುನಾ ಸಾಂಪತ್ತಿಕ ಪರಿಸ್ಥಿತಿಯು ಯಾವ ತರದ್ದಿದೆ ಎಂಬುದನ್ನು ಒಂದೊಂದೇ ಮಾತಿನಲ್ಲಿ ನಿರ್ಣಯರೂಪದಿಂದ ನಿರ್ಧರಿಸಿಕೊಳ್ಳುವುದು ಒಳ್ಳೇದು. ನಮ್ಮ ದೇಶದ ರಾಜಕೀಯ ಪರಿಸ್ಥಿತಿಯಲ್ಲಿ ಹಿಂದೀ ಜನರಿಗೆ ಇನ್ನೂ ಅನುಕೂಲವಾಗುವಂತೆ ಅನೇಕ ಸುಧಾರಣೆಗಳು ಆಗಬೇಕಾಗಿವೆ. ಸಾಮಾಜಿಕ ಸ್ಥಿತಿಯು ನಿಕೃಷ್ಟವಾಗಿದೆ. ಮತ್ತು ಸಾಂಪತ್ತಿಕ ರಂಗಭೂಮಿಯಂತೂ ರೈಲಗಾಡಿಯು ಮುಂದಿನ ಸ್ಟೇಶನಿಗೆ ಹೋಟು ಹೋದನಂತರ ಹಿಂದಿನದು ಹೇಗೆ ವ್ಯತ್ಯಗೃಹದಂತೆ ನಿಶ್ಯಬ್ದವಾಗಿರುವುದೋ ಅದೇ ಸ್ಥಿತಿಯಲ್ಲಿ ಇದೆ. ಎಂದರೆ ಈ ಮೂರೂ ವಿಷಯದ ತಾರತಮ್ಯವನ್ನು ನೋಡುವವರಿಗೆ ಔದ್ಯೋಗಿಕ ಸ್ಥಿತಿಯು ಅತಿ ಹೀನವಾಗಿದ್ದು ಅದರ ಯೋಗಕ್ಷೇಮವನ್ನು ಕೈಕೊಳ್ಳುವವರು ನಮ್ಮಲ್ಲಿ ಯಾರೂ ಇಲ್ಲೆಂತ ಕಂಡು ಬಂದೀತು.

ತನ್ನ ಮನೆಯ ಆದಾಯವೆಷ್ಟು, ವೆಚ್ಚವೆಷ್ಟು ಹೆಂಗಸರು ಮಕ್ಕಳಿಗೆ ಯಾವ ಯಾವ ಆಪತ್ತು ಇದೆ. ಶ್ರಮವಿಭಾಗದ ತತ್ವಕ್ಕನುಸಾರವಾಗಿ ಯಾರ ಯಾರಿಗೆ ಯಾವ ಯಾವ ಕೆಲಸ ಕೊಡಬೇಕಾದುದು ಇವೇ ಮೊದಲಾದ ಸಂಗತಿಗಳನ್ನು ಕುರಿತು ಆ ಮನೆಯ ಯಜಮಾನನು ವಿಚಾರಿಸಿಕೊಂಡು ತಕ್ಕ ಏರ್ಪಾಟುಗಳನ್ನು ಮಾಡುವುದು ಹೇಗೆ ವಿಹಿತವಾಗಿದೆಯೋ ಹಾಗೆಯೇ ತನ್ನ ಮಾತೃ ದೇಶವೆಂಬ ಮನೆಯಲ್ಲಿಯ ನ್ಯೂನತೆಗಳನ್ನು ಹೋಗಲಾಡಿಸುವುದು ಆ ದೇಶ ಮುಖಂಡನ ಕೆಲಸವಾಗಿದೆ. ಮುಖಂಡನೆಂದರೆ ನ್ಯಾಯವಿಧಾಯಕ ಸಭೆಯಲ್ಲಿ ಪ್ರವೇಶವನ್ನು ಪಡಕೊಳ್ಳುವವನು, ಗವರ್ನರ ಅಥವಾ ಬೇರೆ ಬೇರೆ ದೊಡ್ಡ ದೊಡ್ಡ ಅಧಿಕಾರಿಗಳ ಬಂಗಲೆಗಳಲ್ಲಿ ಹೋಗಿ ಬಂದು ಅವರೊಡನೆ ಹಸ್ತಾಂದೋಲನ ಮಾಡುವವನು ಅಥವಾ ಸಭೆ, ಕೂಟ ಮುಂತಾದವುಗಳಲ್ಲಿ ವಕ್ತೃತ್ವವನ್ನು ಮಾಡುವವನು ಇಲ್ಲವೇ ಯೇನಕೇನಪ್ರಕಾರೇಣ ಪ್ರಸಿದ್ಧನಾದವನು ಎಂಬ ಅರ್ಥವು ಈಗ ಪ್ರಚಾರದಲ್ಲಿ ಬಂದಿದೆ. ಮುಖಂಡ ಶಬ್ದದ ವ್ಯಾಖ್ಯೆಯನ್ನು ಇಷ್ಟೇ ಮಾಡಿದರೆ ಅದರ ಸಮನ್ವಯವು ಅನೇಕ ವ್ಯಕ್ತಿಗಳಲ್ಲಿ ಆಗುವ ಹಾಗಿದ್ದರೂ ಈ ತರದ ಮುಖಂಡರಿಂದ ಆದ ಪ್ರಯೋಜನವೇನೆಂಬುದನ್ನು ನೋಡುವಾಗ ಮಾತ್ರ ನೈರಾಶ್ಯವಲ್ಲದೆ ಬೇರೆ ಏನೂ ಲಭಿಸಲಾಗದು. ಹೀಗಿರುವುದರಿಂದ ಇಂತಹರಿಗೆ ಮುಖಂಡರೆಂಬ ಹೆಸರನ್ನು ಕೊಡುವುದು ಆ ಹೆಸರಿಗೆ ಅವಮಾನಕರವೇ ಸರಿ.

ಎಂದ ಮೇಲೆ ಮುಖಂಡರೆಂದರೆ ಯಾರು ಎಂಬ ಪ್ರಶ್ನೆಯು ಪುನಃ ಬರುತ್ತದೆ. ಮೇಲೆ ಹೇಳಿದ ಮನೆಯ ದೃಷ್ಟಾಂತವನ್ನೇ ತಿರುಗಿ ಆಲೋಚಿಸಿದರೆ ಯಜಮಾನನು ಕುಟುಂಬದ ಯೋಗಕ್ಷೇಮಕ್ಕಾಗಿ ಸಾಧ್ಯವಿದ್ದ ಎಲ್ಲ ಉಪಾಯಗಳನ್ನೂ ನಡಿಸುತ್ತಾನೆ, ಅವರೊಡನೆಯೇ ದುಃಖಗಳನ್ನೂ ಸಮಭಾಗಿಯಾಗಿ ಅನುಭವಿಸುತ್ತಾನೆ. ಈ ವಿಷಯದಲ್ಲಿ ಸರಿಯಾಗಿ ನೋಡಿದರೆ ಕೈಕೆಳಗಿನವರಿಗಿಂತ ಯಜಮಾನನಿಗೇ ಹೆಚ್ಚಿನ ದುಃಖಗಳನ್ನು ಅನುಭವಿಸಬೇಕಾಗುತ್ತದೆ. ಹಾಗೆಯೇ ಒಬ್ಬ ಮುಖಂಡನು ದೇಶದ ಯೋಗಕ್ಷೇಮಕ್ಕಾಗಿ ಸಾಧ್ಯವಿದ್ದ ಎಲ್ಲ ಸಾಧನಗಳನ್ನು ಆಮರಣಾಂತ ಏಕನಿಷ್ಠೆಯಿಂದ ನಡಿಸುವವನಾಗಬೇಕು; ದೇಶಬಾಂಧವರು ಅನುಭವಿಸುತ್ತಿರುವ ಕಷ್ಟ ಸಂಕಟಗಳನ್ನು ತಾನೂ ಅವರೊಡನೆ ಸೇವಿಸುವವನಾಗಬೇಕು, ಎಂದರೆ ದೇಶಬಾಂಧವರು ದರಿದ್ರರಿದ್ದಲ್ಲಿ ತನ್ನ ಹತ್ತರ ಇರುವ ಅಲ್ಪ ಸ್ವಲ್ಪವನ್ನು ಬೇರೆಯವರ ಕೈವಶಮಾಡಿ ಅಥವಾ ಬಿಟ್ಟುಬಿಟ್ಟು ತಾನು "ಫಕೀರ"ನಾಗಿ ತಿರುಗಾಡುವವನೇ ಮುಖಂಡನು. ಹೀಗರ್ಥವಲ್ಲ. ಮೇಲಿನ ನಮ್ಮ ಮಾತಿನ ಅರ್ಥವನ್ನು ಭಗವಂತನ ಮಾತಿನಿಂದ ಸ್ಪಷ್ಟಪಡಿಸಬಹುದು. ಗೀತೆಯಲ್ಲಿ ಭಗವಂತನು ಹೇಳುವುದೇನೆಂದರೆ, "ಸುಖದುಃಖೇ ಸಮೇ ಕೃತ್ವಾ ಲಾಭಾಲಾಭೌ ಜಯಾಜಯೌ........." ಸುಖ ದುಃಖ, ಲಾಭಹಾನಿ ಜಯ ಅಪಜಯ ಈ ದ್ವಂದ್ವಗಳನ್ನು ಏಕಪ್ರಕಾರವಾಗಿಯೇ ನೆನಸು. ಒಂದರಿಂದ ಹರ್ಷವನ್ನೂ, ಇನ್ನೊಂದರಿಂದ ವಿಷಾದವನ್ನೂ ಪಡಬೇಡ. ಭಗವಂತನ ಈ ಮಾತಿನಂತೆ ನಡಕೊಳ್ಳುವವನೇ ನಿಜವಾದ ಮುಖಂಡನು. ರಾಜಕೀಯ ಅವನತಿಯನ್ನು ಹೋಗಲಾಡಿಸಲಿಕ್ಕಾಗಲಿ, ಸಾಮಾಜಿಕ ಸುಸ್ಥಿತಿಯನ್ನು ಸಂಪಾದಿಸಲಿಕ್ಕಾಗಲಿ ಅಥವಾ ಸಾಂಪತ್ತಿಕ ಪ್ರಗತಿಯನ್ನು ವೃದ್ಧಿಗೊಳಿಸಲಿಕ್ಕಾಗಲಿ ಸುಖದುಃಖ, ಮಾನಾಪಮಾನ, ಜಯಾಪಜಯ ಇವುಗಳನ್ನು ಲೆಕ್ಕಿಸದೆ 'ಇದು ತನ್ನ ಕರ್ತವ್ಯ'ವೆಂದು ತಿಳಿದು ಕೆಲಸ ಮಾಡುವ ಧೀರ ಪುರುಷನೇ ಮುಖಂಡನು. ಇದೇ ಮುಖಂಡತನದ ಮುಖ್ಯ ಲಕ್ಷಣವು. ಈ ಲಕ್ಷಣವು ಈ ಲೇಖಮಾಲೆಯ ಮೊದಲನೇ ಲೇಖದಲ್ಲಿ ತೋರಿಸಿದ ಮುಖಂಡರ ಎರಡೂ ವಿಧಗಳಿಗೆ ಸಾಮಾನ್ಯವಾಗಿ ಅನ್ವಯಿಸುತ್ತದೆ. ಈ ಲಕ್ಷಣವನ್ನಿಟ್ಟುಕೊಂಡು ಸಾರ್ವಜನಿಕ ಕೆಲಸಗಳಲ್ಲಿ ತಮ್ಮ ಆಯುಷ್ಯವನ್ನು ವೆಚ್ಚಮಾಡುವವರು ಯಾರು ಎಂಬುದನ್ನು ನಿರ್ಣಯಿಸುವುದು ಬಹು ಸುಲಭವಾಗಿದೆ. ಇಂತಿಂತಹ ಬಾನರ್ಜಿಗಳು, ರಾಯರು, ಅಥವಾ ನಾಯರ್‌ಗಳು ಮುಖಂಡರು ಎಂದು ನಾಮನಿರ್ದೇಶ ಪೂರ್ವಕವಾಗಿ ಅವರನ್ನು ತೋರಿಸುವುದು ಉಚಿತವಲ್ಲ ಮತ್ತು ನಮ್ಮ ಉದ್ದೇಶವೂ ಅಲ್ಲ.

ಆದರೆ ಒಂದು ಸಂಗತಿಯನ್ನು ವಿವರಿಸಿ ನಮಗೆ ಈ ವಿಷಯವನ್ನು ಮುಗಿಸುವುದು ಅಗತ್ಯ ತೋರುತ್ತದೆ. ಅದು ಯಾವುದೆಂದರೆ, ಶುದ್ಧವಾದ ದೇಶಭಕ್ತಿಯ ಜ್ಯೋತಿಯು ಯಾರ ಹೃದಯದಲ್ಲಿ ಪ್ರಜ್ವಲಿಸುತ್ತಿರುವುದೋ ಅವರ ಮಾರ್ಗಗಳು ಈಶ್ವರ ಪ್ರೇರಿತವಾಗಿರುವವು. ಅಲ್ಲಿ ಸ್ವಾರ್ಥದ ಯಜ್ಞವು ನಡೆದಿರುವುದು. ಲೌಕಿಕ ಸಂಕಟಗಳು ಒಮ್ಮೊಮ್ಮೆ ತಲೆದೋರಿದರೂ ಅವು ತಮ್ಮಷ್ಟಕ್ಕೇ ವಿಲೀನವಾಗಿ ಹೋಗುವವು. "ನ್ಯಾಯ್ಯಾತ್ ಪಥಃ ಪ್ರವಿಚಲಂತಿ ಪದಂ ನ ಧೀರಾಃ" ಎಂದು ಭವಭೂತಿಯು ಹೇಳುವಂತೆ ಆ ಧೀರರು ನ್ಯಾಯವಾದ ಮಾರ್ಗವನ್ನು ಎಂದೂ ತ್ಯಜಿಸರು. ಸಂಸ್ಕೃತದಲ್ಲಿ ಸಿದ್ಧಾಂತ ಕೌಮುದಿಯೆಂಬ ವ್ಯಾಕರಣ ಗ್ರಂಥವನ್ನು ಓದುವಾಗ ಎಷ್ಟೋ ವಿದ್ಯಾರ್ಥಿಗಳು 'ಸುಧ್ಯು ಪಾಸ್ಯ' ಪ್ರಯೋಗದಲ್ಲಿ, ಕೆಲವರು ಕಾರಕದಲ್ಲಿ, ಕೆಲವರು ತದ್ಧಿತದಲ್ಲಿ, ಇನ್ನೂ ಕೆಲವರು ಆಯಜ್‌ಲು ಎಂತ ಪ್ರಯೋಗದಲ್ಲಿ ಆ ಗ್ರಂಥವನ್ನೇ ಕಲಿಯದೆ ಬಿಟ್ಟುಬಿಡುವರು. ಹಾಗೆಯೇ ಮುಖಂಡರೆಂಬ ಹೆಸರನ್ನು ಧರಿಸಿದವರು ಒಂದೆರಡು ಸಂಕಟಗಳು ಬರುತ್ತಲೆ, ಇನ್ನ ಕೆಲವರು ಸಂಕಟದ ಹೆಸರನ್ನು ಕೇಳುತ್ತಲೆ ಈ ಮಾರ್ಗದಿಂದ ಅಗಲುವರು. ಆದರೆ ಮೇಲೆ ಹೇಳಿದಂತೆ ದೇಶಭಕ್ತಿಯ ಜ್ಯೋತಿಯುಳ್ಳವರು ಈ ಸಂಕಟಗಳನ್ನೆಲ್ಲ ಸಹಿಸಿ ಇನ್ನೂ ಧೈರ್ಯಶಾಲಿಗಳಾಗುವರು. ಇವರೇ ಸಾರ್ವಜನಿಕ ಮುಖಂಡರು.

ಜಸ್ಟಿಸ್ ಉಡ್ರೋಫ್ — ಇವರ ಹಿಂದೀ ವಿದ್ಯಾರ್ಥಿಗಳಿಗೆ ಉಪದೇಶವು.

ಇದೇ ಜೂನ ತಿಂಗಳಿನ ತಾರೀಕು ೩ರಲ್ಲು ಕಲಕತ್ತಾ ಪಟ್ಟಣದೊಳಗಿನ "ಫ್ರೆಂಡ್ಸ್ ಸರ್ವೀಸ್ ಲೀಗ್" ಕ್ಲಬ್ ಎಂಬ ಸಂಸ್ಥೆಯ ವಾರ್ಷಿಕ ಸಮ್ಮೇಳನೆಯ ಪ್ರಸಂಗದಲ್ಲಿ ಅಧ್ಯಕ್ಷಸ್ಥಾನವನ್ನು ವಹಿಸಿದ ಕಲಕತ್ತಾ ಹೈಕೋರ್ಟಿನ ನ್ಯಾಯ ಮೂರ್ತಿಗಳಾದ ಉಡ್ರಫ್ ಎಂಬುವವರು ಹಿಂದೀ ವಿದ್ಯಾರ್ಥಿ ವರ್ಗಕ್ಕೆ ಉದ್ದೇಶಿಸಿ ಒಂದು ಬೋಧಪ್ರದವಾದ ಭಾಷಣವನ್ನು ಕೊಟ್ಟರು. ಅದರ ಸಾರಾಂಶವೇನೆಂದರೆ:

"ಬೇರೆ ಬೇರೆ ಕೆಲಸಗಳಿಂದ ನನಗೆ ಯಾವ ಸಭೆಗೂ ಬರಲು ಸಾಧ್ಯವಾಗುವುದಿಲ್ಲ; ಆದರೆ ವಿದ್ಯಾರ್ಥಿಗಳ ಸಮಾಗಮದಲ್ಲಿ ನನಗೆ ನಿಜವಾದ ಸಮಾಧಾನವುಂಟಾಗುವುದರಿಂದಲೂ, ಇತ್ತಿತ್ತ ಕೆಲವರು ವಿದ್ಯಾರ್ಥಿಗಳ ಮೇಲೆ ವೃಥಾ ಟೀಕೆಯನ್ನು ಮಾಡುತ್ತಿರುವುದರಿಂದಲೂ ಈ ಸಭೆಗೆ ನಾನು ಅಗತ್ಯವಾಗಿ ಬಂದಿರುವೆನು. ಹುಡುಗರ ಬುದ್ಧಿಯು ಯಾವಾಗಲೂ "ಬಾಲಬುದ್ಧಿ"ಯೇ ಎಂಬುದಕ್ಕೆ ಆಧಾರವಿಲ್ಲ. ಆದರೂ ಹುಡುಗರಲ್ಲಿರುವ ಎರಡು ಗುಣಗಳು ನನಗೆ ಹೆಚ್ಚು ಒಪ್ಪುತ್ತವೆ, ಅವು ಯಾವುವೆಂದರೆ, ಅವರು ಒಂದು ಕೆಲಸವನ್ನು ಮನಃಪೂರ್ವಕವಾಗಿ ಮಾಡುವುದು ಎಂದರೆ ಅವರ ಮನಃಪೂರ್ವಕತೆ ಮತ್ತು ಆಶಾವಾದಿತ್ವ. 'ಈಗ ಹಿಂದುಸ್ಥಾನವು ಮೃತಪ್ರಾಯವಾಗಿದೆ'ಯೆಂದು ಒಬ್ಬ ಗೃಹಸ್ಥರು ನನ್ನ ಹತ್ತರ ಹೇಳಿದಾಗ "ಇಲ್ಲಿಯ ವಿದ್ಯಾರ್ಥಿಗಳಲ್ಲಿ ಕೂಡ ಸಜೀವತ್ವವು ಹೋಯಿತೆ?" ಎಂದು ಅವರಿಗೆ ನಾನು ಕೇಳಿದೆನು. ಇದಕ್ಕೆ ಉತ್ತರವಾಗಿ ಅವರು "ಅವರಲ್ಲಿ ಮಾತ್ರ ಸಜೀವತ್ವವು ಇದೆ. ಮತ್ತು ಇದೇ ಒಂದು ಆಶೆಯ ಅಂಕುರವು." ಎಂದು ಹೇಳಿದರು. ಆದರೆ ನಾನು ಹೇಳುವುದೇನೆಂದರೆ, ಇದು ಬರೆ ಆಶೆಯ ಅಂಕುರವೆಂದು ಯಾಕೆ ತಿಳಿಯಬೇಕು? ನನ್ನ ಆಶೆಯಂತು ಸಂಪೂರ್ಣವಾಗಿ ವಿದ್ಯಾರ್ಥಿವರ್ಗದಲ್ಲಿಯೇ ಇದೆ. ಜಗತ್ತಿನೊಳಗಿನ ಯಾವ ವಸ್ತುವಾದರೂ ಪೂರ್ಣವಾಗಿ ನಿರ್ದೋಷವಾದ್ದಾಗಲಿ ಅಥವಾ ನಿರ್ಗುಣವಾದ್ದಾಗಲಿ ಇರುವುದಿಲ್ಲ! ಆದುದರಿಂದ ಆ ವಸ್ತುವಿನ ಗುಣದೋಷಗಳನ್ನು ತಾರತಮ್ಯದಿಂದಲೇ ಪರೀಕ್ಷಿಸಿ ಅದರ ಯೋಗ್ಯತೆಯನ್ನು ನಿಶ್ಚೈಸಬೇಕಾಗಿದೆ. ವಿದ್ಯಾರ್ಥಿಗಳಲ್ಲಿ ಯಾವ ದೋಷಗಳು ಕಂಡು ಬರುವವೋ ಅವುಗಳಿಗೆ ಅವರ ಸ್ವಾಭಿಮಾನ ಮತ್ತು ಮಾನಸಸ್ವಭಾವ ಈ ಗುಣಗಳೇ ಕಾರಣಗಳು; ಈ ಗುಣಗಳಿಲ್ಲದೆ ವಿದ್ಯಾರ್ಥಿಗಳು ಸ್ವಾಭಿಮಾನಶೂನ್ಯರೂ, ಕಂಡ ಕಂಡವರಿಗೆ ತಲೆ ಬಗ್ಗಿಸುವವರೂ ಮತ್ತು ಮಂದಬುದ್ಧಿಯವರೂ ಆಗುವುದಕ್ಕಿಂತ ಮೇಲಿನ ಗುಣಗಳಿಂದ ಅವರು ಉಚ್ಛೃಂಖಲರಾದರೂ

ಬಾಧಕವಿಲ್ಲ! ಹಿಂದೀ ವಿದ್ಯಾರ್ಥಿಗಳಲ್ಲಿ ನವೀನ ಸ್ಫೂರ್ತಿ ಮತ್ತು ಸ್ವಾತಂತ್ರ್ಯ ಈ ಗುಣಗಳ ಪರಿಣಾಮವುಂಟಾದುದು ಕಂಡು ಬರುತ್ತದೆ. ಇದು ನಿಜವಾಗಿ ಅಭಿನಂದನೀಯವೇ ಸರಿ. ಅವರಿಗಾಗಿ ರೂಪಿಸಿಕೊಟ್ಟ ಒಂದು ಮೇರೆಯೊಳಗೆನೇ ಅವರು ಕೂಪದ ಮಂಡೂಕದಂತೆ ಕೈಕಾಲುಗಳನ್ನು ಬಡೆಯುತ್ತಿರಬೇಕು, ತಮ್ಮ ಬುದ್ಧಿ ಸಾಮರ್ಥ್ಯದ ಹೊರಗೆ ದೃಷ್ಟಿಕ್ಷೇಪವನ್ನು ಕೂಡ ಮಾಡಕೂಡದು. ಇಲ್ಲವೆ ಆಳವಾದ ನೀರಿನಲ್ಲಿ ಇಳಿಯ ಕೂಡದೆಂದು ಬಯಸುವವರು ವಿದ್ಯಾರ್ಥಿಗಳ ಸ್ವತಂತ್ರವಾದ ಈ ಮಾನಿಸ್ವಭಾವದಿಂದ ವ್ಯಸನಪಟ್ಟಾರು, ಆದರೆ ದೇಶಹಿತದ ದೃಷ್ಟಿಯಿಂದ ನೋಡಿದರೆ ಇದು ಇಷ್ಟವೇ ಸರಿ. ಹಿಂದೀ ವಿದ್ಯಾರ್ಥಿಗಳು ಪಾಶ್ಚಾತ್ಯರ ಒಪೇ ಅಂದಾನುಕರಣ ಮಾಡಕೂಡದ, ತಮ್ಮ ದೇಶದ ವಿದ್ಯೆ, ಕಲೆ, ಧರ್ಮ, ತತ್ವಜ್ಞಾನ ಇವುಗಳನ್ನು ಅಭ್ಯಾಸಿಸಿ ತಮ್ಮ ವೈಶಿಷ್ಟ್ಯವನ್ನು ಕಾಪಾಡಬೇಕು. ಹಿಂದೀ ಶಾಲೆಗಳೊಳಗಿನ ಅಭ್ಯಾಸ ಕ್ರಮವನ್ನು ನೋಡಿದರೆ ಅದು ಹಿಂದೀ ಹುಡುಗರಿಗಾಗಿದೆ ಎಂಬುದನ್ನು ತೋರಿಸುವ ಒಂದೇ ಒಂದು ಚಿಹ್ನವಾದರೂ ಆ ಇಡೀ ಅಭ್ಯಾಸ ಕ್ರಮದಲ್ಲಿ ಎಲ್ಲಿಯೂ ಕಂಡುಬರುವುದಿಲ್ಲ. ಬೇರೆ ದೇಶಗಳಿಂದ ಕಲಿಯಬೇಕಾದ ಯಾವ ಅಂಶಗಳಿವೆಯೋ ಅವುಗಳನ್ನು ಅವಶ್ಯವಾಗಿ ಕಲಿಯಿರಿ. ಆದರೆ ನಿಮ್ಮ ದೇಶದ ಹಿಂದಿನ ಗುರುತನ್ನು ಎಂದೂ ಲೋಪಿಸಬೇಡಿರಿ. ನಾವು ತಿಂದ ಆಹಾರವು ಪಚನವಾಗಿ ಅದು ಶರೀರದೊಳಗಿನ ಘಟಕಾವಯವಗಳೊಡನೆ ಏಕ ಜೀವವಾದಲ್ಲಿಯೇ ಆ ಆಹಾರದಿಂದ ನಿಜವಾದ ಪುಷ್ಟಿಯುಂಟಾಗುತ್ತದೆ. ಇದೇ ರೀತಿಯಿಂದ ಅನ್ಯದೇಶದಿಂದ ಅಥವಾ ಭಾಷೆಯಿಂದ ಸಂಪಾದಿಸಿದ ಜ್ಞಾನವನ್ನು ನಿಮ್ಮ ಸ್ವಂತ ಜ್ಞಾನದೊಡನೆ ಸೇರಿಸಿ ಅವೆರಡನ್ನು ಏಕಜೀವವಾಗ ಮಾಡಿರಿ. ಎಂದರೆ ನೀವು ಯಾವುದನ್ನು ಕಲಿಯುತ್ತಿರುವಿರೋ ಅದಕ್ಕನೇ ನೀವು ಆಹಾರವಾಗದೆ ನಿಮಗೇ ಅದು ಆಹಾರವಾಗಬೇಕು. ಪ್ರಕೃತ ಹಿಂದ ಸ್ಥಾನಕ್ಕೆ ಬೇಕಾದ ಸಾಮರ್ಥ್ಯವು ಇದೇ ಸರಿ. ೨೫ ವರ್ಷಗಳ ಹಿಂದೆ ಹಿಂದೀ ವಿದ್ಯಾರ್ಥಿಗಳಿಗೆ ಇಂತಹ ಉಪದೇಶದ ಆವಶ್ಯಕತೆಯು ಎಷ್ಟು ಇತ್ತೊ ಅಷ್ಟು ಈಗ ಇರುವುದಿಲ್ಲ. ಕಾರಣವೇನೆಂದರೆ, ಅವರಲ್ಲಿ ಸದ್ಯಃ ಆತ್ಮವಿಶ್ವಾಸವು ಮೂಡಿದೆ. ಇದು ಸುಚಿಹ್ನವೇ. ದೇಶದ ಭವಿಷ್ಯತ್ಕಾಲವು ವಿದ್ಯಾರ್ಥಿಗಳ ಮನಸ್ಸಿನಲ್ಲಿ ಚಿತ್ರರೂಪದಿಂದ ಪ್ರತಿಬಿಂಬಿಸುತ್ತದೆ, ಆದುದರಿಂದ ವಿದ್ಯಾರ್ಥಿಗಳಿರಾ! ತಾವು ಹಿಂದೀ ಮಾತೆಯ ಬಾಲಕರು—ಪುತ್ರರು ಎಂಬುದನ್ನು ನೆನಸಿಯೇ ನಡೆಕೊಳ್ಳಿರಿ. ಕೊನೆಗೆ "ಸಹನಾವವತು ಸಹನೌ ಭುನಕ್ತು ॥ ಸಹವೀರ್ಯಂ ಕರವಾವಹೈ ॥ ತೇಜಸ್ವಿನಾವ ಧೀತಮಸ್ತು ॥ ಮಾವಿದ್ವಿಷಾವಹೈ ॥" ಈ ವೈದಿಕ ಮಂತ್ರದಿಂದ ಈಶ್ವರನನ್ನು ನಾವೆಲ್ಲರೂ ಪ್ರಾರ್ಥಿಸುವ.

ಮಾಗಣಿ ದೇವಸ್ಥಾನವೂ ಪಾರ್ಲಿಮೆಂಟ ಸಭೆಯೂ.

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಈ ಬಗೆಯ ಸಾಂಕುಶ ಪ್ರಭುತ್ವವು ಬ್ರಿಟಿಷ ಪಾರ್ಲಿಮೆಂಟಿನಲ್ಲಿ ಕಾಣಬರುತ್ತಿದೆಯೇ ನೋಡೋಣ. ಪಾರ್ಲಿಮೆಂಟಿನಲ್ಲಿ ಕೆಬಿನೆಟ ಕೌನ್ಸಿಲಿನವರು ಪಾರ್ಲಿಮೆಂಟ ಸಭೆಯ ಮಾತುಗಳನ್ನು ಉಲ್ಲಂಘಿಸಿದರೆ ಅವರು ಸಭೆಯಲ್ಲಿ ಚರ್ಚೆಗೆ ತರುವ ಪ್ರತಿಯೊಂದು ಠರಾವು ಮಂಜೂರಾಗದೆ ಬಿದ್ದುಹೋಗುವುದು. ಮುಖ್ಯವಾಗಿ ಪಾರ್ಲಿಮೆಂಟಿನವರು ಖರ್ಚಿಗೆ ಹಣವನ್ನು ಸೆಂಕ್ಷನ್ ಮಾಡದೆ ಇದ್ದರೆ ಕೆಬಿನೆಟ ಕೌನ್ಸಿಲ್ ಮಂತ್ರಿಸಭೆಯು ರಾಜಿನಾಮೆ ಕೊಡಬೇಕಾಗುವುದು.

ಇಲ್ಲಿ ತಾನು ಮಾಡಿದ ಕೃತ್ಯಗಳಿಗೆ ಕುಟುಂಬ ನಾಶವಾದೀತೆಂಬ ಮತವಿಶ್ವಾಸವು ಇಲ್ಲದ ಕಾರಣ ಬೇರೊಂದು ಬಗೆಯ ಅಂಕುಶವು ಅಗತ್ಯವಿದೆ. ಬ್ರಿಟಿಷರಲ್ಲಿ ಶ್ರೀಮಂತರ ಸಭೆಯೇ ಬೇರೆ, (House of Lords), ಸಾಮಾನ್ಯರ ಸಭೆಯೇ ಬೇರೆ (House of Commons) ಯಾಗಿರುವುದಲ್ಲದೆ ಪ್ರತಿಯೊಂದು ಠರಾವೂ ಇವೆರಡು ಸಭೆಗಳಲ್ಲಿ ೩ ಸಲ ಚರ್ಚಿಸಿ ಬಹುಮತದಿಂದ ಮಂಜೂರಾದ ವಿನಹಾ ರಾಜನು ಅದಕ್ಕೆ ಸಹಿ ಕೊಡುವುದಿಲ್ಲ. ರಾಜನ ಸಹಿಯಿಲ್ಲದೆ ಅದು ಕಾಯಿದೆಯಾಗುವುದಿಲ್ಲ. ಕಾಯಿದೆಯಾಗದಿದ್ದರೆ ಅದಕ್ಕೆ ವಿರೋಧವಾಗಿ ನಡೆಯುವುದು ತಪ್ಪಾಗುವುದಿಲ್ಲ.

ಒಂದುವೇಳೆ 'ಹೌಸ್ ಆಫ್ ಲೋರ್ಡ್ಸ್' ಮತ್ತು 'ಹೌಸ್ ಆಫ್ ಕೊಮನ್ಸ್' ಇವೆರಡು ಸಭೆಯವರು ಒಂದು ಠರಾವನ್ನು ಮಂಜೂರು ಮಾಡಿದರೂ ರಾಜನು ಅದಕ್ಕೆ ಕೂಡುವುದಿಲ್ಲವೆಂದು ಮುಷ್ಕರ ಹಿಡಿದರೇನಾಗುವುದು? ರಾಜನಿಗೆ ವರ್ಷಂಪ್ರತಿ ಖರ್ಚಿಗೆ ಬೇಕಾಗುವ ಹಣವನ್ನು ಪಾರ್ಲಿಮೆಂಟ ಸಭೆಯವರು ಸೆಂಕ್ಷನ್ ಮಾಡುವುದೇ ಇಲ್ಲ. ಆಗ ರಾಜನಿಗೆ ಖರ್ಚಿಗೆ ಉಪಾಯವಿಲ್ಲ.

ಹೀಗಾದರೆ ರಾಜನಿಗೆ ಪ್ರಜೆಗಳು ಸ್ವಲ್ಪವೂ ಅಧಿಕಾರ ಕೊಡದಿದ್ದರೆ ರಾಜನು ಇರುವ ಅಗತ್ಯವೇನು? ಎಲ್ಲಾ ರಾಜ್ಯಗಳಲ್ಲಿಯೂ ರಾಜನೆಂಬ ಹೆಸರಿಂದಾಗಲಿ ಪ್ರೆಸಿಡೆಂಟ ಎಂಬ ಹೆಸರಿಂದಾಗಲಿ ಒಬ್ಬ ಸರ್ವಾಧಿಕಾರಿ ಇರಲೇಬೇಕೆಂದು ಭಾವನೆಯಿದೆ. ಅಂಥಾ ಅಧಿಕಾರಿಗಳಿಗೆ ಅಥವಾ ರಾಜನಿಗೆ ಬಹಳವಾಗಿ ಜನಗಳು ಪೀಡಿಸದಂತೆ ಅವನಲ್ಲಿಯೂ ಕೆಲವು ಅಂಕುಶಗಳಿವೆ.

ಬ್ರಿಟಿಷ ರಾಜನಿಗೆ ತನ್ನ ಪ್ರಜೆಗಳಲ್ಲಿ ಯೋಗ್ಯರಾದವರನ್ನು ಶ್ರೀಮಂತ ಪದವಿಗೆ ಏರಿಸುವ ಅಧಿಕಾರವಿದೆ. ಕೋಶಾಧೀಶರಾದ ಹೌಸ್ ಆಫ್ ಕೊಮನ್ಸಿನವರು ರಾಜನಿಗೆ ಬೇಕಾದ ಹಣ ಕೊಡದಿದ್ದರೆ ಅವನು ಹೌಸ್ ಆಫ್ ಲೋರ್ಡ್ಸನಲ್ಲಿ ನೂತನ ಶ್ರೀಮಂತರ ಸಂಖ್ಯೆಯನ್ನು ಒಂದೇ ಸಲ ಏರಿಸಿ ತನ್ನ ಪಕ್ಷಕ್ಕೆ ಸೇರುವಂಥವರನು ಲೋರ್ಡ್ಸ ಆಗ ಮಾಡುವನು. ಇವರು ಹೌಸ್ ಆಫ್ ಕೊಮನ್ಸ್ ಸಭೆಯವರು ತಂದ ಠರಾವುಗಳನ್ನೆಲ್ಲ ಬಹುಮತದಿಂದ ಅಸ್ತಗಟ್ಟುವರು. ಆಗ ಕೊಮನ್ಸರ ಸಭೆಯಲ್ಲಿ ಆದ ಠರಾವುಗಳು ಲೋರ್ಡ್ಸ ಸಭೆಯಲ್ಲಿ ಮಂಜೂರಾಗದಿದ್ದ ಕಾರಣ ರಾಜನ ಸಹಿಗೆ ಬರುವುದಿಲ್ಲ. ಇಂಥ ಠರಾವುಗಳ ಉಪಯೋಗವೇನೂ ಇಲ್ಲ. ಹೀಗಾಗಿ ಕೊಮನ್ಸ್ ಸಭೆಯ ಕೆಲಸವು ನಿಂತುಹೋಗಬಹುದು.

ಒಂದುವೇಳೆ ಶ್ರೀಮಂತ ಸಭೆಯವರು (ಹೌಸ್ ಆಫ್ ಲೋರ್ಡ್ಸ್) ತಮ್ಮ ಶ್ರೀಮಂತತನದ ಗಾಂಭೀರ್ಯದಿಂದ ಸಾಮಾನ್ಯ ಜನರ ಸಭೆಯಲ್ಲಿ ಆದ ಠರಾವುಗಳನ್ನು ಲಕ್ಷ್ಯಕ್ಕೆ ತಾರದಿದ್ದರೆ ಅಥವಾ ತಮ್ಮ ಸಭೆಯಲ್ಲಿ ಚರ್ಚಿಸಿ ಬಹುಮತದಿಂದ ತೆಗೆದು ಹಾಕಿದರೆ ಕೊಮನ್ಸ್ ಸಭೆಯವರು ರಾಜನ ಸಹಾಯದಿಂದ ತಮಗೆ ಬೇಕಾದವರನ್ನು ಶ್ರೀಮಂತರ ಸಭೆಗೆ ಲೋರ್ಡ್ಸಗಳಾಗಿ ನೇಮಿಸುವರು. ಆಗ ಈ ಸಭೆಯಲ್ಲಿಯೂ ಬಹುಮತವು ಕೊಮನ್ಸ್ ಸಭೆಯ ಠರಾವುಗಳನ್ನು ಸಹಜವಾಗಿಯೇ ಅಂಗೀಕರಿಸುವುದು. ಹೀಗೆ ಪರಸ್ಪರ ಅಂಕುಶಗಳಿರುವುದರಿಂದಲೇ ಬ್ರಿಟಿಷ ರಾಜಕಾರ್ಯವು ಸರಿಯಾಗಿ ನಡೆಯುತ್ತಲಿದೆ.

ಆದರೆ ಈಚೀಚೆಗೆ ಭೂತ, ದೈವ ಇವುಗಳ ಮೇಲಣ ವಿಶ್ವಾಸವು ಇಂಗ್ಲಿಷ ವಿದ್ಯಾಭ್ಯಾಸದ ಪ್ರಚಾರದಿಂದ ಕಡಿಮೆಯಾಗುತ್ತ ಬಂದದೆ. ತಸ್ತೀಕು ಇರುವ ದೇವಸ್ಥಾನದ ಅಥವಾ ಗುಡಿಗಳ ಲೆಕ್ಕ ತನಖಿಯ ಜವಾಬ್ದಾರಿಯನ್ನು ಸರಕಾರದವರು ಟೆಂಪಲ್ ಕಮಿಟಿ ಮೆಂಬರುಗಳ ಮೇಲೆ ಹೊರಿಸಿದ ಕಾರಣ ಸ್ವಲ್ಪ ಮಟ್ಟಿಗಾದರೂ ದೇವಸ್ಥಾನದ ಮೊಕ್ತೇಸರುಗಳ ಮೇಲೆ ಅಂಕುಶವಿದೆ. ತಸ್ತೀಕು ಇಲ್ಲದಲ್ಲಿ ಸರಕಾರದವರು ಪ್ರವೇಶವಾಗುವುದೇ ಇಲ್ಲ. ಮಾಗಣೆ ಸಭೆಯವರ ಅಧಿಕಾರವು ವಂಶ ಪರಂಪರೆಯಿಂದ ಮೊಕ್ತೇಸರರಾಗಿರುವವರ ಮೇಲೆ ಕಡಿಮೆಯಾಗುತ್ತ ಬಂದಿದೆ. ದೇವಸ್ಥಾನದ ಹಣವು ಮೊಕ್ತೇಸರರ ಕೈವಶದಲ್ಲಿರುವುದರಿಂದ ಅವರು ಮಾಡುವ ದುರ್ವ್ಯಯವನ್ನು ತಪ್ಪಿಸುವುದಕ್ಕೆ ಆ ದೇವಸ್ಥಾನದ ಭಜಕರಲ್ಲಿಯರಾದರೂ ವ್ಯಾಜ್ಯ ಮಾಡಿದರೆ ದೇವಸ್ಥಾನದ ಭಂಡಾರವೇ ಬಂದಾಗುವುದಲ್ಲದೆ ಅನೇಕ ಸಲ ತಪ್ಪಿತಸ್ಥರು ತಕ್ಕ ಶಿಕ್ಷೆಯಿಂದ ತಪ್ಪಿಹೋಗುವುದುಂಟು. ಮತ್ತು ಮೊಕ್ತೇಸರರು ದೇವಸ್ಥಾನದ ಹಣದಿಂದ ವ್ಯಾಜ್ಯದ ಖರ್ಚನ್ನು ನೋಡಿಕೊಳ್ಳುವಾಗ ವಾದಿಯಾಗಿ ಬರುವವರು ತಮ್ಮ ಸ್ವಂತ ಹಣವನ್ನು ವೆಚ್ಚಮಾಡಿ ವ್ಯಾಜ್ಯದ ಸೋಧ್ತಿಯಲ್ಲಿ ಕೈಹಾಕಲಿಕ್ಕೆ ಹಿಂಜರಿಯುತ್ತಾರೆ. ಹೀಗಾಗಿ ಅನೇಕ ದೇವಸ್ಥಾನಗಳು ಈಗಲೇ ಮೊಕ್ತೇಸರರ ಸ್ವಂತ ಆಸ್ತಿಗಳಾದುವು. ಇನ್ನೂ ಕೆಲವು ಕಾಲಕ್ರಮೇಣ ಹಾಗಾಗುವುವು. ಈ ಸ್ಥಿತಿಗೆ ಬಾರದಂತೆ ಶಿಥಿಲತೆಗೆ ಒಳಗಾಗಿರುವ ಈ ಮಾಗಣೆ ಪಾರ್ಲಿಮೆಂಟನ್ನು ಈಗಿನ ಸ್ಥಿತಿಗೆ ಅನುಸಾರವಾಗಿ ದುರುಸ್ತಿಗೆ ತರಲಿಕ್ಕೆ ಪ್ರಯತ್ನಪಡುವುದಲ್ಲದೆ, ಮೊಕ್ತೇಸರಿಕೆಗೆ ಮನೆತನದ ಹಕ್ಕು ಎಂಬುದನ್ನು ರದ್ದುಪಡಿಸಿ ಯೋಗ್ಯತೆಯೇ ಹಕ್ಕು ಎಂದು ನಿರ್ಧರಿಸಬೇಕು. ಮತ್ತು ದೇವಸ್ಥಾನಗಳ ಹಣವು ದುರ್ವಿನಿಯೋಗವಾಗುವ ಸಂದರ್ಭಗಳಲ್ಲಿ ಮದ್ರಾಸಿನಲ್ಲಿರುವ ಧರ್ಮರಕ್ಷಣ ಸಭೆಯ ಮೂಲಕವಾಗಲಿ ಅಥವಾ ಅಂಥಾದ್ದೊಂದು ಸಭೆಯನ್ನು ಈ ಜಿಲ್ಲೆಗೆ ಏರ್ಪಡಿಸುವುದರಿಂದಾಗಲಿ ದೇವಸ್ಥಾನಗಳಲ್ಲಿ ಸಾಂಕುಶ ಪ್ರಭುತ್ವವನ್ನು ನೆಲೆಗೊಳಿಸುವುದು ಯೋಗ್ಯವಾಗಿದೆ.

ಪತ್ರವ್ಯವಹಾರ.

ಪರಿಭಾವನೆಗಳು.

ಮದ್ರಾಸ್ ನ್ಯಾಯವಿಧಾಯಕ ಸಭೆಯ ಮೆಂಬರರ ಚುನಾವಣೆಗೆ ಮಲಬಾರು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಪರವಾಗಿ ನಿಂತಿರುವ ಮಲಬಾರಿನ ಉಮೇದ್ವಾರರೂ ವ ಅವರ ಏಜಂಟರು ಓಟುಗಳ ಸಂಗ್ರಹಕ್ಕೆ ನಮ್ಮ ಜಿಲ್ಲೆಗೆ ಬಂದಿರುತ್ತಾರೆ. ದಕ್ಷಿಣ

ಕನ್ನಡ ಜಿಲ್ಲೆಯನ್ನು ಹುಟ್ಟಿದಾರಭ್ಯ ನೋಡದ ವ ಒಂದೆರಡು ಸಾರಿ ನೋಡಿದ್ದರೂ ಈ ಜಿಲ್ಲೆಯ ಪರಿಚಿತಿ ಇಲ್ಲದ ಈ ಉಮೇದ್ವಾರರು ನಮ್ಮ ಜಿಲ್ಲೆಯ ಓಟುದಾರರ ಸಹಾಯದಿಂದ ನ್ಯಾಯವಿಧಾಯಕ ಸಭೆಯ ಮೆಂಬರರಾಗಿ ಆರಿಸಲ್ಪಟ್ಟರೆ ಇಂಥವರಿಂದ ನಮ್ಮ ಜಿಲ್ಲೆಗೆ ಏನಾದರೂ ಪ್ರಯೋಜನ ಆಗುವ ಸಂಭವವಿದೆಯೋ? ಹಿಂದೆ ತಾನೇ ನಮ್ಮ ಜಿಲ್ಲೆಯ ಪರವಾಗಿ ನ್ಯಾಯವಿಧಾಯಕ ಸಭೆಯಲ್ಲಿ ಮೆಂಬರರಾಗಿದ್ದ ಮಲಬಾರಿನವರಿಂದ ನಮ್ಮ ಜಿಲ್ಲೆಗೆ ಯಾವ ಒಳ್ಳಿತುಗಳು ಉಂಟಾಗಿವೆ, ಓಟುಗಳ ಸಂಗ್ರಹ ಕಾಲದಲ್ಲಿಯಲ್ಲದೆ ಅನಂತರ ಅಂಥವರನ್ನು ನಮ್ಮ ಜಿಲ್ಲೆಯ ವರ್ಗದಾರರಾಗಲೀ ಮುನ್ಸಿಪಲ್ ವ ಲೋಕಲ್ ಬೋರ್ಡಿನ ಮೆಂಬರರಾಗಲೀ ನೋಡಿದ್ದುಂಟೋ ಎಂಬುದನ್ನು ಈ ಸಾರಿ ಓಟು ಕೊಡುವ ಕಾಲ ನಮ್ಮ ಜಿಲ್ಲೆಯ ಓಟರರು ಆಲೋಚಿಸುವದು ಅವಶ್ಯ. ಇಂಥಾ ಆಲೋಚನೆಗಳೇನಾದರೂ ಮಾಡದೆ ಓಟರರು ಮಲಬಾರಿನ ಉಮೇದ್ವಾರರಿಗೆ ಈ ಸಾರಿಯೂ ಓಟು ಕೊಡುವದಾದರೆ ನಮ್ಮ ಜಿಲ್ಲೆಯ ಬಹಿಷ್ಯಾಭಿವೃದ್ಧಿಗೆ ನಾವೇ ಆತಂಕವನ್ನು ತಂದೊಟ್ಟಿದಂತಾಗುವದು

* * *

ಪಟ್ಟಣಿಗರ ಪ್ರತಿನಿಧಿಗಳಾಗಿರುವ ಪಟ್ಟಣತಾತರುಗಳು ವಿರಾಯಿ ಉಂಡೆಗೆ ಸಣ್ಣ ಮಕ್ಕಳು ಜಗಳಾಡುವಂತೆ ಇದ್ದಾರೆಂತ ಯಾರೋ ಮಾತನಾಡುವದನ್ನು ಕೇಳಿದೆ ಒಂದು ವಿರಾಯಿ ಉಂಡೆಗೆ ಮಕ್ಕಳು ಜಗಳಾಡಿಕೊಂಡು ಅದರ ಮೇಲೆ ಬಿದ್ದು ಎಳೆದಾಡಿ ಹೊರಳಾಡಿದರೆ ಒಳಗಿಂದ ತಾಯಿಯು ಬಂದು ಆ ಉಂಡೆಯನ್ನು ಯಾರಿಗೂ ಕೊಡದೆ ತಾನೇ ಇಟ್ಟುಕೊಳ್ಳುವ ಸಂಭವವು ಇದೆ ಎಂಬದನ್ನು ನಮ್ಮ ಪಟ್ಟಣತಾತರು ಈ ಸಂದರ್ಭದಲ್ಲಿ ಮರೆಯಲಾಗದು ಸರಕಾರದವರು ನಮ್ಮ ಪಟ್ಟಣದ ಚೇರ್ಮನ್ನರನ್ನು ಆರಿಸುವ ಹಕ್ಕನ್ನು ಪಟ್ಟಣತಾತರುಗಳಿಗೆ ಕೊಟ್ಟಿರುತ್ತಾರೆ. ಆದರೆ ಈ ಪಟ್ಟಣತಾತರು ತಮ್ಮ ಜವಾಬ್ದಾರಿಯನ್ನು ಮರೆತು ಅಲ್ಲದಸಲ್ಲದ ಭೇದಗಳನ್ನು ಮನಸ್ಸಿಗೆ ತಂದುಕೊಂಡು ಚೇರ್ಮನ್ನರ ಚುನಾವಣೆಯ ಕಾಲ ಮಕ್ಕಳಂತೆ ನಟಿಸಿದರೆ ತಾಯಿಯಂತಿರುವ ಸರಕಾರವು ಈ ಅಧಿಕಾರವನ್ನು ಪಟ್ಟಣತಾತರಿಂದ ಎಳದುಬಿಡುವದೇ ಸೈ. ಇದು ಬಹಳ ವಿಷಾದಕರ! ಆದುದರಿಂದ ಪಟ್ಟಣತಾತರು ತಮ್ಮ ಭೇದಗಳನ್ನೆಲ್ಲ ಬಿಟ್ಟುಬಿಟ್ಟು ನಾಳೆಯ ದಿನ ಚೇರ್ಮನ್ನರನ್ನು ಆರಿಸುವಾಗ ತಾವು ಪಟ್ಟಣದ ಜನರ ಪ್ರತಿನಿಧಿಗಳು ಎಂಬದನ್ನು ಅರಿತು, ಪಟ್ಟಣದ ಒಳ್ಳೇದನ್ನು ಚಿಂತಿಸಲು ಅವಕಾಶವಿರುವ, ಪಟ್ಟಣದ ಅಭಿವೃದ್ಧಿ ಸಾಧನೆಯನ್ನು ಮಾಡಲು ಅನುಕೂಲವಿರುವಂಥ ಉಮೇದ್ವಾರರನ್ನೇ ಚೇರ್ಮನ್ನರಾಗಿ ಆರಿಸುವದು ಹಿತ

* * *

ಪಟ್ಟಣದ ಹಿತಚಿಂತನೆಯನ್ನು ಮಾಡಬೇಕಾದ ಪಟ್ಟಣತಾತರು ತಮ್ಮೊಳಗೆ ಪರಸ್ಪರ ಪ್ರೀತಿಯಿಂದ ಐಕ್ಯವನ್ನು ಕಾಪಾಡಿಕೊಳ್ಳಲು ಅಶಕ್ತರಾಗಿ ಹೋದುದೇ ಆದರೆ ಪಟ್ಟಣದ ಹಿತಚಿಂತನೆಯು ನಡೆಯುವದು ಹೇಗೆ? ಪಟ್ಟಣತಾತರ ಕೆಲಸವು ಗೌರವಾಸ್ಪದವಾಗಿಯೂ ಮಹತ್ವದ್ದಾಗಿಯೂ ಇದೆ ಅಂಥವರು ತಮ್ಮ ಜವಾಬ್ದಾರಿಯ ಮಹತ್ವವನ್ನು ಮರೆತುಬಿಟ್ಟು ದ್ವೇಷ ಇತ್ಯಾದಿಗಳನ್ನು ಬೆಳಸಿಕೊಂಡರೆ ಪಟ್ಟಣದ ಭವಿಷ್ಯದಭಿವೃದ್ಧಿಯಾಗುವ ಉಪಾಯವೇ ಇಲ್ಲ. ಅದರಲ್ಲಿಯೂ ಚೇರ್ಮನ್ನರು ಇಂಥಾ ಪಕ್ಷಭೇದದಿಂದ ಆರಿಸಲ್ಪಟ್ಟರೆ ಕೌನ್ಸಿಲಿನಲ್ಲಿ ಯಥಾ ಅಸಮಾಧಾನವು ತುಂಬಿ ಕೌನ್ಸಿಲಿನ ಮುಂದಿನ ಕೆಲಸವು ಸರಾಗವಾಗಿ ನಡಿಯಲು ಅವಕಾಶವಿರದು ಆದುದರಿಂದ ಪಟ್ಟಣತಾತರು ಈ ಸಲ ಚೇರ್ಮನ್ನರನ್ನು ಆರಿಸುವಾಗ ತಮ್ಮ ಎಲ್ಲಾ ಒಳಭೇದಗಳನ್ನು ತುಳಿತು ಹಾಕಿದರೆ ಪಟ್ಟಣದ ಏಳಿಗೆಯು ಸರಾಗವಾಗಿ ಸಾಗುವಂತಾಗುವದು

ನಮ್ಮ ಪಟ್ಟಣದಲ್ಲಿ ನಿವಾಸಿಕರಾದ ಸ್ಥಳವಾತ್ಸಲ್ಯವಿರುವ, ಜನಪ್ರೇಮವಿರುವ, ಬಡ ಜನರ ಭಾಷೆ, ಆಚಾರ ಪದ್ಧತಿಗಳನ್ನು ಚೆನ್ನಾಗಿ ಅರಿತಿರುವ, ಗಾಡಿ ಕುದುರೆಗಳು ಹೋಗಲಿಕ್ಕೆ ಅನುಕೂಲವಿಲ್ಲದ ಪಟ್ಟಣದ ಮೂಲೆ ಸಂದುಗೊಂದುಗಳನ್ನು ಸಹಾ ಸಂದರ್ಶಿಸಿ, ಅಂಥಾ ಸ್ಥಳಗಳಲ್ಲಿರುವ ಕುಂದು ಕೊರತೆಗಳನ್ನು ಹೋಗಲಾಡಿಸಲು ಪ್ರಯತ್ನಪಟ್ಟಾರೆಂಬ ಧೈರ್ಯವಿರುವಂಥಾ ಚೇರ್ಮನ್ನರೇ ನಮ್ಮ ಪಟ್ಟಣಕ್ಕೆ ಅಗತ್ಯ.

ನಮ್ಮ ದೇಶದ ಮುಂದಾಳುಗಳು ಅಲ್ಲಲ್ಲಿ ನಮಗೆ "ಸೆಲ್ಫ್ ಗವರ್ನಮೆಂಟ್" ಸಿಗಬೇಕೆಂದು ಹೋರಾಡುತ್ತಿರುವ ಈ ಕಾಲದಲ್ಲಿ "ಸೆಲ್ಫ್ ಗವರ್ನಮೆಂಟ್"ಗೆ ಪಾಯಕಲ್ಲಿನಂತಿರುವ ಮುನ್ಸಿಪಾಲಿಟಿಯೇ ಪಕ್ಷಭೇದ ಜಾತಿಭೇದ, ಮತ್ಸರಗಳಿಂದ ತುಂಬಿತುಳುಕಾಡಿದರೆ "ಹಿಂದೂಸ್ಥಾನದಲ್ಲಿ ಜಾತಿಭೇದ ಮತ್ಸರಗಳು ಇರುವಷ್ಟು ಕಾಲ ಅದು "ಸೆಲ್ಫ್ ಗವರ್ನಮೆಂಟ್"ಗೆ ಯೋಗ್ಯವಲ್ಲ ಎಂದು ಹೇಳುವ ಕೆಲವು ಆಂಗ್ಲೋ-ಇಂಡಿಯನರ ಅಭಿಪ್ರಾಯಕ್ಕೆ ನಾವೇ ಸಹಿ ಹಾಕಿದಂತಾಗುವದು. ಬಡವನ ಸಿಟ್ಟು ದವಡೆಗೆ ಮೂಲ ಎಂಬ ಹಾಗೆ ನಮ್ಮ ಪಟ್ಟಣತಾತರು ವರ್ತಿಸರೆಂತ ನಂಬುವ.

ಪಟ್ಟಣಿಗ.

ಮುನ್ಸಿಪಲ್ ಫಂಡಿನಿಂದ ವಿದ್ಯಾಭ್ಯಾಸ.

ಸ್ವಾಮಿ, ಇಲ್ಲಿಯ ಮುನ್ಸಿಪಾಲಿಟಿಯವರು ವಿದ್ಯಾಭ್ಯಾಸದ ಬಗ್ಗೆ ತಮ್ಮ ಫಂಡಿನಿಂದ ಉಪಯೋಗಿಸುವ ಹಣವು ಬಹಳ ಸ್ವಲ್ಪವಾಗಿದೆ ಮುನ್ಸಿಪಾಲಿಟಿಯವರು ಇನ್ನಷ್ಟು ಹಣವನ್ನು ಪಟ್ಟಣಿಗರ ವಿದ್ಯಾಭ್ಯಾಸದ ಸಲುವಾಗಿ ಉಪಯೋಗಿಸಬೇಕೆಂತ ಸರಕಾರದವರಿಂದ ಒಂದು ಸೂಚನೆ ಇತ್ತು. ಆದ್ದರಿಂದ ಈ ವರುಷ ಇಲ್ಲಿಯ ಮುನ್ಸಿಪಾಲಿಟಿಯವರು ಈ ಖರ್ಚನ್ನು ಹೆಚ್ಚಿಸುವ ಆಲೋಚನೆ ಮಾಡುತ್ತಾರೆಂಬುದಾಗಿ ಕೇಳುತ್ತೇನೆ ಬೊಕ್ಕಪಟ್ಣ ಶಾಲೆ, ಬೋಳಾರ ಶಾಲೆ, ಕಂಕನಾಡಿ ಶಾಲೆ, ಸೀರೇ ಶ್ವಾಲ್ಯ ಶಾಲೆ ಹೀಗೆ ಪಟ್ಟಣದ ಅಂಚಿನಲ್ಲಿಯೂ ಕೆಲವು ಮೂಲೆಗಳಲ್ಲಿಯೂ ಶಾಲೆಗಳಿರುವವಲ್ಲದೆ ಪಟ್ಟಣದ ನಡುಭಾಗದಲ್ಲಿ ಮುನ್ಸಿಪಲ್ ಶಾಲೆಗಳೇ ಇಲ್ಲ. ವಿದ್ಯಾ ಇಲಾಖೆಯವರಿಗೆ ಸಹ ನಮ್ಮ ಪಟ್ಟಣದ ಈ ಕೊರತೆಯು ಇನ್ನೂ ಚೆನ್ನಾಗಿ ಕಂಡುಬಂದದ್ದಿಲ್ಲ. ಬಹುಶ ಪಟ್ಟಣದ ನಡುಭಾಗದಲ್ಲಿ ಸೆಕೆಂಡರಿ ಶಾಲೆಗಳಿರುವುದರಿಂದ ಎಲಿಮೆಂಟರಿ ಅಥವಾ ಹಾಯರ್ ಎಲಿಮೆಂಟರಿ ಶಾಲೆಯೊಂದನ್ನಾದರೂ ನಡುಭಾಗದಲ್ಲಿ ಸ್ಥಾಪಿಸುವಂಥಾದ್ದು ವಿದ್ಯಾಖಾತೆಯವರಿಗೆ ಅನುಚಿತವೆಂತ ಅಭಿಪ್ರಾಯವಿರುವದೋ ಏನೋ. ಆದರೆ ಕೆಲವು ವರುಷ ಇತ್ತಲಾಗೆ ಸೆಕೆಂಡರಿ ಶಾಲೆಗಳಲ್ಲಿ ಕೆಳದರ್ಜೆಗಳ ಸಂಬಳದ ದರವು ಸಹ ವಿಪರೀತವಾಗಿ ಹೆಚ್ಚಿಹೋಗಿರುವದರಿಂದ ಸೆಂಟ್ರಲ್ ವಾರ್ಡ್, ಕೋಟೆ ವಾರ್ಡ್, ಮಾರ್ಕೆಟ್ ವಾರ್ಡ್ ಮೊದಲಾದ ವಾರ್ಡುಗಳಲ್ಲಿರುವ ಬಡ ನಿವಾಸಿಕರು ತಮ್ಮ ಮಕ್ಕಳಿಗೆ ಶಿಕ್ಷಣವನ್ನು ಕೊಡುವ ಪ್ರಯತ್ನದಲ್ಲಿ ವಿಶೇಷ ಶ್ರಮಗೊಂಡು ಹತಾಶರಾಗುತ್ತಿರುವರು ಚಿಕ್ಕ ಪ್ರಾಯದಲ್ಲಿ ಶಾಲೆಯನ್ನು ಬಿಟ್ಟು ಬಂದ ಬಾಲಕರು ಮತ್ತೇನೂ ದಾರಿಗಾಣದೆ ಕಾಪಿ ಹೊಟೇಲುಗಳಲ್ಲಿಯೂ ಬೀದಿಗಳಲ್ಲಿಯೂ ದೇವಸ್ಥಾನದ ವಠಾರಗಳಲ್ಲಿಯೂ ನಾಟಕ ಸರ್ಕಸ್ ಕಂಪೆನಿಗಳ ಡೇರೆಗಳ ಸಮೀಪವೂ ಅಲೆದಾಡುತ್ತ ವೃತ್ತಿಯಿಲ್ಲದೆ ಹಾಳಾಗಿ ಹೋಗುವದನ್ನು ಸರ್ವರೂ ನೋಡಿರಬಹುದು. ಇಂಥವರಲ್ಲಿ ಕೆಲವರು ಕೆಲವು ವಂಚನೋಪಾಯಗಳ ಮೂಲಕ ಬೇಡುವ ವೃತ್ತಿಯನ್ನು ದಿನೇ ದಿನೇ ಹೆಚ್ಚೆಚ್ಚಾಗಿ ಅವಲಂಬಿಸುತ್ತಿದ್ದಾರೆ. ಕುಡಿಕತನ, ಚಿಲ್ಲರೆ ಕಳವು ಇತ್ಯಾದಿಗಳು ಇಂಥವರ ಮೂಲಕ ಹೆಚ್ಚುತ್ತಿರುವವು. ಹೀಗೆ ಹಾಳಾಗಿ ಹೋಗುವವರ ಬಗ್ಗೆ ಬೇಕಾದ ಶಿಕ್ಷಣದ ಏರ್ಪಾಡನ್ನು ಮಾಡುವದು ಮುನ್ಸಿಪಾಲಿಟಿಯವರ ಕೆಲಸವಲ್ಲವೋ? ಹಾಯರ್ ಎಲಿಮೆಂಟರಿ ವಿದ್ಯಾಭ್ಯಾಸದ ಏರ್ಪಾಡನ್ನು ವ್ಯವಸ್ಥೆಗೊಳಿಸುವಾಗ ಮಕ್ಕಳಿಗೆ ಶಾಲೆಗಳಲ್ಲಿ ದೊರಕುವ ಅಕ್ಷರ ಪರಿಚಿತಿಯೊಂದಿಗೆ ವೃತ್ತಿ ಶಿಕ್ಷಣವನ್ನು ಬೇಕಾದ ರೀತಿ ಕೊಡಲು ಅವಕಾಶವುಂಟು ವಿದ್ಯಾಖಾತೆಯವರು ಈ ವಿಷಯವನ್ನು ಪರಿಪೂರ್ಣವಾಗಿ ಬಲ್ಲವರಾಗಿದ್ದರೂ ಮುನ್ಸಿಪಲ್ ಕೌನ್ಸಿಲರರು ಇಂಥಾ ವಿಷಯಗಳನ್ನು ಕೇಳಿ ತಿಳಕೊಳ್ಳಬೇಕಾಗಿದ್ದರೂ, ವಿದ್ಯಾಲಾಭವನ್ನು ಪಡದ ಹಲವು ಪ್ರಮುಖ ನಿವಾಸಿಕರು ಪಟ್ಟಣದ ನಡುಭಾಗದಲ್ಲಿರುವರಾದರೂ, ಈ ತನಕ ಇದರಲ್ಲಿ ಯಾರಾದರೂ ಈ ಪರವಾಗಿ ನಡಿಸಬೇಕಾದ ಪ್ರಯತ್ನಗಳನ್ನು ನಡಿಸದೆ ಸುಮ್ಮಗಿರುವಂಥಾದ್ದು ವಿಷಾದಕರವೇ ಸರಿ ಈಗ ಈ ಪಟ್ಟಣದಲ್ಲಿ ಎಲಿಮೆಂಟರಿ ವಿದ್ಯಾಭ್ಯಾಸದ ಬಗ್ಗೆ ಮುನ್ಸಿಪಲ್ ಕೌನ್ಸಿಲಿನವರು ಹೆಚ್ಚು ಹಣ ವಿನಿಯೋಗಿಸಬೇಕೆಂದು ಸರಕಾರದವರೇ ಹೇಳಿರುವರು. ದೇವರು ಕೊಟ್ಟ ಇಂಥಾ ಕಾಲದಲ್ಲಿ ಪೂಜಾರಿ ಬಿಡನು. ಈ ಪಟ್ಟಣದ ನಡುಪ್ರಾಂತ್ಯದಲ್ಲಿರುವ ಬಡ ನಿವಾಸಿಕರ ಮೇಲೆ ಪೂಜಾರಿಯ ಕೃಪಾದೃಷ್ಟಿಯು ಇನ್ನೂ ಬೀಳದೆ ಇದೆ. ಕದ್ರಿ ಶಾಲೆ, ಕಂಕನಾಡಿ ಶಾಲೆ, ಬೋಳಾರ ಶಾಲೆ ಇವುಗಳ ಮೂಲಕವೇ ಎಲಿಮೆಂಟರಿ ವಿದ್ಯಾಭ್ಯಾಸವನ್ನು ಇಲ್ಲಿ ಹೆಚ್ಚಿಸುವ ಉಪಾಯವು ಅಧಿಕಾರಿಗಳಿಗೆ ಕಂಡುಬಂದಿದೆ ಅಲ್ಲದೆ ಪಟ್ಟಣದ ನಡುಪ್ರಾಂತ್ಯದವರ ಗೋಳಿಗೆ ಇವರು ಇನ್ನೂ ಒರಲಾರರು. ಏನೋ ಈ ನಿವಾಸಿಕರ ದುರ್ದಶೆ. ನಿವಾಸಿಕರೇ ನೀವಾದರೂ ಮುನ್ಸಿಪಾಲಿಟಿಯವರಿಗೂ ಸರಕಾರಕ್ಕೂ ಬರಕೊಳ್ಳಿರಿ. ಇದೇ ಒಳ್ಳೇ ಸಂದರ್ಭವಾಗಿದೆ.

ಪಟ್ಟಣಿಗರ ಹಿತಕಾಂಕ್ಷಿ.

ಯುದ್ಧ ಸಮಾಚಾರ.

ತಾ. ೧೩ನೇ ಜೂನ್.

ಸಲೋನಿಕೆದಲ್ಲಿರುವ ಫ್ರೆಂಚರ ವಾಯುನಾವೆಗಳು ರ ಪೆಲ್ ಕೋಟೆಯ ಮೇಲೆಯೂ ಬಲ್ಗೇರಿಯನರ ಇತರ ಕೆಲವು ಕೋಟೆಗಳ ಮೇಲೆಯೂ ಬೊಂಬುಗಳನ್ನು ಎಸೆದಿರುತ್ತವೆ.

ತಾ. ೧೪ನೇ ಜೂನ್.

ವಾಕ್ಸ್ ಕೋಟೆಯ ಪಶ್ಚಿಮದಲ್ಲಿ ಮೇಲ್ಬಾಯಿದ ಜರ್ಮನರು ಪೂರ್ಣವಾಗಿ ಸೋತು ಹಿಮ್ಮೆಟ್ಟಿರುವರು. ಶತ್ರುಗಳು ಭಾರೀ ತೋಪುಗಳನ್ನು ಸಿದ್ಧಪಡಿಸಿ ರಾತ್ರಿಕಾಲವೆಲ್ಲಾ ಫ್ರೆಂಚರ ನೆಲೆಗಳ ಮೇಲೆ ಭೀಕರವಾಗಿ ಗುಂಡುಗಳನ್ನು ಹಾರಿಸಿದರು. ಆದರೆ ಫ್ರೆಂಚರ ಕಾಲಾಳುಸೈನಿಕರು ಹೊಡೆದ ಗುಂಡುಗಳನ್ನು ತಡೆಯಲಾರದೆ ಶತ್ರುಗಳು ಹಿಮ್ಮೆಟ್ಟಿದರು. ಜರ್ಮನರು ದಿಬ್ಬ ೩೦೪ರ ಪೂರ್ವದಲ್ಲಿ ಪುನಃ ಹಲ್ಲೆಮಾಡಿ ಸ್ವಲ್ಪ ಮುಂದರಿದರು. ಇತರ ಎಲ್ಲಾ ಕಡೆಯಲ್ಲಿ ಹಿಮ್ಮೆಟ್ಟಿದರು.

ರುಷ್ಯನರು ಜೆರ್ನೋವಿಟ್ಜಿನ ಸಮೀಪ ಸೇರಿರುವರೆಂತ ಪ್ರಕಟವಾಗಿದೆ. ರಷ್ಯನರ ಸೆರೆಬಿದ್ದ ಶತ್ರುಗಳ ಸಂಖ್ಯೆ ೧೧೪,೦೦೦. ಗ್ಲಿಯಾಡ್ಕಿನ ಉತ್ತರದಲ್ಲಿ ಶತ್ರುಗಳು ಆರಾವರ್ತಿ ಹಲ್ಲೆಮಾಡಿ ಹಿಮ್ಮೆಟ್ಟಿರುವರು.

ತಾ. ೧೫ನೇ ಜೂನ್.

ಕೆನಡಾ ದೇಶದಿಂದ ಬಂದಿದ್ದ ಬ್ರಿಟಿಷ ಸೈನಿಕರು ಶತ್ರುಗಳ ಮೇಲೆ ಹಲ್ಲೆಮಾಡಿ ಜಿಲ್ಲೆಬೆಕೆ ಎಂಬಲ್ಲಿ ಬ್ರಿಟಿಷರು ಹಿಂದೆ ಕಳಕೊಂಡಿದ್ದ ನೆಲೆಗಳನ್ನು ಪುನಃ ಪಡಕೊಂಡು ೧೫೮ ಶತ್ರುಸೈನಿಕರನ್ನು ಸೆರೆಹಿಡಿದಿರುವರು. ಶತ್ರುಗಳು ಅನಂತರ ಈ ಸೈನಿಕರ ಮೇಲೆ ಕಠಿಣವಾಗಿ ಫಿರಂಗಿಗಳನ್ನು ಹಾರಿಸಿದರು. ಆದರೆ ತೋಪುಗಳ ಸಹಾಯದಿಂದ ಈ ಸೈನಿಕರು ಪಡಕೊಂಡ ಸ್ಥಳವನ್ನು ಕಾಪಾಡಿಕೊಂಡರು ಎಂತ ಜನರಲ್ ಹೇಗರವರು ಪ್ರಕಟಿಸಿರುತ್ತಾರೆ.

ರುಷ್ಯನರ ಸೆರೆಬಿದ್ದ ಶತ್ರುಗಳ ಸಂಖ್ಯೆ ೧೧೫,೭೦೦. ರುಷ್ಯನರು ಸ್ಟೊಕೋಡ್ ನದಿಯ ಬಳಿಗೆ ತಲಪಿ ಲಕ್ ಎಂಬ ಸ್ಥಳದ ಪಶ್ಚಿಮದಲ್ಲಿರುವ ಟೋರ್ಗಿನ್ ಎಂಬ ಪಟ್ಟಣವನ್ನು ಹಿಡಿದಿರುವರು. ಸ್ಟೈರ ರಣರಂಗದಲ್ಲಿ ಕಠಿಣಕಾಳಗವು ನಡೆಯುತ್ತಿದೆ. ರುಷ್ಯನರು ಸೇರೆಟ್ ನದಿಯನ್ನು ದಾಟಿ ಜೆಲಿಸ್ಟಿಚಿಕ್ಕ ಎಂಬ ಪಟ್ಟಣವನ್ನು ಸ್ವಾಧೀನಮಾಡಿಕೊಂಡಿರುವರು. ರಷ್ಯನರು ಜೆರ್ನೋವಿಟ್ಜಿನ ಉತ್ತರದ ರೈಲ್ವೇ ವ್ಯವಹಾರವನ್ನು ಕಡಿದಿರುತ್ತಾರೆ. ಪಟ್ಟಣದ ಪೂರ್ವ ಮತ್ತು ಉತ್ತರದಲ್ಲಿ ಘೋರ ಕಾಳಗವು ನಡೆಯುತ್ತಿದೆ.

ದಕ್ಷಿಣ ರಣರಂಗದ ಕೆಲವು ಕಡೆಗಳಲ್ಲಿ ಇಟೆಲಿಯನರು ಆಸ್ಟ್ರಿಯನರನ್ನು ಸೋಲಿಸಿರುತ್ತಾರೆ.

ಈಜಿಪ್ತಿನ ಕಾಂಟಾರ ಎಂಬಲ್ಲಿ ಶತ್ರುಗಳ ವಾಯುನಾವೆಗಳು ಸಿಡಿವ ದ್ದುಗಳನ್ನು ಹಾಕಿದವು. ರೋಮೂನಿ ಎಂಬಲ್ಲಿ ಶತ್ರುಗಳ ಯಂತ್ರಚಾಲಿತ ಫಿರಂಗಿಗಳು ಮದ್ದುಗುಂಡುಗಳನ್ನು ಹಾರಿಸಿದವು. ಆದರೆ ವಿಶೇಷ ನಷ್ಟವಾಗಲಿಲ್ಲ.

ತಾ. ೧೬ ನೇ ಜೂನು.

ಕಳೆದ ರಾತ್ರಿ ಬಾಲ್ಟಿಕ್ ಸಮುದ್ರದಲ್ಲಿ ೪೫ ನಿಮಿಷಗಳವರೆಗೆ ಜರ್ಮನರ ಆಯುಧ ಧರಿಸಿದ ಟ್ರಾವಲ್ಲರ್ಸ್ ನಾವೆಗಳಿಗೂ ರುಷ್ಯನರ ಯುದ್ಧನಾವೆಗಳಿಗೂ ಕದನ ನಡೆದಿರುವದೆಂತ ಸ್ಟೊಕ್‌ಹಾಮಿನಲ್ಲಿ ಪ್ರಕಟವಾಗಿದೆ. ಘಾಯ ಒಡೆದ ೫ ಮಂದಿ ಜರ್ಮನರಿದ್ದ ಒಂದು ಟ್ರಾವಲ್ಲರ್ ನಾವೆಯು ಮೈಕೆಸಿಂಗ್ ಎಂಬಲ್ಲಿಗೆ ತಲಪಿರುವದು. ಅನಂತರದ ವಾರ್ತೆಯಿಂದ ಜರ್ಮನರ ೧೩ ವ್ಯಾಪಾರ ಹಡಗಗಳು ಯುದ್ಧನಾವೆಗಳ ಸಹಿತ ಹೋಗುತ್ತಿರುವಾಗ ರುಷ್ಯನರ ಡಿಸ್ಟ್ರೋಯರ್ ನಾವೆಗಳು ಅವುಗಳ ಮೇಲೆ ಬಿದ್ದು ಅವನ್ನು ಚದರಿಸಿಬಿಟ್ಟವೆಂತಲೂ ಶತ್ರುಗಳ ಕೆಲವು ಹಡಗಗಳು ಮುಳುಗಿಹೋದವೆಂತಲೂ ತಿಳಿದುಬರುತ್ತದೆ.

ಲೋಯ್ಡ್ ಜೋರ್ಜರವರು ಯುದ್ಧ ಮಂತ್ರಿಯಾಗಿ ನೇಮಿಸಲ್ಪಡುವ ಸಂಭವ ಇದೆಂಬ ವಾರ್ತೆ ಇದೆ.

ರುಷ್ಯನರು ಕೊವೆಲ್‌ನ ಕಡೆಗೆ ಮುಂದರಿಯುತ್ತಲಿದ್ದಾರೆಂದೂ ಅದು ಬೇಗನೇ ಬೀಳುವ ಸಂಭವವಿದೆಂದೂ ತಿಳಿದು ಬಂದದೆ.

ರುಷ್ಯನರು ಜೆರ್ನೋವಿಟ್ಜಿಗೆ ೨೦ ಮೈಲುಗಳ ಉತ್ತರದಲ್ಲಿರುವ ಸ್ನಿಯಾತಿನ್ ಎಂಬ ಸ್ಥಳವನ್ನು ಸ್ವಾಧೀನಮಾಡಿಕೊಂಡು ೬೦೦೦ ಸೈನಿಕರನ್ನೂ, ೭ ಫಿರಂಗಿಗಳನ್ನೂ, ೧೦ ಯಂತ್ರಚಾಲಿತ ಫಿರಂಗಿಗಳನ್ನೂ ಹಿಡದಿರುವರು. ರುಷ್ಯನರು ಆಸ್ಟ್ರಿಯನರನ್ನು ರುಮೇನಿಯ ಸರಹದ್ದಿಗೆ ಓಡಿಸಿರುವರು. ಜೆರ್ನೋವಿಟ್ಜಿನ ಸೇತುವೆಯನ್ನು ಹಿಡಕೊಳ್ಳುವ ಬಗ್ಗೆ ಕಠಿಣ ಕಾಳಗವು ನಡೆಯುತ್ತಿದೆ.

ದಕ್ಷಿಣ ರಣರಂಗದ ಮೊಸೀನದಲ್ಲಿ ಮೇಲ್ಬಾಯಿದ ಶತ್ರುಗಳನ್ನೂ ಹಿಂದಕ್ಕೆ ಓಡಿಸಿರುತ್ತಾರೆ. ಶತ್ರುಗಳಿಗೆ ಇಲ್ಲಿ ವಿಶೇಷ ನಷ್ಟವಾಗಿರುವದು.

ತಾ. ೧೭ನೇ ಜೂನು.

ಬಾಲ್ಟಿಕ್ ಸಮುದ್ರದಲ್ಲಿ ನಡೆದ ನೌಕಾಪಳಿ ಯುದ್ಧದಲ್ಲಿ ಶತ್ರುಗಳ ಒಂದು ಕ್ರೂಜರ್ ನಾವೆಯೂ, ೫ ವ್ಯಾಪಾರ ಹಡಗಗಳೂ ಮುಳುಗಿ ಹೋಗಿರುವವೆಂತ ತಿಳಿದು ಬಂದದೆ.

ಜಟ್‌ಲೆಂಡಿನಲ್ಲಿ ನಡೆದ ಹಡಗುಪಡೆಯ ಕದನದಲ್ಲಿ ಜರ್ಮನರ 'ಫ್ರೌಎನ್‌ಲೋಬ್' ಎಂಬ ಕ್ರೂಜರ್ ನಾವೆಯು ನಿಭಿಲವಾಗಿರುವದೆಂಬ ವಾರ್ತೆ ಬಂದದೆ.

"ಹೆಮ್ಸಯರ್" ನಾವೆಯ ಹತಶೇಷರ ಹೇಳಿಕೆಯ ಪ್ರಕಾರ ಕಿಚನರ್ ಪ್ರಭುಗಳ ಮುಳುಗಿ ಹೋದ ಹಡಗದ ವಾರ್ತೆಯ ಈ ರೀತಿಯಾಗಿರುವದು ಎಂತ ಬ್ರಿಟಿಷ ಸರಕಾರದವರು ಪ್ರಕಟಿಸಿರುವರು. 'ಹೆಮ್ಸಯರ್' ನಾವೆಯು ಸಿಡಿವ ದ್ದಿನಗಳಿಗೆ ತಾಗಿ ೧೫ ನಿಮಿಷದೊಳಗೆ ಮುಳುಗಿ ಹೋಯಿತು. ಕಿಚನರ್ ಪ್ರಭುಗಳು ಕಡೆಗೆ ಕೆಪ್ಟನರ ದೋಣಿಯನ್ನು ಇಳಿಸುವಲ್ಲಿ ಇದ್ದರು. ಆದರೆ ಅವರು ಆ ದೋಣಿಗೆ ಹತ್ತಿದರೋ ಏನೆಂದು ಯಾರಿಗೂ ಗೊತ್ತಿಲ್ಲ. ಹಡಗದಿಂದ ದೋಣಿಗೆ ಯಾರೂ ಇಳಿಯಲು ಸಾಧ್ಯವಾಗಲಿಲ್ಲ. ಆದರೆ ೩ ತೆಪ್ಪಗಳಿಗೆ ಮಾತ್ರ ಕೆಲವರು ಹತ್ತಿದರು. ಒಂದೊಂದು ತೆಪ್ಪದಲ್ಲಿ ೫೦-೭೦ ಮಂದಿ ಇದ್ದರು. ಆದರೆ ಅವರೆಲ್ಲರೂ ಕ್ರಮೇಣ ನೀರಿನಪಾಲಾದರು.

ರುಷ್ಯನರ ಜನರಲ್ ಬ್ರುಸಿಲೋಫರವರು ಶತ್ರುಗಳ ಮೇಲೆ ನುಗ್ಗಿಹೋಗಿ ಕದನ ಮಾಡುತ್ತಲೇ ಇದ್ದಾರೆ. ಅವರೊಬ್ಬರೇ ಈ ವರೆಗೆ ೧೫,೦೦೦ ಸೈನಿಕರನ್ನೂ, ೧೬೩ ಫಿರಂಗಿಗಳನ್ನೂ, ೨೬೬ ಯಂತ್ರಚಾಲಿತ ಫಿರಂಗಿಗಳನ್ನೂ ಕಂದಕಗಳನ್ನು ಒಡೆಯುವ ೧೩೮ ದೊಡ್ಡ ತೋಪುಗಳನ್ನೂ ಹಿಡಿದಿರುತ್ತಾರೆ. ಜರ್ಮನರು ರಿಗಾ ಮತ್ತು ನಾರೋಕ್ ಸರೋವರದ ಬಳಿ ಕಠಿಣವಾಗಿ ಗುಂಡು ಹಾರಿಸಿರುವರು.

ಆಸ್ಟ್ರಿಯನರು ಜೆರ್ನೋವಿಟ್ಜನ್ನು ಬಿಟ್ಟುಹೋಗಿರುವರೆಂತ ಬುಕಾರೆಸ್ಟಿನಿಂದ ವಾರ್ತೆ ಬಂದಿದೆ. ಈ ರಣರಂಗದಲ್ಲಿ ನಷ್ಟವಾದ ಶತ್ರುಗಳ ಸಂಖ್ಯೆ ೩೦೦ ಸಾವಿರ ಆಗಿರಬಹುದೆಂತ ಅಂದಾಜಾಗಿಯದೆ.

ಇಟೆಲಿಯನರು ಮೊಫಾಲ್‌ಕೋನ ಎಂಬಲ್ಲಿ ೫೦೦ ಮಂದಿಯನ್ನು ಸೆರೆಹಿಡಿದಿರುವರು.

ಮೆಸೊಪೊಟಾಮಿಯದಲ್ಲಿ ಸರ್ ಪರ್ಸಿ ಲೇಕರ ಸೇನಾಪಡೆಯು ಕರ್ಮಾನ್ ಎಂಬ ಸ್ಥಳವನ್ನು ಪ್ರವೇಶಿಸಿರುತ್ತದೆಂತ ವಾರ್ತೆ ಬಂದದೆ.

ಪೂರ್ವ ಆಫ್ರಿಕದಲ್ಲಿ ಬ್ರಿಟಿಷ ಸೈನಿಕರು ವಿಲ್‌ಹೆಲ್ಮ್‌ಸ್ಟಾಲನ್ನು ಹಿಡದುಕೊಂಡಿರುತ್ತಾರೆ.

ತಾ. ೧೮ನೇ ಜೂನ್.

ಇಂಗ್ಲಿಷ್ ಕಾಲುವೆಯಲ್ಲಿ "ಎಡೆನ್" ಎಂಬ ಬ್ರಿಟಿಷರ ಡಿಸ್ಟ್ರೋಯರ್ ನಾವೆಯು ಬಡಿದು ಮುಳುಗಿಹೋಗಿರುತ್ತದೆ. ೩೧ ಮಂದಿ ರಕ್ಷಿಸಲ್ಪಟ್ಟಿರುವರು. ೩ ಆಫೀಸರರ ಕಾಣೆಯಾಗಿರುವರು.

ಶತ್ರುಗಳು ದಿಬ್ಬ ೩೦೪ರ ಮೇಲೆ ಬಲೋದ್ದಂಡಿಯಿಂದ ಹಲ್ಲೆಮಾಡಿದರು. ಆದರೆ ಫ್ರೆಂಚರ ಯಂತ್ರಚಾಲಿತ ಫಿರಂಗಿಗಳ ಮತ್ತು ರೈಫಲ್ ಕೋವಿಗಳ ಹೊಡತವನ್ನು ತಾಳಲಾರದೆ ವಿಶೇಷ ನಷ್ಟಪಟ್ಟು ಹಿಮ್ಮೆಟ್ಟಿದರು. ಮೊರ್ಟಮ್ಯಾನಿನಲ್ಲಿ ಪುನಃ ನುಗ್ಗಿ ಬಂದು ಕದನಮಾಡಿದ ಜರ್ಮನರೂ ಹಿಮ್ಮೆಟ್ಟಿರುವರು. ಮ್ಯೂಸಿನ ಉಭಯ ದಡಗಳಲ್ಲಿಯೂ ತೋಪು ಕಾಳಗವು ತೀಕ್ಷ್ಣತೆಯಿಂದ ನಡೆಯುತ್ತಿದೆ. ಫ್ರೆಂಚರು ೩೦ ಮಂದಿಯನ್ನು ಸೆರೆಹಿಡಿದಿರುತ್ತಾರೆ. ಜರ್ಮನರು ಮೊರ್ಟಮ್ಯಾನಿನ ಬಳಿ ಇರುವ ಫ್ರೆಂಚರ ಹೊಸ ನೆಲೆಯ ಮೇಲೆ ಕಠಿಣವಾಗಿ ಮೇಲ್ಬಾಯಿದರು. ವಿಷ ದ್ರಾವಕವನ್ನು ಪ್ರಯೋಗಿಸಿದರು. ಆದರೆ ಬಹಳ ನಷ್ಟಪಟ್ಟು ಹಿಮ್ಮೆಟ್ಟಿದರು.

ಜರ್ಮನರ ಜನರಲ್ ವನ್ ಮೊಲ್ಟ್‌ಕೆಯವರು ವನ್ ಡರ್ ಗೊಲ್ಟ್ಜರ ಮೆಮೋರಿಯಲ್ ಸರ್ವಿಸಿಗೆ ರಿಚ್‌ಸ್ಟ್ಯಾಗಿಗೆ ಹೋಗಿದ್ದಾಗ ಫಕ್ಕನೇ ಮೃತರಾದರು ಎಂಬ ವಾರ್ತೆ ಬಂದಿರುತ್ತದೆ.

ರುಷ್ಯನರು ಪುನಃ ೧೦೦ ಆಫೀಸರರನ್ನೂ ೧೪೦೦೦ ಸೈನಿಕರನ್ನೂ ಸೆರೆಹಿಡಿದಿರುವರು. ರುಷ್ಯನರ ಜನರಲ್ ಸೆಚರ್‌ಬೆಚವರ ಸೇನೆಯು ಆಸ್ಟ್ರಿಯನರನ್ನು ಸ್ಟ್ರಿಪಾ ಮತ್ತು ಸೈರೆಟ್ ಪ್ರಾಂತ್ಯದಿಂದ ಅಟ್ಟಿಬಿಟ್ಟಿರುತ್ತದೆ. ಬುಚಾಕಿನ ಉತ್ತರದಲ್ಲಿ ಇನ್ನೂ ಕಾಳಗವು ನಡೆಯುತ್ತಿದೆ. ಈ ವರೆಗೆ ರುಷ್ಯನರು ಅಲ್ಲಿ ೬೦೦೦ ಮಂದಿಯನ್ನು ಸೆರೆಹಿಡಿದರು. ಒಟ್ಟಿಗೆ ೧೪,೦೦೦ ಸೈನಿಕರೂ ಬಹಳ ಯುದ್ಧ ಸಾಮಗ್ರಿಗಳೂ ರಷ್ಯನರಿಗೆ ದೊರಕಿರುವವು. ನಿಸಿಲ್ ಪ್ರಾಂತ್ಯದಲ್ಲಿ ನುಗ್ಗಿಬರಲಿಕ್ಕಿದ್ದ ಜರ್ಮನರನ್ನು ರುಷ್ಯನರ ತೋಪುಗಳು ಹಡೆದು ಬಿಟ್ಟಿರುವವು.

ರಷ್ಯನರು ಲೆಂಬರ್ಗಿಗೆ ಮುಂದರಿಯುವದನ್ನು ತಡೆಯುವ ಬಗ್ಗೆ ಶತ್ರುಗಳು ಇತರ ರಣರಂಗದಿಂದ ಸೈನಿಕರನ್ನು ತರಿಸಿ ಕೆಲವು ಕಡೆಗಳಲ್ಲಿ ರಷ್ಯನರ ಸೇನೆಯ ಮೇಲೆ ಬಿದ್ದರು. ಆದರೆ ರಷ್ಯನರು ಪ್ರತಿ ಕಡೆಯಲ್ಲಿಯೂ ಅವರನ್ನು ಅಟ್ಟಿಬಿಟ್ಟಿರುತ್ತಾರೆ. ಶತ್ರುಗಳು ಸ್ಟೈರ್ ನದಿಯ ಮೇಲಿರುವ ಕೊಲ್ಕಿ ಪಟ್ಟಣದ ಪೂರ್ವದಲ್ಲಿ ಕಠಿಣವಾಗಿ ಗುಂಡುಹಾರಿಸಿ ಹಲ್ಲೆಮಾಡಿದರು. ಆದರೆ ರಷ್ಯನರು ಅವರನ್ನು ಓಡಿಸಿ ೮೦೫ ಮಂದಿಯನ್ನು ಸೆರೆಹಿಡಿದರು. ಇತರ ಕಡೆಗಳಲ್ಲಿಯೂ ರಷ್ಯನರಿಗೆ ಜಯವಾಗಿದೆ. ಕಠಿಣ ಕಾಳಗವಾದನಂತರ ರಷ್ಯನರು ಜೆರ್ನೋವಿಟ್ಜನ್ನು ಸ್ವಾಧೀನಮಾಡಿಕೊಂಡರು. ಶತ್ರುಗಳು ರುಮೇನಿಯಾದ ಕಡೆ ಓಡುತ್ತಿದ್ದಾರೆ. ಫ್ರೆಂಚ ರಣರಂಗದಿಂದ ಬಂದಿದ್ದ ಜರ್ಮನ ಸೈನಿಕರೂ ಈ ಕದನದಲ್ಲಿ ಸೇರಿದ್ದರು. ಜೂನ್ ತಾ ೫ನೇ ದಿ ೭೧,೦೦೦ ಶತ್ರುಸೈನಿಕರೂ ೮೩ ಫಿರಂಗಿಗಳೂ ೩೬ ಯಂತ್ರಚಾಲಿತ ಫಿರಂಗಿಗಳೂ ರುಷ್ಯನರ ಕೈಗೆ ಬಿದ್ದಿರುತ್ತವೆ. ರುಷ್ಯನರು ಗೆಲೇಸಿಯದ ಸರಹದ್ದಿನಲ್ಲಿರುವ ರಡ್ಜಿವಿಲೋವನ್ನು ಸ್ವಾಧೀನಮಾಡಿಕೊಂಡಿರುತ್ತಾರೆ.

ಇಟಲಿ ರಣರಂಗದ ಏಶಿಯಾಗೋ ಪ್ರಸ್ತಭೂಮಿಯಲ್ಲಿ ಶತ್ರುಗಳು ವಿಶೇಷ ನಷ್ಟಪಟ್ಟಿರುವರು. ಇಟಲಿಯನರು ಶತ್ರುಗಳಲ್ಲಿ ಬಹಳ ಮಂದಿಯನ್ನು ಸೆರೆಹಿಡಿದಿರುವರು. ತಾ ೧೬ರಲ್ಲಿ ನಡೆದ ಯುದ್ಧದಲ್ಲಿ ೩೦೭ ಮಂದಿ ಶತ್ರುಗಳು ಇಟಲಿಯನರ ಸೆರೆಬಿದ್ದಿರುತ್ತಾರೆ.

~~~~~~

ಉತ್ತರ ಹಿಂದೂಸ್ಥಾನ

~~~~~~

ಜೂನ್ ತಾ ೧೦ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ೪೦೯ ಮಂದಿಗೆ ಪ್ಲೇಗ ಬೇನೆಯು ಸೋಂಕಿ ೩೯೧ ಮಂದಿ ಹತರಾಗಿರುವರು. ಈ ಪೈಕಿ ಮುಂಬಾಯಿಯಲ್ಲಿ ೯೦, ಮದ್ರಾಸ್ ೯ ಬಂಗಾಳ ೧, ಬಿಹಾರ್ ಮತ್ತು ಒರಿಸ್ಸ ೮, ಸಂಯುಕ್ತ ಸಂಸ್ಥಾನ ೯; ಪಂಜಾಬು ೩೯, ಬರ್ಮ ೧೦೮, ಮಧ್ಯ ಸಂಸ್ಥಾನ ೧; ಮೈಸೂರು ೫೪; ಹೈದರಾಬಾದ್ ೧೯, ಕಾಶ್ಮೀರ ೩ ಮರಣಗಳಾಗಿರುವವು.

~~~~~~

ಈ ವರ್ಷ ಮಳೆಗಾಲವು ಬೇಗನೇ ಪ್ರಾರಂಭವಾದುದರಿಂದ ಸಮುದ್ರದಲ್ಲಿ ಅನೇಕ ದೋಣಿ ಮತ್ತು ಪತೆಮಾರುಗಳಿಗೆ ಅಪಾಯ ಸಂಭವಿಸಿರುವದು. ಮುಂಬಾಯಿಯಿಂದ ಅಕ್ಕಿ ಇತ್ಯಾದಿ ಬಹುಬೆಲೆಯ ಸಾಮಗ್ರಿಗಳನ್ನು ಗೋವೆಗೆ ಸಾಗಿಸಿಕೊಂಡು ಬರುತ್ತಿದ್ದ ಒಂದು ದೊಡ್ಡ ಪತೆಮಾರು ಈ ಗಾಳಿ ಮಳೆಯಿಂದ ಮುಳುಗಿಹೋಗಿರುತ್ತದೆ. ಮತ್ತೊಂದು ಪತೆಮಾರು ಚಪೋರದ ಬಳಿ ಮುಳುಗಿರುತ್ತದೆ. ಇದರಿಂದ ಸುಮಾರು ೨೦,೦೦೦ ರೂಪಾಯಿಗಳ ನಷ್ಟವಾಗಿರಬಹುದೆಂತ ಅಂದಾಜಾಗಿದೆ. ಇನ್ನೊಂದು ಪತೆಮಾರು ಮಾಲ್ವಾನ್ ಮತ್ತು ವೆಂಗುರ್ಲದ ಮಧ್ಯೆ ಮುಳುಗಿರುತ್ತದೆ. ಇದರಲ್ಲಿ ೩೦,೦೦೦ ರೂಪಾಯಿ ಮೌಲ್ಯದ ಸಾಮಾಗ್ರಿಗಳಿದ್ದವು.

~~~~~~

ಹಿಂದೂಸ್ಥಾನದ ಕೈಗಾರಿಕೆಗಳ ಸಂಬಂಧ ವಿಚಾರ ನಡಿಸುವರೆ ವರಿಷ್ಠ ಸರಕಾರದವರಿಂದ ನೇಮಿಸೋಣಾದ ಕಮಿಷನಿನ ಪ್ರೆಸಿಡೆಂಟರಾದ ಸರ್ ತೋಮಸ್ ಹೊಲ್ಲಂಡ್ ರವರು ಈ ತಿಂಗಳಾಂತ್ಯದಲ್ಲಿ ಸಿಮ್ಲಾದಿಂದ ಹೊರಟು

ರಾಂಚಿ, ಮದ್ರಾಸ್, ಬೆಂಗಳೂರು, ಮುಂಬಾಯಿ, ಮಧ್ಯ ಸಂಸ್ಥಾನಗಳನ್ನು ಸಂದರ್ಶಿಸಿ ಸಪ್ಟೆಂಬರ ತಿಂಗಳಲ್ಲಿ ಸಿಮ್ಲಕ್ಕೆ ಹಿಂತಿರುಗುವರು

~~~~~

ರಂಗೂನಿನ ಒಂದು ರಬ್ಬರ್ ತೋಟದ ಅಸಿಸ್ಟಾಂಟ ಮೆನೇಜರರಾಗಿದ್ದ ಮೆ| ಪಿ. ಮೆಕೊಲ್ಲರ್ ಎಂಬವರು ತನ್ನ ಸಾನಿಯೊಡನೆ ಒಂಗ್ಲೆಯಲ್ಲಿ ಕುಳಿತು ಮಾತನಾಡು ತ್ತಿರುವಾಗ ಯಾರೋ ಕಿಟಿಕಿಯಿಂದ ಗುಂಡು ಹೊಡೆದು ಅವರನ್ನು ಕೊಂದುಬಿಟ್ಟರು ಎಂಬ ವಾರ್ತೆ ಬಂದಿರುತ್ತದೆ. ಮೃತರು ಜನಪ್ರೀತರಾಗಿದ್ದುದರಿಂದ ಈ ಕೊಲೆಗೆ ಕಾರಣ ವೇನೆಂಬದು ಇನ್ನೂ ತಿಳಿದುಬರಲಿಲ್ಲ

~~~~~

ಇಂಡಿಯಾ ಸರಕಾರದವರು ಈ ದೇಶದ ಲೋಹ ಮಾರ್ಗಾಭಿವೃದ್ಧಿ ಮೊದಲಾದ ಕೆಲಸಗಳಿಗೆ ಬೇಕಾಗುವ ಹಣವನ್ನು ಈ ದೇಶದಲ್ಲೇ ಪ್ರಜೆಗಳಿಂದ ಸಾಲಮಾಡಿ ಒದಗಿಸಿಕೊಡುವ ಏರ್ಪಾಡನ್ನು ಕಳೆದ ವರ್ಷದಿಂದ ಮಾಡ ತೊಡಗಿದ್ದಾರೆ ಕಳೆದ ವರ್ಷ ಶೇಕಡಾ ೬½ ಬಡ್ಡಿಯಂತೆ ಸಾಲ ಪಡಕೊಂಡಿದ್ದರು. ಈ ವರ್ಷ ೬ ಕೋಟಿ ರೂಪಾಯಿ ಗಳನ್ನು ವರ್ಷ ೧ಕ್ಕೆ ಸೇಕಡಾ ೪ರಂತೆ ಬಡ್ಡಿಕೊಡುವ ಒಪ್ಪಂದದಿಂದ ನಮ್ಮ ದೇಶದ ಪ್ರಜೆಗಳಿಂದಲೇ ಸಾಲವನ್ನು ತೆಗೆದುಕೊಳ್ಳುವದೆ ಸಿದ್ಧರಾಗಿರುವರು. ಹೀಗೆ ತೆಗೆದು ಕೊಂಡ ಸಾಲವು ೧೯೩೧ರಿಂದ ೧೯೬೦ನೇ ಇಸವಿಯ ಮಧ್ಯದಲ್ಲಿ ತೀರಿಸಲ್ಪಡುವದು. ನಮ್ಮ ದೇಶಕ್ಕೆ ಬೇಕಾದ ಹಣವನ್ನು ಸೀಮೆಯಿಂದ ಸಾಲವಾಗಿ ತೆಗೆದುಕೊಳ್ಳುವ ಪದ್ಧತಿಯಿಂದ ಅದರ ಬಡ್ಡಿಯ ರೂಪವಾಗಿ ಬಹಳ ಹಣವು ವಿದೇಶೀಯರಿಗೆ ಹೋಗುತ್ತಿತ್ತು. ಈ ದೇಶದಲ್ಲಿ ಸಾಲ ಮಾಡುವದರಿಂದ ಬಡ್ಡಿಯ ಹಣವು ಈ ದೇಶೀಯರಿಗೇನೇ ಸಲ್ಲುವಂತಾಯಿತು

~~~~~

ದಕ್ಷಿಣ ಹಿಂದೂಸ್ಥಾನ.

~~~~~

ಇದೇ ತಾ ೧೬ರಲ್ಲು ಮದ್ರಾಸಿನ ನಾಗರಿಕರ ಸಭೆ ಯೊಂದು ವಿಕ್ಟೋರಿಯ ಪಬ್ಲಿಕ್ ಹಾಲಿನಲ್ಲಿ ಕೂಡಿ ಬಂದಿದ್ದಿತು ಮಿಸೆಸ್ ಅನ್ನಿಬಿಸೆಂತರವರಿಂದ ಪ್ರಕಟವಾ ಗುತ್ತಿರುವ "ನ್ಯೂ ಇಂಡಿಯಾ" ಪತ್ರಿಕೆಯಿಂದ ಮದ್ರಾಸ್ ಸರಕಾರದವರು ರೂ. ೨೦೦೦ದ ಜಪ್ತಿ ಕೇಳಿದ ವಿಷಯ ವನ್ನು ವಿರೋಧಿಸುವದೂ ಪ್ರೆಸ್ ಆಕ್ಟನ್ನು ಬಿಲಪಡಿಸ ಬೇಕೆಂತ ಸರಕಾರದವರನ್ನು ಕೇಳಿಕೊಳ್ಳಬೇಕೆಂಬ ನಿರ್ಣ ಯವನ್ನು ಮಾಡುವದೂ ಈ ಸಭೆಕೂಡಿದುದರ ಉದ್ದೇಶ ವಾಗಿತ್ತು ಸಭೆಗೆ ಮದ್ರಾಸಿನ ಅನೇಕ ನಾಗರಿಕರು ಬಂದು ಸೇರಿದ್ದರು. ಪಟ್ಟಣದ ಮತ್ತು ಹೊರಗಣ ಅನೇಕ ಜನರು ಈ ಸಭೆಗೆ ಬಂದಿದ್ದುದರಿಂದ ಸಭಾಸದನವು ತುಂಬಿ ಕೆಲವರು ಹೊರಗೆ ನಿಲ್ಲಬೇಕಾಯಿತು. ಡಾಕ್ಟರ್ ಸರ್ ಸುಬ್ರಮಣ್ಯ ಅಯ್ಯರ್‌ರವರು ಈ ಸಭೆಗೆ ಅಧ್ಯಕ್ಷರಾಗಿ ದ್ದರು. ಅಧ್ಯಕ್ಷರು ಪ್ರಥಮ ತಾ ಕಿಚನರ್ ಪ್ರಭುಗಳ ಮರಣದಿಂದುಂಟಾದ ವಿಷಾದವನ್ನು ತೋರ್ಪಡಿಸುವ ನಿರ್ಣಯವನ್ನು ಸಭೆಯಲ್ಲಿ ಮಾಡಿದರು. ಅನಂತರ ಈ ಸಭೆಕೂಡಿದುದರ ಉದ್ದೇಶವನ್ನು ಕಾಲೋಚಿತ ಭಾಷಣ ದಿಂದ ಸಭಿಕರಿಗೆ ತಿಳಿಯಪಡಿಸಿದರು. ಬಳಿಕ ಮ| ರಾ| ಎಲ್. ಎ. ಗೋವಿಂದ ರಾಘವ ಐಯ್ಯರರು ಪತ್ರಿಕಾ ಸ್ವಾತಂತ್ರ್ಯಕ್ಕೆ ಉಂಟಾಗಿರುವ ಭಂಗವನ್ನೂ ಸದ್ಯದಲ್ಲಿ "ನ್ಯೂ ಇಂಡಿಯಾ" ಪತ್ರಿಕೆಯ ಕುರಿತು ಸರಕಾರದಿಂದ ಕೊಡಲ್ಪಟ್ಟ ಅಪ್ಪಣೆಯಿಂದ ತಮ್ಮಲ್ಲಿ ಉಂಟಾದ ಅಸಮ್ಮ ತವನ್ನೂ ತೋರ್ಪಡಿಸುವ ನಿರ್ಣಯವನ್ನು ಸಭೆಯ ಮುಂದಿಟ್ಟು ಪ್ರೆಸ್ ಆಕ್ಟಿನಿಂದ ಉಂಟಾಗಿರುವ ಸಾಧಕ ಬಾಧಕಗಳನ್ನು ಕುರಿತು ಅರ್ಥಗರ್ಭಿತವಾದ ಭಾಷಣ ವನ್ನು ಮಾಡಿದರು. ಹೀಗೆ ಸಭಿಕರ ಅನುಮೋದನೆಯಿಂದ ಈ ನಿರ್ಣಯವು ಮಂಜೂರಾಯಿತು. ಅನ್ನಿಬಿಸೆಂತರು ಸಭಿಕರಿಗೆ ವಂದನೋಕ್ತಿಗಳನ್ನು ನುಡಿದನಂತರ ಅಂದಿನ ಸಭೆಯ ಕೆಲಸಗಳು ಮುಗಿದವು

~~~~~

ಮದ್ರಾಸ್ ಸಂಸ್ಥಾನದ ಬಂದಿಖಾನೆಗಳ ೧೯೧೫ನೇ ಇಸವಿಯ ವರದಿಯು ಬಂದಿಖಾನೆಗಳ ಇನ್ಸ್‌ಪೆಕ್ಟರ್ ಜನ ರಲ್‌ರವರಿಂದ ಪ್ರಕಟಿಸೋಣಾಗಿರುವದು ಅಪ್ರಾಯಸ್ಥ ಕೈದಿಗಳ ವಿಷಯ ಹೆಚ್ಚಿನ ಜಾಗ್ರತೂಕತೆ ತಕ್ಕೊಳ್ಳಲ್ಪಟ್ಟಿ ರುವದೆಂದು ಈ ವರದಿಯಲ್ಲಿ ತೋರಿಬರುವದು ಒಂದು ಮಹತ್ವದ ವಿಷಯವಾಗಿದೆ. ಅಪ್ರಾಯಸ್ಥ ಕೈದಿಗಳು ಅಂದರೆ ೧೬ ವರ್ಷದ ಕೆಳಗಿನವರು ತಕ್ಸೀರು ನಡಿಸಿದರೆ ಅಂಥವರನ್ನು ಬಂದಿಖಾನೆಗೆ ಕಳುಹಿಸಿಕೊಡಕೂಡದೆಂಬ ಕಾನೂನನ್ನು ಸರಕಾರದವರು ಬೇಗನೇ ಜಾರಿಗೆ ತರುವ ರಾಗಿದ್ದಾರೆಂಬ ನಿರೀಕ್ಷೆಯೂ ಇದೆ. ಅಪ್ರಾಯಸ್ಥರನ್ನು ಬಂದಿಖಾನೆಗೆ ಕಳುಹಿಸದ ಹಾಗೆ ನೋಡಬೇಕೆಂತ ಸರಕಾ ರದವರು ಆಯಾ ಮೆಜಿಸ್ಟ್ರೇಟರಿಗೆ ಕಳುಹಿಸಿಕೊಟ್ಟ ಸೂಚನೆಗೆ ಮೆಜಿಸ್ಟ್ರೇಟರುಗಳು ಬದಷ್ಟು ಮಟ್ಟಿಗೆ ಸಿಗಾ ಕೊಟ್ಟಿರುವರೆಂಬದು ಕಳೆದ ವರ್ಷದ ಈ ಸಂಖ್ಯೆಯಿಂದ ತೋರಿಬರುತ್ತದೆ. ೧೯೧೫ನೇ ಇಸವಿಯಲ್ಲಿ ೧೬ ವರ್ಷದ ಕೆಳಗಿನ ೩೩ ಮಂದಿ (೩೦ ಹುಡುಗರು, ೩ ಹುಡುಗಿ ಯರು) ಮಾತ್ರ ಬಂದಿಖಾನೆಯ ಶಿಕ್ಷೆ ಹೊಂದಿರುವರು. ಹಿಂದಿನ ವರ್ಷದಲ್ಲಿ ೧೬ ವರ್ಷದ ಕೆಳಗಿನ ೧೧೯ ಮಂದಿಯೂ ೧೦ ವರ್ಷ ವಯಸ್ಸಿನ ೪೮ ಬಾಲಕರೂ ಬಂದಿಖಾನೆಯ ಶಿಕ್ಷೆ ಹೊಂದಿದ್ದರು. ಅದರಲ್ಲಿಯೂ ೧೯೧೪ನೇ ಇಸವಿಯ ೩೩ ಮಂದಿಯಲ್ಲಿ ೧೨ ಮಂದಿ (೯ ಹುಡುಗರು, ೩ ಹುಡುಗಿಯರು) ಮಾತ್ರ ಬಂದಿಖಾನೆಯ ಶಿಕ್ಷೆ ಅನುಭವಿಸಿದರು. ಉಳಿದವರನ್ನು ಚೆಂಗಲ್ಪಟ್ಟಿನ ರಿಫೋರ್ಮೆಟರಿ ಶಾಲೆಗೆ ಕಳುಹಿಸಿ ಕೊಟ್ಟಿರುತ್ತಾರೆ. ೧೬—೨೧ ವರ್ಷ ವಯಸ್ಸಿನ ಶಿಕ್ಷೆಹೊಂದಿದ ಹುಡುಗರ ಸಂಖ್ಯೆ ಸುಮಾರು ೧೯೧೧ನೇ ಇಸವಿಯಷ್ಟು ಆಗಿದೆ. ಅಂದರೆ ೧೧೩. ಬಂದಿಖಾನೆಯಲ್ಲಿ ಈ ಹುಡುಗರಿಗೆ ೨ ತಾಸು ಪಾಠ ಕಲಿಸುವದು, ಒಂದು ತಾಸು ವ್ಯಾಯಾಮ, ೫ ತಾಸು ಕೈಗಾರಿಕೆಯ ತರ್ಬೇತುಕೊಡುವ ಏರ್ಪಾಡು ಮಾಡಲ್ಪಟ್ಟಿರುತ್ತದೆ ನೇಯುವದು, ಮರದ ಕೆಲಸ, ಕಬ್ಬಿಣದ ಕೆಲಸ, ಹೊಲಿಯುವದು, ಕುಕ್ಕೆಹೆಣೆಯುವದು ಮೊದಲಾದ ಕೈಗಾರಿಕೆಗಳು ಕಲಿಸಲ್ಪಡುತ್ತಿವೆ ಬಂದಿ ಖಾನೆಗೆ ಸೇರಿಸಲ್ಪಟ್ಟ ಕೈದಿಗಳ ಸಂಖ್ಯೆ ೯೪,೯೫೫ ಆಗಿರು ವದು ಅಂದರೆ ೧೯೧೪ನೇ ಇಸವಿಗಿಂತಲೂ ೪೯೦೦ ಮಂದಿ ಹೆಚ್ಚಿದಂತಾಯಿತು. ಸಿವಿಲ್ ಕೈದಿಗಳ ಸಂಖ್ಯೆಯು ೩೬೯೩ರಿಂದ ೪೨೦೬ಕ್ಕೆ ಹೆಚ್ಚಿದೆ. ಈ ಸಂಖ್ಯೆಯು ಹೆಚ್ಚಲು ಯುದ್ಧದಿಂದ ಬಂದೊದಗಿದ ತೊಂದರೆಗಳಾಗಿರ ಬಹುದೆಂತ ವರದಿಯಲ್ಲಿ ಹೇಳೋಣಾಗಿದೆ. ಡಿಸ್ಟ್ರಿಕ್ಟ ಮತ್ತು ಸೆಂಟ್ರಲ್ ಬಂದಿಖಾನೆಯಲ್ಲಿರುವ ಕೈದಿಗಳಿಗೆ ಪ್ರಾಥಮಿಕ ವಿದ್ಯಾಭ್ಯಾಸ ಕೊಡುವ ಏರ್ಪಾಡು ಮಾಡಿ ರುತ್ತದೆ. ಬಂದಿಖಾನೆ ಶಾಲೆಯ ಉಪಾಧ್ಯಾಯರಿಗೂ ಒಳ್ಳೇ ಸಂಬಳ ಸಿಗುತ್ತದೆ. ವೆಲ್ಲೂರು ಮತ್ತು ವಿಶಾಖ ಪಟ್ಟ ಣದ ಬಂದಿಖಾನೆಯಲ್ಲಿರುವ ಹೆಂಗಸರಿಗೆ ಪಟ್ಟಣದ ಕೆಲವು ಸಂಭಾವಿತ ಮಹಿಳೆಯರು ಉಪನ್ಯಾಸಗಳನ್ನು ಕೊಡುವ ಏರ್ಪಾಡೂ ಇದೆ. ಕಳೆದ ವರ್ಷದಲ್ಲಿ ಬಂದಿಖಾನೆಗಳಲ್ಲಿ ಒಟ್ಟಿಗೆ ೧೩,೦೪,೫೦೩ ರೂಪಾಯಿ ಖರ್ಚಾಗಿರುವದು. ೧೯೧೪ನೇ ಇಸವಿಗಿಂತಲೂ ೩೪,೦೫೫ ರೂಪಾಯಿ ಖರ್ಚು ಕಮ್ಮಿಯಾದಂತಾಯಿತು ತಲೆ ೧ಕ್ಕೆ ರೂ ೭೪-೧೧-೧ ಖರ್ಚಾದಂತಾಯಿತು. ತಲೆ ೧ಕ್ಕೆ ಆಹಾರದ ಖರ್ಚು ರೂ. ೩೯—೧೨—೭ಯಿಂದ ರೂ ೪೨—೧೧—೭ಕ್ಕೆ ಹೆಚ್ಚಿದೆ. ಬಂದಿಖಾನೆಯಿಂದ ರೂ. ೧,೬೨,೩೫೩ ಉತ್ಪ ತ್ತಿಯಾಗಿರುವದು. ೧೯೧೪ನೇ ಇಸವಿಗಿಂತ ೬೩೫೨ ರೂ. ಹೆಚ್ಚಿಗೆ ಉತ್ಪತ್ತಿಯಾದಂತಾಯಿತು. ಬಂದಿಖಾನೆಯ ಆರೋಗ್ಯಸ್ಥಿತಿಯೂ ತೃಪ್ತಿಕರವಾಗಿಯೇ ಇತ್ತು. ಬಂದಿ ಖಾನೆಯಲ್ಲಿ ಮೃತಪಟ್ಟವರ ಸಂಖ್ಯೆ ೧೯೧೪ನೇ ಇಸವಿ ಯಷ್ಟೆ ಆಗಿರುವದು ಅಂದರೆ ೧೩೪ ಮಂದಿ. ಬಂದಿಖಾನೆ ಯಿಂದ ಬಿಡುಗಡೆಹೊಂದಿದ ಶೇಕಡಾ ೬೯ ಮಂದಿಯ ಭಾರವು ಹೆಚ್ಚಿರುತ್ತದೆ. ಶೇಕಡಾ ೧೪ ಮಂದಿಯ ಭಾರವು ಕಡಿಮೆಯಾಗಿರುತ್ತದೆ

~~~~~

ಮದ್ರಾಸ್ ಹೈಕೋರ್ಟಿನ ಚೀಫ್ ಜಸ್ಟಿಸರಾದ ಸರ್ ಜ್ಹೋನ್ ವಾಲೆಸರವರು ರಜೆಯ ಮೇಲಿರುವದರಿಂದ ಜಸ್ಟಿಸ್ ಅಬ್ದುಲ ರಹಿಮಾನರವರು ಆಕ್ಟಿಂಗ್ ಚೀಫ್ ಜಸ್ಟಿಸರಾಗಿ ನೇಮಿಸಲ್ಪಟ್ಟಿರುತ್ತಾರೆ

~~~~~

ಇದೇ ಕಳೆದ ತಾ ೧೧ನೇ ತಾರೀಕು ತಿರುಚಿನಾಪಳ್ಳಿ ಯಲ್ಲಿ ಒಂದು ದಕಾಯಿತಿಯು ನಡೆದಿರುವದು. ಮಾಜಿ ಚಿದಂಬರ ರೆಡ್ಡಿಯವರ ವಿಧವೆಯ ಮನೆಗೆ ದಕಾಯಿತರು ನುಗ್ಗಿ ಬಹಳ ಕ್ರಯ ಬಾಳುವ ಆಭರಣಗಳನ್ನೂ, ನಗದಿ ಹಣವನ್ನೂ ಸುಲಿಗೆಮಾಡಿಕೊಂಡು ಹೋಗಿರುತ್ತಾರೆ. ದಕಾಯಿತರು ಆ ವಿಧವೆಯಿಂದ ಹಣವನ್ನೂ ಚಿನ್ನಾಭರಣ ಗಳನ್ನೂ ಸುಲಕೊಂಡ ನಂತರ ಖಜಾನೆ ಪೆಟ್ಟಿಗೆಯ ಬೀಗದ ಕೈಯನ್ನು ಕೇಳಿದರಂತೆ. ಆದರೆ ಹೆಂಗಸು ಕೊಡಲೊಪ್ಪ ದ್ದರಿಂದ ದಕಾಯಿತರು ನಾನಾ ಬಗೆಯಲ್ಲಿ ಹಿಂಸೆಪಡಿಸಿ, ಅವಳಿಂದ ಬೀಗದಕೈಯನ್ನು ಎಳಕೊಂಡರೂ ಖಜಾನೆ ಪೆಟ್ಟಿಗೆಯ ಬೀಗ ತೆರೆಯಲು ಅವರಿಗೆ ಅಸಾಧ್ಯವಾಯಿತು ನಂತರ ವಿಧವೆಯನ್ನು ಕೊಂದು ಹಾಕಿದರು. ಮೃತಳ ಮಗ ರಾ| ರಾಮನಾಥನ್ ರೆಡ್ಡಿಯವರು ಏನೋ ಕೆಲಸದ ಮೇಲೆ ಶ್ರೀರಂಗ ನಗರಕ್ಕೆ ಹೋಗಿದ್ದರು. ದಕಾಯಿತರ ಪತ್ತೆಯಾಗಲಿಲ್ಲ.

~~~~~

ದಕ್ಷಿಣ ಕನ್ನಡ.

~~~~~

P. D. LIMA.

Dental Surgeon, Mangalore.

~~~~~

ಇವರು ಈಗ ತಾನೇ ಸರ್ಕೀಟಿನಿಂದ ಹಿಂತೆರಳಿ ಬಂದಿ ರುವರು. ಅಮೇರಿಕದಿಂದ ಭಾರೀ ಕೃತಕ ದಂತಗಳನ್ನು ತರಿ ಸಿಕೊಂಡಿಟ್ಟಿರುವರು. ಈ ಸುಸಮಯವನ್ನು ಕಳಕೊ ಳ್ಳಬೇಡಿರಿ. ಮಿತವಾದ ದರದಲ್ಲಿ ಹಲ್ಲುಗಳನ್ನು ಸರಿಪಡಿ ಸಿಕೊಡುವರು.

ಪಿ. ಡಿ. ಲಿಮಾ.

ದಂತ ವೈದ್ಯರು, ಒಡೆಯರರ ಶಾಪಿನ ಬಳಿ,

ಮಂಗಳೂರು.

~~~~~
~~~~~

ಕರ್ಣಾಟಕ ಸಾಹಿತ್ಯ ಪರಿಷತ್ತು, ಬೆಂಗಳೂರು.

(೧) ೧೯೧೬ನೆಯ ಎಪ್ರೀಲು ಮತ್ತು ಮೇ ತಿಂಗಳುಗಳಲ್ಲಿ ಈ ಕೆಳಗೆ ತಿಳಿಸಿರುವಂತೆ ಪರಿಷತ್ತಿನ ಸದಸ್ಯರುಗಳಿಂದ ಚಂದಾ ವಸೂಲಾಗಿರುವುದು.

ಮ| ರಾ| ಸಿ ಆರ್ ನರಸಿಂಹಯ್ಯಂಗಾರರವರು ಕುಂದೂರು ರೂ 12—0—0, ಮ| ರಾ| ಎಸ್ ಜಿ ಗೋವಿಂದರಾಜ ಅಯ್ಯಂಗಾರರವರಿಂದ ರೂ 4—0—0; ಮ| ರಾ| ಟಿ ವೆಂಕೋಬ ರಾವ್ ಬಿ ಎ ಯವರಿಂದ ರೂ. 12—0—0, ಮ| ರಾ| ರಾಜಮಂತ್ರ ಪ್ರವೀಣ, ಎಚ್ ವಿ ನಂಜುಂಡಯ್ಯ, ಎಂ ಎ ಎಂ. ಎಲ್ ಸಿ ಐ ಇ ಯವರಿಂದ ರೂ 12-0-0, ಮ| ರಾ| ಬಿ ದಾಸಪ್ಪ ಬಿ ಎ ಯವರಿಂದ ರೂ 12—0—0, ಮ| ರಾ| ಆರ್ ಎಚ್ ದೇಶಪಾಂಡೆ ಎಂ ಎ ಯವರಿಂದ ರೂ. 31—6—7; ಡಾಕ್ಟರ್ ಪಿ ಎಸ್. ಅಚ್ಯುತರಾವ್ ಎಲ್ ಎಮ್. ಮತ್ತು ಎಸ್ ಯವರಿಂದ ರೂ 25—0—0, ಮ| ರಾ| ಆರ್ ರಘುನಾಥರಾವ್, ಬಿ. ಎ. ಯವರಿಂದ ರೂ. 25-0-0, ಮ| ರಾ| ಸಿ ಶೇಷಾಚಾರ್ ಬಿ. ಎ. ಯವರಿಂದ ರೂ 4—0—0 ಮ| ರಾ| ಡಿ. ತೋಂಗಾಡಿಯಪ್ಪನವರಿಂದ ರೂ. 25—0—0, ಮ| ರಾ| ಎಂ. ವೆಂಕಟ ಕೃಷ್ಣಯ್ಯನವರಿಂದ ರೂ. 12—0—0, ಮ| ರಾ| ಬಿ ಸುಬ್ಬರಾವ್, ಬಿ ಎ ಯವರಿಂದ ರೂ 25 0-0 ಮ| ರಾ| ಪಿ. ಎಸ್. ಸಂಜೀವರಾಯರಿಂದ ರೂ 4—0—0, ಮ| ರಾ| ಎಚ್. ಕೃಷ್ಣ ಶಾಸ್ತ್ರಿಗಳಿಂದ ರೂ. 5—0—0, ಮ| ರಾ| ಎಸ್. ಆದಿಮೂರ್ತಿಯವರಿಂದ ರೂ 4—0—0; ಮ| ರಾ| ಆರ್ ಬಿ. ಫೋಟೆದಾರರವರಿಂದ ರೂ 5—0—0, ಮ| ರಾ| ರಾವ್ ಬಹದ್ದೂರ್, ಎಂ. ಶಾಮರಾವ್ ಎಂ. ಎ ಯವರಿಂದ ರೂ 12—0—0, ಮ| ರಾ| ಬಿ. ಎಸ್. ಬೆಟ್ಟಿಗೆರೆಯವರಿಂದ ರೂ. 10—0—0; ಮೊತ್ತ ರೂ. 239-6-7,

1916ನೆಯ ಮಾರ್ಚಿ ತಿಂಗಳ ಕಡೆವರೆಗೆ ವಸೂಲಾಗಿದ್ದ ಹಣ ರೂ 663—9—5, ಇದು ವರೆಗೆ ವಸೂಲಾಗಿರುವ ಒಟ್ಟು ಮೊಬಲಗು ರೂ 903—0—0

(೨) ಪರಿಷತ್ತಿಗೆ ಹೊಸದಾಗಿ ಸದಸ್ಯರನ್ನೂ ಸೇರಿಸುವದಕ್ಕಾಗಿ ಈ ಕೆಳಗೆ ಕಾಣಿಸಿರುವ ದೊಡ್ಡ ಮನುಷ್ಯರುಗಳಿಗೆ ಅಧಿಕಾರ ಕೊಡಲ್ಪಟ್ಟಿರುವುದು.

ಮ| ರಾ| ಆರ್. ಎಚ್ ದೇಶಪಾಂಡೆ, ಎಂ ಎ ಪೆನ್‌ಷನ್ಡ್ ಹೆಡ್ ಮಾಸ್ಟರು ಧಾರವಾಡ. ಮ| ರಾ| ವಿ. ಬಿ. ಆಲೂರು ಬಿ ಎ ಎಲ್. ಎಲ್ ಬಿ ಪ್ಲೀಡರು ಧಾರವಾಡ. ಮ| ರಾ| ಆರ್. ಎ ಜಹಗೀರುದಾರ್, ಎಂ ಎ ಎಲ್. ಎಲ್, ಬಿ. ಹೈಕೋರ್ಟು ವಕೀಲ ಮುಂಬೈ. ಮ| ರಾ| ಆರ್. ಬಿ. ಫೋಟೆದಾರ್, ಸ್ಕೂಲ್ ಮಾಸ್ತರು ಬೆಳಗಾಂ. ಪಿ ಜಿ. ಹಳಕಟ್ಟಿ ಬಿ. ಎ. ಎಲ್. ಎಲ್. ಬಿ ಪ್ಲೀಡರ್, ಬಿಜಾಪುರ. ಮ| ರಾ| ಪಂಡಿತ ಪುಂಡರೀಕ ನಾಯಕ್ ಶಿರಸಿ ಕಾರವಾರ್ ಡಿಸ್ಟ್ರಿಕ್ಟ್. ಮ| ರಾ| ಬಿ. ರಾಮರಾವ್, ಎಂ. ಎ ಎಲ್. ಎಲ್. ಬಿ ಗವರ್ನಮೆಂಟ್ ಟ್ರಾನ್ಸ್‌ಲೇಟರ್ ಮದರಾಸು. ಮ| ರಾ| ಆರ್ ಟಾಟ ಎಂ ಎ. ಎಲ್. ಟಿ ಲೆಕ್ಚರರ್, ಸೈದಾಪೇಟೆ ಮ| ರಾ| ಪಿ. ಮಂಗೇಶರಾಯರು ಬಿ ಎ, ಎಲ್. ಟಿ. ಸಬ್. ಅಸಿಸ್ಟಾಂಟು ಇನ್ಸ್‌ಪೆಕ್ಟರ್ ಮಂಗಳೂರು ಮ| ರಾ| ಎ ವೆಂಕಟರಾವ್ ಬಿ ಎ ಎಲ್. ಟಿ ಕನ್ನಡ ಪಂಡಿತರು ಸೈಂಟ್ ಅಲೋಸಿಯಸ್ ಕಾಲೇಜ್, ಮಂಗಳೂರು. ಮ| ರಾ| ಬಿ ಆನಂದರಾಯರು ಪ್ಲೀಡರು ಪುತ್ತೂರು ಮ| ರಾ| ರಾಜಗೋಪಾಲ ಕೃಷ್ಣರಾಯರು, ಎಡಿಟರ್, ಶ್ರೀ ಕೃಷ್ಣ ಸೂಕ್ತಿ, ಉಡಿಪಿ

ಬೆಂಗಳೂರು, 19—6—1916. } ಬಿ. ಕೃಷ್ಣಪ್ಪ. ಗೌರವ ಕಾರ್ಯದರ್ಶಿ.

~~~

ಕುಂದಾಪುರ:— ಕಲಿಯುಗದ ಭೀಮನೆಂದೂ ವಾಲಿ ಎಂದೂ ಕರೆಯಲ್ಪಡುವ ಪ್ರೊಫೆಸ್ಸರ್ ರಾಜಾ ಸ್ಯಾಂಡೊರವರು ಇದೇ ತಿಂಗಳ ತಾರೀಕು ೧೮ನೇ ಆದಿತ್ಯವಾರ ದಿನ ಇಲ್ಲಿಯ ಟೌನು ಹೋಲಿನಲ್ಲಿ ತಮ್ಮ ದೇಹ ಶಕ್ತಿಯನ್ನು ಆಶ್ಚರ್ಯಕರವಾಗಿ ಪ್ರೇಕ್ಷಕರು ಸಂತೋಷಪಡುವಂತೆ ತೋರಿಸಿದರು.

ಶಿಕೆಕಾಲದ ರಜೆ ಸಂಬಂಧ ಮುಚ್ಚಲ್ಪಟ್ಟ ಇಲ್ಲಿಯ ಮುನ್ಸಿಫ ಕೋರ್ಟು ಇದೇ ತಿಂಗಳ ತಾ. ೧೯ನೇ ಸೋಮವಾರ ತೆರೆಯಲ್ಪಟ್ಟಿತು. ಹೊಸದಾಗಿ ಇಲ್ಲಿಗೆ ವರ್ಗಾಯಿಸಲ್ಪಟ್ಟ ಡಿಸ್ಟ್ರಿಕ್ಟ ಮುನ್ಸಿಫರಾದ ಮ| ರಾ| ರಾ| ಕೆ. ಬಾಳಾಜಿರಾಯರು ಚಾರ್ಜನ್ನು ವಹಿಸಿಕೊಂಡರು.

~~~

ವಿಟ್ಲ:— ಇಲ್ಲಿಯ ಮೇಲಿನ ಪೇಟೆಯ ಸೇಕುಂಞ್ಞಬ್ಯಾರಿ ಎಂಬವನು ಒಂದು ಕೆರೆಯ ಒಂದೇ ಕಲ್ಲಿನ ಮದ್ದು ಹಾಕಿ ಒಡೆಯುವಾಗ್ಯೆ ಅಕಸ್ಮಾತ್ತಾಗಿ ಮದ್ದು ಒಡೆದು ಬಲಗೈಯು ಬಹಳ ಜಖಂ ಆಗಿ ಬಹಳ ಮೋಸಂಡ ಸ್ಥಿತಿಯಲ್ಲಿದ್ದನು ಇಲ್ಲಿಗೆ ಒರ್ವರಿಂದ ರಜೆಯಲ್ಲಿ ಬಂದಿದ್ದ ಮ| ರಾ| ರಾ| ಸಬ್ ಅಸಿಸ್ಟೆಂಟು ಸರ್ಜನ್ ಕೆ ಕೃಷ್ಣರಾಯರು ಬಹಳ ಪ್ರಯತ್ನಪಟ್ಟು ಸದರಿಯವನನ್ನು ಗುಣಮಾಡಿದರೆಂತ ತಿಳಿಸಲು ಸಂತೋಷಪಡುವೆವು

~~~

ಹೊಸದುರ್ಗ:— ಮಳೆಯು ಬಹಳವಾಗಿ ಸುರಿಯುತ್ತದೆ ಈಗಲೇ ಈ ಪ್ರಕಾರ ಮಳೆ ಬಂದರೆ ಪ್ರಕೃತದ ಬೆಳಗೆ ಹ್ಯಾಗೂ ಕೇಡಷ್ಟೆ ಮುಂದೆ ಅವಶ್ಯವಿರುವ ಸಮಯ ಎಲ್ಲಿಯಾದರೂ ಶೂನ್ಯವಾಗುತ್ತದೋ ಎಂಬ ಹೆದರಿಕೆಯು ಬೇಸಾಯಗಾರರಿಗೆ ಹಿಡಿದದೆ ಧಾನ್ಯ ದವಸಗಳ ಬೆಲೆ ಪವಂಚ ಮಾಳಿಗೆ ಮುಟ್ಟೋ ಸಾಧಿ ಏರುತ್ತಾ ಬರುತ್ತದೆ.

ಉದರ ಪೋಷಣೆಗಾಗಿ ಕೃಷಿ ಗದ್ದೆಗಳಿಗೆ ಕೆಲಸಕ್ಕೆ ಹೋದ ಹೆಂಗಸರು ತಮ್ಮ ಚಿಕ್ಕ ಮಕ್ಕಳನ್ನು ಮನೆಯಲ್ಲಿ ಬಿಟ್ಟು ಹೋಗುವ ವಾಡಿಕೆ ಏನೂ ವಿಶೇಷವಲ್ಲ. ಅಂಥವರ ಪೈಕಿ ಕಾಂಞಂಗಾಡ ಗ್ರಾಮದ ೩ ಮಕ್ಕಳು ಆಡುತ್ತಾ ಒಂದು ನೀರಿನ ಹೊಂಡದಲ್ಲಿ ಅಕಸ್ಮಾತ್ತಾಗಿ ಬಿದ್ದು ಮೃತಪಟ್ಟದಾಗಿ ಈಗಲೇ ವರ್ತಮಾನ ಬಂದಿರುತ್ತೆ

~~~

ಕಾರ್ಕಳ:— ಕಾರ್ಕಳ ಕಸಬೆಯಲ್ಲಿರುವ ಹಸುವಿಯಾ ಸಾಹೇಬ ಎಂಬವನು ಅನೇಕಾವರ್ತಿ ಶಿಕ್ಷೆಗೆ ಗುರಿಯಾಗಿಯೂ ಕೋಡಿಪಟ್ಟಿಗೆ ದಾಖಲಾಗಿಯೂ ಈಗ ಸದರಿ ಕಾರ್ಕಳ ಸಬ್ ಜೈಲಿನಲ್ಲಿ ಇರುತ್ತಾನೆ ಸದರಿಯವನು ಇದೇ ಕಳೆದ ತಾ. ೮ನೇ ಬೆಳಿಗ್ಯೆ ೭| ಗಂಟೆ ಸಮಯಕ್ಕೆ ಪೋಲೀಸಿನವರು ಆತನ ಕಾಲಿಗೆ ಸಂಕೋಲೆ ಹಾಕಿಕೊಂಡು ಪಾಯಖಾನೆಗೆ ತಂದಲ್ಲಿ ಕಾಲಿನ ಸಂಕೋಲೆಯನ್ನು ಕಳಚಿಹಾಕಿ ಪೋಲೀಸಿನವರನ್ನು ದೂಡಿಹಾಕಿ ಓಡಿಹೋದನು ಸದರಿಯವನು ಅನೇಕ ಎತ್ತರದ ಗೋಡೆಗಳನ್ನು ದಾಟಿ ಓಡಿಹೋಗುವ ಸಮಯದಲ್ಲಿ ಕಾರ್ಕಳ ತಾಲೂಕು ಕಚೇರಿಯ ಪ್ಯಾದೆ ಬೋಳಾರ ಓಬಯ್ಯನು ಆತನ ಬೆನ್ನಟ್ಟಿಕೊಂಡು ಸುಮಾರು ೨ ಫರ್ಲೋಂಗ್ ದೂರದಲ್ಲಿ ಅವನನ್ನು ಹಿಡಿದು ಪೋಲೀಸಿನವರ ವಶ ಕೊಟ್ಟಿರುತ್ತಾನೆ. ಪೋಲಿಸ್ ಆಫೀಸರರು ಈ ಪ್ಯಾದೆಗೆ ಏನಾದರೂ ಬಹುಮಾನಕ್ಕೆ ಸಿಪಾರಸು ಮಾಡದಿರಲಾರರೆಂದು ನಂಬಿರುವೆವು

~~~

ಕುಂಬಳೆ:— ಇಲ್ಲಿಯ ನೂತನ ಬೋರ್ಡು ಬಾಲಿಕಾ ಪಾಠಶಾಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚಾಗಿರುವುದರಿಂದ ಅಸಿಸ್ಟಾಂಟ ಮಿಸ್ಟ್ರೆಸ್ ಮತ್ತು ಬೋರ್ಡು ಹಲಿಗೆಗಳು ವಗೈರ ಎಲ್ಲಾ ಸಾಹಿತ್ಯಗಳ ಅಗತ್ಯವಿರುವುದರಿಂದ ಮೇಲಾಫೀಸರವರು ಇವನ್ನು ತ್ವರ್ಯ ಒದಗಿಸಿಕೊಡಬೇಕಾಗಿದೆ.

ಗಾಡಿ ಚೌಕದ ಲಗ್ತವಿದ್ದುವ ಶೇಂದಿ ಅಂಗಡಿಯನ್ನು ಪೆಡಾಲ ರಸ್ತೆಗೆ ವರ್ಗಾಯಿಸಿದ್ದು ಅನುಕೂಲವಾಗಿಯದೆ. ಗಾಡಿಗಳನ್ನು ರಸ್ತೆ ಕಿನಾರೆಯಲ್ಲಿ ನಿಲ್ಲಿಸದಂತೆ ನಿರ್ಬಂಧಿಸುವರೆ ಸದರಿ ಗಾಡಿ ಚೌಕಕ್ಕೆ ದರೆ ಹಾಕಿಸುವದು ಅತೀ ಅವಶ್ಯ.

~~~

ಸಂಪಾಜೆ:— ಘಾಟಿ ಬುಡವಾದ ಸಂಪಾಜೆಯಲ್ಲಿ ಸರಕಾರದವರಿಂದ ಕಟ್ಟಿಸಲ್ಪಟ್ಟ ಹೊಸ ಶಾಲಾ ಕಟ್ಟಡ ಪ್ರವೇಶವು ಇದೇ ತಾ ೧೪ರಲ್ಲು ಅತಿ ವಿಜೃಂಭಣೆಯಿಂದ ಜರಗಿರುತ್ತದೆ ಊರಿನ ಮುಖಂಡರೂ, ಇತರ ಸದ್ಗೃಹಸ್ಥರೂ ಈ ಕಾರ್ಯದಲ್ಲಿ ಪಾಲು ತಕ್ಕೊಂಡು ವಿದ್ಯಾರ್ಥಿಗಳ ಸಂತೋಷದಲ್ಲಿ ಸೇರಿದ್ದರು.

~~~

ಮಂಗಳೂರು

ಇಲ್ಲಿ ಮಾಜಿ ಡಿಸ್ಟ್ರಿಕ್ಟ್ ಕೋರ್ಟ ಶಿರಸ್ತೇದಾರರಾಗಿದ್ದ ಮ. ರಾ. ಉಳ್ಳಾಲ ನರಸಿಂಗರಾಯರ ಮಗ ಗುಂಟೂರಲ್ಲಿ ಅಸಿಸ್ಟಾಂಟ ಇಂಜಿನಿಯರಾಗಿದ್ದ ಮ. ರಾ. ಯು. ಸಂಜೀವರಾವ್ ಎ. ಎಮ್ ಐ. ಸಿ ಇವರು ಇಲ್ಲಿಯ ಡಿಸ್ಟ್ರಿಕ್ಟ್ ಬೋರ್ಡು ಇಂಜಿನಿಯರಾಗಿ ನೇಮಿಸಲ್ಪಟ್ಟಿರುತ್ತಾರೆ.

ಮದ್ರಾಸ್ ಸೆಕ್ರಟರಿ ಯೇಟ್ ಆಫೀಸಿನಲ್ಲಿ ಕೆಲಸದಲ್ಲಿರುವ ಮ| ರಾ ಬಂಟ್ವಾಳ ಮಾಧವರಾವ್ ಬಿ ಎ ಎಲ್. ಎಲ್. ಬಿ ಯವರು ಕಳೆದ ಎಮ್ ಎಲ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರು

ಮುಲ್ಕಿ ಬಜಾರತ್ತಕರೆಯ ಅಚ್ಯುತ್ತನೆಂಬ ಮಲೆಯಾಳಿಯು ತಾ ೬ನೇ ರಾತ್ರಿ ರಿಟಾಯರ್ಡ ಹೆಡ್ ಕನ್‌ಸ್ಟೇಬಲ ಕೊರಗಪ್ಪನವರ ಮನೆಯಿಂದ ವಸ್ತ್ರ ಇತ್ಯಾದಿಗಳನ್ನು ಕಳವುಮಾಡುತ್ತಿರುವಾಗ ಆ ಮನೆಯವರು ಅವನನ್ನು ಹಿಡಿದಿರುತ್ತಾರೆ ಸದರಿ ಕಳ್ಳನ ಹತ್ತಿರ ಅಂದೇ ಮೆ| ಲೊರೆಸ್ ಸ್ಕೂಲಲ್ಲಿ ಕಳವು ಮಾಡಿದ ಸುಮಾರು ೫೦ ರೂಪಾಯಿಯ ಮಾಲುಗಳು ದೊರಕಿರುವವು. ಪೋಲಿಸಿನವರು ಅವನನ್ನು ರಿಮಾಂಡಿನಲ್ಲಿಟ್ಟಿರುತ್ತಾರೆ

ಇದೇ ತಾ. ೭ನೇ ಬುಧವಾರ ಹಗಲು ೧೨|| ಗಂಟೆಗೆ ಇಲ್ಲಿಯ ಬೀಪಿ ಅಲಾಪಿಯ ಬಳಿ ಒಂದು ಭಯಂಕರವಾದ ಕೊಲೆಯು ನಡೆದಿರುತ್ತದೆ ಒಜಿಲ ಪಳ್ಳಿಬ್ಯಾರಿ ಎಂಬವನು ಉಳ್ಳಾಲ ಪಳ್ಳಿಬ್ಯಾರಿಯನ್ನು ಚೂರಿಯಿಂದ ಕಡಿದುದ್ದರಿಂದ ಉಳ್ಳಾಲ ಪಳ್ಳಿಬ್ಯಾರಿಯು ಕೂಡಲೇ ಮೃತನಾದನೆಂತ ತಿಳಿದುಬರುತ್ತದೆ ಈ ಘೋರ ಕೃತ್ಯವನ್ನು ನಡಿಸಿದ ಒಜಿಲ ಪಳ್ಳಿಬ್ಯಾರಿಯು ಓಡಿಹೋಗುತ್ತಿರುವಾಗ ಪೋಲಿಸ ಜ್ಯಾಂಪನು ಅವನನ್ನು ಮಿಶ್ಶನ್ ಶಾಪಿನ ಬಳಿ ಹಿಡಿದಿರುತ್ತಾನೆ ಈ ಕೊಲೆಯ ಕಾರಣವೇನೆಂಬಿತ್ಯಾದಿ ವಿಷಯಗಳು ಇನ್ನೂ ತಿಳಿದುಬಂದಿರುವದಿಲ್ಲ ಪೋಲಿಸ್ ವಿಚಾರಣೆ ನಡಿಯುತ್ತಿದೆ.

ಇಲ್ಲಿಯ ಡಿಸ್ಟ್ರಿಕ್ಟ್ ಮತ್ತು ಸೆಶ್ಶನ್ಸ್ ಕೋರ್ಟಿಗೆ ಶಿಕೆಕಾಲದ ರಜೆಯು ತೀರಿ ಇದೇ ತಾ. ೧೯ಕ್ಕೆ ಕೋರ್ಟು ಪ್ರಾರಂಭವಾಗಿರುವದು. ಕುಂದಾಪುರ ಹಳ್ಳಿಹೊಳೆ ದಕಾಯಿತಿ ಮೊಕದಮೆಯು ಸೆಶ್ಶನ್ಸ್ ಕೋರ್ಟಿನಲ್ಲಿ ಪ್ರಕೃತ ತನಕಿಯಾಗುತ್ತಿದೆ. ಒಟ್ಟಿಗೆ ೧೨ ಸೆಶ್ಶನ್ಸ್ ಮೊಕದಮೆಗಳು ತನಕಿಗೆ ಬಾಕಿ ಇವೆ ಎಂತ ತಿಳಿಯುತ್ತೇವೆ.

ಮದ್ರಾಸ್ ನ್ಯಾಯವಿಧಾಯಕ ಸಭೆಯ ಮೆಂಬರರ ಚುನಾವಣೆಗೆ ದಕ್ಷಿಣ ಕನ್ನಡ ಮತ್ತು ಮಲಬಾರಿನ ಪರವಾಗಿ ಮ| ರಾ| ಕೆ. ಪಿ. ರಾಮನ್ ಮೆನೊನ್ ಮ| ರಾ| ಟಿ. ಎಮ್. ಅಪ್ಪು ನೆಡಿಂಗಾಡಿ, ಹೈಕೋರ್ಟು ವಕೀಲ,
~~~

೬। ರಾ। ಸಿ ಕರುಣಾಕರ ಮೆನೊನ್, ಕಾರ್ಕಳದ ಹೈ ಕೋರ್ಟು ವಕೀಲ ಮ। ರಾ। ಕೆ. ಎಸ್ ಬೆಟ್ಟ್—ಇಷ್ಟು ಮಂದಿ ಉಮೇದ್ವಾರರಾಗಿ ನೇಮಿಸಲ್ಪಟ್ಟಿರುವರು

ಈ ತಿಂಗಳ ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗು ಜುಲೈ ತಿಂಗಳ ತಾ ೧೩ರಲ್ಲಿ ಕೂಡಿರುವದ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೇ ತಿಂಗಳ ಜನನ ಮರಣ ಸಂಖ್ಯೆ ಈ ರೀತಿಯಾಗಿರುವದ —ಮರಣ ಮಂಗಳೂರು ತಾಲೂಕು ಗಂಡು ೧೭೪ ಹೆಣ್ಣು ೧೯೯=೩೭೩ ಕಾಸರಗೋಡು ತಾಲೂಕು—ಗಂಡು ೧೩೯, ಹೆಣ್ಣು ೧೪೩=೨೭೭ ಉಪ್ಪಿನಂಗಡಿ ತಾಲೂಕು—ಗಂಡು ೧೯೯, ಹೆಣ್ಣು ೧೭೭—೩೩೯. ಉಪ್ಪಿ—ಗಂಡು ೧೩೭, ಹೆಣ್ಣು ೧೪೧—೨೮೯ ಕುಂದಾಪುರ—ಗಂಡು ೧೧೧, ಹೆಣ್ಣು ೧೧೯=೨೩೦ ಕಾರ್ಕಳ—ಗಂಡು ೯೭, ಹೆಣ್ಣು ೧೦೪=೨೦೧ ಮಂಗಳೂರು ಮುನ್ಸಿಪಾಲಿಟಿ—ಗಂಡು ೩೭, ಹೆಣ್ಣು ೩೧=೬೮ ಒಟ್ಟು ಮರಣ ಸಂಖ್ಯೆ—ಗಂಡು ೮೪೮, ಹೆಣ್ಣು ೮೮೯—೧೭೩೭ ಜನನ ಸಂಖ್ಯೆ—ಮಂಗಳೂರು ತಾಲೂಕು—ಗಂಡು ೪೪೭, ಹೆಣ್ಣು ೪೪೦=೮೮೭ ಕಾಸರಗೋಡು—ಗಂಡು ೩೫೫, ಹೆಣ್ಣು ೪೩೩=೭೮೭ ಉಪ್ಪಿನಂಗಡಿ—ಗಂಡು ೨೯೧, ಹೆಣ್ಣು ೩೩೧=೬೨೨ ಉಪ್ಪಿ—ಗಂಡು ೪೦೯, ಹೆಣ್ಣು ೩೭೭=೭೮೬ ಕುಂದಾಪುರ ತಾಲೂಕು ಗಂಡು ೨೭೭, ಹೆಣ್ಣು ೩೩೬=೬೧೩ ಕಾರ್ಕಳ—ಗಂಡು—೨೪೭, ಹೆಣ್ಣು ೨೩೫=೪೮೨ ಮಂಗಳೂರು ಮುನ್ಸಿಪಾಲಿಟಿ—ಗಂಡು ೭೫, ಹೆಣ್ಣು ೪೭=೧೨೨ ಒಟ್ಟು ಜನನ ಸಂಖ್ಯೆ—ಗಂಡು ೨೧೩೯, ಹೆಣ್ಣು ೨೧೭೩=೪೧೨೦

ಕಿಚನರ್ ಪ್ರಭುಗಳ ಅಕಾಲ ಮರಣದಿಂದುಂಟಾದ ದುಃಖ ಸೂಚನೆಯನ್ನು ಸೂಚಿಸುವ ಬಗ್ಗೆ ಕಳೆದ ತಾ ೧೩ರಲ್ಲಿ ಇಲ್ಲಿಯ ಗವರ್ನಮೆಂಟ ಕಾಲೇಜಿಯಲ್ಲಿ ಕೂಡಿದ ನಮ್ಮ ಪಟ್ಟಣಿಗರ ಸಭೆಯಿಂದ ಮದ್ರಾಸ್ ಗವರ್ನರವರಿಗೆ ಕಳುಹಿಸಲಾದ ದುಃಖ ಸೂಚನಾರ್ಥವಾದ ತಂತೀಗೆ ಲೋರ್ಡ ಕಿಚನರರ ಮರಣದಿಂದ ಸಾಮ್ರಾಜ್ಯಕ್ಕೆ ಉಂಟಾದ ನಷ್ಟಕ್ಕಾಗಿ ಮಂಗಳೂರು ಪಟ್ಟಣಿಗರು ಕಳುಹಿಸಿಕೊಟ್ಟ ದುಃಖ ಸೂಚನವಾದ ತಂತಿಯಿಂದ ಗವರ್ನರ ಪ್ರಭುಗಳು ಕೃತಜ್ಞರಾಗಿದ್ದಾರೆಂಬ ಉತ್ತರವು ಆ ದಿನ ಸಭಾ ಅಧ್ಯಕ್ಷರಾಗಿದ್ದ ಮ। ರಾ। ದಿವಾನ್ ಬಹದ್ದೂರ್ ಎಮ್ ಮಂಜಪ್ಪ ಬಂಗೇರರವರಿಗೆ ಗವರ್ನರ ಪ್ರಭುಗಳ ಖಾಸಗಿ ಸೆಕ್ರೆಟರಿಯವರಿಂದ ಬಂದಿರುತ್ತದೆ

ಕಳೆದ ವಾರ ಮಂಗಳೂರು ಮುನಿಸಿಪಾಲಿಟಿಯಲ್ಲಿ ಪ್ಲೇಗು ಮರಣಗಳಿದ್ದಿಲ್ಲ

ಇದೇ ತಾ ೨೧ನೇಯ ವರೆಗೆ ಇಲ್ಲಿ ೪೩ ಇಂಚು ೭೭ ಸೆಂಟ್ಸುಗಳ ಮಳೆಬಿದ್ದಿರುವದು ಕಳೆದ ವರ್ಷದ ಸರಾಸರಿ ಮಳೆ ೩೮ ಇಂಚು ೮೪ ಸೆಂಟ್ಸು

~~~~~

ಒಬ್ಬ ಬಾತ್ಮೀದಾರರಿಂದ —ಕೆಲವು ವರ್ಷಗಳ ಮೊದಲು ನಮ್ಮ ಪಟ್ಟಣದಿಂದ ಡಾಕ್ಟರ್ ತರಬೇತಿ ಬಗ್ಗೆ ಕಲ್ಕತ್ತೆಕ್ಕೆ ಹೋಗಿದ್ದ ಮಿಸ್ಟರ್ ಜೇಮ್ಸ್ ಹರ್ಬರ್ಟರು ತರಬೇತಿಯ ಅವಧಿಯನ್ನು ತೀರಿಸಿ, ಪರೀಕ್ಷೆಯಲ್ಲಿ ಉತ್ತೀರ್ಣರಾಗಿ, ಮೆಡಿಕಲ್ ಸನ್ನದುಗಳನ್ನು ಪಡೆದು, ಕೆಲವು ದಿವಸಗಳ ಮೊದಲು ಮಂಗಳೂರಿಗೆ ಹಿಂತಿರುಗಿ ಬಂದಿರುತ್ತಾರೆಂಬದನ್ನು ಕೇಳಿ ಸಂತೋಷಪಡುತ್ತೇನೆ. ಇವರು ಕಲ್ಕತ್ತೆಯ ಫಿಜಿಸಿಯನ್ಸ್ ಮತ್ತು ಸರ್ಜಿಯನ್ಸ್ ಕೊಲೇಜಿನಲ್ಲಿ ಸಂಪೂರ್ಣ ತರಬೇತಿಯನ್ನು ಹೊಂದಿ, ಅಲ್ಲಿಯ ಪರೀಕ್ಷೆಗಳಲ್ಲಿ ಪಾಸಾಗಿರುವುದರಿಂದ ಇವರನ್ನು ಕೊಲೇಜಿನ ಲೈಸೆಂನ್ಸಿಯೆಟಾಗಿ ದಾಖಲ್ಮಾಡಿರುವರು ಇವರು ಬಂಗಾಳದ ಹೊಮೊಪೆತಿಕ್ ಕೊಲೇಜಿನಲ್ಲಿ ತರಬೇತಿಯ ಸಂಪೂರ್ಣ ಅವಧಿಯನ್ನು ತೀರಿಸಿ 'ಬೆಚ್‌ಲರ್ ಒಫ್ ಹೊಮಿಪೆತಿಕ್ ಮೆಡಿಸಿನ್' ಎಂಬ ಸನ್ನದನ್ನು ಪಡೆದಿರುವರು ದಕ್ಷಿಣ ಹಿಂದೂಸ್ಥಾನದಲ್ಲಿ ಇಂತಹ ಅಪೂರ್ವ ಪಿರುದನ್ನು ಪಡೆದ ಬಹಳ ಸ್ವಲ್ಪ ಮಂದಿಯಲ್ಲಿ ಇವರು ಒಬ್ಬರಾಗಿರುತ್ತಾರೆ ಇವರು ಮಾಜಿ ಮೇಜಿಸ್ಟ್ರೇಟ್ ಕ. ಹರ್ಬರ್ಟರ ಮಗ ನಮ್ಮ ಜಿಲ್ಲೆಯ ಇಂಡಿಯನ್ ಕ್ರಿಶ್ಚಿಯನರಲ್ಲಿ ಇಂತಹ ಎರಡು ಸನ್ನದುಗಳನ್ನು ಸಂಪಾದಿಸಿದವರಲ್ಲಿ ಇವರು ಮೊದಲನೆಯವರು ಡಾಕ್ಟರ್ ಜೇಮ್ಸ್ ಹರ್ಬರ್ಟ ಯಮ್ ಬಿ (ಹೊಮೊ), ಯಲ್ ಸಿ, ಪಿ, ಎಂಡ್, ಎಸ್ (ಕಲ್ಕತ್ತ), ಇವರು ಮಂಗಳೂರಲ್ಲಿ ಡಾಕ್ಟರರಾಗಿ ಸಾರ್ವಜನಿಕ ಸೇವೆಯನ್ನು ಕೈಕೊಳ್ಳಲಿಚ್ಚಿಸಿರುವುದರಿಂದ ಇವರಿಗೆ ಕಾರ್ಯದಲ್ಲಿ ಜಯವುಂಟಾಗಲೆಂದು ಪ್ರಾರ್ಥಿಸುತ್ತೇನೆ

~~~~~

ವಿವಿಧ ವಿಷಯಗಳು.

~~~~~

"ಟಿಂಚರ್ ಅಫ್ ಐಯೋಡಿನ್" ಎಂಬ ಔಷಧವು ಎಲ್ಲಾ ವಿಧದ ಗಾಯಗಳಿಗೆ ದಿವ್ಯೌಷಧಿ ಆಗಿದೆ ಗಾಯ ಆದಕೂಡಲೇ ಮ ನಂತರವೂ ಈ ಔಷಧವನ್ನು ತಾಗಿಸಬಹುದು ರುಶ್ಯಾ ಜಾಪಾನ್ ಯುದ್ಧವು ನಡೆದಾಗ ಜಪಾನರು ಯುದ್ಧದಲ್ಲಿ ಗಾಯಪಡೆದವರಿಗೆ ಇದನ್ನೇ ತಾಗಿಸಿ ವಿಶೇಷ ಪ್ರಯೋಜನವನ್ನು ಹೊಂದಿದರು ಅಂದಿನಿಂದ ಇದರ ಮಹತ್ವವು ಎಲ್ಲಾ ರಾಜ್ಯಗಳ ವೈದ್ಯರಿಗೆ ತಿಳಿದು ಬಂತು ಟಿಂಚರ್ ಅಫ್ ಐಯೋಡಿನ್ ಪ್ಲೇಗು ಬೇನೆಗೂ ದಿವ್ಯೌಷಧಿ ಎಂಬದನ್ನೂ ಈ ಬೇನೆಗೆ ಅದನ್ನು ಪ್ರಯೋಗಿಸುವ ವಿಧಾನವನ್ನೂ ಸ್ವದೇಶಾಭಿಮಾನಿಯ ಹಿಂದಿನ ಸಂಚಿಕೆಯೊಂದರಲ್ಲಿ ತಿಳಿಸಿರುತ್ತೇವೆ ಈ ಔಷಧವನ್ನು ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್, ಮಂಗಳೂರು ಇಲ್ಲಿ ಕ್ರಯಕ್ಕೆ ಪಡೆಯಬಹುದು.

~~~~~

ಮದ್ಯಪಾನದಿಂದ ಸರಕಾರದವರಿಗೆ ೧೯೦೨ ೦೩ನೇ ಇಸವಿಯಲ್ಲಿ ೪,೩೭೩,೦೦೦ ಪವನುಗಳ ಆದಾಯವಾಗಿದೆ ಆದರೆ ನಂತರ ಮದ್ಯಪಾನದ ಸುಂಕವನ್ನು ಹೆಚ್ಚಿಸಿದರಿಂದ ೧೯೧೨—೧೩ನೇ ಇಸವಿಯಲ್ಲಿ ೮,೧೯೯,೦೦೦ ಪವನುಗಳ ಆದಾಯ ಹುಟ್ಟಿ ಬಂದಿರುವದು ತನ್ಮಧ್ಯೆ ಅನೇಕ ಮದ್ಯದಂಗಡಿಗಳು ಮುಚ್ಚಲ್ಪಟ್ಟರೂ ಇಷ್ಟು ಆದಾಯ ಹುಟ್ಟಿಬರುವದೆಂದರೆ ಆಶ್ಚರ್ಯವಾಗಿದೆ

~~~~~

೧೯೦೨—೦೩ನೇ ಇಸವಿಯಲ್ಲಿ ಹಿಂದೂಸ್ಥಾನಕ್ಕೆ ಪರದೇಶಗಳಿಂದ ೫,೬೭೫,೦೦೦ ಗೇಲನ್ ಮದ್ಯ ಬಂದಿರುತ್ತದೆ ೧೯೧೨—೧೩ನೇ ಇಸವಿಯಲ್ಲಿ ೬,೩೪೮,೦೦೦ ಗೆಲನ್ ಮದ್ಯವು ಬಂದಿರುತ್ತದೆ ಇದರ ಮೌಲ್ಯವು ೧೯೦೨—೦೩ನೇ ಇಸವಿಯಲ್ಲಿ ೧,೦೭೪,೧೮೯ ಪವನುಗಳು ೧೯೧೨—೧೩ನೇ ಇಸವಿಯಲ್ಲಿ ೧,೨೧೪,೨೭೦ ಪವನುಗಳು

~~~~~

ಕೆನಡಾ ದೇಶವು ಗ್ರೇಟ್ ಬ್ರಿಟಾನ್ ಮತ್ತು ಐರ್ಲ್ಯಾಂಡಿಗಿಂತ ೩೦ ಪಾಲು ದೊಡ್ಡದಿದೆ. ಅಮೇರಿಕದ ಯುನೈಟೆಡ್ ಸ್ಟೇಟಗಿಂತ ೩೦೦,೦೦೦ ಚಚ್ಚೌಕ ಮೈಲುಗಳ ಹೆಚ್ಚು ವಿಸ್ತೀರ್ಣವಿದೆ.

~~~~~

ಬ್ರಿಟಿಷ ಸಾಮ್ರಾಜ್ಯದಲ್ಲಿ ೬೬,೨೩೭,೦೦೦, ಟರ್ಕಿಯಲ್ಲಿ ೧೮,೦೦೦,೦೦೦, ಫ್ರೆಂಚ ಸಾಮ್ರಾಜ್ಯದಲ್ಲಿ ೧೨,೮೦೦,೦೦೦, ಮಂದಿ ಮಹಮ್ಮದೀಯರಿರುವರು. ಬ್ರಿಟಿಷ ಸಾಮ್ರಾಜ್ಯದ ೬೬,೨೩೭,೦೦೦ ಮಂದಿ ಮಹಮದೀಯರಲ್ಲಿ ೧೦,೩೬೭,೦೦೦ ಮಂದಿ ಈಜಿಪ್ತಿನಲ್ಲಿ ೧,೫೦೦,೦೦೦ ಮಂದಿ ಸೌಡಾನಿನಲ್ಲಿ, ೩೦,೦೦೦,೦೦೦ ಮಂದಿ ಹಿಂದೂಸ್ಥಾನದಲ್ಲಿರುವರು.

~~~~~

ಫ್ರಾನ್ಸ್ ದೇಶದಲ್ಲಿರುವ ಮರದ ಕಾಲಿನ ಕುಂಟನೊಬ್ಬನು ತಾಸಿಗೆ ೯ ಮೈಲು ಓಡ ಬಲ್ಲನಂತೆ.

~~~~~

ಪುತ್ತೂರು —ಇದೇ ತಿಂಗಳ ತಾ ೧೩ರಲ್ಲಿ ಕಾಣಿಯೂರಿಂದ ಇಲ್ಲಿಯ ಜವಳಿ ಸಾವಕಾರ ಕಟ್ಟಪಾಡಿ ಶಿದ್ದಿನ್ಯೊದಿನ್ ಸಾಹೇಬರಲ್ಲಿಗೆ ನೌಕರ ಹಸನಸಾಹೇಬ, ಬಾಬಸಾಹೇಬ ಇವರಿಬ್ಬರು ರೂಪಾಯಿ ೩೫೦ನ್ನು ತೆಗೆದುಕೊಂಡು ಬರುತ್ತಾ ಕೆಮ್ಮಿಂಜಾ ಗ್ರಾಮದ ಕೂರನಡ್ಕ ಎಂಬಲ್ಲಿ ತಲಪುವಾಗ್ಯೆ ರಾತ್ರಿಕಾಲ ಯಾರೋ ಹಣವನ್ನು ಎಳೆಕೊಂಡು ಹೋದರಂತೆ

ಗುಡ್ಡೆಗೆ ಮೇಯಬಿಡುವ ಜಾನುವಾರುಗಳನ್ನು ಮೇಯಿಸುವ ಬಗ್ಗೆ ಗುಡ್ಡೆಗೆ ಕೊಂಡುಹೋಗಿ ವಾಪಾಸು ತರುವರೆ ಮೂರು ಜನ ಚರಾವಿನವರನ್ನು ನೇಮಿಸಿ ಚರಾವಿನ ಏರ್ಪಾಡು ಮಾಡುವರೆ ಇಲ್ಲಿಯ ವಕೀಲ ಮ. ರಾ. ರಾ. ಮೊಳಹಳ್ಳಿ ಶಿವರಾಯರು ಒಂದು ಚರಾವಿನ ಸಂಘ ಸ್ಥಾಪಿಸಿ ಪ್ರತಿ ನಿವಾಸಿಕರಿಂದ ಮಾಸಕ್ಕೊಮ್ಮೆ ನಡೆ ಬಂದರ ಆಣೆ ೧ರಂತೆ ವಂತಿಗೆ ವಸೂಲು ಮಾಡುವರು. ಹೀಗೆ ವಸೂಲು ಮಾಡಿದ ವಂತಿಗೆ ಈ ವರೆಗೆ ರೂಪಾಯಿ ೫೦ ಆಗಿರುವದು

~~~~~

ಜೀನಸು ಧಾರಣೆ. (ರಖಂ)

ಮಸ್ಕತಿ ಹೊಸ ಅಕ್ಕಿ	5—10—0	6— 0—0
ಗಾಡಿ ರಾಶಿ ಹೊಸ ,, .	5— 3—0	5— 6—0
ಗುಡ್ಡು ,, ,, .	5— 4—0	5—10—0
ಅವ್ವಲ್ ಬೆಳ್ತಿಗೆ ,, .	6— 4—0	6—12—0
ಗುಡ್ಡು ಬೆಳ್ತಿಗೆ ,, .	5—12—0	6— 0—0
ಊಚು ಸುಗ್ಗಿ ,,	5— 6—0	5—10—0
ರಂಗೂನು ಬೆಳ್ತಿಗೆ ಗೋಣಿ ೧ರ	9—12—0	10— 0—0
ಗೋಧಿ ಗೋಣಿ ೧ರ .	11—12—0	12— 0—0
ಹುರುಳಿ ಗೋಣಿ ೧ರ .	6— 2—0	6— 8—0
ಕಡಲೆ ಗೋಣಿ ೧ರ ಬೊಂಬ್ಯ	8—12—0	10— 8—0
ತೊಗರಿ ಗೋಣಿ ೧ರ		12— 0—0
ತೊಗರಿ ಬೇಳೆ ಗೋಣಿ ೧ರ .	10— 0—0	11— 0—0
ಉದ್ದು ಗೋಣಿ ೧ರ .	10— 8—0	11— 4—0
ಊರುಬೆಲ್ಲ ಖಂಡಿ ೧ರ . . .		45— 0—0
ಉಪ್ಪು ಗೋಣಿ ೧ರ, . .	4—6—0	4— 8—0
ಕೊಬ್ರಿ ಖಂಡಿ ೧ರ .	95—0—0	105—8—0
ಕೊಬ್ರಿಹಿಂಡಿ ಖಂಡಿ ೧ರ		15—0—0
ಎಳ್ಳಿಂಡಿ ಖಂಡಿ ೧ರ ಬೊಂಬ್ಯ	27—8—0	32— 8—0
ಕೊಬ್ರಿ ಎಣ್ಣೆ ಮುಡಿ ೧ರ.	7— 6—0	7—12—0
ಎಳ್ಳೆಣ್ಣೆ ಮುಡಿ ೧ರ(ಕುರಾಸನ) .		5— 8—0
ಚಿಮಣಿ ಎಣ್ಣೆ ಪೆಟ್ಟಿಗೆ ೧ರ .	6— 0—0	6—11—0
ಮೋರಿಸ್ ಸಕ್ಕರೆ ಮುಡಿ ೧ರ	4—14—0	5— 0—0
ಕಾಫಿ ಖಂಡಿ ೧ರ .	225— 0—0	235—0—0
ಕೊಸಬೀಗೋಟು ಖಂಡಿ೧ರ	82— 0—0	85— 0—0
ಹೊಸ ಗೇರುಬೀಜ ಮುಡಿ ೧ರ		2—12—0
ಕಬ್ಬಿಣ ಖಂಡಿ ೧ರ . . .		75— 0—0
ತಾಂಬ್ರ ತಗಡು ಮಣ ೧ರ	28— 0—0	30— 0—0
ತಾಂಬ್ರ ಪಾತ್ರಗಳು ಮಣ ೧ರ	23— 0—0	28— 0—0
ಚೀನ ಬೆಳ್ಳಿ ಸೇರು ೧ರ		24— 0—0
ಪಚ್ಚೆಹೆಸರು ಮುಡಿ ೧ರ .	5— 4—0	5— 6—0

ಯಾವಾಗಲೂ

ಜೀವನಾನಂದವನ್ನು

ಸೇವಿಸಿ.

ಜೀವನಾನಂದದಂತೆ ಬೇರೆ ಔಷಧಿಯಿಲ್ಲವೆಂದು ನಾವು ಖಾತರಿ ಕೊಡುತ್ತೇವೆ. ಅದರಲ್ಲಿ ಮೋಸವಿಲ್ಲ. ನಾವು ಹೇಳುವುದು ಯಥಾರ್ಥ. ಜೀವನಾನಂದವನ್ನು ತೆಗೆದುಕೊಳ್ಳಿ ಬೇರೆ ನಿಮಗಿಷ್ಟ ಬಂದ ಔಷಧಿಯನ್ನೂ ತೆಗೆದುಕೊಳ್ಳಿ. ಜೀವನಾನಂದವನ್ನೇ ತೆಗೆದುಕೊಂಡು ಅದನ್ನೊಬ್ಬರಿಗೆ ಕೊಡಿ. ಇನ್ನೊಂದು ಔಷಧಿಯನ್ನು ಇನ್ನೊಬ್ಬರಿಗೆ ಕೊಡಿ. ಅವರಲ್ಲಿ ಪ್ರತಿ ಒಬ್ಬರಲ್ಲಿಯೂ ಆಗುವ ಬದಲಾವಣೆಯನ್ನು ನೋಡಿ. ಎಷ್ಟೇ ನೋಡಿದರೂ ಜೀವನಾನಂದವೇ ಮೊದಲಿನಿಂದಲೂ ದೇಹಬಲಕೊಡುತ್ತದೆ. ದೇಹಕ್ಕೆ ಅಪೂರ್ವ ಕಾಂತಿಯನ್ನು ಕೊಡುತ್ತದೆ. ದೇಹದ ಸಕಲ ರೋಗಗಳನ್ನೂ ನಿರ್ನಾಮ ಮಾಡುತ್ತದೆ. ಅಲ್ಲದೆ

ಜೀವನಾನಂದವು

ಕ್ಷಯ, ಉಬ್ಬಸ, ಶ್ವಾಸರೋಗ, ಮೂತ್ರರೋಗ, ಕೆಮ್ಮು ಮುಂತಾದುವನ್ನು ಗುಣಮಾಡಿ, ದೇಹದಲ್ಲಿ ರಕ್ತಬೀಜವನ್ನು ಹೆಚ್ಚಿಸುತ್ತದೆ. ಬೇರೆ ಯಾವ ಔಷಧಿಯೂ ಇದರಂತೆ ಕೆಲಸ ಮಾಡುವುದಿಲ್ಲ. ಮಾಡಿದರೂ ಅದು ಶಕ್ತಿಮಯವಾದುದಲ್ಲ. ಔಷಧಿಯನ್ನು ತೆಗೆದುಕೊಂಡರೆ ಅದು

ದೇಹಕ್ಕೆ ಅಪೂರ್ವವಾದ ಲಘುತ್ವವನ್ನು ಕೊಡಬೇಕು.

ದೇಹವು ಭಾರವಾದಂತಿದ್ದರೆ ಅದು ದೇಹದಲ್ಲಿನ ರೋಗವನ್ನು ಸೂಚಿಸುತ್ತದೆ. ಬೇರೆ ಔಷಧಿಗಳಿಗೆ ದೇಹಕ್ಕೆ ಲಘುತ್ವವನ್ನು ಕೊಡುವ ಈ ತರಹ ಶಕ್ತಿಯಿಲ್ಲ. ಅದು ಜೀವನಾನಂದಕ್ಕಿದೆ. ಅಹೇ ಜೀವನಾನಂದದ ಅಸಾಧಾರಣ ಗುಣಗಳಲ್ಲಿ ಒಂದು ಗುಣ.

ಕೂಡಲೆ ಈ ಪತ್ರಿಕೆಯನ್ನು ನಮೂದಿಸಿ ಜೀವನಾನಂದವು ಬೇಕೆಂದು ಬರೆಯಿರಿ

ಒಂದು ತಿಂಗಳ ಔಷಧಿಗೆ ಮೂರೇ ರೂಪಾಯಿ.

48 ದಿನದ ಔಷಧಿಗೆ ಐದೇ ರೂಪಾಯಿ.

ದಿ ಜನರಲ್ ಹೆಲ್ಪಿಂಗ್ ಹೌಸ್,

ಎಂ. ಡಿಪಾರ್ಟ್‌ಮೆಂಟ್,

ಸೋಮವಾರಪೇಟೆ (ಕೊಡಗು.)

ಆರ್. ಮಾರ್ಟಿನ್ಸರ ಮಾತ್ರೆಗಳು ನಂ. 2.

ಡಮಿಯಾನ ಮತ್ತು ಕಂಪೌಂಡ್ ಫೊಸ ರಸ್ ಕೂಡಿರುವ ಈ ಮಾತ್ರೆಗಳು ದಿವ್ಯವಾದ ಏಳು ಔಷಧಿಗಳಿಂದ ತಯಾರಿಸಲ್ಪಟ್ಟಿವೆ ಇದು ಕೂಡಲೇ ಗುಣಪಡಿಸುವ ಶಕ್ತಿಯುಳ್ಳದ್ದಾಗಿದ್ದು ಮಲಬದ್ಧತೆ, ಬಾಡಿದ ವ್ಯಾಧಿ, ತಲೆಶಿಟಿತ, ಅಜೀರ್ಣ, ಸ್ನಾಯುಗಳ ಬಲಹೀನತೆ, ಸರ್ವ ವಿಧದ ಹೆಂಗಸರ ಬಲಹೀನತೆ, ಮೊದಲಾದ ರೋಗಗಳಿಗೆ ಸಿದ್ಧೌಷಧವು. ಅದಲ್ಲದೆ ಮೂತ್ರ ರೋಗ, ಭ್ರಾಂತಿ, ಗುಂಡಿಗೆ ಬಡಿಯೋಣ, ರಾತ್ರಿ ಬೆವರುವುದು, ಈ ರೋಗಗಳಿಗೂ ಗುಣಕಾರಿ. ಮುದುಕರ ಕೆಲಸ ಮಾಡುವವರಿಗೆ ಅತ್ಯಂತ ಕಾರಿ ಪ್ರತಿ ಬಾಟ್ಲಿಯಲ್ಲಿ ೪೦ ಮಾತ್ರೆಗಳಿವೆ ಬಾಟ್ಲಿಗೆ ರೂ ೧—೮—೦

ಆರ್ ಮಾರ್ಟಿನ್ಸರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮಲು, ಗೂರಲು, ಶ್ವಾಸ, ಶೀತ, ನೆಗಡಿ, ಗಂಟಲುನೋವು, ಎದೆನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನೆಮಾಡಿ ಪರೀಕ್ಷಿಸಿ ನೋಡಿರಿ ಅನಂತರ ಯಾವ ಬೇರೆ ಔಷಧಕ್ಕೂ ಗಮನ ಕೊಡದಿರುವಿರಿ ಎಲ್ಲಾ ವಿಧವಾದ ಕೆಮ್ಮಿಗೂ ರಾಣಿಯಾಗಿಯೂ, ಎಡೆಗೆ ಬಲಕೊಟ್ಟು ಮೇಲ್ಕಂಡ ರೋಗಗಳು ತಲೆಯಿಕ್ಕದಂತೆ ಮಾಡುತ್ತವೆ.

೬೦ ಮಾತ್ರೆಗಳ ಸೀಸೆ ಒಂದಕ್ಕೆ ರೂ. ೧—೦—೦

ಆರ್. ಮಾರ್ಟಿನ್ಸರ ಮೇಹರೋಗಕ್ಕೆ ಮಿಶ್ರಣ.

ಗಂಡಸರು ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಿಂದ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ ಅಥವಾ ಹೊಸತಾಗಿದ್ದರೂ ಸರಿ. ಬಿಳಿಪು ಹೋಗುವುದು, ಉರಿಯುವುದು ಮುಂತಾದ್ದೆಲ್ಲ ನಿಂತು ಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೇ ಮೂತ್ರ ಉರಿಯುವುದನ್ನು ನಿಲ್ಲಿಸಿ, ಮೂತ್ರವು ಬಿಳುಪಾಗಿ ನಿರ್ಮಲವಾಗುವುದಲ್ಲದೆ ರೋಗದ ಪಟಸ್ಸೇ ಅಡಗಿಸಿಬಿಡುತ್ತದೆ ಔಷಧಿಯು ಕುಡಿಯುವದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ. ಬೆಲೆ ಸೀಸೆ ಒಂದಕ್ಕೆ ರೂ ೧—೮—೦ ವಿಳಾಸ:—

ಆರ್. ಡಿ. ಕಟ್ಲೆ ಮತ್ತು ಕಂಪನಿ, **R. D. kately & Co**

ನಂ ೨ ಡಿ ಫ್ರೆಯರ್ ರೋಡ್, *No D Frere Road,*

ಮುಂಬಯಿ. *No B [illegible] Bombay*

ಯುಗಾದಿ ಬಹುಮತಿ! ಹೊಸ ಕಂಪೆನಿ! ಹೊಸ ಸರಕುಗಳು

ಅಮೇರಿಕ ದೇಶದ ಇಲೆಕ್ಟ್ರಿಕ್ ಪಾಕೆಟ್ ಟಾರ್ಚ್ [illegible] ಬೆಲೆ ಬಾಳತಕ್ಕದ್ದನ್ನು ರೂ. 1—೯—0 ಕೊಡುವೆವು ಇದನ್ನು ನವ್ಯ ಕ್ರಿಂತ ಆರ್ಡರು ಮೇಲೆ ಅಮೇರಿಕ ದೇಶದಲ್ಲಿ ಕಂಡುಹಿಡಿಯಲ್ಪಟ್ಟ ಇಮಿಟೇಷನ್ ವಜ್ರಗಳಿಂದ ತಯಾರಿಸಿ ಕಳುಹಿಸಿದ್ದಾರೆ [illegible] ಕಲ್ಲುಗಳು ಕೊಹಿನೂರ್ ಪ್ರಕಾರಕ್ಕೆ ಥಳಥಳಿಸುವವು ೯ ಗಂಟೆಕ್ಕೆ ಸಮಾನವಾದ ಒಂದು ವಿಧವಾದ ಲೋಹದಿಂದ ಕಟ್ಟಿ ಇರುತ್ತೆ ಇದನ್ನು ನೋಡುವವರು ಪುಷ್ಯರಾಗವೆಂದು ಹೇಳುವರು ಅಷ್ಟು ಸೂರ್ಯಪ್ರಕಾಶಕ್ಕೆ ಥಳಥಳಿಸುವದು [illegible] ವಾಡುವವರಿಗೆ ಒಳ್ಳೇ ಸಾಯಿದೆ ಬೇಡಿಕೆಯುವದು ಒಂದೇ ತಿಂಗಳ ಒಳಗಾಗಿ ಈ ಸೀರೆ ತರಿಸಿಕೊಳ್ಳುವವರಿಗೆ ಈ ಮೇಲ್ಕಂಡ

ರೂ 1—8—0 ರೂಪಾಯಿನ ಮೂಗು ಬೊಟ್ಟು ಇನಾಂ ಕಳುಹಿಸುವೆವು

ಮಲ್ಲಿಗೆ ಹುವ್ವಿನ ಸೀರೆ.

ಈ ಸೀರೆಗಳನ್ನು ಯುಗಾದಿ ಹಬ್ಬಕ್ಕಾಗಿ ತರಿಸಿ ಇರುತ್ತೇವೆ ಇದರ ಕ್ರಯ ರೂ 3 ವಿ ಪಿ ಚಾರ್ಜು [illegible] ಪ್ರತ್ಯೇಕ ಮೇಲ್ಕಂಡ ಮೂಗು ಬೊಟ್ಟು ಇನಾಂ ಎಲ್ಲರೂ ವಿಕ್ರಯಿಸಿದ ಮಧುರೆ ಹವಳದ ಬಳ್ಳಿಗಳಲ್ಲ ಭಾರಿ ಕ್ರಯದ ಸೀರೆಗಳ ಇದು ಉಡುವದಕ್ಕೆ ಥಡುಕೆ ಆಗಿಯೂ ನೋಡುವದಕ್ಕೆ ಸೊಗಸಾಗಿಯೂ ಇದೆ ಬಣ್ಣಕ್ಕೆ ಗ್ಯಾರಂಟು ಕೊಡುವೆವು. ಸೀರೆಯ ಉದ್ದ 16 ಮೊಳ ಸೊಗಸಾದ ಅಂಚು ಕಟ್ಟಿ ಇರುತ್ತೆ ಇದು ಎಲ್ಲರೂ ಉಡುವದಕ್ಕೆ ಲಾಯಖಾದದ್ದು. ಪ್ರತಿದಿನ ಸಾವಿರಾರು ಸೀರೆಗಳು ವಿಕ್ರಯಿಸುತ್ತವೆ. ದಯಮಾಡಿ 1 ಸೀರೆಯನ್ನು ತರಿಸಿಕೊಂಡು ಅಲಂಕಾರಭೂಷಿತರಾಗಿ ಇರುವರೆಂದು ನಂಬಿದ್ದೇವೆ. ನಮ್ಮ ಕಂಪೆನಿಯಲ್ಲಿ ಅನೇಕ ತರದ ಜವಳಿ ದಿನಸುಗಳು ಸಿಕ್ಕುತ್ತೆ.

ವಿಳಾಸ:— ರತ್ನಂ ಕಂಪೆನಿ,

ಕ್ಲೋತ್ ಮರ್ಚೆಂಟ್ಸ್,

3, ಇರುಳಪ್ಪನ ಬೀದಿ, ಮದ್ರಾಸು.

☞ ಇದನ್ನು ದಯವಿಟ್ಟು ನಿಮ್ಮ ಸ್ನೇಹಿತರುಗಳಲ್ಲಿ ಪ್ರಚುರಪಡಿಸಿರಿ.

ಪಿ. ಸುಬ್ಬರಾಯಿಯವರ

ಲೋಕ ಪ್ರಸಿದ್ಧವಾದ ಆಯುರ್ವೇದ

ಔಷಧಗಳು.

ಪರಿಮಳ ಕೇಶ ತೈಲವು:—ಸೋಲುತಲೆ, ಚುಂಡು ಅಥವ ಹೊಟ್ಟು ಉದುರುವಿಕೆ, ಇವು ಸಂಪೂರ್ಣವಾಗಿ ವಾಸಿಯಾಗುವವಲ್ಲದೆ, ತಲೆಯನ್ನೂ ಮಿದುಳನ್ನೂ ತಣ್ಣಗಿರುವಂತೆ ಮಾಡಿ, ತಲೆ, ಮೀಸೆ, ಹುಬ್ಬುಗಳ ಕೂದಲನ್ನು ಹೇರಳವಾಗಿ ಬೆಳೆಸುವುದು ಮತ್ತು ಕಣ್ಣು, ಮಿದುಳು ಸಂಬಂಧವಾದ ರೋಗವನ್ನೆಲ್ಲಾ ವಾಸಿ ಮಾಡುವದು, ಬಹಳ ಮನೋರಂಜಕವಾಗಿ ಪರಿಮಳಿಸುವದು. ಸೀಸೆ 1ಕ್ಕೆ 8 ಆಣೆ, ವಿ ಪಿ ಚಾರ್ಜು 2 ಸೀಸೆವರಿಗೂ 5 ಆಣೆ

ನೇತ್ರಬಿಂದು:—ಸಮೀಪ ದೃಷ್ಟಿ, ಕಣ್ಣಿನಲ್ಲಿ ನೀರು ಸುರಿಯುವುದು, ಕಣ್ಣು ನೋವು, ಹೂವು ಬರುವುದು, ಉರಿ. ಮುಂತಾದ ನೇತ್ರರೋಗಗಳು ಇದರಿಂದ ಗುಣವಾಗುವವು ಸೀಸೆ 1ಕ್ಕೆ 8 ಆಣೆ, ವಿ ಪಿ ಚಾರ್ಜು 6 ಸೀಸೆವರಿಗೂ 5 ಆಣೆ.

ಶ್ರೋತ್ರಬಿಂದು:—ಕಿವಿಯು ಎಷ್ಟು ಹೆಚ್ಚಾಗಿ ನೋಯುತ್ತಿದ್ದರೂ ಮತ್ತು ಕೀವು ಸುರಿಯುವುದು, ಕಿವಿಯ ಮಾಂದ್ಯವು, ಕಿವುಡು ಮುಂತಾದನ್ನು ಜಾಗ್ರತೆಯಲ್ಲಿ ಪರಿಹರಿಸುವುದು ಬೆಲೆ ಸೀಸೆ 1ಕ್ಕೆ 8 ಆಣೆ, ವಿ. ಪಿ. ಚಾರ್ಜು 6 ಸೀಸೆವರಿಗೂ 5 ಆಣೆ

ಹುಳುಕಡ್ಡಿಗೆ ಔಷಧಿ:—ಚರ್ಮರೋಗಕ್ಕೂ, ಚರ್ಮಗತವಾದ ಎಲ್ಲಾ ವ್ಯಾಧಿಗಳಿಗೂ ಅತ್ಯುತ್ತಮವಾದ ಮದ್ದು. ಒಂದು ಸಾರಿ ವಾಸಿಯಾದ ಮೇಲೆ ಪುನಃ ತಲದೋರುವುದಿಲ್ಲ ಸೀಸೆ 1ಕ್ಕೆ 4 ಆಣೆ, ವಿ. ಪಿ. ಚಾರ್ಜು 6 ಸೀಸೆವರಿಗೂ 5 ಆಣೆ

ವಿರೇಚನ ಮಾತ್ರೆಗಳು:—ಸ್ವಲ್ಪವೂ ಹೊಟ್ಟೆನೋವು, ಆಯಾಸ ಯಾವದೂ ಉಂಟಾಗದಂತೆ ಸುಮಾರಾಗಿ ವಿರೇಚನೆಯಾಗುವದು. ಮಲಬಂಧ ಅಜೀರ್ಣ, ವಾಯು, ಎದೆಯುರಿಯುವುದು, ಪಿತ್ತ, ಜ್ವರ, ಇವುಗಳನ್ನು ವಾಸಿ ಮಾಡುವುದು ಸೀಸೆ 1ಕ್ಕೆ 8 ಆಣೆ, ವಿ. ಪಿ. ಚಾರ್ಜು 6 ಸೀಸೆವರಿಗೂ 5 ಆಣೆ.

೯. ವಾಸಾದಿ ಲೇಹ. ಕೆಮ್ಮು, ಗುರ್ಬುಸ, ಕಫ, ಕ್ಷಯಗಳ ಮೇಲೆ ಅನುಭವಸಿದ್ಧ. ಡಬ್ಬಿಗೆ ೨ ರೂ.

೧೦. ಅಶ್ವಗಂಧೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ಮಸ್ತಿಷ್ಕಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಲಾಡಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ಡಬ್ಬಿಗೆ ೩ ರೂ.

೧೧. ವಾತವೈರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಚಳುಕು, ಸೆಳೆತ, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೨. ಗಜಕರ್ಣ ಕೇಸರಿ ಮುಲಾಮು. ತುರಿಕಜ್ಜಿ, ಹುರಿಗಜ್ಜಿ ಮುಂತಾದ ಚರ್ಮ ವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯೂ ಇಲ್ಲ. ಸುವಾಸಿತವಾಗಿದೆ. ಡಬ್ಬಿಗೆ ೪ ಆಣೆ.

೧೩. ಸರ್ವನೇತ್ರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನೂ ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ಶೀಶೆಗೆ ೧ ರೂ.

೧೪. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗು ಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠ ಸ್ವರವನ್ನು ಮಧುರವಾಗಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ಶೀಶೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

B. M. Nath & Co., *Ayurvedic Chemists,*
Vepery Post, MADRAS.

ಸ್ವದೇಶಾಭಿಮಾನಿ

ಮಂಗಳೂರು, ಶುಕ್ರವಾರ ತಾರೀಕು 30ನೇ ಜೂನ್ 1916

ಮುನ್ಸಿಪಾಲಿಟಿಯಲ್ಲಿ ಯಶಸ್ವಿಯರಾದ ಜಿಲ್ಲಾ ಸರ್ಜನರ ಶಸ್ತ್ರಪ್ರಯೋಗ!

ಮಾಜಿ ಡಿ| ಜಡ್ಜರಾದ ಮ| ರಾ| ಮುಂಡಪ್ಪ ಬಂಗೇರರವರು ರಾಜಿಕೊಟ್ಟ್ಲಾಗಾಯಿತು ಖಾಲಿಬಿದ್ದ ನಮ್ಮ ಮುನ್ಸಿಪಾಲಿಟಿಯ ಚೇಯರ್‌ಮೇನ್ ಪದವಿಗೆ ಒಂದು ತರದ ಅಸ್ವಸ್ಥವು ಬಂದಿತ್ತು, ಆ ಅಸ್ವಸ್ಥವನ್ನು ಸಾಮಾನ್ಯರಿಂದ "ಔಷಧೋಪಚಾರಗಳ ಮೂಲಕವಾಗಿ ಗುಣಪಡಿಸಲು ಸಾಧ್ಯವಿಲ್ಲೆಂದೆಣಿಸಿ ನಮ್ಮ ಜಿಲ್ಲಾ ಸರ್ಜನರಾದ ಡಾ| ವರ್ಗಿಸರವರು ಈ ವ್ಯಾಧಿಯ ಮೇಲೆ ಶಸ್ತ್ರಪ್ರಯೋಗವನ್ನು ನಡಿಸಿದ್ದರು; ಮತ್ತು ಆ ಪ್ರಯೋಗವು ಕಳೆದ ಶನಿವಾರ ತಾನೆ ಸುಮಾರು ಐದುಕಾಲು ಘಂಟೆಯ ಸುಮುಹೂರ್ತದಲ್ಲಿ ಮುನ್ಸಿಪಲ್ ಪ್ರಯೋಗ ಶಾಲೆಯಲ್ಲಿ ಯಶಸ್ವಿ (successful)ಯಾಯಿತು. ಶಸ್ತ್ರಪ್ರಯೋಗದ ಕಾಲದಲ್ಲಿ ವಿನಿಯೋಗಿಸಿದ ದಾಕ್ಷಿಣ್ಯರೂಪ ಕ್ಲೋರೋಫೋರ್ಮಿನಿಂದ ಕೌನ್ಸಿಲರರ ಬುದ್ಧಿಯ ತಿಳಿವು ನಷ್ಟವಾಗಿ ಯಾರೊಬ್ಬರ ಆತಂಕವಿರದೆ ಡಾಕ್ಟರರು ಮುನ್ಸಿಪಲ್ ಕೌನ್ಸಿಲಿನ ರುಗ್ಣಾಲಯದಲ್ಲಿ ಎಲ್ಲರಿಂದಲೂ ಧನ್ಯವಾದವನ್ನು ಪಡೆದರು! ಡಾಕ್ಟರ ಅಥವಾ ವೈದ್ಯರಿಗೆ ಮಾತ್ರ ಪರಿಚಿತ ಮತ್ತು ಪ್ರಿಯವಾದ ವೈದ್ಯಶಾಸ್ತ್ರದ ಪಾರಿಭಾಷಿಕ ಶಬ್ದಗಳ ರೂಪಕಾಲಂಕಾರದಲ್ಲಿ ಮೇಲಿನಂತೆ ವಿವರಿಸಿಕೊಂಡು ಹೋದರೆ ಅದು ಸಾಮಾನ್ಯ ವಾಚಕರಿಗೆ ಒಂದುವೇಳೆ ದುರ್ಬೋಧವಾಗಬಹುದು. ಆದುದರಿಂದ, ವೈದ್ಯಶಾಸ್ತ್ರದ ಪರಿಭಾಷೆಯಿಂದ ಮಾತನಾಡುವುದು ನಮ್ಮ ಸರ್ಜನರಿಗೆ ಬಹು ಸಂತೋಷದ್ದಾಗಿದ್ದರೂ ಸಾಮಾನ್ಯ ವಾಚಕರ ತಿಳುವಳಿಕೆಗಾಗಿ ಇದರ ರೂಪಕಾಲಂಕಾರವನ್ನು ತೆಗೆದೇ ನಿಜಸ್ವರೂಪವನ್ನು ಹೇಳುತ್ತೇವೆ.

ನಮ್ಮ ಮಂಗಳೂರು ಮುನ್ಸಿಪಾಲಿಟಿಯ ಕೆಲವು ದಿವಸಗಳ ಈಚೆಗೆ ಖಾಲಿಯಾದ ಚೇಯರ್‌ಮೆನರ ಸ್ಥಾನಕ್ಕೆ ಉಮೇದ್ವಾರರಾಗಿ ನಿಂತಿರುವ ರಿಟಾಯರ್ಡ್ ಡಿ| ಕ|ರಾದ ಮ| ರಾ| ಕಿಣಿಯವರು ಮತ್ತು ಜಿಲ್ಲಾ ಸರ್ಜನರಾದ ಡಾ| ವರ್ಗಿಸರವರು ಇಬ್ಬರಲ್ಲಿ ಡಾಕ್ಟರರವರು ಚೇಯರ್‌ಮೇನರಾಗಿ ಬಂದಿದ್ದಾರೆಂದು, ನಮ್ಮ ಪತ್ರದ ಪತ್ರವ್ಯವಹಾರದ ಭಾಗದಲ್ಲಿ ಪ್ರಕಟಿಸಿರುವ "ಸತ್ಯವಾದಿ"ಯ ಪತ್ರದಿಂದ ನಮ್ಮ ವಾಚಕರಿಗೆ ತಿಳಿದುಬಂದೀತು. ಡಾಕ್ಟರರವರು ಚೇಯರ್‌ಮೇನರಾಗಿ ಬಂದುದು ಚುನಾವಣೆಯಿಂದಲೋ, ಸರಕಾರದ ನೇಮಕದಿಂದಲೋ ಅಥವಾ ಈ ಎರಡೂ ವಿಧಗಳಿಂದಲ್ಲಾದರೆ "ಮುರಾರೇಸ್ತು ತೃತೀಯಃ ಪಂಥಾಃ" ಎಂಬ ನ್ಯಾಯದಂತೆ ಮೂರನೇದೇ ಒಂದು ವಿಧಾನದಿಂದಲೋ? ಇವುಗಳ ಪೈಕಿ ಚುನಾವಣೆಯಿಂದ ಇವರು ಬಂದದ್ದು ಎಂತ ಹೇಳಬೇಕಾದರೆ

ಚುನಾವಣೆ ಎಂದರೇನು?

ಈ ಪ್ರಶ್ನೆಯನ್ನು ಮೊದಲು ಸರಿಯಾಗಿ ವಿಮರ್ಶಿಸಬೇಕಾಗುತ್ತದೆ. ಕೌನ್ಸಿಲಿನ ಮೆಂಬರರು—ಜನರ ಕಡೆಯವರು, ಸರಕಾರದವರು ಮತ್ತು 'ನಿವ್ ಸರಕಾರದವರು' ಈ ರೀತಿಯಿಂದ ಮೂರು ವಿಧದವರಿರುವರು. ಈ ಕೌನ್ಸಿಲಿನವರು ಮತಾಧಿಕ್ಯದಿಂದ ಚೇಯರ್ಮೇನರನ್ನು ಆರಿಸಿದರೆ ಅದು ಚುನಾವಣೆಯು ಮತ್ತು ಅವರು ಚುನಾಯಿಸಲ್ಪಟ್ಟವರು. ಚುನಾವಣೆಯ ಮೂಲ ಮತ್ತು ಪವಿತ್ರವಾದ ತತ್ವವನ್ನು ಹೇಳುವುದಾದರೆ, ಮೆಂಬರನನ್ನಾಗಲಿ, ಚೇಯರ್ಮೇನನನ್ನಾಗಲಿ ಆರಿಸಿಕೊಡುವಾಗ ಜನರಿಗೆ ಅಥವಾ ಮೆಂಬರುಗಳಿಗೆ – ತಾವು ಆರಿಸಿಕೊಡುವ ವ್ಯಕ್ತಿಯು ತನ್ನ ಸ್ಥಾನದ ಜವಾಬದಾರಿಯನ್ನರಿತು ಲೋಕಹಿತವನ್ನು ಸಾಧಿಸುವದರಲ್ಲಿ ಸಮರ್ಥವಾಗಿದೆ, ಮಾತ್ರವಲ್ಲ, ತತ್ಪರವಾಗಿದ್ದೆಂಬ ಪೂರ್ಣ ಭರವಸೆ ಇದ್ದರೆನೇ ಆ ವ್ಯಕ್ತಿಯನ್ನು ತಮ್ಮ ಸಮ್ಮತಿಗಳ ಬಹುಸಂಖ್ಯೆಯಿಂದ ಅವರು ಆರಿಸಿಕೊಡುವರು. ಇದೇ ನಿಜವಾದ ಚುನಾವಣೆಯು. 'ಸರ್ವಸಮ್ಮತ' 'ಬಹುಸಮ್ಮತ' ಮುಂತಾದ ಸ್ಕ್ರೀನಿನೊಳಗೆ (ಪರದೆಯೊಳಗೆ) ದಾಕ್ಷಿಣ್ಯಶ್ರಾದ್ಧವೂ ಅಧಿಕಾರಿಗಳ ಭಾರವೊ ಅಡಗಿಕೊಂಡಿರುವಾಗ ಅದಕ್ಕೆ ರಿಕಾರ್ಡಿನ ಭಾಷೆಯಲ್ಲಿ 'ಸರ್ವಸಮ್ಮತವಾದ ಚುನಾವಣೆ' ಎಂಬೀತರದ ಹೆಸರನ್ನು ಕೊಟ್ಟರೂ 'ಚುನಾವಣೆ ತತ್ವ'ದ ಭಾಷೆಯಲ್ಲಿ 'ದಾಕ್ಷಿಣ್ಯಶ್ರಾದ್ಧ'ವೆಂತಲೇ ಹೆಸರುಬರುತ್ತದೆ! ಈ ದೃಷ್ಟಿಯಿಂದ ಪ್ರಕೃತದಲ್ಲಿ ಆದ ಚುನಾವಣೆಯು ಸರ್ವಸಮ್ಮತವೂ ಅಲ್ಲ, ಬಹುಸಮ್ಮತವೂ ಅಲ್ಲಾದುದರಿಂದ ಇದು ಚುನಾವಣೆ ಎಂಬ ಹೆಸರಿಗೆ ಸರ್ವಥಾ ಪಾತ್ರವಾಗುವದಿಲ್ಲ.

ಕೌನ್ಸಿಲಿನ ಸಭಾಸದರು ದಾಕ್ಷಿಣ್ಯಕ್ಕೆ ಒಳಗಾಗಿ ಇಂಥಾ ಚುನಾವಣೆಗಳಿಗೆ ತಮ್ಮ ಸಮ್ಮತಿಯನ್ನು ಕೊಟ್ಟು ಅವರಿಂದ

ಚುನಾವಣೆಯ ದುರುಪಯೋಗವು

ಮಾಡಲ್ಪಟ್ಟಂತೆ ಆಗಿದೆ. ಮುನ್ಸಿಪಾಲಿಟಿಯ ಸಭಾಸದರಲ್ಲಿ ಈ ಪರಿಸ್ಥಿತಿಯು ಬರಲು ಕಾರಣವೇನು? ಮತ್ತು ಅವರಿಂದ ಹೀಗೆ ಚುನಾವಣೆತತ್ವದ ದುರುಪಯೋಗವು ಯಾಕೆ ಮಾಡುವುದರಲ್ಲಿ ಬಂತು? ಈ ಪ್ರಶ್ನೆಗಳ ಮೀಮಾಂಸೆಯನ್ನು ಮಾಡಿದರೆ ಅದು ಕೆಲವು ಸಭಾಸದರಿಗೆ ಅರುಚಿಕರವಾಗಿ ತೋರೀತು. ಆದರೂ ಕೌನ್ಸಿಲರರೆಂದರೆ ತಮ್ಮ ಸ್ವಂತ ಮನೆಯವರ ಅಥವಾ ನೆಂಟರ ಸ್ವಾರ್ಥ ಸಾಧಿಸುವುದಕ್ಕಾಗಿ ಕೌನ್ಸಿಲಿನ ಕೆಲಸ ಮಾಡುವವರಲ್ಲ. ಆಯಾ ವಾರ್ಡಿನ ಹಿತಕ್ಕಾಗಿ ವೋಟುದಾರರಿಂದ ಚುನಾಯಿಸಲ್ಪಟ್ಟವರು ಕೌನ್ಸಿಲಿನಲ್ಲಿ ಪ್ರವೇಶವನ್ನು ಪಡೆದಿರುವರು. ಇಂಥವರು,—ಸರಕಾರಿ ಕೆಲಸವಾಗಲಿ ಬೇರೆ ಪ್ರಾಕ್ಟಿಸಾಗಲಿ ಯಾವುದೊಂದೂ ಉಪಾಧಿ ಇಲ್ಲದೆ ಕೌನ್ಸಿಲಿನ ಕೆಲಸವನ್ನೇ ತತ್ಪರತೆಯಿಂದ ಮಾಡಲು ಸಂದರ್ಭವುಳ್ಳವರೂ ಸ್ಥಳಿಕ ಸದ್ಗೃಹಸ್ಥರೂ ಆದ ಮ| ರಾ| ಕಿಣಿಯವರಿಗೆ ಮತವನ್ನು ಕೊಡದೆ ಡಾ. ವರ್ಗಿಸರಂಥಾ ವಿದೇಶಿಯ ಶಸ್ತ್ರವೈದ್ಯರನ್ನು ಕೌನ್ಸಿಲಿನಲ್ಲಿ ತಂದುಹಾಕಿದರು. ಇದು ಯಾಕೆ? ಈಗ ಆಯಾ ವಾರ್ಡಿನ ವೋಟುದಾರರು ಒಂದುವೇಳೆ ಈ ಹದಿನೆಂಟು ಕೌನ್ಸಿಲರುಗಳ ಪೈಕಿ ಯಾವನಾದರೂ ಒಬ್ಬನನ್ನು ಕೈಹಿಡಿದು "ಯಾಕಪ್ಪಾ! ನೀನು ಸ್ಥಳಿಕ ಉಮೇದ್ವಾರರನ್ನು ಸಮ್ಮತಿಸದೆ ಪರಕೀಯರಿಗೆ ಅನುಮತಿ ಕೊಟ್ಟಿರುವಿ? ನಿನಗೆ ನಮ್ಮ ವಾರ್ಡಿಗಾಗಿ ಇದೇ ಕೆಲಸಕ್ಕಾಗಿ ನಾವು ವೋಟುಕೊಟ್ಟದ್ದೋ?" ಎಂದು ಕೇಳಿದರೆ ಮುನ್ಸಿಪಾಲಿಟಿಯ ಆ ಸಭಾಸದನು ಯಾವ ಉತ್ತರವನ್ನು ಕೊಟ್ಟಾನು? ಮನೋದೇವತೆಯನ್ನು ಮೂಲೆಗೊತ್ತಿ ಸಮಯ ತಪ್ಪಿಸಲಿಕ್ಕೆ ಏನಾದರೂ ಪ್ರತಾರಣೆ ಮಾಡ್ಯಾನಲ್ಲದೆ ಸರಳವಾದ ಉತ್ತರವನ್ನು ಅವನಿಗೆ ಈ ಪ್ರಶ್ನೆಗೆ ಕೊಡಲು ಸಾಧ್ಯವಿದೆಯೋ? ಹೀಗಿರುವಲ್ಲಿ ಇದು ಚುನಾವಣೆಯ ತತ್ವದ ದುರುಪಯೋಗವಲ್ಲವೇ? ಈಗ ಮು| ಸಭಾಸದರು ತಮ್ಮ ಮತವನ್ನು ಕೊಡುವುದಕ್ಕಿಂತ ಮುಂಚೆಯೇ ಮ| ರಾ| ಕಿಣಿಗಳು ತಮ್ಮ ಉಮೇದ್ವಾರಿ ಪತ್ರವನ್ನು ಹಿಂದಕ್ಕೆ ತಕ್ಕೊಂಡಿರುವ ಕಾರಣ 'ನಮ್ಮೆಲ್ಲರಿಗೆ ಡಾ. ವರ್ಗಿಸರನ್ನೇ ಚುನಾಯಿಸಬೇಕಾಯಿತೆಂದು ಒಂದುವೇಳೆ ಸಭಾಸದರು ಅಭಿಪ್ರಾಯಪಟ್ಟಾರು. ಆದರೆ ಇದು ಶುದ್ಧ ಭ್ರಾಂತಿಯು. ಮ| ರಾ| ಕಿಣಿಯವರ ನೋಮಿನೇಶನ್ ಪತ್ರದ ಮೇಲೆ ತಮ್ಮ ಸಮ್ಮತಿಯ ಸಹಿ ಹಾಕಿ ಚುನಾವಣೆಯ ತತ್ಕಾಲದಲ್ಲಿ ತಮ್ಮ ಮತವನ್ನು ಅನ್ಯರಿಗೆ ಧಾರಾದತ್ತಮಾಡಿ ಕೊಡುವ ಸಂಭವಗಳು ತಲೆದೋರಬಹುದೆಂಬ ಸಂಶಯಚಿತ್ತದಿಂದ ಮ| ರಾ| ಕಿಣಿಯವರು ತಮ್ಮ ಪತ್ರವನ್ನು ಹಿಂದಕ್ಕೆ ತಕ್ಕೊಂಡಿರಬಹುದೆಂದು ಹೇಳಬಹುದು. ಅಥವಾ ಕೆಲವರು ಈ ಸಂಭವಗಳ ಮೇರೆಗೆ ಡಾಕ್ಟರ್ ಮಹಾಶಯರಿಗೆ ತಮ್ಮ ಮತವನ್ನು ಕೊಟ್ಟರೂ ಡಾಕ್ಟರರಿಗೂ ತನಗೂ ಸಿಗುವ ಮತಗಳ ಸಮಸಂಖ್ಯೆಯಿಂದ ತಿರುಗಿ ತಿರುಗಿ ಕೌನ್ಸಿಲಿನಲ್ಲಿ ಈ ಚುನಾವಣೆಯ ಆಟವನ್ನಾಡುತ್ತ ಕೂತುಕೊಳ್ಳುವುದು ಸಭ್ಯರ ಲಕ್ಷಣವಲ್ಲವೆಂದೆಣಿಸಿ ಸಾತ್ವಿಕರಾದ ಕಿಣಿಗಳು ಕೌನ್ಸಿಲರರು ಕಳುಹಿಸಿಕೊಟ್ಟ ತಮ್ಮ ನೋಮಿನೇಶನ್ ಪತ್ರವನ್ನು ಹಿಂದಕ್ಕೆ ತಕ್ಕೊಂಡಿರಬಹುದು. ಯಾವುದೇ ಕಾರಣದಿಂದ ಕಿಣಿಯವರು ಹಿಂದಕ್ಕೆ ಬಂದದ್ದಿರಲಿ, ಸಭಾಸದರು ಎಲ್ಲರೂ ಡಾಕ್ಟರರಿಗೆ ಮತವನ್ನು ಕೊಟ್ಟದ್ದು ಹೇಗೆ? ಡಾ| ವರ್ಗಿಸರಿಗೆ ಪ್ರತಿಸ್ಪರ್ಧಿಗಳಾರೂ ಇಲ್ಲಾದುದರಿಂದ ಉಪಾಯವಿಲ್ಲದೆ ಅವರಿಗೆನೇ ತಮ್ಮ ಮತವನ್ನು ಅರ್ಪಿಸಬೇಕಾಯಿತೆಂಬದೊಂದು ಯುಕ್ತಿವಾದವನ್ನು ಯಾರಾದರೂ ಇಲ್ಲಿ ಹೇಳಬಹುದು. ಆದರೆ ನಾವು ಅವರಿಗೆ ಕೇಳುವುದೇನೆಂದರೆ, ನಿಮ್ಮ ಸಭಾಸದರಲ್ಲಿ ಒಬ್ಬನ ಹೃದಯವಾದರೂ ಈ ಕೆಲಸದಲ್ಲಿ ಡಾಕ್ಟರರಿಗೆ ಅನನುಕೂಲವಿದ್ದಿಲ್ಲವೋ? ನಾವು ನೆನೆಸುವಂತೆ ಅನೇಕ ಸಭಾಸದರು ನಿಶ್ಚಯವಾಗಿ ಡಾಕ್ಟರರಿಗೆ ಚೇಯರಮೇನ ಪದವಿಯ ವಿಷಯದಲ್ಲಿ ಅನನುಕೂಲರಾಗಿಯೇ ಇದ್ದಾರು ಮತ್ತು ಇದ್ದಾರೆ. ಅವರಾದರೂ ಸಭೆಯಲ್ಲಿ ಪ್ರಕೃತ ಉಮೇದ್ವಾರರ ವಿಷಯದಲ್ಲಿರುವ ತಮ್ಮ ಅಸಮ್ಮತಿಯನ್ನು ಯಾಕೆ ಪ್ರಕಟಿಸಲಿಲ್ಲ? ಮನಸ್ಸಿನ ಚುನಾವಣೆಯು ಬೇರೆ ಇದ್ದು (ಬೇರೆ ಯಾರೂ ಇಲ್ಲೆಂಬ ಕಾರಣದಿಂದ) ಕಾಗದದಲ್ಲಿ ಇನ್ನೊಂದು ಚುನಾವಣೆಗೆ ಸಮ್ಮತಿಸುವುದೆಂದರೆ ಸಭಾಸದನ ಮತಸ್ವಾತಂತ್ರ್ಯಕ್ಕೆ ತೊಡಕು, ಸ್ವಾಭಿಮಾನಕ್ಕೆ ಕುಂದು ಮತ್ತು ಎಲ್ಲಕ್ಕೂ ಮೀರಿ ತನ್ನ ಮನೋದೇವತೆಯ ಸಶಸ್ತ್ರವಧವೇ ಸರಿ. ಹೇಗಾದರೂ ಮದುಮಗನಾಗಿ ಬರು

ವವನಿಗೆ ಮಾಲೆ ಹಾಕದೆ ಇದ್ದು ನಾಳೆ ಅವನೊಟ್ಟಿಗೇ ಕೆಲಸ ಮಾಡುವಾಗ ಈ ವೃಥಾ ಮನಃಕ್ಲೇಶವನ್ನೂ ವೈತುಷ್ಯವನ್ನೂ ಕಟ್ಟಿಕೊಳ್ಳುವುದು ಯೋಗ್ಯವಲ್ಲವೆಂದು ಸಮ್ಮತಿಸಿದ ಸಭಾಸದರು ಈ ತರದ ತಮ್ಮ ದೂರದರ್ಶಿತ್ವವನ್ನು ವ್ಯಕ್ತಪಡಿಸಿರಬಹುದು. ಆದರೆ ಅವರ ಈ ದೂರದರ್ಶಿತ್ವದ ಜೊತೆಗೇ ಅವರು ಮಾಡಿರುವ ಮತಸ್ವಾತಂತ್ರ್ಯದ ಮತ್ತು ಚುನಾವಣೆ ತತ್ವದ ದುರುಪಯೋಗವು ಸ್ಪಷ್ಟವಾಗಿ ಗೋಚರಕ್ಕೆ ಬರುವವು.

ಮೊನ್ನೆ ಆದ ಚುನಾವಣೆಯನ್ನು ಯಾವ ದೃಷ್ಟಿಯಿಂದ ನೋಡಿದರೂ ಅದನ್ನು ಸಮರ್ಥಿಸುವುದು ಸಾಧ್ಯವಿಲ್ಲ; ಅದು ಚುನಾವಣೆಯೇ ಅಲ್ಲೆಂದು ಎಷ್ಟೋ ಸಾರಿ ಹೇಳಿದರೂ ಅದು ಹೆಚ್ಚಾಗಲಿಕ್ಕಿಲ್ಲ. ಇದು ಮೆಂಬರುಗಳು ಮಾಡಿದ ಚುನಾವಣೆಯಲ್ಲೆಂತ ಹೇಳಿದ ಮೇಲೆ

ಸರಕಾರದವರ ನೇಮಕವೋ ಇದು?

ಅದೂ ಅಲ್ಲ. ಸರಕಾರದವರು ದಯಾಳುಗಳಾಗಿ ಚೇರ್ಮೇನರನ್ನು ಚುನಾಯಿಸುವ ಹಕ್ಕು ಪ್ರಜೆಗಳಿಗೆ ಬಿಟ್ಟುಕೊಟ್ಟಿರುವುದರಿಂದ ಇದರಲ್ಲಿ ಅವರು ಪ್ರವೇಶಿಸದೆ ಇರುವುದು ವಿಹಿತವೇ ಸರಿ. ಪ್ರಜಾವತ್ಸಲರಾದ ಲೋರ್ಡ್ ರಿಪನ್ ದೊರೆಗಳು ಹಿಂದೀ ಜನರಿಗೆ ಸ್ವರಾಜ್ಯದ ಅಡಿಪಾಯ ಅಥವಾ ಪೂರ್ವರಂಗವೆಂಬುದಾಗಿ ಕೊಟ್ಟ ಈ ಸ್ಥಾನಿಕ ಸ್ವರಾಜ್ಯಕ್ಕಾಗಿಯೂ ಅನಂತರ ಅದರ ಅಧ್ಯಕ್ಷರನ್ನು ಸಭಾಸದರೇ ಚುನಾಯಿಸಿ ತೆಗೆಯಲು ಮಾಡಿರುವ ಸುಧಾರಣೆಗಾಗಿಯೂ ನಾವು ಹಿಂದೀ ಜನರು ಸರಕಾರಕ್ಕೆ ತುಂಬಾ ಕೃತಜ್ಞರಾಗಬೇಕು. ಆದರೆ ಈ ಸುಧಾರಣೆಯ ಒಟ್ಟಿಗೇನೇ "ಸರಕಾರಿ ನೌಕರರು ಇದಕ್ಕೆ ಉಮೇದ್ವಾರರಾಗಿ ನಿಲ್ಲಕೂಡದು" ಎಂಬೀತರದ ಒಂದು ಪ್ರತಿಬಂಧವನ್ನು ಇಟ್ಟಿದ್ದಾದರೆ ಅದು ಈ ಹೊತ್ತಿನಂತಹ ಪ್ರಸಂಗಕ್ಕೆ ಆಸ್ಪದ ಕೊಡುತ್ತಿದ್ದಿಲ್ಲ. ಈಗ ಈ ತರದ ನಿರ್ಬಂಧವಿಲ್ಲಾದುದರಿಂದ ಡಾ। ವರ್ಗಿಸರಂಥವರು ಅಥವಾ ಇತರ ಜಿಲ್ಲಾಧಿಕಾರಿಗಳೇ ಉಮೇದ್ವಾರರಾಗಿ ನಿಂತದ್ದನ್ನು ನೋಡುವಾಗ ಸ್ಥಾನಿಕ ಸ್ವರಾಜ್ಯದ ಸುಧಾರಣೆಯು ಇನ್ನೂ ಪರಿಪಕ್ವವಾಗಲಿಲ್ಲೆಂತಲೇ ಹೇಳಬೇಕಾಗುತ್ತದೆ. ಇದ್ದದರಲ್ಲಿಯೇ ಸಮಾಧಾನ ಮಾಡಿಕೊಳ್ಳುವುದಾದರೆ ಇದರಲ್ಲಿಯೂ ಒಂದು ದಾರಿಯು ಕಂಡು ಬರುತ್ತದೆ. ಸರಕಾರದವರು ಜನರ ಉಪಯೋಗಕ್ಕಾಗಿ ಕೊಟ್ಟ ಹಕ್ಕನ್ನು ಅಧಿಕಾರಿಗಳಾದ ತಾವು ಉಪಯೋಗಿಸಿಕೊಂಡು ಬೇರೆಯವರ ಬಾಯಿಯೊಳಗಿನ ತುತ್ತನ್ನು ಸೆಳೆದುಕೊಳ್ಳುವುದು ಯಾಕೆ? ಅದು ಯೋಗ್ಯವಲ್ಲವೆಂದು ನೆನಸಿ ಅಧಿಕಾರಿಗಳು ಉದಾರಭಾವದಿಂದ ಆ ಹಕ್ಕನ್ನು ಜನರಿಗೆ ಬಿಟ್ಟುಬಿಡಬಹುದು. ಆದರೆ ಈ ಔದಾರ್ಯವನ್ನು ಪ್ರತಿಯೊಬ್ಬ ಅಧಿಕಾರಿಯಲ್ಲಿ ಅಪೇಕ್ಷಿಸುವುದು ಅನುಭವಸಿದ್ಧವಾಗಲಾರದು. ಆದುದರಿಂದಲೇ ಡಾ। ವರ್ಗಿಸರಂಥವರು ಉಮೇದ್ವಾರರಾಗಿ ನಿಲ್ಲುತ್ತಾರೆ, ಮತ್ತು ಚುನಾವಣೆಯೂ ನೇಮಕವೂ ಇವೆರಡೂ ಇಲ್ಲದೆ ಮೇಲೆ ಹೇಳಿದಂತೆ ಮೂರನೇ ವಿಧಾನದಿಂದ ಎಂದರೆ ಸ್ವಯಂ ಚುನಾಯಿಸಿಕೊಂಡು ಬರುತ್ತಾರೆ!

ಈ ಸ್ವಯಂಚುನಾವಣೆಯು

ಚುನಾವಣೆ ಅಲ್ಲ, ಒಂದು ಫಾರ್ಸ್! ಇರಲಿ. ನಾವು ಇಷ್ಟರವರೆಗೆ ಉಲ್ಲೇಖಿಸಿದ ಸಂಗತಿಗಳ ಮೇಲಿಂದ ಡಾ. ವರ್ಗಿಸರ ವಿಷಯದಲ್ಲಿ ನಮ್ಮ ಮತವು ಕಲುಷಿತವಾಗಿದೆಂದು ಮಾತ್ರ ಯಾರೂ ಭಾವಿಸಬಾರದು. ಅವರು ನಮ್ಮ ಮುನ್ಸಿಪಾಲಿಟಿಯ ಹಿತವನ್ನು ಇಲ್ಲಿಯ ಸ್ಥಾನಿಕ ಗೃಹಸ್ಥರಂತೆ ಆತ್ಮೀಯ ಬುದ್ಧಿಯಿಂದ ಮಾಡಬಲ್ಲರೋ? ಇದೇ ನಮ್ಮ ಪ್ರಶ್ನೆಯು. ಈಗ ಮನಸಿದ್ದರೆ ಅವರು ಅಂಗೀಕರಿಸಿದ ಈ ಕರ್ತವ್ಯವನ್ನು ಶ್ಲಾಘ್ಯ ರೀತಿಯಿಂದ ಮಾಡಲು ಸಮರ್ಥರು, ಅರ್ಹರು, ಬುದ್ಧಿವಂತರು. ಮತ್ತು ಅವರು ತಮ್ಮ ಪಾಲಿಗೆ ಬಂದ ಲೋಕಹಿತವನ್ನು ಸಾಧಿಸಿದ್ದಾದರೆ ನಾವು ಎಲ್ಲರಿಂದಲೂ ಮೊದಲೇ ಅವರ ಅಭಿನಂದನವನ್ನು ಮಾಡಲು ಸಿದ್ಧರಿದ್ದೇವೆ. ಮಾತ್ರವಲ್ಲ, ಅವರು ಸರಕಾರದ ಉದ್ಯೋಗಸ್ಥರಾಗಿ ಜನಹಿತವನ್ನು ಸಾಧಿಸುವುದಾದರೆ ನಮಗೆ ಅದು ಅಗತ್ಯವಾಗಿ ಬೇಕೇಬೇಕು. ಮತ್ತು ಅದನ್ನು ಅವರು ಸಾಧಿಸಬೇಕೆಂತಲೇ ನಾವು ಅವರಿಗೆ ಉಪದೇಶಿಸುತ್ತೇವೆ. ಆದರೆ ನಮ್ಮ ಆಕ್ಷೇಪವೇನೆಂದರೆ, ಜನರಿಗೆ ಕೊಟ್ಟ ಹಕ್ಕಿನಲ್ಲಿ ಅಧಿಕಾರಿಗಳು ಪ್ರವೇಶಿಸುವುದು ಯಾಕೆ? ಡಾ. ವರ್ಗಿಸರೆಂಬ ಹೆಸರಿಗಾಗಲಿ ವ್ಯಕ್ತಿಗಾಗಲಿ ನಮಗೆ ಯಾವ ದ್ವೇಷವೂ ಇಲ್ಲ, ವೈತುಷ್ಯವೂ ಇಲ್ಲ. ನಾವೂ ಅವರೂ ಸ್ನೇಹಿತರಾಗಿಯೇ ಇದ್ದೇವೆ, ಇನ್ನು ಮುಂದೆಯೂ ಸ್ನೇಹಿತರಾಗಿಯೇ ಇರುವೆವು. ಆದರೆ ಸ್ನೇಹಕ್ಕೂ ಪತ್ರಿಕಾಕರ್ತರ ಕರ್ತವ್ಯಕ್ಕೂ ಏನೂ ಸಂಬಂಧವಿಲ್ಲ. ಇದೇ ಡಾಕ್ಟರ ಮಹಾಶಯರ ಸ್ನೇಹಿತರಿಗೆ ಯಾವುದಾದರೊಂದು ಅಸ್ವಸ್ಥತೆ ಉಂಟಾದರೆ ಅದರ ಗುಣಕ್ಕಾಗಿ ಇವರೇ ಕಹಿ ಮತ್ತು ತೀಕ್ಷ್ಣ ಔಷಧಗಳನ್ನು ಪ್ರಯೋಗಿಸಲಿಕ್ಕೂ ಪ್ರಸಂಗವಿಶೇಷದಲ್ಲಿ ಶಸ್ತ್ರಪ್ರಯೋಗವನ್ನು ಮಾಡಲಿಕ್ಕೂ ಎಂದೂ ಹಿಂಜರಿಯರು. ಅದು ಅವರ ಕರ್ತವ್ಯವೇ ಸರಿ. ಇದು ಹೇಗೋ ಹಾಗೆಯೇ ನಮಗೂ ಕೂಡ ಯೋಗ್ಯವಾದ ಲೋಕಮತವನ್ನು ಪ್ರತಿಪಾದಿಸುವುದು ಕರ್ತವ್ಯವಾಗಿದೆ. ಆದುದರಿಂದ ಡಾಕ್ಟರ ಮಹಾಶಯರು ನಮ್ಮ ಮೇಲೆ ಸಿಟ್ಟುಮಾಡಲಿಕ್ಕೂ ಇಲ್ಲ, ತಮ್ಮ ಸ್ನೇಹವನ್ನು ಅನ್ಯಥಾ ಮಾಡಲಿಕ್ಕೂ ಇಲ್ಲೆಂದು ನಾವು ಸಮಾರೋಪದಲ್ಲಿ ಭರವಸೆಪಡುತ್ತೇವೆ.

ರಾಜಕೀಯ ಸ್ವಾತಂತ್ರ್ಯವೂ ಸಾಮಾಜಿಕ ಸುಧಾರಣೆಯೂ.

ಇದೊಂದು ಮಹತ್ವದ ವಿಷಯವು ಈ ವಿಷಯದ ಮೇಲೆ ಈಗ ಎಷ್ಟೋ ವರ್ಷಗಳಿಂದ ಎಷ್ಟೋ ಪ್ರಮುಖ ಸುಶಿಕ್ಷಿತರಲ್ಲಿ ಎಷ್ಟೋ ಸಾರಿ ಚರ್ಚೆಯು ನಡೆದು ಬಂದಿದೆ; ವಾದವಿವಾದವು ಆಗಿಹೋಗಿದೆ; ಮತಭೇದಗಳೂ, ಪಕ್ಷಭೇದಗಳೂ ಉದ್ಭವಿಸಿವೆ. ಆದರೂ ಈ ವಾಗ್ಯುದ್ಧದಲ್ಲಿ ಇಂತಹದೇ ಜಯಶಾಲಿಯೆಂದು ಮಾತ್ರ ನಿರ್ಣಯವಾಗಲಿಲ್ಲ. ಇದರ ಕಾರಣವು ಯಾವುದೇ ಆಗಿದ್ದರೂ 'ಬೀಜವು ಮೊದಲೋ ಮರವು ಮೊದಲೋ' ಈ ಪ್ರಶ್ನೆಯಂತೆ ರಾಜಕೀಯ ಸ್ವಾತಂತ್ರ್ಯ ಮತ್ತು ಸಾಮಾಜಿಕ ಸುಧಾರಣೆಯ ಪ್ರಶ್ನೆಯು ನಿಜವಾಗಿ ನಿರುತ್ತರವಲ್ಲ. ಆದರೂ ಆಯಾ ಮುಖಂಡರ ಪಕ್ಷಾಭಿಮಾನವು ಈ ವಿಷಯವನ್ನು ನಿರ್ಣಯಿಸಲು ಬಿಡುವುದಿಲ್ಲಾದುದರಿಂದಲೇ ಇದು ನಿರುತ್ತರವಿದ್ದಂತೆ ಕಾಣುತ್ತದೆ. ವಸ್ತುತಃ ಇದು ನಿರುತ್ತರವಲ್ಲ. ಈ ಪ್ರಶ್ನೆಯನ್ನು ಆಲೋಚಿಸುವವರು ಪಕ್ಷಾಭಿಮಾನವನ್ನು ಕೊಂಚ ಬಿಟ್ಟು ತತ್ವಾನ್ವೇಷಣ ದೃಷ್ಟಿಯಿಂದಲೇ ಆಲೋಚಿಸುವವರಾಗಬೇಕು. ಇಂತಹರಿಗೆ ಇದರ ನಿಃಸಂದಿಗ್ಧವಾದ ತೀರ್ಮಾನವು ಕೈಗೆ ಸಿಗುವುದು.

ರಾಜಕೀಯ ಸ್ವಾತಂತ್ರ್ಯ ಮತ್ತು ಸಾಮಾಜಿಕ ಸುಧಾರಣೆ ಈ ವಿವಾದದ ಸ್ವರೂಪವು ಬರೇ ಕನ್ನಡಿಗರಿಗೆ ತಿಳಿಯಲಿಕ್ಕಿಲ್ಲ. ಆದುದರಿಂದ ರಾಜಕೀಯ ಸ್ವಾತಂತ್ರ್ಯವೆಂದರೇನು, ಸಾಮಾಜಿಕ ಸುಧಾರಣೆಯು ಯಾವುದು, ಈ ಎರಡು ಭಿನ್ನ ಭಿನ್ನ ವಿಷಯಗಳಿಗೆ ಪರಸ್ಪರ ಸಂಬಂಧವೇನು ಇವೇ ಮುಂತಾದ ಪ್ರಶ್ನೆಗಳನ್ನು ಆವರಿಗಾಗಿ ವಿವರಿಸಿ ಮತ್ತೆ ಇದರ ತೀರ್ಮಾನವನ್ನು ಹೇಳಿದರೆ ಅದು ಕನ್ನಡಿಗರಿಗೆ ಹೆಚ್ಚು ಸುಬೋಧವಾಗಬಹುದೆಂದು ನೆನಸುತ್ತೇವೆ.

ನಾವು ಇಲ್ಲಿ ಉಪಯೋಗಿಸಿದ "ರಾಜಕೀಯ ಸ್ವಾತಂತ್ರ್ಯ"ವೆಂಬ ಶಬ್ದವು ಮಾತ್ರ ಗಂಭೀರವಲ್ಲದೆ ಯಾವ ಅರ್ಥದಿಂದ ನಾವು ಅದನ್ನು ಉಪಯೋಗಿಸಿರುವೆವೋ ಆ ಅರ್ಥವು ಅಷ್ಟೇನು ಆಳವಾದುದಲ್ಲ! "ಶಬ್ದಮಾತ್ರಾನ್ನ ಭೇತವ್ಯಮ್" ಎಂದರೆ ಬರೇ ಶಬ್ದ ಕೇಳಿಯೇ ಹೆದರ ಬಾರದು ಎಂದು ಪಂಚತಂತ್ರದಲ್ಲಿ ಹೇಳಿಯದೆ, ಆದುದರಿಂದ ಇದರ ಅರ್ಥವೇನು, ಕನಿಷ್ಟಪಕ್ಷಕ್ಕೆ ಇಲ್ಲಿ ಯಾವ ಅರ್ಥದಿಂದ ಅದು ಉಪಯೋಗಿಸಲ್ಪಟ್ಟಿದೆ ಇದನ್ನು ವಾಚಕರು ಮೊದಲಾಗಿ ತಿಳಿದುಕೊಳ್ಳಬೇಕು. ಐರ್ಲಂಡ ಮೊದಲಾದ ದೇಶಗಳ ಸಂಗತಿ ಇರಲಿ, ನಮಗೆ ಸರ್ವ ವಿಷಯಗಳಲ್ಲಿಯೂ ಆದರ್ಶಭೂತವಾದ ಇಂಗ್ಲಂಡದಲ್ಲಿ ಸಹ ಅನಾರ್ಕಿಸ್ಟ, ನಿಹಿಲಿಸ್ಟದಂತಹ ಆತತಾಯಿ (desperado)ಗಳಾದ ದುಷ್ಟ ಪಕ್ಷಗಳನ್ನು ವರ್ಜಿಸಿದರೂ, ಕನ್ಸರವೇಟಿವ್, ಲಿಬರಲ್, ನೆಶೆನಲಿಸ್ಟ, ಸೋಶಲಿಸ್ಟ ಮೊದಲಾದ ಅನೇಕ ರಾಜಕೀಯ ಪಕ್ಷಗಳಿವೆ. ಹಾಗೆಯೇ ನಮ್ಮಲ್ಲಿಯೂ ಶಾಂತ, ರಾಷ್ಟ್ರೀಯ ಎಂಬ ಎರಡು ಪಕ್ಷಗಳಿವೆ. ಕರ್ತವ್ಯಮಾರ್ಗದಲ್ಲಿ ಸಣ್ಣ ಸಣ್ಣ ಮತಭೇದಗಳಿದ್ದರೂ ಈ ಎರಡೂ ಪಕ್ಷಗಳ ಮಥಿತಾರ್ಥವೇನೆಂದರೆ, ಪ್ರಜೆಗಳಾದ ನಾವು ಸರಕಾರಕ್ಕೆ ಕಂದಾಯ ಮೊದಲಾದ ರೂಪದಿಂದ ಕೊಡುವ ಹಣವನ್ನು ನಮ್ಮ ಸಮ್ಮತಿ ಇಲ್ಲದೆ ವಿನಿಯೋಗಿಸುವುದು ಯೋಗ್ಯವಲ್ಲ; ಅದರ ಮೇಲ್ತನಿಕೆಯು ನಮ್ಮ ಜನರದಿರಬೇಕು; ತೆರಿಗೆಯ ಹಣವನ್ನು ವೆಚ್ಚ ಮಾಡುವ ಮಾತ್ರ ಅಧಿಕಾರವಲ್ಲ, ತೆರಿಗೆಯನ್ನು ಹೆಚ್ಚಿಸುವುದಾಗಲಿ, ಕಡಿಮೆ ಮಾಡುವುದಾಗಲಿ ನಮ್ಮ ಸಮ್ಮತಿಯಿಂದಲೇ ಆಗುವುದು ಹಿತಕರವು. ರಾಜ್ಯ ಕಾರಭಾರದ ಆಯಾ ಇಲಾಖೆಗಳ ವರಿಷ್ಠ ಅಧಿಕಾರವು ನಮ್ಮ ಜನರ ಕೈಯಲ್ಲೇ ಇರಬೇಕು; ಸ್ವತಃ ಹಿಂದೂ ದೇಶದ ಮತ್ತು ಸಾಮ್ರಾಜ್ಯದ ಹಿತಕ್ಕಾಗಿ ಬೇಕಾದ ಸೈನ್ಯ ಮೊದಲಾದುದು ನಮ್ಮ ಅನುಮತಿಯ ಮೇರೆಗೆ ಏರ್ಪಡಿಸಲ್ಪಡಬೇಕು; ಪರದೇಶಗಳೊಡನೆ ನಡೆಯತಕ್ಕ ವ್ಯಾಪಾರ ಇತ್ಯಾದಿ ಸಂಗತಿಗಳಿಗಾಗಿ ಮಾಡಬೇಕಾದ ಶರ್ತಗಳನ್ನು ಹಿಂದೀ ಜನರೇ ಮಾಡುವುದು ವಿಹಿತವು. ಸಾರಾಂಶ, ರಾಜ್ಯ ಕಾರಭಾರವು ಹಾಗಿರಬೇಕು; ಹೀಗಿರಬೇಕು ಎಂದು ಹತ್ತೆಂಟು ಮಾತುಗಳನ್ನು ಹೇಳುವುದಕ್ಕಿಂತ ಬ್ರಿಟಿಷ್ ಸಾಮ್ರಾಜ್ಯದ ಛತ್ರದಲ್ಲಿ ನಿಂತು ಎಂದರೆ ಗ್ರೇಟಬ್ರಿಟನ್ನಿನ ಸತ್ತೆಯನ್ನು ಮನ್ನಿಸಿಕೊಂಡು ಹಿಂದೀ ದೇಶವು ತನ್ನ ಎಲ್ಲ ಆಡಳಿತಗಳನ್ನು ತಾನೇ ಮಾಡಬೇಕೆಂದು ಕೋರುತ್ತದೆ; ಹೀಗೆ ಒಂದೇ ಮಾತಿನಿಂದ ಈಗಿನವರ ಆಕಾಂಕ್ಷೆಗಳನ್ನು ತಿಳಿಸಬಹುದು. ಹಿಂದೀ ರಾಜಕೀಯ ಸ್ವಾತಂತ್ರ್ಯವೆಂಬುದು ಇದೇ ಸರಿ. ಹೊರತು, ಪೂರ್ಣ ಸ್ವಾತಂತ್ರ್ಯವೆಂಬ ಅರ್ಥವಲ್ಲ.

ರಾಜಕೀಯ ವಿಷಯವನ್ನು ಬರೆಯುವಾಗ ಹಿಂದೀ ಲೇಖಕರಿಗೆ—ವಿಶೇಷತಃ ದೇಶೀಭಾಷೆಯ ಲೇಖಕರಿಗೆ ಶಬ್ದಗಳ ಮತ್ತು ವಾಕ್ಯಗಳ ಅರ್ಥ ಹಾಗು ಹೇತುವನ್ನು ಆಗಾಗ್ಗೆ ಸ್ಪಷ್ಟಪಡಿಸಬೇಕಾಗುವಂತೆ ಬೇರೆ ವಿಷಯದಲ್ಲಿ ಅಷ್ಟೊಂದು ಜಾಗ್ರತಿ ಇಟ್ಟು ಕೊಳ್ಳಬೇಕಾಗುವದಿಲ್ಲ. ಎಂದರೆ ಸ್ವೇಚ್ಛೆಯಿಂದ ಏನಾದರೂ ಬರೆಯಬಹುದೆಂದು ಯಾರೂ ತಿಳಿಯಕೂಡದು. ಈ ವಿಷಯಗಳಲ್ಲಿ ಅನರ್ಥಕ್ಕೆ ಹೆಚ್ಚಿನ ಆಸ್ಪದವಿಲ್ಲ ಇಷ್ಟೇ ನಮ್ಮ ಹೇಳಿಕೆ. ದೃಷ್ಟಾಂತಕ್ಕಾಗಿ ಪ್ರಕೃತ ಸಮಾಜ ಸುಧಾರಣೆಯನ್ನೇ ತೆಕ್ಕೊಳ್ಳೋಣ. ಸಮಾಜ ಸುಧಾರಣೆಯೆಂಬ ಶಬ್ದದಲ್ಲಿ ವಸ್ತುತಃ ಅನೇಕ ವಿಷಯಗಳ ಸಮಾವೇಶವಾಗುವ ಹಾಗುಂಟು. ಆದರೆ ನಮ್ಮ ಸಮಾಜ ಸುಧಾರಕರಿಗೆ ಸ್ತ್ರೀ ಶಿಕ್ಷಣ, ಪ್ರೌಢ ಸ್ತ್ರೀ ವಿವಾಹ, ಸ್ತ್ರೀ ಪುನರ್ವಿವಾಹ, ಪರದೇಶ ಗಮನ, ಜಾತಿ ಭೇದಗಳ ವಿಧ್ವಂಸನ, ಪೂರ್ವಾಚಾರಗಳ ಅವಹೇಲನೆ ಇವೇ ಮುಖ್ಯ ಸುಧಾರಣೆಗಳಾಗಿ ಕಾಣುತ್ತವೆ. ಸಮಾಜ ಸುಧಾರಣೆಯ ಸಂಗತಿಯಲ್ಲಿ ಇಷ್ಟೇ ವಿಷಯಗಳನ್ನು ಸೇರಿಸಿಕೊಂಡರೆ ಸಾಕೋ ಅಥವಾ ಅದರಲ್ಲಿ ಬೇರೆ ವಿಷಯಗಳೂ ಬರುವ ಹಾಗಿವೆಯೋ ಎಂಬುದನ್ನು ಇಲ್ಲಿ ಪ್ರಸ್ತಾಪಿಸಿದರೆ ಅದು ವಿಷಯಾಂತರವಾದೀತು; ಆದುದರಿಂದ ಅದನ್ನು ಒಂದು ಸ್ವತಂತ್ರ ಲೇಖದಲ್ಲಿಯೇ ಚರ್ಚಿಸುವುದು ಒಳ್ಳೇದು. ಈಗಿನ ಸುಧಾರಕರು ಹೇಳುವಂತೆ ಇವೇ ಮುಖ್ಯ ಸುಧಾರಣೆಗಳೆಂದು ತಿಳಿದರೂ ಅವರು ಹೇಳುವ ಇನ್ನೊಂದು ಮಾತು ಮಾತ್ರ ಬಹು ಆಶ್ಚರ್ಯಕರವಾಗಿದೆ. ಅದು ಯಾವುದೆಂದರೆ, ಈ ಸಮಾಜ ಸುಧಾರಣೆಯನ್ನು ಮಾಡಿಕೊಳ್ಳದೆ ರಾಜಕೀಯ ಸ್ವಾತಂತ್ರ್ಯಕ್ಕೆ ನಾವು ಅರ್ಹರಾಗಲಾರೆವು. ಈ ಮಾತು ಮೇಲಿಂದ ಮೇಲೆ ನೋಡುವವರಿಗೆ ನಿರಾಕ್ಷೇಪವಾಗಿ ಕಂಡರೂ ಐತಿಹಾಸಿಕ ದೃಷ್ಟಿಯಿಂದ ಇದು ಪ್ರಮಾಣಕೋಟಿಯಲ್ಲಿ ಸರ್ವಥಾ ಸೇರುವುದಿಲ್ಲ. ಉದಾಹರಣೆಗಾಗಿ "ಸ್ತ್ರೀ ಶಿಕ್ಷಣ" ಎಂಬೀ ಲೋಕಪ್ರಿಯವಾದ ವಿಷಯವನ್ನೇ ಆಲೋಚಿಸಿರಿ. ಸ್ತ್ರೀಶಿಕ್ಷಣವಿಲ್ಲದೆ ದೇಶೋನ್ನತಿ ಆಗುವುದಿಲ್ಲವೆಂದು ಸುಧಾರಕರು ಹೇಳುತ್ತಾರೆ. ಆದರೆ ಮೇಲೆ ಹೇಳಿದಂತೆ ಒಬ್ಬ ವಿದ್ವಾಂಸರು ಸಪ್ರಮಾಣವಾಗಿ ಹೇಳುತ್ತಾರೇನೆಂದರೆ, ಜಪಾನ ದೇಶವು ತನ್ನ ಉನ್ನತಿಯನ್ನು ಸಾಧಿಸಿಕೊಳ್ಳುವುದಕ್ಕಿಂತ ಮುಂಚೆ ಸ್ತ್ರೀಯರಿಗೆ ಖಡ್ಡಾಯದ ಶಿಕ್ಷಣವನ್ನು ಏರ್ಪಡಿಸಿದ್ದಿಲ್ಲ. ರೂಸೊ ಜಪಾನಿ ಯುದ್ಧದಲ್ಲಿ ತಮ್ಮ ಮಕ್ಕಳನ್ನು ಮಾತೃದೇಶಕ್ಕಾಗಿ ಅರ್ಪಿಸಿದ ಜಪಾನಿ ಸ್ತ್ರೀಯರು ನಿರಕ್ಷರಿಗಳಾಗಿಯೇ ಇದ್ದರು. ಚಾಯನಾ ದೇಶವು ಈಗ ತನ್ನ ಸುಧಾರಣೆಯನ್ನು ಮಾಡಿಕೊಳ್ಳುತ್ತಿದೆ; ಅಲ್ಲಿ ಸ್ತ್ರೀಯರು ಇಲ್ಲಿಯವರಂತೆ ಅಶಿಕ್ಷಿತರಾಗಿಯೇ ಇದ್ದಾರೆ. ಪರ್ಶಿಯಾ ದೇಶದಲ್ಲಿ "ಬಹಾಈ" ಧರ್ಮಕ್ಕಾಗಿ ತಮ್ಮ ಆತ್ಮವನ್ನು ಅರ್ಪಿಸಿದ ವೀರಾಂಗನೆಯರು ವಿದ್ಯಾಭೂಷಿತರಲ್ಲ; ಅಶಿಕ್ಷಿತರೇ ಸರಿ. ಆಸಿಯಾ ಖಂಡದ ಸಂಗತಿಯನ್ನು ಬಿಟ್ಟು ಆಧುನಿಕ ಸುಧಾರಣೆಯ ಮೂಲಸ್ಥಾನವಾದ ಯುರೋಪದ ಕಡೆಗೆ ನೋಡಿರಿ. ಅಲ್ಲಿ ವಿವಾಹ ಸಮಯದಲ್ಲಿ ಸ್ತ್ರೀಪುರುಷರು ತಮ್ಮ "ಸಹಿ"ಯನ್ನು ಹಾಕಬೇಕಾಗುತ್ತದೆ. ಆ ಕಾಲದಲ್ಲಿ ಸ್ತ್ರೀಯರ ಅನಕ್ಷರತ್ವವು ದೃಗ್ಗೋಚರವಾಗುತ್ತದೆ. ಸ್ಥೂಲಮಾನದಿಂದ ಇಡೀ ಯುರೋಪದ ಸ್ಥಿತಿಯು ಸ್ತ್ರೀವಿದ್ಯಾಭ್ಯಾಸದ ಮಟ್ಟಿಗೆ ಮುಂದರಿಸಿದ್ದಾದರೂ ಅಲ್ಲಿ ಅಶಿಕ್ಷಿತರ ಸಂಖ್ಯೆಯು ಕಡಿಮೆ ಇಲ್ಲ. ಈ ವಿಷಯದಲ್ಲಿ ಇಂಗ್ಲಂಡ ಮತ್ತು ಫ್ರಾನ್ಸ ಈ ಎರಡು ದೇಶಗಳೊಳಗಿನ ಅನಕ್ಷರ ಸ್ತ್ರೀಯರ ಸಂಖ್ಯೆಯನ್ನು ನೋಡಿದರೆ ಅಲ್ಲಿಯ ಸ್ತ್ರೀಶಿಕ್ಷಣದ ಮಾನವು ಕಂಡುಬರುವುದು. ಇಂಗ್ಲಂಡ ಮತ್ತು ವೇಲ್ಸದಲ್ಲಿ ೧೮೭೬ರಿಂದ ೧೮೮೦ ವರೆಗಿನ ಅನಕ್ಷರ ಸ್ತ್ರೀಯರು ಸಾವಿರಕ್ಕೆ ೯೮; ೧೮೮೧ರಿಂದ ೧೮೮೫ ವರೆಗಿನವರು ೭೭; ೧೮೯೬ರಿಂದ ೧೯೦೦ ವರೆಗಿನವರು ೩೦; ಫ್ರಾನ್ಸಿನಲ್ಲಿ ೧೮೭೬ರಿಂದ ೧೮೮೦ ವರೆಗಿನವರು ೧೬೦; ೧೮೮೧ರಿಂದ ೧೮೮೫ ವರೆಗಿನವರು ೭೦; ಮತ್ತು ೧೮೯೬ರಿಂದ ೧೯೦೦ ವರೆಗಿನವರು ೧೧೦ ಸ್ತ್ರೀಯರು ಅನಕ್ಷರಿಗಳು. ಸ್ತ್ರೀಶಿಕ್ಷಣದ ಸ್ಥಿತಿಯು ಆ ದೇಶಗಳಲ್ಲಿ ಹೀಗಿದ್ದರೂ ಅವರ ರಾಜಕೀಯ ಸ್ವಾತಂತ್ರ್ಯಕ್ಕೆ ಯಾವ ತೊಡಕೂ ಬರುವುದಿಲ್ಲ. ಆದರೆ ನಮ್ಮ ತೀವ್ರ ಸುಧಾರಕರಿಗೆ ಮಾತ್ರ ಸಮಾಜಸುಧಾರಣೆಯಾಗದೆ ರಾಜಕೀಯ ಉನ್ನತಿಯು ನಿಷ್ಪ್ರಯೋಜನವು ಕೆಂಬಹುನಾ ಅಸಾಧ್ಯವೆಂತ ಕಾಣುತ್ತದೆ. ತಾತ್ವಿಕವೇನು, ವ್ಯಾವಹಾರಿಕವೇನು ಯಾವ ದೃಷ್ಟಿಯಿಂದ ವಿಚಾರಮಾಡಿ ನೋಡಿದರೂ ರಾಜಕೀಯ ಉನ್ನತಿಗೆ ಸಾಮಾಜಿಕ ಸುಧಾರಣೆಯು ಮೊದಲನೆ ಮೆಟ್ಟು ಅಲ್ಲ. ಅಧ್ಯಾತ್ಮ ಶಾಸ್ತ್ರದಲ್ಲಿ ಆತ್ಮನ ಮೋಕ್ಷಕ್ಕೆ ಚಿತ್ತಶುದ್ಧಿಗಾಗಿ ಕರ್ಮದ ಮೆಟ್ಟಿಲನ್ನು ಹತ್ತಿ ಅನಂತರ ಜ್ಞಾನಮಂದಿರದಲ್ಲಿ ಪ್ರವೇಶಿಸಬೇಕೆಂದು ಹೇಳಿದೆ. ಹಾಗೆ ಸಾಮಾಜಿಕ ಸುಧಾರಣೆಯು ಒಂದು ಸೋಪಾನವಲ್ಲ; ನಿಕಷವೂ ಅಲ್ಲ. ದೇಶೋನ್ನತಿಯ ಋಜು ಮತ್ತು ಮಾನ್ಯವಾದ ಮಾರ್ಗವು ಯಾವುದೆಂಬುದನ್ನು ಈ ಪ್ರಸಂಗದಲ್ಲಿ ಹೇಳಬೇಕಾಗಿ ಬರುತ್ತದೆ. ಆದರೆ

... ಹಾಜರಾಗುವ ವರೆಗೆ ಆಕ್ಟಿಂಗ್

ಪತ್ರವ್ಯವ ...ರಬೇಕಾಗಿರುವದು.

ಪರಿಭಾವನೆಗಳು. ಬೀಬಿ ಅಲಾಬಿಯ

———:o:——— ...ಬ್ಯಾರಿಯನ್ನು

ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸೆನಿಟರಿ ಆಫೀಸರರಾದ ...ಕೊಲೆಗೆ ಡಾಕ್ಟರ್ ವರ್ಗೀಸರವರು ಕಳೆದ ಶನಿವಾರ ನಡೆದ ಮುನ್ಸಿಪಾಲ್ ...ಪೋಲಿಸಿ ಚುನಾವಣೆಯಲ್ಲಿ ಪಟ್ಟಣಕಾತರ ಏಕಮತದಿಂದ ಛೇಯರ್ಮೇನರಾ...ಮಾಡಿ ರೆಂದು ಕೇಳಿದೆ. ರಾವ್ ಸಾಹೇಬ ಡಾಕ್ಟರ್ ವರ್ಗೀಸರವರು ...ನಡಿಯು ಛೇಯರ್ಮೇನರಾಗಿ ಆರಿಸಲ್ಪಟ್ಟದ್ದು ಒಂದು ಬಗೆಯಲ್ಲಿ ಒಳ್ಳೇದೇ ... ಹೀಗೆ ನಮ್ಮ ಪಟ್ಟಣಕಾತರು ಏಕಮತವನ್ನು ಈ ಸಂಧರ್ಭದಲ್ಲಿ ಬಹಿರಂ...ದ್ದರಿಂದ ಮುಂದಿನ ಪಟ್ಟಣದಭಿವೃದ್ಧಿ ಸಾಧನೆಯು ಸರಾಗವಾಗಿ ...ಟು ಆಸ್ಪದವಾದಂತಾಯಿತು. ಪರಂತು, ಈ ಏಕಮತವು ಪಟ್ಟಣದ ಜನಸ್ತೋಮದ ಮತಕ್ಕೆ ಒಪ್ಪುತ್ತದೋ ಏನೆಂಬದು ಸಂಶಯಾಸ್ಪದವಾಗಿದೆ.

* * *

ರಾವ್ ಸಾಹೇಬ ಡಾಕ್ಟರ್ ವರ್ಗೀಸರವರು ಡಿಸ್ಟ್ರಿಕ್ಟ್ ಮೆಡಿ... ಮತ್ತು ಸೆನಿಟರಿ ಆಫೀಸರರು ಎಂದು ಹೇಳಿದೊಡನೆ ಅವರ ಕೆಲಸದ ಮ... ಉತ್ತರವಾದಿತ್ವವೂ ಎಷ್ಟೆಂಬದು ಜನಸಾಮಾನ್ಯರಿಗೆ ತಿಳಿಯದೇ ಇರದು. ...ಮುನ್ಸಿಪಲ್ ಆಸ್ಪತ್ರೆ, ಸೆನಿಟರಿ, ಪ್ಲೇಗ್ ಇಲಾಖೆಗಳಿಗೆ ಇವರೇ ಪ್ರಧಾನರು. ...ಪತ್ರೆಯನ್ನು ಬೆಳಿಗ್ಗೆ ಸಾಯಂಕಾಲ ಸಂದರ್ಶಿಸುವದು ಮಾತ್ರವೇ ಅಲ್ಲ; ...ಲೇ ಇದ್ದು ಕೊಂಡು ಒಳಹೊರ ರೋಗಿಗಳ ವಿಚಾರಗಳನ್ನು ನಡಿಸಬೇಕು. ...ವಸ್ಥೆಯಲ್ಲಿರುವ ರೋಗಿಗಳ ಪರೀಕ್ಷೆ ನಡಿಸಿ, ಅವಶ್ಯಕವಿದ್ದ ಸಾಮಾನ್ಯ... ಕೂಡಾ ಮಾಡತಕ್ಕವರೇ ಇವರು. ಅದರಲ್ಲಿಯೂ ಪಟ್ಟಡಿಸುವರೆ ...ದ್ದರೆ ಶಸ್ತ್ರ... ಅವರ ಮನೆಗಳಿಗೆ ದಿವಸಕ್ಕೆ ಒಂದೆರಡು ಸಾರಿ, ಕರೆಯಾ... ...ಣದ ...ವು ನ್ನದೆ ಸಂದರ್ಶಿಸಿ ರೋಗಿಗಳ ಉಪಚಾರ ನಡಿಸುವ ಕರ್ತವ್ಯ ... ನಾಡ ಕಡೆ ಸೆನಿಟರಿ ಸಂಬಂಧವಾದ—ಪಟ್ಟಣದ ಆರೋಗ್ಯವನ್ನು ಕಾಪಾಡುವ ... ಅಹ ದಲ್ಲಿ ಅನಾರೋಗ್ಯವು ನೆಲೆಗೊಳ್ಳದಂತೆ ನಿವಾರಣೋಪಾಯಗಳನ್ನು ... ಕಾರ್ಯವು ಇವರಿಗಿದೆ. ಮುನ್ಸಿಪಾಲಿಟಿಯ ಮಾರ್ಕೆಟುಗಳಲ್ಲಿ ಮಾರಾ... ಕೊಯ್ಯುವ ಕುರಿ ಆಡು ದನಗಳ ಪರೀಕ್ಷೆಯೂ ಇವರೇ ಮಾಡಬೇಕಾಗಿ... ...ಸಾನಗಳು

* * *

ಇಷ್ಟೇ ಅಲ್ಲ; ಡಿಸ್ಟ್ರಿಕ್ಟಗಳ ಆಯಾ ತಾಲೂಕು ಪ್ರಾಂತ್ಯಗಳಲ್ಲಿ... ಪಾವಂಜಿ ಫಂಡ್ ಆಸ್ಪತ್ರೆಗಳ ಮೇಲ್ವಿಚಾರಣಾ ಕರ್ತರೂ ...ವ ಡಾಕ್ಟರ ಕೇಡಿ ಪೂವ ವರ್ಷಕ್ಕೆ ಒಂದೆರಡುಸಾರಿ ಈ ಆಸ್ಪತ್ರೆಗಳನ್ನು ಸಂದರ್ಶಿಸ ... ...ಕೋರ್ಟಿನಲ್ಲಿರುವ ನಡಿಸಬೇಕು. ಈ ಆಸ್ಪತ್ರೆಗಳಲ್ಲಿರುವ ಕಂಪೌಂಡರ್ ... ...ಸಾವೆಗೆ ...ಂಟ ದೊರೆಗಳ ಸಲಹೆಗಳನ್ನು ಕೊಡಬೇಕು. ಇಡೀ ಡಿಸ್ಟ್ರಿಕ್ಟಿನಲ್ಲಿ ಆಷ್ಟು ... ದೂ... ತಕ್ಕ ವ್ಯವಸ್ಥೆ ನಡಿಸುವ ಮಹಾ ಕರ್ತವ್ಯವು ಇವರಿಗೆ ... ...ಜಿಸ್ಟ್ರೇಟರಿಂದ ರಾವ್ ಸಾಹೇಬ್ ಡಾಕ್ಟರ್ ವರ್ಗೀಸರರವರ ಕೆಲಸದ ... ...ಂಗಳ ... ಜುಡಾನ್ ಜನ ಸಾಮಾನ್ಯರ ಮುಂದೆ ಇಟ್ಟಂತಾಯಿತು. ...ತನವಿಯು

* * *

...ತ್ತು ೫ನೇ ಅಪ...

ಮುನ್ಸಿಪಲ್ ಆಸ್ಪತ್ರೆ, ಮುನ್ಸಿಪಲ್ ...ರದ...ಖಾತೆ, ...ಭಿಪ್ರಾಯಪಟ್ಟದ್ದ ಲೋಕಲ್ ಫಂಡ್ ಆಸ್ಪತ್ರೆಗಳು, ಡಿಸ್ಟ್ರಿಕ್ಟು ಆರೋಗ್ಯ ಈ ಮ... ...ನಿಗೆ ೫ ವರ್ಷಗಳ ಕಠಿಣ ಇನ್ನೂ ಇರಬೇಕಾದ ವ್ಯವಸ್ಥೆಯಲ್ಲಿ ಇರುವದಿಲ್ಲ. ಸುಧಾರ... ...ನೇ ಆಪಾದಿತನ ವಿಷಯ ತಂದಿರಿಸುವಂಥಾ, ಅವನ್ನು ಮೇಲ್ಮಟ್ಟಿಗೆ ತಂದು ...ಂಥಾ ...ಅಭಿಪ್ರಾಯವು ಜಡ್ಜರಿಗೆ ಡಾಕ್ಟರ್ ವರ್ಗೀಸರವರು ರಾತ್ರಿ ಹಗಲು ಚಿಂತಿ... ...ಗಳ ಹೈಕೋರ್ಟಿನ ಅನುಮತಿ ಮತ್ತೂ ಅವನ್ನು ಸಂಪೂರ್ಣಗೊಳಿಸಲು ಅಸಾಧ್ಯವಾದ್ದು ... ...ದ ಆಪಾದಿತನನ್ನು ಜಡ್ಜರು ಹೊತ್ತುಕೊಂಡ ಇವರ ಕೈಯ ನಮ್ಮ ಪಟ್ಟಣದವರಿಗೆ ಬಿಟ್ಟುಕೊಟ್ಟದ್ದು ಚಿನ್ನವನ್ನು ಪುಟಕಿಟ್ಟಂತೆ ಆಯಿತು. ...ಮುನ್ಸಿಪಾಲ್ ಛೇಯರ್...

* * *

...ದ್ಯಾರರಾಗಿ ನಿಂತಿದ್ದ ರಾವ್ ...ರು ಮತ್ತು ರಟಾ... ರಾ| ಪಾಂಡುರಂಗ ...ರಂಗ ಕಿಣಿಯವರು

...೮ ಮಂದಿಗಿಂತ

ವವನಿಗೆ ಮಾಲೆ ಹಾಕದೆ ಇ...
ಮನಃಕ್ಲೇಶವನ್ನೂ ...ದ್ದೂರ್ ಖಾನ್ ಎಂಬ ಮಹಮ್ಮ
ಸಿದ ಸ...ವೆಯಾದ ೧೮ ವರ್ಷದ ಮೇರಿಹೊರ್ಸೆ
ಆದಕ್ಕೈರೋಪಿಯನ ಹುಡುಗಿಯನ್ನು ಗಂಡನು ...
ಮತ್ತ ಮೇಲಿನಿಂದ ಕೆಳಗೆ ಬಿಸಾಡಿರುವನೆಂಬೂ
...ತ್ತಿದ್ದ ಅವಳನ್ನು ಪೋಲಿಸಿನವರು ಆಸ್ಪ
ನಮ್ಮವರೆಂದೂ ವಾರ್ತೆ ಬಂದದೆ. ಹುಡುಗಿಯು
...ದಂಡ ಸ್ಥಿತಿಯಲ್ಲಿರುತ್ತಾಳೆ.

ಭಾರತೀಯ ಮಹಿಳೆಯರಿಗೆ ವಿದ್ಯಾಭ್ಯಾಸವನ್ನು ...
...ಕೊಡುವ ಏರ್ಪಾಡು ಮಾಡುವ ಉದ್ದೇ...
...ದಿನಲ್ಲಿ ...ದು ಸಂಘವು ಸ್ಥಾ...
...ವರು ಈ ಸಂ...

...ಸ್ವಪ್ನ...
ಮೇರ್ನ...
ಘಂಟೆ ಸಭೆ ತೀರಿದ ನಂತರ ಪಂಜಾಬಿನ ಚೀಫ್
...ಘಂಟೆ ಹೈಕೋರ್ಟಿ...ಗಿ ಮಾಡುವ ಏರ್ಪಾಡು
ಆಫೀಸಿನ...ನರಲ್...ಜನರಲರವರು ಪ್ರಕ
...ತರದ ನಿರ್ಬಂಧ
...ರಗಳೇ ...
...ವಿದ್ಯಾನಿಧಿ ಎಂಬ ಬ್ರಾಹ್ಮಣ್
...ನೀಲರಿಗೆ ಸ್ಥಳಿಕ ಸಬ್
...ಯವರು ಹೊಡದರೆಂಬ
...ಸ್ಟಿಕ್ಟ್ ಮೇಜಿಸ್ಟ್ರೇಟರಲ್ಲಿ
...ಗ ತಾನೇ ಮಿ! ಪ್ರಿಂಗ್ಲ
...ಗೃಹಸ್ಥರ ಮುಂದೆ
...ವರು ಈ ಮೊಕದಮೆ
...ಅಮೃತಬಜಾರ ಪತ್ರಿಕೆ
...ಮಿ! ಪಿಂಗ್ಲೆಯವರು "ನಾನು
ವಿಧಾನ...ಲೊಡಳಂತೆ ಸ್ವೇನೆ, ದಯಮಾಡಿ
...ಲಂತಗಾ... ...ನನ್ನು ಹಿಂದೆಗೆಯ
...ಕೋರ್ಟಿಗ
...ಸಿದ ...ತ್ತರುತ್ತಿದ್ದರೆ ನಾನು ಈ
ವ...ಕೇಳುತ್ತಿದ್ದೆನು" ಎಂದು ಬಂಗಾಳಿ
...ಳಿದರಂತೆ. ಭಾರತ್ ಬಾಬು
ಇವ... ...ಕ್ಷಮಾಪಣೆ ಕೇಳಿ ನಿಮ್ಮ
ವನ್ನು ...ದ್ ಗೃಹಸ್ಥರೊಳಗಿರುವ
ಮತ್ತು ... ಕ್ಷಮಿಸಿದ್ದೇನೆ.
...ರಿಂದಲೂ ... ಸಭೆಗೆ ಎಂದು ಹೇಳಿದ
ವಲ್ಲ; ಅವ...ರರವರ...
ನವುಗೆ ಅದು ...ದ ೧೦
ಕೆಂತಲೇ ನಾ... ರೈಲ್ವೆಯಲ್ಲಿ ಪ್ರಯಾ
...ಕಂಪಾರ್ಟ್‌ಮೆಂಟ್
ರಿಗೆ ಕೊಟ್ಟ... ಒಬ್ಬನು ನುಗ್ಗಿ ಆ
ಹೆಸರಿಗಾಗಲಿ ... ಹಣವನ್ನು ಕೊಡಬೇ
ನಾವೂ ಅ...ತ್ತೇನೆಂತ ಹೆದರಿಸಿದನು.
ಇರುವೆನ...
ಇಧೆ...
ದರೆ...
ಪ್ರಸಂಗ...
ಆದು ಅವ...

...ಸಾಹಸಕನಾದ ಸರಿಗೆಯನ್ನು ಎಳೆಯ ...ಳು. ಆದರೆ ಸಾಧ್ಯವಾಗಲಿಲ್ಲ. ಅವಳು ಕಳ್ಳನೊಡನೆ ಹೋರಾಡಿದ್ದರಿಂದ ಮೈತುಂಬಾ ಗಾಯಗಳಾದವು, ಕಡೆಗೆ ಇದ್ದ ಹಣವನ್ನೆಲ್ಲಾ ಕೊಟ್ಟುಬಿಟ್ಟಳು. ಆಗ್ಗಾಡಿಯು ಮತ್ತೊಂದು ಸ್ಟೇಶನಿಗೆ ಹೋಗಿ ನಿಲ್ಲುತ್ತಲೇ ಕಳ್ಳನು ಗಾಡಿಯೊಳಗಿಂದ ಹಾರಿ ತಪ್ಪಿಸಿಕೊಂಡನು ಎಂಬ ವಾರ್ತೆ ಬಂದಿದೆ.

~~~~~

ಪಂಜಾಬಿಗೆ ಸೇರಿದ ಥಕರ್ವಾಲ ಠಾಣದಲ್ಲಿಯ ೮-೯ ವರ್ಷ ವಯಸ್ಸಿನ ಒಬ್ಬ ಸಿಕ್ಕ ಹುಡುಗನನ್ನು ಕೆಲವು ಮಹಮ್ಮದೀಯರು ನಪೂಳ್ ಎಂಬ ಗ್ರಾಮಕ್ಕೆ ಕೊಂಡು ಹೋಗಿ, ಅವನ ಕೂದಲನ್ನು ಕತ್ತರಿಸಿ, ಮಾಂಸವನ್ನು ಬಲತ್ಕಾರದಿಂದ ತಿನ್ನಿಸಿ, ಮುಹಮ್ಮದೀ ಮತಕ್ಕೆ ಸೇರಿಸಿಕೊಂಡರೆಂ... ...ಟ್ರಿಬ್ಯೂನ್" ಪತ್ರಿಕೆಯ ಬಾತ್ಮೀದಾರರು ... ಅನಂತರ ಹುಡುಗನ ರಕ್ಷಕರು ಆ ...ಪೋಲಿಸ್ ಸಬ್ ಇನ್ಸ್‌ಪೆಕ್ಟರರ ಸಹಾಯ... ಆ ಮುಹಮ್ಮದೀಯರ ಮೇಲೆ ಪಿರ್ಯಾದಿ ...ರು.

~~~~~

...ಮುಂಬಾಯಿಯ ಸರ್ ಇಬ್ರಾಹಿಂ ರಹಿಮುತುಲ್ಲಾ ಮತ್ತು ಮಿ! ಡಿ. ಇ. ವಾಛರವರು ವರಿಷ್ಟ ನ್ಯಾಯವಿಧಾಯಕ ಸಭೆಯ ಮೆಂಬರರಾಗಿ ಆರಿಸಲ್ಪಟ್ಟಿರುವರು.

~~~~~

ಜೂನು ತಾ. ೧೬ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ೬೨೦ ಮಂದಿಗೆ ಪ್ಲೇಗಬೇನೆಯು ಸೋಂಕಿ ೨೪೬ ಮಂದಿ ಮೃತರಾದರು. ಈ ಪೈಕಿ ಮುಂಬಾಯಿ ೭೨; ಮದ್ರಾಸ್ ೧೩; ಸಂಯುಕ್ತ ಸಂಸ್ಥಾನ ೩; ಪಂಜಾಬು ೮; ಬರ್ಮ ೧೧೩; ಮೈಸೂರು ೩೧; ಮತ್ತು ಹೈದರಾಬಾದ್ ೫ ಮರಣಗಳಾಗಿರುವವು.

~~~~~

ಕಳೆದ ಶುಕ್ರವಾರ ರಾತ್ರಿ ಡಕ್ಕಾ ಮುನಿಸಿಪಾಲಿಟಿ ಚೆಯರ್ಮನರ ಮನೆಯ ಸಮೀಪ ನಿಂತುಕೊಂಡಿದ್ದ ಸುರೇಂದ್ರ ಭೂಷಣ ಮುಕರ್ಜಿ, ಮತ್ತು ರೋಹಿಣಿ ಮುಕರ್ಜಿ ಎಂಬ ಇಬ್ಬರು ಪೋಲಿಸ ಆಫೀಸರರಿಗೆ ಯಾರೋ ಗುಂಡುಹೊಡೆದು ಕೊಂದುಬಿಟ್ಟರು ಎಂಬ ವಾರ್ತೆ ಬಂದಿರುತ್ತದೆ. ಇತರ ಪೋಲಿಸ ಆಫೀಸರರು ಒಂದು ಸತ್ತುಬಿದ್ದ ಈ ಇಬ್ಬರು ಆಫೀಸರರನ್ನು ಆಸ್ಪತ್ರೆಗೆ ವೈದಿರುತ್ತಾರೆ. ರೋಹಿನಿ ಮುಕರ್ಜಿಗೆ ೯ ಗಾಯಗಳಾಗಿರುವವು, ಸುರೇಂದ್ರ ಮುಕರ್ಜಿಗೆ ೫ ಗಾಯಗಳಾಗಿರುವವು. ಘಾತುಕರ ಪತ್ತೆಯಾಗಲಿಲ್ಲ.

~~~~~

೧೯೧೫ನೇ ಇಸವಿಯಲ್ಲಿ ಮುಂಬಾಯಿ ಸಂಸ್ಥಾನದಲ್ಲಿ ದುಷ್ಟಮೃಗಗಳಿಂದ ಮತ್ತು ವಿಷಜಂತುಗಳಿಂದ ನಾಶವಾದ ಮನುಷ್ಯರ ಮತ್ತು ಮೃಗಗಳ ಸಂಖ್ಯೆಯು ಹೆಚ್ಚಿರುವುದು. ಕಳೆದ ವರ್ಷ ೪೬ ಮಂದಿ ದುಷ್ಟಮೃಗಗಳಿಗೆ ಆಹುತಿಯಾದರು. ೧೯೧೪ರಲ್ಲಿ ೧೮; ೧೯೧೩ರಲ್ಲಿ ೧೩ ಮಂದಿ ಮಾತ್ರ ದುಷ್ಟಮೃಗಗಳ ಆಹುತಿಯಾಗಿದ್ದರು. ಹಾವುಗಳ ಕಡಿತದಿಂದ ಮೃತರಾದವರ ಸಂಖ್ಯೆಯು ಮತ್ತಷ್ಟು ಹೆಚ್ಚಿರುತ್ತದೆ. ೧೯೧೩ನೇ ಇಸವಿಯಲ್ಲಿ ೧೪೦೭ ಮಂದಿ, ೧೯೧೪ರಲ್ಲಿ ೧೭೦೮ ಮಂದಿ, ಕಳೆದ ವರ್ಷ ೧೭೮೯ ಮಂದಿ ಹಾವುಗಳ ಕಡಿತದಿಂದ ಮೃತರಾದರು. ಹುಲಿ, ಚಿರತೆ, ಕಾಡುಹಂದಿಗಳೇ ಮನುಷ್ಯರ ಕೊಲೆಗೆ ಕಾರಣ. ದುಷ್ಟಮೃಗಗಳಿಂದ ಮತ್ತು ಹಾವುಗಳಿಂದ ಕೊಲೆಯಾದ ಮೃಗಗಳ ಸಂಖ್ಯೆ ೧೯೧೩ನೇ ಇಸವಿಯಿಂದ ತಗ್ಗಿರುತ್ತದೆ. ೧೯೧೩ನೇ ಇಸವಿಯಲ್ಲಿ ಒಟ್ಟಿಗೆ ೯೯೮ ಮೃಗಗಳು ತುತ್ತಾಗಿದ್ದವು. ೧೯೧೪ರಲ್ಲಿ ೯೪೨ ಮೃಗಗಳು, ೧೯೧೫ರಲ್ಲಿ ೭೫೩ ಮೃಗಗಳು ಮಾತ್ರ ಆಹುತಿಯಾದವು. ದುಷ್ಟಮೃಗಗಳನ್ನು ಕೊಂದವರಿಗೆ ಸರಕಾರದಿಂದ ಕಳೆದ ವರ್ಷ ಒಟ್ಟಿಗೆ ರೂ. ೭೪೫೭ ಇನಾಂ ಕೊಡೋಣಾಯಿತು.

~~~~~

ಇಂಡಿಯನ್ ಪ್ರೆಸ್ ಎಸೋಶಿಯೇಶನಿನ ಆಶ್ರಯದಿಂದ ಇದೇ ತಾ. ೨೪ರಲ್ಲು ಮುಂಬಾಯಲ್ಲಿ ಮುಂಬಾಯಿ ಪಟ್ಟಣದ ನಾಗರೀಕರ ಸಭೆಯು ಕೂಡಿ ಬಂದಿತ್ತು. ಹಿಂದೂಸ್ಥಾನದ ಪ್ರೆಸುಗಳಿಗೆ ಇರುವ ಸ್ವಾತಂತ್ರ್ಯವನ್ನು ಹೆಚ್ಚಿಸುವಂತೆ ಸರಕಾರದವರನ್ನು ಕೇಳಿಕೊಳ್ಳುವದೂ ೧೯೧೦ನೇ ಪ್ರೆಸ್ ಅಕ್ಟನ್ನು ವಿರೋಧಿಸುವದೂ ಈ ಸಭೆ ಕೂಡಿದುದರ ಉದ್ದೇಶವಾಗಿತ್ತು. "ಬೊಂಬೆ ಕ್ರೊನಿಕಲ್" ಪತ್ರಿಕೆಯ ಸಂಪಾದಕರಾದ ಮಿ! ಬಿ. ಜಿ. ಹೊರ್ನಿಮೆನರು ಈ ಸಭೆಗೆ ಅಧ್ಯಕ್ಷರಾಗಿದ್ದರು. ಮಿ! ಹೊರ್ನಿಮೆನರು ಈ ಆಕ್ಟಿನಿಂದ ಹಿಂದೂಸ್ಥಾನದ ವರ್ತಮಾನ ಪತ್ರಿಕೆಗಳಿಗೆ ಬಂದೊದಗಿದ ಸಂಕಷ್ಟಗಳನ್ನು ವಿವರಿಸಿ, ಪ್ರೆಸ್ ಆಕ್ಟನ್ನು ಶಿಲಪಡಿಸುವದು ಅವಶ್ಯವೆಂತ ತಿಳಿಯಪಡಿಸಿದರು. ಅನಂತರ ಮಾನ್ಯ ಗಂಧಿಯವರು ಹಿಂದೂಸ್ಥಾನದ ಪ್ರೆಸುಗಳಿಗೆ ಸ್ವಾತಂತ್ರ್ಯವನ್ನು ಕೊಡಬೇಕೆಂಬ ಸೂಚನೆಯನ್ನು ಸಭೆಯ ಮುಂದಿಟ್ಟು ಸರಕಾರದವರು ಈ ಸ್ವಾತಂತ್ರ್ಯವನ್ನು ಕೊಡುವದಾದರೆ ಸರಕಾರ ಮತ್ತು ಪ್ರಜೆಗಳೊಳಗೆ ಪರಸ್ಪರ ಐಕ್ಯವು ಮತ್ತಷ್ಟು ಬೆಳೆದುಕೊಂಡು ದೇಶವು ಸರ್ವ ವಿಧದಲ್ಲಿಯೂ ಅಭಿವೃದ್ಧಿ ಹೊಂದುವದೆಂಬಿತ್ಯಾದಿ ಮಾತುಗಳಿಂದ ಅರ್ಥಗರ್ಭಿತವಾದ ಭಾಷಣ ಮಾಡಿದರು. ಈ ಸೂಚನೆಗೆ ಸಭಿಕರ ಅನುಮೋದನೆಯಾದ ನಂತರ ಮ! ರಾ! ಕೆ. ನಟರಾಜನರವರು ಈ ಆಕ್ಟನ್ನು ಶಿಲಪಡಿಸಬೇಕೆಂಬ ಸೂಚನೆಯನ್ನು ಸಭೆಯ ಮುಂದಿಟ್ಟರು. ಈ ಸೂಚನೆಯೂ ಅನುಮೋದಿಸಲ್ಪಟ್ಟಿತು. ಸಭೆಯಲ್ಲಾದ ನಿರ್ಣಯಗಳನ್ನು ಸ್ಟೇಟ್ ಸೆಕ್ರೆಟರಿಯವರಿಗೂ, ವೈಸರಾಯ ಪ್ರಭುಗಳಿಗೂ ಕಳುಹಿಸಿಕೊಡಬೇಕೆಂತ ಸಭೆಯಲ್ಲಿ ನಿಶ್ಚಯಿಸೋಣಾಗಿದೆ.

~~~~~

ಕಲ್ಕತ್ತಾ ಪಟ್ಟಣದಲ್ಲಿ ಒಂದು ವಾರದೊಳಗೆ ಇಬ್ಬರು ಬಾಲಿಕೆಯರು ತಮ್ಮ ದೇಹದ ಮೇಲೆ ಶೀಮೆಎಣ್ಣೆಯನ್ನು ಹೊಯ್ದು ಆತ್ಮಹತ್ಯ ಮಾಡಿಕೊಂಡಿರುವರು. ಒಬ್ಬ ಬಾಲಿಕೆಗೆ ೧೪ ವರ್ಷ ವಯಸ್ಸು. ಅವಳಿಗೆ ಒಂದು ಶಿಶುವು ಕೂಡಾ ಇರುವದು. ಅವಳ ಹೆಸರು ನಿರ್ಮಲಬಾಲದಾಸಿ. ಧೀರೇಂದ್ರದಾಸನಾಥರ ಹೆಂ...ತಿ. ಮನೆಯಲ್ಲಿ ಕಲಹವಾಗಿ ತನ್ನನ್ನು ಮನೆಜನರು ದೂಷಿಸಿದುದರಿಂದ ಆಕೆಯು ಈ ಕೆಲಸವನ್ನು ಮಾಡಿಕೊಂಡಳಂತೆ. ಮತ್ತೊಬ್ಬ ಬಾಲಿಕೆಯ ಹೆಸರು ಪನ್ನಾಬಾಲಾ ದೇವಿ. ಇವಳು ಕೆ. ಪಿ. ಚಟರ್ಜಿಯವರ ಪತ್ನಿ. ಈಕೆಗೆ ಮಕ್ಕಳಾಗದ್ದರಿಂದ ಗಂಡನು ಬೇರೊಬ್ಬ ಹೆಂಡತಿಯನ್ನು ಮದುವೆಯಾಗುತ್ತಾನೆಂದು ಹೇಳಿದ್ದೂ ಒಂದು ದಿನ ಗಂಡನೂ ಅತ್ತೆಯೂ ಎಲ್ಲಿಗೋ ಹೋಗಿದ್ದು ಸಾವಕಾಶವಾಗಿ ಬಂದುದರಿಂದ ಅವರು ಬೇರೆ ಹೆಣ್ಣನ್ನು ನೋಡಹೋಗಿದ್ದಾರೆಂದು ಅವಳು ಭಾವಿಸಿ ಮನಃಸಂಕಟದಿಂದ ಆತ್ಮಹತ್ಯ ಮಾಡಿಕೊಂಡಳಂತೆ.

~~~~~

ದಕ್ಷಿಣ ಕನ್ನಡ.

ಪುತ್ತೂರು:—ಇತ್ತಕಡೆ ಮಳೆ ವಿಶೇಷವಾಗಿ ಗರೆದು ನೆರೆತುಂಬಿ ಇದೇ ಜೂನ್ ತಾ. ೨೭—೨೮ರಲ್ಲು ಎರಡು ಸಾರಿ ಉಪ್ಪಿನಂಗಡಿಯಲ್ಲಿ ಕುಮಾರಧಾರೆ ನೇತ್ರಾವತಿ ಹೊಳೆಗಳಲ್ಲಿ ಸಂಗಮ ಕೂಡಿತ್ತು. ತಾ. ೨೮ರಲ್ಲು ಧರ್ಮಸ್ಥಳದಿಂದ ಬರುವ ಹೋಗುವ ಟಪ್ಪಾಲು ಚಲಾವಣೆಯು ಆಗಲಿಲ್ಲ.

ಇಲ್ಲಿ ಇದೇ ಜೂನ್ ತಾ. ೧೦ರಲ್ಲು ಆರಂಭವಾದ ಸೆಕೆಂಡರಿ ಶಾಲೆಯಲ್ಲಿ ಒಟ್ಟಿಗೆ ೨೦೦ ಹುಡುಗರು ದಾಖಲಾಗಿರುವರು. ಸ್ಥಳ ಸಾಕಾಗದ್ದರಿಂದ ಶಾಲೆಗೆ ಹುಡುಗರನ್ನು ಸೇರಿಸುವದನ್ನು ನಿಲ್ಲಿಸಿರುತ್ತದೆ ಎಂತ ತಿಳಿಯುತ್ತೇನೆ.

ಕರಯು:—ಕರಯ ಗ್ರಾಮದಲ್ಲಿ ಮಾಸ್ತರ ರಾ। ಎಮ್. ದೇವಪ್ಪನವರು ರೂ. ೧೫೦ ಖರ್ಚುಮುಟ್ಟಿಸಿ ಹೊಸತಾಗಿ ಕಟ್ಟಿಸಿದ ಶಾಲಾ ಕಟ್ಟೋಣದ ಪ್ರತಿಷ್ಠೆ ಉತ್ಸವವು ಇದೇ ಜೂನ್ ತಾ. ೨೮ನೇ ಬುಧವಾರ ಬೆಳಿಗ್ಗೆ ಲಿ ಘ ... ವಾದ್ಯಘೋಷ ಮುಂತಾದ ವಿಜೃಂಭಣೆಯಿಂದ ಜರ

ಉ... —ಇಲ್ಲಿ ಬಾಸೆಲ್ ಮಿಶ್ಯನಿನವರ ಒಂದು ಲವರ್ ಸೆ... ...ಇದ್ದು, ಚಲೋ ಸೆಕಂಡರಿ ವಿದ್ಯಾಭ್ಯಾಸವು ಬಡ ಜನರಿಗೆ ಶಿಕ್ಕುತ್ತಿತ್ತು. ಅಂಥಾ ಶಾಲೆಯನ್ನು ಕೆಲವು ವರ್ಷಗಳ ಹಿಂದೆ ಮಿಶ್ಯನಿನವರು ಲವರ್ ಸೆಕಂಡರಿ ಶಾಲೆ ತಮಗೆ ಬೇಡವೆಂದು ವಾದಿಸಿ ಕಾಸರಗೋಡಿಗೆ ಕೊಂಡು ಹೋಗಿ ಈಗ ಇಲ್ಲಿ ಕಳೆದ ಮೂರು ವರುಷಗಳಿಂದ ೭ನೇ ದರ್ಜೆಯ ಎಲಿಮೆಂಟರಿ ಶಾಲೆ ಮಾಡಿ ವಿದ್ಯಾಭ್ಯಾಸವನ್ನು ಕೊಡುತ್ತಾರೆ. ಇದು ಬಡ ಜನರ ದುರ್ದೆಸೆಯೇ ಸರಿ. ಆದರೆ ಮಿಶ್ಯನಿಗೆ ಯುಕ್ತ ಕಂಡು ಈ ಬದಲಾವಣೆ ಮಾಡಿದ್ದಕ್ಕೆ ನಾವು ವಿರೋಧಿಸಿ ಫಲವಿಲ್ಲ. ಈಗಲಾದರೋ ಇಲ್ಲಿರುವ ಬಾಸೆಲ್ ಮಿಶ್ಯನ್ ಎಲಿಮೆಂಟರಿ ಶಾಲೆಯು ಊರ್ಜಿತ ಸ್ಥಿತಿಯಲ್ಲಿದೆ ಎಂದು ಹೇಳಲು ಸಾಧ್ಯವಿಲ್ಲ. ಜೂನು ತಿಂಗಳ ೧೭ನೇ ತಾರೀಕಿನಲ್ಲಿ ಸಬ್ ಅಸಿಸ್ಟಾಂಟ ಇನ್ಸ್‌ಪೆಕ್ಟರು ಮಾಡಿದ ಪರೀಕ್ಷೆಯಲ್ಲಿ ೪ನೇ ದರ್ಜೆಯ ೧೦ ಮಂದಿ ಬಾಲಕರ ಪೈಕಿ ಇಬ್ಬರು ಮಾತ್ರವೇ ಫೇಯರ್ (Fair) ಸರ್ಟಿಫಿಕೇಟು ಪಡೆದು ಬಾಕಿಯವರು ಪರೀಕ್ಷೆಯಲ್ಲಿ ತೇರ್ಗಡೆಪಡೆಯಲಿಲ್ಲ. ೧೨ ಮಾರ್ಕುಗಳು ನಿಶ್ಚಯಿಸಿ ಕೊಟ್ಟ ಲೆಕ್ಕಗಳಲ್ಲಿ ಒಬ್ಬನಿಗೆ ಮಾತ್ರವೇ ೬ ಮಾರ್ಕು ಶಿಕ್ಕಿದೆ ಅಲ್ಲದೆ ಬಾಕಿಯವರಿಗೆ ಒಂದು ನಮೂನೆಯ ಪೂಜ್ಯವು ಕೊಡಲಾಯಿತು. ೪ನೇ ದರ್ಜೆಯಲ್ಲಿ ಕಲಿತು ಮೇಲಿನ ದರ್ಜೆಗೆ ಯೋಗ್ಯರೆಂತ ಶಾಲಾ ಸರ್ಟಿಫಿಕೇಟು ಹೊಂದಿದವರು ಕಾಸರಗೋಡು ಸೆಕಂಡರಿ ಶಾಲೆಯಲ್ಲಿ ಸೇರಲಿಕ್ಕೆ ಹೋದಲ್ಲಿ ಇಬ್ಬರನ್ನು ೩ನೇ ದರ್ಜೆಗೆ ಯೋಗ್ಯರೆಂತ ಶಾಲೆಯ ಮೆನೇಜರರು ನಿರ್ಧರಿಸಿದರು.

ಶಾಲೆಯು ಕಟ್ಟೋಣವಾದರೋ ಮಳೆಯ ನೀರು ಎಷ್ಟರ ಮಟ್ಟಿಗೂ ಹೊರಗೆ ಹೋಗುವದಿಲ್ಲ. ಎಲ್ಲ ನೀರು ಒಳಗೆಯೇ ಬೀಳುತ್ತದೆ. ಕಿಂಡಗಾರ್ಟನ್ ಶಿಕ್ಷಣವಾಗಿ ಕಾಗದದ ದೋಣಿಗಳನ್ನು ನೀರಿನಲ್ಲಿ ತೇಲಿಸಲೂ ಆಡಲೂ ಹೊರಗೆ ಹೋಗಬೇಕೆಂಬ ಆಗತ್ಯವಿಲ್ಲ. ಶಾಲಾ ಅಧಿಕಾರಿಗಳು ಈ ಸಂಗತಿಗಳನ್ನು ಮನಸ್ಸಿಗೆ ತಂದು ನಮ್ಮ ಬಡ ಜನರಿಗೆ ಯೋಗ್ಯ ರೀತಿಯ ಶಿಕ್ಷಣವನ್ನು ಇನ್ನು ಮುಂದೆ ಕೊಡಬೇಕಾಗಿ ನಾವು ವಿನಯ ಪೂರ್ವಕದಿಂದ ಬೇಡಿಕೊಳ್ಳುತ್ತೇವೆ.

ಕಾಪು:—ಮ। ರಾ। ರಾ। ಹೊಸದುರ್ಗ ರಾಮಚಂದ್ರ ಕಮ್ತಿಗಳವರು ಕಾರ್ಕಳ ಸಬ್ ರೇಂಜಿನ ಶಾಲೆಗಳ ಸುಪರ್‌ವೈಸರರಾಗಿ ಬಂದಿರುವರು.

ಮ। ರಾ। ಪಿ. ಆನಂದ ಬಾಳಿಗರವರು ಬಿ ಎಲ್ ಪರೀಕ್ಷೆಯಲ್ಲಿಯೂ, ರಾ। ಸಂಜೀವ ಕಾಮತರವರು ಎಫ್ ಎಲ್ ಪರೀಕ್ಷೆಯಲ್ಲಿಯೂ ಉತ್ತೀರ್ಣರಾದ ವಾರ್ತೆ ಕೇಳಿ ಪೇಟೆಯ ಸರ್ವರಿಗೂ ಸಂತೋಷವಾಗಿದೆ.

ಇಲ್ಲಿಯ ಬೋರ್ಡು ಎಲಿಮೆಂಟರಿ ಶಾಲೆಯಲ್ಲಿ ಸ್ಥಳ ಸಂಕೋಚದ ನಿಮಿತ್ತ ೨ ಕ್ಲಾಸುಗಳು ಶ್ರೀ ಜನಾರ್ದನ ದೇವಸ್ಥಾನದ ಗೋಪುರದಲ್ಲಿ ನಡೆಯುವದೆ ಮುಕಾಂ ಆಗಿರುತ್ತದೆ.

ಉಡುಪಿ ರೇಂಜು ಸ್ಕೂಲುಗಳ ಸಬ್ ಅಸಿಸ್ಟಾಂಟ ಇನ್ಸ್‌ಪೆಕ್ಟರಾಗಿದ್ದ ಮ। ರಾ। ರಾ। ಉಳ್ಳಾಲ ಮಂಗೇಶರಾಯರವರಿಗೆ ಮಂಗಳೂರು ಗವರ್ನಮೆಂಟ್ ಟ್ರೈನಿಂಗ್ ಶಾಲೆಗೆ ವರ್ಗವಾದ ವಾರ್ತೆ ಕೇಳಿ ರೇಂಜಿನ ಸರ್ವ ಉಪಾಧ್ಯಾಯ ಮಂಡಲಿಯವರೂ, ಊರ ಮಹನೀಯರೂ, ಮಕ್ಕಳೂ ಏಕ ರೀತಿಯಾಗಿ ವಿಷಾದಿಸುತ್ತಿರುವರು.

ಮಂಗಳೂರು

ನ್ಯಾಯವಿಧಾಯಕ ಸಭೆಗೆ ಲೋಕಲ್ ಬೋರ್ಡುಗಳ ಪರವಾಗಿ ಮೆಂಬರರನ್ನು ಚುನಾಯಿಸುವದು ಇದೇ ಜುಲಾಯಿ ತಿಂಗಳ ತಾ. ೬ನೇ ದಿನವಾಗಿರುತ್ತದೆ. ಈ ಜಿಲ್ಲೆಯ ಮುನ್ಸಿಪಲ್ ಮತ್ತು ಲೋಕಲ್ ಬೋರ್ಡು ಮೆಂಬರರುಗಳು ನಮ್ಮ ಜಿಲ್ಲೆಯ ಉಮೇದ್ವಾರರಾದ ಮ। ರಾ। ರಾ। ಹೈಕೋರ್ಟು ವಕೀಲ ಸದಾಶಿವಭಟ್ಟರಿಗೆ ಜಿಲ್ಲೆಯ ಅಭಿಮಾನಪೂರ್ವಕ ತಮ್ಮ ವೋಟುಗಳನ್ನು ಕೊಡಬೇಕೆಂದು ಈ ಮೂಲಕ ವಿಜ್ಞಾಪಿಸಿಕೊಳ್ಳುತ್ತೇವೆ.

ಗವರ್ನಮೆಂಟ ಟ್ರೈನಿಂಗ್ ಶಾಲೆಯ I ಅಸಿಸ್ಟಾಂಟ ಮತ್ತು ಹೈಯ್ಯರ್ ಎಲಿಮೆಂಟರಿ ತರಗತಿಯ ಸಬ್ ಪ್ರೊಬೆಶನ್ ಹೆಡ್‌ಮಾಸ್ತರರಾಗಿರುವ ಮ। ರಾ। ಎಸ್. ರಘುನಾಥರಾಯರು ಸದರಿ ಟ್ರೈನಿಂಗ್ ಶಾಲೆಯ ಕಾಯಂ ಹೆಡ್‌ಮಾಸ್ತರರಾಗಿ ನೇಮಿಸಲ್ಪಟ್ಟಿದ್ದಾರೆ.

ಹೈಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯ ಸಬ್ ಪ್ರೊಬೆಶನ್ I ಅಸಿಸ್ಟಾಂಟರಾಗಿದ್ದ ಮ। ರಾ। ಕೆ. ರಾಮರಾಯರು ಅದೇ ಶಾಲೆಯ I ಅಸಿಸ್ಟಾಂಟರಾಗಿ ನೇಮಿಸಲ್ಪಟ್ಟಿದ್ದಾರೆ. ಆದರೆ ಉಡ್ಪಿ ರೇಂಜಿನ ಶಾಲೆಗಳ ಸಬ್ ಅಸಿಸ್ಟಾಂಟ ಇನ್ಸ್‌ಪೆಕ್ಟರಾಗಿರುವ ಮ। ರಾ। ಬಿ. ನರಸಿಂಗರಾಯರು ಇತರ ಡ್ಯೂಟಿಯ ಮೇಲಿರುವುದರಿಂದ ಮ। ರಾ। ಕೆ. ರಾಮರಾಯರು ಉಡ್ಪಿರೇಂಜಿನ ಆಕ್ಟಿಂಗ್ ಸಬ್ ಅಸಿಸ್ಟಾಂಟರಾಗಿ ನೇಮಿಸಲ್ಪಟ್ಟಿದ್ದಾರೆ.

ಮಂಗಳೂರು ರೇಂಜ್ ಶಾಲೆಗಳ ಸುಪರ್‌ವೈಸರ್ ಮತ್ತು ಉಡ್ಪಿ ರೇಂಜಿನ ಶಾಲೆಗಳ ಸಬ್ ಪ್ರೊಬೆಶನ್ ಸಬ್ ಅಸಿಸ್ಟಾಂಟ ಇನ್ಸ್‌ಪೆಕ್ಟರಾಗಿರುವ ಮ। ಶಾ। ಯು. ಮಂಗೇಶರಾಯರು ಗವರ್ನಮೆಂಟ ಹೈಯ್ಯರ್ ಎಲಿಮೆಂಟರಿ ಶಾಲೆಯ ಟ್ರೈನಿಂಗ್ ಸೆಕ್ಷನಿನ ೨ನೇ ಅಸಿಸ್ಟಾಂಟರಾಗಿ ನೇಮಿಸಲ್ಪಟ್ಟಿದ್ದಾರೆ. ಆದರೆ ಮ। ರಾ। ಕೆ. ರಾಮರಾಯರು ಪುನಃ ಕೆಲಸಕ್ಕೆ ಹಾಜರಾಗುವ ವರೆಗೆ ಆಕ್ಟಿಂಗ್ I ಅಸಿಸ್ಟಾಂಟರ ಕೆಲಸದಲ್ಲಿರಬೇಕಾಗಿರುವದು.

ಇದೇ ಜೂನ್ ತಾ. ೧೧ರಲ್ಲು ಬೀಬಿ ಅಲಾಬಿಯ ಬಳಿ ಬಜಿಲ ಪಳ್ಳಿಬ್ಯಾರಿಯು ಉಳ್ಳಾಲ ಪಳ್ಳಿಬ್ಯಾರಿಯನ್ನು ಕೊಂದುಹಾಕಿದ್ದನೆಂತ ತಿಳಿಸಿದ್ದೇವಷ್ಟೆ. ಈ ಕೊಲೆಗೆ ಮದ್ದತು ಕೊಟ್ಟವನೆಂಬ ಅನುಮಾನದ ಮೇಲೆ ಪೋಲಿಸಿನವರು ದೇರೆ ಮ್ಯೊಲಿ ಎಂಬವನನ್ನು ಕೈದು ಮಾಡಿ ರಿಮಾಂಡಿನಲ್ಲಿಟ್ಟಿರುತ್ತಾರೆ. ಹೆಚ್ಚಿನ ತನಿಖೆ ನಡಿಯುತ್ತಿದೆ.

ಪೋಸ್ಟಾಫೀಸು ಪಾಲ್ಘಾಟ್, ಕಲಿಕೋಟೆ ಕಡೆಯಿಂದ ಇಲ್ಲಿಗೆ ಬಂದಿದ್ದ ೫ ರೂಪಾಯಿಗಳನ್ನು ಕೊಟ್ಟರೆ ೧೦ ರೂಪಾಯಿಯ ನೋಟು ಮಾಡಿ ಕೊಡುತ್ತೇವೆಂತ ಜನರನ್ನು ಠಕಾಯಿಸುವದೆ ಯತ್ನ ನಡೆಸಿದ್ದಾರೆಂಬದಾಗಿ ಇಲ್ಲಿಯ ಡೆಪ್ಯುಟಿ ಕಲೆಕ್ಟರರಲ್ಲಿ ವಿಚಾರಣೆಗೆ ಗುರಿ ಮಾಡಲ್ಪಟ್ಟಿದ್ದ ಕಾಶೀಂ ಮೊದಲಾದವರಿಗೆ ತಕ್ಕ ಶಿಕ್ಷೆ ವಿಧಿಸಲ್ಪಟ್ಟ ವಿಷಯವನ್ನು ಈ ಮೊದಲೇ ತಿಳಿಸಿದ್ದೇವೆ. ಈ ಠಕ್ಕರನ್ನು ಹಿಡಿದುಕೊಡುವದೆ ಪೋಲಿಸಿನವರಿಗೆ ಸಹಾಯ ಮಾಡಿ ಅವರ ಪತ್ತೆ ಇತ್ಯಾದಿಗಳನ್ನು ಕೊಟ್ಟವರಿಗೆ ಪೋಲಿಸ್ ಸುಪರಿಂಟೆಂಡೆಂಟ ದೊರೆಗಳವರು ಬಹುಮಾನಗಳನ್ನು ಕೊಟ್ಟಿರುತ್ತಾರೆ. ಪೋಲಿಸಿನವರಿಗೆ ಕಳ್ಳರನ್ನು ಹಿಡಿದುಕೊಡುವವರಿಗೆ ವ ಸಹಾಯಮಾಡುವವರಿಗೆ ನಷ್ಟ ಕಷ್ಟಗಳೇ ಬರುತ್ತವೆಂಬ ಜನ ಸಾಮಾನ್ಯರಲ್ಲಿರುವ ತಪ್ಪು ಭಾವನೆಗಳನ್ನು ಹೋಗಲಾಡಿಸುವದೆ ಜಿಲ್ಲಾ ಪೋಲಿಸ್ ಸುಪರಿಂಟೆಂಡೆಂಟ ದೊರೆಗಳವರು ಕೈಕೊಂಡ ಈ ಕಾರ್ಯವು ಶ್ಲಾಘ್ಯವಾದುದೇ ಸರಿ. ಕಾಸರಗೋಡು ಕೋಟೆಚನಾಡ ಮುಮ್ಮಂಜ್ಞಿ ರೂ. ೨೦; ಚನ್ನಾಡ ಗ್ರಾಮದ ಅಹಮ್ಮದ್ ರೂ. ೧೨; ಸುಬ್ರಾಯನ ಮಗ ನಾಗಪ್ಪ ರೂ. ೯ ಮ। ರಾ। ಕಜ್ಜೂರು ಶಂಕರರಾಯರ ಕ್ಲಾರ್ಕ ಎಮ್. ರಾಮರಾವ್ ರೂ. ೯. ಈ ರೀತಿ ಬಹುಮಾನಗಳು ದೊರಕಿರುತ್ತವೆ.

ಇಲ್ಲಿ ರಥಬೀದಿಯಲ್ಲಿ ಹೋಗುತ್ತಿದ್ದ ಮು.ರಾ. ಪಾವಂಜೆ ಗುರುರಾಯರ ಕಿಸೆಯಿಂದ ಕಳವು ಮಾಡಿದ ಕೇಡಿ ಪೂವ ಗಟ್ಟಿಯನ್ನು ಹಿಡಿದುಕೊಟ್ಟ, ಹೂವಿನ ಮಾರ್ಕೆಟಿನಲ್ಲಿರುವ ಬೊಗ್ಗು ಸೆಟ್ಟಿಗೆ ಪೋಲಿಸ್ ಸುಪರಿಂಟೆಂಡೆಂಟ ದೊರೆಗಳವರು ರೂ. ೬ ಇನಾಂ ಕೊಟ್ಟಿರುತ್ತಾರೆ.

ಕುಂದಾಪುರ ಸ್ಟೇಶನರಿ ಸಬ್ ಮೇಜಿಸ್ಟ್ರೇಟರಿಂದ ಸೆಶ್ಶನಿಗೆ ಕಮಿಟ್ ಮಾಡಲ್ಪಟ್ಟ ಹಳ್ಳಿಹೊಳೆ ಬುಡಾನ್ ಸಾಹೇಬ್ ವಗೈರೆ ೭ ಮಂದಿಯ ದರೋಡೆ ಮೊಕದಮೆಯ ತನಿಖೆಯು ಇಲ್ಲಿಯ ಸೆಶ್ಶನ್ಸಿನಲ್ಲಿ ನಡೆದು ೧ನೇ ಮತ್ತು ೫ನೇ ಆಪಾದಿತರು ತಪ್ಪಿತಸ್ಥರೆಂದು ಜೂರಿಯರು ಅಭಿಪ್ರಾಯಪಟ್ಟದ್ದರಿಂದ ಜಡ್ಜರು ೧ನೇ ಆಪಾದಿತನಿಗೆ ೫ ವರ್ಷಗಳ ಕಠಿಣ ಸಜಾ ವಿಧಿಸಿರುತ್ತಾರೆ. ಆದರೆ ೫ನೇ ಆಪಾದಿತನ ವಿಷಯವಾಗಿ ಜೂರಿಯರು ಕೊಟ್ಟ ಅಭಿಪ್ರಾಯವು ಜಡ್ಜರಿಗೆ ಒಪ್ಪದ್ದರಿಂದ ಈ ವಿಷಯವನ್ನು ಹೈಕೋರ್ಟಿನ ಅನುಮತಿ ಬಗ್ಗೆ ಬರಕೊಂಡಿದ್ದಾರೆ. ಉಳಿದ ಆಪಾದಿತರನ್ನು ಜಡ್ಜರು ಖುಲಾಸುಪಡಿಸಿರುವರು.

ಕಳೆದ ಶನಿವಾರ ನಡೆದ ಮುನ್ಸಿಪಾಲ್ ಚೇಯರ್ಮೇನರ ಚುನಾವಣೆಗೆ ಉಮೇದ್ವಾರರಾಗಿ ನಿಂತಿದ್ದ ರಾವ್ ಸಾಹೇಬ್ ಡಾಕ್ಟರ್ ವರ್ಗೀಸರವರು ಮತ್ತು ರಿಟಾಯರ್ಡ ಡ್ಯುಪಿಟಿ ಕಲೆಕ್ಟರರಾದ ಮ। ರಾ। ಪಾಂಡುರಂಗ ಕಿಣಿಯವರ ಪೈಕಿ ಮ। ರಾ। ಪಾಂಡುರಂಗ ಕಿಣಿಯವರು

ತಮ್ಮ ಉಮೇದ್ವಾರಿಕೆಯನ್ನು ಹಿಂತೆಗೆದ್ದರಿಂದ ರಾವ್ ಸಾಹೇಬ್ ಡಾಕ್ಟರ್ ವರ್ಗೀಸರವರು ಮುನ್ಸಿಪಾಲ್ ಚೇಯರ್ಮೇನರಾಗಿ ಆರಿಸಲ್ಪಟ್ಟಿರುತ್ತಾರೆ.

ಪಟ್ಟಣದಲ್ಲಿರುವ ಕೆಲವು ಗೃಹಸ್ಥರ ಮನೆಗಳಿಂದ ಅಂಗಿ ವಸ್ತ್ರ ಇತ್ಯಾದಿಗಳು ಈಚೆಗೆ ಬಿಗಾಗ್ಗೆ ಕಳವಾಗು ತ್ತದೆಂದು ಹಿಂದೆಯೇ ತಿಳಿಸಿದ್ದೇವೆ. ಈಗತಾನೇ ಕಳದ ವಾರ ರಿಟಾಯರ್ಡ್ ಹೆಡ್‌ಕನ್‌ಸ್ಟೇಬಲರಾದ ಮ| ರಾ| ಕೊರಗಪ್ಪನವರ ಮನೆ ನುಗ್ಗಿ ಕಳವುಮಾಡುವಾಗ ಸಿಕ್ಕಿ ಬಿದ್ದ ಮಲಯಾಳಿ ಅಚ್ಯುತನು ವಾಸಮಾಡುತ್ತಿದ್ದ ಮನೆ ಯನ್ನು ಪೋಲಿಸಿನವರು ಜಪ್ತಿಮಾಡಿದ್ದಲ್ಲಿ ಮ| ರಾ| ತ್ರಾಸಿ ಸುಬ್ಬರಾವ್, ತಾಲೂಕು ಶಿರಸ್ತೆದಾರರು, ಮ| ರಾ| ನರಸಿಂಹ ಪ್ರಭುಗಳವರು, ಈ ಮೊದಲಾದ ೭-೮ ಗೃಹ ಸ್ಥರ ಮನೆಗಳಿಂದ ಕಳವಾದ ಸೊತ್ತುಗಳು ಸಿಕ್ಕಿರುವ ದೆಂದೂ ಪಾಲೀಸುದಾರರಿಲ್ಲದ ಇನ್ನೂ ಅನೇಕ ಕಳ್ ವಸ್ತುಗಳು ದೊರಕಿರುವವು ಎಂದೂ ತಿಳಿಯುತ್ತೇವೆ. ಪೋಲಿಸಿನವರು ಸದರಿ ಅಚ್ಯುತನ ಮೇಲೆ ಚಾರ್ಜುಮಾಡಿ ರುತ್ತಾರೆ. ಕೋರ್ಟು ಹೊಸ ರಸ್ತೆಯಲ್ಲಿರುವ ಡಾಕ್ಟರ್ ಧರ್ಮಸ್ಥಳ ನಾರಾಯಣರಾಯರ ಚಾವಡಿಯಲ್ಲಿ ಒಣಗ ಸಲು ಹಾಕಿದ್ದ ೨ ಸೀರೆ ಇತ್ಯಾದಿಗಳು ಕಳವಾಗಿಹೋಗಿ ವೆಯೆಂತ ತಿಳಿಯುತ್ತೇವೆ.

ಇಲ್ಲಿಯ ಜಾಫರ್ ಸೇಟರಲ್ಲಿ ಸುಮಾರು ನೂರು ರೂಪಾಯಿ ಕ್ರಯ ಬಾಳುವ ವಸ್ತ್ರ ಇತ್ಯಾದಿಗಳು ಕಳವಾ ಗಿರುವದೆಂತ ಪೋಲಿಸಿನವರಿಗೆ ರಿಪೋರ್ಟು ಆದ್ದರಿಂದ ಪೋಲಿಸಿನವರು ಅನುಮಾನದ ಮೇಲೆ ಅಲ್ಲಿ ದಾದಿಕೆಲಸ ದಲ್ಲಿದ್ದ ಸೊಫಿಯು ಎಂಬ ಹೆಂಗಸಿನ ಮನೆ ಜಪ್ತಿಮಾಡಿ ದ್ದಲ್ಲಿ ಕಳವಾದ ಕೆಲವು ಸೊತ್ತುಗಳು ಸಿಕ್ಕಿರುವದೆಂದೂ ಪೋಲಿಸಿನವರು ಆ ಹೆಂಗಸನ್ನು ಕೈದುಮಾಡಿ ರಿಮಾಂಡಿ ನಲ್ಲಿಟ್ಟಿರುವರೆಂತಲೂ ತಿಳಿಯುತ್ತೇವೆ.

ತಾಯುಬ್ ಹುಸ್ಸೇನ್ ಎಂಡ್ ಕೋ. ಇವರಿಗೆ ಮುಂಬಾಯಿಂದ ಸ್ಟೀಮರ ಮೇಲೆ ಕಳದ ಮಾರ್ಚಿ ತಿಂಗ ಳಲ್ಲಿ ಬಂದ ಸರಕುಗಳ ಪೈಕಿ ಒಂದು ಪೆಟ್ಟಿಗೆಯಿಂದ ೩ ಟಾಕೆ ವಸ್ತ್ರಗಳು ಕಳವು ಮಾಡಿದ್ದ ಮಂಜಿಕಲಾಸಿ ಇದಿ ನಬ್ಬ ಎಂಬವನಿಗೆ ೬ ತಿಂಗಳ ಸಜೆಯೂ ಸುಲೇಮಾನ್ ಎಂಬವನಿಗೆ ೩ ತಿಂಗಳ ಸಜೆಯೂ ಟೌನ್ ಮೆಜಿಸ್ಟ್ರೇಟರಿಂದ ವಿಧಿಸೋಣಾಗಿರುವದು.

ಕತ್ರೆಸಾಲ ಮತ್ತು ಕ್ಯಾನುಭಾಗ ಎಂಡ್ ಸನ್ಸ್ ಇವರಿಗೆ ಕಳದ ಏಪ್ರಿಲ್ ತಿಂಗಳಲ್ಲಿ ಸ್ಟೀಮರಿನ ಮೇಲೆ ಮುಂಬಾಯಿಂದ ಬಂದಿದ್ದ ಒಂದು ಪೆಟ್ಟಿಗೆಯಿಂದ ೨ ಪೆಟ್ಟಿಗೆ ಇಮಿಟೇಶನ್ ವಜ್ರದ ಗುಬ್ಬಿಗಳನ್ನು ಕಳವು ಮಾಡಿದ್ದಾಗಿಯೂ ಮ|ರಾ| ಕೆ. ಎಸ್. ಪೈ ಎಂಡ್ ಎಸ್. ಆರ್. ನ್ಯಾಕ ಎಂಡ್ ಕೋ ಎಂಬವರ ಬಾಬ್ತು ಒಂದು ಕಡ್ಲೆ ಗೋಣಿಯಿಂದ ೧॥ ಮಣ ಕಡ್ಲೆ ಕಳವುಮಾಡಿದ್ದಾಗಿಯೂ ಚಾರ್ಜುಮಾಡಲ್ಪಟ್ಟ ತ್ಯಾಂಪಸೆಟ್ಟಿ, ಕೊರಗಸೆಟ್ಟಿ, ಚಾರು ಈ ಮೂರು ಮಂದಿಗೆ ಮೂರು ಮೂರು ತಿಂಗಳ ಸಜಾ ವಿಧಿ ಸೋಣಾಗಿರುವದು.

ಇದೇ ತಾ. ೨೨ರಲ್ಲು ಬೋಳಾರದ ಹಸನಬ್ಯಾರಿಗಳ ಮನೆಗೆ ಯಾರೋ ಕಣ್ಣ ಹಾಕಿ ಸುಮಾರು ೨೮೫ ರೂ ಪಾಯಿ ಕ್ರಯ ಬಾಳುವ ಚಿನ್ನಾಭರಣಗಳನ್ನು ಕಳವು ಮಾಡಿರುವರೆಂತ ಕೇಳುತ್ತೇವೆ.

ಪ್ರಧಾನ್ ಹುಸೇನಬ್ಬ ಬ್ಯಾರಿಗಳ ಮನೆಯಿಂದ ಸುಮಾರು ೫೦೦-೬೦೦ ರೂಪಾಯಿಯ ಚಿನ್ನಾಭರಣಗಳಿದ್ದ ಪೆಟ್ಟಿಗೆ ಯನ್ನು ಕಳವುಮಾಡಿದ್ದಳೆಂಬದಾಗಿ ಆಪಾದಿಸಲ್ಪಟ್ಟಿದ್ದ ಅಚ್ಚ ಹೆಂಗಸಿಗೆ ೩ ತಿಂಗಳ ಕಠಿಣ ಸಜಾ ವಿಧಿಸೋಣಾಗಿ ರುವದು.

ಕೊಡಿಯಾಲಬೈಲ್, ಬಿಜೈ, ಕೊಂಚಾಡಿ, ಮುಂಡಾನ, ಕದ್ರಿಪದವು ಕುಪ್ಪಿ, ಮರೋಳಿ, ಕಂಕನಾಡಿ ಬೆಂದೂರು ಗ್ರಾಮಸ್ಥರು ಕೂಡಿಕೊಂಡು ಇಲ್ಲಿಯ "ಮುನ್ಸಿಪಲ್ ಕೌನ್ಸಿಲಿಗೆ ಬರಕೊಂಡಿರುವ ಅರ್ಜಿಯ ನಕಲನ್ನು ನಮ್ಮ ಬಳಿ ಕಳುಹಿಸಿಕೊಟ್ಟಿರುವರು. ಕದ್ರೆ ಹಾಯರ್ ಎಲಿ ಮೆಂಟರಿ ಶಾಲೆಯಾದ ಸೆಂಟ್ ಕ್ಸೇವಿಯರ್ ಶಾಲೆಯನ್ನು ಮುನ್ಸಿಪಾಲಿಟಿಯವರು ತಕೊಳ್ಳಬೇಕೆಂದು ಅರ್ಜಿದಾರರು ಅಪೇಕ್ಷಿಸಿರುತ್ತಾರೆ.

ಇಲ್ಲಿಯ ಪ್ರಮುಖ ಸಾವುಕಾರರಾಗಿದ್ದ ಸ್ವರ್ಗಸ್ಥ ಹುಂಡಿ ಮಂಜುನಾಥ ಕಾಮತ್‌ರವರ ೧೩ನೇ ದಿನದ ವೈಕುಂಠಸಮಾರಾಧನೆಯು ನಿನ್ನೆ ಅವರ ಬಂಧುಬಾಂಧವ ರಿಂದ ಆಚರಿಸಲ್ಪಟ್ಟಿತು. ಮಂಗಳೂರು ಬಂದರದಲ್ಲಿ ಪ್ರಖ್ಯಾತ ಸಾವುಕಾರರಾಗಿದ್ದು ತಮ್ಮ ಉದ್ಯೋಗದಲ್ಲಿರು ವಾಗ, ಗೌಡಸಾರಸ್ವತ ಬ್ರಾಹ್ಮಣ ಜಾತಿಯ ಕಮಿಟಿ ಮೆಂಬರರೂ, ಮುನ್ಸಿಪಲ್ ಕೌನ್ಸಿಲರರೂ ಆಗಿದ್ದರು. ವೃದ್ಧಾಪ್ಯದ ದೆಸೆಯಿಂದ ಇತ್ತಲಾಗೆ ಕೆಲವು ವರುಷಗ ಳಿಂದ ಉದ್ಯೋಗ ನಿವೃತ್ತರಾಗಿದ್ದರು. ವಾತದ ಬೇನೆ ಯು ಕೆಲವು ಸಮಯದಿಂದ ಇವರಿಗೆ ಪ್ರಾಪ್ತವಾಗಿ ಇದೇ ವ್ಯಾಧಿಯಿಂದ ತಮ್ಮ ೭೩ನೇ ವಯಸ್ಸಿನಲ್ಲಿ ಈ ತಿಂಗಳ ತಾ. ೧೭ನೇ ಶನಿವಾರ ಮೃತಪಟ್ಟರು.

ಮ| ರಾ| ರಾ| ಕಲ್ಲಮುಡ್ಕೂರು ನೇಮಿರಾಜರವ ರಿಂದ ಇಲ್ಲಿಯ ಟ್ರೈನಿಂಗ್ ಶಾಲೆಯ ಹಿಂಬದಿ ಕಟ್ಟಿಸಲ್ಪಟ್ಟ ಜೈನ ವಿದ್ಯಾರ್ಥಿ ಭವನದ ಮುಹೂರ್ತ ಸಮಾರಂಭವು ಇಲ್ಲಿಯ ಜಿಲ್ಲಾ ಪೋಲಿಸು ಸುಪರಿಂಟೆಂಡೆಂಟರಾದ ಮ| ರಾ| ರಾ| ಅರ್ಣೆ ಸುಬ್ಬರಾವ್‌ರವರ ಅಧ್ಯಕ್ಷತೆಯಲ್ಲಿ ನೆರವೇರಿತು. ಈ ಶಹರಿನ ಪ್ರಮುಖ ಗೃಹಸ್ಥರಾಗಿರುವ ಮಹಾ ರಾಜೇಶ್ರೀಗಳಾದ ಸುಜೀರ ರಘುನಾಥಯ್ಯ, ಉಳ್ಳಾಲ ಬಾಬು ರಾವ್, ಎಮ್. ಪಾಂಡುರಂಗಕಿಣಿ, ರಾವ್ ಬಹ ದ್ದೂರ್ ಎನ್. ಸುಬ್ಬರಾವ್, ಕುದ್ಮುಲ್ ರಂಗರಾವ್, ನೆಲ್ಲಿಕಾಯಿ ವೆಂಕಟರಾವ್, ಪೇಜಾವರ ಭೋಜರಾವ್, ಅತ್ತಾವರ ದೇವಪ್ಪ ಪೂಂಜ, ಅತ್ತಾವರ ಬಾಲಕೃಷ್ಣ ಸೆಟ್ಟಿ, ಬಿ. ಮಹಾಬಲ ಹೆಗ್ಗಡೆ, ಕಾರ್ನಾಡ ಸದಾಶಿವ ರಾವ್, ಎಮ್. ಮಾಧವರಾವ್, ಮೊಳಹಳ್ಳಿ ಶಿವರಾವ್, ಕೆ. ಪೂವಣಿ ಹೆಗ್ಗಡೆ, ಕಟ್ಟೆಮಾರು ಬಲ್ಲಾಳರು, ಕೊಡಿ ಯಾಲ ಗುತ್ತು ಕೃಷ್ಣ ಸಲಾಯರು, ಉಳ್ಳಾಲ ಚಾವಡಿ ಕೃಷ್ಣ ಭಟ್ಟ, ಶ್ರೀ ನೇಮಿಸಾಗರವರ್ಣಿಜಿ ಸ್ವಾಮಿಯವರು ಮೊದಲಾದ ಇನ್ನೂ ಹಲವು ಗೃಹಸ್ಥರು ಈ ಮುಹೂರ್ತ ಕೋಸ್ಕರ ಬಂದಿದ್ದರು. ಸ್ವಾಮಿಜಿಯವರಿಂದ ದೇವ ಪ್ರಾರ್ಥನೆಯು ಮಾಡೋಣಾದ ಮೇಲೆ ನೇಮಿರಾಜರು ವಿದ್ಯಾರ್ಥಿ ಭವನವು ಯಾವ ಉದ್ದೇಶದಿಂದ ಕಟ್ಟಸೋ ಣಾಯಿತೆಂಬದನ್ನು ಸಭಿಕರಿಗೆ ತಿಳಿಸಿದರು. ನೇಮಿ ರಾಜರವರು ತನ್ನ ಸ್ವಂತ ಖರ್ಚಿನಿಂದ ಜೈನ ವಿದ್ಯಾರ್ಥಿಗಳ ಉಪಯೋಗಾರ್ಥವಾಗಿ ಕಟ್ಟಿಸಿದ ನೇಮಿರಾಜರ ಔದಾ ರ್ಯವನ್ನು ಅಧ್ಯಕ್ಷರು ಶ್ಲಾಘಿಸಿ, ಭವನದಲ್ಲಿ ತಕ್ಕ ವ್ಯವ ಸ್ಥೆಯ ಏರ್ಪಾಡುಗಳನ್ನು ಮಾಡಬೇಕೆಂಬುದಾಗಿ ಸೂಚಿ ಸಿರುತ್ತಾರೆ. ಬೆಂಗಳೂರಲ್ಲಿರುವ ಜೈನ ಸ್ವಾಮಿಯ ಲೊಬ್ಬರು ಈ ಭವನದಲ್ಲಿ ಪುಸ್ತಕ ಭಂಡಾರಕ್ಕೆ ಸಹಾ ಯಾರ್ಥವಾಗಿ ರೂ. ೨೦೦ನ್ನೂ ಇನ್ನೊಬ್ಬ ಜೈನ ಸದ್ ಗೃಹಸ್ಥರು ಈ ಭವನಕ್ಕೆ ರೂ. ೫೦ರ ವರುಷಾಸನವನ್ನೂ ಕೊಟ್ಟಿರುವರು. ವಿದ್ಯಾರ್ಥಿ ಭವನವು ಅಧ್ಯಕ್ಷರಿಂದ ತೆರಿಯಲ್ಪಟ್ಟ ನಂತರ ಮೇಲೆ ಸೂಚಿಸಿದ ಭಾಷಣಗಳು ನಡದು ಫಲಪುಷ್ಪ ತಾಂಬೂಲಾದಿಗಳು ಹಂಚೋಣಾಗಿ ಮುಹೂರ್ತ ಸಮಾರಂಭವು ಮುಕ್ತಾಯವಾಯಿತು.

ಕಳದವಾರ ಬಿದ್ದ ಮಳೆಯಿಂದ ಇಲ್ಲೆಲ್ಲಾ ನೆರೆ ತುಂಬಿ ಹೋಗಿತ್ತು. ನೇತ್ರಾವತಿಯಲ್ಲಿ ತುಂಬಿದ ನೆರೆಯಿಂದ ಪಾಣೆಮಂಗಳೂರು ಪುತ್ತೂರು ಬಂಟವಾಳ ಅತ್ತಕಡೆ ಹೋಗುವ ಮೋಟರ ಟ್ರಾನ್ಸಿಟ ಭಂಡಿಗಳ ಚಲಾವಣೆಗೆ ಒಂದು ದಿನ ಆತಂಕವಿತ್ತು.

ಈ ಬಂದರದಿಂದ ರಪ್ತಾಗಿ ಹೋಗುವ ಕಾಫಿಬೀಜದ ಕಾರಣೆಕೆಯಾದರೋ ಬಹಳ ಮಹತ್ವದ್ದೇ ಸರಿ. ಇಲ್ಲಿಂದ ಹಡಗ ತುಂಬಿಹೋದ ಸುಮಾರು ೪೦ ಯಾ ೫೦ ಕಾಫಿ ತುಂಬಿಸಿ ಮೋಹರವಿದ್ದ ಚೀಲಗಳಲ್ಲಿ ಕಾಫಿ ಬೀಜವು ಹುರುಳಿ ರೂಪವನ್ನು ತಾಳಿದ ಆಶ್ಚರ್ಯಕರ ವರ್ತಮಾನವು ಮಾರ್ಸೆಲ್ಸ್‌ನಿಂದ ಇತ್ತಲಾಗೆ ಬಂದಿರುವದೆಂಬುದಾಗಿ ಕೇಳುತ್ತೇವೆ.

ಕಳದ ವಾರ ಮಂಗಳೂರು ಮುನಿಸಿಪಾಲಿಟಿಯಲ್ಲಿ ಪ್ಲೇಗು ಮರಣವಿದ್ದಿಲ್ಲ.

ಇದೇ ತಾ. ೨೮ರ ವರೆಗೆ ಇಲ್ಲಿ ೫೦ ಇಂಚು ೧೪ ಸೆಂಟ್ಸ್ ಮಳೆ ಬಿದ್ದಿರುತ್ತದೆ. ಕಳದ ವರ್ಷದ ಸರಾಸರಿ ೪೪ ಇಂಚು ೧೦ ಸೆಂಟ್ಸು.

ಕಲೆಕ್ಟರ ಆಫೀಸಿನ IV ಎಕೌಂಟಾಂಟರಾದ ರಾ| ಎಮ್. ರಾಘಪ್ಪರವರು ೪ ತಿಂಗಳ ರಜೆ ತಕೊಂಡಿರು ವದರಿಂದ II ಗ್ರೇಡ್ ರೆವಿನ್ಯೂ ಇನ್ಸ್‌ಪೆಕ್ಟರರಾದ ರಾ| ಬಿ. ಸೋಮಪ್ಪನವರು ಆಕ್ಟಿಂಗ್ IV ಎಕೌಂಟಾಂಟ ರಾಗಿ ನೇಮಿಸಲ್ಪಟ್ಟಿರುತ್ತಾರೆ.

ರಾ| ಪಿ. ಶಂಬಯ್ಯರವರು ಟ್ರಜರಿ ಟ್ರೈನಿಂಗ್ ಪಡೆ ಯುವದರಿಂದ II ಗ್ರೇಡ್ ರೆವಿನ್ಯೂ ಇನ್ಸ್‌ಪೆಕ್ಟರರಾದ ರಾ| ಎಮ್. ಗಣಪತಿ ಭಂಡಾರಿಯವರು I ಗ್ರೇಡ್ ರೆವಿನ್ಯೂ ಇನ್ಸ್‌ಪೆಕ್ಟರರಾಗಿ ನೇಮಿಸಲ್ಪಟ್ಟಿರುತ್ತಾರೆ.

II ಗ್ರೇಡ್ ಲೇಂಡ್ ರಿಕೋರ್ಡ ಇನ್ಸ್‌ಪೆಕ್ಟರರಾದ ರಾ| ಆರ್. ವಾಸುದೇವರಾಯರು II ಗ್ರೇಡ್ ರೆವಿನ್ಯೂ ಇನ್ಸ್‌ಪೆಕ್ಟರರಾಗಿ ನೇಮಿಸಲ್ಪಟ್ಟಿರುತ್ತಾರೆ.

ಜೀನಸು ಧಾರಣೆ. (ರಖಂ)

ಮಸ್ಕತಿ ಹೊಸ ಅಕ್ಕಿ	5—15—0	6— 3—6
ಗಾಡಿ ರಾಶಿ ಹೊಸ ,,	5— 3—0	5— 6—0
ಗುಡ್ಡು ,, ,,	5— 8—0	5—13—0
ಅವ್ವಲ್ ಬೆಳ್ತಿಗೆ ,,	6— 4—0	6—12—0
ಗುಡ್ಡು ಬೆಳ್ತಿಗೆ ,,	5—12—0	6— 0—0
ಊಟು ಸುಗ್ಗಿ ,,	5— 6—0	5—10—0
ರಂಗೂನು ಬೆಳ್ತಿಗೆ ಗೋಣಿ ೧ರ	9—12—0	10—0—0
ಗೋಧಿ ಗೋಣಿ ೧ರ	11—12—0	12— 0—0
ಹುರುಳಿ ಗೋಣಿ ೧ರ	6— 2—0	6— 8—0
ಕಡಲೆ ಗೋಣಿ ೧ರ ಬೊಂಬೈ	8—12—0	10— 8—0
ತೊಗರಿ ಗೋಣಿ ೧ರ		12— 0—0
ಕೊಗರಿ ಬೇಳೆ ಗೋಣಿ ೧ರ	12— 8—0	14— 8—0
ಉದ್ದು ಗೋಣಿ ೧ರ	10— 8—0	11— 4—0
ಊರುಬೆಲ್ಲ ಖಂಡಿ ೧ರ		50— 0—0
ಉಪ್ಪು ಗೋಣಿ ೧ರ.	4—6—0	4— 8—0
ಕೊಬ್ರಿ ಖಂಡಿ ೧ರ	95—0—0	105—8—0
ಕೊಬ್ರಿಹಿಂಡಿ ಖಂಡಿ ೧ರ		15—0 —0
ಎಳ್ಳಿಂಡಿ ಖಂಡಿ ೧ರ ಬೊಂಬೈ	30—0 —0	32— 8—0
ಕೊಬ್ರಿ ಎಣ್ಣೆ ಮುಡಿ ೧ರ.	7— 6—0	7—12—0
ಎಳ್ಳೆಣ್ಣೆ ಮುಡಿ ೧ರ(ಕುರಾಸನ)		5— 8—0
ಚಿಮಣಿ ಎಣ್ಣೆ ಪೆಟ್ಟಿಗೆ ೧ರ	6— 0—0	6—11—0
ಮೋರಿಸ್ ಸಕ್ಕರೆ ಮುಡಿ ೧ರ	4—14—0	5— 0—0
ಕಾಫಿ ಖಂಡಿ ೧ರ	225— 0—0	235—0—0
ಹೊಸಟೀಗೋಟು ಖಂಡಿ೧ರ	82— 0—0	85— 0—0
ಹೊಸ ಗೇರುಬೀಜ ಮುಡಿ ೧ರ		2—12—0
ಕಬ್ಬಿಣ ಖಂಡಿ ೧ರ		75— 0—0
ತಾಂಬ್ರ ತಗಡು ಮಣ ೧ರ	28— 0—0	30— 0—0
ತಾಂಬ್ರ ಪಾತ್ರಗಳು ಮಣ ೧ರ	23— 0—0	28— 0—0
ಚೀನಿ ಬೆಳ್ಳಿ ಶೇರು ೧ರ		24— 0—0
ಪಚ್ಚೆಹೆಸರು ಮುಡಿ ೧ರ	5— 4—0	5— 6—0

ಮಾರಾಟಕ್ಕೆ ಸಿದ್ಧವಾಗಿದೆ.

ಕುರಿಫಂಡಿನ ರಶೀದಿ	100ರ	ಪುಸ್ತಕ 1ಕ್ಕೆ	ಕ್ರಯ ರೂಪಾಯಿ	0—8—
,,	50	,,	,,	0—4—0.
,,	25	,,	,,	0—[illegible]—0.
ಗೇಣಿ ರಶೀದಿ	100	,,	,,	[illegible]—5—0.
,,	50	,,	,,	0—2—6.
,,	25	,,		
ಯಾವುದಕ್ಕಾದರೂ ಉಪಯೋಗಿಸಲು ಅನುಕೂಲವಾ[illegible]				
ರಶೀದಿಗಳು	100	,,	,,	0—8—0.
,,	50	,,	,,	0—4—0.
,,	25	,,	,,	0—2—0.
ಪರಸ್ಪರ ಸಹಾಯಕ ಸಂಘದ ರಶೀದಿ	[illegible]00ರ	ಪುಸ್ತಕ 1ಕ್ಕೆ		0—8—0.
ಕೋರ್ಟು ಫೋರ್ಮುಗಳು	100[illegible]			0—12-0.
ಗೇಣಿಚೀಟು, ಪರ್ಮಿಟ್ಟು ಫೋ[illegible]ಗಳು	100ಕ್ಕೆ			0—12—0.

ಇವುಗಳಲ್ಲದೆ ಅಂಗ[illegible] ಭಂಡಸಾಲೆ ಲೆಕ್ಕಗಳಿಗೆ ಅಗತ್ಯವಿರುವ ಎಲ್ಲಾ ನಮೂನೆಯ ವರ್ಗ [illegible]ಗ ಪುಸ್ತಕಗಳೂ, ನೋಟುಬೂಕುಗಳೂ, ಸ್ಟೇಶನರಿ ಸಾಮಾನುಗಳೂ ಸ[illegible]ಭ ಕ್ರಯಕ್ಕೆ ದೊರಕುತ್ತವೆ.

ವಿಳಾಸ: —

ಮ್ಯಾನೇಜರ್,
ಶಾರದಾ ಛಾಪಖಾನೆ,
ಮಂಗಳೂರು.

ಕರ್ಣಾಟಕ ವೃತ್ತ ಮತ್ತು ಧನಂಜಯ.

ಕಳೆದ 25 ವರ್ಷಗಳಿಂದ ಭಾಷಾ ಸೇವೆಯನ್ನೂ ದೇಶ ಸೇವೆಯನ್ನೂ ಮಾಡುತ್ತಿರುವ ಈ ವಾರಪತ್ರಿಕೆಯು ಧಾರವಾಡದಲ್ಲಿ ಪ್ರತಿ ಮಂಗಳವಾರವೂ ಪ್ರಕಟಿಸಲ್ಪಡುವದು.

ಲೋಕವ್ಯವಹಾರದ ಉಪಯುಕ್ತ ವಿಷಯಗಳ ಸದಭಿಪ್ರಾಯವನ್ನು ಜನರಲ್ಲಿ ಉಂಟುಮಾಡುವಂಥ ಚಲೋ ಸ್ಪುಟ ಲೇಖಗಳುಳ್ಳ ಮುಂಬಯಿ ಕರ್ಣಾಟಕದ ಉತ್ತಮ ತರಗತಿಯ ಈ ಪತ್ರವನ್ನು ದಕ್ಷಿಣಕನ್ನಡದವರೂ ಓದುವದು ಅಗತ್ಯ.

ದೊಡ್ಡ ರೊಯಲ್ ಸ್ಯಾಜಿನ ಈ ಪತ್ರಿಕೆಗೆ ವಾರ್ಷಿಕ ಚಂದಾ ಮೊಬಲಗು ಟಪ್ಪಾಲು ಹಾಸಲು ಸೇರಿ ರೂ. ೨—೪—೦ ಆಗಿರುತ್ತದೆ; ಚಂದಾದಾರರಾಗಿ ಸೇರಲಪೇಕ್ಷಿಸುವವರು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು.

ಮ್ಯಾನೇಜರ್, ಕರ್ಣಾಟಕ ವೃತ್ತ ಮತ್ತು ಧನಂಜಯ,
ಮಂಗಳವಾರಪೇಟೆ, ಧಾರವಾಡ.

ನೂತನ ಪುಸ್ತಕ ಭಾಂಡಾರ.

ಇಲ್ಲಿ ಕನ್ನಡ, ಸಂಸ್ಕೃತ, ಮರಾಠಿ, ಇಂಗ್ಲಿಷ್ ಪುಸ್ತಕಗಳೂ, ಶಾಲಾ ಪಾಠ ಪುಸ್ತಕಗಳೂ, ಬರವಣಿಗೆ ಸಾಮಗ್ರಿಗಳೂ, ಎಕ್ಸರಸ್ಸಾಜ್ ಬೂಕುಗಳೂ, ಲೆಖ್ಖ ಬರಿಯುವ ಪುಸ್ತಕಗಳೂ, ಸ್ಲೇಟುಗಳು ಮುಂತಾದ ವಿವಿಧ ಸಾಮಾನುಗಳು ಮಿತವಾದ ಕ್ರಯಕ್ಕೆ ಮಾರಲ್ಪಡುತ್ತವೆ.

	ರೂ. ಆ. ಪೈ.		ರೂ. ಆ. ಪೈ.
ಸಟೀಕ ಗುರುಬಾಲ ಪ್ರಬೋಧಿಕೆ	4—8—0	ಧನಂಜಯ ನಿಘಂಟು	0—4—0
,, ತ್ರಿಖಾಂಡ ಅಮರಕೋಶ	1—0—0	ಸಂಸ್ಕೃತ ಕಲಿಯಲುಪಯುಕ್ತವಾದ ಕನ್ನಡಲಿಪಿ ಶಬ್ದಮಂಜರಿ	0—3—0
ಮೂಲ ತ್ರಿಖಾಂಡ ಅಮರಕೋಶ	0—4—0	ಕರ್ನಾಟಕ ಕಾವ್ಯಮಂಜರಿ	0—6—0
,, ಪ್ರಥಮ ಖಾಂಡ ಅಮರಕೋಶ	0—1—0	ಅಂಕಗಣಿತ (ಇ ಮಾರ್ಸ್ಡೆನ್ ದೊರೆಗಳಿಂದ) 3ನೇ 4ನೇ ತರಗತಿಗಳಿಗೆ	0—4—0
,, ,, ಸಟೀಕ	0—1—6		
ಆರು ಭಾಷೆ ಪಕ್ಕಟ್ಲೇರಿ	0—4—0		

ಇವುಗಳಲ್ಲದೆ ಇನ್ನೂ ಅನೇಕ ತರದ ಪುಸ್ತಕಗಳು, ಗೃಹಕೃತ್ಯದಲ್ಲಿ ನಿತ್ಯವೂ ಉಪಯೋಗವಿರುವ ಸಾಮಾನುಗಳು, ಮೇಣಬತ್ತಿಗಳು, ಚಾ, ಕೊಕ್ಕೊ ಬಾರ್ಲಿ, ಆರಾರೂಟ್, ಕೋರ್ನ್‌ಫ್ಲೋರ್, ದಂತಮಂಜನ, ವಗೈರೆ ಯಾವಾಗಲೂ ವಿಕ್ರಿತಕ್ಕೆ ಸಿದ್ಧವಿರುತ್ತವೆ.

ವಿಳಾಸ: — ಕೆ. ಯಂ. ದಾಸಪ್ರಭು,
ರಥಬೀದಿ, ಮಂಗಳೂರು.

FOR IMMEDIATE SALE.

A Mulgeni property, near Kadri Post Office, yeilding a net income of Rs. 211—3—0.

Apply to:—

Dr. A. A. PEREIRA,
Camp Sidapur,
COORG.

ಮಾರಾಟಕ್ಕಿದೆ.

ಕದ್ರಿ ಪೋಸ್ಟ್ ಆಫೀಸಿನ ಒಳೆ ರೂ. 211—3—0 ಐನ ಹುಟ್ಟುವಳ್ಳಿ ಇರುವ ಒಂದು ಮೂಲಗೇಣಿ ಆಸ್ತಿಯು ತ್ವರ್ಯವಲ್ಲಿ ಮಾರೋಣಾಗುವದು—ಬೇಕಾದವರು ಕೆಳಗಿನ ವಿಳಾಸಕ್ಕೆ ಬರಿಯುವದು.

ಡಾಕ್ಟರ್ ಎ. ಎ. ಪೆರೇರ,
ಕ್ಯಾಂಪ್ ಸಿದ್ಧಾಪುರ,
ಕೊಡಗು.

ನೋಟೀಸು.

ಮೆಸರ್ಸ್ ಸ್ಟೀವನ್ ಎಂಡ್ ಸನ್,
ಬಿಸ್ಕುಟು ಮೆನ್ಯುಫೆಕ್ಟರರು.

ಇವರು ತಮ್ಮ ಶಾಪನ್ನು ಬಲ್ಮರ ರಸ್ತೆಯಲ್ಲಿರುವ ಮೆ| ಜೊಕಿನ್ ಲೊರೆನ್ಸ್ ಸಾಲ್ಡಾಂಞರ ಮನೆಯ ಎದುರಿರುವ ಮೆ| ಮೋನ ಪ್ಯಾಸರ ಕಟ್ಟಡಕ್ಕೆ ವೈದಿರುತ್ತಾರೆ.

ಸ್ಟೀವನ್ ಎಂಡ್ ಸನ್.
ಮಂಗಳೂರು.

ಹಲ್ಲುನೋವುಗಳಿಗೆ ಖಾತ್ರಿಯಾದ ಔಷಧ

ಇದರ ಗುಣವನ್ನು ನೋಡಿರಿ
ಹಲ್ಲುಗಳು ಅಲ್ಲಾಡುವದಿಲ್ಲ
ಡೊಕ್ಟರಗಳ ಚಿಕಿತ್ಸೆ ವ ದಂತಚೂರ್ಣಗಳ ಅಗತ್ಯವಿಲ್ಲ
ದಂತವೈದ್ಯರಿಂದ ಹಲ್ಲು ದವಡೆಗಳು ತೆಗಿಸುವದು ಅನಾವಶ್ಯಕ
ಸುಲಭವಾದ ಔಷಧಿ
ಬಾಯಿಯೊಳಗೆ ವ ಹಲ್ಲುಗಳಿಗೆ ತಾಗಿಸುವ ಔಷಧವಲ್ಲ
ದೀರ್ಘಕಾಲದ ನೋವುಗಳಿಗೆ ಒಂದು ವಾರದ ಚಿಕಿತ್ಸೆ
ಕಿವಿಗಳಲ್ಲಿ 2, 3 ಬಿಂದುಗಳು ಹಾಕಿದರಿಂದಲೇ ಗುಣಹೊಂದುವದು
ಒಂದು ಶೀಸೆ ತರಿಸಿಕೊಳ್ಳಿ. ಇದರ ಗುಣವನ್ನು ಸ್ನೇಹಿತರಿಗೆ ಪ್ರಖ್ಯಾತಗೊಳಿಸಿ.
ಶೀಸೆ 1ರ ಕ್ರಯ ರೂಪಾಯಿ 1—4—0. ಟಪ್ಪಾಲು ಹಾಸಲು ಪ್ರತ್ಯೇಕ.

ಈ ಕೆಳಗಿನವರ

ಕೆಂಡಲ್ ಗಾರ್ಡನ್
ಮತ್ತು
ಹಂಪನ್‌ಕಟ್ಟೆ ಶೋಪುಗಳಲ್ಲಿ
ದೊರಕುವದು.

STANY BROTHERS
Sole Agents
O. M. C's, Toothache
Specific, Mangalore.

ಮಾರಾಟಕ್ಕೆ ಸಿದ್ಧವಾಗಿದೆ.

ಕುರಿಫಂಡಿನ ರಶೀದಿ	100ರ ಪುಸ್ತಕ 1ಕ್ಕೆ ಕ್ರಯ ರೂಪಾಯಿ		0—8—
”	50	”	” 0—4—0.
”	25	”	” 0—2—0.
ಗೇಣಿ ರಶೀದಿ	100	”	” 0—5—0.
”	50	”	” 0—2—6.
”	25	”	
ಯಾವುದಕ್ಕಾದರೂ ಉಪಯೋಗಿಸಲು ಅನುಕೂಲವಾದ ರಶೀದಿಗಳು	100	”	” 0—8—0.
”	50	”	” 0—4—0.
”	25	”	” 0—2—0.
ಪರಸ್ಪರ ಸಹಾಯಕ ಸಂಘದ ರಶೀದಿ	100ರ ಪುಸ್ತಕ 1ಕ್ಕೆ		0—8—0.
ಕೋರ್ಟು ಫೋರ್ಮುಗಳು 100ಕ್ಕೆ			0—12-0.
ಗೇಣಿಚೀಟು, ಪರ್ಮಿಟ್ಟು ಫೋರ್ಮುಗಳು 100ಕ್ಕೆ			0—12-0.

ಇವುಗಳಲ್ಲದೆ ಅಂಗಡಿ ಭಂಡಸಾಲೆ ಲೆಕ್ಕಗಳಿಗೆ ಅಗತ್ಯವಿರುವ ಎಲ್ಲಾ ನಮೂನೆಯ ವರ್ಗ ಛಾಪಿಗ ಪುಸ್ತಕಗಳೂ, ನೋಟುಬೂಕುಗಳೂ, ಸ್ಟೇಶನರಿ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರಕುತ್ತವೆ.

ವಿಳಾಸ: —

ಮ್ಯಾನೇಜರ್,
ಶಾರದಾ ಛಾಪಖಾನೆ,
ಮಂಗಳೂರು.

FOR IMMEDIATE SALE.

A Mulgeni property, near Kadri Post Office, yeilding a net income of Rs. 211—3—0.

Apply to:—

Dr. A. A. PEREIRA,
Camp Sidapur,
COORG.

ಮಾರಾಟಕ್ಕಿದೆ.

ಕದ್ರಿ ಪೋಸ್ಟ ಆಫೀಸಿನ ಒಳಿ ರೂ. 211—3—0 ಐನ ಹುಟ್ಟುವಳಿ ಇರುವ ಒಂದು ಮೂಲಗೇಣಿ ಆಸ್ತಿಯು ತ್ವರ್ಯದಲ್ಲಿ ಮಾರೋಣಾಗುವದು—ಬೇಕಾದವರು ಕೆಳಗಿನ ವಿಳಾಸಕ್ಕೆ ಬರಿಯುವದು.

ಡಾಕ್ಟರ್ ಎ. ಎ. ಪೆರೇರ,
ಕ್ಯಾಂಪ್ ಸಿದ್ಧಾಪುರ,
ಕೊಡಗು.

ಕರ್ಣಾಟಕ ವೃತ್ತ ಮತ್ತು ಧನಂಜಯ.

ಕಳದ 25 ವರ್ಷಗಳಿಂದ ಭಾಷಾ ಸೇವೆಯನ್ನೂ ದೇಶ ಸೇವೆಯನ್ನೂ ಮಾಡುತ್ತಿರುವ ಈ ವಾರಪತ್ರಿಕೆಯು ಧಾರವಾಡದಲ್ಲಿ ಪ್ರತಿ ಮಂಗಳವಾರವೂ ಪ್ರಕಟಿಸಲ್ಪಡುವದು.

ಲೋಕವ್ಯವಹಾರದ ಉಪಯುಕ್ತ ವಿಷಯಗಳ ಸದಭಿಪ್ರಾಯವನ್ನು ಜನರಲ್ಲಿ ಉಂಟುಮಾಡುವಂಥ ಚಲೋ ಸ್ಪುಟ ಲೇಖಗಳುಳ್ಳ ಮುಂಬಯಿ ಕರ್ಣಾಟಕದ ಉತ್ತಮ ಶರಗತಿಯ ಈ ಪತ್ರವನ್ನು ದಕ್ಷಿಣಕನ್ನಡದವರೂ ಓದುವದು ಅಗತ್ಯ.

ದೊಡ್ಡ ರೊಯಲ್ ಸ್ಯಾಜಿನ ಈ ಪತ್ರಿಕೆಗೆ ವಾರ್ಷಿಕ ಚಂದಾ ಮೊಬಲಗು ಟಪ್ಪಾಲು ಹಾಸಲು ಸೇರಿ ರೂ. ೨—೪—೦ ಆಗಿರುತ್ತದೆ; ಚಂದಾದಾರರಾಗಿ ಸೇರ ಬಪೇಕ್ಷಿಸುವವರು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು.

ಮ್ಯಾನೇಜರ್, ಕರ್ಣಾಟಕ ವೃತ್ತ ಮತ್ತು ಧನಂಜಯ,
ಮಂಗಳವಾರಪೇಟೆ, ಧಾರವಾಡ.

ನೋಟೀಸು.

ಮೆಸರ್ಸ್ ಸ್ಟೀವನ್ ಎಂಡ್ ಸನ್,
ಬಿಸ್ಕುಟು ಮೆನ್ಯುಫೆಕ್ಚರರು.

ಇವರು ತಮ್ಮ ಶಾಪನ್ನು ಬಲ್ಮಠ ರಸ್ತೆಯಲ್ಲಿರುವ ಮೆ। ಜೊಕಿನ್ ಲೊರೆನ್ಸ್ ಸಾಲ್ಡಾಂಞರ ಮನೆಯ ಎದುರಿರುವ ಮೆ। ಮೋನ ಪ್ಯಾಸರ ಕಟ್ಟಡಕ್ಕೆ ವೈದಿರುತ್ತಾರೆ.

ಸ್ಟಿವನ್ ಎಂಡ್ ಸನ್.
ಮಂಗಳೂರು.

ನೂತನ ಪುಸ್ತಕ ಭಾಂಡಾರ.

ಇಲ್ಲಿ ಕನ್ನಡ, ಸಂಸ್ಕೃತ, ಮರಾಠಿ, ಇಂಗ್ಲಿಷ್ ಪುಸ್ತಕಗಳೂ, ಶಾಲಾ ಪಾಠ ಪುಸ್ತಕಗಳೂ, ಬರವಣಿಗೆ ಸಾಮಗ್ರಿಗಳೂ, ಎಕ್ಸರಸ್ಯಾಜ್ ಬೂಕುಗಳೂ, ಲೆಕ್ಕ ಬರಿಯುವ ಪುಸ್ತಕಗಳೂ, ಸ್ಲೇಟುಗಳು ಮುಂತಾದ ವಿವಿಧ ಸಾಮಾನುಗಳು ಮಿತವಾದ ಕ್ರಯಕ್ಕೆ ಮಾರಲ್ಪಡುತ್ತವೆ.

	ರೂ. ಆ. ಪೈ.		ರೂ. ಆ. ಪೈ.
ಸಟೀಕೆ ಗುರುಬಾಲ ಪ್ರಬೋಧಿಕೆ	4—8—0	ಧನಂಜಯ ನಿಘಂಟು	0—4—0
,, ತ್ರಿಕಾಂಡ ಅಮರಕೋಶ	1—0—0	ಸಂಸ್ಕೃತ ಕಲಿಯಲುಪಯುಕ್ತವಾದ ಕನ್ನಡಲಿಪಿ ಶಬ್ದಮಂಜರಿ	0—3—0
ಮೂಲ ತ್ರಿಕಾಂಡ ಅಮರಕೋಶ	0—4—0	ಕರ್ನಾಟಕ ಕಾವ್ಯಮಂಜರಿ	0—6—0
,, ಪ್ರಥಮ ಕಾಂಡ ಅಮರಕೋಶ	0—1—0	ಅಂಕಗಣಿತ (ಇ ಮಾರ್ಸ್ಡನ್ ದೊರೆಗಳಿಂದ) 3ನೇ 4ನೇ ತರಗತಿಗಳಿಗೆ	0—4—0
,, ,, ಸಟೀಕ	0—1—6		
ಆರು ಭಾಷೆ ವಕ್ಯಬ್ಲೇರಿ	0—4—0		

ಇವುಗಳಲ್ಲದೆ ಇನ್ನೂ ಅನೇಕ ತರದ ಪುಸ್ತಕಗಳು, ಗೃಹಕೃತ್ಯದಲ್ಲಿ ನಿತ್ಯವೂ ಉಪಯೋಗವಿರುವ ಸಾಮಾನುಗಳು, ಮೇಣಬತ್ತಿಗಳು, ಚಾ, ಕೊಕ್ಕೊ ಬಾರ್ಲಿ, ಆರಾರೂಟ್, ಕೋರ್ನ್‌ಫ್ಲೊರ್, ದಂತಮಂಜನ, ವಗೈರೆ ಯಾವಾಗಲೂ ವಿಕ್ರಿತಕ್ಕೆ ಸಿದ್ಧವಿರುತ್ತವೆ.

ವಿಳಾಸ: — ಕೆ. ಯಂ. ದಾಸಪ್ರಭು,
ರಥಬೀದಿ, ಮಂಗಳೂರು.

ಹಲ್ಲು ನೋವುಗಳಿಗೆ ಖಾತ್ರಿಯಾದ ಔಷಧ.

ಇದರ ಗುಣವನ್ನು ನೋಡಿರಿ
ಹಲ್ಲುಗಳು ಅಲ್ಲಾಡುವದಿಲ್ಲ
ಡೊಕ್ಟರಗಳ ಚಿಕಿತ್ಸೆ ವ ದಂತಚೂರ್ಣಗಳ ಅಗತ್ಯವಿಲ್ಲ
ದಂತವೈದ್ಯರಿಂದ ಹಲ್ಲು ದವಡೆಗಳು ತೆಗಿಸುವದು ಅನಾವಶ್ಯಕ
ಸುಲಭವಾದ ಔಷಧಿ
ಬಾಯಿಯೊಳಗೆ ವ ಹಲ್ಲುಗಳಿಗೆ ತಾಗಿಸುವ ಔಷಧವಲ್ಲ
ದೀರ್ಘಕಾಲದ ನೋವುಗಳಿಗೆ ಒಂದು ವಾರದ ಚಿಕಿತ್ಸೆ
ಕಿವಿಗಳಲ್ಲಿ 2, 3 ಬಿಂದುಗಳು ಹಾಕಿದರಿಂದಲೇ ಗುಣಹೊಂದುವದು
ಒಂದು ಶೀಸೆ ತರಿಸಿಕೊಳ್ಳಿ. ಇದರ ಗುಣವನ್ನು ಸ್ನೇಹಿತರಿಗೆ ಪ್ರಖ್ಯಾತಗೊಳಿಸಿ.
ಶೀಸೆ 1ರ ಕ್ರಯ ರೂಪಾಯಿ 1—4—0. ಟಪ್ಪಾಲು ಹಾಸಲು ಪ್ರತ್ಯೇಕ.

ಈ ಕೆಳಗಿನವರ

ಕೆಂಡಲ್ ಗಾರ್ಡನ್
ಮತ್ತು
ಹಂಪನ್‌ಕಟ್ಟೆ ಶೋಪುಗಳಲ್ಲಿ
ದೊರಕುವದು.

STANY BROTHERS
Sole Agents
C. M. C's, Toothache
Specific, Mangalore.

ಆರ್. ಮಾರ್ಟಿನ್ಸರ ಮಾತ್ರೆಗಳು ೨. 2.

ಡಮಿಯಾನ ಮತ್ತು ಕಂಪೌಂಡ್ ಪೊಸ್ಪರಸ್ ಕೂಡಿರುವ ಈ ಮಾತ್ರೆ ವಾದ ಏಳು ಔಷಧಿಗಳಿಂದ ತಯಾರಿಸಲ್ಪಟ್ಟಿವೆ. ಇವು ಕೂಡಲೇ ಗುಣಪಡಿಸುವ್ವ ಯುಳ್ಳದ್ದಾಗಿದ್ದು ಮಲಬದ್ಧತೆ, ಬಾಡಿದ ಮುಖ, ತಲೆಶಿಡಿತ, ಅಜೀರ್ಣ, ಸ್ನಾಯು ಬಲಹೀನತೆ, ಸರ್ವ ವಿಧದ ಹೆಂಗಸರ ಬಲಹೀನತೆ, ಮೊದಲಾದ ರೋಗಗಳಿಗೆ ಸಿದ್ಧೌಷಧವು. ಅದಲ್ಲದೆ ಮೂತ್ರ ರೋಗ, ಭ್ರಾಂತಿ, ಗುಂಡಿಗೆ ಬಡಿಯೋಣ, ರಾತ್ರಿ ಬೆವರುವುದು, ಈ ರೋಗಗಳಿಗೂ ಗುಣಕಾರಿ. ಮೆದುಳು ಕೆಲಸ ಮಾಡುವವರಿಗೆ ಅತ್ಯುಪಕಾರಿ. ಪ್ರತಿ ಬಾಟ್ಲಿಯಲ್ಲಿ ೪೦ ಮಾತ್ರೆಗಳಿವೆ. ಬಾಟ್ಲಿಗೆ ರೂ. ೧—೮—೦.

ಆರ್. ಮಾರ್ಟಿನ್ಸರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮಲು ಗೂರಲು, ಶ್ವಾಸ, ಶೀತ, ನೆಗಡಿ, ಗಂಟಲುನೋವು, ಎದೆ ನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನೆಮಾಡಿ ಪರೀಕ್ಷಿಸಿ ನೋಡಲಿ. ಅನಂತರ ಯಾವ ಬೇರೆ ಔಷಧಕ್ಕೂ ಗಮನ ಕೊಡದಿರುವಿರಿ. ಎಲ್ಲಾ ವಿಧವಾದ ಕೆಮ್ಮಲಿಗೂ ರಾಜಿಯಾಗಿಯೂ, ಎದೆಗೆ ಬಲಕೊಟ್ಟು ಮೇಲ್ಕಂಡ ರೋಗಗಳು ತಲೆಯಿಕ್ಕದಂತೆ ಮಾಡುತ್ತವೆ.

೬೦ ಮಾತ್ರೆಗಳ ಸೀಸೆ ಒಂದಕ್ಕೆ ರೂ. ೧—೦—೦.

ಆರ್. ಮಾರ್ಟಿನ್ಸರ ಮೇಹರೋಗಕ್ಕೆ ಮಿಶ್ರಣ.

ಗಂಡಸರು ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡ ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ ಅಥವಾ ಹೊಸತಾಗಿದ್ದರೂ ಸರಿ. ಬಿಳಿಪು ಹೋಗುವುದು, ಉರಿಯುವುದು ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ, ಒಂದಾವರ್ತಿ ಸೇವಿಸಿದ ಮಾತ್ರಕ್ಕೇ ಮೂತ್ರ ಉರಿಯುವುದನ್ನು ನಿಲ್ಲಿಸಿ, ಮೂತ್ರವು ಬಿಳುಪಾಗಿ ನಿರ್ಮಲವಾಗುವುದಲ್ಲದೆ ರೋಗದ ಪಟ್ಟನ್ನೇ ಅಡಗಿಸಿಬಿಡುತ್ತದೆ. ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ. ಬೆಲೆ ಸೀಸೆ ಒಂದಕ್ಕೆ ರೂ. ೧—೮—೦. ವಿಳಾಸ:—

ಆರ್. ಡಿ. ಕಟ್ಲೆ ಮತ್ತು ಕಂಪೆನಿ, **R. D. kately & Co.**

ನಂಬ್ರ ಡಿ. ಫ್ರೆಯರ್ ರೋಡ್, *No. D. Frere Road,*

ಮುಂಬಯಿ. *Near Wright & Co. Fort Bombay.*

ಯುಗಾದಿ ಬಹುಮತಿ! ಹೊಸ ಕಂಪೆನಿ! ಹೊಸ ಸರಕುಗಳು!

ಅಮೇರಿಕ ದೇಶದ ಇಲೆಕ್ಟ್ರಿಕ್ ಮೂರು ಬೊಟ್ಟು 300 ರೂಪಾಯಿ ಬೆಲೆ ಬಾಳತಕ್ಕದ್ದನ್ನು ರೂ. 1—8—0 ಕೊಡುವೆವು. ಇದನ್ನು ನಮ್ಮ ಸ್ವಂತ ಆರ್ಡರು ಮೇಲೆ ಅಮೇರಿಕ ದೇಶದಲ್ಲಿ ಕಂಡುಹಿಡಿಯಲ್ಪಟ್ಟ ಇಮಿಟೇಶನ್ ವಜ್ರಗಳಿಂದ ತಯಾರಿಸಿ ಕಳುಹಿಸಿರುತ್ತಾರೆ. ಇದರ ಕಲ್ಲುಗಳು ಕೋಟಿಸೂರ್ಯ ಪ್ರಕಾಶಕ್ಕೆ ಥಳಥಳಿಸುವವು. ಭಂಗಾರಕ್ಕೆ ಸಮಾನವಾದ ಒಂದು ವಿಧವಾದ ಲೋಹದಿಂದ ಕಟ್ಟಿ ಇರುತ್ತೆ. ಇದನ್ನು ನೋಡುವವರು ಪುಷ್ಪರಾಗವೆಂದು ಹೇಳುವರು. ಅಷ್ಟು ಸೂರ್ಯಪ್ರಕಾಶಕ್ಕೆ ಥಳಥಳಿಸುವದು. ಬೇಗಬೇಗನೆ ದರಖಾಸ್ತು ಮಾಡುವವರಿಗೆ ಒಳ್ಳೇ ಫಾಯಿದೆ ದೊರಕುವದು.

ಇದೇ ತಿಂಗಳ ಒಳಗಾಗಿ ಈ ಸೀರೆ ತರಿಸಿಕೊಳ್ಳುವವರಿಗೆ ಈ ಮೇಲ್ಕಂಡ ರೂ. 1—8—0 ರೂಪಾಯಿನ ಮೂಗು ಬೊಟ್ಟು ಇನಾಂ ಕಳುಹಿಸುವೆವು.

ಮಲ್ಲಿಗೆ ಹುವ್ವಿನ ಸೀರೆ.

ಈ ಸೀರೆಗಳನ್ನು ಯುಗಾದಿ ಹಬ್ಬಕ್ಕಾಗಿ ತರಿಸಿ ಇರುತ್ತೇವೆ. ಇದರ ಕ್ರಯ ರೂ. 3. ವಿ. ಪಿ. ಚಾರ್ಜು ೭ ಆಣೆ ಪ್ರತ್ಯೇಕ. ಮೇಲ್ಕಂಡ ಮೂಗು ಬೊಟ್ಟು ಇನಾಂ. ಎಲ್ಲರೂ ವಿಕ್ರಯಿಸಿದ ಮಧುರೆ ಜವಳದ ಬಳಿಗಳಲ್ಲ. ಭಾರಿ ಕ್ರಯದ ಸೀರೆಗಳು, ಇವು ಉಡುವದಕ್ಕೆ ಧಡುತಆಗಿಯೂ ನೋಡುವದಕ್ಕೆ ಸೊಗಸಾಗಿಯೂ ಇದೆ. ಬಣ್ಣಕ್ಕೆ ಗ್ಯಾರಂಟು ಕೊಡುವೆವು. ಸೀರೆಯ ಉದ್ದ 16 ಮೊಳ. ಸೊಗಸಾದ ಅಂಚು ಕಟ್ಟೆ ಇರುತ್ತೆ. ಇದು ಎಲ್ಲರೂ ಉಡುವದಕ್ಕೆ ಲಾಯಖಾದದ್ದು. ಪ್ರತಿದಿನ ಸಾವಿರಾರು ಸೀರೆಗಳು ವಿಕ್ರಯಿಸುತ್ತೇವೆ. ದಯಮಾಡಿ 1 ಸೀರೆಯನ್ನು ತರಿಸಿಕೊಂಡು ಅಲಂಕಾರಭೂಷಿತರಾಗಿ ಇರುವರೆಂದು ನಂಬಿದ್ದೇವೆ. ನಮ್ಮ ಕಂಪೆನಿಯಲ್ಲಿ ಅನೇಕ ತರದ ಜವಳಿ ದಿನಸುಗಳು ಸಿಕ್ಕುತ್ತೆ.

ವಿಳಾಸ:— ರತ್ನಂ ಕಂಪೆನಿ,

ಕ್ಲೋತ್ ಮರ್ಚೆಂಟ್ಸ್,

3, ಇರುಳಪ್ಪನ ಬೀದಿ, ಮದ್ರಾಸು.

☞ ಇದನ್ನು ದಯವಿಟ್ಟು ನಿಮ್ಮ ಸ್ನೇಹಿತರುಗಳಲ್ಲಿ ಪ್ರಚುರಪಡಿಸಿರಿ.

ಪಿ. ಸುಬ್ಬರಾಯಿಯವರ

ಲೋಕ ಪ್ರಸಿದ್ಧವಾದ ಆಯುರ್ವೇದ

ಔಷಧಗಳು.

ಸ್ಖಲ[illegible]ಣೆ:— ಬಲಹೀನದಿಂದಲೂ, ಉಷ್ಣದಿಂದಲೂ, ಬಾಲ್ಯಾವಸ್ಥೆಗಳಲ್ಲಿ ನಡದಂಥಾ ಅತಿ[illegible] ಕೆಲಸಗಳಿಂದಲೂ, ನಿದ್ರೆಯಲ್ಲಿಯೂ, ಸ್ವಪ್ನದಲ್ಲಿಯೂ ಸ್ಖಲಿತವಾದ ಇಂದ್ರಿಯವನ್ನು [illegible] ದೇಹಸ್ಥೈರ್ಯವನ್ನು ತರುವುದು. ಸೀಸೆ 1ಕ್ಕೆ 8 ಆಣೆ. ವಿ. ಪಿ. ಚಾರ್ಜು 6 ಸೀಸೆ[illegible] 5 ಆಣೆ.

ಅತ್ಯುತ್ತಮವಾದ ಕ[illegible]ರಿ:— ಕಾಶ್ಮೀರದಿಂದ ತರಿಸಿರುವದು. ಅತ್ಯುತ್ತಮವಾದದ್ದು ಮತ್ತು ಒಂದೇ ರಖಂ[illegible]ಕ್ಕದ್ದು. ತೊಲೆ 1ಕ್ಕೆ ರೂ. 48. ಚಿಲ್ಲರೆಯಾಗಿ 1 ರೂಪಾಯಿಗೂ ದೊರಕುತ್ತದೆ. ವಿ. ಪಿ. ಅಲಾಯಿದ.

ಚೇಳಿನ ಔಷಧಿ:— ಚೇಳು ಕಚ್ಚಿದ [illegible]ಳಕ್ಕೆ ಕೂಡಲೆ ಕೆಲವು ತೊಟ್ಟುಗಳನ್ನು ಬಿಟ್ಟರೆ ತಕ್ಷಣವೇ ಉರಿಯು ನಿಲ್ಲುವುದು. [illegible] ಕುಟುಂಬದಲ್ಲಿಯೂ ಅವಶ್ಯಕವಾಗಿರಬೇಕಾದದ್ದು. ಸೀಸೆ 1ಕ್ಕೆ 4 ಆಣೆ. ವಿ. [illegible] ಚಾರ್ಜು 6 ಸೀಸೆವರೆಗೂ 5 ಆಣೆ. 12 ಸೀಸೆಗಳನ್ನು ಒಂದಾವರ್ತಿ ತರಿಸಿಕೊಂಡರೆ [illegible] ರೂ. 1—8—0. ವಿ. ಪಿ. ಚಾರ್ಜು ಅಲಾಯಿದ.

ಮೇಹರಣ ತೈಲ:— ಇದನ್ನು ಬಿಳಿ ಬಟ್ಟೆಯಲ್ಲಿ ಹಚ್ಚಿ ರೋಗಗಳ ಮೇಲೆ ಹಾಕಿದರೆ, ಮೇಹದಿಂದುಂಟಾಗುವ ಕಂಠಮಾಲೆ, ತೊಡಬಾಳೆ, ಗೆಡ್ಡೆಗಳು, ಉಪದಂಶ ರೋಗವ್ರಣಗಳು, ಆಸನ ಪವುತ್ರಗಳು, ಲಿಂಗ ವ್ರಣ, ಯೋನಿ ವ್ರಣ, ಮುಂತಾದ ಸಕಲ ವ್ರಣಗಳು ಮತ್ತು ಘಾಯಗಳು ಅವುಗಳಲ್ಲಿ ಹುಟ್ಟುವ ಹುಳುವನ್ನು ಕೊಂದು ಹುಣ್ಣನ್ನು ಆರಿಸಿ ಚರ್ಮದ ಮೇಲಿನ ಹುರುಕನ್ನು ಸರಿಮಾಡಿ ಚೆನ್ನಾಗಿ ಬೆಳೆಯುವಂತೆ ಮಾಡುವದು. ಸೀಸೆ 1ಕ್ಕೆ 8 ಆಣೆ. ವಿ. ಪಿ. ಚಾರ್ಜು 3 ಸೀಸೆವರೆಗೂ 5 ಆಣೆ.

ಮಧುರಧ್ವನಿ ಮಾತ್ರೆ:— ಧ್ವನಿಯಲ್ಲಿರುವ ನ್ಯೂನತೆಗಳನ್ನು ಸರಿಮಾಡಿ, ಮನೋಹರವಾದ ಧ್ವನಿಯನ್ನುಂಟುಮಾಡಿ ಸ್ಫುಟವಾಗಿ ಮಾತನಾಡುವದಕ್ಕೆ ವಿಶೇಷ ಅನುಕೂಲಪಡಿಸಿಕೊಡುವದು. ಮುಖ್ಯವಾಗಿ ಸಂಗೀತಗಾರರು, ಉಪನ್ಯಾಸಕರು ಮೊದಲಾದವರಿಗೆ ಬಹಳ ಸಹಕಾರಿಯು. ಇದರ ಸೇವನೆಯಿಂದ ಭಾರವಾದ ಧ್ವನಿಯು ಸರಿಯಾಗುವದು. ಹಾಡಿದರೆ ಕಿವಿಗಿಂಪಾಗುವಂತೆ ಧ್ವನಿಯು ಹೊರಡುವದು. ಸೀಸೆ 1ಕ್ಕೆ 8 ಆಣೆ. ವಿ. ಪಿ. ಚಾರ್ಜು 6 ಸೀಸೆವರೆಗೂ 5 ಆಣೆ.

ಸ್ನಾನಕ್ಕೆ ಸುವಾಸನಾ ಪುಡಿ:— ಸುವಾಸನೆಯುಳ್ಳ ಈ ಪುಡಿಯನ್ನು ಸ್ನಾನಕಾಲದಲ್ಲಿ ಪ್ರಾಯದ ಗಂಡಸರೂ, ಹೆಂಗಸರೂ, ಮುದುಕರೂ, ಸಣ್ಣ ಮಕ್ಕಳೂ ಉಪಯೋಗಿಸುವದಕ್ಕೆ ಅನುಕೂಲವಾಗಿರುವದು. ಚರ್ಮಗತವಾದ ಕೊಳೆಯನ್ನೂ ಬೆವರಿನ ದುರ್ಗಂಧವನ್ನೂ ಹೋಗಲಾಡಿಸಿ, ಚರ್ಮವನ್ನು ಮೃದುಮಾಡಿ, ಮಿಂಚುವಂತೆ ಹೊಳಪು ಹುಟ್ಟಿ, ತಂಪನ್ನುಂಟುಮಾಡುವದು. ಅದಲ್ಲದೆ ದೇಹದಲ್ಲಿ ಸರ್ವದಾ ಸುಗಂಧವಿರುವಂತೆ ಮಾಡುವದು. ಪ್ರತಿಯೊಬ್ಬರೂ ಉಪಯೋಗಿಸಲಿಕ್ಕೆ ಯೋಗ್ಯವಾಗಿದೆ. ಪೆಟ್ಟಿಗೆ 1ಕ್ಕೆ 8 ಆಣೆ. ವಿ. ಪಿ. ಚಾರ್ಜುಗಳು 2 ಪೆಟ್ಟಿಗೆವರೆಗೂ 5 ಆಣೆ.

☞ ಈ ಪ್ರಾಂತ್ಯದಲ್ಲಿ ಕನ್ನಡ, ತೆಲುಗು, ಮಲೆಯಾಳ ಈ ಭಾಷೆಗಳು ತಿಳಿಯುವದಿಲ್ಲವಾದುದರಿಂದ ಪೋಷಕರು ದಯವಿಟ್ಟು ಆರ್ಡರುಗಳನ್ನು ಮತ್ತು ಪತ್ರವ್ಯವಹಾರಗಳನ್ನು ಇಂಗ್ಲೀಷಿನಲ್ಲಾಗಲೀ, ತಮಿಳಿನಲ್ಲಾಗಲೀ ಸ್ಫುಟವಾಗಿ ತಿಳಿಯುವಂತೆ ಬರಿಯಬೇಕು.

MY ADDRESS.	ನಮ್ಮ ವಿಳಾಸ:—
P. SUBBA ROY.	ಪಿ. ಸುಬ್ಬರಾಯಿ,
Ayurvedic Pharmacy,	ಆಯುರ್ವೇದ ಔಷಧಶಾಲ,
Sri Perumalkoil,	ಶ್ರೀ ವೆಂಕಟೇಶ ಪೆರುಮಾಳ್ ದೇವಸ್ಥಾನ,
SANNATHY, TANJORE.	ಸನ್ನಿಧಿ, ತಂಜಾವೂರು.

ಆರ್. ಮಾರ್ಟಿನ್ಸರ ಮಾತ್ರೆಗಳು ನಂ. 2.

ಡಮಿಯಾನ ಮತ್ತು ಕಂಪೌಂಡ್ ಫೊಸ್ಫರಸ್ ಕೂಡಿರುವ ಈ ಮಾತ್ರೆ ಮಾದ ಏಳು ಔಷಧಿಗಳಿಂದ ತಯಾರಿಸಲ್ಪಟ್ಟಿವೆ. ಇದು ಕೂಡಲೇ ಗುಣಪಡಿಸುವ ಶಕ್ತಿಯುಳ್ಳದ್ದಾಗಿದ್ದು ಮಲಬದ್ಧತೆ, ಬಾಡಿದ ಮುಖ, ತಲೆಸಿಡಿತ, ಅಜೀರ್ಣ, ಸ್ನಾಯು ಬಲಹೀನತೆ, ಸರ್ವ ವಿಧದ ಹೆಂಗಸರ ಬಲಹೀನತೆ, ಮೊದಲಾದ ರೋಗಗಳಿಗೆ ಸಿದ್ಧೌಷಧವು. ಅದಲ್ಲದೆ ಮೂತ್ರ ರೋಗ, ಭ್ರಾಂತಿ, ಗುಂಡಿಗೆ ಬಡಿಯೋಣ, ರಾತ್ರಿ ಬೆವರುವುದು, ಈ ರೋಗಗಳಿಗೂ ಗುಣಕಾರಿ. ಮೆದುಳು ಕೆಲಸ ಮಾಡುವವರಿಗೆ ಅತ್ಯುಪಕಾರಿ. ಪ್ರತಿ ಬಾಟ್ಲಿಯಲ್ಲಿ ೪೦ ಮಾತ್ರೆಗಳಿವೆ. ಬಾಟ್ಲಿಗೆ ರೂ. ೧—೮—೦.

ಆರ್. ಮಾರ್ಟಿನ್ಸರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮುಲು ಗೂರಲು, ಶ್ವಾಸ, ಶೀತ, ನೆಗಡಿ, ಗಂಟಲುನೋವು, ಎದೆ ನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನೆಮಾಡಿ ಪರೀಕ್ಷಿಸಿ ನೋಡಲಿ. ಅನಂತರ ಯಾವ ಬೇರೆ ಔಷಧಕ್ಕೂ ಗಮನ ಕೊಡದಿರುವರು. ಎಲ್ಲಾ ವಿಧವಾದ ಕೆಮ್ಮಿಗೂ ರಾಣಿಯಾಗಿಯೂ, ಎದೆಗೆ ಬಲಕೊಟ್ಟು ಮೇಲ್ಕಂಡ ರೋಗಗಳು ತಲೆಯಿಕ್ಕದಂತೆ ಮಾಡುತ್ತವೆ.

೬೦ ಮಾತ್ರೆಗಳ ಸೀಸೆ ಒಂದಕ್ಕೆ ರೂ. ೧—೦—೦.

ಆರ್. ಮಾರ್ಟಿನ್ಸರ ಮೇಹರೋಗಕ್ಕೆ ಮಿಶ್ರಣ.

ಗಂಡಸರು ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ ಅಥವಾ ಹೊಸತಾಗಿದ್ದರೂ ಸರಿ. ಬಿಳಿಪು ಹೋಗುವುದು, ಉರಿಯುವುದು ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೇ ಮೂತ್ರ ಉರಿಯುವುದನ್ನು ನಿಲ್ಲಿಸಿ, ಮೂತ್ರವು ಬಿಳುಪಾಗಿ ನಿರ್ಮಲವಾಗುವುದಲ್ಲದೆ ರೋಗದ ಪಟ್ಟನ್ನೇ ಅಡಗಿಸಿಬಿಡುತ್ತದೆ. ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ. ಬೆಲೆ ಸೀಸೆ ಒಂದಕ್ಕೆ ರೂ. ೧—೮—೦. ವಿಳಾಸ:—

ಆರ್. ಡಿ. ಕಟ್ಲೆ ಮತ್ತು ಕಂಪೆನಿ, R. D. kately & Co.

ನಂಬ್ರ ಡಿ. ಫ್ರಿಯರ್ ರೋಡ್, *No. D. Frere Road,*

ಮುಂಬಯಿ. *Near Wright & Co. Fort Bombay.*

ಯುಗಾದಿ ಬಹುಮತಿ! ಹೊಸ ಕಂಪೆನಿ! ಹೊಸ ಸರಕುಗಳು



ಅಮೇರಿಕ ದೇಶದ ಎಲೆಕ್ಟ್ರಿಕ್ ಮೂಗು ಬೊಟ್ಟು 30 ರೂಪಾಯಿ ಬೆಲೆ ಬಾಳತಕ್ಕದ್ದನ್ನು ರೂ. 1—8—0 ಕೊಡುವೆವು. ಇದನ್ನು ನಮ್ಮ ಸ್ವಂತ ಆರ್ಡರು ಮೇಲೆ ಅಮೇರಿಕ ದೇಶದಲ್ಲಿ ಕಂಡುಹಿಡಿಯಲ್ಪಟ್ಟ ಇಮಿಟೇಶನ್ ವಜ್ರಗಳಿಂದ ತಯಾರಿಸಿ ಕಳುಹಿಸಿರುತ್ತಾರೆ. ಇದರ ಕಲ್ಲುಗಳು ಕೋಟಿಸೂರ್ಯ ಪ್ರಕಾಶಕ್ಕೆ ಥಳಥಳಿಸುವವು. ಬಂಗಾರಕ್ಕೆ ಸಮಾನವಾದ ಒಂದು ವಿಧವಾದ ಲೋಹದಿಂದ ಕಟ್ಟಿ ಇರುತ್ತೆ. ಇದನ್ನು ನೋಡುವವರು ವಜ್ರವಾಗವೆಂದು ಹೇಳುವರು. ಅಷ್ಟು ಸೂರ್ಯಪ್ರಕಾಶಕ್ಕೆ ಥಳಥಳಿಸುವದು. ಬೇಗಬೇಗನೆ ದರಖಾಸ್ತು ಮಾಡುವವರಿಗೆ ಒಳ್ಳೇ ಫಾಯಿದೆ ದೊರಕುವದು.

ಇದೇ ತಿಂಗಳ ಒಳಗಾಗಿ ಈ ಸೀರೆ ತರಿಸಿಕೊಳ್ಳುವವರಿಗೆ ಈ ಮೇಲ್ಕಂಡ ರೂ. 1—8—0 ರೂಪಾಯಿನ ಮೂಗು ಬೊಟ್ಟು ಇನಾಂ ಕಳುಹಿಸುವೆವು.

ಮಲ್ಲಿಗೆ ಹೂವಿನ ಸೀರೆ.

ಈ ಸೀರೆಗಳನ್ನು ಯುಗಾದಿ ಹಬ್ಬಕ್ಕಾಗಿ ತರಿಸಿ ಇರುತ್ತೇವೆ. ಇದರ ಕ್ರಯ ರೂ. 3. ವಿ. ಪಿ. ಚಾರ್ಜು ೪ ಆಣೆ ಪ್ರತ್ಯೇಕ. ಮೇಲ್ಕಂಡ ಮೂಗು ಬೊಟ್ಟು ಇನಾಂ. ಎಲ್ಲರೂ ವಿಕ್ರಯಿಸಿದ ಮಧುರೆ ಹವಳದ ಬಳ್ಳಿಗಳಲ್ಲ. ಭಾರಿ ಕ್ರಯದ ಸೀರೆಗಳು. ಇದು ಉಡುವದಕ್ಕೆ ಧಡುತೆ ಆಗಿಯೂ ನೋಡುವದಕ್ಕೆ ಸೊಗಸಾಗಿಯೂ ಇದೆ. ಬಣ್ಣಕ್ಕೆ ಗ್ಯಾರಂಟು ಕೊಡುವೆವು. ಸೀರೆಯ ಉದ್ದ 16 ಮೊಳ. ಸೊಗಸಾದ ಅಂಚು ಕಟ್ಟಿ ಇರುತ್ತೆ. ಇದು ಎಲ್ಲರೂ ಉಡುವದಕ್ಕೆ ಲಾಯಖಾದದ್ದು. ಪ್ರತಿದಿನ ಸಾವಿರಾರು ಸೀರೆಗಳು ವಿಕ್ರಯಿಸುತ್ತೇವೆ. ದಯಮಾಡಿ 1 ಸೀರೆಯನ್ನು ತರಿಸಿಕೊಂಡು ಅಲಂಕಾರಭೂಷಿತರಾಗಿ ಇರುವರೆಂದು ನಂಬಿದ್ದೇವೆ. ನಮ್ಮ ಕಂಪೆನಿಯಲ್ಲಿ ಅನೇಕ ತರದ ಜವಳಿ ದಿನಸುಗಳು ಸಿಕ್ಕುತ್ತೆ.

ವಿಳಾಸ:— ರತ್ನಂ ಕಂಪೆನಿ,

ಕ್ಲೊತ್ ಮರ್ಚೆಂಟ್ಸ್,

3, ಇರುಳಪ್ಪನ ಬೀದಿ, ಮದ್ರಾಸು.

☞ ಇದನ್ನು ದಯವಿಟ್ಟು ನಿಮ್ಮ ಸ್ನೇಹಿತರುಗಳಲ್ಲಿ ಪ್ರಚುರಪಡಿಸಿರಿ.

ಪಿ. ಸುಬ್ಬರಾಯಿಯವರ

ಲೋಕ ಪ್ರಸಿದ್ಧವಾದ ಆಯುರ್ವೇದ ಔಷಧಗಳು.

ಸ್ಖಲಿತ ...ಣಿ:— ಬಲಹೀನದಿಂದಲೂ, ಉಷ್ಣದಿಂದಲೂ, ಬಾಲ್ಯಾವಸ್ಥೆಗಳಲ್ಲಿ ನಡದಂಥಾ ಅತಿ ... ಕೆಲಸಗಳಿಂದಲೂ, ನಿದ್ರೆಯಲ್ಲಿಯೂ, ಸ್ವಪ್ನದಲ್ಲಿಯೂ ಸ್ಖಲಿತವಾದ ಇಂದ್ರಿಯವನ್ನು ...ಸಿ ದೇಹದೃಢವನ್ನು ತರುವುದು. ಸೀಸೆ 1ಕ್ಕೆ 8 ಆಣೆ. ವಿ. ಪಿ. ಚಾರ್ಜು 6 ಸೀಸೆ... 5 ಆಣೆ.

ಅತ್ಯುತ್ತಮವಾದ ಕ...ರಿ:— ಕಾಶ್ಮೀರದಿಂದ ತರಿಸಿರುವದು. ಅತ್ಯುತ್ತಮವಾದದ್ದು ಮತ್ತು ಒಂದೇ ರಸಿ...ಕ್ಕದ್ದು. ತೊಲೆ 1ಕ್ಕೆ ರೂ. 48. ಚಿಲ್ಲರೆಯಾಗಿ 1 ರೂಪಾಯಿಗೂ ದೊರಕುತ್ತದೆ. ವಿ. ಪಿ. ಅಲಾಯಿದ.

ಚೇಳಿನ ಔಷಧಿ:— ಚೇಳು ಕಚ್ಚಿದ ...ಳಕ್ಕೆ ಕೂಡಲೆ ಕೆಲವು ತೊಟ್ಟುಗಳನ್ನು ಬಿಟ್ಟರೆ ತಕ್ಷಣವೇ ಉರಿಯು ನಿಲ್ಲುವುದು. ...ತಿ ಕುಟುಂಬದಲ್ಲಿಯೂ ಅವಶ್ಯಕವಾಗಿರಬೇಕಾದದ್ದು. ಸೀಸೆ 1ಕ್ಕೆ 4 ಆಣೆ. ವಿ. ...ಚಾರ್ಜು 6 ಸೀಸೆವರೆಗೂ 5 ಆಣೆ. 12 ಸೀಸೆಗಳನ್ನು ಒಂದಾವರ್ತಿ ತರಿಸಿಕೊಂಡರೆ ಒ... ರೂ. 1—8—0. ವಿ. ಪಿ. ಚಾರ್ಜು ಅಲಾಯಿದ.

ಮೋಹರಣ ತೈಲ:— ಇದನ್ನು ಬಿಳಿ ಬಟ್ಟೆಯಲ್ಲಿ ಹಚ್ಚಿ ರೋಗಗಳ ಮೇಲೆ ಹಾಕಿದರೆ, ಮೋಹದಿಂದುಂಟಾಗುವ ಕಂಠಮಾಲೆ, ತೊಡಬಾಳೆ, ಗೆಡ್ಡೆಗಳು, ಕುಷ್ಠ ರೋಗವ್ರಣಗಳು, ಆಸನ ಪವುತ್ರಗಳು, ಲಿಂಗ ವ್ರಣ, ಯೋನಿ ವ್ರಣ, ಮುಂತಾದ ಸಕಲ ವ್ರಣಗಳು ಮತ್ತು ಘಾಯಗಳು ಅವುಗಳಲ್ಲಿ ಹುಟ್ಟುವ ಹುಳವನ್ನು ಕೊಂದು ಹುಣ್ಣನ್ನು ಆರಿಸಿ ಚರ್ಮದ ಮೇಲಿನ ಹುರುಕನ್ನು ಸರಿಮಾಡಿ ಚೆನ್ನಾಗಿ ಬೆಳೆಯುವಂತೆ ಮಾಡುವದು. ಸೀಸೆ 1ಕ್ಕೆ 8 ಆಣೆ. ವಿ. ಪಿ. ಚಾರ್ಜು 3 ಸೀಸೆವರೆಗೂ 5 ಆಣೆ.

ಮಧುರಧ್ವನಿ ಮಾತ್ರೆ:— ಧ್ವನಿಯಲ್ಲಿರುವ ನ್ಯೂನತೆಗಳನ್ನು ಸರಿಮಾಡಿ, ಮನೋಹರವಾದ ಧ್ವನಿಯನ್ನುಂಟುಮಾಡಿ ಸ್ಫುಟವಾಗಿ ಮಾತನಾಡುವದಕ್ಕೆ ವಿಶೇಷ ಅನುಕೂಲಪಡಿಸಿಕೊಡುವದು. ಮುಖ್ಯವಾಗಿ ಸಂಗೀತಗಾರರು, ಉಪನ್ಯಾಸಕರು ಮೊದಲಾದವರಿಗೆ ಬಹಳ ಸಹಕಾರಿಯು. ಇದರ ಸೇವನೆಯಿಂದ ಭಾರವಾದ ಧ್ವನಿಯು ಸರಿಯಾಗುವದು. ಹಾಡಿದರೆ ಕಿವಿಗಿಂಪಾಗುವಂತೆ ಧ್ವನಿಯು ಹೊರಡುವದು. ಸೀಸೆ 1ಕ್ಕೆ 8 ಆಣೆ. ವಿ. ಪಿ. ಚಾರ್ಜು 6 ಸೀಸೆವರೆಗೂ 5 ಆಣೆ.

ಸ್ನಾನಕ್ಕೆ ಸುವಾಸನಾ ಪುಡಿ:— ಸುವಾಸನೆಯುಳ್ಳ ಈ ಪುಡಿಯನ್ನು ಸ್ನಾನಕಾಲದಲ್ಲಿ ಪ್ರಾಯದ ಗಂಡಸರೂ, ಹೆಂಗಸರೂ, ಮುದುಕರೂ, ಸಣ್ಣ ಮಕ್ಕಳೂ ಉಪಯೋಗಿಸುವದಕ್ಕೆ ಅನುಕೂಲವಾಗಿರುವದು. ಚರ್ಮಗತವಾದ ಕೊಳೆಯನ್ನೂ ಬೆವರಿನ ದುರ್ಗಂಧವನ್ನೂ ಹೋಗಲಾಡಿಸಿ, ಚರ್ಮವನ್ನು ಮೃದುಮಾಡಿ, ಮಿಂಚುವಂತೆ ಹೊಳಪು ಹುಟ್ಟಿ, ತಂಪನ್ನುಂಟುಮಾಡುವದು. ಅದಲ್ಲದೆ ದೇಹದಲ್ಲಿ ಸರ್ವದಾ ಸುಗಂಧವಿರುವಂತೆ ಮಾಡುವದು. ಪ್ರತಿಯೊಬ್ಬರೂ ಉಪಯೋಗಿಸಲಿಕ್ಕೆ ಯೋಗ್ಯವಾಗಿದೆ. ಪೆಟ್ಟಿಗೆ 1ಕ್ಕೆ 8 ಆಣೆ. ವಿ. ಪಿ. ಚಾರ್ಜುಗಳು 2 ಪೆಟ್ಟಿಗೆವರೆಗೂ 5 ಆಣೆ.

☞ ಈ ಪ್ರಾಂತ್ಯದಲ್ಲಿ ಕನ್ನಡ, ತೆಲುಗು, ಮಲೆಯಾಳ ಈ ಭಾಷೆಗಳು ತಿಳಿಯುವದಿಲ್ಲವಾದುದರಿಂದ ಪೋಷಕರು ದಯವಿಟ್ಟು ಆರ್ಡರುಗಳನ್ನು ಮತ್ತು ಪತ್ರವ್ಯವಹಾರಗಳನ್ನು ಇಂಗ್ಲೀಷಿನಲ್ಲಾಗಲೀ, ತಮಿಳಿನಲ್ಲಾಗಲೀ ಸ್ಫುಟವಾಗಿ ತಿಳಿಯುವಂತೆ ಬರಿಯಬೇಕು.

MY ADDRESS.	ನಮ್ಮ ವಿಳಾಸ:—
P. SUBBA ROY.	ಪಿ. ಸುಬ್ಬರಾಯಿ,
ಮೇಲಿನ ಮಾತುಗಳಿಂದ ಕ್ರೈಸ್ತ ಮಿಶ್ಯನ್ ಸಾಲೆಗಳ ಸಂಖ್ಯೆ ಹೆಚ್ಚೆಂದೂ ಬೋರ್ಡು ಸಾಲೆಗಳಲ್ಲಿಯೂ ಕೂಡ ಉಪಾಧ್ಯಾಯಿನಿಯರಲ್ಲಿ ಅನೇಕರು ಕ್ರೈಸ್ತಮತದವರೆಂದೂ ತಿಳಿಯಬೇಕು. ಇವರು ಕೊಡುವ ಶಿಕ್ಷಣವು ಬಹಳಮಟ್ಟಿಗೆ ಕ್ರೈಸ್ತಮತಾವಲಂಬಿಗಳಿಗೆ ಯೋಗ್ಯವಾದುದಲ್ಲದೆ ಇತರರಿಗೆ ಅನುಕೂಲವಾದ್ದಲ್ಲವೆಂದು ದೃಢವಾಗಿ ಹೇಳಬಹುದು. ಬೋರ್ಡು ಸಾಲೆಗಳಲ್ಲಿ ಮತಬೋಧನೆಯು ಇಲ್ಲವಲ್ಲಾ ಎಂದು ಕೆಲವರು ವಾದಿಸಬಹುದು. ಮಕ್ಕಳು ಯಾವಾಗಲೂ ಉಪಾಧ್ಯಾಯ ಅಥವಾ ಉಪಾಧ್ಯಾಯಿನಿಯರ ನಡತೆ, ಚರ್ಯೆಗಳನ್ನು ಬಹಳಮಟ್ಟಿಗೆ ಹಿಂಬಾಲಿಸುತ್ತವೆಂಬುದು ಎಲ್ಲರೂ ತಿಳಿದ ಮಾತಾಗಿದೆ. ಅವರೆ ಮಕ್ಕಳಿಗೆ ಆದರ್ಶಸ್ಥಾನ. ಅವರ ಮನಸ್ಸು ಮೆಚ್ಚಿಸುವುದೇ ಮಕ್ಕಳ ಕರ್ತವ್ಯ. ಮತ್ತು ಇವರಲ್ಲಿ ಮಕ್ಕಳಿಗೆ ಸ್ವಾಭಾವಿಕ ಲವಲವಿಕೆಯಿದೆ. ಹಾಗಿದ್ದರೆ ಹೆಣ್ಣು ಮಕ್ಕಳು ತಮ್ಮ ಉಪಾಧ್ಯಾಯಿನಿಯರ ಚರ್ಯೆಗಳನ್ನು ಅನುಸರಿಸದಿದ್ದರೆ ಆಶ್ಚರ್ಯಕರ. ಕೆಲವು ಮಿಶ್ಯನ್ ಸಾಲೆಗಳಲ್ಲಿ ಹಿಂದೂ ಮಕ್ಕಳು ಕ್ರೈಸ್ತಮತದ ಗೀತಗಳನ್ನೂ ಪ್ರಾರ್ಥನೆಗಳನ್ನೂ, ವಿಲಾಯತಿಯ ರಾಗಗಳನ್ನು ಪ್ರೀತಿಪೂರ್ವಕವಾಗಿ ಕಲಿತುಕೊಂಡದ್ದು ವಾಚಕರಿಗೆ ಗೊತ್ತಿರಬಹುದು. ಹಲವು ವಿಧದ ಮತತರಂಗಗಳು ಹಿಂದೀದೇಶದ ಗೃಹವೆಂಬ ಬಂಡೆಯನ್ನು ಪದೇ ಪದೇ ಬಡೆಯುತ್ತಿದ್ದರೂ ಅದು ಸ್ಥಿರವಾಗಿ ನಿಂತು ತನ್ನ ಪೂರ್ವ ಸ್ಥಿತಿಯನ್ನು ಮಾರ್ಪಡಿಸದೆ ಹಿಂದುವು ಹಿಂದುವಾಗಿಯೇ ಮಹಮ್ಮದಿ ಮತಸ್ಥನು ಮಹಮ್ಮದಿ ಮತಸ್ಥನಾಗಿಯೇ ಇರುವುದಕ್ಕೆ ಆಯಾಯ ಗೃಹಿಣಿಯ ಸ್ಥಿರತೆಯೇ ಕಾರಣವೆಂದು ನಾವು ಹೇಳಬಲ್ಲೆವು. ಪುರುಷರು ಬಾಹ್ಯಾವಸ್ಥೆಯಲ್ಲಿ ತಮ್ಮ ಮತವನ್ನು ಅಲ್ಲಗಳೆಯಲಿ; ಪರಮತವನ್ನು ಪರಮಪಾವನವೆಂದು ತಿಳಿದುಕೊಳ್ಳಲಿ! ಅವರು ಈ ಅಭಿಪ್ರಾಯವನ್ನು ತಮ್ಮ ಗೃಹದ ಹೊಸ್ತಿಲನ್ನು ಪ್ರವೇಶಿಸಿದೊಡನೆ ಎಲ್ಲಿಯೊ ಬಿಚ್ಚಿಟ್ಟು ಹಿಂದುವು ಹಿಂದುವಾಗಿಯೂ ಮುಸಲ್ಮಾನನು ಮುಸಲ್ಮಾನನಾಗಿಯೂ ಈ ವರೆಗೆ ಇರುವುದಕ್ಕೆ ಅವನ ಗೃಹಿಣಿಯ ನಿಶ್ಚಲತೆಯೇ ಕಾರಣ. ಆದರೆ ಬಂಡೆಯೂ ಸಹ ತೆರೆಗಳ ಬಡಿತದಿಂದ ಕಾಲಕ್ರಮದಲ್ಲಿ ಕೊರೆದು ಹೋಗುವಂತೆ ಈಚೀಚೆಗೆ ಈ ನೂತನ ವಿದ್ಯಾಭ್ಯಾಸ ಬಲದಿಂದ ಈ ಗೃಹದ ಪೂರ್ವಪರಿಶುದ್ಧತೆಗೆ ಸಿಥಿಲತೆಯು ತಲೆದೋರುತ್ತ ಬಂದಿದೆ. ಇದನ್ನು ಈಗಿನ ವಿದ್ಯಾಭ್ಯಾಸವು ಯಾವ ಮನೆಯನ್ನು ಪ್ರವೇಶ ಮಾಡಿದೆಯೊ ಆತನು ಕಂಡು ಹಿಡಿಯದೆ ಇರಲಾರನು. ಈ ಮಾರ್ಪಾಡುಗಳು ಬಹಳ ಮೆಲ್ಲಗೆ ಆಗುತ್ತಿರುವುದರಿಂದ ಕಣ್ಣಿಗೆ ಗೋಚರವಾಗುವುದಿಲ್ಲ. "ವಿಭಕ್ತ ಕುಟುಂಬಗಳೇ ಈಗಿನ ವಾಡಿಕೆಯಾಗಿದೆ" ಎಂದು ಮೇಲಿನ ಸರ್ಕಾರು ಸ್ಪಷ್ಟವಾಗಿ ಹೇಳುತ್ತದೆ. ಉದರನಿರ್ವಾಹಕ್ಕಾಗಿ ಒಂದು ಕುಟುಂಬದಲ್ಲಿರುವ ಹಲವು ಮಂದಿ ಬೇರೆ ಬೇರೆ ಕಡೆ ಸೇರುವರು. ಅವರ ಮಕ್ಕಳು ಮರಿಮಕ್ಕಳಿಗೆ ತಮ್ಮ ಕುಟುಂಬದವರು ಯಾರು ಎಂಬ ಜ್ಞಾನವೇ ಇರುವುದಿಲ್ಲ. ಅದಕ್ಕನುಸಾರವಾಗಿ ಜನರ ಮನಸ್ಸು ಸಹ 'ತಾವು, ತಮ್ಮ ಹೆಂಡತಿ ಮಕ್ಕಳು" ಎಂಬ ಮಾತಿನ ಹೊರಗೆ ತಮ್ಮ ಕುಟುಂಬ ಇದೆ ಎಂದು ತಿಳಿದುಕೊಳ್ಳುವುದಕ್ಕೆ ಪ್ರಯತ್ನಿಸುವುದಿಲ್ಲ. ಈಗಿನ ಪ್ರಾಜ್ಞರು ತಯಾರಿಸುವ ಕಾಯಿದೆ ಮಸೂದೆಗಳು ಅದಕ್ಕೆ ಅನುಸಾರವಾಗಿಯೇ ಇವೆ. ಕೆಲವು ವರ್ಷಗಳ ಹಿಂದೆ ಗತಿಸಿ ಹೋದ ವಿ. ಭಾಷ್ಯಮ್ ಅಯ್ಯಂಗಾರರು (Gains of Learning bill) ವಿದ್ಯಾ ಪರಿಮುಖವಾಗಿ ಉಂಟಾದ ಆದಾಯದ ವಿಲೆವಾರಿಯ ಒಂದು ಕಾಯಿದೆಯನ್ನು ಮಂಜೂರು ಮಾಡಿಸಬೇಕೆಂದು ಪ್ರಯತ್ನಿಸಿದರು. ಇವರ ಮೇರೆಗೆ ಕುಟುಂಬದ ಆಸ್ತಿಯನ್ನು ವೆಚ್ಚಮಾಡಿ ಒಬ್ಬನಿಗೆ ವಿಶೇಷ ವಿದ್ಯಾಲಾಭವು ಉಂಟಾದರೆ ಅದರಿಂದ ಸಿಕ್ಕುವ ಮುನಾಫೆಗೆ ಅವನ ಅವಿಭಕ್ತ ಕುಟುಂಬದ ಸಹಭಾಗಿಗಳು ಹಕ್ಕುದಾರರಲ್ಲವೆಂದು ನಿರ್ಣಯಿಸುವುದೇ ಉದ್ದೇಶವಾಗಿತ್ತು. ಆದರೆ ಆ ಕಾಲದಲ್ಲಿ ಮದ್ರಾಸು ಸಂಸ್ಥಾನದಲ್ಲಿ ಹಲವು ಕಡೆಗಳಲ್ಲಿ ಜನರಲ್ಲಿ ಮುಖಂಡರು ಇದಕ್ಕೆ ವಿರೋಧವಾಗಿ ಮನವಿಮಾಡಿಕೊಂಡದ್ದಲ್ಲದೆ ಅಲ್ಲಲ್ಲಿ ಸಭೆಗಳನ್ನು ಏರ್ಪಡಿಸಿ ಈ ಮಸೂದೆಯನ್ನು ಖಂಡಿಸಿದರು. ಆಗಿನ ಗವರ್ನರರಾಗಿದ್ದ ಸರ್. ಆರ್ಥರ್ ಹೆವ್‌ಲಕ್ ಇವರು ಆ ಮಸೂದೆಗೆ ತನ್ನ ಸಹಿಕೊಡದ ಕಾರಣ ನ್ಯಾಯವಿಧಾಯಕ ಸಭೆಯಲ್ಲಿ ಮಂಜೂರಾದ ಈ ಮಸೂದೆಯು ಕಾನೂನಾಗಿ ಜಾರಿಗೆ ಬಾರದೆ ಹೋಯಿತು. ಈಗ ಅವಿಭಕ್ತ ಕುಟುಂಬದ ಯಾವನೊಬ್ಬ ಭಾಗೇದಾರನು ತನ್ನ ಪಾಲಿನ ಅಂಶವನ್ನು ತಾನು ಬೇರೆಯಾಗಿ ವಿಂಗಡಿಸಲಿಕ್ಕೆ ನಿಶ್ಚಯಮಾಡಿರುವೆನು ಎಂದು ಒಂದು ದೃಢ ಪತ್ರಿಕೆಯನ್ನು ಯಾವದೊಂದು ರಿಜಿಸ್ಟ್ರಿ ಆಫೀಸಿನಲ್ಲಿ ರಿಜಿಸ್ಟ್ರಿ ಮಾಡಿಸಿದರೆ ಅವನ ಹಕ್ಕಿನ ಆಸ್ತಿಗೆ ಕುಟುಂಬದ ಆಸ್ತಿಯ ಮೇಲೆ ಆ ತಾರೀಕಿನ ನಂತರ ಬರುವ ಜವಾಬ್ದಾರಿಗಳು ಬಾಧಿಸುವುದಿಲ್ಲವೆಂದೂ ಆ ವರೆಗೆ ಇರುವ ಜವಾಬ್ದಾರಿಗಳಿಗೆ ಮಾತ್ರ ಅವನು ಹೊಣೆಯಾಗುವನೆಂದೂ (Hindu Co-parceners' bill) ಹಿಂದೂ ಅವಿಭಕ್ತ ಕುಟುಂಬದ ಹಕ್ಕಿನ ವಿಲೆವಾರಿಯು ಒಂದು ಮಸೂದೆಯನ್ನು ಮದ್ರಾಸು ನ್ಯಾಯವಿಧಾಯಕ ಸಭೆಯ ಮೆಂಬರರಾದ ಬಹುಮಾನಪಟ್ಟ ಯಮ್. ರಾಮಚಂದ್ರರಾಯರು ಸಭೆಯ ಮಂಜೂರಾತಿಯ ಬಗ್ಗೆ ತಂದಿರುವರು. ಹೇಗೂ ಇರಲಿ! ಕುಟುಂಬವು ವಿಭಕ್ತವಾಗಿ "ತಾವು, ತಮ್ಮ ಹೆಂಡತಿ, ಮಕ್ಕಳುಮರಿ, ಎಂಬಲ್ಲಿಗೆ ತನ್ನ ಜವಾಬ್ದಾರಿ, ಕುಟುಂಬದ ಇತರರ ಗೊಡವೆ ಇಲ್ಲ" ಎಂಬುದೆ ಈಗಿನ ಸುಶಿಕ್ಷಿತ ಮಂಡಳಿಯ ತಿಳಿವು. ಅಳಿಯಕಟ್ಟಿನ ಆಚರಣೆಯಲ್ಲಿಯೂ ಈ ವಿಭಕ್ತತ್ವವು ಕಂಡುಬರುತ್ತಿದೆ ಎಂದು ಮಲಬಾರ್ ಡಿಸ್ಟ್ರಿಕ್ಟ್ ಬೋರ್ಡಿನ ಮುಂದೆ ಆದ ಚರ್ಚೆಯಿಂದ ಕಂಡು ಬರುತ್ತದೆ. ಈಗಿನ ವಿದ್ಯಾಭ್ಯಾಸದಿಂದ ಪುರುಷರಲ್ಲಿ ಯಾವ ಸ್ವಾರ್ಥಪರತೆ, ಪರಾವಲಂಬನ, ಸ್ವೇಚ್ಛಾವಿಹಾರ, ಮುಂತಾದ ಗುಣಗಳು ಪ್ರಬಲಗೊಂಡಿವೆಯೊ ಅವು ಈಗಿನ ಬಗೆಯ ಸ್ತ್ರೀ ವಿದ್ಯಾಭ್ಯಾಸದ ಮಹಿಮೆಯಿಂದ ದ್ವಿಗುಣಿಸುವುವು. ಮತ್ತು ಗೃಹಶಾಂತಿಯೆಂಬ ಕಟ್ಟು ಸಡಲಿಸುತ್ತ ಬಂದು, ಗೃಹವು ತೀರಾ ಪರಿವರ್ತನೆ ಹೊಂದಿ, ಪೂರ್ವ ಸ್ಥಿತಿಯ ಕುರುಹುಗಳು ಲವಮಾತ್ರವೂ ಇಲ್ಲದೆ ನೂತನವಾದ ರೂಪವನ್ನು ಧರಿಸುವುದು. ಜನರ ಗೃಹದ ಅವಸ್ಥೆಯೇ ವಿಪರೀತವಾದ ಮಾರ್ಪಾಡನ್ನು ಹೊಂದುವುದು ನಿಸ್ಸಂದೇಹವಾಗಿದೆ.

ಈ ವಿಷಯದಲ್ಲಿ ಕ್ರೈಸ್ತಮತದವರಾದರೂ ಸಮಾಧಾನಚಿತ್ತರಾಗಿಯೇ ಇದ್ದಾರೆಂದು ಹೇಳಲಾರೆವು. ಅವರೂ ತೀರಾ ಪಾಶ್ಚಾತ್ಯ ಕ್ರಮಗಳನ್ನು ಪಾಶ್ಚಾತ್ಯ ವಿದ್ಯೆಯೊಂದಿಗೆ ಬಹುಬೇಗನೆ ಸ್ವೀಕರಿಸಿದರು. ಈ ಪರಿವರ್ತನೆಯು ನಿಜವಾಗಿ ಅವರಲ್ಲಿ ಗೃಹಶಾಂತಿಯನ್ನು ಉಂಟುಮಾಡಿದೆಯೊ ಎಂಬುದನ್ನು ಅವರು ಅಧ್ಯಾತ್ಮವಿಚಾರದಿಂದ ನೋಡಿದರೆ ಅವರು ಸಹ ಈಗಿನಂತೆ ಮುಂದು ಮುಂದಕ್ಕೆ ದುಮುಕುತ್ತಿರಲಿಲ್ಲವೆಂದು ನಾವು ಹೇಳಬಲ್ಲೆವು. ಅಂತೂ ಅವರಿಗೆ ಈಗಿನ ಸ್ಥಿತಿಯು ತುಂಬಾ ಸಮಾಧಾನಕರವೆಂದು ದೃಢವಾದ ನಂಬುಗೆಯಿದ್ದರೆ ಅವರು ಚಿರಕಾಲ ಆ ಸುಖವನ್ನು ಅನುಭವಿಸಲಿ ಎಂದು ನಾವು ಕೋರುವೆವು. ಆದರೆ ನಮಗೆ ಎಷ್ಟರ ಮಟ್ಟಿಗೆ ಸುಖದೊರೆತಿದೆ ಎಂಬುದನ್ನು ಈಗಿನ ವಿದ್ಯಾಭ್ಯಾಸ ಹೊಂದಿದ ಗೃಹಿಣಿಯರಿರುವ ಗೃಹಗಳನ್ನು ಸಂದರ್ಶಿಸಿದರೆ ಗೊತ್ತಾಗುವುದು.

(ಮುಂದರಿಯುವುದು)

ಇದೇ ಸರಳವಾದ ಮಾರ್ಗ.

ಹಿರಿಯರ ಬಾಯಿಯಲ್ಲಿ ಒಂದು ಕಥೆ ಇದೆ. ಏನೆಂದರೆ, ಹಿಂದೊಮ್ಮೆ ಒಬ್ಬ ಬಡ ಮನುಷ್ಯನು ದೇವಿಯ ಆರಾಧನೆಮಾಡಿ ಅವಳನ್ನು ಒಲಿಸಿಕೊಂಡನು. ದೇವಿಯು

ಪ್ರತ್ಯಕ್ಷಳಾಗಿ ನಿನಗೇನು ಬೇಕೆಂದು ಕೇಳಿದಳು. ಆಗ ಅವನು ಆಲೋಚಿಸಿ "ನನ್ನ ಮೊಮ್ಮಗನು ರಾಜಮಂತ್ರಿಯಾದುದನ್ನು ನಾನು ನೋಡಬೇಕೆಂ"ಬದೊಂದು ವರವನ್ನು ದೇವಿಯಿಂದ ಪಡಕೊಂಡನು. ಲೆಕ್ಕಕ್ಕೆ ವರವು ಒಂದೇ. ಆದರೆ ಅದರಲ್ಲಿ ಸಂಗತಿಗಳು ಅನೇಕ ಇವೆ: ಸಂತತಿ, ಸಂಪತ್ತು, ದೀರ್ಘಾಯುಷ್ಯ, ರಾಜ್ಯಮಾನ್ಯತೆ ಮತ್ತು ಮಂತ್ರಿಪದ ಇಷ್ಟು ಸಂಗತಿಗಳು ಒಂದೇ ವರದಲ್ಲಿ ಅಡಗಿ ಹೋಗಿವೆ. ಬೇರೆ ಬೇರೆಯಾಗಿ ಒಂದೊಂದನ್ನೇ ಕೇಳಿಕೊಳ್ಳುವುದಕ್ಕಿಂತ ಒಂದರಿಂದ ಎಲ್ಲ ಕಾಂಕ್ಷೆಗಳನ್ನು ಪ್ರಸ್ತಿಸಿಕೊಳ್ಳುವುದು ಬುದ್ಧಿವಂತಿಕೆಯ ಮಾತ್ರ ಲಕ್ಷಣವಲ್ಲ, ಸ್ವಕಾರ್ಯಗ ಸೌಕರ್ಯವೂ ಅದರಿಂದುಂಟಾಗುತ್ತದೆ. ಸಾವಿತ್ರಿಗೆ ಸತ್ಯವಾನನ ಪ್ರಾಣಗಳನ್ನು ಹಿಂದಕ್ಕೆ ಕೊಡಲು ಸರ್ವಥಾ ಒಪ್ಪಿಕೊಳ್ಳದ ಯಮನಿಗೆ, ಅವಳಿಗೆ ಪುತ್ರಶತದ ವರವನ್ನು ಕೊಟ್ಟ ಮೇಲೆ ಅದೇ ವರದಿಂದ ಸತ್ಯವಾನನ ಪ್ರಾಣಗಳನ್ನೂ ಹಿಂದಕ್ಕೆ ಕೊಡಬೇಕಾಯಿತು. ಇವೇ ದೃಷ್ಟಾಂತಗಳನ್ನು ಈಗಿನ ಹಿಂದೀ ರಾಜಕಾರಣದಲ್ಲಿ ಉಪಯೋಗಿಸಿಕೊಳ್ಳುವುದು ಜನರಿಗೆ ಈಗ ಕಾಲಪ್ರಾಪ್ತವಾಗಿದೆ. ರಾಷ್ಟ್ರೀಯ ಸಭೆಯು ಪ್ರಾರಂಭದಿಂದ ಸದ್ಯದವರೆಗೆ ಹಿಂದೀ ಮುಖಂಡರು ಅನೇಕ ಸಂಗತಿಗಳನ್ನೂ, ಸುಧಾರಣೆಗಳನ್ನೂ ರಾಜ್ಯಕರ್ತರೊಡನೆ ಕೇಳಿಕೊಳ್ಳುತ್ತಲೇ ಇದ್ದರು; ಈಗಲೂ ಆ ವ್ರತವನ್ನು ರಾಷ್ಟ್ರೀಯ ಸಭೆಯು ಬಿಡಲಿಲ್ಲ; ಸಿವಿಲ್ ಸರ್ವಿಸ ಪರೀಕ್ಷೆಯು ಹಿಂದುಸ್ಥಾನದಲ್ಲೇ ಆಗುವಂತೆ ಮಾಡಿರಿ, ಹಿಂದೀ ಜನರಿಗೆ ಅಧಿಕಾರದ ದೊಡ್ಡ ದೊಡ್ಡ ಸ್ಥಾನಗಳನ್ನು ಕೊಡಿರಿ; ಮೂವತ್ತು ಮೂವತ್ತು ವರ್ಷಗಳ ಬಾರಿಗೆ ಬರುವ ಅಥವಾ ಆಗತಕ್ಕ ಕಂದಾಯ ಇತ್ಯರ್ಥವು ಹೆಚ್ಚೇ ಆಗುತ್ತದಲ್ಲದೆ ಕಡಿಮೆ ಆಗುವುದಿಲ್ಲ; ಒಮ್ಮೆವೇಳೆ ಆದರೂ ಅಂತಹ ಉದಾಹರಣೆಗಳು ಬಹಳ ಕಡಿಮೆ ಇದು ಹಿತಾವಹವಲ್ಲ; ದಿನೇ ದಿನೇ ಕುಡಿಯುವ ಜನರು ಹೆಚ್ಚಾಗುತ್ತಾರೆ, ಇದನ್ನು ನಿಲ್ಲಿಸುವ ಉಪಾಯವು ಹೆಂಡದ ಮೇಲೆ ಕರವನ್ನು ಹೆಚ್ಚಿಸುವುದೇ ಎಂದು ಹಿತೋಕ್ತಿ ಹೇಳಿ ಮದ್ಯದ ಕರವನ್ನು ಹೆಚ್ಚಿಸುತ್ತಿದ್ದೀರಿ, ಇದು ಸರಿ ಅಲ್ಲ, ಹೆಚ್ಚಿಸುವುದಾದರೆ ಪ್ರಮಾಣಕ್ಕಿಂತಲೂ ಹೊರಗೆ ಎಂದರೆ ಒಮ್ಮೆಗೆ ಬಹಳ ಡ್ಯೂಟಿಯನ್ನು ಹೆಚ್ಚಿಸಿರಿ, ಕಾರಣವೇನೆಂದರೆ, ಅತಿ ಹೆಚ್ಚಾದ ಕರವನ್ನು ಕೊಡಲು ಅಸಾಧ್ಯವಾಗಿ ಜನರು ಅದನ್ನು ಕುಡಿಯುವುದನ್ನೇ ಬಿಟ್ಟಾರು; ಫೋರೆಸ್ಟ ಸಂಬಂಧದ ಕಾನೂನುಗಳಲ್ಲಿ ರೈತಾಪಿ ಜನರಿಗೆ ಪ್ರತಿಬಂಧಕವಾದ ಸಂಗತಿಗಳನ್ನು ನಿವಾರಿಸಿರಿ; ನ್ಯಾಯ ಇಲಾಖೆ ಮತ್ತು "ಅಮ್ಮಲ ಬಜಾವಣಿ" ಇಲಾಖೆಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ವಿಂಗಡಿಸಿರಿ; ಇಂತಹ ಅನೇಕ ವಿಜ್ಞಾಪನೆಗಳನ್ನು ರಾಷ್ಟ್ರೀಯ ಸಭೆಯಲ್ಲಿ ಸಭ್ಯರು ಪ್ರತಿವರ್ಷ ನಿರ್ಣಯದ ರೂಪದಿಂದ ಸರಕಾರದ ಕಡೆಗೆ ಕೇಳಿಕೊಳ್ಳುತ್ತಿದ್ದರು. ಆದರೆ ಇವುಗಳಲ್ಲಿ ಪ್ರಯೋಜನಕ್ಕೆ ಬರುವವು ಕೊಂಚವೇ. ರಕ್ತವು ದೂಷಿತವಾಗಿ ಮೈಮೇಲೆ ಗುಳ್ಳೆಯು ಮೂಡಿದರೆ ಅದಕ್ಕೆ ಅಲ್ಲಿ ಶಸ್ತ್ರ ಪ್ರಯೋಗ ಮಾಡುತ್ತಾರೆ; ಆದರೆ ಅದು ಇನ್ನೊಂದು ಕಡೆಯಲ್ಲಿ ಮೂಡುತ್ತದೆ; ಅದಕ್ಕೇನಾದರೂ ಔಷಧೋಪಚಾರ ಮಾಡಿದರೆ ಮೂರನೆ ಕಡೆಯಲ್ಲಿ ಅದೇ ಮೂಡುವುದು. ರಕ್ತ ಶುದ್ಧವಾಗದೆ ಅದು ನಿಲ್ಲದು. ಈ ದೃಷ್ಟಾಂತದಂತೆ ಅಥವಾ ನದಿಯ ಇಲ್ಲವೆ ಜಲಾಶಯದ ನೆಲದಿಂದ (ಹೆಚ್ಚಾಗಿ ಮಳೆಗಾಲದ ಸಮಯದಲ್ಲಿ) ನೀರಿನ ಒರತೆಯು ಬರುವಾಗ ಅದನ್ನು ಒಂದು ಕಡೆಯಲ್ಲಿ ದಬ್ಬಿದರೆ ಇನ್ನೊಂದು ಕಡೆಯಿಂದ ಮೂಡುವಂತೆ ಅಬಕಾರಿ ಖಾತೆಯ ಕೊರತೆಗಳನ್ನು ಹೇಳಿಕೊಳ್ಳುತ್ತಿರುವಾಗ ಇನ್ನೊಂದು ಕಡೆಯಲ್ಲಿ ಜಂಗಲಿ ಇಲಾಖೆಯ ಕಾನೂನುಗಳು ಸ್ವಲ್ಪ ಬಿಗು ಆಗುತ್ತವೆ; ಅವುಗಳ ಸಮಾಚಾರ ತೆಕ್ಕೊಳ್ಳುವಾಗ ಇನ್ನೊಂದು ಕಡೆಯಲ್ಲಿ ಇನ್ನೊಂದು ಬರುತ್ತದೆ. ಸಾರಾಂಶ, ಮನೆಯ ಪ್ರಧಾನ ಬಾಗಿಲಿನ ಬೀಗದ ಕೈಯನ್ನು ಸ್ವಾಧೀನಪಡಿಸಿಕೊಳ್ಳದೆ ಮನೆಯ ಬೇರೆ ಬೇರೆ ಕೋಣೆಗಳಲ್ಲಿ ಹೋಗಲಿಚ್ಛಿಸುವವನ ಅಚಾತುರ್ಯವೂ, ನಿಷ್ಫಲತ್ವವೂ ಹೇಗೆ ಕಂಡು ಬರುವವೋ ಹಾಗೆಯೇ ಹಿಂದುಸ್ಥಾನದ ಅಂತರ್ಗತ ರಾಜ್ಯ ಪದ್ಧತಿಯೊಳಗಿನ ಮುಖ್ಯ ಸೂತ್ರಗಳು ನಮ್ಮ ಕೈಯಲ್ಲಿ ಇರದೆ ಅದು ಹಾಗಿರಬೇಕು, ಇದು ಹೀಗಿರಬೇಕು, ಎಂಬೀ ತರದಿಂದ ಕೇಳಿಕೊಳ್ಳುವುದಾಗಲಿ, ಆಕಾಂಕ್ಷೆಗಳನ್ನು ವ್ಯಕ್ತಗೊಳಿಸುವುದಾಗಲಿ ಪ್ರಯೋಜನಕಾರಿ ಅಲ್ಲೆಂದು ಈಚೀಚೆಗೆ ಜನರ ನಿರ್ದಶನೆಗೆ ಬರುತ್ತ ಹೋಗಿದೆ. ಇದಕ್ಕೆ ಸರಳವಾದ ಮಾರ್ಗವು ನಮ್ಮ ಮತದಿಂದ ಯಾವುದೆಂದರೆ, ಮೇಲೆ ಹೇಳಿದ ಮೊಮ್ಮಗನ ಮಂತ್ರಿತ್ವವನ್ನು ಕೇಳಿಕೊಂಡ ಬಬ್ಬ ಬಡ ಗೃಹಸ್ಥನಂತೆ ನಾವು ರಾಜ್ಯಕರ್ತರಿಂದ ಸ್ವರಾಜ್ಯವನ್ನು ಕೇಳಿಕೊಳ್ಳುವುದೇ ಸರಿ. ಆ ಬಡ ಗೃಹಸ್ಥನು ಒಂದೇ ವರದಿಂದ ಬೇರೆ ಅನೇಕ ಶ್ರೇಯಸ್ಸುಗಳನ್ನು ಹೊಂದಿದಂತೆ ನಾವೂ ಈ ಸ್ವರಾಜ್ಯದಿಂದ ಬೇರೆ ಎಲ್ಲಾ ಬಗೆಯ ಸುಧಾರಣೆಗಳನ್ನು ಸಾಧಿಸಿಕೊಳ್ಳಬಹುದು.

ಅದು ಹೇಗೆ ಎಂಬುದನ್ನು ತುಸು ವಿಸ್ತಾರವಾಗಿ ವಿವೇಚಿಸಿದರೆ ಕಳೆದ ಸಂಚಿಕೆಯ ರಾಜಕೀಯ ಸ್ವಾತಂತ್ರ್ಯವೂ, ಸಮಾಜ ಸುಧಾರಣೆಯೂ—, ಈ ಲೇಖದಲ್ಲಿ ಕೊನೆಗೆ

ಸೂಚಿಸಿದ್ದಂತೆ ನಮ್ಮ ರಾಜಕೀಯ ಉನ್ನತಿಯ ಸರಳವಾದ ಮತ್ತು ಮಾನ್ಯವಾದ ಮಾರ್ಗವು ಯಾವುದು ಈ ಪ್ರಶ್ನೆಗೂ ಉತ್ತರಕೊಟ್ಟಂತೆ ಆಗುವುದು. ಸ್ವರಾಜ್ಯದ ವ್ಯಾಖ್ಯೆಯನ್ನು ನಾವು ನಮ್ಮ ಪತ್ರದಲ್ಲಿ ಅನೇಕ ಸಾರಿ ಮಾಡಿರುವೆವು. ಆದರೂ ಪ್ರಕೃತ ವಿಷಯವು ಸುಬೋಧವಾಗುವುದಕ್ಕಾಗಿ ಸ್ವರಾಜ್ಯವೆಂದರೇನೆಂಬುವುದನ್ನು ಸಂಕ್ಷೇಪವಾಗಿ ಹೇಳುತ್ತೇವೆ. ಪ್ರಾಯಸಮರ್ಥನಾದ ಮಗನ ಕೈಯಲ್ಲಿ ಮನೆಯ ಆಯವ್ಯಯದ ಕಾರ್ಯಭಾರಗಳನ್ನೂ ಸ್ಥಿರಚರ ಆಸ್ತಿಗಳನ್ನೂ ಒಪ್ಪಿಸಿ ಶುಭಕಾಂಕ್ಷಿಯಾದ ತಂದೆಯು ತಾನು ಮೇಲ್ತನಿಕೆಯನ್ನು ನಡಿಸಿಕೊಂಡು ಆಗಾಗ್ಗೆ ತನ್ನ ದೀರ್ಘಾನುಭವದ ಹಿತೋಕ್ತಿಗಳನ್ನು ಹೇಳುತ್ತ ಇರುವಂತೆ ನಮ್ಮ ಬ್ರಿಟಿಷರೂ ಕೂಡ ಹಿಂದುಸ್ಥಾನದ ಅಂತರ್ಗತ ರಾಜ್ಯ ಸೂತ್ರಗಳನ್ನು ಹಿಂದೀ ಜನರ ಕೈವಶದಲ್ಲಿ ಕೊಟ್ಟು ಸ್ವಾಮಿತ್ವವನ್ನೂ ಮೇಲ್‌ವಿಚಾರವನ್ನೂ ತಮ್ಮ ಸ್ವಾಧೀನದಲ್ಲಿಟ್ಟುಕೊಳ್ಳುವುದೇ ಸ್ವರಾಜ್ಯವು. ಇಂತಹ ಸ್ವರಾಜ್ಯವನ್ನು ನಾವು ಪಡೆದುದಾದರೆ ನಮಗೆ ಬೇಕಾದ ರಾಜಕೀಯ ಸುಧಾರಣೆಗಳನ್ನಾಗಲಿ ಸಾಮಾಜಿಕ ಸುಧಾರಣೆಗಳನ್ನಾಗಲಿ ಔದ್ಯೋಗಿಕ ಪ್ರಗತಿಯನ್ನಾಗಲಿ ನೆರವೇರಿಸಿಕೊಳ್ಳಬಹುದಲ್ಲವೇ? ಸ್ವರಾಜ್ಯವು ಸಿಕ್ಕಿದ್ದಾದರೆ ನಾವು ಗೋಖಲೆಯವರ ಖಡ್ಡಾಯದ ಶಿಕ್ಷಣವನ್ನೂ ಜಾರಿಗೆ ತರಬಹುದು; ಗಾಂಧಿಯವರ ಆಫ್ರಿಕದೊಳಗಿನ ಹಿಂದೀ ಜನರ ಪ್ರಶ್ನೆಯನ್ನೂ ಸುಲಭವಾಗಿ ಬಿಡಿಸಬಹುದು; ಕೇಶವ ಪಿಳ್ಳೆಯವರ ಜೈಲ ಆಪತ್ತನ್ನು ಪರಿಹರಿಸಬಹುದು; ಏನೀಬಿಝಾಂಟರ ಪ್ರೆಸ್ ಆಕ್ಟನ್ನೂ ಸುಧಾರಿಸಬಹುದು. ಇಂತಹ ಸುಧಾರಣೆಗಳನ್ನು ಮಾತ್ರವಲ್ಲ, ನಮ್ಮ ಹಿಂದೀ ದೇಶದ ಮತ್ತು ಇಂಗ್ಲಂಡದ ಸಂರಕ್ಷಣೆಗಾಗಿ ಬೇಕಾದಷ್ಟು ಸೈನ್ಯವನ್ನೂ, ನಾವೆಗಳನ್ನೂ ತಯಾರಿಸಿಕೊಂಡು ಬ್ರಿಟಿಷರ ಸಾಮ್ರಾಜ್ಯಾಭಿವೃದ್ಧಿಗೆ ಬೇಕಾದ ಸುಧಾರಣೆಗಳನ್ನು ಮಾಡಬಹುದು. ಈಗ ಹಿಂದೀ ಜನರಲ್ಲಿ ಯೋಗ್ಯತೆ, ಬುದ್ಧಿಮತ್ತೆ ಕರ್ತೃತ್ವ, ಶೂರತನ ಮುಂತಾದ ಗುಣಗಳಿದ್ದರೂ ಅವರು ಜಿತರೂ, ಸ್ವರಾಜ್ಯಹೀನರೂ ಆದುದರಿಂದ ಬೇರೆ ರಾಷ್ಟ್ರಗಳಲ್ಲಿ ತುಚ್ಛತೆಗೆ ಪಾತ್ರರಾಗಿದ್ದಾರೆ. ಆದೇ ಅವರಿಗೆ ಸ್ವರಾಜ್ಯದ ಹಕ್ಕನ್ನು ರಾಜ್ಯಕರ್ತರು ಕೊಟ್ಟಿದ್ದಾದರೆ ಬೇರೆ ರಾಷ್ಟ್ರಗಳಲ್ಲಿ ಅವರ ರಾಷ್ಟ್ರಕ್ಕೆ ಮೇಲ್ತರಗತಿಯೂ ಸಿಗಬಹುದಿತ್ತು. ಈಗಲಾದರೂ ನಾವು ಸ್ವರಾಜ್ಯವನ್ನು ಹೊಂದಿದರೆ ಆ ಮೇಲ್ತರಗತಿಯನ್ನು ಹೊಂದಬಹುದು.

ಇಂತಹ ರಾಜಕೀಯ ಸುಧಾರಣೆಗಳು ಒಂದೇ ಸ್ವರಾಜ್ಯದಿಂದ ಸಾಧ್ಯವಾಗುವಂತಿರುವಾಗ ಸಮಾಜ ಸುಧಾರಣೆಯು ಮಾತ್ರ ದೂರದಲ್ಲಿ ಇದ್ದೀತೇ? ಮನು, ಯಾಜ್ಞವಲ್ಕ್ಯ, ಪರಾಶರ ಮುಂತಾದ ಆಯಾ ಕಾಲದ ಸಮಾಜಸುಧಾರಕರು ಸ್ವರಾಜ್ಯದ ಛತ್ರದಲ್ಲಿಯೇ ಆಗಿಹೋಗಿದ್ದಾರಲ್ಲದೆ ಬೇರೆ ಸಮಯದಲ್ಲಿ ಅಲ್ಲ. ಸ್ವರಾಜ್ಯವಿಲ್ಲದ ಸಮಯದಲ್ಲಿ ಆಗಿಹೋದ ಸುಧಾರಕರ ಸ್ವಮತದ ಧಾರವೂ ಪ್ರಥೆಯೂ ಸಮಾಜದಲ್ಲಿ ಅಷ್ಟು ಯಶಸ್ವಿಯಾಗಿ ಬೀಳಲಿಲ್ಲ ಮತ್ತು ಬೀಳುವುದೂ ಇಲ್ಲ. ಇದಕ್ಕೆ ಈಗಿನ ಸುಧಾರಕರ ದೃಷ್ಟಾಂತವನ್ನೇ ತೋರಿಸಬಹುದು. ಈಗಿನಕಾಲದ ಸುಧಾರಕರು ಯಾವುದಾದರೊಂದು ಸುಧಾರಣೆಯ ಸ್ಮೃತಿಯನ್ನು ಬರೆದು ಅದನ್ನು ಪ್ರಚಾರಗೊಳಿಸಲು ಉದ್ಯುಕ್ತರಾದರೆ ಬಹು ಜನ ಸಮಾಜವು ಕೂಡಲೆ ಇವರನ್ನು ವಿರೋಧಿಸುವುದು. ಆಗ ಇವರದೇ ಒಂದು ತಂಡವಾಗಿ ಆ ತಂಡವು ಸಮಾಜದಿಂದ ಹೊರಗೆ ಬಿದ್ದು ಪ್ರತ್ಯೇಕವಾಗಿ ನಿಲ್ಲುವುದು. ದೇಶಹಿತ ದೃಷ್ಟಿಯಿಂದ ಇದರ ಪರಿಣಾಮವು ಪ್ರತಿಕೂಲವೇ ಆಗುತ್ತದೆ. ಸುಧಾರಕರು ಅವತರಿಸುವುದಕ್ಕಿಂತ ಮುಂಚೆ ಹಿಂದುಸ್ಥಾನದಲ್ಲಿ ನಾಲ್ಕು ಸಾವಿರ ಜಾತಿಗಳಿದ್ದುದಾದರೆ ಈ ಸುಧಾರಕರ ಜಾತಿಯು ಹೆಚ್ಚಿನದೊಂದಾಗಿ ೪೦೦೧ ಜಾತಿಗಳೇ ಆದವಲ್ಲದೆ ಕಡಿಮೆ ಜಾತಿಗಳಾಗಲಿಲ್ಲ! ಆದರೆ ಸುಧಾರಕರಿಗೆ ಇದರಲ್ಲಿ ಒಮ್ಮೆವೇಳೆ ಒಂದು ತರದ ಸಮಾಧಾನವಿದ್ದೀತು. ಏನೆಂದರೆ, ಉಚ್ಚ ನೀಚರ ಸಂಕರದಿಂದ ಉಂಟಾದ ತಮ್ಮ ಜಾತಿಯಲ್ಲಿ ಜಾತಿಭೇದವಿಲ್ಲ; ತಾವೆಲ್ಲರೂ ಒಂದೇ. ಈ ತರದ ಭಾವನೆಯು ಮತ್ತು ಅದಕ್ಕನುಗುಣವಾಗಿ ವ್ಯವಹಾರವು ಇದ್ದರೂ ಹಿಂದೂಸ್ಥಾನದಲ್ಲಿ ಜಾತಿಗಳನ್ನು ಎಣಿಸಲು ಹೋದರೆ ಬೇರೆ ಯಾರಲ್ಲಿಯೂ ಸಮಾವಿಷ್ಟವಾಗದ ಇವರದೊಂದು ಪ್ರತ್ಯೇಕವೇ ಜಾತಿಯಾಗುತ್ತದೆ. ಇಂತಹ ಸ್ಥಿತಿಗಳನ್ನಾಲೋಚಿಸಿದರೆ ಸಮಾಜ ಸುಧಾರಣೆಗೂ ಕೂಡ ಸ್ವರಾಜ್ಯವು ಅವಶ್ಯವೇ ಸರಿ ಎಂದು ಕಂಡುಬಂದೀತು.

ಸುಧಾರಕರು ಮಾತ್ರ ಈ ಮತಕ್ಕೆ ಸರಿವಿರುದ್ಧವಾಗಿಯೇ ತಿಳಿದುಕೊಂಡಿರುವರು. ಸಾಮಾಜಿಕ ಸುಧಾರಣೆಗಳಾಗದೆ ಸ್ವರಾಜ್ಯದ ಅರ್ಹತೆಯು ಬರುವುದಿಲ್ಲ. ಇದೇ ಅವರ ಮುಖ್ಯಸೂತ್ರವು. ಈ ಸೂತ್ರವನ್ನು ತರ್ಕಶಾಸ್ತ್ರದ ಒರಗಲ್ಲಿನ ಮೇಲೆ ಹಚ್ಚಿ ನೋಡಿದರೆ ಅಥವಾ ಅನುಭವದ ತಕ್ಕಡಿಯಲ್ಲಿ ತೂಕಿಸಿದರೆ ಬಣ್ಣದಲ್ಲಿಯೂ ಗುರುತ್ವದಲ್ಲಿಯೂ ಹೀನಸತ್ವತೆ ಕಂಡು ಬರುತ್ತದೆ. ಇವರು ಹೇಳುವ ಸಮಾಜ ಸುಧಾರಣೆಯ ತತ್ವಗಳಲ್ಲೊಂದಾದ ಸ್ತ್ರೀಶಿಕ್ಷಣ ಬಿಟ್ಟು ವಿಧವಾ ವಿವಾಹ, ಪ್ರೌಢಾ

ವಿವಾಹ, ಪರದೇಶದ ಗಮನ ಮುಂತಾದವುಗಳು ಉಚ್ಚವರ್ಗದ ಬ್ರಾಹ್ಮಣರಲ್ಲಿ ಮಾತ್ರ ಇಲ್ಲ,' ಅಲ್ಲದೆ ಬೇರೆ ಕೆಳತರಗತಿಯ ಜಾತಿಗಳಲ್ಲಿ ಆಯಾ ಜಾತಿನೀತಿಗಳಿಗೆ ಅನುಸಾರವಾಗಿಯೇ ಎಷ್ಟೋ ಪ್ರಾಚೀನಕಾಲದಿಂದ ಪ್ರಚಾರದಲ್ಲಿಯೇ ಇದ್ದಾವೆ. ಆ ಜಾತಿಗಳಲ್ಲಿ ಬ್ರಾಹ್ಮಣರಿಗಿಂತ ಯಾವ ಪಾತ್ರತೆಯು ಹೆಚ್ಚಿನದಿದೆ? ಬ್ರಾಹ್ಮಣರಿಗಿಲ್ಲದ ಯಾವ ಪ್ರಾಪಂಚಿಕ ಕಷ್ಟಗಳು ಅವರಿಗೆ ಕಡಿಮೆ ಆಗಿವೆ? ಏವಂಚ, ಸುಧಾರಕರ ಈ ಸೂತ್ರದ ಗೋತ್ರವನ್ನು ವಿಚಾರಿಸದಿರುವದೇ ಒಳ್ಳೇದೆಂದು ಕಾಣುತ್ತದೆ.

ಇರಲಿ. ವಾಚಕರಿಗೆ ನಾವು ಹೇಳತಕ್ಕ ಮುಖ್ಯ ಸಂಗತಿ ಏನೆಂದರೆ ಯಾವ ವಿಧದಿಂದ ಆಲೋಚಿಸಿದರೂ ರಾಜಕೀಯ ಸ್ವಾತಂತ್ರ್ಯಕ್ಕೂ ಸಮಾಜ ಸುಧಾರಣೆಗೂ ಸಂಬಂಧವಿಲ್ಲ. ಒಂದುವೇಳೆ ಸಂಬಂಧವನ್ನೇ ತೋರಿಸುವುದಾದರೆ ರಾಜಕೀಯ ಸ್ವಾತಂತ್ರ್ಯದಿಂದ ಸಮಾಜ ಸುಧಾರಣೆ, ಧಾರ್ಮಿಕ ಸುಧಾರಣೆ ಮುಂತಾದವುಗಳು ಸಾಧ್ಯವಾಗುತ್ತವೆಂದು ಹೇಳಬಹುದು. ಇದಕ್ಕಾಗಿಯೇ ಈಗ ಸ್ವರಾಜ್ಯವನ್ನು ಕೇಳುತ್ತಿದ್ದಾರೆ. ಮತ್ತು ಇದೇ ಸರಳವಾದ ಮಾರ್ಗವು,

ಪತ್ರವ್ಯವಹಾರ.

ರಾಜರಸ್ತೆಯ ಇಕ್ಕಟ್ಟು.

ಮಂಗಳೂರಿನಿಂದ ಮುಲ್ಕಿಗೆ ಹೋಗುವ ರಸ್ತೆಯು ಕೆಲವು ಕಡೆಗಳಲ್ಲಿ ಪರಿಮಿತವಾಗಿರುವುದರಿಂದ ದಿನನಿತ್ಯ ಹಾದುಹೋಗುತ್ತಲಿರುವ 'ಮೋಟರ್ ಬಸ್' ಮತ್ತು ಟ್ರಾನ್ಸಿಟು ಬಂಡಿಯ ಚಲಾವಣೆಗೆ ತೊಂದರೆಯಿದೆ. ಅನೇಕ ಎತ್ತಿನ ಗಾಡಿಗಳು ಸಹ ಈ ಮಾರ್ಗದಲ್ಲಿ ಓಡಾಡುತ್ತಿರುವವು. 'ಮೋಟರ್ ಬಸ್ಸ'ನ್ನು ಕಂಡಾಕ್ಷಣ ಗಾಡಿಗಳ ಎತ್ತುಗಳೂ ಕುದುರೆಗಳೂ ಹೆದರಿ ಕೆಲವು ಸಾರಿ ಹಾನಿ ಸಂಭವಿಸುವುದುಂಟು. ಅದರೆ ಮಾರ್ಗವು ಸಾಕಷ್ಟು ಅಗಲವಾಗಿದ್ದರೆ ರಸ್ತೆಯು ಇಕ್ಕಟ್ಟಾಗಿರುವದರಿಂದ ಉಂಟಾಗುವ ಅಪಾಯಗಳನ್ನು ದೂರಪಡಿಸಿದಂತಾಗಿ ಪಥಿಕರು ನಿರ್ಭೀತರಾಗಿ ಪ್ರಯಾಣ ಮಾಡಬಹುದಾಗಿರುವದು. ಆದ್ದರಿಂದ ಅಧಿಕಾರಿಗಳು ಇದಕ್ಕೆ ತಕ್ಕ ಉಪಶಮನವನ್ನು ಶೀಘ್ರದಲ್ಲಿಯೇ ಮಾಡುವದು ಅತ್ಯಗತ್ಯವೆಂದು ತೋರುತ್ತದೆ.

ಈ ಸಂದರ್ಭದಲ್ಲಿ ಮತ್ತೊಂದು ಸಂಗತಿಯನ್ನು ಸದರಿ ಅಧಿಕಾರಿಗಳ ಲಕ್ಷ್ಯಕ್ಕೆ ತರುವದು ಯುಕ್ತವು; ಅದೇನಂದರೆ ಮೇಲೆ ಹೇಳಿದ ಮಾರ್ಗದ ಇಕ್ಕಡೆಗಳಲ್ಲಿಯೂ ಕೆಲವೆಡೆಯಲ್ಲಿ ಸಾಕಷ್ಟು ಖಾಲಿ ಸ್ಥಳ ಇರಲು ರಸ್ತೆಯ ದುರುಸ್ತಿಗೋಸ್ಕರ ಹುಡಿ ಮುರಕಲ್ಲನ್ನು ಮಾರ್ಗದಲ್ಲಿಯೇ ದಾಸ್ತಾನು ಮಾಡಿದ್ದು ಅತಿ ವಿಚಿತ್ರ. ಬಹು ಇಕ್ಕಟ್ಟಾದ ಮಾರ್ಗದಲ್ಲಿಯೂ ಇಂಥಾ ಕಲ್ಲಿನ ರಾಶಿಗಳು ಕಾಣಸಿಕ್ಕುವವು. ಸುರತಕಲ್ಲಿನ ಬಳಿ ಈಚೆಗೆ ಸಂಭವಿಸಿದ ಟ್ರಾನ್ಸಿಟು ಅಪಘಾತಕ್ಕೆ ಈ ಕಲ್ಲಿನ ರಾಶಿಯೇ ಕಾರಣವೆನ್ನಬಹುದು. ಆದಕಾರಣ ಸಂಬಂಧಪಟ್ಟ ಆಫೀಸರರು ಮಾರ್ಗದಲ್ಲಿದ್ದ ಮತ್ತು ಮಾರ್ಗದ ಕಿನಾರೆಯಲ್ಲಿದ್ದ ಸದರಿ ಕಲ್ಲಿನ ರಾಶಿಗಳನ್ನು ರಸ್ತೆಯಿಂದ ಸಾಕಷ್ಟು ದೂರಕ್ಕೆ ಒಯ್ಯುವ ಏರ್ಪಾಡಿಯನ್ನು ಮಾಡಿದರೆ ಅಸಂಖ್ಯಾತ ಪ್ರಯಾಣಿಕರಿಗೆ ಉಪಕಾರವಾಗುವದೆಂಬದರಲ್ಲಿ ಸಂದೇಹವಿಲ್ಲ; ಮತ್ತು ಇನ್ನು ಮುಂದೆ ಆ ಕ್ರಮವು ಜಾರಿಯಲ್ಲಿರಕೂಡದೆಂದು ಕೋರುವ,

ಪ್ರಯಾಣಿಕರಲ್ಲೊಬ್ಬ.

ಭಾವನಾ ತರಂಗಗಳು.

ಅಯ್ಯಾ,

ಪರಿಭಾವನೆಗಳು ಎಂತ ಕೆಲವು ವಿಷಯಗಳನ್ನು ಒಟ್ಟು ಸೇರಿಸಿ 'ಪಟ್ಟಣಿಗ'ರು ಬರೆದ ಬರವಣಿಗೆಯನ್ನು ನೋಡಿ ನಾನೂ ಸಹ ಅದೇ ರೀತಿ ಬರೆಯುವ ಎಂತ ಯತ್ನಿಸಿರುವೆನು. "ಪಟ್ಟಣಿಗರ ಪರಿಭಾವನೆ"ಗಳೆಂಬ ಶಿರೋನಾಮೆಯನ್ನು ನನಗೆ ಸ್ವೀಕರಿಸಲು ಮನಸ್ಸಿಲ್ಲ. ಆದ್ದರಿಂದ ಭಾವನಾ ತರಂಗಗಳೆಂತ ಬರೆದಿರುವೆನು.

* * *

ಡಾಕ್ಟರ್ ರಾವ್ ಸಾಹೇಬ ವರ್ಗೀಸರವರು, ಜಿಲ್ಲಾ ಸರ್ಜನರು, ಜಿಲ್ಲಾ ಸೆನಿಟರಿ ಆಫೀಸರರು, ಇನ್ನೂ ಯಾವ್ಯಾವ ಜಿಲ್ಲಾ ಅಧಿಕಾರಗಳು ಇವರಲ್ಲಿರುವವೊ— ಮಂಗಳೂರಿನ ಮುನ್ಸಿಪಲ್ ಚೇಯರ್ಮೇನರಾಗಿ ಆರಿಸಲ್ಪಟ್ಟದ್ದರಲ್ಲಿ ಚೋದ್ಯವೇನು? ಪತ್ರಕರ್ತರೇ, ಚುನಾವಣೆಯ ತತ್ವವಿಚಾರವನ್ನು ನೀವು ಕಳೆದ ಸಂಚಿಕೆಯಲ್ಲಿ ಮಾಡಿಬಿಟ್ಟಿರಿ. ತತ್ವಮಾರ್ಗಕ್ಕೆ ತತ್ವಾರ ಎಂತ ಏನೋ ಬರೆದು ಬಿಟ್ಟಿರುವಿರಿ. ತತ್ವೋಪದೇಶವು ಇಲ್ಲಿ ಸಲ್ಲದು. ಎಲ್ಲವನ್ನೂ ಅಧ್ಯಾತ್ಮ ವಿಚಾರದಿಂದಲೇ ದೃಷ್ಟಿಸುತ್ತಿರುವ ಈ ಪಟ್ಟಣದಲ್ಲಿ ತತ್ವಮಾರ್ಗದಿಂದ ಪ್ರಯೋಜನವಿರದು. ಸರ್ವ ಪಟ್ಟಣಿಗರಲ್ಲಿಯೂ ಇರುವ ಒಂದೇ ಜೀವದ ಅಂಶವು ಒಬ್ಬೊಬ್ಬನಲ್ಲಿ ಪ್ರತ್ಯೇಕವಾಗಿರುವದರಿಂದ, ನಮ್ಮಲ್ಲಿಯ ಅಧ್ಯಾತ್ಮವಿಚಾರದ ಪ್ರಕಾರ ಒಬ್ಬೊಬ್ಬನೇ ತನ್ನ ಸ್ವಂತ ಪ್ರಯೋಜನದಲ್ಲಿಯೇ ಹೆಚ್ಚಿನ ದೃಷ್ಟಿಯಿಟ್ಟು ನಡೆಯುವನು. ಇಂಥಾ ವರ್ತನೆಗೆ ಸ್ವಾರ್ಥ ಎಂತ ಅನ್ನುವರಾದರೂ—ಇದೊಂದು ಅಧ್ಯಾತ್ಮವಿಚಾರವೇ ಸರಿ!

* * *

ಚುನಾವಣೆ ಹಿಂದೆ! ಚುನಾವಣೆ! ಕಾರ್ಕಳದ ಹ್ಯಾಕೋರ್ಟು ವಕೀಲ ಸದಾಶಿವ ಭಟ್ಟರೂ ಉಮೇದ್ವಾರರು! ಮಲೆಬಾರಿನವರೊಂದಿಗೆ ಮೇಲಾಟ! ಮಲೆಬಾರಿನವರು! ಇವರೊಡನೆ ಮೇಲಾಟ ಸರಿಯೇ? ಹಿಂದೂ ಮುಂದೂ ಚೆನ್ನಾಗಿ ನೋಡಿಕೊಳ್ಳಿರಿ! ಕಲ್ಲಿನ ಕೆಲಸ, ಮೇಸ್ತ್ರಿ ಕೆಲಸ, ಕೂಲಿ ಕೆಲಸ ಇಲ್ಲಿ ಯಾರಿಂದ ಸಾಗುತ್ತಿದೆ? ನಮ್ಮನ್ನು ಅತ್ತಿತ್ತ ಒಯ್ಯುವ ಸಾರಥಿಗಳ್ಯಾರು? ಜಿಲ್ಲೆಯ ಆಡಳಿತೆಯ ಕೆಲಸದಲ್ಲಿ ಸಾರಥಿಯ ಹೆಚ್ಚಿನ ಭಾಗವು ಇವರದೇ ಆಗಿದೆ. ಇತ್ತ ನೋಡಿ, ಮೊನ್ನೆ ತನಕ ಇಲ್ಲಿ ಜಿಲ್ಲಾ ಬೋರ್ಡು ಇಂಜಿನಿಯರರು ಯಾರಾಗಿದ್ದರು? ಜಿಲ್ಲಾ ಫೋರೆಸ್ಟ್ ಆಫೀಸರರು ಯಾರಾಗಿರುವರು? ರೆವಿನ್ಯೂ ಡಿವಿಜನಲ್ ಆಫೀಸರರು ಯಾರು? ಟ್ರೆಜರಿ ಡಿಪ್ಯುಟಿ ಕಲೆಕ್ಟರರು ಯಾರು? ಪುತ್ತೂರು ಡಿವಿಜನಲ್ ಆಫೀಸರರು ಯಾರು? ಹಜೂರಿನ ಇಂಗ್ಲಿಷ್ ಹೆಡ್ ಕ್ಲಾರ್ಕರು ಯಾರು? ಇನ್ನೂ ನೋಡಿರಿ! ತಹಸೀಲ್ದಾರರೋ, ಟೆಲಿಗ್ರಾಫ್ ಮಾಸ್ಟರರೋ, ಮೇಜಿಸ್ಟ್ರೇಟರೋ, ಪೋಲಿಸು ಇನ್ಸ್‌ಪೆಕ್ಟರರೋ, ಮುನ್ಸಿಫರೋ ಯಾರ್‍ಯಾರೆಂತ ನೋಡಿಬಿಡಿರಿ. ನಮ್ಮ ಜಿಲ್ಲೆಯ ಅಧಿಕಾರದ ಸಾರಥಿತನವನ್ನು ನಮ್ಮ ಮೇಲಣ ಪೂರ್ಣ ಕಟಾಕ್ಷದಿಂದ ಈ ರೀತಿ ವಿಶೇಷ ಮಟ್ಟಿಗೆ ಮಲೆಬಾರಿನವರ ಕೈಯಲ್ಲಿ ನಮ್ಮ ದಯಾಳು ಸರಕಾರದವರು ಬಿಟ್ಟುಕೊಟ್ಟಿರುವಾಗ ಮಲೆಬಾರಿನ ಆ ಪುಣ್ಯಭೂಮಿಯಲ್ಲಿ ಹುಟ್ಟಿ ಬೆಳೆದು ನಮ್ಮ ಜಿಲ್ಲೆಯ ಜನರ ಸೇವೆಯನ್ನು ಸುಸ್ವಾದದಿಂದ ಮಾಡುತ್ತಿರುವ ರಾವ್ ಸಾಹೇಬ ಡಾಕ್ಟರ ವರ್ಗೀಸರವರಿಗೆ ನಮ್ಮ ಪಟ್ಟಣದ ಆಡಳಿತೆಯ ಸಾರಥಿತನವನ್ನು ಪಟ್ಟಣಿಗರು ವಹಿಸಿಕೊಟ್ಟರೆಂದರೆ ಅದರಲ್ಲಿ ಚೋದ್ಯವೇನು? ರಾ। ಪಾಂಡುರಂಗ ಕಿಣಿಯವರು ತಮ್ಮ ಉಮೇದ್ವಾರಿಕೆಯನ್ನು ಹಿಂದೆಗೆದು ಮಹದುಪಕಾರವನ್ನು ಮಾಡಿಬಿಟ್ಟರು! ವರ್ಗೀಸರಿಗೆ ಜಯ! ವರ್ಗೀಸರಿಗೆ ಜಯ! ಸದಾಶಿವ ಭಟ್ಟರಾದರೋ ಭಟ್ಟರು ಸರಿ. ಭಟ್ಟರು ಅಂದರೆ ಹೊಟ್ಟೆ ತುಂಬಿಸಿಕೊಳ್ಳುವ ಬ್ರಾಹ್ಮಣರೆಂತ ಅರ್ಥವಲ್ಲ. ವೀರರು! ಎಂತ ಹೇಳಲೋ? ನಮ್ಮ ಅಧ್ಯಾತ್ಮವಿಚಾರದ ತತ್ವಬೋಧೆಯಿಂದ ವೀರರೆಂಬ ನಾಮವು ಇವರಿಗೆ ಸಲ್ಲುವದೋ? ಕಡೆತನಕ ಉಮೇದ್ವಾರಿಕೆಯನ್ನು ಹಿಂತೆಗೆಯದೆ ನಿಂತುಬಿಟ್ಟರು!

* * *

ಮಲೆಬಾರಿನವರೂ ಹಿಂದೀಗಳು, ಈ ಜಿಲ್ಲೆಯವರೂ ಹಿಂದೀಗಳು; ಹೀಗಿರುತ್ತಾ ಅಭಿಮಾನಿಯಲ್ಲಿ ಆ ಜಿಲ್ಲೆಯವರು ಈ ಜಿಲ್ಲೆಯವರೆಂಬ ಭಾವನೆಗಳನ್ನು ವ್ಯಕ್ತಮಾಡುವದು ಸರಿಯೋ ಎಂತ ಅಭಿಮಾನದ ಅಗ್ರಣಿಗಳಾದ ಕೆಲವರಿಗೆ ತೋರಿ ಬರಬಹುದು. ಆದರೆ ಸ್ವಾಮಿ, ಮೇಲಣ ಅಧ್ಯಾತ್ಮವಿಚಾರದ ಭಾವನೆಗಳು ನನ್ನದಾಗಿವೆ. ಅಲ್ಲದೆ, ಅಂಥಾ ಅಗ್ರಣಿಗಳು ಈ ಒಡಜಿಲ್ಲೆಯ ಪರಿಸ್ಥಿತಿಯನ್ನು ಚೆನ್ನಾಗಿ ಗ್ರಹಿಸಬೇಕಾಗಿದೆ. ಯಾವ ಕಾರಣಗಳಿಂದಲೋ ತಿಳಿಯದು ಜನರಲ್ಲಿ ಒಂದು ತಿಳಿವು ಈಗ ಕೆಲವು ವರುಷಗಳಿಂದ ಚೆನ್ನಾಗಿ ನಾಟಿರುವದು. ಈ ಸಂಸ್ಥಾನದ ಇತರ ಯಾವ ಕಡೆಯಲ್ಲಿಯೂ ಇಲ್ಲದ ಒಂದು ವಿಶೇಷವಾದ ತಕ್ಕಡಿಯು ಇಲ್ಲಿ ಇರುವದು. ಜಿಲ್ಲೆಯಲ್ಲಿರುವ ಆಯಾ ಜಾತಿಯವರು ಸರಕಾರದ ಕೆಲಸದಲ್ಲಿದ್ದಾರೆಂಬುದನ್ನು ಈ ತಕ್ಕಡಿಯಲ್ಲಿ ತೂಗಹಾಕಿ ನೋಡಿ, ಯಾವದೊಂದು ಜಾತಿಯವರು ತಮ್ಮ ದುರ್ದೈವವಶಾತ್ ಹೆಚ್ಚಿದ್ದಾರೆಂತ ತಿಳಿದುಬಂದರೆ ವರ್ಗಾವರ್ಗಿ ಅಥವಾ ಇಂಥಾ ಜಾತಿಯವರಿಗೆ ಕೆಲಸ ಕೆಲಕಾಲ ದೊರಕದು—ಎಂಬೀ ತಿಳಿವು ಆಧಾರವಿರಲಿ, ಇಲ್ಲದೇ ಹೋಗಲಿ ಅದು ಜನರಲ್ಲಿದೆ. ಆದರೆ ಇದೇ ತಕ್ಕಡಿಯಲ್ಲಿ ಮಲೆಬಾರಿನವರನ್ನು ಹಿಡಿದು ಹಾಕಲು ಸಾಧ್ಯವಿಲ್ಲ. ಈ ತಕ್ಕಡಿಯ ಮಹಿಮೆಯೇ! ಜಿಲ್ಲೆಯ ಜನರನ್ನು ಮಾತ್ರವಲ್ಲ, ಜಿಲ್ಲೆಯನ್ನೇ ಈ ತಕ್ಕಡಿಯಲ್ಲಿ ಹಾಕಿದ್ದಾರಂತೆ! ತೂಕದಲ್ಲಿ ಸರಿಮಾಡಲು ಒಂದು ತುಂಡನ್ನು ಮಲೆಬಾರಿಗೆ ಸೇರಿಸುವರಂತೆ! ಅಹಾ ಸಾಕು!

ಅಧ್ಯಾತ್ಮ ವಿಚಾರಿ.

ಮಾರಾಟಕ್ಕೆ ತಯ್ಯಾರದೆ.

ಕಾಸರಗೋಡು ತಾಲೂಕು ಮೊಗ್ರಾಲ್ ಮಾಗಣೆ ಕಸಬಾ ಗ್ರಾಮದಲ್ಲಿರುವ ಸಾವುಕಾರ ಕುಂಞಿಪಕ್ಕಿ ಬ್ಯಾರಿಗಳವರ ಬಾಬತು ಸದರಿ ತಾಲೂಕು ಪುತ್ತೂರು, ಕುಂಬುಡಾಜೆ, ಕನ್ನೂರು, ಬಾರೆ, ಕೂಡ್ಲು, ಪಳ್ಳಿಕೆರೆ ಈ ಗ್ರಾಮಗಳಲ್ಲಿರುವ ಆಸ್ತಿಗಳನ್ನು ಮಾರಾಟಮಾಡುವ ಬಗ್ಗೆ ಮಂಗಳೂರ ಶಹರ ಗೋಳಿಕಟ್ಟೆ ಬಜಾರದಲ್ಲಿರುವ ಸಿ. ಅಬ್ದುಲ್‌ರಹಿಮಾನ ಹಜಾರ ಬ್ಯಾರಿಗಳ ಮಗ ಸಿ. ಮಹಮೂದ ಬ್ಯಾರಿಯಾದ ನಾನು ಪವರ್ ಓಪ್ ಯೆಟರ್ನಿ ಮೂಲಕ ಅಧಿಕಾರಪಟ್ಟಿರುತ್ತೇನೆ. ಅವಶ್ಯವಿರುವ ಎಲ್ಲಾ ಮಾಹಿತಿಯನ್ನು ನನ್ನ ಕೂಡೆ ಕೇಳಿ ತಿಳಕೊಳ್ಳಬಹುದು.

C. Mohomood,
C/o C. Abdul Rahiman Koragappa,
Hoige Bazar, Mangalore.

ಯುದ್ಧ ಸಮಾಚಾರ.

—.o.—

ತಾ. ೨೪ನೇ ಜೂನ್.

ಡುರಾಜ್ಜೊಗೆ ಯುದ್ಧ ಸಾಮಗ್ರಿಗಳನ್ನು ಕೊಂಡುಹೋಗುತ್ತಿದ್ದ ಶತ್ರುಗಳ ೨ ಹಡಗಗಳನ್ನು ಇಟೆಲಿಯನರು ಮುಣುಗಿಸಿರುತ್ತಾರೆ.

ಫ್ರೆಂಚರ "ಹೆಕಾಲ್ಸ್" ಬ್ರಿಟಿಷರ "ಬರ್ಮ" ಇಟೆಲಿಯನರ "ಗಾಬ್ರಿಯಲ್ಲಿಡಾಲಿ" ಮತ್ತು "ಸಟರ್ನಿನಫೆನ್ನಿ" ಎಂಬ ಹಡಗಗಳು ಮುಣುಗಿಸಲ್ಪಟ್ಟವೆ. ಬ್ರಿಟಿಷರ "ಕೆನ್‌ಫರ್ಡ್‌ಟೈನ್" ಎಂಬ ನಾವೆಯೂ ಮುಣುಗಿಸಲ್ಪಟ್ಟಿರುತ್ತದೆ.

ಲಾಬಾಸ್ಸೆ ಕಾಲುವೆಯ ದಕ್ಷಿಣದಲ್ಲಿ ಮತ್ತು ಸೊಮ್ಮೆ ನದಿಯ ಮುಂದಕ್ಕೆ ಬ್ರಿಟಿಷರು ಎಡೆಬಿಡದೆ ಶತ್ರುಗಳ ಮೇಲ್ಗಾಯಿದು ಲೆನ್ಸ್ ಆಜುಬಾಜಿನಲ್ಲಿ ಕಠಿಣವಾಗಿ ಫಿರಂಗಿ ಹಾರಿಸಿರುವರು ಎಂತ ಜರ್ಮನರು ಪ್ರಕಟಿಸಿರುತ್ತಾರೆ.

ಥಿಯಾಮೊಂಟಿನ ಪಶ್ಚಿಮದಲ್ಲಿ ಹಲ್ಲೆಮಾಡಿದ ಜರ್ಮನರು ಪೂರ್ಣವಾಗಿ ಸೋತುಹೋಗಿರುತ್ತಾರೆ. ಫುಮಿನ ಅಡವಿ ಮತ್ತು ಚೆನೊಯ ಅಡವಿಗಳ ಮಧ್ಯೆ ಇದ್ದ ಶತ್ರುಗಳ ಕಂದಕಗಳಲ್ಲಿ ಒಂದಂಶವು ಫ್ರೆಂಚರ ಸ್ವಾಧೀನವಾಗಿದೆ. ಸೊಮ್ಮೆಯ ಉತ್ತರ ಕಡೆಯಲ್ಲಿ ತೋಪು ಕಾಳಗವು ತೀಕ್ಷ್ಣವಾಗಿರುವದು.

ಬೆಲ್ಜಿಯಮ್ ರಣರಂಗದಲ್ಲಿ ಕದನವು ಅತಿ ತೀಕ್ಷ್ಣವಾಗಿರುವದು. ಶತ್ರುಗಳ ನೆಲೆಯ ಮೇಲೆ ಬ್ರಿಟಿಷರು ೧೦ ಕಡೆಗಳಲ್ಲಿ ಮುಂದೆ ನುಗ್ಗಿ ಶತ್ರುಸೇನೆಗಳಲ್ಲಿ ವಿಶೇಷ ನಷ್ಟಪಡಿಸಿರುವರು. ಈ ಕದನದಲ್ಲಿ ಬ್ರಿಟಿಷ ಸೇನೆಯಲ್ಲಿ ಆದ ನಷ್ಟವು ಅತಿ ಕಡಿಮೆಯಾಗಿರುವದು.

ಡ್ವೀನ ರಣರಂಗದಲ್ಲಿ ತೋಪುಕಾಳಗವು ಕಠಿಣವಾಗಿ ನಡಿಯುತ್ತಿದೆ. ಪ್ರಿಪೆಟ್ ಜವುಗು ಪ್ರಾಂತ್ಯದ ಉತ್ತರದಲ್ಲಿ ಜರ್ಮನರು ನುಗ್ಗಿಬಂದು ಕದನಮಾಡುತ್ತಿದ್ದಾರೆ. ರುಶ್ಯನರ ಕೊಸಕ್ ಸೇನಿಕರು ಜರ್ಮನರನ್ನು ಹಿಂದಕ್ಕೆ ಓಡಿಸಿ ೩೫೦ ಮಂದಿಯನ್ನು ಸೆರೆಹಿಡಿದಿರುತ್ತಾರೆ. ಬಕೋವಿನದಲ್ಲಿಯೂ ರುಶ್ಯನರು ಮುಂದರಿಯುತ್ತಲಿದ್ದಾರೆ.

ಸಿಂಗಾಪುರದ ಜೋಹೊರ್ ಸುಲ್ತಾನರವರು ಸಾಮ್ರಾಜ್ಯ ಸರಕಾರಕ್ಕೆ ೩೧,೫೦೦ ಪವನು ಕ್ರಯಬಾಳುವ ಯುದ್ಧದ ವಾಯುನಾವೆಗಳನ್ನು ದಾನಮಾಡಿರುತ್ತಾರೆ.

ಟ್ರೆಬಿಜೊಂಡ್ ಪ್ರಾಂತ್ಯದ ಪ್ಲಟಾನ ಮತ್ತು ಜವಿಸ್ಲಿಕ್ ಸ್ಥಳಗಳಲ್ಲಿ ರಾತ್ರಿಕಾಲ ಮೇಲ್ಗಾಯಿದ ತುರ್ಕೀ ಸೇನಿಕರು ಹಿಮ್ಮೆಟ್ಟಿರುವರು. ಮೆಸಪಟಾಮಿಯದಲ್ಲಿ ತುರ್ಕರು ರುಶ್ಯನರ ನೆಲೆಯ ಒಂದು ಕಡೆಯಲ್ಲಿ ಮುಂದೆ ನುಗ್ಗಿದರು. ಆದರೆ ರುಶ್ಯನರು ಸನೀನು ಕಾಳಗಮಾಡಿ ಶತ್ರುಗಳನ್ನು ಹಿಂದಕ್ಕೆ ಓಡಿಸಿದರು. ಬಗ್ದಾದಿನ ಕಡೆ ನುಗ್ಗಿಬರುತ್ತಿರುವ ಶತ್ರುಗಳನ್ನು ರುಶ್ಯನರು ತಡೆದುಬಿಟ್ಟಿರುತ್ತಾರೆ. ಶತ್ರುಸೇನೆಯಲ್ಲಿ ವಿಶೇಷ ನಷ್ಟವಾಗಿದೆ.

ಮುಕ್ಕದ ಗ್ರೇಂಡ್ ಶೆರಿಫರವರು ಅರಬಿಯದಲ್ಲಿ ೩ ಸೇನೆಗಳನ್ನು ಮಾಡಿಕೊಂಡು ಒಂದೊಂದು ಸೇನೆಗೆ ತನ್ನ ಒಬ್ಬೊಬ್ಬ ಮಗನನ್ನು ಸೇನಾಧಿಪತಿಯಾಗಿ ನೇಮಿಸಿರುವರು. ತುರ್ಕರು ಬೆಂಬಲ ಸೇನೆಯನ್ನು ಕಳುಹಿಸಿಕೊಡದಹಾಗೆ ಹೆಡ್ಜಾಜ್ ರೈಲ್ವೇಯಲ್ಲಿ ೩೦೦ ಮೈಲುಗಳವರೆಗಿನ ಸ್ಟೇಶನುಗಳನ್ನು ಹಾಳುಮಾಡಿರುವರು. ಗ್ರೇಂಡ್ ಶೆರಿಫರ ಮೊದಲನೇ ಸೇನೆಯು ಮದೀನವನ್ನು ಮುತ್ತಿರುತ್ತದೆ. ೨ನೇ ಸೇನೆಯು ಟ್ರೈಫನ್ನು ಸ್ವಾಧೀನಮಾಡಿಕೊಂಡಿರುತ್ತದೆ. ೩ನೇ ಸೇನೆಯು ಜಿಡ್ಡವನ್ನು ತೆಗೆದುಕೊಂಡಿತು. ಶರೀಫರ ಹಿಂಬಾಲಕರು ತಂತೀ ಲೈನುಗಳನ್ನು ಕಡಿದುಹಾಕಿರುತ್ತಾರೆ ಎಂತ ತಿಳಿದು ಬರುತ್ತದೆ.

ಪೂರ್ವ ಆಫ್ರೀಕದಲ್ಲಿ ಬ್ರಿಟಿಷ ಸೇನಿಕರು ಲಿಕಿಗೂರ ನದಿಯ ಬಳಿ ಬಹಳ ಮಂದಿ ಶತ್ರುಸೇನಿಕರನ್ನೂ ಬಹಳ ಯುದ್ಧ ಸಾಮಾಗ್ರಿಗಳನ್ನೂ ಸೆರೆಹಿಡಿದಿರುತ್ತಾರೆ. ಶತ್ರುಗಳಲ್ಲಿ ವಿಶೇಷ ನಷ್ಟವಾಗಿರುತ್ತದೆ.

ತಾ. ೨೬ನೇ ಜೂನ್.

ಮೆಡಿಟರೇನಿಯನಿನಲ್ಲಿ ಫ್ರೆಂಚರ "ಫೌರ್ನೆಲ್" ಎಂಬ ನಾವೆಯು ಮುಣುಗಿಸಲ್ಪಟ್ಟಿರುತ್ತದೆ. ಫ್ರೆಂಚರ "ವಿಲ್ಲೆಡಿಮಡ್ರಿಕ್" ನಾವೆಯನ್ನು ಜರ್ಮನರ ಜಲಂತರ್ಗಾಮಿ ನಾವೆಯು ಅಟ್ಟಿಕೊಂಡು ಬಂದು ಗುಂಡು ಹಾರಿಸಿರುವದು. ಆದರೆ ಈ ಹಡಗವು ಪೂರ್ಣವೇಗದಿಂದ ಓಡಿ ತಪ್ಪಿಸಿಕೊಂಡಿರುತ್ತದೆ.

ಫ್ರೆಂಚರ ೩ ವಾಯುನಾವೆಗಳು ಬೆಲ್ಜಿಯಮ್ ಕರಾವಳಿಯಲ್ಲಿದ್ದ ಶತ್ರುಗಳ ಹಡಗಗಳ ಮೇಲೆ ೬೫ ಸಿಡಿಮದ್ದಿನ ಗುಂಡುಗಳನ್ನು ಹಾಕಿರುತ್ತವೆ.

ರುಶ್ಯನರು ಜೂನ್ ತಾ. ೪ರಿಂದ ತಾ. ೨೩ರವರೆಗೆ ಶತ್ರುಗಳ ೪,೦೩೧ ಆಫೀಸರರನ್ನೂ ೧೯೪,೦೪೧ ಸೇನಿಕರನ್ನೂ ೨೧೯ ಫಿರಂಗಿಗಳನ್ನೂ ೬೪೪ ಯಂತ್ರಚಾಲಿತ ಫಿರಂಗಿಗಳನ್ನೂ ೧೯೬ ದೊಡ್ಡ ತೋಪುಗಳನ್ನೂ ಸೆರೆಹಿಡಿದಿರುತ್ತಾರೆ.

ಮೆಸಿಡೋನಿಯದಲ್ಲಿ ಕದನವು ಪದೇಪದೇ ನಡೆಯುತ್ತಿದೆ. ಈ ಕದನಗಳು ಅತಿ ಕಠಿಣವಾಗಿಯೂ ಇವೆ.

ಇಟೆಲಿಯನರು ಮೊಸಿನ ಮತ್ತು ಅರ್ಸಿರಿಯೋ ಎಂಬ ಸ್ಥಳಗಳನ್ನು ಸ್ವಾಧೀನಮಾಡಿಕೊಂಡಿರುತ್ತಾರೆ. ಶತ್ರುಗಳು ಅಮಾನುಷ ರೀತಿಯಿಂದ ಅರ್ಸಿರಿಯೋ ಎಸಿಯಾಗೋ ಮತ್ತು ಅನೇಕ ಗ್ರಾಮಗಳನ್ನು ಸುಟ್ಟುಹಾಕಿರುತ್ತಾರೆ.

ತಾ. ೨೮ನೇ ಜೂನ್.

ಶತ್ರುಗಳು ಜಪಾನರ "ಟೈಕೆಸುಮಾರು" ಇಟೆಲಿಯನರ "ಇಲ್ಲರ" ಡಚ್ಚರ "ವಾಲ್ಸ್‌ಟ್ರೂಮ್" ಎಂಬ ಹಡಗಗಳನ್ನು ಮುಣುಗಿಸಿರುತ್ತಾರೆ.

ಮ್ಯೂಸಿನ ಎಡಕಡೆಯಲ್ಲಿ ತೋಪು ಕಾಳಗಗಳು ನಡೆಯುತ್ತಿವೆ.

ಬೆಲ್ಜಿಯಮ್ ರಣರಂಗದಲ್ಲಿಯೂ ಅಲ್ಲಲ್ಲಿ ಸಣ್ಣಪುಟ್ಟ ಕದನಗಳು ನಡೆಯುತ್ತಲೇ ಇವೆ.

ತಾ. ೧ನೇ ಜುಲಾಯಿ.

ಇಟೆಲಿಯಾನರ "ಮೊನಿಟೆಲ್ಲೊ" "ರೋಮ" ಮತ್ತು "ಪಿನೋ" ಎಂಬ ಹಡಗಗಳನ್ನು ಶತ್ರುಗಳು ಮುಣುಗಿಸಿರುವರು.

ಮ್ಯೂಸಿನ ಎಡಕಡೆಯಲ್ಲಿ ಶತ್ರುಗಳು ಕಠಿಣವಾಗಿ ತೋಪು ಹಾರಿಸುತ್ತಲಿದ್ದಾರೆ. ದಿನ್ನೆ ೩೦೪ರಿಂದ ಅವಕೋರ್ಟು ಅರಣ್ಯದವರೆಗೆ ಫ್ರೆಂಚರ ನೆಲೆಗಳ ಮೇಲೆ ಹಲ್ಲೆಮಾಡಿದ ಶತ್ರುಗಳು ಹಿಮ್ಮೆಟ್ಟಿರುವರು. ಮ್ಯೂಸಿನ ಬಲಕಡೆಯಲ್ಲಿ ಕಾಲಾಳು ಸೇನಿಕರ ಕದನವು ನಡೆಯಲಿಲ್ಲ. ಆದರೆ ತೋಪು ಕಾಳಗವು ಅತಿ ತೀಕ್ಷ್ಣವಾಗಿ ನಡೆದಿರುವದು.

ರುಶ್ಯನರು ನಿನ್ನೆಯ ದಿನ ೨೩೧ ಆಫೀಸರರನ್ನೂ ೧೦,೨೫೫ ಸೇನಿಕರನ್ನೂ ಸೆರೆಹಿಡಿದಿರುವರು. ರುಶ್ಯನರು ಕೊಲೋಮಿಯವನ್ನು ಸ್ವಾಧೀನಮಾಡಿಕೊಂಡಿರುವರೆಂತ ಪಾರಿಸಿನಲ್ಲಿ ವಾರ್ತೆ ಇದೆ.

ಶತ್ರುಗಳು ಜೀವದ ಮಮತೆ ಇಲ್ಲದೆ ಎದುರಾಡಿದರೂ ರುಶ್ಯನರು ನೀಸ್ಟರ್ ಮತ್ತು ಪ್ರುತಿನ ಮಧ್ಯೆ ಪುನಃ ಶತ್ರುಗಳಿಗೆ ದೊಡ್ಡ ನಷ್ಟವನ್ನುಂಟುಮಾಡಿರುತ್ತಾರೆ. ೧೦,೫೦೬ ಸೇನಿಕರೂ ಬಹಳ ಫಿರಂಗಿಗಳೂ ಆಯುಧ ಸಾಮಾಗ್ರಿಗಳೂ ರುಶ್ಯನರ ಸೆರೆಬಿದ್ದಿರುತ್ತವೆ.

ತಾ. ೩ನೇ ಜುಲಾಯಿ.

ಜರ್ಮನರ ಟೊರ್ಪೆಡೋ ದೋಣಿಗಳೂ ರುಶ್ಯನರ ಕ್ರೂಜರ್ ಮತ್ತು ೫ ಡಿಸ್ಟ್ರೋಯರ್ ನಾವೆಗಳೂ ಹೆಲ್ಸಿಂಜೆ ಮತ್ತು ಲೆಂಡ್ ಸೋರ್ಟನ ಬಳಿ ಕಳೆತು ಕದನವಾಗಿ ರುಶ್ಯನರು ಸ್ವಲ್ಪ ಸಮಯದಲ್ಲೇ ಹಿಂದೆಸರಿದರೆಂತಲೂ ಜರ್ಮನರಿಗೆ ಪ್ರಾಣಾಪಾಯವಾಗಲೀ ನಷ್ಟವಾಗಲೀ ಸಂಭವಿಸಲಿಲ್ಲವೆಂತಲೂ ಜರ್ಮನರು ಪ್ರಕಟಿಸಿರುತ್ತಾರೆ. ಆದರೆ ರುಶ್ಯನರ ಕಡೆಯಿಂದ ಬಂದ ವರ್ತಮಾನದಿಂದ ರುಶ್ಯನರು ಗೊತ್‌ಲೇಂಡ್ ಸ್ವೀಡನ್ ಕರಾವಳಿಯ ಮಧ್ಯೆ ಜರ್ಮನರ ಟೋರ್ಪೆಡೊ ದೋಣಿಗಳನ್ನು ಕಳೆತು ಅವುಗಳೊಡನೆ ಕದನಮಾಡಿ ಅವುಗಳನ್ನು ಓಡಿಸಿರುವರೆಂತ ತಿಳಿದು ಬರುತ್ತದೆ.

ವೆರ್ಡನಿನಲ್ಲಿ ಜರ್ಮನರು ಪುನಃ ಭೀಕರವಾಗಿ ನುಗ್ಗಿಬಂದು ಕದನಮಾಡುತ್ತಿದ್ದಾರೆ. ದಿನ್ನೆ ೩೦೪ ಮತ್ತು ಅವಕೋರ್ಟು ಅರಣ್ಯದಲ್ಲಿ ಜರ್ಮನರು ಜೀವದಮಮತೆ ಇಲ್ಲದೆ ಕಾದಾಡಿ ವಿಶೇಷ ನಷ್ಟಪಟ್ಟು ಹಿಮ್ಮೆಟ್ಟಿರುವರು. ಮ್ಯೂಸಿನ ಬಲಕಡೆಯಲ್ಲಿ ಥಿಯಾಮೊಂಟಿನ ಪ್ರಾಂತ್ಯದಲ್ಲಿ ದಿನವೆಲ್ಲಾ ಘೋರ ಕಾಳಗವು ನಡೆದು ಥಿಯಾಮೊಂಟಿನಲ್ಲಿ ಜರ್ಮನರು ಬಲಕಾಯಿಸಿಕೊಂಡ ಸ್ಥಳಗಳು ಫ್ರೆಂಚರ ವಶವಾದುವು. ಮಧ್ಯಾಹ್ನದ ನಂತರ ಜರ್ಮನರು ಪುನಃ ಕಠಿಣವಾಗಿ ಹಲ್ಲೆಮಾಡಿ ಫ್ರೆಂಚರನ್ನು ಹಿಂದಕ್ಕೆ ಓಡಿಸಲು ಪ್ರಯತ್ನಿಸಿದರು. ಆದರೆ ವಿಶೇಷ ನಷ್ಟಪಟ್ಟು ಹಿಮ್ಮೆಟ್ಟಿರುವರು.

ಬೆಲ್ಜಿಯಂ ರಣರಂಗದಲ್ಲಿ ಬ್ರಿಟಿಷ ಸೇನಿಕರು ನುಗ್ಗಿಹೋಗಿ ಕದನಮಾಡಲು ಪ್ರಾರಂಭಿಸಿರುತ್ತಾರೆ. ಬ್ರಿಟಿಷರು ಭೀಕರವಾಗಿ ಗುಂಡುಗಳನ್ನು ಹಾರಿಸಿ ಶತ್ರುಗಳ ಮೇಲೆ ಹಲ್ಲೆಮಾಡಿರುವರು. ಕಠಿಣ ಕಾಳಗವು ನಡೆಯುತ್ತಿದೆ. ಜರ್ಮನರ ಮುಂದಿನ ಸಾಲನ್ನು ಬ್ರಿಟಿಷ ಸೇನಿಕರು ವಶಮಾಡಿಕೊಂಡು ಅನೇಕ ಶತ್ರುಸೇನಿಕರನು ಸೆರೆಹಿಡಿದಿರುತ್ತಾರೆ. ಸೊಮ್ಮೆ ನದಿ ಮತ್ತು ಎಂಕ್ರೆ, ಕೊಮ್ಮೆಕೋರ್ಟನಲ್ಲಿ ಬ್ರಿಟಿಷರಿಗೂ ಶತ್ರುಗಳಿಗೂ ಭೀಕರ ಕಾಳಗವು ನಡೆದಿರುವದು ಬ್ರಿಟಿಷರು ೬ ಮೈಲು ವಿಸ್ತೀರ್ಣದ ರಣರಂಗದಲ್ಲಿ ಮುಂದರಿದು ಶತ್ರುಗಳ ಕಂದಕಗಳನ್ನೂ ಜರ್ಮನರು ಕೋಟೆಗಳಿಂದ ಬಲಕಾಯಿಸಿಕೊಂಡಿದ್ದ ಮೊಂಟಾಬಾನ್ ಮತ್ತು ಮೆಮೆತ್ಜ್ ಎಂಬ ಸ್ಥಳಗಳನ್ನೂ ಸ್ವಾಧೀನಮಾಡಿಕೊಂಡಿರುತ್ತಾರೆ. ಮಧ್ಯದಲ್ಲಿ ಬ್ರಿಟಿಷರು ನಾಲ್ಕು ಮೈಲುಗಳ ರಣರಂಗದಲ್ಲಿ ಹಲ್ಲೆಮಾಡಿರುವರು. ೨ ಸಾವಿರಕ್ಕಿಂತಲೂ ಹೆಚ್ಚಿಗೆ ಶತ್ರುಗಳು ಬ್ರಿಟಿಷರ ಸೆರೆಬಿದ್ದಿರುವರು. ಸೌಸೆಜ್ ಮತ್ತು ಮೈಪ್ರೆಸ್ ಮಧ್ಯೆ ಬ್ರಿಟಿಷ ಸೇನಿಕರು ಹಲವು ಕಡೆಗಳಲ್ಲಿ ಜರ್ಮನರ ಕಂದಕಗಳನ್ನು ಹಿಡಿದು ಶತ್ರುಸೇನೆಯಲ್ಲಿ ವಿಶೇಷ ನಷ್ಟಪಡಿಸಿರುವರು ಎಂತ ಜನರಲ್ ಹೇಗರವರು ಪ್ರಕಟಿಸಿರುತ್ತಾರೆ. ತಾ. ೨ನೇ ಮಧ್ಯಾಹ್ನದನಂತರ ಫ್ರಿಕೋರ್ಟನ್ನು ಬ್ರಿಟಿಷ ಸೇನಿಕರು ಹಿಡಿದು ಮುಂದರಿಯುತ್ತಲಿದ್ದಾರೆ. ಅಂಕ್ರಿ ಮತ್ತು ಸೊಮ್ಮೆಯಲ್ಲಿ ೮೦೦ ಶತ್ರುಸೇನಿಕರು ಸೆರೆಬಿದ್ದಿರುವರು. ಒಟ್ಟಿಗೆ ೩೫೦೦ ಶತ್ರುಸೇನಿಕರು ಬ್ರಿಟಿಷರ ಸೆರೆಬಿದ್ದಿರುವರು. ಬ್ರಿಟಿಷ ಸೇನಿಕರು ಅತಿ ಸೂರತನದಿಂದ ಕಾದಾಡುತ್ತಿದ್ದಾರೆ.

ರುಶ್ಯನರು ಬಕೋವಿನದಲ್ಲಿ ಶತ್ರುಗಳನ್ನು ನೀಸ್ಟರಿನ ದಕ್ಷಿಣಕ್ಕೆ ಅಟ್ಟುತ್ತಿದ್ದಾರೆ. ಆಸ್ಟ್ರಿಯನರು ಯುದ್ಧ ಸಾಮಾಗ್ರಿಗಳನ್ನು ಬಿಟ್ಟು ಓಡುತ್ತಿದ್ದಾರೆ. ಒಬರ್ಟಿನ್ ಎಂಬ ಪಟ್ಟಣವು ರುಶ್ಯನರ ಸ್ವಾಧೀನವಾಗಿದೆ. ಡ್ವೀನದಲ್ಲಿ ಜರ್ಮನರು ರಿಗ್ಗದ ದಕ್ಷಿಣದಲ್ಲಿದ್ದ ರುಶ್ಯನರ ನೆಲೆಗಳ ಮೇಲೆ ಗುಂಡುಹಾರಿಸಿ ಮುಂದರಿಯಲು ಯತ್ನಿಸಿದರು. ಆದರೆ, ಸಾಧ್ಯವಾಗಲಿಲ್ಲ. ರುಶ್ಯನರು ಜೂನ್ ತಾ. ೪ರಿಂದ ೩೦ರವರೆಗೆ ಸೆರೆಹಿಡಿದ ಶತ್ರುಗಳ ಒಟ್ಟು ಸಂಖ್ಯೆ ೨೧೭,೦೦೦. ಕೊಲೊಮಿಯದ ಪೂರ್ವದಲ್ಲಿ ರುಶ್ಯನರಿಗೆ ಪುನಃ ೨೦೦೦ ಶತ್ರುಸೇನಿಕರು ಸೆರೆಬಿದ್ದಿರುತ್ತಾರೆ.

ದಕ್ಷಿಣ ರಣರಂಗದಲ್ಲಿ ಇಟೆಲಿಯನರಿಗೆ ಜಯವಾಗುತ್ತಲಿದೆ. ಒಂದು ಸ್ಥಳದಲ್ಲಿ ೪೦೩ ಮತ್ತೊಂದು ಕಡೆಯಲ್ಲಿ ೬೬೦ ಶತ್ರುಸೇನಿಕರು ಇಟೆಲಿಯನರ ಸೆರೆಬಿದ್ದಿರುವರು.

ಪೂರ್ವ ಆಫ್ರಿಕದಲ್ಲಿಯೂ ಬ್ರಿಟಿಷರಿಗೆ ಜಯವಾಗುತ್ತಿದೆ.

ತಾ. ೪ನೇ ಜುಲಾಯಿ.

ಶತ್ರುಗಳು ಬ್ರಿಟಿಷರ "ವಿಂಡರ್‌ಮೆರೆ" ಮತ್ತು "ಟಿಯಾನೋ" ಎಂಬ ಹಡಗಗಳನ್ನು ಮುಣುಗಿಸಿರುತ್ತಾರೆ.

ಬ್ರಿಟಿಷರ ಸೇನೆಯಲ್ಲಿ ಸ್ಕೋತಾಲದ ಎರಡು ರೆಜಿಮೆಂಟಿನವರು ಒಂದೇ ಸಾರಿ ಮುಂದರಿದು ಶತ್ರುಗಳು ಬಲಕಾಯಿಸಿಕೊಂಡಿದ್ದ ಮೊಂಟಾಬಾನ್ ಎಂಬ ಗ್ರಾಮವನ್ನು ಸ್ವಾಧೀನಮಾಡಿ ಸನೀನುಗಳಿಂದ ಕೆಲವು ನೂರು ಶತ್ರುಸೇನಿಕರನ್ನು ತಿವಿದು ಉಳಿದ ಶತ್ರುಸೇನೆಯನ್ನೆಲ್ಲಾ ಸೆರೆಹಿಡಿದ ಶೂರಕೃತ್ಯವೇ ಈ ದಿನದ ಮುಖ್ಯ ವಾರ್ತೆಯಾಗಿರುವದು.

ಲ್ಲೋಯಿಡ್ ಜೋರ್ಜರವರು ಯುದ್ಧಮಂತ್ರಿಯಾಗಿಯೂ ಮಿ। ಚೇಂಬರ್ಲೆನರವರು ಮದ್ದುಗುಂಡುಗಳನ್ನು ಒದಗಿಸಿಕೊಡುವ ಖಾತೆಯ ಮಂತ್ರಿಯಾಗಿಯೂ ನೇಮಿಸಲ್ಪಡುವರೆಂತಲೂ ಕ್ರ್ಯೂ ಪ್ರಭುಗಳವರು ಪುನಃ ಹಿಂದೂಸ್ಥಾನದ ಸ್ಟೇಟ್ ಸೆಕ್ರೆಟರಿಯಾಗಿ ನೇಮಿಸಲ್ಪಡುವರೆಂತಲೂ ಟೈಮ್ಸ್ ಪತ್ರಿಕೆಯು ಹೇಳುತ್ತದೆ.

ರುಶ್ಯನರು ಕೊಲೊಮಿಯದಲ್ಲಿ ೧೫ ಮೈಲು ಮುಂದರಿದಿರುವರು. ಆಸ್ಟ್ರಿಯಾನರು ನಿರ್ವಾಹವಿಲ್ಲದೆ ಕಾರ್ಪಥೇನಿಯನ್ ಕಡೆಗೆ ಓಡುತ್ತಿದ್ದಾರೆ.

ರುಶ್ಯನರು ಕೌಕಾಸಸಿನಲ್ಲಿ ಪ್ಲಾಟಾನದ ಪಶ್ಚಿಮದ ಪರ್ವತ ಸಾಲನ್ನೇ ಸ್ವಾಧೀನಮಾಡಿಕೊಂಡಿರುವರು. ತುರ್ಕರನ್ನು ಸವರ್ ಸುಂಥರಾಸಿ ನದಿಯ ಆಚೆಗೆ ಓಡಿಸಿರುತ್ತಾರೆ. ಇತರ ಕೆಲವು ಸ್ಥಳಗಳಲ್ಲಿ ಮುಂದರಿದ ತುರ್ಕರನ್ನೂ ರುಶ್ಯನರು ಹಿಂದಕ್ಕೆ ಅಟ್ಟಿರುತ್ತಾರೆ.

~~~~

ವಿದೇಶ ವೃತ್ತಾಂತ.

ಕೆನಡಾ ದೇಶದ ಗವರ್ನರ್ ಜನರಲರಾದ ಕೊನ್ನಾಟ್ ಪ್ರಭುಗಳವರು ಕೆಲಸದಿಂದ ನಿವೃತ್ತರಾಗಿರುವರು. ಡೆವನ್‌ಶಯರಿನ ಪ್ರಭುಗಳು ಈಗ ಕೆನಡಾ ದೇಶದ ಗವರ್ನರ ಜನರಲರಾಗಿ ನೇಮಿಸಲ್ಪಟ್ಟಿದ್ದಾರೆ.
~~~~

ಐರ್ಲ್ಯಾಂಡಿನ ಅಲ್ಸ್ಟರನ್ನು ತಾತ್ಕಾಲಿಕವಾಗಿ ಬಿಟ್ಟು ಉಳಿದ ಪ್ರದೇಶಗಳಿಗೆ "ಹೋಮ್‌ರೂಲ" ಆಕ್ಟನ್ನು ಜಾರಿಗೆ ತರುವ ಏರ್ಪಾಡುಗಳು ನಡೆಯುತ್ತಲಿದೆ.

ಬರುವ ಆಗೋಸ್ತು ತಿಂಗಳ ತಾ. ೪ಕ್ಕೆ ಯುದ್ಧ ಪ್ರಾರಂಭವಾಗಿ ೨ ವರ್ಷಗಳಾಗುವದರಿಂದ ಆ ದಿನ ಎಲ್ಲಾ ದೇವಾಲಯಗಳಲ್ಲಿ ವಿಶೇಷ ಆರಾಧನೆಯನ್ನು ನಡಿಸಬೇಕೆಂತ ಲಂಡನಿನ ಆರ್ಚ್ ಬಿಷೋಪರವರು ಸೂಚಿಸಿರುವರು.

ಲೀಡ್ಸಿನ ವಾಣಿಜ್ಯ ಸಂಘದವರು ೨೦೦೦ ಗಿನಿಗಳನ್ನು ಕೂಡಿಸಿ ಯುದ್ಧದ ಬಗ್ಗೆ ಒಂದು ವಾಯುನಾವೆಯನ್ನು ಹಿಂದೂಸ್ಥಾನದ ಹೆಸರಲ್ಲಿ ಬಹುಮಾನವಾಗಿ ಕೊಡಲು ನಿರ್ಣಯಿಸಿರುವರು. ಈ ವಾಯುನಾವೆಯು ಸದ್ಯ ಪಶ್ಚಿಮ ರಣರಂಗಕ್ಕೆ ಕಳುಹಿಸಲ್ಪಟ್ಟು ಯುದ್ಧ ಮುಗಿದ ನಂತರ ಹಿಂದೂಸ್ಥಾನಕ್ಕೆ ಕಳುಹಿಸಲ್ಪಡುವದು.

ಮೆಕ್ಸಿಕೋ ದೇಶದಲ್ಲಿ ಇನ್ನೂ ಶಾಂತತೆ ನೆಲೆಗೊಳ್ಳಲಿಲ್ಲ. ಈಚೆಗೆ ಕೆರಿಜಾಲ್ ಎಂಬಲ್ಲಿ ಮೆಕ್ಸಿಕೋ ರಾಜ್ಯದವರು ಯುನೈಟೆಡ್ ಸ್ಟೇಟಿನ ಸೈನಿಕರ ಮೇಲೆ ಬಿದ್ದು ಕೆಲವರನ್ನು ಸೆರೆಹಿಡಿದರು. ಇದರಿಂದ ಯುನೈಟೆಡ್ ಸ್ಟೇಟಿನವರಿಗೂ ಮೆಕ್ಸಿಕೋದವರಿಗೂ ಯುದ್ಧ ನಡೆಯುವ ಸಂಭವವಿತ್ತು. ಸೆರೆಹಿಡಿದವರನ್ನು ಕೂಡಲೇ ಬಿಡದಿದ್ದರೆ ಅಮೇರಿಕದವರು ಬಲತ್ಕಾರದಿಂದ ಅವರನ್ನು ಬಿಡಿಸಿಕೊಳ್ಳುವ ಯತ್ನಮಾಡುವವರಲ್ಲಿದ್ದರು. ಆದರೆ ಮೆಕ್ಸಿಕೋದವರು ಸೆರೆಹಿಡಿದ ಅಮೇರಿಕದವರನ್ನೆಲ್ಲಾ ಬಿಡುಗಡೆ ಮಾಡಿದ್ದರಿಂದ ಅಮೇರಿಕದವರಿಗೂ ಮೆಕ್ಸಿಕೋದವರಿಗೂ ಯುದ್ಧ ನಡೆಯುವ ಸಂಭವವು ನಿಂತುಹೋಯಿತು.

ಐರ್ಲ್ಯಾಂಡಿನ ವಿಪ್ಲವಕ್ಕೆ ಮೂಲಕಾರಣನಾದ ಸರ್. ಕೇಸ್‌ಮೆಂಟನ ವಿಚಾರಣೆ ನಡೆದು ಕೇಸ್‌ಮೆಂಟನಿಗೆ ಮರಣ ಶಿಕ್ಷೆಯು ವಿಧಿಸೋಣಾಯಿತು.

ಉತ್ತರ ಹಿಂದೂಸ್ಥಾನ.

ಕಲ್ಕತ್ತೆಯ ಬಂದರದಲ್ಲಿದ್ದ "ಎಸ್. ಎಸ್. ಸೆಂಟ್ ಹೆಲೆನ್" ಎಂಬ ಹಡಗದಲ್ಲಿ ಒಂದು ವಿಚಿತ್ರ ಜಗಳವು ನಡೆದಿರುವದು. ಬಲಾಢ್ಯನಾದ ಒಬ್ಬ ನಾವಿಕನು ಹಡಗದ ಬಡಗಿಯನ್ನು ಜರ್ಮನನೆಂದು ಕರೆದನಂತೆ. ಈ ಬಡಗಿ ಕೆಲಸದವನು ನೋರ್ವೆ ದೇಶಸ್ಥನಾದ್ದರಿಂದ ಸಿಟ್ಟುಗೊಂಡು ಒಬ್ಬರಿಗೊಬ್ಬರು ಹೊಡದಾಡಿಕೊಂಡರು. ಹಡಗದಲ್ಲಿದ್ದ ಇತರ ನಾವಿಕರೂ ಎರಡು ತಂಡಗಳಾಗಿ ಕೂಡಿ ದೊಡ್ಡ ಕಾದಾಟವಾಯಿತು. ಈ ಕಾದಾಟದಲ್ಲಿ ಗಾಯ ಒಡೆದ ಕೆಲವರು ಆಸ್ಪತ್ರೆಯಲ್ಲಿರುವರು.

ಕಲ್ಕತ್ತೆಯ ಹೆರಿಸನ್ ರಸ್ತೆಯಲ್ಲಿರುವ ಒಂದು ಮನೆಯಲ್ಲಿ ಜೂನು ತಾ. ೨೪ರಲ್ಲು ೫೯,೦೦೦ ರೂಪಾಯಿ ಕ್ರಯಬಾಳುವ ಒಡವೆಗಳು ಕಳವಾಗಿರುವವು. ಈ ಮನೆಯು ನೊಯನ್ ಮನಿದಾಸಿ ಎಂಬ ವಿಧವೆದ್ದು. ಅವಳೊಡನೆ ಇನ್ನೊಬ್ಬ ವಿಧವೆಯೂ ವಾಸಮಾಡುತ್ತಿದ್ದಳು. ಇಬ್ಬರು ವಿಧವೆಯರೂ ಆ ದಿನ ಬೆಳಿಗ್ಗೆ ೧೧ ಗಂಟೆಗೆ ಮನೆಯಿಂದ ಹೊರಟು ಸಮೀಪದ ಸ್ನೇಹಿತರೊಬ್ಬರ ಮನೆಗೆ ಹೋದರು. ಈ ವಿಧವೆಯರ ಕೆಲಸದವನೊಬ್ಬನೂ ಅವರೊಡನೆ ಬಂದಿದ್ದನು. ದಾರಿಯಲ್ಲಿ ಈ ಕೆಲಸದವನು ತಾನು ಒಂದು ಬೀಗದ ಕೈಯನ್ನು ಮನೆಯಲ್ಲಿ ಬಿಟ್ಟು ಬಂದಿರುವೆನೆಂದೂ ಆ ಬೀಗದ ಕೈ ತನಗೆ ಅಗತ್ಯ ಬೇಕೆಂದೂ ಹೇಳಿ ನೊಯನ್‌ಮನಿದಾಸಿಯಿಂದ ಅವಳ ಮನೆಯ ಬೀಗದ ಕೈ ತಕ್ಕೊಂಡುಹೋದನು. ಆ ವಿಧವೆಯರು ರಾತ್ರಿ ೮॥ ಗಂಟೆಗೆ ಹಿಂದೆ ಬರುವಾಗ ಮನೆಯ ಬಾಗಲಿಗೆ ಒಳಗಿಂದ ಬೀಗಹಾಕಿತ್ತು, ಒಳಗಿಂದ ದೀಪ ಉರಿಯುತ್ತಿತ್ತು, ಜನರು ಏನೋ ಮಾಡುತ್ತಿದ್ದ ಶಬ್ದವೂ ಕೇಳಿಸಿತು, ಕೂಡಲೇ ವಿಧವೆಯರು ಬೊಬ್ಬಿಟ್ಟರು. ನೆರೆಹೊರೆಯವರು ಸಹಾಯಕ್ಕೆ ಬರುವಷ್ಟರಲ್ಲಿ ಕಳ್ಳರು ಸುಮಾರು ೫೯,೦೦೦ ರೂಪಾಯಿಯ ಒಡವೆಗಳನ್ನು ಅಪಹರಿಸಿ ಮತ್ತೊಂದು ಬಾಗಿಲಿಂದ ಓಡಿ ಹೋದರು. ಪೋಲಿಸಿನವರು ಬೀಗದಕ್ಕೆ ಹಿಂದಕ್ಕೆ ತಂದ ಕೆಲಸದವನನ್ನು ಅನುಮಾನದ ಮೇಲೆ ಕೈದುಮಾಡಿ ರಿಮಾಂಡಿನಲ್ಲಿಟ್ಟಿರುತ್ತಾರೆ.

ಜೂನ್ ತಾ. ೨೪ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ೪೨೪ ಮಂದಿಗೆ ಪ್ಲೇಗ ಬೇನೆಯು ಸೋಂಕಿ ೩೨೩ ಮಂದಿ ಮೃತರಾದರು. ಈ ಪೈಕಿ ಮುಂಬಾಯಿ ಸಂಸ್ಥಾನದಲ್ಲಿ ೯೭, ಮದ್ರಾಸ್ ೨೯; ಬಂಗಾಳ ೨; ಸಂಯುಕ್ತಸಂಸ್ಥಾನ ೨; ಪಂಜಾಬು ೨೪; ಬರ್ಮ ೧೨೧; ಮೈಸೂರು ೩೬; ಹೈದರಾಬಾದ್ ೧೦ ಮರಣಗಳಾಗಿರುವವು.

ಬಂಗಾಳದ ಗುಪ್ತ ಪೋಲಿಸ್ ಇಲಾಖೆಯ ಡ್ಯೂಪಿಟಿ ಸುಪರಿಂಟೆಂಡೆಂಟರಾಗಿದ್ದ ಬಾಬು ವಸಂತಕುಮಾರ ಚಟರ್ಜಿಯವರೂ ಆರ್ಡರ್ಲಿಯೂ ಸಾಯಂಕಾಲ ೬-೩೦ ಗಂಟೆಗೆ ಆಫೀಸಿನಿಂದ ಮನೆಗೆ ಬೈಸಿಕಲ್ ಮೇಲೆ ಹೋಗುತ್ತಿರುವಾಗ ಶಂಬುನಾಥ ಪಂಡಿತ ರಸ್ತೆಯಲ್ಲಿ ೪ ಬಂಗಾಳಿ ಯುವಕರು ಅವರ ಮುಂದೆ ಬಂದು ಮೂವರು ವಸಂತ ಬಾಬುಗಳ ಮೇಲೆಯೂ ಇಬ್ಬರು ಆರ್ಡರ್ಲಿಯ ಮೇಲೆಯೂ ಬಿದ್ದು ಗುಂಡು ಹೊಡೆದು ಓಡಿ ಹೋದರೆಂಬ ವಾರ್ತೆ ಬಂದಿರುತ್ತದೆ. ಜನರು ಈ ಘಾತುಕರನ್ನು ಸ್ವಲ್ಪ ದೂರದ ವರೆಗೆ ಹಿಂಬಾಲಿಸಿಕೊಂಡು ಹೋದರು. ಆದರೆ ಘಾತುಕರು ಗುಂಡುಹಾರಿಸಿದ್ದರಿಂದ ಇವರು ಹಿಂತಿರುಗಿದರು. ಆರ್ಡರ್ಲಿಗೆ ಅಪಾಯುಕರವಾದ ಗಾಯಗಳಾಗಿರುವವು. ಡ್ಯೂಪಿಟಿ ಸುಪರಿಂಟೆಂಡೆಂಟರವರು ಪ್ರೆಸಿಡೆನ್ಸಿ ಜನರಲ್ ಆಸ್ಪತ್ರೆಯಲ್ಲಿ ಅಂದೇ ರಾತ್ರಿ ೮-೪೫ ಗಂಟೆಗೆ ಕಾಲವಾದರು.

ಈಗ ಮುಂಬಾಯಿ ನೇಶನಲ್ ಬೇಂಕಿನಲ್ಲಿ ಭಂಗಾರದ ಗಟ್ಟಿ ಬೆಲೆ ತೊಲೆ ೧ಕ್ಕೆ ರೂ. ೨೭—೧೪—೦. ರಾಣಿ ಗುರುತಿನ ಪವನಿನ ಬೆಲೆ ರೂ. ೧೭—೧—೦. ಕುದುರೆ ಗುರುತಿನ ಪವನಿನ ಬೆಲೆ ರೂ. ೧೬—೪—೦ ಆಗಿದೆ.

ಮೆ। ಚರ್ಚಿಲ್ಲರವರು ಬ್ರಿಟಿಷ ಪಾರ್ಲಿಮೆಂಟ ಸಭೆಯಲ್ಲಿ ಹಿಂದೀ ಜನರನ್ನು ಸೇನೆಗೆ ಹೆಚ್ಚೆಚ್ಚಾಗಿ ಸೇರಿಸಿಕೊಳ್ಳುವದು ಹಿತವೆಂತ ಸೂಚಿಸಿ ಬ್ರಿಟಿಷ ಸರಕಾರದವರನ್ನು ಈ ಬಗ್ಗೆ ಎಚ್ಚರಿಸಿರುತ್ತಾರೆ. ಹಿಂದೂಸ್ಥಾನದಲ್ಲಿ ೩೧೫ ಮಿಲಿಯ ಜನರಿರುತ್ತಾರೆ. ಆದರೆ ೧೦೦,೦೦೦ಕ್ಕಿಂತಲೂ ಕಡಿಮೆ ಮಂದಿ ರಣರಂಗದಲ್ಲಿದ್ದಾರೆ. ಇದು ಹಿಂದೂಸ್ಥಾನಕ್ಕೂ ಅಪಾಯಕರ, ಯೂರೋಪಿಗೂ ಅಪಾಯಕರ ಎಂದೂ ಹಿಂದೂಸ್ಥಾನದಲ್ಲಿ ೧೦-೧೨ ಡಿವಿಜನ್ ಸೇನೆಗಳನ್ನು ಹೆಚ್ಚಿಸಬೇಕೆಂದೂ ಹೇಳಿರುವರು.

ಕಲ್ಕತ್ತೆಯ ಡ್ಯೂಪಿಟಿ ಸುಪರಿಂಟೆಂಡೆಂಟರಾದ ವಸಂತ ಕುಮಾರ ಚಟರ್ಜಿಯವರನ್ನು ಕೊಲೆಮಾಡಿದ ಸಂಬಂಧದಲ್ಲಿ ಕಲ್ಕತ್ತೆಯ ಪೋಲಿಸಿನವರು ಅಲ್ಲಿಯ ಸುಮಾರು ೧೨ ಮನೆಗಳನ್ನು ಜಡ್ತಿಮಾಡಿರುತ್ತಾರೆ. ಅನುಮಾನದ ಮೇಲೆ ೨೫ ಬಂಗಾಳಿ ಯುವಕರನ್ನು ಕೈದುಮಾಡಿರುತ್ತಾರೆ. ಕೈದುಮಾಡಲ್ಪಟ್ಟವರಲ್ಲಿ ಕಲ್ಕತ್ತಾ ಹೈಕೋರ್ಟಿನ ವಕೀಲನೊಬ್ಬನೂ ಅವನ ಸಹೋದರನೂ ಸೇರಿರುವರು. ಪೋಲಿಸಿನವರು ಕೈದುಮಾಡಿದ ಕೆಲವರ ಕೂಡೆ ರಿವೋಲ್ವರುಗಳೂ ಸಿಕ್ಕಿರುವವು.

ಕಾಗದದ ಬೆಲೆಯು ವಿಪರೀತವಾಗಿ ಏರಿರುವುದರಿಂದ ಇಂಗ್ಲಾಂಡಿನಲ್ಲಿ ವರ್ತಮಾನ ಪತ್ರಿಕೆಗಳ ಪಾನುಗಳನ್ನು ದಿನೇ ದಿನೇ ಕಡಿಮೆಮಾಡುತ್ತಲಿದ್ದಾರೆ. ಇಂಗ್ಲಾಂಡಿನಲ್ಲಿ ಪ್ರಕಟವಾಗುವ "ಇಂಡಿಯಾ" ಪತ್ರಿಕೆಯು ಯುದ್ಧದ ಮೊದಲು ೧೨ ಪಾನುಗಳುಳ್ಳದ್ದಾಗಿತ್ತು. ಆದರೆ ಕಾಗದದ ಬೆಲೆಯು ಏರಿರುವದರಿಂದಲೂ ಕಾಗದವನ್ನು ಇಂತಿಷ್ಟೇ ಖರ್ಚುಮಾಡಬಹುದೆಂತ ಸರಕಾರದವರು ನಿಯಮಮಾಡಿರುವದರಿಂದಲೂ "ಇಂಡಿಯಾ" ಪತ್ರಿಕೆಯು ಇನ್ನು ಮುಂದಕ್ಕೆ ೮ ಪಾನುಗಳಿಗೆ ಮಿಕ್ಕದು ಎಂತ "ಇಂಡಿಯಾ" ಪತ್ರಿಕೆಯಲ್ಲಿ ಪ್ರಕಟವಾಗಿದೆ. ಇಂಗ್ಲಾಂಡಿನಲ್ಲಿಯೇ ಕಾಗದದ ಬೆಲೆಯು ಏರಿರುವದಾದರೆ ಹಿಂದೂಸ್ಥಾನದಲ್ಲಿ ಕಾಗದದ ಬೆಲೆಯು ಎಷ್ಟರಮಟ್ಟಿಗೆ ಏರಿರುವದೆಂಬುದನ್ನು ಪ್ರತ್ಯೇಕ ಹೇಳಬೇಕೆಂತಿಲ್ಲ. ಹಿಂದೂಸ್ಥಾನಕ್ಕೆ ವಿದೇಶಗಳಿಂದಲೇ ಕಾಗದಗಳು ಬರಬೇಕಾಗಿವೆ. ಈಗ ಅದು ಸಹಾ ನಿಶ್ಚಯವಿಲ್ಲ. ಹಿಂದೂಸ್ಥಾನದಲ್ಲಿಯೇ ಇರುವ ಕೆಲವು ಕಾಗದ ಮಾಡುವ ಕಾರ್ಖಾನೆಗಳಿಂದ ಹಿಂದೂಸ್ಥಾನಕ್ಕೆ ಬೇಕಾದಷ್ಟು ಕಾಗದ ಸಿಕ್ಕುವದು ಕಷ್ಟಸಾಧ್ಯ. ಆದುದರಿಂದ ಹಿಂದೂಸ್ಥಾನದ ವರ್ತಮಾನ ಪತ್ರಿಕೆಯವರು ಕೂಡಾ ತಮ್ಮ ಪತ್ರಿಕೆಗಳ ಪರಿಮಾಣವನ್ನು ಕಡಿಮೆಮಾಡುವ ಕಾಲವು ಹೆಚ್ಚು ದೂರವಿಲ್ಲ. ಜಪಾನಿಯರು ಈ ಸಂದರ್ಭದಲ್ಲಿ ನಮ್ಮನ್ನು ರಕ್ಷಿಸಲಾರರು. ಅಮೇರಿಕದವರಾದರೋ ಏನಾದರೂ ಮಾಡಬಹುದು. ಆದರೂ ಬಹಳ ಕಷ್ಟವಿದೆ. ಆದುದರಿಂದ ಇಲ್ಲಿಯ ಯಾವದಾದರೂ ಪ್ರಮುಖ ಕಂಪೆನಿಯವರು ಈ ವಿಷಯವನ್ನು ಆಲೋಚಿಸಬೇಕಾಗಿದೆ ಎಂತ ಅಮೃತ ಬಜಾರ ಪತ್ರಿಕೆಯಲ್ಲಿ ಪ್ರಕಟವಾಗಿದೆ.

ದಕ್ಷಿಣ ಹಿಂದೂಸ್ಥಾನ.

ಮದ್ರಾಸ್ ಸಂಸ್ಥಾನದ ಮಾನ್ಯ ಗ್ರಹಸ್ಥರಾದ ಮ। ರಾ। ಟಿ. ಆದಿನಾರಾಯಣ ಚೆಟ್ಟಿಯರ್‌ರವರು ತನ್ನ ಪತ್ನಿ ಮತ್ತು ಮಗನೊಡನೆ ಡಬ್ಲಿನ್ ನಗರದಲ್ಲಿ ವಕೀಲ ಪರೀಕ್ಷೆಗೆ ಅಭ್ಯಾಸಮಾಡುತ್ತಿದ್ದಾರೆ. ಇವರ ಬುದ್ಧಿ ಕುಶಲತೆಯಿಂದ ಪರೀಕ್ಷೆಗಳಲ್ಲಿ ಅನೇಕ ಬಹುಮಾನಗಳು ದೊರಕಿರುತ್ತವೆ. ಆದರೆ ಕಳೆದ ತಿಂಗಳ ತಾ. ೨೪ರಲ್ಲು ಡಬ್ಲಿನ್ ಗುಪ್ತ ಪೋಲಿಸ್ ಆಫೀಸರರು ಅವರ ಮನೆಯನ್ನು ಅನುಮಾನದಮೇಲೆ ಜಡ್ತಿಮಾಡಿದರು. ಅನುಮಾನಕರವಾದ್ದೇನೂ ಸಿಕ್ಕಲಿಲ್ಲ. ಮ। ರಾ। ಚೆಟ್ಟಿಯರರು ರಾಜಭಕ್ತರು. ಇವರು ೧೨ ವರ್ಷಗಳ ಕಾಲಕ್ಕಿಂತಲೂ ಹೆಚ್ಚಿಗೆ ಸ್ಪೆಶ್ಯಲ್ ಮೇಜಿಸ್ಟ್ರೇಟರು, ಲೋಕಲ್ ಬೋರ್ಡಿನ ವೈಸ್ ಪ್ರೆಸಿಡೆಂಟರು, ಸೇಲಂ ಬಂದಿಖಾನೆಯ ಒನರರಿ ಸಂದರ್ಶಕರು—ಮೊದಲಾದ ಒನರರಿ ಕೆಲಸಗಳನ್ನು ಮಾಡಿ

ಸರಕಾರಕ್ಕೆ ಬಹಳವಾಗಿ ಸಹಾಯ ಮಾಡಿದವರು, ಹಿಂದೂಸ್ಥಾನದ ಆರ್ಮ್ಸ್ ಆಕ್ಟಿನಿಂದ ನಿವೃತ್ತಿಮಾಡಲ್ಪಟ್ಟವರು. ೧೯೧೧ನೇ ಇಸವಿಯ ಡಿಲ್ಲಿ ದರ್ಬಾರಿನಲ್ಲಿ ಸಿಲ್ವರ್ ಮೆಡಲು ಇವರಿಗೆ ಕೊಡೋಣಾಗಿದೆ. ಇನ್ನೂ ಸರಕಾರಕ್ಕೆ ಹಲವು ವಿಷಯಗಳಲ್ಲಿ ಅನೇಕ ಸಾರಿ ಆಲೋಚನೆ ಕೊಟ್ಟವರು. ಇಂಥಾ ರಾಜಭಕ್ತರ ಮನೆಯನ್ನು ನಿಷ್ಕಾರಣವಾಗಿ ಜಪ್ತಿಮಾಡಿದ್ದು ನ್ಯಾಯವಲ್ಲವೆಂದೂ ಇದರಿಂದ ಮನನೊಂದ ಹಿಂದೂಸ್ಥಾನದ ರಾಜ್ಯಭಕ್ತ ಪ್ರಜೆಗಳೊಡನೆ ಕ್ಷಮಾಪಣೆ ಕೇಳುವದು ವಿಹಿತವೆಂದೂ ಬ್ರಿಟಿಷ ಪಾರ್ಲಿಮೆಂಟ ಮೆಂಬರರಾದ ಮಿ| ಸ್ವಿಫ್ಟ್ ಮೆಕ್‌ನ್ನಿಲರವರು ಬ್ರಿಟಿಷ ಪಾರ್ಲಿಮೆಂಟ ಸಭೆಯಲ್ಲಿ ಸೂಚಿಸಿರುತ್ತಾರೆ.

ಮದ್ರಾಸ್ ಗವರ್ನರ ಪ್ರಭುಗಳವರು ಇದೇ ಕಳೆದ ಜೂನ್ ತಾ, ೩೦ರಲ್ಲು ಕೊಯಮುತ್ತೂರಿಗೆ ಚಿತ್ತೈಸಿ ಫೋರೆಸ್ಟ್ ಕಾಲೇಜಿಯ ವಿದ್ಯಾರ್ಥಿಗಳಿಗೆ ಬಹುಮಾನ ಹಂಚುವ ಸಮಾರಂಭವನ್ನು ಜರಗಿಸಿದರು. ಮಧ್ಯಾಹ್ನದ ನಂತರ ಉಪಾಧ್ಯಾಯನಿಯರನ್ನು ತರ್ಬೇತುಮಾಡತಕ್ಕ ಸೆಕಂಡರಿ ಟ್ರೈನಿಂಗ್ ಶಾಲೆಯನ್ನು ಸಂದರ್ಶಿಸಿದರು.

ದಕ್ಷಿಣ ಕನ್ನಡ.

FOR IMMEDIATE SALE.

A Mulgeni property, near Kadri Post Office, yeilding a net income of Rs. 211—3—0.

Apply to:—

Dr. A. A. PEREIRA,
Camp Sidapur,
COORG.

ಮಾರಾಟಕ್ಕಿದೆ.

ಕದ್ರಿ ಪೋಸ್ಟ ಆಫೀಸಿನ ಬಳಿ ರೂ. 211—3—0 ವನ ಹುಟ್ಟುವಳಿ ಇರುವ ಒಂದು ಮೂಲಗೇಣಿ ಆಸ್ತಿಯು ತ್ವರ್ಯದಲ್ಲಿ ಮಾರೋಣಾಗುವದು—ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆಯುವದು.

ಡಾಕ್ಟರ್ ಎ. ಎ. ಪೆರೇರ,
ಕ್ಯಾಂಪ್ ಸಿದ್ಧಾಪುರ,
ಕೊಡಗು.

ನೋಟೀಸು.

ಮೆಸರ್ಸ್ ಸ್ಟೀವನ್ ಎಂಡ್ ಸನ್,
ಬಿಸ್ಕುಟು ಮೆನ್ಯುಫೆಕ್ಚರರು.

ಇವರು ತಮ್ಮ ಶಾಪನ್ನು ಬಲ್ಮಠ ರಸ್ತೆಯಲ್ಲಿರುವ ಮಿ ಜೋಕಿನ್ ಲೋರೆನ್ಸ್ ಸಾಲ್ದಾಂಞಾರ ಮನೆಯ ಎದುರಿರುವ ಮಿ| ಮೋನ ಪ್ಯಾಸರ ಕಟ್ಟಡಕ್ಕೆ ವೈದಿರುತ್ತಾರೆ.

ಸ್ಟೀವನ್ ಎಂಡ್ ಸನ್.
ಮಂಗಳೂರು.

ಏಲಂ ನೋಟೀಸು.

ದಕ್ಷಿಣಕನ್ನಡ ಡಿಸ್ಟ್ರಿಕ್ಟ್ ಕೋರ್ಟು ನಂಬ್ರ $\frac{1}{1913}$ ನೇ ದಿವಾಳಿ ಅರ್ಜಿದಾರ ಚಂದಾವರ ಅಣ್ಣಾಜಿ ರಾಯರ ಬಾಬತು ಕಾಸರಗೋಡ ಕಸಬೆಯಲ್ಲಿ ಇರುವ ಬಾಗ್ಯಾತು ಕಟ್ಟೋಣಗಳು ತಾ. ೨೭-೭-೧೯೧೬ರಲ್ಲು (ಗುರುವಾರ) ಕಾಸರಗೋಡ ಮುನ್ಸಿಫ ಕೋರ್ಟು ಕಂಪೌಂಡಿನಲ್ಲಿ ಸದ್ರಿ ಕೋರ್ಟು ಹುಕುಂ ಪ್ರಕಾರ ಪುನಃ ಏಲಂ ಮಾಡಲ್ಪಡುವದು. ಸದ್ರಿ ಆಸ್ತಿವಿವರವು ಡಿಸ್ಟ್ರಿಕ್ಟ್ ಕೋರ್ಟು ಸಬ್ ಕೋರ್ಟು ಮೊದಲಾದ ಕೋರ್ಟು ಬೋರ್ಡುಗಳಿಗೆ ಹಚ್ಚಿದ ನೋಟೀಸಿನಿಂದ ತಿಳಿಯುವದು.

ತಾ 5-7-1916. **K. PANDURANGA RAO,**
Receiver.

ನೋಟೀಸು.

ನಮ್ಮಲ್ಲಿ ಕಳೆದ ೫ ಯಾ ೬ ವರುಷಗಳಿಂದ ನೌಕರನಾಗಿದ್ದ ಜೋನ್ ಪಿಂಟೋ ಎಂಬವನನ್ನು ಆತನು ಮಾಡಿದ ಕೆಲವು ತಪ್ಪುಗಳ ಕಾರಣ ಕಳೆದ ನವಂಬರ ತಿಂಗಳಲ್ಲಿ ಕೆಲಸದಿಂದ ತೆಗೆದುಹಾಕಿರುತ್ತೇವೆ. ಆದ್ದರಿಂದ ನಮ್ಮ ಬಗ್ಗೆ ಈತನ ಕೂಡೆ ಯಾವ ವೈಯಕ್ತಿಕ ಲೇವಾದೇವಿಗಳನ್ನೂ ನಮ್ಮ ಗ್ರಾಹಕರೂ ಇತರರೂ ಮಾಡಿದ್ದಲ್ಲಿ ಅವುಗಳಿಗೆ ನಾವು ಜವಾಬ್ದಾರರಲ್ಲ ವೆಂಬುದನ್ನು ಈ ಮೂಲಕ ಸರ್ವರಿಗೂ ತಿಳಿಸಿರುತ್ತೇವೆ.

Yellore Rama Rao & Co.
Opticians, Mangalore

ಪ್ರಕಟಣೆ.

ನಮ್ಮ ಬೇಂಕಿನಲ್ಲಿ ವಹಿವಾಟಗಳಿಗೆ ಬೇಕಾದ ಐವಜು ಈಗ ಸಾಕಷ್ಟು ಇರುವದರಿಂದ ಇನ್ನು ಮುಂದೆ ನವೀನವಾಗಿ ನಿರಖೀವಣಾತಿ ಇಡಲು ಅಪೇಕ್ಷಿಸುವವರು ಮುಂಚಿತವಾಗಿ ಬೇಂಕಿನ ಕಾರ್ಯದರ್ಶಿಗಳಿಗೆ ಬರೆದು ತಿಳಿದು ಅನುಮತಿ ಪಡೆಯದ ವಿನಹಾ ನಿರಖೀವಣಾತಿಗಳು ಕಳುಹಿಸಿದರೆ ಯಾ ಮಂಗಳೂರಲ್ಲಿರುವ ಮದ್ರಾಸ್ ಬೇಂಕಿನಲ್ಲಿ ಕಟ್ಟಿದನಂತರ ತಿಳಿಸಿದರೆ ಅದರಿಂದ ಉಂಟಾಗುವ ನಷ್ಟಕ್ಕೆ ನಾವು ಜವಾಬ್ದಾರರಲ್ಲ ಎಂಬ ಸಂಗತಿ ಸರ್ವರೂ ತಿಳಿಯತಕ್ಕದ್ದು.

ದಕ್ಷಿಣಕನ್ನಡಾ ಸೆಂಟ್ರಲ್ ಕೋ-ಆಪರೇಟಿವ್ ಬೇಂಕಿನ ಆಫೀಸು, ಪುತ್ತೂರು. ತಾ. 3-7-16.	ಯಚ್. ಗಣಪತಿರಾವ್, ಕಾರ್ಯದರ್ಶಿ ಬಗ್ಗೆ.

ಕುಂಬಳೆ:— ಕಳೆದ ತಾ. ೨೬ನೇ ಸೋಮವಾರ ಬೆಳಿಗ್ಗೆ ಇಲ್ಲಿಂದ ೪ ಮೈಲುಗಳ ದೂರ ಕಣ್ಣೂರು ಗ್ರಾಮದ ನಾವೂರು ಎಂಬಲ್ಲಿಯ ಗುಡ್ಡದ ಒಂದಂಶವು ಕೆಳಮಗ್ಗಲಲ್ಲಿದ್ದ ತೋಟದ ಮೇಲೆ ಬಿದ್ದು ನಿವಾಸವಿಲ್ಲದ ಒಂದು ಮನೆಯೂ ಅನೇಕ ತೆಂಗು ಕಂಗು ಮೊದಲಾದ ಫಲಮರಗಳೂ ದೊಡ್ಡ ತೋಡು ಸಹಾ ಮುಚ್ಚಿ ಹೋಗಿ ಸುಮಾರು ೨ ಎಕ್ರೆಗಿಂತ ಜಾಸ್ತಿ ತೋಟವು ಮಾಯವಾಗಿರುತ್ತದೆ. ಗುಡ್ಡದಿಂದ ಬಹು ದೂರದವರೆಗೆ ಉರುಳಿದ ಕೆಲವು ಕಾಡುಗಿಡ ಮರಗಳು ನಾಗಬನ ಸಮೇತ ಕೆಳಗೆ ಸರಿಯಾಗಿ ನಿಂತಿರುವದರಿಂದ ಅಲ್ಲಿಯೆ ಹುಟ್ಟಿ ಬೆಳೆದವುಗಳಂತೆ ಕಾಣುವದಲ್ಲದೆ ಬಿದ್ದ ಮಣ್ಣು ಸಾಧಾರಣ ಸಮತಟ್ಟು (ಲೆವೆಲ್) ಆಗಿರುವದರಿಂದ ನೋಟಕರನ್ನು ವಿಸ್ಮಯಗೊಳಿಸುತ್ತದೆ. ಈ ಗುಡ್ಡದ ಅಂಚಿನ ಕೆಲಕಡೆಯಲ್ಲಿ ವ ಒಬ್ಬ ಮಾಪಿಳ್ಳೆಯ ಮನೆಸಮೀಪ ಸಹಾ ಬಿರುಕುಗಳು ಬಿಟ್ಟಿರುವದರಿಂದ ಸದರಿ ಮಾಪಿಳ್ಳೆಯು ವಕ್ಕಲು ತೆಗದು ಹೋಗಿರುವನು. ಈ ಆಸ್ತಿಯು ಸದರಿ ಗ್ರಾಮದ ಮಾಜಿ ರಾಮಕೃಷ್ಣ ತಿರುಕಂಜತ್ತಾಯರಿಗೆ ಶೇರಿರುತ್ತದೆ.

ತಾ. ೨೬ನೇ ರಾತ್ರಿ ಇಲ್ಲಿಯ ರಾ| ಶ್ರೀನಿವಾಸ ಕೃಷ್ಣನಾಯಕ್ ಕಂಪೆನಿಯವರ ಅಂಗಡಿ ಬೀಗಮುರಿದು ಕಳವುಮಾಡಿದ ೭ ಮುಡಿ ಉದ್ದು, ಮರುದಿನ ತಲಾಸಿಯಿಂದ ರೈಲ್ವೆ ಸ್ಟೇಶನ್ ಒಳಿ ಮೊಗೇರರ ದೈವಸ್ಥಾನದೊಳಗೆ ಶಿಕ್ಕಿರುವದರಿಂದ ಪೋಲೀಸಿನವರು ಇಬ್ಬರನ್ನು ಕೈದು ಮಾಡಿ ಕೊಂಡ್ಹೋಗಿರುವರು. ಈ ಕುರಿತು ಇನ್ನೂ ತಲಾಸಿ ನಡಿಯುವದಾಗಿ ತಿಳಿದುಬಂದಿದೆ. ಅದಲ್ಲದೆ ಪೇಟೆಯಲ್ಲಿ ಇನ್ನೆರಡು ಚಿಲ್ಲರೆ ಕಳವುಗಳು ನಡದಿರುತ್ತವಂತೆ!

ಪೋಲಿಸ್ ಸ್ಟೇಶನು ತೆಗದನಂತರ ಈ ಪ್ರಾಂತ್ಯದವರು ಅನುಭವಿಸುವ ಕಷ್ಟನಷ್ಟಗಳನ್ನು ವಿವರಿಸಿ ಇಲ್ಲಿ ಪೋಲಿಸ್ ಸ್ಟೇಶನ್ ಅತೀ ಅಗತ್ಯವೆಂಬದಾಗಿ ಶಹರಿನ ವ ಆಸಪಾಸ ನಿವಾಸಿಕರು ಮಹಾರಾಜಶ್ರೀ ತಹಸಿಲ್‌ದಾರರವರ ಮುಖಾಂತರ ಜಿಲ್ಲಾ ಕಲೆಕ್ಟರ್ ದೊರೆಗಳವರಿಗೆ ಮನವಿ ಮಾಡಿಕೊಂಡಿರುವದರಿಂದ ಇಲ್ಲಿಯ ಪೂರ್ಣ ಅನುಭವಸ್ಥರಾದ ಮಾನ್ಯ ತಹಸಿಲ್‌ದಾರರವರು ವ ಪೋಲೀಸ್ ಸರ್ಕಲ್ ಇನ್ಸ್‌ಪೆಕ್ಟರವರು ಸಹಾ ಈ ಪ್ರಾರ್ಥನೆಯನ್ನು ನೆರವೇರಿಸುವರಾಗಿ ಕೋರಿಕೆಯಿದೆ.

ಮಂಗಳೂರು

ಇಲ್ಲಿಯ ನಿರಾಶ್ರಿತ ಜನಸಹಾಯಕ ಸಂಘಕ್ಕೆ ಮ| ರಾ| ಕಾರ್ನಾಡ ಸದಾಶಿವರಾಯರು ಜೊಯಿಂಟ್ ಸೆಕ್ರೆಟರಿಯಾಗಿಯೂ ಮ| ರಾ| ಎಮ್. ಬಾಬುರವರು ಕಮಿಟಿ ಮೆಂಬರಾಗಿಯೂ ನೇಮಿಸಲ್ಪಟ್ಟಿದ್ದಾರೆ.

ರಾಮಭಂಡಾರಿಯವರ ಕೊಲೆಯ ಪತ್ತೆಗೆ ಮೂಲಕಾರಣನಾದ ಬಸಪ್ಪನಿಗೆ ಪೋಲೀಸ್ ಸುಪರಿಂಟೆಂಡೆಂಟ ದೊರೆಗಳವರು ೨೫ ರೂಪಾಯಿಗಳ ಇನಾಂ ಕೊಡಿಸಿರುತ್ತಾರೆ.

ಬೋಳಾರದ ಬಳಿ ಮುಂಡಪ್ಪ, ಚೂಡಪ್ಪ, ಅಮಿರುದ್ದೀನ ಮೊದಲಾದ ೭ ಜನರು ಕಿಟ್ಟಬೆಳ್ಳಾಡ್ತಿ ಎಂಬವಳ ಅಂಗಡಿಯಿಂದ ಹಲಸಿನಹಣ್ಣು ತೆಗೆದು ತಿಂದು ಅವಳು ದುಡ್ಡು ಕೇಳಿದಾಗ ಕೊಡದೆ ಅವಳ ಮೇಲೆ ಬಿದ್ದು ಹೊಡದರೆಂತಲೂ ಅವಳು ಕತ್ತಿ ತೆಗೆದು ಹಿಂದಕ್ಕೆ ಹೊಡಿದ ಪೆಟ್ಟಿನಿಂದ ಮುಂಡಪ್ಪನಿಗೆ ಕಠಿಣ ಜಖಂ ಆಗಿ ಆಸ್ಪತ್ರೆಯಲ್ಲಿ ಮೋದಂಡಸ್ಥಿತಿಯಲ್ಲಿರುವನೆಂದೂ ತಿಳಿಯುತ್ತೇವೆ.

IV ಸರ್ಕಲಿನ ಸುಪರಿಂಟೆಂಡೆಂಟಿಂಗ್ ಇಂಜಿನಿಯರರ ಪರ್ಸನಲ್ ಅಸಿಸ್ಟಾಂಟರಾಗಿದ್ದ ಸಬ್ ಇಂಜಿನಿಯರ್ ಮ| ರಾ| ವಿ. ಎಸ್. ಪಿ. ಅಯ್ಯರರವರು ಇಲ್ಲಿಗೆ ವರ್ಗಾಯಿಸಲ್ಪಟ್ಟಿರುವರು.

ಇಲ್ಲಿ ಸಬ್ ಇಂಜಿನಿಯರರಾಗಿದ್ದ ಮ| ರಾ| ಎನ್. ಮಾಧವ ಮೆನನರಿಗೆ ಕೊರನೂರಿಗೆ ವರ್ಗವಾಗಿಯದೆ.

ಉಡುಪಿ ಸಬ್ ಮೇಜಿಸ್ಟ್ರೇಟರಿಂದ ಸೆಶ್ಯನ್ಸಿಗೆ ಕಮಿಟ್ ಮಾಡಲ್ಪಟ್ಟ ಗರ್ಭಖೂನಿ ಮೊಕದ್ದಮೆಯು ಕಳೆದ ಸೋಮವಾರ ದಿನ ಇಲ್ಲಿಯ ಸೆಶ್ಯನ್ಸ್ ಕೋರ್ಟಿನಲ್ಲಿ ತನಕಿಗೆ ಪ್ರಾರಂಭವಾಯಿತು. ಈ ಮೊಕದ್ದಮೆಯಲ್ಲಿ ವೆಂಕೂ ಮತ್ತು ತಂಗೂ ಎಂಬ ಇಬ್ಬರು ಹೆಂಗಸರು ಇ. ಪಿ. ಕೋಡಿನ ೩೧೫ನೇ ಪ್ರಕರಣದ ಮೇಲೆ ಸೆಶ್ಯನ್ಸಿಗೆ ಕಮಿಟ್ ಮಾಡಲ್ಪಟ್ಟಿದ್ದರು. ೨ನೇ ಆಪಾದಿತಳಾದ ತಂಗು ಗರ್ಭಿಣಿಯಾಗಿದ್ದಳು. ಇದೇ ಕಳೆದ ತಾ. ೬-೩-೧೬ರಲ್ಲಿ ತಂಗೂ ಹೆಂಗಸು ಮನೆಯ ಹೊರಗೆ ಮಲಗಿರುವಾಗ ವೆಂಕೂ ಹೆಂಗಸು ಅಲ್ಲಿಗೆ ಬಂದು ಗರ್ಭ ಹೋಗಲಿಕ್ಕೆ ತಂಗೂ ಹೆಂಗಸಿಗೆ ಔಷಧ ಕೊಟ್ಟಳು. ಇದರಿಂದ ತಂಗೂ ಹೆಂಗಸಿಗೆ ಹೊಟ್ಟೆಯಲ್ಲಿ ನೋವು ಪ್ರಾರಂಭವಾಗಿ ತಾ. ೮-೩-೧೬ರಲ್ಲಿ ಗರ್ಭ ಬಿದ್ದುಹೋಯಿತು ಎಂಬದೇ ಸರಕಾರದ ಕಡೆಯ ವಾದವಾಗಿತ್ತು. ಜಡ್ಜರು ೨ನೇ ಆಪಾದಿತಳಾದ ತಂಗೂ ಹೆಂಗಸು ಅಪರಾಧಿ ಎಂದು ಅಭಿಪ್ರಾಯಪಟ್ಟು ಅವಳಿಗೆ ೬ ತಿಂಗಳ ಕಠಿಣ ಸಜೆ ವಿಧಿಸಿದರು.

ಕಾರ್ಕಳ ಸಬ್ ಮೇಜಿಸ್ಟ್ರೇಟರಿಂದ ಸೆಶ್ಯನ್ಸಿಗೆ ಕಮಿಟ್ ಮಾಡಲ್ಪಟ್ಟ ಕೇದಿ. ಶೀನಾ ಯಾನೆ ಲಕ್ಷ್ಮಣಾಚಾರಿಯ ಮೊಕದ್ದಮೆಯು ಅನಂತರ ತನಕಿಯಾಯಿತು. ಅಪರಾಧಿಗೆ ಹಿಂದೆ ೬ ಸಾರಿ ಶಿಕ್ಷೆಯಾಗಿತ್ತು. ಆಪಾದಿತನು ಕಾವಳ ಪಡೂರು ಗ್ರಾಮದ ಲಿಂಗಗೌಡರ ಮನೆಯಿಂದ ಇದೇ ಕಳೆದ ಮಾರ್ಚಿ ತಾ. ೧೬ನೇ ರಾತ್ರಿ ಒಂದು ತಾಂಬ್ರದ ಪಾತ್ರೆಯನ್ನು ಕಳವುಮಾಡಿದ್ದನೆಂತ ವಿಚಾರಣೆಗೆ ಗುರಿಯಾಗಿದ್ದನು. ಜೂರಿಯವರು ಆಪಾದಿತನು ತಪ್ಪಿತಸ್ಥನೆಂದು ಅಭಿಪ್ರಾಯಪಟ್ಟದ್ದರಿಂದ ಜಡ್ಜರು ಆಪಾದಿತಗೆ ೫ ವರ್ಷಗಳ ಕಠಿಣ ಸಜಾ ವಿಧಿಸಿದರು.

ಒಬ್ಬ ಬಾತ್ಮೀದಾರರಿಂದ:—ಇದೇ ಕಳೆದ ತಾರೀಕು ೨೫ನೇ ಆದಿತ್ಯವಾರ ದಿನ ಶ್ರೀ ಶಿವಭಕ್ತಿಯೋಗ ಪ್ರಾರ್ಥನಾ ಸಂಘದ ೫ನೇ ವಾರ್ಷಿಕ ವರ್ಧಂತಿ ಉತ್ಸವವು ಕೊಡಿಯಾಲ ಬೈಲಲ್ಲಿರುವ ಶ್ರೀ ಗೋಕರ್ಣನಾಥ ದೇವಸ್ಥಾನದಲ್ಲಿ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಆ ದಿನ ಬೆಳಿಗ್ಯೆ ಸಂಘದ ಸದಸ್ಯರೆಲ್ಲರೂ ಕೂಡಿ ದೇವತಾಪ್ರಾರ್ಥನಾ ಉಪನ್ಯಾಸಾದಿಗಳು ಆದನಂತರ ಅಧ್ಯಕ್ಷರಾದ ಮ| ರಾ| ರಾ| ಕಂಟ್ರಾಕ್ಟರ್ ಎಮ್. ದೂಮಪ್ಪನವರು ಸಂಘದ ಸದಸ್ಯರೆಲ್ಲರನ್ನೂ ಪಾನಕ ಫಲಾಹಾರಾದಿಗಳಿಂದ ತೃಪ್ತಿಪಡಿಸಿದರು. ಸಾಯಂಕಾಲ ೪ ಘಂಟೆಗೆ ಸರಿಯಾಗಿ ದೇವತಾಸ್ತೋತ್ರವಾದ ನಂತರ ಸಭಿಕರ ಅಪೇಕ್ಷೆ ಮೇರೆಗೆ ವಕೀಲರಾದ ಮ| ರಾ| ರಾ| ಅಡಿಗೆ ಶ್ರೀನಿವಾಸರಾಯರು ಸಭಾಧ್ಯಕ್ಷಸ್ಥಾನವನ್ನು ಅಲಂಕರಿಸಿದರು. ನಂತರ ಸಂಘದ ಕಾರ್ಯದರ್ಶಿ ರಾ| ಟಿ. ನಾಗಪ್ಪನವರಿಂದ ವಾರ್ಷಿಕ ವರದಿಯನ್ನೋದಲಾಯಿತು. ವರದಿಯಲ್ಲಿ ತೋರುವ ಪ್ರಕಾರ ಸದಸ್ಯರ ಸಂಖ್ಯೆಯು ಕಳೆದ ವರ್ಷಕ್ಕಿಂತ ಹೆಚ್ಚಿರುವದೆಂದೂ, ವಿದ್ಯಾರ್ಥಿ ವೇತನಗಳನ್ನು ಕೊಡುವ ಬಗ್ಯೆ ಸ್ಥಾಪಿಸೋಣಾದ ಫಂಡಿನ ಬಗ್ಯೆ ವಾಗ್ದತ್ತ ಮಾಡೋಣಾದ ಮೂಲಧನದ ಪೈಕಿ ಅರ್ಧಾಂಶ ಹಣವು ಇನ್ನೂ ವಸೂಲಾಗಲಿಕ್ಕೆ ಬಾಕಿ ಇರುತ್ತದಾಗಿಯೂ, ಮಾಸಿಕ ವಂತಿಗೆಯ ಪೈಕಿ ವಸೂಲಾದ ಐವಜಿಗಿಂತ ಹೆಚ್ಚಿನ ಐವಜು ಇನ್ನೂ ವಸೂಲಾಗಲಿಕ್ಕೆ ಬಾಕಿ ಇರುತ್ತದಾಗಿಯೂ ತೋರುತ್ತದೆ. ಸಂಘದ ಪುಸ್ತಕ ಭಂಡಾರಕ್ಕೆ ವೈದ್ಯ ಇಲಾಖೆಯ ಸಬ್ ಅಸಿಸ್ಟಾಂಟ್ ಸರ್ಜನರು-ಮ| ರಾ| ರಾ| ಎಮ್. ಸುಬ್ಬರಾಯರವರು ರೂಪಾಯಿ ೧೫ ಕ್ರಯಬಾಳುವ ಶ್ರೀ ಮದ್ಭಾಗವತ ಮಹಾ ಪುರಾಣದ ೫ ಸಂಚಿಕೆಗಳನ್ನೂ, ಸಂಘದ ಸದಸ್ಯರ ಪೈಕಿ ರಾ| ಕೆ. ರಾಘವೇಂದ್ರನವರು ಸ್ವರ್ಗಸ್ಥರಾದ ತನ್ನ ತಂದೆಯ ಸ್ಮರಣಾರ್ಥವಾಗಿ ರೂಪಾಯಿ ೩೦ ಕ್ರಯಬಾಳುವ ೧೮ ಇಂಗ್ಲಿಷು ವ ಕನ್ನಡ ಪುಸ್ತಕಗಳನ್ನೂ, ರಾ| ಎನ್. ಮುತ್ತಪ್ಪನವರು ರೂಪಾಯಿ ೨೫ ಕ್ರಯಬಾಳುವ ಇಂಗ್ಲಿಷು ವ ಕನ್ನಡದ ೫೯ ಪುಸ್ತಕಗಳನ್ನೂ ಉಚಿತವಾಗಿ ಕೊಟ್ಟಿರುವರೆಂತಲೂ, ದೇವಸ್ಥಾನ ಸಂಘದ ಅಧ್ಯಕ್ಷರೂ, ಪ್ರಾರ್ಥನಾ ಸಂಘದ ಪೋಷಕರೂ ಆದ ಮ| ರಾ| ರಾ| ಸಾಹುಕಾರ ಎಚ್. ಕೊರಗಪ್ಪನವರ ಅಳಿಯ, ಸಾಹುಕಾರ ಮ| ರಾ| ರಾ| ಬಿ. ಬಾಬುನವರು ತನ್ನ ಹಿರೇ ಮಗನ ೭ನೇ ಜನ್ಮದಿನದ ವರ್ಧಂತಿ ಉತ್ಸವದ ಸ್ಮರಣಾರ್ಥವಾಗಿ ರೂಪಾಯಿ ೧೫ ಕ್ರಯಬಾಳುವ ಮೇಜಿಯ ವಸ್ತ್ರ (Table Cloth) ಒಂದನ್ನು ಸಂಘದ ಉಪಯೋಗಕ್ಕಾಗಿ ಉಚಿತಕೊಟ್ಟಿರುವರೆಂತಲೂ ತಿಳಿದು ಬರುತ್ತದೆ. ಸಭಾಧ್ಯಕ್ಷರು ಅರ್ಥ ಗರ್ಭಿತವಾದ ಮತ್ತು ಅನೇಕ ಬುದ್ಧಿವಾದಗಳಿಂದೊಡಗೂಡಿದ ಕಾಲೋಚಿತ ಭಾಷಣದಿಂದ ಸಭಿಕರನ್ನು ತೃಪ್ತಿಗೊಳಿಸಿದರು. ಸಭಾಧ್ಯಕ್ಷರಿಗೂ, ಸಭಿಕರಿಗೂ, ನಮ್ಮ ಸಮುದಾಯಕ್ಕೂ ಮಂಗಲವನ್ನು ಬಯಸಿ, ಆಂಗ್ಲೇಯ ಸಾರ್ವಭೌಮರಿಗೆ ಪ್ರಕೃತ ಒದಗಿದ ಘೋರ ಯುದ್ಧದಲ್ಲಿ ಶೀಘ್ರ ಜಯವುಂಟಾಗುವಂತೆ ಭಗವಂತನನ್ನು ಪ್ರಾರ್ಥಿಸಿ ಸಭಿಕರನ್ನು ಪುಷ್ಪಾದಿಗಳಿಂದ ಸತ್ಕರಿಸಿ ಅಂದಿನ ಸಭಾ ಕಾರ್ಯವನ್ನು ಮುಕ್ತಾಯಗೊಳಿಸಲಾಯಿತು. ವಿದ್ಯಾರ್ಥಿವೇತನ ಫಂಡಿನ ಬಗ್ಯೆ ಈ ತನಕ ವಾಗ್ದತ್ತ ಮಾಡೋಣಾಗಿ ವಸೂಲು ಕೊಡಲಿಕ್ಕೆ ಬಾಕಿ ಇರತಕ್ಕ ಮಹಾನುಭಾವರೆಲ್ಲರೂ ತಂತಮ್ಮ ಮೂಲಧನ ವ ಮಾಸಿಕ ವಂತಿಗೆಯ ಐವಜನ್ನು ಬೇಗನೇ ಕೊಡುವದಲ್ಲದೆ ಉದಾರಗುಣವಂತರಾದ ಇತರ ಮಹನೀಯರೆಲ್ಲರೂ ಸಂಘದ ವ ತಮ್ಮ ಜಾತಿ ಸಮುದಾಯದ ಏಳಿಗೆಯನ್ನು ಬಯಸಿ ಸಾಧ್ಯವಾದಷ್ಟು ಧನ ಸಹಾಯವನ್ನು ಮಾಡಿ ಈ ಸಂಘವು ಊರ್ಜಿತವಾಗುವಂತೆ ಮಾಡುವದು ಶ್ರೇಯಸ್ಕರವಾಗಿರುತ್ತದೆ.

~~~~~~

ಪುತ್ತೂರು;—ವಿದ್ಯಾವರ್ಧಕ ಸಂಘದವರ ಪುತ್ತೂರು ಸೆಕೆಂಡರೀ ಪಾಠಶಾಲೆಯು ಜೂನ್ ತಾ. ೧ನೇ ಗುರುವಾರ ಪ್ರಾರಂಭವಾಯಿತು. ಅದೇ ದಿನ ೧೫೦ ಮಂದಿ ವಿದ್ಯಾರ್ಥಿಗಳು ದಾಖಲು ಆಗುವುದಕ್ಕೆ ಬಂದರು. ವಿದ್ಯಾರ್ಥಿಗಳನ್ನು ಕ್ಲಾಸುವಾರು ವಿಂಗಡಿಸುವ ಕೆಲಸವು ೪—೫ ದಿನ ಹಿಡಿಯಿತು. ತಾ. ೨೫ರೊಳಗೆ ಜುಮ್ಲಾ ಇನ್ನೂರು ಚಿಲ್ಲರೆ ಮಕ್ಕಳು ಸೇರಿದರು. ಇನ್ನೂ ಹುಡುಗರು ಬರುತ್ತಲೇ ಇರುವರು. ಈ ವರ್ಷ ೨ನೆಯ ಕ್ಲಾಸಿನಿಂದ II ಫಾರಂ ವರೆಗೆ ೫ ತರಗತಿಗಳನ್ನು ಇಟ್ಟಿರುತ್ತಾರೆ. ೨ನೆಯ ಕ್ಲಾಸಿನಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ೬೦ಕ್ಕೆ ಮೀರಿದುದರಿಂದ ಆ ತರಗತಿಯು ೨ ಭಾಗಗಳಾಗಿ ವಿಂಗಡಿಸಲ್ಪಟ್ಟಿದೆ.

ಉಪಾಧ್ಯಾಯರ ಸಂಖ್ಯೆಯು ಈಗ ೭. ಈ ಏಳು ಮಂದಿ ಉಪಾಧ್ಯಾಯರಲ್ಲಿ ೫ ಮಂದಿ ಟ್ರೈನ್ ಆದವರು; ಟ್ರೈನ್ ಆಗದವರಲ್ಲಿ ಒಬ್ಬರು ಬಿ. ಎ. ಪಾಸ್ ಆಗಿರುತ್ತಾರೆ. ಇನ್ನೊಬ್ಬರು ಇಂಟರ್‌ಮಿಡಿಯೆಟ್ ಪರೀಕ್ಷೆಗೆ ಕಲಿತಿರುತ್ತಾರೆ. ಇವರಲ್ಲದೆ ಚಿತ್ರಲೇಖನವನ್ನೂ ವ್ಯಾಯಾಮವನ್ನೂ ಕಲಿಸುವುದಕ್ಕೆ ಯೋಗ್ಯರಾದ ಬೇರೆ ಉಪಾಧ್ಯಾಯರಿರುವರು. ಸ್ಥಳಸಂಕೋಚದ ದೆಸೆಯಿಂದ ಜುಲೈ ತಾ. ೧ರಿಂದ ಹೆಚ್ಚಿಗೆ ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಳ್ಳುವುದು ಅನುಮಾನಕರ. ಬಂಟರ ಹುಡುಗರ ವಿಷಯದಲ್ಲಿ ಸ್ವಲ್ಪ ರಿಯಾಯಿತಿ ಮಾಡಬಹುದೆಂದು ತೋರುತ್ತಿದೆ. ಇನ್ನು ಪುತ್ತೂರಲ್ಲಿ ಸೆಕಂಡರಿಸ್ಕೂಲಿನ ಅಗತ್ಯವು ಎಷ್ಟುಮಟ್ಟಿಗೆ ಇದೆ ಎಂಬುದನ್ನು ಹೇಳಬೇಕಾದ ಆವಶ್ಯಕವಿಲ್ಲ.

~~~~~~

ಬಂಟರ ಯಾನೆ ನಾಡವರ ಸಂಘ.

~~~~~~

ಕಳೆದ ಮೇ ತಾ. ೨೨ರ ನಂತರ ಈ ವರೆಗೆ ವಸೂಲಾದ ಹಣದ ವಿವರ:—

ವಂತಿಗೆ.

1. (ಮಂಗಳೂರು) ಕಾಣೆಕರೆಯ ತಿಮ್ಮಪ್ಪಮಲ್ಲಿಯವರಿಂದ (೨ನೇ ಕಂತು. . . ರೂ. 20—0—0
2. ,, ಪೇಜಾವರ ಪಾದೆ ಅಂತಪ್ಪ ಶೆಟ್ರಿಂದ . . . ರೂ. 25—0—0
2. ,, ,, ಚಿಟ್ಟಿಕರ ಸಂಕಪ್ಪರೈಗಳಿಂದ (೧ನೇ ಕಂತು) . . . ರೂ. 20—0—0

65—0—0

ವಿವಾಹದ ಬಗ್ಯೆ.

1. (ಮಂಗಳೂರು) ಕಾಣೆಕರೆಯ ತಿಮ್ಮಪ್ಪಮಲ್ಲಿಯರಿಂದ . . . . . ರೂ. 5—0—0
2. ,, ಅತ್ತಾವರ ಸಾಂತಾಳ್ವರ ಮುಖಾಂತರ ಗ್ರಾಮದ ಮೂರು ಮನೆಯವರಿಂದ ರೂ. 3—0—0

ಮರಕಡ ಸುಬ್ಬಯ್ಯ ಸೆಟ್ರ ಮುಖಾಂತರ:—

3. (ಕಾರ್ಕಳ) ಮಿಜಾರ ಗುತ್ತು ತಿಮ್ಮಯ್ಯ ಆಳ್ವರಲ್ಲಿ . . . . . ರೂ. 15—0—0
4. ,, ಪುತ್ತಿಗೆ ಸಾಮಿಣಿಚಿಟ್ಟು ಮನೆಯಲ್ಲಿ ರೂ. 17—0—0
5. ,, ಮರಕಡ ಅಪ್ಪುಶೆಟ್ರು ವಗೈರೆಯರಿಂದ ರೂ. 2—8—0
6. (ಉಡುಪಿ) ಬ್ರಹ್ಮಾವರ ಗುಡ್ಡೆಚಿಟ್ಟು ಶಿವಪ್ಪನಾಯ್ಕರಿಂದ . . . . . ರೂ. 12—0—0
7. ,, ಕಟ್ಪಾಡಿ ಲಿಂಗಪ್ಪ ಬಲ್ಲಾಳರ ಮನೆಯಲ್ಲಿ . . . . ರೂ. 26—0—0
8. (ಕುಂದಾಪುರ) ಕರೂರು ಚಿಕ್ಕಯ ಶೆಟ್ರ ಮನೆಯಲ್ಲಿ . . . . . ರೂ. 20—0—0

ರೂ. 100—0—0

ಮಂಗಳೂರು.
26—6—16

ಅ. ಬಾಲಕೃಷ್ಣ ಶೆಟ್ಟಿ.
ಕೋಶಾಧಿಕಾರಿ.

P. D. LIMA.

Dental Surgeon, Mangalore.

ಇವರು ಈಗ ತಾನೇ ಸರ್ಕೀಟಿನಿಂದ ಹಿಂತೆರಳಿ ಬಂದಿರುವರು. ಅಮೇರಿಕದಿಂದ ಭಾರೀ ಕೃತಕ ದಂತಗಳನ್ನು ತರಸಿಕೊಂಡಿಟ್ಟಿರುವರು. ಈ ಸುಸಮಯವನ್ನು ಕಳಕೊಳ್ಳಬೇಡಿರಿ. ಮಿತವಾದ ದರದಲ್ಲಿ ಹಲ್ಲುಗಳನ್ನು ಸರಿಪಡಿಸಿಕೊಡುವರು.

ಪಿ. ಡಿ. ಲಿಮಾ,
ದಂತ ವೈದ್ಯರು, ಒಡೆಯರ ಶಾಪಿನ ಬಳಿ,
ಮಂಗಳೂರು.
~~~~~~

1916-17ನೇ ಇಸವಿಯ ಇಂಡಿಯಾ ಗವರ್ನಮೆಂಟ್ ಕನ್‌ವರ್ಶನ್ ಲೋನ್ ಎಂಬ ಮಾರ್ಪಡಿಸಬಹುದಾದ ಸಾಲವು.

ಪೋಸ್ಟ್ ಆಫೀಸು ಉಪಭಾಗವು.

1931ನೇ ಇಸವಿಗೆ ಮುಂಚಿತವಾಗಿ ಸಲ್ಲಿಸಲ್ಪಡತಕ್ಕದ್ದಲ್ಲದ ಪರಂತು 1936 ನೇ ಇಸವಿಯೊಳಗಾಗಿ ನೂರಕ್ಕೆ ನೂರರಂತೆ ಪೂರಾ ವಸೂಲಾತಿಯಾಗತಕ್ಕ ಸಾಲವು.

ಸಾಲಿಯಾನಾ ವರ್ಷ ಒಂದರ ಸೇಕಡಾ 4 ರ ದರದ ಬಡ್ಡಿಯು ಅರ್ಧವರ್ಷಕ್ಕೊಮ್ಮೆ ಎಂದರೆ ಎಪ್ರೀಲ್ 1ನೇ ತಾರೀಕಿನಲ್ಲಿಯೂ ಮತ್ತು ಅಕ್ಟೋಬರು 1 ನೇ ತಾರೀಕಿನಲ್ಲಿಯೂ ಸಲಾಯಿಸಲ್ಪಡುವುದು.

ಸೇಕಡಾ 3 ರಂತೆ ಮತ್ತು $3\frac{1}{2}$ ಯಂತೆ ರೂಪಾಯಿ ನಾಣ್ಯದಲ್ಲಿರುವ ಸಾಲಗಳನ್ನು ಮಾರ್ಪಡಿಸಿಕೊಳ್ಳಲು ಅರ್ಜಿದಾರರು ಅರ್ಹರಾಗಿರುತ್ತಾರೆ.

ಅರ್ಜಿಗಳು 100 ರೂಪಾಯಿ-ಯಾ-ಅದರ ಅಪವರ್ತ್ಯಗಳ ಬಗ್ಗೆ (ಎಂದರೆ 200, 300 ಈ ಮೇರೆಗೆ) ಇದ್ದು 5,000 ರೂಪಾಯಿಗಳಿಗೆ ಮೀರಿರ ಕೂಡದು ಮತ್ತು ಸೇವಿಂಗ್ಸ್ ಬ್ಯಾಂಕ್ ಕೆಲಸವು ನಿರ್ವಹಿಸಲ್ಪಡುವ ಪ್ರತಿಯೊಂದು ಟಪ್ಪಾಲ್ ಆಫೀಸಿನಲ್ಲಿಯೂ 1916ನೇ ಇಸವಿಯ ಜೂನ್ 14ನೇ ತಾರೀಖಿನಿಂದ 1916ನೇ ಇಸವಿಯ ಸಪ್ಟಂಬರ್ 25ನೇ ತಾರೀಖಿನ (ಇದು ಸೇರಿ) ವರೆಗೆ ಅವು ಅಂಗೀಕರಿಸೋಣಾಗುವವು. ಸೇವಿಂಗ್ಸ್-ಬ್ಯಾಂಕ್ ಡಿಪಾಜಿಟರನಾಗಿದ್ದರೂ ಅಲ್ಲದಿದ್ದರೂ ಸರಿಯೇ, ಯಾತನೇ ಆದರೂ ಅರ್ಜಿ ಮಾಡಬಹುದು.

ಎಷ್ಟು ಮೊಬಲಗುಗಳಿಗೆ ಅರ್ಜಿಮಾಡಲ್ಪಡುತ್ತದೋ ಆ ಪೂರಾ ಮೊಬಲಗುಗಳನ್ನು ಅರ್ಜಿಗಳ ಸಂಗಡ ಡಿಪಾಜಿಟು ಮಾಡತಕ್ಕದ್ದು ಮತ್ತು ಅಷ್ಟೇ ಮೊಬಲಗುಗಳ (ಗವರ್ನಮೆಂಟ್ ಸೆಕ್ಯೂರಿಟಿ) ಪತ್ರವು ಅರ್ಜಿದಾರರಿಗೆ ಕೊಡಲ್ಪಡುವುದು. ಡಿಪಾಜಿಟುಗಳು ರೊಕ್ಕವಾಗಿ ಕೊಡಲ್ಪಡಬಹುದು ಅಥವಾ ಪೂರಾ ಯಾ ಒಂದು ಭಾಗವು ಪ್ರಕೃತವಿರುವ ಸೇವಿಂಗ್ಸ್ ಬ್ಯಾಂಕ್ ಲೆಕ್ಕಗಳಿಂದ ವಿತ್‌ಡ್ರಾಯಲ್ ಯಾನೆ ಈಸುಕೊಳ್ಳುವದರ ಮೂಲಕವಾಗಿ ಕೊಡಲ್ಪಡಬಹುದು.

ಟಪ್ಪಾಲು ಆಫೀಸಿನ ಮುಖಾಂತರ ಪಡೆದ ಮತ್ತು ಟಪ್ಪಾಲು ಆಫೀಸಿನ ಅಧಿಕಾರಿಗಳ ವಶದಲ್ಲಿಯೇ ಇಡಲ್ಪಟ್ಟ ಹೊಸ ಸಾಲಪತ್ರಗಳ ಬಡ್ಡಿಯ ಮೇಲೆ ಇನ್‌ಕಮ್‌ಟ್ಯಾಕ್ಸು ಹೊರಿಸೋಣಾಗಲಿಕ್ಕಿಲ್ಲ.

ಅರ್ಜಿದಾರರಿಗೆ, ರೂಪಾಯಿ ನಾಣ್ಯದಲ್ಲಿರುವ ಇಂಡಿಯಾ ಗವರ್ನಮೆಂಟಿನವರ ಸೇಕಡಾ $3\frac{1}{2}$ ಬಡ್ಡಿಯ ಸೆಕ್ಯೂರಿಟಿ ಪತ್ರಗಳನ್ನು ಹೊಂದಿದವರು ಅವುಗಳ ಅಂಕಿತ ಮೌಲ್ಯದ ಸೇಕಡಾ 96 ರೂಪಾಯಿ ಪ್ರಕಾರವೂ ಅಥವಾ ಸೇಕಡಾ 3ರ ಬಡ್ಡಿಯ ಸೆಕ್ಯೂರಿಟಿ ಪತ್ರಗಳನ್ನು ಹೊಂದಿದವರು ಅವುಗಳ ಅಂಕಿತ ಮೌಲ್ಯದ ಸೇಕಡಾ 81ರ ಪ್ರಕಾರವೂ, ಅವರು ಪಡೆಯುವ ಹೊಸ ಸಾಲದ ಮೊಬಲಗಿಗೆ ಸಮಾನವಾಗುವಷ್ಟು ಮೊಬಲಗಿನ ಪ್ಲಟ್ಟಿಗೆ ಪರಭಾರೆಮಾಡಿ ಹೊಸ ಸಾಲವಾಗಿ ಮಾರ್ಪಡಿಸುವ ಹಕ್ಕುಗಳು ಕೊಡಲ್ಪಡುವವು.

ಮಾರ್ಪಡಿಸುವ ಹಕ್ಕುಗಳುಳ್ಳವರು ಮಾರ್ಪಡಿಸುವ ಬಗ್ಗೆ ಮಾಡುವ ಅರ್ಜಿಗಳು, 1916ನೇ ಇಸವಿಯ ಅಕ್ಟೋಬರ್ 16ನೇ ತಾರೀಖಿನಿಂದ 1917ನೇ ಇಸವಿಯ ಜನವರಿ 16ನೇ ತಾರೀಖಿನ (ಇದು ಸೇರಿ) ವರೆಗೆ ಅಂಗೀಕರಿಸಲ್ಪಡುವುವು. ಮಾರ್ಪಡಿಸೋಣಾಗುವ ಸೆಕ್ಯೂರಿಟಿ ಪತ್ರಗಳ ಬಾಬತು 1916ನೇ ಇಸವಿಯ ಸಪ್ಟಂಬರು 30 ತಾರೀಖಿನ ವರೆಗಿನ ಬಡ್ಡಿಯು ಮಾರ್ಪಡಿಸುವ ಕಾಲದಲ್ಲಿ ರೊಕ್ಕವಾಗಿ ಸಲಾಯಿಸಲ್ಪಡುವುದು. ಇವುಗಳ ಬದಲಾಗಿ ಸಾದರುಮಾಡಲ್ಪಟ್ಟ ಹೊಸ ಸಾಲದ ಮೇಲಣ ಬಡ್ಡಿಯು 1916ನೇ ಇಸವಿಯ ಅಕ್ಟೋಬರ 1ನೇ ತಾರೀಖಿನಿಂದ ಎಣಿಸಲ್ಪಡುವುದು.

ತಪಸೀಲು ಮಾಹಿತಿ ಅಡಗಿರುವ ನೋಟಿಸಿನ ನಕಲುಗಳು ಮತ್ತು ಅರ್ಜಿಯ ಫಾರಂಗಳನ್ನು ಸೇವಿಂಗ್ಸ್ ಬ್ಯಾಂಕ್ ಕೆಲಸವು ನಿರ್ವಹಿಸಲ್ಪಡುವ ಯಾವ ಪೋಸ್ಟಾಫೀಸಿನಿಂದಾದರೂ ಪಡೆಯಬಹುದು. ಬೇಕಾದರೆ ಇದಕ್ಕೆ ಅನುಬಂಧಿಸಿರುವ ಅರ್ಜಿಯ ಫಾರಮನ್ನೇ ಉಪಯೋಗಿಸಬಹುದು.

1916-1917ನೇ ಇಸವಿಯ ಇಂಡಿಯಾ ಗವರ್ನಮೆಂಟಿನವರು ತೆಗೆಯುವ ಸೇಕಡಾ 4ರ ಬಡ್ಡಿಯ ಕನ್‌ವರ್ಶನ್ ಲೋನ್ ಎಂಬ ಮಾರ್ಪಡಿಸಬಹುದಾದ ಸಾಲದ ಬಗ್ಗೆ ಪೋಸ್ಟು ಆಫೀಸುಗಳ ಪರಿಮುಖವಾಗಿ ಮಾಡುವ ಅರ್ಜಿಯ ನಮೂನೆ.

(ಸೇವಿಂಗ್ಸ್ ಬ್ಯಾಂಕ್ ಕೆಲಸವು ನಿರ್ವಹಿಸಲ್ಪಡುವ ಯಾವದೊಂದು ಪೋಸ್ಟ್ ಆಫೀಸಿನಲ್ಲಿ 1916ನೇ ಇಸವಿಯ ಸಪ್ಟಂಬರ 25ನೇ ತಾರೀಖು ದಾಟಿಹೋಗುವದರೊಳಗಾಗಿ ಹಾಜರು ಮಾಡಲ್ಪಡಬೇಕು. ಅವಶ್ಯವಿದ್ದರೆ ಇದೇ ಫಾರ್ಮನ್ನು ಕತ್ತರಿಸಿ ಉಪಯೋಗಿಸಬಹುದು).

ಅಕ್ಷರ ಸ್ಪಷ್ಟವಾಗಿ ಬರೆಯಬೇಕು.

ನಾದ

ನಾನು 1916ನೇ ಇಸವಿಯ ಜೂನ್ 8ನೇ ತಾರೀಕಿನ ಇಂಡಿಯಾ ಗಜೇಟಿನ ವಿಶೇಷ ಸಂಚಿಕೆಯಾಗಿ ಪ್ರಾಯಿಷ್ ಮಾಡಲ್ಪಟ್ಟ ಇಸ್ತಿಹಾರಿನಲ್ಲಿ ಪ್ರಕಟಿಸಲ್ಪಟ್ಟ 1916-17ನೇ ವರ್ಷದ ಸೇಕಡಾ 4ರ ಬಡ್ಡಿಯ ಕನ್‌ವರ್ಶನ್ ಲೋನ್ ಎಂಬ ಮಾರ್ಪಡಿಸಬಹುದಾದ ಸಾಲದ ಪೈಕಿ ರೂ. ಬಗ್ಗೆ ಈ ಮೂಲಕ ದರಖಾಸ್ತು (ಅರ್ಜಿ) ಮಾಡುತ್ತೇನೆ.

ನಾನು ದರಖಾಸ್ತು ಮಾಡಿದ ಸಾಲದ ಮೊಬಲಗಿನ ಬಗ್ಗೆ,

(1) ನಾನು ರೊಕ್ಕವಾಗಿ ರೂ. .... / ಚೆಕ್ ಮೂಲವಾಗಿ ರೂ. .... ಈ ಮೂಲಕ ಒಪ್ಪಿಸುತ್ತೇನೆ.

(2) ಪೋಸ್ಟು ಆಫೀಸು ಸೇವಿಂಗ್ಸ್ ಬ್ಯಾಂಕಿನಲ್ಲಿ ನನ್ನ ಲೆಕ್ಕದಲ್ಲಿ ಜಮೆ ಇರುವ ಮೊಬಲಗಿನಿಂದ ರೂ. .... ಈ ಬಗ್ಗಾಗಿ ಈಸುಕೊಳ್ಳಲು ನಾನು ಅಧಿಕಾರಗೊಳಿಸುತ್ತೇನೆ ಮತ್ತು ಪಾಸ್‌ಬೂಕನ್ನು ಇದರೊಂದಿಗೆ ಲಗತ್ ಮಾಡಿದ್ದೇನೆ.

ಜುಮಲಾ ...

(ರೊಕ್ಕವಾಗಿ ಯಾ ಚೆಕ್ ಮೂಲವಾಗಿ ಪಾವತಿಮಾಡಿದ ಮೊಬಲಗುಗಳನ್ನು ಮತ್ತು ಸೇವಿಂಗ್ಸ್ ಬ್ಯಾಂಕ್ ಲೆಕ್ಕದಿಂದ ಈಸುಕೊಂಡು ಪಾವತಿಮಾಡಿದ ಮೊಬಲಗುಗಳನ್ನು ಆ ಬಗ್ಗೆ ಬಿಟ್ಟ ಸ್ಥಳಗಳಲ್ಲಿ ಪ್ರತಿಪ್ರತ್ಯೇಕವಾಗಿ ಕಾಣಿಸತಕ್ಕದ್ದು. ಅನಾವಶ್ಯಕವಾದ ವಾಕ್ಯಗಳು ಯಾವುವೂ ಇದ್ದರೆ ಅವನ್ನು ಹೊಡೆದುಬಿಡತಕ್ಕದ್ದು.)

A. ನನ್ನ ಬಳಿಯಿಂದ ಅಂಗೀಕರಿಸೋಣಾದ ಸಾಲದ ಮೊಬಲಗನ್ನು ನನ್ನ ಬಗ್ಗಾಗಿ ಪೋಸ್ಟ್ ಮತ್ತು ಟೆಲಿಗ್ರಾಫ್ ಇಲಾಖೆಯ ಅಕೌಂಟಾಂಟ್ ಜನರಲ್‌ರವರು ಇಟ್ಟುಕೊಳ್ಳಬಹುದಾಗಿ ಮತ್ತು ಆ ಬಾಬತು ಬಡ್ಡಿಯನ್ನು--

(i) .... ಪೋಸ್ಟ್ ಆಫೀಸಿನಲ್ಲಿ ತೆರೆದಿರುವ ನನ್ನ ಪ್ರಕೃತದ ನಂ. .... ನೇ ಸೇವಿಂಗ್ಸ್ ಬ್ಯಾಂಕ್ ಲೆಕ್ಕದಲ್ಲಿ, (ಅರ್ಜಿದಾರನಿಗೆ ಈ ಮೊದಲೇ ತೆರೆಯಲ್ಪಟ್ಟ ಲೆಕ್ಕವು ಇಲ್ಲದಿದ್ದರೆ (i)ನೇ ಕ್ಲಾಜನ್ನು ಹೊಡೆದುಬಿಡತಕ್ಕದ್ದು).

(ii) .... ಪೋಸ್ಟ್ ಆಫೀಸಿನಲ್ಲಿ ಈ ಬಗ್ಗಾಗಿ ತೆರೆಯಲ್ಪಡುವ ಒಂದು ಸೇವಿಂಗ್ಸ್ ಬ್ಯಾಂಕ್ ಲೆಕ್ಕದಲ್ಲಿ, ಜಮಾ ದಾಖಲು ಮಾಡಬೇಕಾಗಿ ಅಪೇಕ್ಷಿಸುತ್ತೇನೆ.

B. ನನ್ನ ಬಳಿಯಿಂದ ಅಂಗೀಕರಿಸೋಣಾದ ಸಾಲದ ಮೊಬಲಗಿನ ಬಗ್ಗೆ .... ಖಜಾನೆಯಲ್ಲಿ ಬಡ್ಡಿ ಪಾವತಿಯಾಗುವಂತೆ ನಮೂದಿಸಲ್ಪಟ್ಟ ಈ ಕೆಳಗಿನ ಮೌಲ್ಯದ ಪ್ರಾಮಿಸರಿ ನೋಟುಗಳು ನನಗೆ ಕೊಡಲ್ಪಡಬೇಕಾಗಿ ಅಪೇಕ್ಷಿಸುತ್ತೇನೆ.

(A ಅಥವಾ B ಕಲಮನ್ನು ಭರಾಯಿಸಿ ಉಳಿದದ್ದನ್ನು ಹೊಡೆದುಬಿಡತಕ್ಕದ್ದು.)

1916-17ನೇ ಇಸವಿಯ ಸೇಕಡಾ 4ರ ಬಡ್ಡಿಯ ಕನ್‌ವರ್ಶನ್ ಲೋನ್ ಎಂಬ ಮಾರ್ಪಡಿಸಬಹುದಾದ ಸಾಲದ ಬಗ್ಗೆ ನನ್ನಿಂದ ದರಖಾಸ್ತು ಮಾಡಲ್ಪಟ್ಟ ಮೊಬಲಗಿಗೆ ಸಮಾನವಾದಷ್ಟು ಮೊಬಲಗಿನಮಟ್ಟಿಗೆ ಸೇಕಡಾ $3\frac{1}{2}$ ಯಾ 3ರ ಬಡ್ಡಿಯ ರೂಪಾಯಿ ನಾಣ್ಯದಲ್ಲಿರುವ ಇಂಡಿಯಾ ಗವರ್ನಮೆಂಟಿನವರ ಸೆಕ್ಯೂರಿಟಿ ಪತ್ರಗಳನ್ನು ಮಾರ್ಪಡಿಸಲು ಸ್ವಾತಂತ್ರ್ಯಗೊಳಿಸುವ ಒಂದು ಹುಕುಮು ಯಾನೆ ಅಧಿಕಾರಪತ್ರವನ್ನು ಸಹಾ ನನಗೆ ಕೊಡಿಸಬೇಕಾಗಿ ಅಪೇಕ್ಷಿಸುತ್ತೇನೆ.

ಹೆಸರು .... ವಿಳಾಸ .... ತಾರೀಖು ....

ಪೋಸ್ಟ್ ಆಫೀಸಿನಲ್ಲಿ ಹಾಜರು ಮಾಡಿದ ತಾರೀಖು ....

(ಅಂಗೀಕರಿಸುವ ಪೋಸ್ಟ್ ಮಾಸ್ತರನಿಂದ ನಮೂದಿಸಲ್ಪಡತಕ್ಕದ್ದು).

ರಜಿಸ್ತರು ನಂ. ....

(ಹೆಡ್ ಪೋಸ್ಟ್ ಮಾಸ್ತರನಿಂದ ನಮೂದಿಸಲ್ಪಡತಕ್ಕದ್ದು).

ಹೆಡ್ ಆಫೀಸು ಸ್ಟಾಂಪು.

ಎಲ್. ಡೇವಿಡ್ಸನ್,
ಆಕ್ಟಿಂಗ್ ಚೀಫ್ ಸೆಕ್ರೆಟರಿ.

ಆರ್. ಮಾರ್ಟಿನ್ಸರ ಮಾತ್ರೆಗಳು ನಂ. 2.

ಡಮಿಯಾನ ಮತ್ತು ಕಂಪೌಂಡ್ ಫೊಸ್ಫರಸ್ ಕೂಡಿರುವ ಈ ಮಾತ್ರೆಗಳು ದಿವ್ಯವಾದ ಏಳು ಔಷಧಿಗಳಿಂದ ತಯಾರಿಸಲ್ಪಟ್ಟಿವೆ. ಇದು ಕೂಡಲೇ ಗುಣಪಡಿಸುವ ಶಕ್ತಿಯುಳ್ಳದ್ದಾಗಿದ್ದು ಮಲಬದ್ಧತೆ, ಬಾಡಿದ ಮುಖ, ತಲೆಶಿಡಿತ; ಅಜೀರ್ಣ, ಸ್ನಾಯುಗಳ ಬಲಹೀನತೆ, ಸರ್ವ ವಿಧದ ಹೆಂಗಸರ ಬಲಹೀನತೆ; ಮೊದಲಾದ ರೋಗಗಳಿಗೆ ಸಿದ್ಧೌಷಧವು. ಅದಲ್ಲದೆ ಮೂತ್ರ ರೋಗ, ಭ್ರಾಂತಿ, ಗುಂಡಿಗೆ ಬಡಿಯೋಣ, ರಾತ್ರಿ ಬೆವರುವುದು, ಈ ರೋಗಗಳಿಗೂ ಗುಣಕಾರಿ. ಮೆದುಳು ಕೆಲಸ ಮಾಡುವವರಿಗೆ ಅತ್ಯುಪಕಾರಿ. ಪ್ರತಿ ಬಾಟ್ಲಿಯಲ್ಲಿ ೪೦ ಮಾತ್ರೆಗಳಿವೆ. ಬಾಟ್ಲಿಗೆ ರೂ. ೧—೮—೦.

ಆರ್. ಮಾರ್ಟಿನ್ಸರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮಲು ಗೂರಲು, ಶ್ವಾಸ, ಸೀತ, ನೆಗಡಿ, ಗಂಟಲುನೋವು, ಎದೆ ನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನೆಮಾಡಿ ಪರೀಕ್ಷಿಸಿ ನೋಡಲಿ. ಆನಂತರ ಯಾವ ಬೇರೆ ಔಷಧಕ್ಕೂ ಗಮನ ಕೊಡದಿರುವರಿ. ಎಲ್ಲಾ ವಿಧವಾದ ಕೆಮ್ಮಲಿಗೂ ರಾಣಿಯಾಗಿಯೂ, ಎಡೆಗೆ ಬಲಕೊಟ್ಟು ಮೇಲ್ಕಂಡ ರೋಗಗಳು ತಲೆಯಿಕ್ಕದಂತೆ ಮಾಡುತ್ತವೆ.

೬೦ ಮಾತ್ರೆಗಳ ಸೀಸೆ ಒಂದಕ್ಕೆ ರೂ. ೧—೦—೦.

ಆರ್. ಮಾರ್ಟಿನ್ಸರ ಮೇಹರೋಗಕ್ಕೆ ಮಿಶ್ರಣ.

ಗಂಡಸರು ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡ ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ ಅಥವಾ ಹೊಸತಾಗಿದ್ದರೂ ಸರಿ. ಬಿಳಿಪು ಹೋಗುವುದು, ಉರಿಯುವುದು ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೇ ಮೂತ್ರ ಉರಿಯುವುದನ್ನು ನಿಲ್ಲಿಸಿ, ಮೂತ್ರವು ಬೆಳುಪಾಗಿ ನಿರ್ಮಲವಾಗುವುದಲ್ಲದೆ ರೋಗದ ಪಟ್ಟನ್ನೇ ಅಡಗಿಸಿಬಿಡುತ್ತದೆ. ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ. ಬೆಲೆ ಸೀಸೆ ಒಂದಕ್ಕೆ ರೂ. ೧—೮—೦. ವಿಳಾಸ:—

ಆರ್. ಡಿ. ಕಟ್ಲೆ ಮತ್ತು ಕಂಪೆನಿ, **R. D. kately & Co.**
ನಂಬ್ರ ಡಿ. ಫ್ರೆಯರ್ ರೋಡ್, *No. D. Frere Road,*
ಮುಂಬಯಿ. *Near Wright & Co. Fort Bombay.*

ಮೈಸೂರು ಊದಬತ್ತಿಗಳು.

ಇಂಡಿಯಾ ದೇಶದಲ್ಲಿ ನಡದಿರುವ ಯಗ್ಜಬೀಶನ್‌ಗಳಲ್ಲಿ ಸುಮಾರು 95 ಸರ್ಟಿಫಿಕೇಟುಗಳನ್ನು 32 ಮೆಡಲುಗಳನ್ನು ಹೊಂದಿರುವ ನಮ್ಮ ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕಸಮಯದಲ್ಲಿಯೂ ರತಿಕರ ಉಲ್ಲಾಸ ಸಮಯದಲ್ಲಿಯೂ ಸಹ ಅತ್ಯವಶ್ಯಕವಾದ್ದರಿಂದ ಪ್ರತಿ ಒಬ್ಬರು ಈ ಕೆಳಗೆ ಇರುವ ಸುಗಂಧ ದ್ರವ್ಯಗಳನ್ನು ತರಿಸಿ ಆನಂದ ಹೊಂದುವದಲ್ಲದೆ ಸ್ವದೇಶ ವ್ಯಾಪಾರಕ್ಕೂ ಪ್ರೋತ್ಸಾಹಿಸುವರೆಂದು ನಂಬಿರುತ್ತೇವೆ.

ಊದಬತ್ತಿಗಳು 24 ರೂ. ತೂಕದ ಶೇರು 1ಕ್ಕೆ ರೂ. 12-0-0, 5-0-0, 3-0-0, 2—8—0, 1—4—0, 1—0—0

ಅರಗಜ ಮತ್ತು ಜಿಲ್ಲೆಗಳು ತೊಲಾ 1ಕ್ಕೆ 2—0—0, 1—0—0, 0—12—0, 0—6—0

ಸುಗಂಧಿ ಕಾಡುರ್ 1ಕ್ಕೆ 0—1—0. **ಬಾಲಗ್ರಹ** ದೂಪ ಟನ್ 1ಕ್ಕೆ 0—8—0. **ಸುವಾಸನೇ ಸುಣ್ಣ** ಶೀಸೆ 1ಕ್ಕೆ 0-2-0, ಇದಲ್ಲದೆ ಇನ್ನು **ಅನೇಕ ತರಹ ಸೆಂಟ್ಸು**ಗಳು, ಯಸೆನ್ಸ್‌ಗಳು, ಸುಗಂಧ ದ್ರವ್ಯಗಳು, ಬೆಳ್ಳಿಯಿಂದ ತಯಾರಿಸಿದ ಸಣ್ಣ ಸಣ ವಿಗ್ರಹಗಳು, ಬಣ್ಣದ ಸಾಮಾನುಗಳು ಸಹ ಇರುತ್ತವೆ. ಮತ್ತು ವರ್ಷಕ್ಕೆ ಎರಡಾವರ್ತಿಗೆ ಕಡಿಮೆಯಿಲ್ಲದೆ

ಬಹುಮಾನ ಹಂಚಲ್ಪಡುತ್ತೆ.

ಟಿ. ಎಲ್. ಉಪಾಧ್ಯಾಯ ಎಂಡ್ ಸನ್ಸ್
ಸುಗಂಧಕಾರಿ, ಮೈಸೂರು.

☞ ಇದನ್ನು ದಯವಿಟ್ಟು ನಿಮ್ಮ ಸ್ನೇಹಿತರುಗಳಲ್ಲಿ ಪ್ರಚುರಪಡಿಸಿರಿ.

ಪಿ. ಸುಬ್ಬರಾಯಿಯವರ

ಲೋಕ ಪ್ರಸಿದ್ಧವಾದ ಆಯುರ್ವೇದ

ಔಷಧಗಳು.

ಸಂಜೀವನ ಮಾತ್ರೆಗಳು:—ಮಕ್ಕಳಿಗೆ ಜ್ವರ, ನರಗಳ ಸೆಳತ, ನಿದ್ರೆಬಾರದಿರುವದು, ಅಧಿಕವಾಗಿ ಹೊಸುವದು, ಛಳಿ, ಕೆಮ್ಮಲು, ತಲೆನೋವು, ನಗಡಿ, ಇನ್ನೂ ಮಕ್ಕಳಿಗೆ ಬರುವ ಅಜೀರ್ಣ ಸಂಬಂಧವಾದ ರೋಗಗಳಿಗೆ ಒಳ್ಳೇ ಮದ್ದಾಗಿರುವದು. ಇದನ್ನು ದೊಡ್ಡವರು ಸಹ ಉಪಯೋಗಿಸಬಹುದು. ಸೀಸೆ 1ಕ್ಕೆ 10 ಆಣೆ, 1 ಮೊದಲು 6 ಸೀಸೆವರಿಗೆ ವಿ. ಪಿ. ಚಾರ್ಜು 5 ಆಣೆ ಪ್ರತ್ಯೇಕವು.

ಮಹಾಗೋರೋಜನ ಮಾತ್ರೆ:—ಎಲ್ಲಾ ವಿಧವಾದ ಜ್ವರಗಳಿಗೂ, ವಿಷಮ ಶೀತಜ್ವರ, ಎರಡರ ಜ್ವರ, ಪ್ರತಿದಿನ ಜ್ವರ, ಇವುಗಳಿಗೆ ಅದ್ವಿತೀಯವಾದ ಔಷಧವು. ಮಲನಾಡುಜ್ವರ, ಹೊಟ್ಟೆಯಲ್ಲಿ ಗಡ್ಡೆ ಆಗಿದ್ದರೆ, ಮಕ್ಕಳಿಗೆ ಬರುವ ಜ್ವರ, ಆಮಶಂಕೆ, ಅತಿಸಾರ, ನರಗಳ ಎಳತ, ನಿದ್ರೆಬಾರದಿರೋಣ, ಹೆಚ್ಚಾಗಿ ಹೊಸುವದು ಛಳಿ, ಕೆಮ್ಮಲು, ತಲೆನೋವು, ಮಕ್ಕಳಿಗೂ ದೊಡ್ಡವರಿಗೂ ಅಜೀರ್ಣ ಇವುಗಳನ್ನು ಪರಿಹಾರಮಾಡುವುದು. ಸೀಸೆ 1ಕ್ಕೆ 10 ಆಣೆ. ವಿ. ಪಿ. 9 ಸೀಸೆವರಿಗೂ 5 ಆಣೆ.

ಚರ್ಮರೋಗಕ್ಕೆ ಔಷಧಿ:—ಮಕ್ಕಳಿಗೆ ಬರುವ ಕರಪಾನು, ತುರಿ, ಹುರುಕಾಲು, ಗಜ್ಜಿ, ಮತ್ತು ದೊಡ್ಡವರಿಗೆ ಗಜ್ಜಿ ಸಂಬಂಧವಾದ ವ್ಯಾಧಿಗಳು, ಸುಂಡು, ತಲೆಯಲ್ಲಿಯೂ ಇತರ ಕಡೆಗಳಲ್ಲಿಯೂ ನೋವನ್ನೂ ಅನಂತರ ಉರಿಯನ್ನೂ ಉಂಟುಮಾಡುವ ಎಲ್ಲಾ ಹುಣ್ಣುಗಳಿಗೆ, ಹೊರಗೆ ಹಚ್ಚುವುದರಿಂದಲೇ ಬಹು ಶೀಘ್ರತೆಯಾಗಿ ವಾಸಿಯಾಗುವವು. ಬೆಲೆ ಸೀಸೆ 1ಕ್ಕೆ 8 ಆಣೆ, ವಿ. ಪಿ. ಚಾರ್ಜು 2 ಸೀಸೆವರಿಗೂ 5 ಆಣೆ.

ಕೇಶ ಸುವಾಸಿನಿ:—ಈ ತೈಲವು ಪೂರ್ವ ಪಶ್ಚಿಮ ದೇಶಗಳ ಅಮೂಲ್ಯ ಸುವಾಸನಾದ್ರವ್ಯಯುಕ್ತವಾಗಿ ತುಂಬಾ ಪರಿಮಳ ಕೊಡುವಂಥಾದ್ದಾಗಿರುತ್ತದೆ. ಇದರಿಂದ ಕೂದಲು, ಮೀಸೆಗಳು, ಕಣ್ಣುರೆಪ್ಪೆಗಳು ಸಮೃದ್ಧಿಯಿಂದ ಬೆಳೆಯುತ್ತವೆ. ತಲೆಗೂ, ಮೆದುಳಿಗೂ, ಕಣ್ಣುಗಳಿಗೂ ತಂಪುಕೊಡುತ್ತದೆ. ಬೋಳುತಲೆ, ಸುಂಡು ಮುಂತಾದ್ದನ್ನು ವಾಸಿಮಾಡುತ್ತದೆ. ವಿಲಾಯತಿಯ ಪರಿಮಳ ವಸ್ತುಗಳ ಮೇಲೆ ಪ್ರೀತಿ ಇರುವವರಿಗೆ ಅಚ್ಚುಮೆಚ್ಚಿನದ್ದಾಗಿರುತ್ತದೆ. ಬೆಲೆ ಸೀಸೆ 1ಕ್ಕೆ ರೂ. 1 ವಿ. ಪಿ. ಚಾರ್ಜು 2 ಸೀಸೆವರಿಗೂ 5 ಆಣೆ.

ಸರ್‌ಬತ್ತುಗಳು:—ದ್ರಾಕ್ಷಿ, ಸುಗಂಧಪಾಲೆ, ಗುಲಾಬಿ, ಬಾಳೆ, ನಿಂಬೆ, ಕಿತ್ತಲೆ, ಬಾದಾಮಿ, ಸೇಬು, ದಾಳಿಂಬೆ, ಶೊಂಟಿ ಮುಂತಾದ ಹಣ್ಣುಗಳ ರಸಗಳು ಇದರಲ್ಲಿ 5 ತೊಟ್ಟನ್ನು ಸೇರಿಸಿದರೆ 1 ಬಟ್ಟಲು ನೀರಿಗಾಗಲಿ ಸೋಡಾವಿಗಾಗಲಿ ಆಯಾ ಹಣ್ಣುಗಳ ವಾಸನೆಯಿಂದ ಅತಿ ಮನೋಹರ ರುಚಿಕರವಾಗಿರುವದು. ಅಂಗಡಿಗಳಲ್ಲಿ ಮಾರುವ ರಸಗಳಿಗಿಂತಲೂ ಎಷ್ಟೋ ಅಗ್ಗವಾಗಿಯೂ ಮತ್ತು ವಿ. ಪಿ. ಚಾರ್ಜುಗಳು ಕಡಿಮೆಯಾಗುವಂತೆಯೂ ಮಾಡಲ್ಪಟ್ಟದೆ. ಒಂದು ಸೀಸೆ ರಸದಿಂದ ರುಚಿಕರವಾದ 50 ಬಟ್ಟಲು ಪಾನಕವನ್ನು ಮಾಡಬಹುದು. ಸೀಸೆ 1ಕ್ಕೆ 8 ಆಣೆ, ವಿ. ಪಿ. ಚಾರ್ಜು 3 ಸೀಸೆವರಿಗೂ 5 ಆಣೆ.

☞ ಈ ಪ್ರಾಂತ್ಯದಲ್ಲಿ ಕನ್ನಡ, ತೆಲುಗು, ಮಲೆಯಾಳ ಈ ಭಾಷೆಗಳು ತಿಳಿಯುವದಿಲ್ಲವಾದುದರಿಂದ ಪೋಷಕರು ದಯವಿಟ್ಟು ಆರ್ಡರುಗಳನ್ನು ಮತ್ತು ಪತ್ರವ್ಯವಹಾರಗಳನ್ನು ಇಂಗ್ಲೀಷಿನಲ್ಲಾಗಲೀ, ತಮಿಳಿನಲ್ಲಾಗಲೀ ಸ್ಫುಟವಾಗಿ ತಿಳಿಯುವಂತೆ ಬರೆಯಬೇಕು.

MY ADDRESS.
P. SUBBA ROY.
Ayurvedic Pharmacy,
Sri Perumalkoil,
SANNATHY, TANJORE.

ನಮ್ಮ ವಿಳಾಸ:—
ಪಿ. ಸುಬ್ಬರಾಯಿ,
ಆಯುರ್ವೇದ ಔಷಧಶಾಲ,
ಶ್ರೀ ವೆಂಕಟೇಶ ಪೆರುಮಾಳ್ ದೇವಸ್ಥಾನ,
ಸನ್ನದಿ, ತಂಜಾವೂರು.

ಎಂದೂ ತಪ್ಪದೆ ಅಪ್ರತಿಮವಾದ ಗುಣಕೊಡುವ

ಲೋಕಪ್ರಸಿದ್ಧ ಔಷಧಿಗಳು.

ಈ ನಮ್ಮ ಔಷಧಿಗಳನ್ನು ಪ್ರಯೋಗಿಸುವವರಿಗೆ ಹೋಮಿಯೋಪತಿ-ಔಷಧಗಳು ರೋಗಗಳನ್ನು ಬಹು ಬೇಗನೇ ಗುಣಪಡಿಸುತ್ತದೆಂಬದನ್ನು ಹೇಳಬೇಕಾದ್ದಿಲ್ಲ.

ಟೊರಕಬ್.

ಮೆದುಳಿನ ಅಶಕ್ತಿ, ನರಗಳ ಬಲಹೀನತೆ, ತಲೆಸಿಡಿತ, ತಲೆನೋವು, ಶಿರೋಭ್ರಮಣ, ನಾಡಿ ತೀವ್ರವಾಗಿ ಒಡೆಯುವದು, ರಕ್ತಹೀನತೆ, ರಾತ್ರಿಕಾಲ ಬೆವರುವದು-ಪ್ರಮೇಹ, ಮೇಹ, ಇಂದ್ರಿಯಸ್ರಾವ, ಬಿಳೇ ಸೆರಗು ಹೋಗುವದು, ಬಿಳೇ ಮೇಹ, ಜನನೇಂದ್ರಿಯಗಳ ಬಲಹೀನತೆ, ಧಾತುನಷ್ಟ, ಇಂದ್ರಿಯಪತನ, ಸ್ವಪ್ನೇಂದ್ರಿಯ ಮೊದಲಾದ ಸಕಲ ರೋಗಗಳಿಗೆ ಇದಕ್ಕಿಂತ ಉತ್ತಮ ಔಷಧಿಯು ಬೇರೊಂದಿಲ್ಲವೆಂತ ಹೋಮಿಯೋಪತಿ ವೈದ್ಯರ ಅನುಭವದ ಸಿದ್ಧಾಂತ. ಅಜೀರ್ಣ, ಅಗ್ನಿಮಾಂದ್ಯಕ್ಕೆ ಇದು ಕೊಡತಕ್ಕದ್ದೇ ಸರಿ. ಔಷಧಿಯ ಕ್ರಯ ಶೀಸೆ 1ಕ್ಕೆ ರೂ. 1-8-0; ವಿ. ಪಿ. ಸಹಿತ ರೂ. 1-12-0.

ಡಾಕ್ಟರ್ ಬಾಸಕ್‌ರ ಮೂಲವ್ಯಾಧಿ ತೈಲ ಮತ್ತು ಮಾತ್ರೆ:—ಇದು ಮೂಲವ್ಯಾಧಿ ಮತ್ತು ಮೊಳೆಯ ಸಾವಿರಾರು ರೋಗಿಗಳನ್ನು ವರ್ಷಂಪ್ರತಿ ಗುಣಮಾಡುತ್ತಿದೆ. ಕ್ರಯ ಒಂದು ಶೀಸೆ ತೈಲ ಮತ್ತು ಒಂದು ಶೀಸೆ ಮಾತ್ರೆಗಳಿಗೆ ರೂ. 2—4—0 ಮಾತ್ರ. ವಿ. ಪಿ. 0-6-0.

ಮಹಿಳಾಸಖಿ ಮಾತ್ರೆ ನಂ. 1. ಹೆಂಗಸರಿಗೆ ಕ್ರಮತಪ್ಪಿ ತಿಂಗಳು ಗಟ್ಟಲೆಯಾಗುವದು, ವ ಆಗದಿರುವದು, ಕಠಿಣ ಹೊಟ್ಟೆನೋವು, ಕೈಕಾಲುಗಳ ಸೆಳೆತ ಈ ಅಕ್ರಮಗಳಿಗೆ ದಿವ್ಯ ಮಾತ್ರೆ. ಕ್ರಯ ರೂ. 1—0—0. ವಿ. ಪಿ. 0-6-0.

ಮಹಿಳಾಸಖಿ ಮಾತ್ರೆ ನಂ. 2. ಅಧಿಕಸ್ರಾವ ಇತ್ಯಾದಿಗಳಿಗೆ. ಕ್ರಯ ರೂ. 1—2—0. ವಿ. ಪಿ. 0-6-0.

ವಿಳಾಸ:—
ಇಕ್ಲಿಪ್ಸ್ ಏಜನ್ಸಿ,
ಮಂಗಳೂರು.

ಏಜಂಟರು:—
ಸುಗಂಧವಿಲಾಸ,
ರಥಬೀದಿ, ಮಂಗಳೂರು.

ಬನ್ನಿರಿ! ನೋಡಿರಿ ತಿಳಿಯಿರಿ!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ... ಎಂದಿಗೂ ಬಿಡಲಾರರು.



(5) ವಿದ್ಯಾಪ್ರಚಾರಣೆಗೆ ಸಾಕಷ್ಟು ಸೌಕರ್ಯಗಳು ನಮಗೆ ಇನ್ನೂ ದೊರೆತಿಲ್ಲ. ೧೦೦೦ಕ್ಕೆ ಮಿಕ್ಕಿ ಜನಸಂಖ್ಯೆ ಇದ್ದು ಪಾಠಶಾಲೆಗಳೇ ಇಲ್ಲದ ಹಳ್ಳಿಗಳು ಇನ್ನೂ ಅನೇಕಾನೇಕ ಇವೆ. ಅನೇಕ ಬೋರ್ಡು ಶಾಲೆಗಳಿಗೆ ಒಳ್ಳೆ ಕಟ್ಟೋಣಗಳೇ ಇಲ್ಲ. ಅಪೂರ್ಣ ಸೆಕೆಂಡರಿ ಶಾಲೆಗಳು ಇನ್ನೂ ಬಹಳ ಹೀನಸ್ಥಿತಿಯಲ್ಲಿವೆ. ಇನ್ನೂ ಹೊಸ ಶಾಲೆಗಳು ಆಗುವುದರಲ್ಲಿ ಇವೆ; ಅವುಗಳಿಗೆ ಹೆಚ್ಚಿನ ಸಹಾಯ ಆಗತ್ಯವಿದೆ. ಜನಗಳಿಂದ ಏರ್ಪಟ್ಟ ಗವರ್ನಮೆಂಟ ಕಾಲೇಜು ಇನ್ನೂ I ಗ್ರೇಡ ಕಾಲೇಜು ಆಗಿಲ್ಲ. ಈಗ ದಾಖಲಾಗುವುದಕ್ಕೆ ಸಾಕಷ್ಟು ಎಡೆಯಿಲ್ಲ. ಹೆಣ್ಣು ಮಕ್ಕಳ ಶಾಲೆಗಳಂತೂ ಬಹಳ ಕಡಿಮೆ. ಇವುಗಳ ಮೇಲೆ ಸರಿಯಾದ ವಿಚಾರವೇ ಇಲ್ಲ. ದೇಶಭಾಷಾ ಪರಿಚಯವಿಲ್ಲದ ಸಬ್ ಅಸಿಸ್ಟ್ಟಂಟ ಇನ್ಸ್ಪೆಕ್ಟರುಗಳೂ ಅಸಿಸ್ಟಂಟ ಮತ್ತು ಇನ್ಸ್ಪೆಕ್ಟೆಸ್ಸುಗಳೂ ಇವುಗಳ ಮೇಲ್ವಿಚಾರವನ್ನು ವಹಿಸಿದ್ದಾರೆ. ಹೀಗಾಗಿ ಮಕ್ಕಳ ಸಂಖ್ಯೆ ಮಾತ್ರ ಶಾಲೆಗಳಲ್ಲಿ ಹೆಚ್ಚಿರುವುದಲ್ಲದೆ ಕಲಿಸುವ ವಿಚಾರವೇ ಇಲ್ಲ. ಇಂಗ್ಲಿಷ ಅರಿಯದ ಉಪಾಧ್ಯಾಯಿನಿಯರೂ ಉಪಾಧ್ಯಾಯರೂ ಇಂಗ್ಲಿಷ ಭಾಷೆಯಿಂದ ಮೇಲಾಫೀಸರರೊಡನೆ ಪತ್ರವ್ಯವಹಾರ ನಡೆಸಬೇಕಾಗಿದೆ. ದೇಶಭಾಷಾಪರಿಚಯವಿದ್ದ ಆಫೀಸರುಗಳು ಇದ್ದರೂ ಅವರನ್ನು ಈ ಕೆಲಸಕ್ಕೆ ಹಚ್ಚದೆ ವಿದ್ಯಾ ಇಲಾಖೆಯವರು ತಟಸ್ಥರಾಗಿದ್ದಾರೆ.

(6) ಲೋಕಲ್‌ಬೋರ್ಡುಗಳಲ್ಲಿ ದ್ರವ್ಯಾನುಕೂಲ ಸಾಕಷ್ಟು ಇಲ್ಲದ್ದರಿಂದ ಅನೇಕ ಕಡೆಗಳಲ್ಲಿ ಆಸ್ಪತ್ರೆಗಳೂ ಇಲ್ಲ; ಇದ್ದಲ್ಲಿ ಸಾಕಷ್ಟು ಔಷಧ ಸಾಮಾಗ್ರಿಗಳೂ ಇಲ್ಲ. ಹಲವು ಸಣ್ಣ ದೊಡ್ಡ ಕಾಲುವೆಗಳಿಗೆ ಸಂಕಗಳಿಲ್ಲದ್ದರಿಂದ ಹಳ್ಳಿದಾರಿಗಳಲ್ಲಿ ಮಳೆಗಾಲದ ಸಂಚಾರವೇ ದುರ್ಲಭ. ಹೀಗಾಗಿ ಸರಕಾರಿ ನವುಕರರ ಸುಳಿವು ಕೆಲವು ಭಾಗಗಳಲ್ಲಿ ಆಗುವುದೇ ಇಲ್ಲ. ಅಲ್ಲಿದ್ದ ವರ್ಗದಾರರು ಒಂದು ಬಗೆಯ ನಿರಂಕುಶ ಪ್ರಭುತ್ವವನ್ನು ಪಾರಂಪರ್ಯವಾಗಿ ನಡೆಸಿ ಬಂದಿರುವರು.

ಈ ರೀತಿಯಾಗಿ ಇನ್ನೂ ಹಲವು ಅನಾನುಕೂಲತೆಗಳನ್ನು ಸ್ಥಳಸಂಕೋಚದಿಂದ ಬರೆಯಲಿಲ್ಲವಾದರೂ ಸಂದರ್ಭಾನುಸಾರವಾಗಿ ತಿಳಿಸುವೆವು. ಇವೆಲ್ಲವನ್ನು ಹೋಗಲಾಡಿಸುವ ತೀರಾ ಭಾರವು ಒಬ್ಬನೇ ಒಬ್ಬ ಮನುಷ್ಯನಿಗೆ ಸುಲಭಸಾಧ್ಯವಲ್ಲವೆಂತಲೂ, ಇವುಗಳ ಕೂಲಂಕುಷ ವಿಚಾರವನ್ನು ಮಾಡಿ ಅನುಭವ ಪಡೆಯಲಿಕ್ಕೂ ಅವುಗಳನ್ನು ನ್ಯಾಯವಾದ ರೀತಿಯಲ್ಲಿ ಸರಕಾರದವರ ಮುಂದಿಡಲಿಕ್ಕೂ ಸಮಯ ಬೇಕಾಗುವುದೆಂತಲೂ ನಾವು ಬಲ್ಲೆವು. ಆದರೆ ಮ| ರಾ| ಭಟ್ಟರು ಅನೇಕ ಸಂಗತಿಗಳಲ್ಲಿ ಸ್ವತಃ ಅನುಭವಶಾಲಿಗಳಾಗಿ ಜನರ ವಿಶ್ವಾಸಕ್ಕೆ ಪಾತ್ರರಾಗಿ ಇದ್ದುದರಿಂದ ಅವರ ಮೆಂಬರಿಕೆಯ ಮೂರು ವರ್ಷಗಳ ಅವಧಿಯಲ್ಲಿ ಸಾಧ್ಯವಾದಷ್ಟು ಕೊರತೆಗಳನ್ನು ಹೋಗಲಾಡಿಸುವುದಕ್ಕೆ ಜನರು ತಮ್ಮ ಭೇದ ಬುದ್ಧಿಯನ್ನು ಬಿಟ್ಟು ಸಹಾಯಕರಾಗಬೇಕೆಂದು ನಾವು ಜನರಿಗೆ ಕೇಳಿಕೊಳ್ಳುವೆವು; ಮತ್ತು ಈ ಸದುದ್ದೇಶದಲ್ಲಿ ಶ್ರೀಭಗವಂತನು ಮ| ರಾ| ಭಟ್ಟರಿಗೆ ಅಗತ್ಯವಾದ ಮನೋಧಾರ್ಡ್ಯ, ಆರೋಗ್ಯ ಮತ್ತು ವಿವೇಚನಾಶಕ್ತಿಯನ್ನು ದಯಪಾಲಿಸಲೆಂದು ನಾವು ಪ್ರಾರ್ಥಿಸುವೆವು.

ದೇಶೋನ್ನತಿಗೆ ಸಾಧನವಾದ ಸುಧಾರಣೆಯು ಯಾವುದು?

"ಸ್ವರಾಜ್ಯ"ದ ಒಂದೇ ವರದಿಂದ ನಮ್ಮ ರಾಜಕೀಯ ಮತ್ತು ಸಾಮಾಜಿಕ ಸುಧಾರಣೆಗಳಲ್ಲಿ ಬೇಕಾದ ಆಕಾಂಕ್ಷೆಗಳನ್ನು ಹಿಂದೀ ಜನರು ಸಾಧಿಸಿಕೊಳ್ಳಬಹುದು ಎಂಬುದಾಗಿ ಕಳೆದ ಮತ್ತು ಅದರ ಹಿಂದಿನ ಸಂಚಿಕೆಯಲ್ಲಿ ನಾವು ಪ್ರತಿಪಾದಿಸಿ ತೋರಿಸಿದರೂ ಕೆಲವು ಅಭಿನಿವಿಷ್ಟ ಸುಧಾರಕರಿಗೆ ಅದು ಸರ್ವಥಾ ಒಪ್ಪಿಗೆಯಾಗುವುದಿಲ್ಲ. "ವಿದ್ಯಾವಂತನಾದ ಹಿಂದೀ ಗೃಹಸ್ಥನು ಸಮಾಜ ಸುಧಾರಣೆಯನ್ನು—ಅದು ಮನು ಯಾಜ್ಞವಲ್ಕ್ಯ ಮುಂತಾದವರ "ಕೋಡಿ"ಗನುಸಾರವಾಗಿ ಅಲ್ಲ, ತಂತಮ್ಮ ಅಥವಾ ಪಾಶ್ಚಾತ್ಯ ಸುಧಾರಕರ ಕೋಡನ್ನು ಹಿಡಿದು ಸಮಾಜದಲ್ಲಿ ಬೇಕಾದ ಅದಲುಬದಲಾವಣೆಗಳನ್ನು ಮಾಡಬೇಕು; ನಿರ್ಣಯಸಿಂಧು, ಧರ್ಮಸಿಂಧು,—ಈ ಧರ್ಮಗ್ರಂಥಗಳನ್ನೆಲ್ಲ ತಮ್ಮ "ಅನುಕೂಲಸಿಂಧು"ವಿನೊಳಗೆ ಮುಣುಗಿಸುವುದೇ ಒಳ್ಳೇದು; ಹಿಂದು ಸಮಾಜದ ನಡತೆಯು ಸ್ತ್ರೀಯರ ವಿಷಯದಲ್ಲಿ ಅಮಾನುಷವಾಗಿದೆ; ಸ್ತ್ರೀಯರಿಗೆ ಸ್ವಾತಂತ್ರ್ಯವಿಲ್ಲ; ವಿದ್ಯೆ ಇಲ್ಲ; ಪುರುಷರ ದಾಸ್ಯದಲ್ಲಿಯೇ ಅವರ ಜನ್ಮವು ಹೋಗುತ್ತಿದೆ; ಮುಷ್ಠಿ ವೈದಿಗರು ಒಣ ಭ್ರಾಂತಿಯನ್ನು ಕಟ್ಟಿಕೊಂಡು ನಾವು ಮೇಲು, ನೀವು ಹೀನರು ಇತ್ಯಾದಿ ಕೇವಲ ಕಲ್ಪನಾಗಮ್ಯವಾದ ಉಚ್ಚ ನೀಚ ಭಾವವನ್ನು ಹುಟ್ಟಿಸಿ ಮತ್ತು ಅದನ್ನು ಹಬ್ಬಿಸಿ ಹಿಂದಿನ ವಂಚಕರಾದ ಬ್ರಾಹ್ಮಣರು ತಾವು ಎಲ್ಲರಲ್ಲಿ ಪ್ರತಿಷ್ಠೆಯನ್ನು ಪಡೆಯುವ ಒಂದು ಹಂಚಿಕೆಯನ್ನು ತೆಗೆದರು; ವಿಧವೆಯರಿಗೆ ತಿರುಗಿ ಮದುವೆ ಮಾಡದೆ ಅವರ ಒದಲು ಕೇಶವಪನ ಮಾಡಿ ಅವರ ಪ್ರಕೃತಿ ಸೌಂದರ್ಯಕ್ಕೆ ಹಾನಿ ತರಲು ಶಾಸ್ತ್ರಕಾರರು ಯತ್ನಿಸಿದರು. ಇಂತಹ ನಿರ್ಘೃಣ ಸ್ಥಿತಿಯು ಯಾವ ಸುಶಿಕ್ಷಿತ ರಾಷ್ಟ್ರಗಳಲ್ಲಿಯೂ ಇಲ್ಲ; ಹೃದಯ ದ್ರಾವಕ ಮತ್ತು ರೋಮಾಂಚಕಾರಕವಾದ ಈ ಆಚಾರಗಳನ್ನೂ ರೂಢಿಯನ್ನೂ ನಿಲ್ಲಿಸಿ ಸಮಾಜದೊಳಗಿನ ಹೊಲಸುಗಳನ್ನು ತೆಗೆದು ಸ್ತ್ರೀ ಪುರುಷರಿಗೆ ಸಮಾನತ್ವದ ತತ್ವಕ್ಕನುಸಾರವಾಗಿ ಸಮಾಜ ರಚನೆಯನ್ನು ಏರ್ಪಡಿಸುವುದು ಹಿಂದು ಸುಶಿಕ್ಷಿತ ಗೃಹಸ್ಥನ ಕರ್ತವ್ಯವು." ಇವೇ ಈಗಿನ ಸುಧಾರಕರ ಸೂತ್ರಗಳು, ಭಾಷ್ಯಗಳು. ಈ ಮತಗಳಲ್ಲಿ ತಥ್ಯಾಂಶವೆಷ್ಟಿದೆ, ಅದು ಎಂಬಂತ ತಿಳಿದರೂ ದೇಶಹಿತದ ಸಂಬಂಧವು ಎಷ್ಟಿದೆ, ಆ ದೇಶಹಿತವು ಇದರಲ್ಲಿ ಇಲ್ಲೆಂತಾದರೆ ನಿಜವಾಗಿ ದೇಶ ಹಿತಕಾರಕವಾದ ಸುಧಾರಣೆಗಳು ಯಾವವು,—ಈ ಸಂಗತಿಗಳನ್ನೆಲ್ಲ ಈ ಹೊತ್ತಿನ ಲೇಖದಲ್ಲಿ ವಿವೇಚಿಸೋಣ.

ಒಂದು ಸಂಗತಿಯನ್ನು ಮೊದಲೇ ಸ್ಪಷ್ಟವಾಗಿ ಹೇಳಬೇಕಾಗುತ್ತದೆ, ನಾವು ಸುಧಾರಣಾ ತತ್ವಗಳ ವಿರೋಧಿಗಳಲ್ಲ. ಸಾಮಾಜಿಕ ಸುಧಾರಣೆಯು ನಮಗೆ ಬೇಕೇ ಬೇಕು. ಆದರೆ ಈ ವಿಷಯವನ್ನು ಸರಿಯಾಗಿ ಆಲೋಚಿಸಿ ಅದಕ್ಕೆ ತಕ್ಕ ಸ್ಥಾನವನ್ನು ಕೊಡಬೇಕು. ಇದೇ ನಮ್ಮ ಆಶಯ. ಸುಧಾರಕರ ಸುಧಾರಣೆಯ ಲಿಸ್ಟನ್ನು ತೆಗೆದು ನೋಡಿದರೆ ಅದರಲ್ಲಿ ವಿಧವಾ ವಿವಾಹ, ಪ್ರೌಢ ವಿವಾಹ, ಸ್ತ್ರೀಶಿಕ್ಷಣ, ಪುರಾಣಾಚಾರಗಳ ನಿರ್ಮೂಲನ, ಭಿನ್ನಜಾತಿಗಳ ಐಕ್ಯ ಈ ನಾಲ್ಕೈದು ಸಂಗತಿಗಳೇ ಮುಖ್ಯವಾಗಿ ಕಾಣುತ್ತವೆ. ಈ ಸುಧಾರಣೆಗಳಿಂದ ಉಂಟಾಗಲಿಕ್ಕಿದ್ದ ದೇಶೋನ್ನತಿಯ ಬಿಸಿಲುಗುದುರೆಯ ಬೆನ್ನುಹಿಡಿದು ಸುಧಾರಕರೆಲ್ಲರು ಓಡುತ್ತಿದ್ದಾರೆ! ಸುಧಾರಕರ ಸಂಕಲ್ಪದಂತೆ ಹಿಂದುಸ್ಥಾನದೊಳಗಿನ ವಿಧವೆಯರು ಪುನರ್ವಿವಾಹದಿಂದ ಪತಿಸುಖವನ್ನು ಪಡೆಯುವುದರಿಂದಾಗಲಿ, ಜಾತಿಗಳ ಸಂಕರದಿಂದಾಗಲಿ ಹಿಂದುಸ್ಥಾನಕ್ಕೆ ಬರುವ ಭಾಗ್ಯವು ಯಾವುದು? ಪಾತ್ರತೆಯು ಯಾವುದು? ಸ್ತ್ರೀ ಶಿಕ್ಷಣ ಒಂದನ್ನು ಬಿಟ್ಟರೆ ಇವರು ಮಾಡುತ್ತಿರುವ ಬೇರೆ ಯಾವ ಸುಧಾರಣೆಗಳಲ್ಲಿ ರಾಷ್ಟ್ರೀಯತ್ವವಿದೆ? ಮೇಲೆ ಹೇಳಿದ್ದಂತೆ ವಿಧವಾ ವಿವಾಹ ಅಥವಾ ಜಾತಿಗಳ ಏಕೀಕರಣ ಈ ಸುಧಾರಣೆಗಳಿಂದ ದೇಶದ ಸುಧಾರಣೆಯು ಅಥವಾ ಪ್ರಗತಿಯು ಆಗುವ ಹಾಗಿದೆಯೆ? ಜಾತಿಗಳ ಏಕೀಕರಣದಿಂದ ದೇಶದ ಏಕೀಕರಣವಾಗುತ್ತದೆಂದು ಆ ಪಕ್ಷದವರು ಹೇಳಬಹುದು. ಆದರೆ ಧರ್ಮ ಮತ್ತು ಮತಗಳ ಮೂಲಕವಾಗಿ ಏಕೀಕರಣ ಮಾಡಲು ಹೊರಟ ಯಾವ ಸುಧಾರಕರೂ ಇಷ್ಟರ ವರೇಗೆ ಯಶಸ್ವಿಗಳಾಗಲೇ ಇಲ್ಲ. ವೈದಿಕ ಧರ್ಮವನ್ನು ಮುರಿದು ಎಲ್ಲರಿಗೆ ಒಂದೇ ಧರ್ಮವನ್ನು ಬೋಧಿಸಲು ಬಂದ ಬುದ್ಧನ ಧರ್ಮವೂ ಅವನ ಅನುಯಾಯಿಗಳೂ ಬೇರೆ ಆದರು. ಆದರೆ ವೈದಿಕ ಧರ್ಮವೇನೂ ನಷ್ಟವಾಗಲಿಲ್ಲ. ಯೆಹೂದಿ ಧರ್ಮವನ್ನು ತಗ್ಗಿಸಿ ಎಲ್ಲ ಲೋಕಕ್ಕೆ ಒಂದೇ ಸತ್ಯಧರ್ಮವನ್ನು ಕೊಡಲು ಬಂದ ಕ್ರಿಸ್ತನಿಂದ ಧರ್ಮದ ಸಂಖ್ಯೆಯು ಹೆಚ್ಚೇ ಆಯಿತು, ಕಡಿಮೆ ಆಗಲಿಲ್ಲ. ಲೂಥರನಿಂದ ತಿರುಗಿ ಇನ್ನೊಂದು ಪಂಥವು ಹೊಸದಾಯಿತು. ಶಂಕರಾಚಾರ್ಯ, ರಾಮಾನುಜಾಚಾರ್ಯ, ಮಧ್ವಾಚಾರ್ಯ ಮೊದಲಾದವರಿಂದ ಬೇರೆ ಬೇರೆ ಮತಗಳೂ ತತ್ತದನುಯಾಯಿಗಳೂ ಹೆಚ್ಚಿದರಲ್ಲದೆ ಕಡಿಮೆಯಾಗಲಿಲ್ಲ. ಇನ್ನು ಈಚೆಗೆ ರಾಮಮೋಹನ ರಾಯ, ದಯಾನಂದ ಸರಸ್ವತಿ, ಮಹಾದೇವರಾವ ರಾನಡೆ ಇವರ 'ಸಮಾಜ'ಗಳು ಮೊದಲು ಇದ್ದ ಜಾತಿಗಳ ಸಂಖ್ಯೆಗಳಲ್ಲಿ ಇನ್ನಷ್ಟು ಕೂಡಿಸಿದವು. ಆದರೆ ಈ ಎಲ್ಲ ಧರ್ಮ ಮತ್ತು ಮತ ಪ್ರವರ್ತಕರಾದ ಸುಧಾರಕರ ಉದ್ದೇಶವು ಏಕೀಕರಣದ್ದೇ ಇತ್ತು. ಪರಂತು ಇವರ ಯತ್ನದ ಪರಿಣಾಮವು ಮಾತ್ರ ಪ್ರತಿಕೂಲವೇ ಆಯಿತು ಮತ್ತು ಆಗಿದೆ. ಮತಗಳ ಅಥವಾ ಜಾತಿಗಳ ಏಕೀಕರಣಕ್ಕಾಗಿ ಮಾಡಲ್ಪಡುವ ಪ್ರಯತ್ನಗಳ ಉದ್ದೇ

ಶವು ಸಫಲವಾಗುವುದು ಸುತರಾಂ ಸಾಧ್ಯವಿಲ್ಲ, ಸೃಷ್ಟಿಯ ಅಂತ್ಯದ ವರೇಗೆ ಇದೇ ಹಾಡು! ಮಾನವೀ ಬುದ್ಧಿಯು ಸ್ವಾಭಾವಿಕವಾಗಿಯೇ ವಿವಿಧಾತ್ಮಕವಾಗಿದೆ. ಒಬ್ಬನ ಬುದ್ಧಿಯೇ ಇಡೀ ಲೋಕದಲ್ಲಿ ಎಂದೂ ವಿಜಯಿ ಆಗದು. ಆ ವಿವಿಧಾತ್ಮಕ ಬುದ್ಧಿಯಿಂದ ವಿವಿಧ ಮತಗಳು ಅಸ್ತಿತ್ವದಲ್ಲಿ ಬರುವುದು ಸಹಜವೇ. ಮತ್ತು ಆ ಮತಗಳಿಗೆ ಬೇರೆ ಬೇರೆ ಅನುಯಾಯಿಗಳಾಗುವುದೂ ಆಶ್ಚರ್ಯವಲ್ಲ. ಸಾರಾಂಶ, ಇಂತಹ ಸಂಗತಿಗಳಲ್ಲಿ ಏಕೀಕರಣದ ಸದುದ್ದೇಶವಿದ್ದರೂ ಅದರ ಪರಿಣಾಮವು ವಿವಿಧೀಕರಣದಲ್ಲಿಯೇ ಉಂಟಾಗುತ್ತದೆ! ಇದೇ ಶೋಚನೀಯವು. ಹೀಗಿರುವಲ್ಲಿ ಪ್ರಾಜ್ಞರಾದವರು ತಮ್ಮ ಬುದ್ಧಿವಂತಿಕೆಯನ್ನು ತೋರಿಸಲು ಹೋಗುವುದಕ್ಕಿಂತ ಇದ್ದದನ್ನೇ ಅನುಸರಿಸಿಕೊಂಡು ಹೋದರೆ ಅದೇ ಏಕೀಕರಣಕ್ಕೆ ಒಂದು ದಾರಿಯಾದೀತು; ಇದರಿಂದ ಒಂದುವೇಳೆ ಏಕೀಕರಣವಾಗದೇ ಇದ್ದರೂ ಹತ್ತು ಇದ್ದಲ್ಲಿ ಹನ್ನೊಂದಾಗಲಾರದು. ಇದು ಮಾತ್ರ ನಿಶ್ಚಯವು.

ಈ ಉಪಪಾದನೆಯಿಂದ ಏಕೀಕರಣದ ಭ್ರಾಂತಿಯನ್ನು ಕಟ್ಟಿಕೊಂಡು ಆಧುನಿಕ ಸುಧಾರಕರು ನಡಿಸುತ್ತಿರುವ ಪ್ರಯತ್ನವು ವಿಫಲಕಾರಿ ಮಾತ್ರವಲ್ಲ, ದೇಶಕ್ಕೆ ಪ್ರತಿಕೂಲಕಾರಕವಾಗುತ್ತಿದೆಂದು ಹೇಳಿದರೆ ಅದು ತಪ್ಪಾಗಲಾರದು. ಆದುದರಿಂದಲೇ ನಾವು ವಿಧವಾ ವಿವಾಹವಾಗಲಿ, ಜಾತ್ಯೇಕೀಕರಣವಾಗಲಿ ರಾಷ್ಟ್ರೀಯ ಸಂಗತಿಗಳಲ್ಲೆಂದು ಮೇಲೆ ಹೇಳಿದ್ದೇವೆ. ವಿಧವಾ ವಿವಾಹವು ಒಪ್ಪಿಗೆ ಇರುವ ವಿಧಗಳಿಗೆ ಮಾತ್ರ ಸಂಬಂಧಪಟ್ಟ ಸಂಗತಿಯು, ರಾಷ್ಟ್ರೀಯವಲ್ಲ, ಸಾರ್ವಜನಿಕವೂ ಅಲ್ಲ. ಸ್ತ್ರೀ ಶಿಕ್ಷಣದ ಸುಧಾರಣೆಯು ಏಕದೇಶೀಯವಾಗಿದ್ದರೂ ಶ್ಲಾಘ್ಯವಾಗಿಯೇ ಇದೆ.

ಸುಧಾರಕರ ಲಿಸ್ಟಿನೊಳಗಿನ ಮುಖ್ಯ ಮುಖ್ಯ ಸುಧಾರಣಾತತ್ವಗಳನ್ನು ತೆಕ್ಕೊಂಡು ಶಾಂತಮನಸ್ಸಿನಿಂದ—ದೂಷಿತ ದೃಷ್ಟಿಯಿಂದ ಅಲ್ಲ—ಪರೀಕ್ಷಿಸಿದರೆ ಅವುಗಳ ಯಥಾರ್ಥ ಸ್ವರೂಪವು ಮೇಲಿನಂತಿದೆ. ಮೇಲೆ ತೋರಿಸಿದ ಸ್ಥಿತಿಯು ಒಪ್ಪಕೊಟ್ಟು ತೋರಿಸಿದ್ದಲ್ಲ, ಬಣ್ಣ ಹಾಕಿ ಪ್ರದರ್ಶಿಸಿದ್ದೂ ಅಲ್ಲ. ಅದು ನಿಜಸ್ಥಿತಿಯು. ಹೀಗಿರುವಲ್ಲಿ ಪ್ರಗತಿಕಾರಕವಾದ ಸುಧಾರಣೆಗಳು ಯಾವುವು ಎಂಬ ಪ್ರಶ್ನೆಯು ಇಲ್ಲಿ ಬರುವುದು. ಮತ್ತು ಇದನ್ನೇ ತೋರಿಸುವುದು ನಮ್ಮ ಈ ಹೊತ್ತಿನ ಲೇಖನದ ಮುಖ್ಯ ಉದ್ದೇಶವಾಗಿದೆ. ಸಮಾಜದ ಘಟಕವಾದ ಪ್ರತಿ ಒಂದು ವ್ಯಕ್ತಿಗೆ ಓದು, ಬರಹ, ಲೆಕ್ಕ ಈ ಮೂರು ಸಂಗತಿಗಳು ತಿಳಿದಿರಲೇ ಬೇಕು. ಒಂದು ವಿದ್ಯೆಯಾಗಲಿ, ಉದ್ಯೋಗವಾಗಲಿ, ಕಲೆಯಾಗಲಿ ಓದು, ಬರಹ, ಲೆಕ್ಕ ಇವುಗಳ ಸಹಾಯವಿಲ್ಲದೆ ಸಾಧ್ಯವಾಗಲಾರದು. ಉಪಜೀವನಕ್ಕೆ ಸಾಧನಗಳಾದ ವಿದ್ಯೋದ್ಯೋಗ ಕಲೆಗಳಲ್ಲಿ ಅಭಿವೃದ್ಧಿಯನ್ನುಂಟು ಮಾಡಬೇಕಾದರೆ ಸ್ವಲ್ಪಮಟ್ಟಿಗಾದರೂ ಶಿಕ್ಷಣವು ಬೇಕೇಬೇಕು. ದೃಷ್ಟಾಂತಕ್ಕೆ ಒಂದು ಕಲೆಯ ವಿಷಯವನ್ನೇ ನೋಡಿರಿ. ಪರಂಪರೆಯಿಂದ ಚಿತ್ರ ಬರೆಯುವ "ಗುಡಿಗಾರ" ಎಂಬದೊಂದು ಜಾತಿ ಇದೆ. ಇವರು ಕಾಗದದ ಮೇಲೂ, ಮರದಲ್ಲಿಯೂ ಚಿತ್ರವನ್ನು ಬರೆಯುವರು. ಅವರು ತಮ್ಮ ಈ ಕೆಲಸವನ್ನು ಓದು ಬರಹ ಲೆಕ್ಕ ಇವುಗಳೇನೂ ಇಲ್ಲದೆನೇ ನಡಿಸಿಕೊಂಡು ತಮ್ಮ ಕುಲವೃತ್ತಿಯನ್ನು ಹೇಗೋ ಕಾಪಾಡಿಕೊಂಡಿದ್ದಾರೆ. ಆದರೆ ಅವರಿಗೆ ಈ ಜೀವನ ಕಲಹದ ಯುಗದಲ್ಲಿ ಶಿಕ್ಷಣದ ಕೊಂಚಮಟ್ಟಿಗೆ ಸಂಸ್ಕಾರವು ಇರುತ್ತಿದ್ದರೆ ಅವರ ಈ ವೃತ್ತಿಯಲ್ಲಿ ಇನ್ನೂ ಎಷ್ಟೋ ಸುಧಾರಣೆಗಳು ಆಗುತ್ತಿದ್ದವು. ಇದರಂತೆಯೇ ಪ್ರತಿ ಒಂದು ಉದ್ಯೋಗ ವಿಷಯದಲ್ಲಿಯೂ, ವ್ಯವಸಾಯದ ವಿಷಯದಲ್ಲಿಯೂ, ಕಲೆಯ ವಿಷಯದಲ್ಲಿಯೂ ತಿಳಿಯಬೇಕು. ಸಂಕ್ಷೇಪವಾಗಿ ಹೇಳುವುದಾದರೆ ಪ್ರಾಥಮಿಕ ಶಿಕ್ಷಣವು ಸಾರ್ವತ್ರಿಕವಾಗುವುದೇ ನಿಜವಾದ ಸುಧಾರಣೆಯೆಂದು ಹೇಳಬಹುದು. ಈ ಸಂಗತಿಯನ್ನು ತಿಳಿದೇ ದಿವಂಗತರಾದ ಗೋಖಲೆಯವರು ವರಿಷ್ಟ ನ್ಯಾಯವಿಧಾಯಕ ಸಭೆಯಲ್ಲಿ ಸಾರ್ವತ್ರಿಕ ಶಿಕ್ಷಣದ ಬಿಲ್ಲನ್ನು ತಂದಿದ್ದರು. ಸಮಾಜ ಸುಧಾರಣೆಯ ಇನ್ನೊಂದು ಅಂಗವು ಯಾವುದೆಂದರೆ, ಹಿಂದುಸ್ಥಾನದಲ್ಲಿ ಮದ್ಯಪಾನವು ದಿನೇ ದಿನೇ ಹೆಚ್ಚುತ್ತ ಹೋಗಿದೆ, ಇದು ಸಮಾಜದ ಹಿತಕ್ಕಾಗಲಿ ದೇಶದ ಹಿತಕ್ಕಾಗಲಿ ತುಂಬಾ ಹಾನಿಕರವಾದುದರಿಂದ ಅದನ್ನು ನಿಲ್ಲಿಸಲು ಪ್ರಯತ್ನಪಡಬೇಕು.

ಸಮಾಜದಲ್ಲಿ ಇಂತಹ ಕೊರತೆಗಳೂ, ದೋಷಗಳೂ ಇರುವಾಗ ಸಮಾಜ ಸುಧಾರಕರೆನ್ನಿಸಿಕೊಳ್ಳುವವರು ಅವುಗಳ ಕಡೆಗೆ ನೋಡದೆ ವಿಧವಾವಿವಾಹದಲ್ಲಿಯೂ, ಜಾತಿಸಂಕರದಲ್ಲಿಯೂ ತಮ್ಮ ಉತ್ಸಾಹವನ್ನೂ ಸಾಮರ್ಥ್ಯವನ್ನೂ ವ್ಯಯ ಮಾಡುತ್ತಿದ್ದಾರೆ. ಇದನ್ನು ನೋಡಿ ಸುಧಾರಕರು ಇನ್ನೂ ಕಣ್ಣು ತೆರೆಯಲಿಲ್ಲೆಂತ ಹೇಳಬೇಕಾಗುತ್ತದೆ. ವಿಧವಾವಿವಾಹದಿಂದ ಅಥವಾ ಜಾತಿಸಂಕರದಿಂದ ಸ್ವರಾಜ್ಯದ ಅರ್ಹತೆಯು ಬರುವುದಿಲ್ಲ. ಹಾಗೆ ಬರುವುದಾದರೆ ಬರ್ಮಾದೇಶಕ್ಕೆ ನಮ್ಮ ಸುಧಾರಕರು ರಾಜ್ಯಕರ್ತರಿಂದ ಈಗ ಸ್ವರಾಜ್ಯ ಕೊಡಿಸಬೇಕೆಂದು ಅವರಿಗೆ ನಾವು ಸವಿನಯವಾಗಿ ಸೂಚಿಸುವೆವು. ಬರ್ಮಾದೇಶದಲ್ಲಿ ಸ್ತ್ರೀಶಿಕ್ಷಣಕ್ಕಾಗಲಿ, ಸ್ತ್ರೀ ಸ್ವಾತಂತ್ರ್ಯಕ್ಕಾಗಲಿ ಪ್ರತಿಬಂಧವಿಲ್ಲ; ವಿಧವೆಯರು ಅವಿವಾಹಿತರಾಗಿ ನಿಂತು ತಮ್ಮ ಜನ್ಮವನ್ನು ನಿರರ್ಥಕ ಮಾಡಿಕೊಳ್ಳಬೇಕೆಂಬ ನಿಯಮವೂ ಇಲ್ಲ, ಒಬ್ಬ ಬರ್ಮೀ ಗೃಹಸ್ಥನಿಗೆ ನಾಲ್ಕು ಹೆಣ್ಣು ಮಕ್ಕಳಿದ್ದರೆ ಅವರು ಹಿಂದು, ಕ್ರಿಸ್ತಿ ಮುಹಮ್ಮದ ಮತ್ತು ಬರ್ಮೀ ಈ ಮತದ ಪುರುಷರೊಡನೆ ವಿವಾಹಮಾಡಿಕೊಳ್ಳಬಹುದು. ಮತ್ತು ತಂದೆಯು ಮನೆಗೆ ಬಂದಾಗ ಅವರೆಲ್ಲರೂ ಏಕತ್ರವೇ ಭೋಜನಾದಿ ವ್ಯವಹಾರಗಳನ್ನು ಯಾವ ಪ್ರತಿಬಂಧವಿಲ್ಲದೆ ನಡಿಸುವರಂತೆ! ಇಲ್ಲಿಯ ಸುಧಾರಕರು ಅಪೇಕ್ಷಿಸುತ್ತಿರುವ ಸಾಮಾಜಿಕ ಸುಧಾರಣೆಯು ಬರ್ಮಾದೇಶದಲ್ಲಿ ಇಷ್ಟು ಉಚ್ಚಸ್ಥಿತಿಯಲ್ಲಿರುವಾಗ ಆ ದೇಶಕ್ಕೆ ಇವರು ಯಾಕೆ ಸ್ವರಾಜ್ಯವನ್ನು ಕೊಡಿಸಬಾರದು? ನಿಜವಾಗಿ ಹೇಳುವುದಾದರೆ ನಿರ್ಣಯಸಿಂಧು, ಧರ್ಮಸಿಂಧು ಇವುಗಳನ್ನು ಬಿಟ್ಟು "ಅನುಕೂಲ ಸಿಂಧು"ವನ್ನು ತಯಾರಿಸಿಕೊಳ್ಳುವುದು ಸಮಾಜದ ಸುಧಾರಣೆಯಲ್ಲ. ಅದರಿಂದ ಯಾವ ಪಾತ್ರತೆಯೂ ಬರಲಿಕ್ಕಿಲ್ಲ. ಅದೊಂದು ಉಚ್ಛೃಂಖಲ ಪ್ರವೃತ್ತಿಯ ಮಾರ್ಗವು. ಆದುದರಿಂದ ಪ್ರಬುದ್ಧರಾದ ಸುಧಾರಕರು ಈ ನಿಷ್ಫಲ ಪ್ರಯತ್ನಗಳನ್ನು ಬಿಟ್ಟು ಸಾರ್ವತ್ರಿಕ ಶಿಕ್ಷಣ ಮದ್ಯಪಾನಾದಿದುರ್ವ್ಯಸನಗಳ ನಿರ್ಮೂಲನ ಮೊದಲಾದ ಯಥಾರ್ಥ ಸಾಮಾಜಿಕ ಸುಧಾರಣೆಗಳನ್ನು ಅವಲಂಬಿಸಿ ತನ್ಮೂಲಕ ಸಮಾಜವನ್ನೂ ದೇಶವನ್ನೂ ಉದ್ಧರಿಸುವರೆಂತ ಆಶಿಸುತ್ತೇವೆ.

ಪತ್ರವ್ಯವಹಾರ.

ಸ್ವದೇಶಾಭಿಮಾನಿ ಪತ್ರಕರ್ತರಿಗೆ—

ನಾನು ಈಗ ಬಿಜಾಪುರಕ್ಕೆ ಬಂದಿರುತ್ತೇನೆ. ಈ ಜಿಲ್ಲೆಯಲ್ಲಿ ಹೆಚ್ಚು ಕಡೆಯಲ್ಲಿ ವಿಸ್ತಾರವಾದ ಬೈಲು ಶೀಮೆಯೇ—ಇದರಲ್ಲಿ ಎರೆ ಎಂಬ ಕಪ್ಪುನೆಲವೇ ಜಾಸ್ತಿ. ಇಲ್ಲಿ ಸೆಕೆ ಹೆಚ್ಚು, ಬೇಸಿಗೆಯೊಳಗೆ ಉಷ್ಣತ್ವವು ೧೧೦ ಡಿಗ್ರಿ ವರೆಗೆ ಏರುತ್ತದೆ. ಈ ಜಿಲ್ಲೆಯ ಹೊಳೆಗಳ ದಡದಲ್ಲಿದ್ದ ಗ್ರಾಮಗಳ ಹೊರತಾಗಿ ಉಳಿದ ಕಡೆಯಲ್ಲೆಲ್ಲ ಕುಡಿಯುವ ನೀರಿನ ದುರ್ಭಿಕ್ಷ ಬಹಳ. ಸಾಧಾರಣವಾಗಿ ಜಲಾಶಯವು ಒಂದು ಊರಿಗೆ ಒಂದು ಮಾತ್ರ ಇರುತ್ತದೆ. ಇದರಲ್ಲಿ ಕೂಡಾ ನೀರು ೧೨ ತಿಂಗಳು ಸಾಕಾಗುವದಾಗಿಲ್ಲ. ಆದರೂ ಹವೆಯು ಬಹು ಆರೋಗ್ಯಕರವಾಗಿದ್ದು ಬೇಸಿಗೆ ಕಾಲದಲ್ಲಿ ಉಷ್ಣತ್ವ ಹ್ಯಾಗೆ ಜಾಸ್ತಿಯೋ ಹಾಗೆಯೇ ಚಳಿಕಾಲದಲ್ಲಿ ಚಳಿಯು. ಹೀಗಿದ್ದರೂ ಹವೆಯಲ್ಲಿ ನೀರಿನ ಅಂಶವು ಏನೂ ಇಲ್ಲದ ಕಾರಣ ಕ್ಷಯರೋಗಿಗಳೂ ಉಬ್ಬಸದ ರೋಗದವರೂ ಇಲ್ಲಿಗೆ ಬಂದು ನಿಂತು ಆರೋಗ್ಯಹೊಂದುತ್ತಾರೆ. ಮತ್ತು ಗಂಡಮಾಲೆ ರೋಗದವರೂ ಹೊಟ್ಟೆಯೊಳಗೆ ಯಾ ದೇಹದ ಮೇಲ್ಭಾಗದಲ್ಲಿ ಎಲ್ಲಿಯೂ ಬಾವು ಆಗಿ ಸೋರುವ ವ್ರಣಗಳು ಇದ್ದವರೂ ಈ ಹವೆಗೆ ಬಂದು ಸ್ವಲ್ಪ ಚಿಕಿತ್ಸೆನಡಿಸಿಕೊಂಡರೆ ಕ್ಷೇಮಹೊಂದಿ ಮರತಹೋಗುತ್ತಾರೆ—ಇದಕ್ಕೆಲ್ಲ ನೀರಿನ ಸ್ಪರ್ಶವಿಲ್ಲದ ಹವೆಯೇ ಮುಖ್ಯ ಕಾರಣ. ಹೆಚ್ಚು ತನಸು ಇರುವ ಮಲಬಾರ ದಕ್ಷಿಣ ಕನ್ನಡಾ ಜಿಲ್ಲೆಗಳ ರೋಗಿಗಳಿಗೆ ಇದು ಒಂದು ಆರೋಗ್ಯಕೊಡುವ ಸ್ಥಾನವೆಂತ ಎಣಿಸಬಹುದು.

ಇಲ್ಲಿ ಅಂಜೂರ, ದ್ರಾಕ್ಷೆ, ದಾಳಿಂಬ ಫಲಗಳನ್ನು ಬೆಳೆಯಿಸುತ್ತಾರೆ. ಇಲ್ಲಿಯ ಮಣ್ಣು ದಾಳಿಂಬದ ಗಿಡಗಳಿಗೆ ಬೇಕಾದದ್ದೇ ಎಂತ ತೋರುತ್ತದೆ. ಬೀಜವನ್ನು ತಿಂದು ಬಿಸಾಡಿದರೆ ಅದರಿಂದ ಗಿಡ ಹುಟ್ಟುತ್ತದೆ. ಹೆಚ್ಚಿಗೆ ಆರೈಕೆ ಏನೂ ಬೇಡ. ದ್ರಾಕ್ಷೆಬಳ್ಳಿಯು ಕಾಟಬಳ್ಳಿಗಳ ಹಾಗೆ ಹಬ್ಬುತ್ತದೆ. ಎರಡು ಯಾ ಮೂರು ವರುಷಗಳೊಳಗೆ ದ್ರಾಕ್ಷೆಗೊಂಚಲು ಬಿಡುತ್ತದೆ. ಅಂಜೂರವು ಮುಖ್ಯವಾಗಿ ಲಾಯಕು ಆಗುತ್ತವೆ ಎಂತ ಹೇಳಲಿಕ್ಕೆ ಏನೂ ಅಂಜಿಕೆ ಇಲ್ಲ. ಹಣ್ಣಾದ ಒಂದು ಅಂಜೂರವು ೧೦ ರೂಪಾಯಿ ತೂಕ ಭಾರ ಇರುತ್ತದಂತೆ.

ಬಿಜಾಪುರ ಶಹರಿನಲ್ಲಿ ಕಸಿ ಮಾವಿನ ಮರಗಳು ಬಹೂ ಕಮ್ಮಿ. ಇದರ ಗಿಡ ನಟ್ಟರೆ ಚಿಗುರುತ್ತವೆ. ನಂತರ ಎಲೆಗಳು ಒಣಗಿಹೋಗುತ್ತವೆ. ಗೊರಟುಹಾಕಿ ಮರಗಳನ್ನು ಹೆಚ್ಚು ಪ್ರಯಾಸದಿಂದ ಬೆಳೆಸುತ್ತಾರೆ. ಇಡೀ ಶಹರಿನಲ್ಲಿ ಎರಡೇ ಹಲಸಿನ ಮರಗಳು ಅವೆ. ಹವೆಯು ಶೀವವಿಲ್ಲದಿದ್ದಾದ ಕಾರಣ ಮಾವೂ ಹಲಸೂ ನಮ್ಮ ಊರಿನ ಹಾಗೆ ಬೆಳೆಯುವದಿಲ್ಲೆಂತ ಕಾಣುತ್ತದೆ. ಇಲ್ಲಿ ಗುಲಾಬಿ, ಮಲ್ಲಿಗೆ, ಮುಂತಾದ ಹೂಗಳು ಮುಖ್ಯವಾಗಿ ಹುಟ್ಟುತ್ತವೆ.

ಈ ಜಿಲ್ಲೆಯಲ್ಲಿ ಕಪ್ಪುನೆಲವೇ ಜಾಸ್ತಿ ಆದಕಾರಣ ಹತ್ತಿಯ ಪೈದಾಸ್ತು ವಿಶೇಷ. ಇಲ್ಲಿ ಕುಸಬಿ ಎಂಬ ಬೀಜದ ಪೈದಾಸ್ತು ನಡಿಯುತ್ತದೆ. ಎಣ್ಣೆಯನ್ನು ಇದರಿಂದ ತೆಗದು ಜನರು ನಮ್ಮ ಊರಲ್ಲಿ ತೆಂಗಿನ ಎಣ್ಣೆಯನ್ನು ಅಡಿಗೆಕೋಣೆಯಲ್ಲಿ ಯಾವ

ಯಾವ ಪಕ್ವಾನ್ನಗಳ ಬಗ್ಗೆ ಉಪಯೋಗಿಸುತ್ತಾರೋ ಆ ಬಗ್ಗೆಲ್ಲಾ ಈ ಕುಸುಬಿನ ಎಣ್ಣೆಯನ್ನು ಇತ್ತಕಡೆಯಲ್ಲಿ ಆಮುಖಾಸೆ ಉಪಯೋಗಿಸುತ್ತಾರೆ. ಇದನ್ನು ಸೆಪ್ಟಂಬರ ಒಕ್ಟೋಬರ ತಿಂಗಳುಗಳಲ್ಲಿ ಬಿತ್ತಿ ಜನವರಿ ಫೆಬ್ರವರಿ ತಿಂಗಳುಗಳಲ್ಲಿ ಕಟಾವ ಮಾಡುತ್ತಾರೆ. ತೊಗರಿ, ಹೆಸರು, ಉದ್ದು, ಜೋಳ ಬಿತ್ತುವಾಗ ಇದನ್ನು ಬಿತ್ತುತ್ತಾರೆ. ನಮ್ಮ ಊರಲ್ಲಿ ಈಗ ತೆಂಗಿನಕಾಯಿಗೂ ಇದರ ಎಣ್ಣೆಗೂ ಕ್ರಯ ಏರುತ್ತಾ ಬರುವ ಕಾರಣ ಈ ಬೀಜದ ಸಾಗುವಳಿಯನ್ನು ಪ್ರಾರಂಭಿಸಬಹುದಾಗಿ ಕಾಣುತ್ತದೆ. ಇದರ ಸಾಗುವಳಿಗೆ ಹೆಚ್ಚು ಪ್ರಯಾಸವಿಲ್ಲ. ಕರೀ ಎಳ್ಳಿಗೆ ಸಿಗುವ ಎಣ್ಣೆಗಿಂತ ಜಾಸ್ತಿ ಎಣ್ಣೆಯು ಬಿಳೀ ಎಳ್ಳಿಗೆ ಸಿಗುತ್ತದೆಂಬ ಸಬಬಿನ ಮೇಲೆ ಇದರ ಪೈದಾಸ್ತನ್ನು ಇಲ್ಲಿ ನಡಿಸುತ್ತಾರೆ; ಮಾತ್ರವಲ್ಲ, ರಾಲ್ಲಿಬ್ರದರ್ಸ್ ಎಂಬ ಯುರೋಪಿಯನ್ ಸಾಹುಕಾರರು ಕೂಡಾ ಈ ಪ್ರಾಂತ್ಯಗಳಲ್ಲಿ ಬಿಳೀ ಎಳ್ಳನ್ನು ಖರೀದಿ ಮಾಡಿ ವಿಲಾಯತಿಗೆ ಕಳುಹಿಸುತ್ತಾರೆ. ಈ ಎರಡು ಜಾತಿಯ ಬೀಜಗಳನ್ನು ನಮ್ಮ ಕನ್ನಡಾ ಜಿಲ್ಲೆಯಲ್ಲಿ ಬೆಳೆಸುವಂತೆ ಕೃಷಿ ಸಂಘದವರು ಮುದ್ದತ ಕೊಡಬಹುದಾಗಿ ತೋರುತ್ತದೆ. ಇಲ್ಲಿಯ ಆಕಳುಗಳಿಗೆ ಕುಸುಬೀಜದ ಹಿಂಡಿಯೇ ಉಪಯೋಗಿಸುತ್ತಾರೆ.

ಇಲ್ಲಿಯ ಮುಹಮ್ಮದಿ ರಾಜರುಗಳು ರಾಜ್ಯಭಾರ ನಡಿಸುತ್ತಿರುವಾಗ ಕಟ್ಟಿಸಿದ ಮಹತ್ತ ಚಮತ್ಕಾರಿಕ ಕಟ್ಟೋಣಗಳೂ, ದೂರವಿರುವ ಒಂದು ಹೊಳೆಗೆ ಬಾಂದು ಹಾಕಿ ನೀರನ್ನು ನೆಲದ ಒಳಗಿನಿಂದಲೇ ತಮ್ಮ ರಾಜಧಾನಿಯಾದ ಈ ಬಿಜಾಪುರಕ್ಕೆ ತಂದು ಆಗ ಸುಮಾರು ಒಂದೆರಡು ಲಕ್ಷ ಜನಸ್ತೋಮದ ಉಪಯೋಗದ ಬಗ್ಗೆ ಅಲ್ಲಲ್ಲಿ ಕೂಡಿಹಾಕಿದ ಚಮತ್ಕಾರವೂ ಯಾರಿಗೂ ಚನ್ನಾಗಿ ಇನ್ನೂ ತಿಳಿದುಬರಲಿಲ್ಲ. ಒಂದು ಏಳು ಏಣಿಗಳಿಂದ ಮೇಲಕ್ಕೆ ಹೋಗುವ ಉಪ್ಪರಿಗೆಯಲ್ಲಿ ಮಾತಾಡಿದರೆ ೭ ಯಾ ೩ ಸಾರಿ ಮರುಧ್ವನಿಯಾಗುತ್ತದೆ. ಈ ಕಟ್ಟೋಣದ ಚಮತ್ಕಾರವೂ ಇನ್ನೂ ಇರುತ್ತದೆ. ಇಂಥಾ ಕಟ್ಟೋಣವು ಇಡೀ ಹಿಂದೂಸ್ಥಾನದಲ್ಲಿ ಮಾತ್ರವಲ್ಲ ಇಡೀ ಭೂಲೋಕದಲ್ಲಿ ಕೂಡಾ ಇನ್ನೊಂದು ಇಲ್ಲವೆಂತ ಎಲ್ಲರೂ ಹೇಳುತ್ತಾರೆ. ಈ ಕಟ್ಟೋಣಗಳ ಕುರಿತು ಇನ್ನೂ ಮೆಚ್ಚು ತಪಶೀಲಾಗಿ ನಿಮ್ಮ ಪತ್ರವಾಚಕರ ತಿಳುವಳಿಕೆ ಬಗ್ಗೆ ಬರಿಯಬೇಕೆಂಬ ಆತುರವಿದೆ.

ಬಿಜಾಪುರ ತಾ. ೨೮ನೇ ಜೂನ್ 1916. ಎಲ್ಲೂರ ಸುಬ್ಬರಾವ್.

"ಮುಂಬೈ ಕನ್ನಡ ಗ್ರಂಥಾಲಯ ಸಂಘ."

ಈ ಸಂಘದ ಪ್ರಥಮ ವರ್ಷಾಂತ್ಯ ಸಮಾರಂಭವು ಇದೇ ಜೂನ್ ತಿಂಗಳ ತಾರೀಖು ೧೮ನೇ ಆದಿತ್ಯವಾರ ಸಂಘದ ವಾಚಕ ಮಂದಿರದಲ್ಲಿ ಯುಕ್ತ ಸಂಭ್ರಮದಿಂದ ನಡೆಯಿತು. ಸಂಘದ ಮೆಂಬರರೂ ಸಂಘಕ್ಕೆ ಧನಸಹಾಯವನ್ನಿತ್ತಿದ್ದ ಇತರ ಮಹನೀಯರೂ ಹೆಚ್ಚು ಕಡಿಮೆ ೭೫ ಮಂದಿಯ ವರೆಗೆ ನೆರೆದಿದ್ದರು. ಸಂಘದ ಮೂಲ ಸಂಸ್ಥಾಪಕರೂ ಕಾರ್ಯಧುರಂಧರರೂ ಆದ ಮಾನಾರ್ಥಕಾರ್ಯದರ್ಶಿ ಮ| ರಾ| ರಾ| ಕೆ. ಚಂದು ಪುತ್ರಣ್ಣನವರು ಸಭಿಕರಿಗೆ ಸ್ವಾಗತವಾದವನ್ನಿತ್ತ ಬಳಿಕ ಮ| ರಾ| ರಾ| ಯಿಡ್ಯೆ ನಾರಾಯಣಾಚಾರ್ಯರು ಅಂದಿನ ಅಗ್ರಾಸನವನ್ನು ಏಕಕಂಠಸ್ತೋತ್ರದೊಡನೆ ಕೈಗೊಂಡರು. ಸಂಘದ ವಾರ್ಷಿಕ ವರದಿಯೂ ಲೆಕ್ಕದ ಸಾರಾಂಶವೂ ಕಾರ್ಯದರ್ಶಿಗಳಿಂದ ಓದಲ್ಪಟ್ಟವು. ವರ್ಷಾಂತ್ಯದಲ್ಲಿ ಒಟ್ಟು ಮೆಂಬರರ ಸಂಖ್ಯೆಯು ೫೧ ಆಗಿತ್ತೆಂದೂ, ಪುಸ್ತಕಗಳ ಸಂಖ್ಯೆಯು ೧೫೦ ಆಗಿತ್ತೆಂದೂ, ಸಂಘವು ಆರಂಭದಲ್ಲಿ ಅನೇಕ ಎಡರುಗಳಿಂದ ಪೀಡಿತವಾಗಿದ್ದರೂ ಕನ್ನಡ ಭಾಷಾಭಿಮಾನಿಗಳ ಸಹಾಯದಿಂದ ಈಗ ತಕ್ಕಮಟ್ಟಿಗೆ ಉತ್ತಮ ಸ್ಥಿತಿಯಲ್ಲಿರುವುದೆಂದೂ ವರದಿಯಿಂದ ತಿಳಿದು ಬಂತು. ನಂತರ ಅಗ್ರಾಸೀನರಾದ ಮ| ರಾ| ಯಿಡ್ಯೆ ನಾರಾಯಣಾಚಾರ್ಯರು ಸಂಘದ ಶ್ರೇಯೋಭಿವೃದ್ಧಿಗೆ ತಕ್ಕುದಾದ ಕೆಲವು ಸೂಚನೆಗಳಿಂದ ಕೂಡಿದ ಭಾಷಣವನ್ನೂ, ಅವರೊಂದಿಗೆ ಅತಿಥಿಗಳಾಗಿ ಸಂದರ್ಶಿಸಿದ್ದ ಮ| ರಾ| ರಾ| ವೇದಮೂರ್ತಿ ಗೋಪಾಲ ಭಟ್ಟರು ಇಂಥಾ ಸಂಘಗಳಿಂದ ದೊರೆಯುವ ಲಾಭಗಳ ಕುರಿತು ವೇದಾರ್ಥಗರ್ಭಿತವಾದ ಸುಬೋಧೆಯನ್ನೂ ಇತ್ತರಲ್ಲದೆ, ಈ ಸಂಘದ ಉದ್ದೇಶಗಳು ಸುಜನಾಶ್ರಯಕ್ಕೆ ಅರ್ಹವಾದುದರಿಂದ ತಾವಿಬ್ಬರೂ ಸದಸ್ಯರಾಗಿ ಸೇರಿ ಸಂಘವನ್ನು ಪ್ರೋತ್ಸಾಹಗೊಳಿಸಿದರು. ವೇ| ಮೂ. ಗೋಪಾಲ ಭಟ್ಟರು ರೂಪಾಯಿ ೪—೪—೦ ಸಹಾಯಾರ್ಥವಾಗಿಯೂ ಕೊಟ್ಟರು. ಅದಲ್ಲದೆ ಸಂಘದ ಮೆಂಬರ್ಸರಲ್ಲೊಬ್ಬರಾದ ಮ| ರಾ| ರಾ| ಯರ್ಮಾಲ ಕೊರಗಪ್ಪನವರೂ, ಕಾಡಿಪಟ್ಣ ಮಂಜುನವರೂ ಸಂಘಕಾರ್ಯಾಭ್ಯುದಯದ ಪರವಾಗಿ ಪ್ರಶಂಸನೀಯವಾದ ಆಸಕ್ತಿಯನ್ನು ತೋರಿಸಿ ರೂಪಾಯಿ ೫೬—೪—೦ನ್ನು ಒದಗಿಸಿಕೊಟ್ಟ ಅಮೌಲ್ಯ ಧನಸಹಾಯವೂ, ಮ| ರಾ| ರಾ| ಬೋಳಾರ ರಾಮರಾಯರು ದಿವಂಗತರಾದ ತಮ್ಮ ತಂದೆಯ ಸ್ಮರಣಾರ್ಥಕ್ಕಾಗಿ ಸಂಘದ ಪುಸ್ತಕ ಭಂಡಾರಕ್ಕೆ ಇತ್ತ ರೂಪಾಯಿ ೫—೦—೦ ಸಹ ಕೃತಜ್ಞತಾಪೂರ್ವಕವಾಗಿ ಸ್ವೀಕರಿಸಲ್ಪಟ್ಟವು. ಆ ಬಳಿಕ ಮುಂದಿನ ವರ್ಷದಲ್ಲಿ ಸಂಘದ ಕಾರ್ಯವನ್ನು ನಿರ್ವಹಿಸುವ ಬಗ್ಗೆ ಮ| ರಾ| ರಾ| ಬಿ. ವಾಮನ ರಾವ್, ಕೆ. ಚಂದು ಪುತ್ರಣ್ಣಯ್ಯ, ಯರ್ಮಾಲ ಕೊರಗಪ್ಪ, ಹ್ಯೊಗೆ ಸೋಮಯ್ಯ ಮುಂದಣ್ಣಾಯ, ಮುಕ್ಕ ದುಗ್ಗಣ, ಮುಲ್ಕಿ ಪೋಂಕ್ರ, ಒಪ್ಪನಾಡ ಕೊರಗಪ್ಪ ಶೆಟ್ಟಿ, ಟಿ. ಬಿ. ಸುವರ್ಣ, ಮುಲ್ಕಿ ರಾಮಚಂದ್ರ, ಮುಲ್ಕಿ ಗುರುವ ಕುಂಞರ್, ಮಟ್ಟು ನಾರಾಯಣ, ಈ ಜನರು ಆರಿಸಲ್ಪಟ್ಟರು, ಕಡೆಗೆ ಮ| ಯಚ್. ಸೋಮಯ್ಯ ಮುಂದಣ್ಣಾಯರು ಉಚಿತ ಮಾತುಗಳಿಂದ ಅಂದಿನ ಅಗ್ರಸ್ಥರಿಗೆ ಧನ್ಯವಾದವನ್ನಿತ್ತನಂತರ, ಫಲಪುಷ್ಪ ತಾಂಬೂಲಾದಿಗಳಿಂದ ಸತ್ಕರಿಸಲ್ಪಟ್ಟು ಸಭೆಯು ಕೊನೆಗೊಂಡಿತು.

ಫೊರೆಸ್ಟ್ ಇಲಾಖೆಯಿಂದ ಸಂಕಷ್ಟ.

ತಾವು ತಮ್ಮ ಪತ್ರಿಕೆಯಲ್ಲಿ ಕೆಳಗೆ ತೋರುವ ಮೇರೆಗೆ ಫೊರೆಸ್ಟು ಇಲಾಖೆಯವರು ನಮ್ಮ ಊರಿನ ರೈತರಿಗೆ ಕೊಟ್ಟ ಸಂಕಷ್ಟಗಳನ್ನು ಪ್ರಕಟಿಸಬೇಕಾಗಿ ವಿನಯಪೂರ್ವಕ ಅಪೇಕ್ಷಿಸುತ್ತೇನೆ. ನಮ್ಮ ಕೊಲ್ಲಮೊಗ್ರ ಗ್ರಾಮದಲ್ಲಿ ನಾಲ್ಕೂರು ಬ್ಲೋಕ್ ಎಂಬ ಸುರಕ್ಷಿತಪಡಿಸಿದ ಕಾಡಿಗೆ ಸೇರಿದ ಸುಮಾರು ೨೦೦ ಎಕ್ರೆ ವಿಸ್ತೀರ್ಣದ ದೊಡ್ಡದೊಂದು ಎಂಬ ಒಂದು ಮೈದಾನು ಇರುತ್ತದೆ. ಇದರಲ್ಲಿ ಈ ಊರಿನ ಸುಮಾರು ೫೦೦ ನಡೆ ಜಾನುವಾರುಗಳು ಅನಾದಿಯಿಂದಲೂ ಪ್ರತಿ ದಿನವೂ ಮೇಯುವಂಥಾದ್ದಾಗಿರುತ್ತದೆ. ಈ ಜಾನುವಾರುಗಳ ಮೇವಿಗೆ ಈ ಮೈದಾನು ವಿನಹ ಬೇರೆ ಅನುಕೂಲ ಸ್ಥಳವೇ ಇರುವದಿಲ್ಲ. ಮತ್ತು ಮುನೆಕಟ್ಟಿದ ಮಸ್ಕೆರೆ ಚಾವಣಿ ಬಗ್ಗೆ ಸದರಿ ಕೊಲ್ಲಮೊಗ್ರ ಮತ್ತು ನೆರೆಹೊರೆ ಗ್ರಾಮದವರಿಗೆ ಸಹ ಈ ಅಡ್ಕದಿಂದಲೇ ಪ್ರಾಕ್‌ಲಾಗ್ಯಾತು ಯಾವ ಒಂದು ತರದ ನಿರ್ಬಂಧವಿಲ್ಲದೆ ಮುಳಿಹುಲ್ಲು ತೆಗೆಯುವತೆ ಸಹ ಸ್ವತಂತ್ರವಿದ್ದಿತು. ಆದರೆ ಜಾನುವಾರುಗಳ ಮೇವಿಗೆ ಮಾತ್ರ ಫೀಸು ಪಡದು ಪಾಸ್‌ಪೋರ್ಟು ಕೊಡುತ್ತಿದ್ದರು. ಈ ಮೈದಾನು ಫೊರೆಸ್ಟು ರೂಲ್ಸಿಗೆ ವಿರೋಧವಾಗಿ ಎಲ್ಲಾ ಕಾಡುಗಳಂತೆ ಸುಟ್ಟು ಹೋಗುತ್ತದೆ. ಈ ಬೆಂಕಿ ತಕ್ಸೀರು ಯಾರಿಂದ ನಡಿಸಲ್ಪಡುತ್ತದೆಂಬದು ಈ ವರೆಗೆ ಯಾರ ತಿಳುವಳಿಕೆಗೂ ಬಂದದ್ದು ತಿಳಿಯುವದಿಲ್ಲ. ಹೀಗಿರುತ್ತಾ ಈ ವರ್ಷ ಸಹ ಸದರಿ ಅಡ್ಕವು ಸುಟ್ಟು ಹೋದ ಕುರಿತು ಫೊರೆಸ್ಟು ಇಲಾಖೆಯವರು "ಕುಂಬಾರ ಸತ್ತರೆ ಕಮ್ಮಾರಗೆ ಸಂಸ್ಕಾರ" ಎಂಬಂತೆ ಸದರಿ ಅಡ್ಕದಲ್ಲಿ ಜಾನುವಾರು ಮೇಯುವದು, ಹುಲ್ಲು ತೆಗಿಯುವದು ಸಹ ಇನ್ನು ಮುಂದೆ ಕೂಡದೆಂತ ಯಾರೋ ಮಾಡಿದ ತಪ್ಪಿನ ಗೋಸ್ಕರ ಇಡೀ ಗ್ರಾಮದವರನ್ನು ಶಿಕ್ಷಿಸುವ ಬಗ್ಗೆ ಆ ಅಡ್ಕವನ್ನು ಬಂದುಮಾಡಿ ಜಿಲ್ಲಾ ಗಜೇಟಿನಲ್ಲಿ ಪ್ರಕಟಪಡಿಸಿರುತ್ತಾರೆ. ಆದ್ದರಿಂದ ಈ ಮೇಲೆ ಹೇಳಿದ ವಿಷಯಗಳನ್ನು ರೈತರ ಹಿತಕ್ಕಾಗಿ ಬರುವ ಸಂಚಿಕೆಯಲ್ಲೇ ಪ್ರಚಾರಪಡಿಸಬೇಕಾಗಿ ಪ್ರಾರ್ಥನೆ.

ಕೊಲ್ಲಮೊಗ್ರ, ತಾ. 5-7-16. ಬಡ ರೈತ.

ಮಾರಾಟಕ್ಕೆ ತಯ್ಯಾರದೆ.

ಕಾಸರಗೋಡು ತಾಲೂಕು ಮೊಗ್ರಾಲ್ ಮಾಗಣೆ ಕಸಬಾ ಗ್ರಾಮದಲ್ಲಿರುವ ಸಾವುಕಾರ ಕುಂಞಪಕ್ಕಿ ಬ್ಯಾರಿಗಳವರ ಬಾಬತು ಸದರಿ ತಾಲೂಕು ಪುತ್ತೂರು, ಕುಂಬುಡಾಜೆ, ಕನ್ಯೂರು, ಬಾರೆ, ಕೂಡ್ಲು, ಪಳ್ಳಿಕೆರೆ ಈ ಗ್ರಾಮಗಳಲ್ಲಿರುವ ಆಸ್ತಿಗಳನ್ನು ಮಾರಾಟಮಾಡುವ ಬಗ್ಗೆ ಮಂಗಳೂರ ಶಹರ ಗೋಳಿಕಟ್ಟೆ ಬಜಾರದಲ್ಲಿರುವ ಸಿ. ಅಬ್ದುಲ್‌ರಹಿಮಾನ ಹಜಾರ ಬ್ಯಾರಿಗಳ ಮಗ ಸಿ. ಮಹಮೂದ ಬ್ಯಾರಿಯಾದ ನಾನು ಪವರ್ ಓಫ್ ಯಟರ್ನಿ ಮೂಲಕ ಅಧಿಕಾರಪಟ್ಟಿರುತ್ತೇನೆ. ಅವಶ್ಯವಿರುವ ಎಲ್ಲಾ ಮಾಹಿತಿಯನ್ನು ನನ್ನ ಕೂಡ ಕೇಳಿ ತಿಳಕೊಳ್ಳಬಹುದು.

C. Mohomood,
C/o C. Abdul Rahiman Koragappa,
Hoige Bazar, Mangalore.

ಯುದ್ಧ ಸಮಾಚಾರ.

———.o.———

ತಾ. ೫ನೇ ಜುಲಾಯಿ.

ಸೊಮ್ಮೆಯ ದಕ್ಷಿಣದಲ್ಲಿ ಕಠಿಣ ಕಾಳಗ ನಡೆದು ರಾತ್ರಿಕಾಲ ಫ್ರೆಂಚರಿಗೆ ಪೂರ್ಣ ಜಯವಾಗಿರುವದು. ಫ್ರೆಂಚರು ಜರ್ಮನರ ೨ ಸೇನಾಸಾಲನ್ನು ಪೂರ್ಣವಾಗಿ ಸ್ವಾಧೀನಮಾಡಿಕೊಂಡು ಹರ್ಬೆಕೋರ್ಟ ಎಂಬ ಗ್ರಾಮವನ್ನು ಹಿಡಕೊಂಡಿರುವರು. ಸೊಮ್ಮೆಯ ಉತ್ತರದಲ್ಲಿ ಫ್ರೆಂಚರು ಸ್ವಾಧೀನಮಾಡಿಕೊಂಡು ನಿಲ್ಲಿಸಿಕೊಳ್ಳುವ ಸ್ಥಳಗಳ ಮೇಲೆ ಜರ್ಮನರು ಪುನಃ ಹಲ್ಲೆಮಾಡಲಿಲ್ಲ. ಫ್ರೆಂಚರು ಸೊಮ್ಮೆಯಲ್ಲಿ ಬ್ರೊಸ್‌ಡೆ ಮರೆಕೋರ್ಟಿನ ಸಮೀಪದ ಜಯಪ್ರದರಾಗಿರುವರು. ಚೇಪಿತ್ರ ಅರಣ್ಯ, ಫ್ಲೌರೆ ಗ್ರಾಮ ಮೊದಲಾದ ಕೆಲವು ಪ್ರಾಮುಖ್ಯ ಸ್ಥಳಗಳು ಫ್ರೆಂಚರ ಸ್ವಾಧೀನವಾಗಿರುವವು. ಫ್ರೆಂಚರ ಶೆರೆಬಿದ್ದ ಜರ್ಮನ ಸೇನಿಕರಲ್ಲಿ ಗಾಯಪಡೆಯದ ೮೦೦೦ ಸೇನಿಕರಿರುವರು.

ಲಾಬ್ಯೊಸೆಲ್ಲಿಯ ಆಜುಬಾಜಿನಲ್ಲಿ ಬ್ರಿಟಿಷರಿಗೂ ಜರ್ಮನರಿಗೂ ಕಠಿಣ ಕಾಳಗವು ನಡಿಯುತ್ತಿದೆ. ಲಾಬ್ಯೊಸೆಲ್ಲಿಯಲ್ಲಿ ಅಳಿದುಳಿದ ಜರ್ಮನ ಸೇನೆಯು ನಮ್ಮವರಿಗೆ ಶರಣಾಗತವಾಗಿರುವದು. ರಣರಂಗದ ಇತರ ಕಡೆಗಳಲ್ಲಿಯೂ ನಮ್ಮವರಿಗೆ ಜಯವಾಗುತ್ತಲಿರುವದು. ಅಂಕ್ರೆಯ ದಕ್ಷಿಣದಲ್ಲಿ ಭಯಂಕರವಾದ ಕಾಳಗವು ನಡಿಯುತ್ತಿದೆ. ಆದರೆ ನಮ್ಮವರು ಸ್ವಾಧೀನಮಾಡಿಕೊಂಡ ಸ್ಥಳಗಳನ್ನು ಶತ್ರುಗಳಿಗೆ ಬಿಟ್ಟುಕೊಡದೆ ಕಾಪಾಡಿಕೊಂಡಿರುವರು. ಲಾಬ್ಯೊಸೆಲ್ಲಿ ಮತ್ತು ಒವಿಲ್ಲರ್ಸ್‌ನಲ್ಲಿ ಕದನವು ಅತಿ ಭೀಕರವಾಗಿರುವದು. ಬೆಳಿಗ್ಗೆ ನಮ್ಮವರು ಒವಿಲ್ಲರ್ಸಿನಲ್ಲಿ ನುಗ್ಗಿಹೋಗಿ ಶತ್ರುಗಳ ೪೦೦ ಮಂದಿಯನ್ನು ಶೆರೆಹಿಡಿದಿರುವರು. ನಮ್ಮವರು ಶತ್ರುಗಳ ೧೧ ವಾಯುನಾವೆಗಳನ್ನು ಕೆಳದೊಬ್ಬಿರುವರು. ನಮ್ಮವರ ೨ ವಾಯುನಾವೆಗಳು ಕಾಣೆಯಾಗಿರುವವು.

ಶತ್ರುಗಳು ಅಲ್ಲಲ್ಲಿ ನುಗ್ಗಿಬಂದು ನಮ್ಮವರ ಮೇಲೆ ಹಲ್ಲೆಮಾಡುತ್ತಿದ್ದಾರೆ. ನಮ್ಮವರು ಕೆಲವು ಸ್ಥಳಗಳಲ್ಲಿ ಮುಂದರಿಯುತ್ತಲಿರುವರು. ಶತ್ರುಗಳು ಕೆಲವು ಕಡೆಗಳಲ್ಲಿ ವಿಶೇಷ ನಷ್ಟಪಟ್ಟು ಹಿಮ್ಮೆಟ್ಟಿರುವರು. ೪೦೦೦ಕ್ಕಿಂತಲೂ ಹೆಚ್ಚಿಗೆ ಮಂದಿ ಶತ್ರುಸೇನಿಕರು ನಮ್ಮವರ ಶೆರೆಬಿದ್ದಿರುವರು. ಶತ್ರುಗಳಿಗೆ ಬೆಂಬಲ ಸೇನೆಯು ಬಂದು ಕೂಡಿದ್ದರಿಂದ ಪ್ರತಿಕಡೆಯಲ್ಲಿಯೂ ಹಠತ್ತಾಗಿ ಕಾದಾಡುತ್ತಿದ್ದಾರೆ. ರಾತ್ರಿಕಾಲ ಲಾಬ್ಯೊಸೆಲ್ಲಿಯ ಆಜುಬಾಜಿನಲ್ಲಿ ನಡೆದ ಕಠಿಣ ಕದನದಲ್ಲಿ ನಮ್ಮವರು ಬಲಕಾಯಿಸಿಕೊಂಡ ಸ್ಥಳದ ಒಂದು ಸಣ್ಣ ಅಂಶವು ಶತ್ರುಗಳಿಗೆ ದೊರಕಿರುತ್ತದೆ ಎಂಬದಾಗಿ ಜನರಲ್ ಹೇಗರವರು ಪ್ರಕಟಿಸಿರುತ್ತಾರೆ. ಒಟ್ಟಿಗೆ ಶೆರೆಬಿದ್ದ ಶತ್ರುಸೇನಿಕರ ಸಂಖ್ಯೆ ೫೦೦೦ಕ್ಕೆ ಮಿಕ್ಕಿರುವದು ಎಂತ ಜನರಲ್ ಹೇಗರವರು ಪ್ರಕಟಿಸಿರುತ್ತಾರೆ.

ರುಶ್ಯಾ ರಣರಂಗದಲ್ಲಿ ರಿಗ್ಗಾದಿಂದ ಕಾಕಾಸೆಸಿನವರೆಗೆ ಕಠಿಣ ಕಾಳಗವು ನಡಿಯುತ್ತಿದೆ. ಮುಖ್ಯವಾಗಿ ಸ್ಟೈರ್ ಮತ್ತು ಸ್ಟೊಕೊಡ್ ನದಿಗಳ ಮಧ್ಯೆ ಕದನವು ಅತಿ ಭೀಕರವಾಗಿರುವದು. ಲುತ್ಸ್ಕಿನ ಪೂರ್ವ ಮತ್ತು ಬುಕ್ಕಾಜಿನಲ್ಲಿ ನಡೆದ ಕದನದಲ್ಲಿ ೨೩೦೦ ಶತ್ರು ಸೇನಿಕರು ರುಶ್ಯನರ ಶೆರೆಬಿದ್ದಿರುವರು.

ಬಾರ್ನೊವಿಚ್ಚಿನ ಉತ್ತರ ಪ್ರಾಂತ್ಯದಲ್ಲಿಯೂ ಘೋರ ಕದನವು ನಡಿಯುತ್ತಿದೆ. ರುಶ್ಯನರು ೫೦ ಆಫೀಸರರನ್ನೂ ೧೦೦೦ ಸೇನಿಕರನ್ನೂ ೪ ಫಿರಂಗಿಗಳನ್ನೂ ಶೆರೆಹಿಡಿದಿರುತ್ತಾರೆ. ಡುಬ್ನೊ ಮತ್ತು ಸೊಕಲಿನ ಮಧ್ಯೆ ರುಶ್ಯನರು ಶತ್ರುಗಳ ೧೦೦೦ ಸೇನಿಕರನ್ನೂ ೫ ಯಂತ್ರಚಾಲಿತ ಫಿರಂಗಿಗಳನ್ನೂ ಶೆರೆಹಿಡಿದಿರುತ್ತಾರೆ. ನೀಸ್ಟರಿನ ಬಲಕಡೆಯಲ್ಲಿ ಶತ್ರುಗಳು ಮೂರಾವರ್ತಿ ನುಗ್ಗಿಬರಲು ಯತ್ನಿಸಿ ನಷ್ಟಪಟ್ಟು ಹಿಮ್ಮೆಟ್ಟಿರುವರು. ಬಾರ್ನೊವಿಚ್ಚಿನಲ್ಲಿ ರುಶ್ಯನರು ಶತ್ರುಗಳ ೭೨ ಆಫೀಸರರನ್ನೂ ೨೭೦೦ ಸೇನಿಕರನ್ನೂ ೧೧ ಫಿರಂಗಿಗಳನ್ನೂ ಕೆಲವು ಯಂತ್ರಚಾಲಿತ ಫಿರಂಗಿಗಳನ್ನೂ ಶೆರೆಹಿಡಿದಿರುವರೆಂತ ರುಶ್ಯಾ ಸರಕಾರದವರು ಪ್ರಕಟಿಸಿರುತ್ತಾರೆ.

ಇಟಲಿ ರಣರಂಗದಲ್ಲಿ ಆಸ್ಟ್ರಿಯನರಿಗೆ ಅಪಜಯವಾಗುತ್ತಲಿದೆ.

ತುರ್ಕರು ಕೌಕಾಸಸಿನಲ್ಲಿ ಪ್ರತಿ ಒಂದು ಕದನದಲ್ಲಿಯೂ ವಿಶೇಷ ನಷ್ಟಪಟ್ಟು ಹಿಮ್ಮೆಟ್ಟುತ್ತಿದ್ದಾರೆ ಎಂತ ರುಶ್ಯನರ ವಾರ್ತೆಯಿಂದ ತಿಳಿದುಬರುತ್ತದೆ.

ತಾ. ೬ನೇ ಜುಲಾಯಿ.

ಸೆಂಕೋರ್ಟಿನಲ್ಲಿ ಶತ್ರುಗಳ ಒಂದು ಬೆಟಾಲಿಯನ್ ಸೇನೆಯು ನಮ್ಮವರಿಗೆ ಶರಣಾಗತವಾಗಿದೆ. ನಮ್ಮವರ ಸೇನೆಯು ಲಾಬ್ಯೊಸೆಲ್ಲಿಯನ್ನು ಪೂರ್ಣವಾಗಿ ಸ್ವಾಧೀನಮಾಡಿಕೊಂಡಿರುತ್ತದೆ. ಜರ್ಮನರು ಇಲ್ಲಿ ಕಠಿಣವಾಗಿ ಹಲ್ಲೆಮಾಡುತ್ತಿದ್ದಾರೆ. ಅಂಕ್ರೆ ಮತ್ತು ಥಿಯೂಪ್‌ವಾಲಿನ ಮಧ್ಯೆ ಶತ್ರುಗಳು ಭೀಕರವಾಗಿ ಗುಂಡು ಹಾರಿಸುತ್ತಲಿದ್ದಾರೆ. ಪ್ರತಿ ಕಡೆಯಲ್ಲಿಯೂ ನಮ್ಮವರೇ ಜಯಪ್ರದರಾಗುತ್ತಿದ್ದಾರೆ.

ಸೊಮ್ಮೆಯಲ್ಲಿ ಫ್ರೆಂಚರು ಕೆಲವು ಅರಣ್ಯಗಳನ್ನೂ ಗ್ರಾಮಗಳನ್ನೂ ಸ್ವಾಧೀನಮಾಡಿಕೊಂಡಿರುವರು. ಫ್ರೆಂಚರು ೧೯ ಗ್ರಾಮಗಳನ್ನೂ ೮೫೦೦ ಸೇನಿಕರನ್ನೂ ೧೦ ಬತ್ತೇರಿಗಳನ್ನೂ ಕೆಲವು ಯಂತ್ರಚಾಲಿತ ಫಿರಂಗಿಗಳನ್ನೂ ಕೆಲವು ತೋಫುಗಳನ್ನೂ ಶೆರೆಹಿಡಿದಿರುತ್ತಾರೆ. ಫ್ರೆಂಚರಿಗೆ ಹೆಚ್ಚಿನ ನಷ್ಟವಾಗಲಿಲ್ಲ. ಜರ್ಮನರು ವೆರ್ಡನ್ ಮತ್ತು ಲೆನ್ಸಿನಿಂದ ಸೇನಿಕರನ್ನು ಈ ರಣರಂಗಕ್ಕೆ ತರಿಸಿಕೊಂಡಿರುವರೆಂಬ ವಾರ್ತೆ ಇದೆ.

ರುಶ್ಯಾ ರಣರಂಗದಲ್ಲಿ ಸ್ಟೈರ್ ಮತ್ತು ಸ್ಟೊಕೊಡ್ ನದಿಗಳ ಬಳಿ ನಡೆಯುತ್ತಿದ್ದ ಕದನವು ಲಿಪ್ಪನದಿಯ ವರೆಗೆ ವಿಸ್ತರಿಸಿಯದೆ. ರುಶ್ಯನರು ಕೆಲವು ಕಡೆಗಳಲ್ಲಿ ಮುಂದರಿದು ಸಾವಿರಾರು ಶತ್ರು ಸೇನಿಕರನ್ನು ಶೆರೆಹಿಡಿದಿರುತ್ತಾರೆ. ಶತ್ರುಗಳು ಸ್ಟೈರ್ ನದಿಯನ್ನು ದಾಟಿ ಲಿಪ್ಪನದಿಯ ಬಳಿ ಕಾದಾಡಿದರು. ಆದರೆ ರುಶ್ಯನರು ಅವರನ್ನು ಹಿಂದಕ್ಕೆ ಓಡಿಸಿರುತ್ತಾರೆ.

ತಾ. ೭ನೇ ಜುಲಾಯಿ.

ಫ್ರೆಂಚರು ಸೊಮ್ಮೆಯಲ್ಲಿ ಶೆರೆಹಿಡಿದ ಶತ್ರುಸೇನಿಕರಲ್ಲಿ ಗಾಯಪಡೆಯದ ೯೦೦೦ ಸೇನಿಕರು ಇಲ್ಲಿರುವರು. ಎವರ್‌ಕೋರ್ಟ ಮತ್ತು ಡಿನ್ಕೆ ೩೦೪೨ ವರೆಗಿನ ರಣರಂಗದಲ್ಲಿ ಮೇಲ್ಹಾಯುವ ಶತ್ರುಗಳು ವಿಶೇಷ ನಷ್ಟಪಟ್ಟು ಹಿಮ್ಮೆಟ್ಟಿರುತ್ತಾರೆ.

ರುಶ್ಯನರು ನೀಸ್ಟರಿನ ಬಲವಡದಲ್ಲಿದ್ದ ಶತ್ರುಗಳನ್ನು ಅಟ್ಟಿಬಿಟ್ಟು ಡೆಲಾಟಿನ್‌ನಿಂದ ಕೊಲೊಮೊಯ್ಯ ವರೆಗಿನ ರೈಲ್ವೆದಾರಿಗಳನ್ನು ಹಿಡಿದಿರುತ್ತಾರೆ.

ತಾ. ೮ನೇ ಜುಲಾಯಿ.

ಬ್ರಿಟಿಷ ರಣರಂಗದಲ್ಲಿ ಅಂಕ್ರೆಯಿಂದ ಮೊಂಟೊಬಾನಿನ ವರೆಗೆ ಕದನವು ಅತಿ ತೀಕ್ಷ್ಣವಾಗಿರುವದು. ನಮ್ಮವರ ಕಾಲಾಳು ಸೇನಿಕರು ಕೆಲವು ಸ್ಥಳಗಳಲ್ಲಿ ವಿಶೇಷ ಜಯಗಳನ್ನು ಪಡೆದಿರುತ್ತಾರೆ.

ರುಶ್ಯನರು ಪುನಃ ೧೨,೦೦೦ಕ್ಕಿಂತ ಹೆಚ್ಚಿನ ಸೇನಿಕರನ್ನು ಶೆರೆಹಿಡಿದಿರುತ್ತಾರೆ. ಈ ಪೈಕಿ ೫೦೦೦ ಮಂದಿ ನೀಸ್ಟರಿನಲ್ಲಿ ರುಶ್ಯನರ ಶೆರೆಬಿದ್ದವರು. ಜುಲಾಯಿ ತಾ. ೩ರಿಂದ ೫ರ ವರೆಗೆ ರುಶ್ಯನರು ೭೮ ಆಫೀಸರರನ್ನೂ ೩೦೦೦ ಸೇನಿಕರನ್ನೂ ಶೆರೆಹಿಡಿದಿರುತ್ತಾರೆ.

ಕೌಕಾಸೆಸಿನಲ್ಲಿ ಟೌರಸ್ ಮತ್ತು ಚೊರೊಕ್ ನದಿಯ ಮಧ್ಯೆ ತುರ್ಕರು ಬಹಳ ನಷ್ಟಪಟ್ಟು ಸೋತುಹೋಗಿರುತ್ತಾರೆ.

ತಾ. ೧೦ನೇ ಜುಲಾಯಿ.

ಫ್ರಾನ್ಸ್ ರಣರಂಗದಲ್ಲಿ ಮಳೆ ಮತ್ತು ಮಂಜು ವಿಶೇಷವಾಗಿ ಬಿದ್ದಿದ್ದರೂ ಫ್ರೆಂಚರು ತಾ. ೯ನೇ ಬೆಳಿಗ್ಗೆ ಹಾರ್ಡಕೋರ್ಟ ಗ್ರಾಮದ ಮೇಲೆ ಬಿದ್ದು ೩೫ ನಿಮಿಷಗಳೊಳಗೆ ತಮ್ಮ ಉದ್ದೇಶವನ್ನು ಸಾಧಿಸಿಕೊಂಡರು. ಜರ್ಮನರು ವಿಶೇಷ ನಷ್ಟಪಟ್ಟಿರುವರು. ೨೫೦ ಸೇನಿಕರು ಫ್ರೆಂಚರ ಶೆರೆಬಿದ್ದಿರುತ್ತಾರೆ. ಹಾರ್ಡಕೋರ್ಟಿನಲ್ಲಿ ೬೩೩ ಶತ್ರುಸೇನಿಕರು ಫ್ರೆಂಚರ ಶೆರೆಬಿದ್ದಿರುತ್ತಾರೆ. ಶತ್ರುಗಳು ಬೆಟನ್‌ಕೋರ್ಟ, ಫ್ಲುರೆ ಮತ್ತು ಡಾಮ್‌ಲೌಪಿನ ಮೇಲೆ ಹಠತ್ತಾಗಿ ಗುಂಡುಹಾರಿಸುತ್ತಲಿದ್ದಾರೆ.

ಬ್ರಿಟಿಷ ರಣರಂಗದಲ್ಲಿ ಶತ್ರುಗಳು ಜೀವದ ಆಶೆ ಇಲ್ಲದೆ ಎದುರಾಯಿಸಿದರೂ ಬ್ರಿಟಿಷ ಕಾಲಾಳು ಸೇನಿಕರು ಮುಂದರಿದು ಕೆಲವು ಪ್ರಾಮುಖ್ಯ ಸ್ಥಳಗಳನ್ನು ಪಡೆದಿರುವರು. ಬ್ರಿಟಿಷರು ೨೦೦೦ ಗಜಕ್ಕಿಂತಲೂ ಹೆಚ್ಚಿಗೆ ಮುಂದರಿದಿರುತ್ತಾರೆ. ಲಾಬ್ಯೊಸೆಲ್ಲಿಯ ಪೂರ್ವದಲ್ಲಿ ಬ್ರಿಟಿಷರು ಶತ್ರುಗಳನ್ನು ೨ ಅರಣ್ಯಗಳಿಂದ ಓಡಿಸಿರುತ್ತಾರೆ. ಒವಿಲ್ಲರ್ಸ್ ಮೊದಲಾದ ಸ್ಥಳಗಳಲ್ಲಿಯೂ ಬ್ರಿಟಿಷರಿಗೆ ಜಯವಾಗಿರುತ್ತದೆ. ನೂರಾರು ಜರ್ಮನ ಸೇನಿಕರು ಬ್ರಿಟಿಷರ ಶೆರೆಬಿದ್ದಿರುವರು. ಕೆಲವು ಕಡೆಗಳಲ್ಲಿ ಶತ್ರುಸೇನಿಕರು ಓಡಿಹೋಗಿರುತ್ತಾರೆ. ಬ್ರಿಟಿಷ ಸೇನಿಕರು ಅತಿ ಶೂರತನದಿಂದ ಕಾದಾಡಿ ಜಯಪ್ರದರಾಗುತ್ತಿರುವ ವಾರ್ತೆಯಿಂದ ಜೋರ್ಜ ಚಕ್ರವರ್ತಿಯವರು ಸಂತೋಷಪಟ್ಟು ಬ್ರಿಟಿಷ ಸೇನೆಗೆ ತನ್ನ ಅಭಿವಂದನೆಯನ್ನು ಕಳುಹಿಸಿರುತ್ತಾರೆ.

ಜುಲಾಯಿ ತಾ. ೯ರಲ್ಲಿ ಬ್ರಿಟಿಷರು ಉತ್ತರ ಕಡೆಯಲ್ಲಿ ಮಾಡಿದ ಕದನದಲ್ಲಿ ಬ್ರಿಟಿಷರಿಗೆ ದೊಡ್ಡ ಜಯವಾಗಿದೆ. ಆದರೆ ಜನನಷ್ಟ ವಿಶೇಷವಾಗಿರುವದೆಂತ ವಾರ್ತೆ ಬಂದದೆ.

ಕೆಳಗಿನ ಸ್ಟೈರದಲ್ಲಿ ರುಶ್ಯನರು ಎರಡು ದಿವಸಗಳ ಕದನದಲ್ಲಿ ೧೦,೦೦೦ಕ್ಕಿಂತಲೂ ಹೆಚ್ಚಿಗೆ ಶತ್ರುಸೇನಿಕರನ್ನೂ ಅನೇಕ ಫಿರಂಗಿಗಳನ್ನೂ ಶೆರೆಹಿಡಿದು ಆಸ್ಟ್ರಿಯನರನ್ನೂ ಜರ್ಮನರನ್ನೂ ಸ್ಟೈರ್ ನದಿಯ ಪಶ್ಚಿಮಕ್ಕೆ ಓಡಿಸಿರುವರು. ಕೊವೆಲ್ಗೆ ಹೋಗುವ ಮುಖ್ಯ ದಾರಿಯಲ್ಲಿರುವ ಕ್ರೇಡ್ಕೆ ಎಂಬ ಗ್ರಾಮವು ರುಶ್ಯನರ ಸ್ವಾಧೀನವಾಗಿರುತ್ತದೆ. ರುಶ್ಯನರು ಡೆಲಾಟೈನ್ ಎಂಬ ಪಟ್ಟಣವನ್ನು ಸ್ವಾಧೀನಮಾಡಿಕೊಂಡಿರುತ್ತಾರೆ.

ಕೌಕಾಸೆಸಿನಲ್ಲಿ ತುರ್ಕರು ಡಿಜಿವಿಲಾಯತ್ ಪ್ರಾಂತ್ಯದಲ್ಲಿದ್ದ ರುಶ್ಯನರ ಕಂದಕಗಳನ್ನು ನುಗ್ಗಿದರು. ಆದರೆ ರುಶ್ಯನರು ತುರ್ಕ ಸೇನಿಕರ ಮೇಲೆ ಬಿದ್ದು ಸಂಗೀನುಗಳಿಂದ ಅವರನ್ನು ತಿವಿದು ಓಡಿಸಿದರು.

ತಾ. ೧೧ನೇ ಜುಲಾಯಿ.

ಯುದ್ಧ ಪ್ರಾರಂಭವಾದಂದಿನಿಂದ ಬಾಲ್ಟಿಕ್ ಸಮುದ್ರ ತೀರದ ಬಂದರಗಳಲ್ಲಿ ಸಿಕ್ಕಿಬಿದ್ದಿದ್ದ ಬ್ರಿಟಿಷರ ಸುಮಾರು ೨೦೦ ವ್ಯಾಪಾರ ಹಡಗಗಳು ಈಚೆಗೆ ಜಟ್ಲೇಂಡಿನ ಬಳಿ ನಡೆದ ನೌಕಾವಳಿ ಕದನದನಂತರ ತಪ್ಪಿಸಿಕೊಂಡು ಬಂದಿರುವವು ಎಂತ ತಿಳಿದುಬರುತ್ತದೆ.

ಬೆಲ್ಜಿಯಮ್ ರಣರಂಗದಲ್ಲಿ ನುಗ್ಗಿಬಂದ ಜರ್ಮನರನು ಪ್ರತಿ ಸ್ಥಳದಲ್ಲಿಯೂ ಬ್ರಿಟಿಷರು ಹಿಂದಕ್ಕೆ ಓಡಿಸಿ ಶತ್ರುಗಳಲ್ಲಿ ವಿಶೇಷ ನಷ್ಟಪಡಿಸುತ್ತಿದ್ದಾರೆ.

ಶತ್ರುಗಳ ವಾಯುನಾವೆಗಳು ಇಂಗ್ಲಾಂಡಿನ ಕೆಂಟಿಷ ಕರಾವಳಿಯ ಮೇಲೆ ತಾ. ೧೦ನೇ ಮಧ್ಯರಾತ್ರಿ ಸುಮಾರು ೫ ಬೊಂಬುಗಳನ್ನು ಹಾಕಿರುತ್ತವೆ. ಇದರಿಂದ ಯಾವ ವಿಧದ ನಷ್ಟವೂ ಆಗಲಿಲ್ಲ.

ಜೂನ್ ತಾ ೨೩ರಿಂದ ಜುಲಾಯಿ ತಾ. ೭ರವರೆಗೆ ರುಶ್ಯನರು ಶತ್ರುಗಳ ೫೭೪ ಆಫೀಸರರನ್ನೂ ೩೦,೮೭೫ ಸೇನಿಕರನ್ನೂ ೧೮ ಫಿರಂಗಿಗಳನ್ನೂ ೧೨೦ ಯಂತ್ರಚಾಲಿತ ಫಿರಂಗಿಗಳನ್ನೂ ಶೆರೆಹಿಡಿದಿರುತ್ತಾರೆ.

ಕಪ್ಪು ಸಮುದ್ರದಲ್ಲಿ ಶತ್ರುಗಳ ಜಲಾಂತರ್ಗಾಮಿ ನಾವೆಯು ರುಶ್ಯನರ ಒಂದು ಆಸ್ಪತ್ರೆ ಹಡಗವನ್ನು ಮುಳುಗಿಸಿರುತ್ತದೆ. ಎರ್ಜೆರೂಮಿನ ಪಶ್ಚಿಮದಲ್ಲಿ ರುಶ್ಯನರು ತುರ್ಕರ ಮೇಲೆ ಬಿದ್ದು ೬೪ ಆಫೀಸರರನ್ನೂ ೧೨೫೦ ಸೇನಿಕರನ್ನೂ ವಿಶೇಷ ಯುದ್ಧ ಸಾಮಗ್ರಿಗಳನ್ನೂ ಹಿಡಿದಿರುತ್ತಾರೆ.

ವಿದೇಶ ವೃತ್ತಾಂತ.

ಮಿ। ಲ್ಯಾಯಿಡ್ ಜೋರ್ಜರವರು ಯುದ್ಧ ಸೆಕ್ರೆಟರಿಯಾಗಿಯೂ, ಡರ್ಬಿ ಪ್ರಭುಗಳವರು ಯುದ್ಧದ ಉಪಸೆಕ್ರೆಟರಿಯಾಗಿಯೂ ನೇಮಿಸಲ್ಪಟ್ಟಿರುತ್ತಾರೆ.

ರುಶ್ಯನರು ಯುದ್ಧಸಾಮಾಗ್ರಿಗಳನ್ನು ಜಪಾನಿನಿಂದಲೇ ತರಿಸುತ್ತಲಿದ್ದಾರೆ. ಯುದ್ಧ ಪ್ರಾರಂಭವಾದಂದಿನಿಂದ ರುಶ್ಯನರು ಜಪಾನಿನಿಂದ ೪೦೦,೦೦೦,೦೦೦ ಯೆನ್ (ಜಪಾನ್ ದೇಶದ ನಾಣ್ಯ) ಕ್ರಯ ಬಾಳುವ ಯುದ್ಧ ಸಾಮಾಗ್ರಿಗಳನ್ನು ತರಿಸಿಕೊಂಡರು. ಈಚೆಗೆ ರುಶ್ಯನರು ಸೇನಿಕರ ಬಗ್ಗೆ ಬೇಕಾದ ೫,೦೦೦,೦೦೦ ಯಾರ್ಡು ವಸ್ತ್ರ; ೨೭,೦೦,೦೦೦ ಜೋಡು ಬೂಟ್ಸು ಮತ್ತು ೫೦,೦೦೦,೦೦೦ ಯೆನ್‌ಗಳ ಕ್ರಯಬಾಳುವ ಮೆಟ್ಟುಗಳಿಗೆ ಜಪಾನಿನಲ್ಲಿ ಆರ್ಡರು ಕೊಟ್ಟಿರುತ್ತಾರೆ.

ಪೂರ್ವ ಆಫ್ರೀಕದಲ್ಲಿ ಜನರಲ್ ಸ್ಮಟ್ಸರವರು ಜರ್ಮನರಿಂದ ಸ್ವಾಧೀನ ಮಾಡಿಕೊಂಡ ಸ್ಥಳಗಳ ತತ್ಕಾಲಿಕ ಗವರ್ನರರಾಗಿ ಸರ್. ಥಿಯದೊರ್ ಮೊರಿಸ್ಸನರವರು ನೇಮಿಸಲ್ಪಟ್ಟಿರುತ್ತಾರೆಂತ ಒಂದು ಪತ್ರಿಕೆಯಲ್ಲಿ ಪ್ರಕಟವಾಗಿದೆ. ಸರ್. ಟಿ. ಮೊರಿಸ್ಸನರವರು ಹಿಂದೂಸ್ಥಾನದ ಅಲಿಗರದಲ್ಲಿ ೧೦ ವರ್ಷಕ್ಕಿಂತಲೂ ಹೆಚ್ಚಿಗೆ ಇದ್ದವರು. ಈ ಪೈಕಿ ೬ ವರ್ಷ ಅಲಿಗಾರ ಕಾಲೇಜಿಯ ಪ್ರಿನ್ಸಿಪಾಲರಾಗಿದ್ದರು.

ಕಳೆದ ೮-೯ ವರ್ಷಗಳಲ್ಲಿ ಸೆಕ್ರಟರಿ ಆಫ್ ಸ್ಟೇಟ್ ಕೌನ್ಸಿಲಿನ ಮೆಂಬರರಾಗಿದ್ದು ಕೆಲವು ತಿಂಗಳ ಹಿಂದೆ ಮಾತ್ರ ಸೇನೆಗೆ ಬರಿಸಿಕೊಂಡರು.

~~~~~

ಕಿಚನರ್ ಪ್ರಭುಗಳು ರುಶ್ಯಾ ದೇಶಕ್ಕೆ ಹೋಗಲಿಕ್ಕಿದ್ದಾರೆಂಬ ವಾರ್ತೆಯು ಜರ್ಮನಿಗೆ ಮೊದಲೇ ಗೊತ್ತಿತ್ತೆಂದು ಬೆರ್ನೆ ಪಟ್ಟಣದ ಒಂದು ತಂತೀ ವಾರ್ತೆಯಿಂದ ತಿಳಿದುಬರುತ್ತದೆ. ರುಶ್ಯಾ ದೇಶದಲ್ಲಿ ಇನ್ನೂ ಜರ್ಮನ ಗೂಢಾಚಾರರು ಇದ್ದಾರೆಂತ ರುಶ್ಯನರು ಹೇಳುತ್ತಿರುವದರಿಂದ ಈ ವಾರ್ತೆಯು ಒಂದುವೇಳೆ ನಿಜವಾಗಿರಬಹುದು ಎಂತ ಒಂದು ಪತ್ರಿಕೆಯಲ್ಲಿ ಪ್ರಕಟವಾಗಿದೆ.

~~~~~

ಉತ್ತರ ಹಿಂದೂಸ್ಥಾನ.

~~~~~

ಯುನೈಟೆಡ್ ಪ್ರೊವಿನ್ಸಿನ ಸ್ಪೆಶ್ಯಲ್ ಯುದ್ಧಫಂಡಿಗೆ ಈಗ ಒಟ್ಟಿಗೆ ೩೬,೧೬,೮೮೧ ರೂಪಾಯಿ ಕೂಡಿರುತ್ತದೆ.

~~~~~

ಉತ್ತರ ಕನ್ನಡಾ ಜಿಲ್ಲೆಗೆ ಸೇರಿದ ಸಿರ್ಸಿಯಲ್ಲಿ ರಾ। ಧರಣಪ್ಪ, ಪದ್ಮಪ್ಪ, ಆಲೂರು—ಇವರು ತಮ್ಮ ಸ್ವಂತ ಖರ್ಚಿಯಿಂದ ಒಂದು ಪಶುವೈದ್ಯ ಆಸ್ಪತ್ರೆಯನ್ನು ಕಟ್ಟಿಸಿ ಅದಕ್ಕೆ ಬೇಕಾದ ಎಲ್ಲಾ ಖರ್ಚನ್ನು ಕೊಡುತ್ತೇನೆಂತ ವಾಗ್ದಾನ ಮಾಡಿರುತ್ತಾರೆ. ಸರಕಾರದವರು ಇವರ ಈ ದಾನವನ್ನು ಅತ್ಯಾದರದಿಂದ ಸ್ವೀಕರಿಸಿರುವರು.

~~~~~

ವೈಸರಾಯ ಚೆಮ್ಸಫರ್ಡ್ ಪ್ರಭುಗಳವರು ಇದೇ ಬರುವ ದಶಂಬರ ತಾ. ೧೭ರಲ್ಲಿ ರಂಗೂನಿಗೆ ಚಿತ್ತೈಸಿ ದಶಂಬರ ತಿಂಗಳ ತಾ. ೩೧ರ ವರೆಗೆ ರಂಗೂನಿನಲ್ಲಿರುವರು.

~~~~~

ಜುಲಾಯಿ ತಾ. ೧ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ೬೭೦ ಮಂದಿಗೆ ಪ್ಲೇಗಬೇನೆಯು ಸೋಂಕಿ ೪೭೪ ಮಂದಿ ಮೃತರಾದರು. ಈ ಪೈಕಿ ಮುಂಬಾಯಿಯಲ್ಲಿ ೧೭೦; ಮದ್ರಾಸ್ ೬೦; ಬಂಗಾಳ ೨; ಸಂಯುಕ್ತ ಸಂಸ್ಥಾನ ೨; ಬರ್ಮ ೨೨೨; ಮಧ್ಯ ಸಂಸ್ಥಾನ ೧; ಮೈಸೂರು ೮೪; ಹೈದರಾಬಾದ್ ೨೩ ಮರಣಗಳಾಗಿರುವವು.

~~~~~

ಗ್ರೇಟ್‌ಬ್ರಿಟಾನಿನಲ್ಲಿ ವಿದ್ಯಾಭ್ಯಾಸ ಪಡೆಯದ ೨೦ ಲಕ್ಷ ಮಕ್ಕಳು ಇರುವರೆಂತ ಲಂಡನ್ ಟೈಮ್ಸ್ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಈ ಪೈಕಿ ೫ ಲಕ್ಷ ಮಕ್ಕಳು ೧೩ ಮತ್ತು ೧೪ ವರ್ಷ ವಯಸ್ಸಿನವರು. ಉಳಿದವರು ೧೪—೧೬ ವರ್ಷ ವಯಸ್ಸಿನವರು. ಇದು ಯಾವದಾದರೊಂದು ರಾಷ್ಟ್ರಕ್ಕೆ ನಾಚಿಕೆಯ ವಿಷಯವಾಗಿದೆ ಎಂತ ಅದೇ ಪತ್ರಿಕೆಯಲ್ಲಿ ಟೀಕಿಸಿರುವರು. ಬ್ರಿಟಿಷ ಹಿಂದೂಸ್ಥಾನದ ಜನಸಂಖ್ಯೆಯು ೨೪,೪೯,೮೮,೯೪೭. ಈ ಜನಸಂಖ್ಯೆಯು ಸೇಕಡಾ ೧೫ ಅಂದರೆ ೩,೬೭,೪೮,೩೪೨ ಮಂದಿ ಶಾಲೆಗೆ ಹೋಗತಕ್ಕ ವಯಸ್ಸಿನವರು ಎಂತ ಸರಕಾರದವರು ಅಂದಾಜು ಮಾಡಿರುವರು. ಈ ಅಂದಾಜು ಅತಿ ಕಡಿಮೆಯಾಗಿರುವದು. ಯಾಕಂದರೆ ಹಿಂದೂಸ್ಥಾನದಲ್ಲಿ ೭೪,೪೮,೪೧೯ ಮಂದಿ ಮಾತ್ರ ವಿದ್ಯಾಭ್ಯಾಸ ಪಡೆಯುತ್ತಲಿರುವರು. ೨,೯೨,೯೯,೯೨೩ ಮಂದಿ ಯಾವ ವಿದ್ಯಾಭ್ಯಾಸ ಇಲ್ಲದೆ ಇರುವರು. ಹಿಂದೂಸ್ಥಾನದಲ್ಲಿ ಶಾಲೆಗೆ ಹೋಗುವ ವಯಸ್ಸಿನ ಮಕ್ಕಳ ಸಂಖ್ಯೆ ಸೇಕಡಾ ೧೫ ಎಂತ ಸರಕಾರದವರು ಮಾಡಿದ ಅಂದಾಜು ಪೂರ್ಣ ಸರಿಯಲ್ಲ. ಈ ವಯಸ್ಸಿನ ಮಕ್ಕಳ ಸಂಖ್ಯೆ ಶೇಕಡಾ ೩೦ರಂತೆ ಇದೆ. ಹೀಗೆ ಬ್ರಿಟಿಷ ಹಿಂದೂಸ್ಥಾನದಲ್ಲಿ ಶಾಲೆಗೆಹೋಗುವ ಪ್ರಾಯದ ಮಕ್ಕಳ ಸಂಖ್ಯೆ ೮ ಕೋಟಿ ಅಥವಾ ೮೦ ಮಿಲಿಯ ಇದೆ. ಈ ಪೈಕಿ ೭೪ ಲಕ್ಷ ಅಥವಾ ೭½ ಮಿಲಿಯ ಮಂದಿ ಮಾತ್ರ ವಿದ್ಯಾಭ್ಯಾಸ ಪಡೆಯುತ್ತಿದ್ದಾರೆ. ಉಳಿದ ೭೨ ಮಿಲಿಯ ಮಂದಿ ನಿರಕ್ಷರಕುಕ್ಷಿಗಳಾಗಿದ್ದಾರೆ. ಇದು ಎಂಥಾ ವಿಷಾದಕರ!

~~~~~

ಬಂಕೂರದಲ್ಲಿ ಸ್ವಲ್ಪ ಮಳೆಬಂದುದರಿಂದ ಬರಬಿದ್ದ ಪ್ರದೇಶಗಳ ಸ್ಥಿತಿಯು ಸ್ವಲ್ಪ ಬದಲಾಗಿದೆ. ಆದರೆ ಈ ಬದಲಾವಣೆಯು ಹೆಚ್ಚು ಕಾಲ ಉಳಿಯಲಿಕ್ಕಿಲ್ಲ! ೩—೪ ವಾರಗಳೊಳಗೆ ಪೈರು ನಾಟುವ ಕೆಲಸವು ಮುಗಿಯುವದು. ಆಗ ಬಡ ಕೂಲಿಗಾರರಿಗೆ ಪುನಃ ಕೆಲಸವಿಲ್ಲದಂತಾಗುವದು. ಆದುದರಿಂದ ಸಹಾಯವು ಅಗತ್ಯವಿದೆ. ಬಂಕೂರಕ್ಕೆ ಸೇರಿದ ಬಿಲೂರಿ ಎಂಬ ದೊಡ್ಡ ಗ್ರಾಮದಲ್ಲಿ ಬೆಂಕಿಬಿದ್ದು ಅಲ್ಲಿಯ ೧೬೦೦ ಮನೆಗಳ ಪೈಕಿ ೧೧೦೦ ಮನೆಗಳು ಬೂದಿಯಾಗಿ ಹೋಗಿರುತ್ತದೆ.

~~~~~

ಕಾಗದದ ಬೆಲೆಯು ದಿನೇ ದಿನೇ ಏರುತ್ತಲಿದೆಂಬುದು ಹೊಸ ವಿಷಯವಲ್ಲ. ಯುದ್ಧದ ಮೊದಲು ರೀಮಿಗೆ ರೂ. 3 ಇದ್ದ ಕಾಗದದ ಬೆಲೆಯು ಈಗ ರೀಮಿಗೆ ರೂ. 16ಕ್ಕೂ ಮಿಕ್ಕಿದೆ. ಹಿಂದೂಸ್ಥಾನದಲ್ಲಿ ಕಾಗದವನ್ನು ಮಾಡುವಂಥಾ ಒಂದೆರಡು ಕಾರ್ಖಾನೆಗಳು ಇದ್ದರೂ ಅವಕ್ಕೆ ಬೇಕಾದ ಕೆಲವು ಪದಾರ್ಥಗಳು ಯುರೋಪದಿಂದಲೇ ಬರಬೇಕಾಗಿವೆ. ಲಕ್ನೌನಗರದಲ್ಲಿರುವ ಕಾಗದ ಕಾರ್ಖಾನೆಗೆ ಬೇಕಾದ ಒಂದು ಬಗೆಯ ದ್ರಾವಕವನ್ನು ಪ್ರೊಫೆಸರ್ ಎನ್. ಸಿ. ನಾಗರವರೂ ಮತ್ತು ಪ್ರೊಫೆಸರ್ ಸಾಲಿಗ್ರಾಮರವರೂ ಕಂಡುಕೊಂಡಿರುವರೆಂತ ತಿಳಿದುಬರುತ್ತದೆ. ಹೀಗೆ ಹಿಂದೂಸ್ಥಾನದಲ್ಲಿರುವ ಕಾಗದ ಕಾರ್ಖಾನೆಗಳಿಗೆ ಈ ಸಂಬಂಧದಲ್ಲಿದ್ದ ಕಷ್ಟವು ಪರಿಹಾರವಾದಂತಾಯಿತು.

~~~~~

ಯುನೈಟೆಡ್ ಪ್ರೊವಿನ್ಸಿನ ಕಾಂಗ್ರೆಸ್ ಕಮಿಟಿಯವರು ಬರುವ ರಾಷ್ಟ್ರೀಯ ಸಭೆಗೆ ಅಧ್ಯಕ್ಷರಾಗಿ ಬಹುಮಾನಪಟ್ಟ ಸಿ. ವಿಜಯ ರಾಘವಾಚಾರ್ಯರ್, ಸರ್ ಸೈಯದ್ ಅಲಿ ಇಮಾಮ್ ಮತ್ತು ದಿವಾನ್ ಬಹದ್ದೂರ್ ಎಲ್. ಎ. ಗೋವಿಂದ ರಾಘವ ಅಯ್ಯರ್ ಇವರಲ್ಲಿ ಒಬ್ಬರನ್ನು ಆರಿಸಬಹುದೆಂತ ಸೂಚಿಸಿರುವರು.

~~~~~

ಮಿಸೆಸ್ ಅನ್ನಿಬಿಸೆಂತರವರಿಗೆ ಇದೇ ತಾ. ೧೯ರಲ್ಲು ಮುಂಬಾಯಿ ಸರಕಾರದವರು ಒಂದು ಆಜ್ಞೆಯನ್ನು ಕಳುಹಿಸಿಕೊಟ್ಟಿರುವರು. ಸಾರ್ವಜನಿಕ ಭದ್ರತೆಗೆ, ಅನ್ನಿಬಿಸೆಂತರವರು ಹಾನಿಕರವಾಗಿ ವರ್ತಿಸಿದ್ದಾರೆ ಮತ್ತು ವರ್ತಿಸುತ್ತಲಿದ್ದಾರೆಂತ ನಂಬಲು ತಕ್ಕ ಕಾರಣಗಳಿರುವವೆಂತ ಗವರ್ನರರ ಕೌನ್ಸಿಲ್ ಸಭೆಯವರು ಅಭಿಪ್ರಾಯಪಡುತ್ತಾರೆ. ಆದುದರಿಂದ ಈಗ ಗವರ್ನರರ ಕೌನ್ಸಿಲ್ ಸಭೆಯವರು ೧೯೧೫ನೇ ಡಿಫೆನ್ಸ್ ಆಫ್ ಇಂಡಿಯಾ ರೂಲ್ಸಿನ ೩ನೇ ಕ್ರಮವನ್ನು ಅನ್ನಿಬಿಸೆಂತರ ಮೇಲೆ ಜಾರಿಗೆ ತಂದು ಸರಕಾರದವರು ಇನ್ನೊಂದು ಹುಕುಂ ಕೊಡುವ ವರೇಗೆ ಮಿಸೆಸ್ ಬಿಸೆಂತರು ಮುಂಬಾಯಿ ಸಂಸ್ಥಾನವನ್ನು ಪ್ರವೇಶಿಸಕೂಡದು ಮತ್ತು ಅಲ್ಲಿ ವಾಸ ಮಾಡಕೂಡದು ಅಥವಾ ಅಲ್ಲಿ ಉಳಕೊಳ್ಳಕೂಡದೆಂತ ಆಜ್ಞಾಪಿಸಿದ್ದಾರೆ. ಮಿಸೆಸ್ ಬಿಸೆಂತರು ಈ ಆಜ್ಞೆಯನ್ನು ತಿಳಿದು ನಂತರ ಅದಕ್ಕೆ ಅವಿಧೇಯತ್ವದಿಂದ ನಡದರೆ ೩ ವರ್ಷಗಳ ಸಜಾ ಮತ್ತು ಜುಲುಮಾನೆಗೆ ಅರ್ಹಳಾಗುವರೆಂದು ಅವರಿಗೆ ತಿಳಿಸಿದ್ದಾರೆ.

~~~~~

ಕಿಚನರ್ ಪ್ರಭುಗಳ ಜ್ಞಾಪಕಾರ್ಥವಾಗಿ ಒಂದು ಫಂಡನ್ನು ಸ್ಥಾಪಿಸುವ ಏರ್ಪಾಡು ಹಿಂದೂಸ್ಥಾನದ ದೇಶೀಯ ರಾಜರುಗಳಿಂದ ನಡೆದಿರುತ್ತದೆ. ಈ ಫಂಡಿಗೆ ಜಯಪುರದ ಮಹಾರಾಜರು ರೂ. ೨೦,೦೦೦; ಗ್ವಾಲಿಯೋರಿನ ಸಿಂಧ್ಯಮಹಾರಾಜರು ರೂ. ೧೦,೦೦೦; ಇಂದೂರಿನ ಹೋಲ್ಕರ್ ಮಹಾರಾಜರು ರೂ. ೩೦೦೦; ಧಾರಿನ ರಾಜರವರು ರೂ. ೨೦೦೦; ಜಾವ್ರೋಂದ ನವಾಬರು, ಜುಂಗಾಧದ ನವಾಬರು, ಸಕ್ಷಿನದ ನವಾಬರು, ಒಬ್ಬೊಬ್ಬರು ರೂ. ೧೦೦೦, ಹೀಗೆ ವಂತಿಗೆ ಕೊಡಲು ವಾಗ್ದಾನಮಾಡಿರುತ್ತಾರೆ.

~~~~~

ಗೋದಾವರಿ ನದಿಯ ಅಳುವೆಯಲ್ಲಿರುವ ದ್ವೀಪಗಳು ಸರಕಾರಕ್ಕೆ ಸೇರಿದವುಗಳೆಂತ ಪ್ರೀವಿ ಕೌನ್ಸಿಲಿನಲ್ಲಿ ನಿರ್ಣಯವಾಗಿರುತ್ತದೆ. ಈ ಸಂಬಂಧದಲ್ಲಿ ಮದ್ರಾಸ್ ಹೈಕೋರ್ಟಿನವರು ಕೊಟ್ಟ ತೀರ್ಮಾನವು ಪ್ರೀವಿ ಕೌನ್ಸಿಲಿನ ತೀರ್ಮಾನದಿಂದ ಕವಚಿ ಬಿದ್ದಂತಾಯಿತು.

~~~~~

ಬಂಗಾಳ ಕಾಂಗ್ರೆಸ್ ಕಮಿಟಿಯವರು ಬರುವ ರಾಷ್ಟ್ರೀಯ ಸಭೆಗೆ ಬಾಬು ಅಂಬಿಕಚರಣ ಮುಜುಮ್‌ದಾರ್, ಮಿಸೆಸ್ ಬಿಸೆಂಟ್, ಮೌ। ಮಜರುಲ್ ಹೇಕು, ಮತ್ತು ಮು। ರಾ। ಸಿ. ವಿಜಯ ರಾಘವಚಾರ್ಯರ್‌ರವರಲ್ಲಿ ಒಬ್ಬರನ್ನು ಅಧ್ಯಕ್ಷರಾಗಿ ಆರಿಸಬಹುದೆಂತ ಸೂಚಿಸಿರುವರು.

~~~~~

ಜಪಾನಿನ ಕೈಗಾರಿಕೆಗಳ ಸ್ಥಿತಿಗತಿಗಳ ಅನುಭವ ಪಡೆಯುವ ಉದ್ದೇಶದಿಂದ ಜಪಾನಿಗೆ ಹೋಗಿದ್ದ ಪ್ರೊಫೆಸರ್ ಹಮಿಲ್ಟನರವರು ಹಿಂತಿರುಗಿ ಬಂದಿರುವರು. ಇವರು ವರ್ತಮಾನ ಪತ್ರಿಕೆಗಳ ಪ್ರತಿನಿಧಿಗಳೊಡನೆ ಹೇಳಿದ ವಿಷಯಗಳು ಅತಿ ಮಹತ್ವದ್ದಾಗಿರುವದು. ಅಲ್ಲಿ ಹಮಿಲ್ಟನರವರು ವಿಚಾರಿಸಿ ತಿಳಕೊಂಡ ವಿಚಾರಗಳು ವಿಚಿತ್ರವಾದವುಗಳೇ ಸರಿ. ಪ್ರತಿ ಒಂದು ಮನೆಯವರು ಮನೆಮನೆಯಲ್ಲಿ ದಿನನಿತ್ಯದ ವ್ಯವಹಾರಗಳಿಗೆ ಬೇಕಾದ ಸಾಹಿತ್ಯಗಳನ್ನು ತಾವಾಗಿಯೇ ಮಾಡುತ್ತಿರುವರು. ಜಪಾನಿನ ಹೆಚ್ಚುಕಡಿಮೆ ಎಲ್ಲಾ ಕೈಗಾರಿಕೆಗಳು ಕೃಷಿಗಾರರ ಮನೆಗಳಲ್ಲಿಯೂ ಗುಡಿಸಲುಗಳಲ್ಲಿ ವಾಸಮಾಡುವ ಬಡಜನರಿಂದಲೂ ತಂತಮ್ಮ ಗುಡಿಸಲುಗಳಲ್ಲಿಯೇ ಮಾಡೋಣಾಗುತ್ತವೆ. ಹೀಗೆ ಕೈಗಾರಿಕೆಗಳು ಪ್ರಾರಂಭಮಾಡಲ್ಪಟ್ಟು ಕ್ರಮೇಣ ದೊಡ್ಡ ದೊಡ್ಡ ಕೈಗಾರಿಕೆಗಳು ಅವರಿಂದ ಮಾಡೋಣಾಗುತ್ತವೆ. ಹಿಂದೂಸ್ಥಾನದಲ್ಲಿಯೂ ಇಂಥಾ ಕೈಗಾರಿಕೆಗಳು ಮನೆಮನೆಯಲ್ಲಿ ಪ್ರಾರಂಭವಾದರೆ ಹಿಂದೂಸ್ಥಾನವು ತನ್ನಷ್ಟಕ್ಕೆ ಈ ವಿಷಯದಲ್ಲಿ ಅಭಿವೃದ್ಧಿಯನ್ನು ಹೊಂದುವದು ಎಂತ ಹಮಿಲ್ಟನರ ಅಭಿಪ್ರಾಯ.

~~~~~

ದಕ್ಷಿಣ ಕನ್ನಡ.

FOR IMMEDIATE SALE.

A Mulgeni property, near Kadri Post Office, yeilding a net income of Rs. 211—3—0.

Apply to:—

Dr. A. A. PEREIRA,
Camp Sidapur,
COORG.

ಮಾರಾಟಕ್ಕಿದೆ.

ಕದ್ರಿ ಪೋಸ್ಟ ಆಫೀಸಿನ ಬಳಿ ರೂ. 211—3—0 ಏನ ಹುಟ್ಟುವಳಿ ಇರುವ ಒಂದು ಮೂಲಗೇಣಿ ಆಸ್ತಿಯು ತ್ವರ್ಯದಲ್ಲಿ ಮಾರೋಣಾಗುವದು—ಬೇಕಾದವರು ಕೆಳಗಿನ ವಿಳಾಸಕ್ಕೆ ಬರಿಯುವದು.

ಡಾಕ್ಟರ್ ಎ. ಎ. ಪೆರೇರ,
ಕ್ಯಾಂಪ್ ಸಿದ್ಧಾಪುರ,
ಕೊಡಗು.

ನೋಟೀಸು.

ಮೆಸರ್ಸ್ ಸ್ಟೀವನ್ ಎಂಡ್ ಸನ್,
ಬಿಸ್ಕುಟು ಮೆನ್ಯುಫೆಕ್ಚರರು.

ಇವರು ತಮ್ಮ ಶಾಪನ್ನು ಬಲ್ಮಠ ರಸ್ತೆಯಲ್ಲಿರುವ ಮೆ| ಜೊಕಿನ್ ಲೊರೆನ್ಸ್ ಸಾಲ್ಡಾಂಞಾರ ಮನೆಯ ಎದುರಿರುವ ಮೆ| ಮೋನ ಪ್ಯಾಸರ ಕಟ್ಟಡಕ್ಕೆ ವೈದಿರುತ್ತಾರೆ.

ಸ್ಟಿವನ್ ಎಂಡ್ ಸನ್,
ಮಂಗಳೂರು.

ಪ್ರಕಟಣೆ.

ಮಂಗಳೂರು ಶ್ಯಾಹರಿನಲ್ಲಿರುವ ಮಾಜಿ ಡಿಸ್ಟ್ರಿಕ್ಟ್ ಕೋರ್ಟ್ಟ ವಕೀಲ ನೈಂಪಳ್ಳಿ ಮಂಜುನಾಥಯ್ಯನವರ ಹೆಂಡತಿ ಸಾಂತಮ್ಮ ಯಾನೆ ದುರ್ಗಮ್ಮನು ಸರ್ವ ಜನರಿಗೂ ತಿಳಿಸುವದೇನೆಂದರೆ—

ನನ್ನ ಪತಿಯವರಾದ ನಯಂಪಳ್ಳಿ ಮಂಜುನಾಥಯ್ಯನವರು ಕೆಟ್ಟ ಕೆಲಸಗಳಲ್ಲಿ ನಿವೃತ್ತರಾಗಿ ಮತಿಕೆಟ್ಟು ಹೋಗಿರುತ್ತಾರೆ. ಅವರಿಗೆ ಏನೂ ಸ್ಥಿರಚರ ಆಸ್ತಿ ಇರುವದಿಲ್ಲ. ಆದ್ದರಿಂದ ಅವರಿಗೆ ಯಾರಾದರೂ ಸಾಲ ಕಡ್ಗಟ್ಟು ಕೊಟ್ಟಪಕ್ಷಕ್ಕೆ ಅದನ್ನು ನಾನು ಎಂದೂ ತೆರಲಿಕ್ಕೆ ಇಲ್ಲ. ವ ನಾನು ತೆರುವರೆ ಬದ್ಧಳೂ ಅಲ್ಲ. ಹೀಗಾಗಿ ಅವರಿಗೆ ಯಾರೊಬ್ಬರೂ ಸಾಲಕಡ್ಗಟ್ಟು ಕೊಡಕೂಡದಾಗಿ ಈ ಮೂಲಕ ಸರ್ವರಿಗೂ ತಿಳಿಸಿದ್ದೇನೆ.

ಅವರು ದೊಡ್ಡ ಮರ್ಯಾದಸ್ಥ ಕುಲದಲ್ಲಿ ಜನಿಸಿ ಇಂಥಾ ದುರ್ನಡತೆಗಳು ಅವರಿಗೆ ಈಗ ಪ್ರಾಪ್ತಿಯಾಗಿ ಈಗೋಸ್ಕರ ನಾನು ಈ ಪ್ರಕಟಣೆಯನ್ನು ಮಾಡಿರುವದರಿಂದ ಶ್ರೀ ಗುರುದೇವರಿಗೆ ವ ಹಿರಿಯರಿಗೆ ನನ್ನ ಸಾಷ್ಟಾಂಗ ನಮಸ್ಕಾರಗಳು.

ಪುತ್ತೂರು,
8—7—16.
ನಯಂಪಳ್ಳಿ ಸಾಂತಮ್ಮ
ದುರ್ಗಮ್ಮಾ.

ಪುತ್ತೂರು:—ಇಲ್ಲಿಯ ವಕೀಲ ಮ| ರಾ| ಬೈಂದೂರು ರಾಮರಾಯರಿಗೆ ಸಂಬಂಧಪಟ್ಟ ಒಂದು ಎಮ್ಮೆಯು ಕಳೆದ ಜೂನ್ ತಾ. ೯ರಲ್ಲು ರಿವಾಜುಪ್ರಕಾರ ಗದ್ದೆಗೆ ಮೇಯಲಿಕ್ಕೆ ಬಿಟ್ಟದ್ದು ವಾಪಾಸು ಮನೆಗೆ ಬರುವಾಗ್ಯೆ ನಂಬ್ರ ೪೫೩ನೇ ಕೊನ್ಸ್‌ಟೆಬ್ಲು ಶೇಕ ಹಮ್ಮದ್ ಮತ್ತು ನಂಬ್ರ ೧೯೯ನೇ ಕೊನ್ಸ್‌ಟೆಬ್ಲು ಶಂಕರ ಎಂಬ ಇಬ್ಬರು ಅದನ್ನು ಅಕ್ರಮವಾಗಿ ಹಿಡಿದರೆಂದೂ ಆ ಸಮಯ ಅದನ್ನು ಹೊಡದು ತಗ್ಗಿನಲ್ಲಿರುವ ಗದ್ದೆಗೆ ಬೀಳಿಸಿ ಜಖಮ್‌ಗಳು ಆಗುವಂತೆ ಮಾಡಿದರೆಂದೂ ದಾಖಲುಮಾಡಿದ ಫಿರ್ಯಾದಿಯು ಇಲ್ಲಿಯ ತಹಸಿಲ್‌ದಾರ ಮೆಜಿಸ್ಟ್ರೇಟರವರ ಮುಂದೆ ತನಖಿಯಾಗಿ ಮುದ್ದೈಯರಿಗೆ ನಾಲ್ಕು ನಾಲ್ಕು ರೂಪಾಯಿ ಜುರುಮಾನೆ ಮಾಡಿದ್ದಲ್ಲದೆ ಮುದ್ದೈಗೆ ಉಂಟಾದ ಖರ್ಚು ಮತ್ತು ನಷ್ಟದ ಪ್ರತಿಫಲವಾಗಿ ರೂಪಾಯಿ ೬—೮ ರನ್ನು ಸಹ ಕೊಡಬೇಕೆಂದು ಇದೇ ತಿಂಗಳ ತಾ. ೧೦ರಲ್ಲು ತೀರ್ಮಾನವಾಗಿಯದೆ.

ಮ| ರಾ| ಕಾಸರಗೋಡು ಸದಾಶಿವ ಭಟಜಿಯವರಿಗೆ ಗವರ್ನರವರ ನ್ಯಾಯವಿಧಾಯಕ ಸಭೆಯ ಮೆಂಬರರಾಗಿ ಚುನಾವಣೆಯಾದ್ದರಿಂದ ಎಲ್ಲಾ ಜನರಿಗೂ ಸಂತೋಷವಾಗಿ ಮ| ರಾ| ರಾ| ಭಟಜಿಯವರಿಗೆ ಅನಂದಸೂಚಕವಾದ ಪತ್ರವನ್ನು ಕಳುಹಿಸುವಗೋಸ್ಕರ ಒಂದು ಮಹಾಸಭೆಯು ಸದಸ್ಯದಲ್ಲಿಯೇ ಕೂಡುವದು. ಮ| ರಾ| ರಾ| ಭಟಜಿಯವರು ನಮ್ಮ ಜಿಲ್ಲೆಯ ಎಲ್ಲಾ ತರದ ಕಷ್ಟನಿವಾರಣೆ ಬಗ್ಯೆ ನ್ಯಾಯವಿಧಾಯಕ ಸಭೆಯಲ್ಲಿ ಒದ್ದಾಡಿ ಜನೋಪಕಾರವನ್ನು ಮಾಡದೆ ಇರಲಾರರೆಂದು ಎಲ್ಲರೂ ದೃಢವಾಗಿ ನಂಬಿರುತ್ತಾರೆ.

ಇಲ್ಲಿಯ ಸೆಕಂಡರಿ ಶಾಲೆಯು ಸದ್ಯಕ್ಕೆ ಒಂದು ಹಂಗಾಮಿ ಕಟ್ಟಡದಲ್ಲಿ ಮಾಡಿದ್ದರಿಂದ ಸ್ಥಳವೂ ಸಾಕಾಗುವದಿಲ್ಲ. ಮತ್ತು ಒಂದು ಕ್ಲಾಸಿನಲ್ಲಿ ಕಲಿಸುವಂಥಾದ್ದು ಇನ್ನೊಂದು ಕ್ಲಾಸಿಗೆ ಕೇಳಿ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಇನ್ನಾದರೂ ಯೋಗ್ಯವಾದ ಮತ್ತು ಬೇರೆ ಬೇರೆ ಕೋಣೆಗಳಿರುವ ಹೊಸ ಕಟ್ಟೋಣವನ್ನು ತ್ವರ್ಯದಲ್ಲಿ ಕಟ್ಟಿಸುವ ವಿಲೆವಾರಿಯನ್ನು ಮಾಡಬೇಕಾಗಿರುತ್ತದೆ.

ಮುಂಡೂರು ಗ್ರಾಮದ ನಲ್ಕೆ ಕೊರಗನ ಹೊಲ್ತಿ ಗುಳ್ಳಿ ಎಂಬವಳನ್ನು ಕುತ್ತಿಗೆ ಕ್ವೊಯಿದು ಕುಮಾರಧಾರೆ ಹೊಳೆಯಲ್ಲಿ ಹಾಕಿದ್ದಾಗಿ ಸರ್ವೆಗ್ರಾಮದ ಬೊಟ್ಯಾಡಿ (Bottyadi) ಕ್ಷೌರಿಕ ತಮ್ಮಯ್ಯ ಮತ್ತು ಈತನ ಅಳಿಯ ಕುಂಞ ಎಂಬವನ ಮೇಲೆ ಇಲ್ಲಿಯ ಸ್ಟೇಶನರಿ ಮೇಜಿಸ್ಟ್ರೇಟ ಕೋರ್ಟಿನಲ್ಲಿ ತನಕಿ ನಡಿಯುತ್ತಿದ್ದ ಮೊಕದಮೆಯಲ್ಲಿ ಮುದ್ದೈಯಾಲೆಯರನ್ನು ಸೆಶ್ಶನ್ಸಿಗೆ ಕಮಿಟ್ ಮಾಡಿದ್ದಾಗಿ ಇದೇ ತಾ. ೮ರಲ್ಲು ಹುಕುಂ ಮಾಡಿದರು. ಈ ಮೊಕದಮೆಯ ವಾದವು ಕೆಲವು ಕಾಲದಿಂದ ೧ನೇ ಮುದ್ದೈಯಾಲೆಯ ಅಣ್ಣ ೨ನೆಯವನ ಮಾವ ಅಂಗರ ಎಂಬವನಿಗೂ ಸದರಿ ನಲ್ಕೆ ಹೊಲ್ತಿ ಗುಳ್ಳಿಯೆಂಬವಳಿಗೆ ಸ್ನೇಹಾಚಾರ ಬಿದ್ದು ಆಕೆಗೆ ಅಗ್ಯಾಗ್ಯೆ ಭತ್ತ ಮುಂತಾದ್ದು ಖರ್ಚಿಗೆ ಕೊಡುತ್ತಾ ಇದ್ದು ಈ ಸಂಗತಿ ಉಭಯ ಕಡೆ ಜಾತಿಯವರಿಗೆ ತಿಳಿದು ಬಂದು ಅಂಗರ ಎಂಬವನು ಆಕೆಯನ್ನು ಘಟ್ಟಕ್ಕೆ ಕೊಂಡುಹೋಗುವರೆ ಹೊರಟುಹೋಗುವಾಗ ಕುಮಾರಧಾರೆ ಹೊಳೆಸಮೀಪ ಮುಟ್ಟುವಾಗ ಆಲೆರು ಈ ಅಕೃತ್ಯಗಳು ನಡಿಸಿದ್ದಾಗಿ ಗುಳ್ಳಿಯ ಹೇಳಿಕೆಯಾಗಿರುತ್ತದೆ.

ಇಲ್ಲಿ ಸರ್ವಜಾತಿಯವರಿಗೂ ಒಂದೇ ಪರಸ್ಪರ ಸಹಾಯಕ ಸಂಘ (ಕೊ-ಒಪರೇಟಿವ್ ಸೊಸ್ಯಾಟಿ) ಇತ್ತು. ಈಗಲಿಂತೂ ಸದರಿ ಸಂಘದಲ್ಲಿ ೫೭೦ರ ಮೇಲ್ಪಟ್ಟು ಮೆಂಬರರು ಇರುವರು. ಪುತ್ತೂರು ಇಗರ್ಜಿಗೆ ಸಂಬಂಧಪಟ್ಟ ನಾಲ್ಕು ಮೈಲುಗಳ ಸುತ್ತಮುತ್ತಲು ಇರುವ ರೋಮನ ಕಥೋಲಿಕರು ತಮಗೋಸ್ಕರ ಒಂದು ಪರಸ್ಪರ ಸಹಾಯಕ ಸಂಘ ಸ್ಥಾಪಿಸುವರೆ ಹುಕುಂ ಆಗಬೇಕಾಗಿ ಸೊಸ್ಯಾಟಿಗಳ ರಿಜಿಸ್ತ್ರಾರವರಿಗೆ ಮನವಿ ಮಾಡಿಕೊಂಡಿರುವರು ಎಂಬದಾಗಿ ಕೇಳುತ್ತೇವೆ.

ಮಂಗಳೂರು

ಬಹುಮಾನಪಟ್ಟ ಸದಾಶಿವ ಭಟ್ಟರವರ ವಂದನೆ:—ಮಲಬಾರು ಮತ್ತು ದಕ್ಷಿಣ ಕನ್ನಡದ ಲೋಕಲ್ ಬೋರ್ಡು ಮತ್ತು ಮುನ್ಸಿಪಲ್ ಕೌನ್ಸಿಲುಗಳ ಪರವಾಗಿ ನ್ಯಾಯವಿಧಾಯಕ ಸಭೆಗೆ ಮೆಂಬರರನ್ನು ಆರಿಸುವ ಚುನಾವಣೆಯಲ್ಲಿ ನನಗೆ ವೋಟುಗಳನ್ನು ಕೊಟ್ಟ ಈ ಜಿಲ್ಲೆಯ ಆಯಾ ಸ್ಥಾಂಸ್ಥ್ಯಗಳಲ್ಲಿ ವೋಟುದಾರರನ್ನು ಮುಖತಃ ವಂದಿಸುವದು ಅನನುಕೂಲವಾದ್ದರಿಂದ, ಈ ಮೂಲಕ ಅವರೆಲ್ಲರನ್ನೂ ಕೃತಜ್ಞಪೂರ್ವಕವಾಗಿ ವಂದಿಸುತ್ತೇನೆ.

ಪತ್ರಕರ್ತರೇ, ದಯಮಾಡಿ ನನ್ನ ಈ ವಂದನೆಯನ್ನು ತಮ್ಮ ಪತ್ರದಲ್ಲಿ ಪ್ರಕಟಿಸಿರಿ.

ಮಂಗಳೂರು,
ತಾ. 13—7—16.
K. S. Bhat.

ಮ| ರಾ| ಕಾಸರಗೋಡ ಸದಾಶಿವ ಭಟ್ಟರು ನ್ಯಾಯವಿಧಾಯಕ ಸಭೆಯ ಮೆಂಬರರಾಗಿ ಮಲಬಾರಿನ ಮತ್ತು ದಕ್ಷಿಣ ಕನ್ನಡಾ ಜಿಲ್ಲೆಗಳ ಲೋಕಲ್ ಬೋರ್ಡು ವ ಮುನಿಸಿಪಾಲಿಟಿಗಳಿಂದ ಆರಿಸಲ್ಪಟ್ಟರೆಂದು ತಿಳಿಸಲು ಸಂತೋಷಪಡುತ್ತೇವೆ. ಮಲಬಾರ ದಕ್ಷಿಣ ಕನ್ನಡ ಜಿಲ್ಲೆಗಳ ಪರವಾಗಿ ದಕ್ಷಿಣ ಕನ್ನಡಾ ಜಿಲ್ಲೆಯಿಂದ ಮ| ರಾ| ಕೆ. ಎಸ್. ಭಟ್ಟರೂ ಮಲಬಾರಿನಿಂದ ಮ| ರಾ| ಕೆ. ಪಿ. ರಾಮನ್ ಮೆನೊನರವರೂ, ಮ| ರಾ| ಕರುಣಾಕರ ಮೆನೊನರವರೂ, ಮ| ರಾ| ಟಿ. ಎಮ್. ಅಪ್ಪು ನೆಡುಂಗಾಡಿಯವರೂ, ಉಮೇದ್ವಾರರಾಗಿ ನಿಂತಿದ್ದರು. ಮ| ರಾ| ಕೆ. ಎಸ್. ಭಟ್ಟರಿಗೆ ೧೧೦೩; ಮ| ರಾ| ಕೆ. ಪಿ. ರಾಮನ್ ಮೆನೊನರಿಗೆ ೯೮, ಮ| ರಾ| ಸಿ. ಕರುಣಾಕರ ಮೆನೊನರಿಗೆ ೫೫; ಮ| ರಾ| ಟಿ. ಎಮ್. ಅಪ್ಪು ನೆಡುಂಗಾಡಿಯವರಿಗೆ ೨೬ ಓಟುಗಳು ದೊರಕಿರುವವು. ಹೀಗೆ ಮ| ರಾ| ಕೆ. ಎಸ್. ಭಟ್ಟರಿಗೆ ಹೆಚ್ಚಿಗೆ ಓಟುಗಳು ಸಿಕ್ಕಿ ಅವರು ನ್ಯಾಯವಿಧಾಯಕ ಸಭೆಯ ಮೆಂಬರರಾಗಿ ಆರಿಸಲ್ಪಟ್ಟರು.

ಕುಂದಾಪುರದಲ್ಲಿ ಸಿವಿಲ್ ಅಸಿಸ್ಟಾಂಟ ಸರ್ಜನರಾಗಿರುವ ಮ| ರಾ| ಬೆಳ್ಳೆ ನಾರಾಯಣ ಸೆಟ್ರಿಗೆ ವಿಶಾಖಪಟ್ಣಕ್ಕೆ ವರ್ಗವಾಗಿದೆಂತ ತಿಳಿಯುತ್ತೇವೆ.

ಪಟ್ಟಣದ ಕೆಲವು ಗೃಹಸ್ಥರ ಮನೆಗಳಿಂದ ವಸ್ತ್ರ ಇತ್ಯಾದಿಗಳನ್ನು ಚೋರಿಸುತ್ತಿದ್ದ ಈಚೆಗೆ ಸಿಕ್ಕಿಬಿದ್ದ ಮಲೆಬಾರಿನ ಅಚ್ಯುತ್ತನೆಂಬವನಿಗೆ ಬೋಳಾರದ ಕೊರಗಪ್ಪನವರಲ್ಲಿ ಕಳವುಮಾಡಿದ ಸಂಬಂಧ ಒಂದು ತಿಂಗಳ ಕಠಿಣ ಸಜೆಯೂ ಮ| ರಾ| ಪ್ಯಾಸರಲ್ಲಿ ಕಳವುಮಾಡಿದ ತಕ್ಷೀರಿನ ಮೇಲೆ ೨ ತಿಂಗಳ ಸಜೆಯೂ ವಿಧಿಸೋಣಾಗಿದೆ. ಸದರಿ ಅಚ್ಯುತ್ತನ ಮೇಲೆ ಇನ್ನು ೬ ಕಳವು ತಕ್ಷೀರುಗಳ ತನಕಿ ಬಾಕಿ ಇದೆ.

ಇಲ್ಲಿಯ ಡಿಸ್ಟ್ರಿಕ್ಟ್ ಬೋರ್ಡಿನವರಿಗೂ ಮುನ್ಸಿಪಾಲ್ ಕೌನ್ಸಿಲುಗಳಿಗೂ ಅಭಿಪ್ರಾಯಗಳ ಬಗ್ಯೆ ಬಂಧಿದ್ದ ಇಂಡ್ಯಾ ಸರಕಾರದ ಸ್ತ್ರೀಶಿಕ್ಷಣದ ಸರ್ಕ್ಯುಲಾರಿನ ಪರ್ಯಾಲೋಚನೆಯ ಬಗ್ಯೆ ಈ ತಿಂಗಳ ತಾ|| ೧೦ರಲ್ಲಿ ಡಿಸ್ಟ್ರಿಕ್ಟ್ ಬೋರ್ಡು ಮತ್ತು ಮುನ್ಸಿಪಲ್ ಕೌನ್ಸಿಲ ವಿಶೇಷ ಸಭೆಗಳು ಕೂಡಿದ್ದವು. ಡಿಸ್ಟ್ರಿಕ್ಟ್ ಬೋರ್ಡು ಸಭೆಯಲ್ಲಿ ಸಭಾಕಾರ್ಯಗಳ ಮೊದಲು ಸಭೆಯ ಪ್ರೆಸಿಡಂಟರಾದ ಕಲೆಕ್ಟರ ದೊರೆಗಳವರು ನ್ಯಾಯವಿಧಾಯಕ ಸಭೆಯ ಮೆಂಬರರಾಗಿ ಆರಿಸಲ್ಪಟ್ಟ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರರಾಗಿರುವ ಸದಾಶಿವ ಭಟ್ಟರು ಚುನಾವಣೆಯಲ್ಲಿ ಜಯಶೀಲರಾದುದಕ್ಕೋಸ್ಕರ ತನ್ನ ಸಂತೋಷವನ್ನು ಸೂಚಿಸಿ ಈ ಜಿಲ್ಲೆಯ ಪರವಾಗಿ ಸಾಧಿಸಲಿಕ್ಕಿರುವ ಮಂಗಳೂರು ಬೆಂಗಳೂರು ರೈಲ್ವೆ ಇತ್ಯಾದಿಗಳ ಪ್ರಸ್ತಾಪವನ್ನು ಮಾಡಿ ಕಾಲೋಚಿತ ಭಾಷಣದಲ್ಲಿ ಬಹುಮಾನಪಟ್ಟ ಭಟ್ಟರವರನ್ನು ಸನ್ಮಾನಿಸಿದರು.

ಈ ದಿನ ಕೂಡಿದ ಸಭೆಯಲ್ಲಿ ಡಿಸ್ಟ್ರಿಕ್ಟ್ ಬೋರ್ಡು ಇಂಜಿನಿಯರರಿಂದ ಕಳುಹಿಸೋಣಾದ ಕೆಲವು ಅಂದಾಜು ಪಟ್ಟಿಗಳು ಮಂಜೂರಾದವು. ಮುಖ್ಯವಾಗಿ ನೀಲೇಶ್ವರದಿಂದ ಕಾಸರಗೋಡು ಕತವಿನ ವರೆಗೆ ರಾಜರಸ್ತೆಯನ್ನು ತೆರೆಯುವರೆ ರೂ. ೪೩೬೦; ಮಂಗಳೂರು ತಾಲೂಕು ಕರಾವಳಿ ರಸ್ತೆಯ ೭-೮-೯ನೇ ಮೈಲುಗಳ ದಾರಿಗಳಿಗೆ ಕಲ್ಲುಹಾಕಿ ಸರಿಪಡಿಸುವರೆ ರೂ. ೨೦೦೦; ಉಡ್ಪಿ ಲೋಕಲ್‌ಫಂಡ್ ಆಸ್ಪತ್ರಿಯಲ್ಲಿ ಅಸ್ವಸ್ಥನವರು ಮಲಗುವ ವಾರ್ಡಿನ ಬಗ್ಗೆ ರೂ. ೨೪೫೦ ಸೆಂಕ್ಷನ್ ಆಗಿರುತ್ತದೆ.

ಸುರತ್ಕಲ್ ಚಾವಡಿ ಬಳಿಯ ರಸ್ತೆಯನ್ನೂ ೧೫-೧೬ನೇ ಮೈಲುಕಲ್ಲುಗಳ ಒಳಿಯ ಇಕ್ಕಟ್ಟಾದ ರಸ್ತೆಯನ್ನೂ ಅಗಲಮಾಡಬೇಕೆಂಬದಾಗಿ ಕೆನರಾ ಪಬ್ಲಿಕ್ ಕನ್‌ವೇಯನ್ಸ್ ಕಂಪೆನಿಯವರು ಡಿಸ್ಟ್ರಿಕ್ಟ್ ಬೋರ್ಡಿಗೆ ಮಾಡಿಕೊಂಡ ಮನವಿಯ ವಿಷಯ ಆಲೋಚನೆ ನಡೆದು ಈ ರಸ್ತೆಗಳನ್ನು ಅಗಲಮಾಡಬಹುದೆಂದೂ ಈ ವಿಷಯ ತಗಲುವ ಖರ್ಚಿನ ಅಂದಾಜು ಮಾಡಬೇಕೆಂದೂ ಸಭೆಯಲ್ಲಿ ನಿರ್ಣಯವಾಗಿದೆ.

ನಿನ್ನೆಯ ದಿನ ತಾಲೂಕು ಬೋರ್ಡು ಮಾಟಿಂಗ್ ಕೂಡಿಬಂದಿರುತ್ತದೆ. ಹೇಳತಕ್ಕ ವಿಶೇಷ ಸಂಗತಿಗಳೇನೂ ಈ ಸಭೆಯಲ್ಲಿ ನಡೆಯಲಿಲ್ಲ.

ಇಲ್ಲಿಯ ಪೋರ್ಟುವಾರ್ಡಿನ ಮುನ್ಸಿಪಲ್ ಕೌನ್ಸಿಲಿನ ಮೆಂಬರುತನಕ್ಕೆ ಮೆ| ಜೆ. ವಿ. ಅಲ್ವರೀಸರವರೊಬ್ಬರೇ ಉಮೇದ್ವಾರರಾಗಿರುವವರಿಂದ ಚುನಾವಣೆಯಿಲ್ಲದೆ ಇವರೇ ಆ ವಾರ್ಡಿನ ಕೌನ್ಸಿಲರರಾಗಿ ಆರಿಸಲ್ಪಡುವರು.

ಮ|| ರಾ|| ಕುಬೇರ ಸುಬ್ಬರಾಯರ ವೆಸ್ಟ್ ಎಂಡ್ ವಾಚ್ ಕಂಪೆನಿಯ ೧೭ ರೂಪಾಯಿ ಕ್ರಯಬಾಳುವ ಒಂದು ವಾಚು ಈಚೆಗೆ ಕಳವಾಗಿ ಹೋಗಿತ್ತು. ಅದನ್ನು ಸಬ್ ಇನ್ಸ್‌ಪೆಕ್ಟರ್ ರಾ| ಅಮೃತರಾಯರು ತಲಾಸಿಯಿಂದ ಒಬ್ಬ ಮಾಪಿಳ್ಳೆಯ ಕೈಯ ಹಿಡಿದಿರುತ್ತಾರೆ. ಸದರಿ ಮಾಪಿಳ್ಳೆಗೆ ಜಗಲಿಕಳವು ಮಾಡುತ್ತಿದ್ದವನೆಂಬದಾಗಿ ಈಗ್ಗತಾನೇ ವಿಚಾರಣೆಗೆ ಗುರಿಮಾಡಲ್ಪಟ್ಟ ಮಳಿಯಾಳಿ ಅಚ್ಚುತ್ತನು ರೂ. ೨—೮—ಂಕ್ಕೆ ಮಾರಿದ್ದನೆಂಬದಾಗಿ ಮಾಪಿಳ್ಳೆಯು ವಾಗ್ಮೂಲ ಕೊಟ್ಟಿರುವನೆಂತ ತಿಳಿಯುತ್ತೇವೆ.

ಅತ್ತಾವರ ಬಳ್ಹಳೇ ಗೋರಿಯ ಸಮೀಪ ಪುಂಡಾಟಿಗರ ತಂಡವು ದಿನೇ ದಿನೇ ಅಭಿವೃದ್ಧಿಯಾಗುತ್ತಾ ಬರುತ್ತದೆಂದೂ ಕಾತ್ರಿಯಾಗುತ್ತಲೇ ಆ ದಾರಿಯಲ್ಲಿ ನಡೆಯುವದು ಅಪಾಯಕರವೆಂತಲೂ ಉಳ್ಳಾಲದಿಂದ ಮಂಗಳೂರಿಗೆ ಬಂದು ಆ ದಾರಿಯಲ್ಲಿ ಸಾಯಂಕಾಲ ಊರಿಗೆ ಹೋಗುವಾಗ ಈ ಪುಂಡಾಟಿಗರ ಹಿಂಸೆಗೆ ಒಳಗಾದ ಒಬ್ಬ ಬಡ ಪ್ರಯಾಣಿಕನು ನಮಗೆ ತಿಳಿಸಿರುವನು. ಆದುದರಿಂದ ಪೋಲಿಸ್ ಇಲಾಖೆಯವರು ಆ ದಾರಿಯಲ್ಲಿ ಬೀಟ ನವನನ್ನು ಹೆಚ್ಚಿಸಿ ಪ್ರಯಾಣಿಕರು ನಿರ್ಭಯವಾಗಿ ದಾರಿ ನಡೆಯುವಂತೆ ಮಾಡಬೇಕಾಗಿ ಅಪೇಕ್ಷಿಸುವೆವು.

ಇಲ್ಲಿಯ ಗವರ್ನಮೆಂಟ ಕಾಲೇಜಿಯ ಪ್ರಿನ್ಸಿಪಾಲರಾದ ಮೆ| ಎಚ್. ಮೆಲಿಮ ದೊರೆಗಳು ಕೆಲಸದಿಂದ ನಿವೃತ್ತರಾದುದರಿಂದ ಯೂರೋಪಿಯನ್ ಶಾಲೆಗಳ ಮತ್ತು ಟ್ರೈನಿಂಗ್ ಶಾಲೆಗಳ ಅಸಿಸ್ಟ್ಯಾಂಟ ಇನ್ಸ್‌ಪೆಕ್ಟರರೂ ಮಡಿಕೇರಿ ಸೆಂಟ್ರಲ್ ಹ್ಯಾಸ್ಕೂಲಿನ ಆಕ್ಟಿಂಗ್ ಹೆಡ್‌ಮಾಸ್ತರರೂ ಆದ ಮೆ| ಎಸ್. ಎ. ಸ್ಟೀಲೆಯವರು ಇಲ್ಲಿಯ ಗವರ್ನಮೆಂಟ ಕಾಲೇಜಿಯ ಪ್ರಿನ್ಸ್‌ಪಾಲರಾಗಿ ನೇಮಿಸಲ್ಪಟ್ಟಿರುತ್ತಾರೆ. ಆವರ ಮಡಿಕೇರಿ ಹೈಸ್ಕೂಲಿನ ಆಕ್ಟಿಂಗ್ ಹೆಡ್‌ಮಾಸ್ತರರಾಗಿಯೇ ಕೆಲಸ ಮಾಡಬೇಕಾಗುವದು.

ದಕ್ಷಿಣ ಕೊಯಮುತ್ತೂರಿನ ಪ್ರೊಬೇಶನರಿ ಅಸಿಸ್ಟ್ಯಾಂಟ ಕನ್‌ಸರ್‌ವೇಟರರಾಗಿದ್ದ ಮೆ| ಎಮ್. ಸಿ. ಚಾಂಡಿ ಬಿ. ಎಸ್. ಸಿ.ರವರು (ಮಂಗಳೂರು ಉತ್ತರ) ಕುಂದಾಪುರ ರೇಂಜಿಗೆ ವರ್ಗಾಯಿಸಲ್ಪಟ್ಟಿದ್ದಾರೆ.

ಮಂಗಳೂರು ಉತ್ತರ (ಕುಂದಾಪುರ ರೇಂಜು) ದ ಆಕ್ಟಿಂಗ್ ರೇಂಜರರಾಗಿದ್ದ ಮೆ| ರಾ| ಎ. ಆರ್. ನರಸಿಂಹ ಅಯ್ಯಂಗಾರರವರು ಸ್ಪೆಶಲ್ ಡ್ಯೂಟಿಯ ಮೇಲೆ ನೀಲಗಿರಿಗೆ ವರ್ಗಾಯಿಸಲ್ಪಟ್ಟಿರುವರು.

ಇಲ್ಲಿಯ ಪೋಲಿಸ್ ಸುಪರಿಂಟೆಂಡೆಂಟ ದೊರೆಗಳ ಆಫೀಸಿನಲ್ಲಿ ರೀಡರ್‌ರಾಗಿದ್ದ ಮ| ರಾ| ಕೃಷ್ಣ ಸೆಟ್ರುವರು ಚರ್ವತ್ತೂರಿನ ಪೋಲಿಸ್ ಸಬ್ ಇನ್ಸ್‌ಪೆಕ್ಟರರಾಗಿಯೂ ಮ| ರಾ| ಬಿ. ನಾರಾಯಣರಾಯರು ರೀಡರರಾಗಿಯೂ ಕಾಸರಗೋಡಿನಲ್ಲಿ ಸಬ್ ಇನ್ಸ್‌ಪೆಕ್ಟರರಾದ ಮೆ. ಐ. ಸೋನ್ಸರವರು ಇಲ್ಲಿಯ ಟೌನಿಗೂ ವರ್ಗಾಯಿಸಲ್ಪಟ್ಟಿರುತ್ತಾರೆ.

ಇಲ್ಲಿಗೆ ಬಂದಿನ್ನು ಕೆಲವು ಸಮಯದಿಂದ ಚಮತ್ಕಾರಿಕವಾದ ಯಕ್ಷಿಣಿ ವಿದ್ಯೆಗಳನ್ನು ತೋರಿಸಿದ ಕಲಿಯುಗದ ಅರ್ಜುನನೆಂದು ಹೆಸರು ಪಡೆದ ಪ್ರೊಫೆಸರ್ ಶ್ಯಾಹರವರು ಇಂದು ಮುಲ್ಕಿಯತ್ತಕಡೆ ಹೋಗುವುದರಲ್ಲಿದ್ದಾರೆ. ಇವರು ಜೈನ ಮತಸ್ಥರು. ಮುಲ್ಕಿ, ಉಡ್ಪಿ, ಮೂಡಬಿದ್ರಿ, ಕಾರ್ಕಳ ಮೊದಲಾದ ಸ್ಥಳಗಳಲ್ಲಿರುವ ಹೆಸರು ಪಡೆದ ಜೈನ ಬಸ್ತಿ ಇತ್ಯಾದಿಗಳನ್ನು ನೋಡಿಕೊಂಡು, ಅಲ್ಲಲ್ಲಿ ತನ್ನ ಚಮತ್ಕಾರಗಳನ್ನು ತೋರಿಸಿ ತಿರುಗಿ ಮಂಗಳೂರಿಗೆ ಬರುವರೆಂದು ತಿಳಿಯುತ್ತೇವೆ.

ಈ ವಾರ ಸೆಶ್ಶನ್ಸ್ ಕೋರ್ಟಿನಲ್ಲಿ ಉಡ್ಪಿ ಸಬ್ ಮೇಜಿಸ್ಟ್ರೇಟರಿಂದ ಕಮಿಟ್ ಆದ ಮೊಕದಮೆಯು ತನಕಿಯಾಯಿತು. ಈ ಮೊಕದಮೆಯಲ್ಲಿ ಹಿಂದೆ ೩ ಸಲ ಶಿಕ್ಷೆ ಹೊಂದಿದ ಕೆ. ಡಿ. ರಾಮ ಯಾನೆ ಶ್ಯಾಮನೆಂಬವನು ಇದೇ ಕಳದ ಮಾರ್ಚಿ ತಾ. ೨೮ನೇ ಮಧ್ಯಾಹ್ನ ಉಡ್ಪಿಯ ಭಾಗಿರಥಿ ಎಂಬವಳ ಮನೆಯನ್ನು ನುಗ್ಗಿ ೨ ಕುಂಬಳಕಾಯಿಗಳನ್ನೂ, ೨ ಗೊನೆ ಬಾಳೆಹಣ್ಣನ್ನೂ, ೨ ಸಣ್ಣ ಮುಡಿ ಭತ್ತವನ್ನೂ ಕದ್ದಿದ್ದನೆಂದು ವಿಚಾರಣೆಗೆ ಗುರಿಯಾಗಿದ್ದನು. ಜೂರಿಯರು ಅಪಾದಿತನು ತಪ್ಪಿತಸ್ಥನಲ್ಲವೆಂದು ಅಭಿಪ್ರಾಯಪಟ್ಟದ್ದರಿಂದ ಜಡ್ಜರು ಅಪಾದಿತನನ್ನು ಖುಲಾಸು ಪಡಿಸಿದರು.

ಅನಂತರ ಕಾಸರಗೋಡ ಸಬ್ ಮೇಜಿಸ್ಟ್ರೇಟರಿಂದ ಕಮಿಟ್‌ಮಾಡಲ್ಪಟ್ಟ ಮೊಕದಮೆಯು ತನಕಿಯಾಯಿತು. ಈ ಮೊಕದಮೆಯಲ್ಲಿ ರಾಮಯ್ಯನೆಂಬವನೂ ಇತರ ಇಬ್ಬರೂ ಇ. ಪಿ. ಕೋಡಿನ ೩೦೪ನೇ ಪ್ರಕರಣದ ಮೇಲೆ ಅಪಾದಿಸಲ್ಪಟ್ಟು ವಿಚಾರಣೆಗೆ ಗುರಿಯಾಗಿದ್ದರು. ಶಿರಿವಾಗಿಲು ಗ್ರಾಮದ "ಮೂಡಾಯಿನಟ್ಟಿ" ಎಂಬ ಗದ್ದೆಯ ಸ್ವಾಧೀನತೆಯ ಸಂಬಂಧ ಮೃತ ತಿಮ್ಮಪ್ಪಣ್ಣ ಆಳ್ವ ಮತ್ತು ಅಪಾದಿತನಿಗೆ ದ್ವೇಷವಿತ್ತು. ತಾ. ೧೪-೩-೧೬ರಲ್ಲು ಮೃತನು ಉಳುತ್ತಿರುವಾಗ ಅಪಾದಿತನು ಗದ್ದೆಗೆ ಹೋಗಿ ಬೆತ್ತದಿಂದ ತಿಮ್ಮಪ್ಪಣ್ಣ ಆಳ್ವನಿಗೆ ಹೊಡೆದು ಚೂರಿಯಿಂದ ಅವನ ಹೊಟ್ಟೆಯನ್ನು ತಿವಿದನು. ಇದರಿಂದ ತಿಮ್ಮಪ್ಪಣ್ಣ ಆಳ್ವನು ತಾ. ೧೫-೪-೧೬ರಲ್ಲು ಕಾಸರಗೋಡು ಅಸ್ಪತ್ರಿಯಲ್ಲಿ ಮೃತನಾದನು ಎಂತ ಸರಕಾರದ ಕಡೆಯ ವಾದವಾಗಿತ್ತು. ಜಡ್ಜರು ೧-೨ನೇ ಅಪಾದಿತರಿಗೆ ಒಂದೊಂದು ವರ್ಷಗಳ ಕಠಿಣ ಸಜೆಯನ್ನೂ ೨೫ ರೂಪಾಯಿಗಳ ಜುಲುಮಾನೆಯನ್ನೂ ವಿಧಿಸಿ ೩ನೇ ಅಪಾದಿತನನ್ನು ಖುಲಾಸು ಪಡಿಸಿದರು.

ಅಸಿಸ್ಟ್ಯಾಂಟ ಮೇಜಿಸ್ಟ್ರೇಟರಾದ ಮೆ| ಪ್ಲೆಂಟರಿಂದ ಕಮಿಟ್ ಮಾಡಲ್ಪಟ್ಟ ಖೂನಿ ಮೊಕದಮೆಯು ತನಕಿಯಾಯಿತು. ಈ ಮೊಕದಮೆಯಲ್ಲಿ ಶೇಷ ಮತ್ತು ಇನ್ನೊಬ್ಬನು ತೋಮಸ್ ನ್ಯಾಕನೆಂಬವನಿಗೆ ತಿವಿದು ಮರಣಾಂತಕರವಾದ ಗಾಯಪಡಿಸಿದರೆಂದೂ ಪೌಲು ರಬೆಲ್ಲೊ ಮತ್ತು ಸಾಲೇರ ಗೋವಿಂದನೆಂಬವನಿಗೆ ಕಠಿಣ ಜಖಂ ಪಡಿಸಿದರೆಂದೂ ಅಪಾದಿಸಲ್ಪಟ್ಟಿದ್ದರು. ಎಸ್ಸೆಸ್ಸರುಗಳು ಅಪಾದಿತರು ತಪ್ಪಿತಸ್ಥರಲ್ಲವೆಂತ ಅಭಿಪ್ರಾಯಪಟ್ಟದ್ದರಿಂದ ಜಡ್ಜರು ಅಪಾದಿತರೆಲ್ಲರನ್ನೂ ಖುಲಾಸುಪಡಿಸಿರುವರು.

ಮೆಸರ್ಸ್ ವಿ. ಎ. ಎಸ್. ಪಾಣಿ ಎಂಡ್ ಕೋ. ಮದ್ರಾಸ್—ಇವರ ಜ್ಯಾಹೀರಾತುಗಳನ್ನು ವಾಚಕರ ಅವಗಾಹನೆ ಬಗ್ಯೆ ಈ ಸಂಚಿಕೆಯೊಂದಿಗೆ ಇಟ್ಟಿರುವೆವು.

ಒಬ್ಬ ಬ್ರಾಹ್ಮಣ ಬಾತ್ಮಿದಾರರಿಂದ:— ಇಲ್ಲಿಯ ಹೂವಿನ ಮಾರ್ಕೆಟಿನಲ್ಲಿ ಒಬ್ಬ ತುರ್ಕನು ಕೋಳಿ ತತ್ತಿಗಳನ್ನು ತೆಕ್ಕೊಂಡು ಮಾರಾಟಕ್ಕೆ ಕೂಡ್ರುವನು. ಆದರೆ ಇದು ಸರಿಯಲ್ಲ. ಮೀನು, ಮಾಂಸ ಮುಂತಾದವುಗಳನ್ನು ಉಪಯೋಗಿಸುವವರ ಅನುಕೂಲತೆಗಾಗಿ ಇನ್ನೊಂದು ವಿಶಾಲವಾದ ಮಾರ್ಕೇಟೇ ಇರುವಾಗ ಹೂವು, ಕಾಯಿಪಲ್ಲೆ ಮುಂತಾದ ಪವಿತ್ರ ವಸ್ತುಗಳನ್ನು ಮಾರಾಟಕ್ಕಿಡುವ ಸ್ಥಲದಲ್ಲಿ, ಈ ನಿಂದ್ಯವಾದುದನ್ನು ತಂದಿಡುವುದು ಯಾಕೆ? ಬೇರೆ ಶಹರುಗಳ ದೊಡ್ಡ ದೊಡ್ಡ ಕಾಯಿಪಲ್ಲೆಗಳ ಮಾರ್ಕೇಟುಗಳಲ್ಲಿ ಸಹ ಇಂಥಾ ಅಮಂಗಲ ವಸ್ತುವು ಕಾಣುವುದಿಲ್ಲ. ಇಲ್ಲಿ ಮಾತ್ರ ಯಾಕೆ? ಈ ವಿಷಯದಲ್ಲಿ ಮುನಿಸಿಪಾಲಿಟಿಯವರು ನಿಗಾ ಕೊಟ್ಟರೆ ತುಂಬಾ ಉಪಕಾರವಾಗುವುದು.

P. D. LIMA.

Dental Surgeon, Mangalore.

ಇವರು ಈಗ ತಾನೇ ಸರ್ಕೀಟಿನಿಂದ ಹಿಂತೆರಳಿ ಬಂದಿರುವರು. ಅಮೇರಿಕದಿಂದ ಭಾರೀ ಕೃತಕ ದಂತಗಳನ್ನು ತರಿಸಿಕೊಂಡಿಟ್ಟಿರುವರು. ಈ ಸುಸಮಯವನ್ನು ಕಳಕೊಳ್ಳಬೇಡಿರಿ. ಮಿತವಾದ ದರದಲ್ಲಿ ಹಲ್ಲುಗಳನ್ನು ಸರಿಪಡಿಸಿಕೊಡುವರು.

ಪಿ. ಡಿ. ಲಿಮಾ.

ದಂತ ವೈದ್ಯರು, ಒಡೆಯರರ ಶಾಪಿನ ಬಳಿ,

ಮಂಗಳೂರು.

1916-17ನೇ ಇಸವಿಯ ಇಂಡಿಯಾ ಗವರ್ನಮೆಂಟ್ ಕನ್‌ವರ್ಶನ್ ಲೋನ್ ಎಂಬ ಮಾರ್ಪಡಿಸಬಹುದಾದ ಸಾಲವು.

ಪೋಸ್ಟ್ ಆಫೀಸು ಉಪಭಾಗವು.

1931ನೇ ಇಸವಿಗೆ ಮುಂಚಿತವಾಗಿ ಸಲ್ಲಿಸತಕ್ಕದ್ದಲ್ಲದ ಪರಂತು 1936 ನೇ ಇಸವಿಯೊಳಗಾಗಿ ನೂರಕ್ಕೆ ನೂರರಂತೆ ಪೂರಾ ಮರುಪಾವತಿಯಾಗತಕ್ಕ ಸಾಲವು.

ಸಾಲಿಯಾನಾ ವರ್ಷ ಒಂದರ ಸೇಕಡಾ 4ರ ದರದ ಬಡ್ಡಿಯು ಅರ್ಧವರ್ಷಕ್ಕೊಮ್ಮೆ ಎಂದರೆ ಏಪ್ರೀಲ್ 1ನೇ ತಾರೀಕಿನಲ್ಲಿಯೂ ಮತ್ತು ಅಕ್ಟೋಬರು 1ನೇ ತಾರೀಕಿನಲ್ಲಿಯೂ ಸಲಾಯಿಸಲ್ಪಡುವುದು.

ಸೇಕಡಾ 3ರಂತೆ ಮತ್ತು 3½ಯಂತೆ ರೂಪಾಯಿ ನಾಣ್ಯದಲ್ಲಿರುವ ಸಾಲಗಳನ್ನು ಮಾರ್ಪಡಿಸಿಕೊಳ್ಳಲು ಅರ್ಜಿದಾರರು ಅರ್ಹರಾಗಿರುತ್ತಾರೆ.

ಅರ್ಜಿಗಳು 100 ರೂಪಾಯಿ-ಯಾ-ಅದರ ಅಪವರ್ತ್ಯಗಳ ಬಗ್ಗೆ (ಎಂದರೆ 200, 300 ಈ ಮೇರೆಗೆ) ಇದ್ದು 5,000 ರೂಪಾಯಿಗಳಿಗೆ ಮೀರಿರ ಕೂಡದು. ಮತ್ತು ಸೇವಿಂಗ್ಸ್ ಬ್ಯಾಂಕ್ ಕೆಲಸವು ನಿರ್ವಹಿಸಲ್ಪಡುವ ಪ್ರತಿಯೊಂದು ಟಪ್ಪಾಲ್ ಆಫೀಸಿನಲ್ಲಿಯೂ 1916ನೇ ಇಸವಿಯ ಜೂನ್ 14ನೇ ತಾರೀಖಿನಿಂದ 1916ನೇ ಇಸವಿಯ ಸಪ್ಟಂಬರ್ 25ನೇ ತಾರೀಖಿನ (ಇದು ಸೇರಿ) ವರೆಗೆ ಅವು ಅಂಗೀಕರಿಸೋಣಾಗುವವು. ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟರನಾಗಿದ್ದರೂ ಅಲ್ಲದಿದ್ದರೂ ಸರಿಯೇ, ಯಾವನೇ ಆದರೂ ಅರ್ಜಿಮಾಡಬಹುದು.

ಎಷ್ಟು ಮೊಬಲಗುಗಳಿಗೆ ಅರ್ಜಿಮಾಡಲ್ಪಡುತ್ತದೋ ಆ ಪೂರಾ ಮೊಬಲಗುಗಳನ್ನು ಅರ್ಜಿಗಳ ಸಂಗಡ ಡಿಪಾಜಿಟು ಮಾಡತಕ್ಕದ್ದು ಮತ್ತು ಅಷ್ಟೇ ಮೊಬಲಗುಗಳ (ಗವರ್ನಮೆಂಟ್ ಸೆಕ್ಯೂರಿಟಿ) ಪತ್ರವು ಅರ್ಜಿದಾರರಿಗೆ ಕೊಡಲ್ಪಡುವುದು. ಡಿಪಾಜಿಟುಗಳು ರೊಕ್ಕವಾಗಿ ಕೊಡಲ್ಪಡಬಹುದು ಅಥವಾ ಪೂರಾ ಯಾ ಒಂದು ಭಾಗವು ಪ್ರಕೃತವಿರುವ ಸೇವಿಂಗ್ಸ್ ಬ್ಯಾಂಕ್ ಲೆಕ್ಕಗಳಿಂದ ವಿಥ್‌ಡ್ರಾಯಲ್ ಯಾನೆ ಈಸುಕೊಳ್ಳುವದರ ಮೂಲಕವಾಗಿ ಕೊಡಲ್ಪಡಬಹುದು.

ಟಪ್ಪಾಲು ಆಫೀಸಿನ ಮುಖಾಂತರ ಪಡೆದ ಮತ್ತು ಟಪ್ಪಾಲು ಆಫೀಸಿನ ಅಧಿಕಾರಿಗಳ ವಶದಲ್ಲಿಯೇ ಇಡಲ್ಪಟ್ಟ ಹೊಸ ಸಾಲಪತ್ರಗಳ ಬಡ್ಡಿಯ ಮೇಲೆ ಇನ್‌ಕಮ್‌ಟ್ಯಾಕ್ಸು ಹೊರಿಸೋಣಾಗಲಿಕ್ಕಿಲ್ಲ.

ಅರ್ಜಿದಾರರಿಗೆ, ರೂಪಾಯಿ ನಾಣ್ಯದಲ್ಲಿರುವ ಇಂಡಿಯಾ ಗವರ್ನಮೆಂಟಿನವರ ಸೇಕಡಾ 3½ ಬಡ್ಡಿಯ ಸೆಕ್ಯೂರಿಟಿ ಪತ್ರಗಳನ್ನು ಹೊಂದಿದವರು ಅವುಗಳ ಅಂಕಿತ ಮೌಲ್ಯದ ಸೇಕಡಾ 96 ರೂಪಾಯಿ ಪ್ರಕಾರವೂ ಅಥವಾ ಸೇಕಡಾ 3ರ ಬಡ್ಡಿಯ ಸೆಕ್ಯೂರಿಟಿ ಪತ್ರಗಳನ್ನು ಹೊಂದಿದವರು ಅವುಗಳ ಅಂಕಿತ ಮೌಲ್ಯದ ಸೇಕಡಾ 82½ರ ಪ್ರಕಾರವೂ, ಅವರು ಪಡೆಯುವ ಹೊಸ ಸಾಲದ ಮೊಬಲಗಿಗೆ ಸಮಾನವಾಗುವಷ್ಟು ಮೊಬಲಗಿನ ಮಟ್ಟಿಗೆ ಪರಭಾರೆಮಾಡಿ ಹೊಸ ಸಾಲವಾಗಿ ಮಾರ್ಪಡಿಸುವ ಹಕ್ಕುಗಳು ಕೊಡಲ್ಪಡುವುವು.

ಮಾರ್ಪಡಿಸುವ ಹಕ್ಕುಗಳುಳ್ಳವರು ಮಾರ್ಪಡಿಸುವ ಬಗ್ಗೆ ಮಾಡುವ ಅರ್ಜಿಗಳು, 1916ನೇ ಇಸವಿಯ ಅಕ್ಟೋಬರ್ 16ನೇ ತಾರೀಖಿನಿಂದ 1917ನೇ ಇಸವಿಯ ಜನವರಿ 16ನೇ ತಾರೀಖಿನ (ಇದು ಸೇರಿ) ವರೆಗೆ ಅಂಗೀಕರಿಸಲ್ಪಡುವುವು. ಮಾರ್ಪಡಿಸೋಣಾಗುವ ಸೆಕ್ಯೂರಿಟಿ ಪತ್ರಗಳ ಬಾಬತು 1916ನೇ ಇಸವಿಯ ಸಪ್ಟಂಬರು 30 ತಾರೀಖಿನ ವರೆಗಿನ ಬಡ್ಡಿಯು ಮಾರ್ಪಡಿಸುವ ಕಾಲದಲ್ಲಿ ರೊಕ್ಕವಾಗಿ ಸಲಾಯಿಸಲ್ಪಡುವುದು. ಇವುಗಳ ಬದಲಾಗಿ ಸಾದರುಮಾಡಲ್ಪಟ್ಟ ಹೊಸ ಸಾಲದ ಮೇಲಣ ಬಡ್ಡಿಯು 1916ನೇ ಇಸವಿಯ ಅಕ್ಟೋಬರ 1ನೇ ತಾರೀಖಿನಿಂದ ಎಣಿಸಲ್ಪಡುವುದು.

ತಪಸೀಲು ಮಾಹಿತಿ ಅಡಗಿರುವ ನೋಟೀಸಿನ ನಕಲುಗಳು ಮತ್ತು ಅರ್ಜಿಯ ಫಾರಂಗಳನ್ನು ಸೇವಿಂಗ್ಸ್ ಬ್ಯಾಂಕ್ ಕೆಲಸವು ನಿರ್ವಹಿಸಲ್ಪಡುವ ಯಾವ ಪೋಸ್ಟಾಫೀಸಿನಿಂದಾದರೂ ಪಡೆಯಬಹುದು. ಬೇಕಾದರೆ ಇದಕ್ಕೆ ಅನುಬಂಧಿಸಿರುವ ಅರ್ಜಿಯ ಫಾರಮನ್ನೇ ಉಪಯೋಗಿಸಬಹುದು.

1916-1917ನೇ ಇಸವಿಯ ಇಂಡಿಯಾ ಗವರ್ನಮೆಂಟಿನವರು ತೆಗೆಯುವ ಸೇಕಡಾ 4ರ ಬಡ್ಡಿಯ ಕನ್‌ವರ್ಶನ್ ಲೋನ್ ಎಂಬ ಮಾರ್ಪಡಿಸಬಹುದಾದ ಸಾಲದ ಬಗ್ಗೆ ಪೋಸ್ಟು ಆಫೀಸುಗಳ ಪರಿಮುಖವಾಗಿ ಮಾಡುವ ಅರ್ಜಿಯ ನಮೂನೆ.

(ಸೇವಿಂಗ್ಸ್ ಬ್ಯಾಂಕ್ ಕೆಲಸವು ನಿರ್ವಹಿಸಲ್ಪಡುವ ಯಾವದೊಂದು ಪೋಸ್ಟ್ ಆಫೀಸಿನಲ್ಲಿ 1916ನೇ ಇಸವಿಯ ಸಪ್ಟಂಬರ 25ನೇ ತಾರೀಕು ದಾಟಿಹೋಗುವದರೊಳಗಾಗಿ ಹಾಜರು ಮಾಡಲ್ಪಡಬೇಕು. ಆವಶ್ಯವಿದ್ದರೆ ಇದೇ ಫಾರ್ಮನ್ನು ಕತ್ತರಿಸಿ ಉಪಯೋಗಿಸಬಹುದು).

ಬಹಳ ಸ್ಪಷ್ಟವಾಗಿ ಬರೆಯಬೇಕು.

ಸಾಹೇಬ

ನಾನು 1916ನೇ ಇಸವಿಯ ಜೂನ್ 8ನೇ ತಾರೀಕಿನ ಇಂಡಿಯಾ ಗಜೇಟಿನ ವಿಶೇಷ ಸಂಚಿಕೆಯಾಗಿ ಫಾಯಿಸ್ ಮಾಡಲ್ಪಟ್ಟ ಇಸ್ತಿಹಾರಿನಲ್ಲಿ ಪ್ರಕಟಿಸಲ್ಪಟ್ಟ 1916-17ನೇ ವರ್ಷದ ಸೇಕಡಾ 4ರ ಬಡ್ಡಿಯ ಕನ್‌ವರ್ಶನ್ ಲೋನ್ ಎಂಬ ಮಾರ್ಪಡಿಸಬಹುದಾದ ಸಾಲದ ಪೈಕಿ ರೂ. ಬಗ್ಗೆ ಈ ಮೂಲಕ ದರಖಾಸ್ತು (ಅರ್ಜಿ) ಮಾಡುತ್ತೇನೆ.

ನಾನು ದರಖಾಸ್ತು ಮಾಡಿದ ಸಾಲದ ಮೊಬಲಗಿನ ಬಗ್ಗೆ,

(1) ನಾನು ರೊಕ್ಕವಾಗಿ ರೂ. .... ಚೆಕ್ ಮೂಲವಾಗಿ ರೂ. .... ಈ ಮೂಲಕ ಒಪ್ಪಿಸುತ್ತೇನೆ.

(2) ಪೋಸ್ಟು ಆಫೀಸು ಸೇವಿಂಗ್ಸ್ ಬ್ಯಾಂಕಿನಲ್ಲಿ ನನ್ನ ಲೆಕ್ಕದಲ್ಲಿ ಜಮ ಇರುವ ಮೊಬಲಗಿನಿಂದ ರೂ. .... ಈ ಬಗ್ಗಾಗಿ ಈಸುಕೊಳ್ಳಲು ನಾನು ಅಧಿಕಾರಗೊಳ್ಳಿಸುತ್ತೇನೆ ಮತ್ತು ಪಾಸ್‌ಬೂಕನ್ನು ಇದರೊಂದಿಗೆ ಲಗತ್ ಮಾಡಿದ್ದೇನೆ.

ಜುಮಲಾ ... .

(ರೊಕ್ಕವಾಗಿ ಯಾ ಚೆಕ್ ಮೂಲವಾಗಿ ಪಾವತಿಮಾಡಿದ ಮೊಬಲಗುಗಳನ್ನು ಮತ್ತು ಸೇವಿಂಗ್ಸ್ ಬ್ಯಾಂಕ್ ಲೆಕ್ಕದಿಂದ ಈಸುಕೊಂಡು ಪಾವತಿಮಾಡಿದ ಮೊಬಲಗುಗಳನ್ನು ಆ ಬಗ್ಗೆ ಬಿಟ್ಟ ಸ್ಥಳಗಳಲ್ಲಿ ಪ್ರತಿಪ್ರತ್ಯೇಕವಾಗಿ ಕಾಣಿಸತಕ್ಕದ್ದು. ಅನಾವಶ್ಯಕವಾದ ವಾಕ್ಯಗಳು ಯಾವುವೂ ಇದ್ದರೆ ಅವನ್ನು ಹೊಡೆದುಬಿಡತಕ್ಕದ್ದು.)

A. ನನ್ನ ಬಳಿಯಿಂದ ಅಂಗೀಕರಿಸೋಣಾದ ಸಾಲದ ಮೊಬಲಗನ್ನು ನನ್ನ ಬಗ್ಗಾಗಿ ಪೋಸ್ಟ್ ಮತ್ತು ಟೆಲಿಗ್ರಾಫ್ ಇಲಾಖೆಯ ಅಕೌಂಟಾಂಟ್ ಜನರಲ್‌ರವರು ಇಟ್ಟುಕೊಳ್ಳಬಹುದಾಗಿ ಮತ್ತು ಆ ಬಾಬತು ಬಡ್ಡಿಯನ್ನು--

(i) .... ಪೋಸ್ಟ್ ಆಫೀಸಿನಲ್ಲಿ ತೆರೆದಿರುವ ನನ್ನ ಪ್ರಕೃತದ ನಂ. .... ನೇ ಸೇವಿಂಗ್ಸ್ ಬ್ಯಾಂಕ್ ಲೆಕ್ಕದಲ್ಲಿ, (ಅರ್ಜಿದಾರನಿಗೆ ಈ ಮೊದಲೇ ತೆರೆಯಲ್ಪಟ್ಟ ಲೆಕ್ಕವು ಇಲ್ಲದಿದ್ದರೆ (i)ನೇ ಕಾಲಮನ್ನು ಹೊಡೆದುಬಿಡತಕ್ಕದ್ದು).

(ii) .... ಪೋಸ್ಟ್ ಆಫೀಸಿನಲ್ಲಿ ಈ ಬಗ್ಗಾಗಿ ತೆರೆಯಲ್ಪಡುವ ಒಂದು ಸೇವಿಂಗ್ಸ್ ಬ್ಯಾಂಕ್ ಲೆಕ್ಕದಲ್ಲಿ, ಜಮಾ ದಾಖಲು ಮಾಡಬೇಕಾಗಿ ಅಪೇಕ್ಷಿಸುತ್ತೇನೆ.

B. ನನ್ನ ಬಳಿಯಿಂದ ಅಂಗೀಕರಿಸೋಣಾದ ಸಾಲದ ಮೊಬಲಗಿನ ಬಗ್ಗೆ .... ಖಜಾನೆಯಲ್ಲಿ ಬಡ್ಡಿ ಪಾವತಿಯಾಗುವಂತೆ ನಮೂದಿಸಲ್ಪಟ್ಟ ಈ ಕೆಳಗಿನ ಮೌಲ್ಯದ ಪ್ರಾಮಿಸರಿ ನೋಟುಗಳು ನನಗೆ ಕೊಡಲ್ಪಡಬೇಕಾಗಿ ಅಪೇಕ್ಷಿಸುತ್ತೇನೆ.

(A ಅಥವಾ B ಕಲಮನ್ನು ಸ್ಥಿರಪಡಿಸಿ ಉಳಿದದ್ದನ್ನು ಹೊಡೆದು ಬಿಡತಕ್ಕದ್ದು.)

1916-17ನೇ ಇಸವಿಯ ಸೇಕಡಾ 4ರ ಬಡ್ಡಿಯ ಕನ್‌ವರ್ಶನ್ ಲೋನ್ ಎಂಬ ಮಾರ್ಪಡಿಸಬಹುದಾದ ಸಾಲದ ಬಗ್ಗೆ ನನ್ನಿಂದ ದರಖಾಸ್ತು ಮಾಡಲ್ಪಟ್ಟ ಮೊಬಲಗಿಗೆ ಸಮಾನವಾದಷ್ಟು ಮೊಬಲಗಿನ ಮಟ್ಟಿಗೆ ಸೇಕಡಾ 3½ ಯಾ 3ರ ಬಡ್ಡಿಯ, ರೂಪಾಯಿ ನಾಣ್ಯದಲ್ಲಿರುವ ಇಂಡಿಯಾ ಗವರ್ನಮೆಂಟಿನವರ ಸೆಕ್ಯೂರಿಟಿ ಪತ್ರಗಳನ್ನು ಮಾರ್ಪಡಿಸಲು ಸ್ವಾತಂತ್ರ್ಯಗೊಳಿಸುವ ಒಂದು ಹುಕುಮು ಯಾನೆ ಅಧಿಕಾರಪತ್ರವನ್ನು ಸಹಾ ನನಗೆ ಕೊಡಿಸಬೇಕಾಗಿ ಅಪೇಕ್ಷಿಸುತ್ತೇನೆ.

ಹೆಸರು........ ವಿಳಾಸ .... ತಾರೀಖು ....

ಪೋಸ್ಟ್ ಆಫೀಸಿನಲ್ಲಿ ಹಾಜರು ಮಾಡಿದ ತಾರೀಖು........ (ಅಂಗೀಕರಿಸುವ ಪೋಸ್ಟ್ ಮಾಸ್ತರನಿಂದ ನಮೂದಿಸಲ್ಪಡತಕ್ಕದ್ದು).

ರಿಜಸ್ಟರು ನಂ........ (ಹೆಡ್ ಪೋಸ್ಟ್ ಮಾಸ್ತರನಿಂದ ನಮೂದಿಸಲ್ಪಡತಕ್ಕದ್ದು)

ಹೆಡ್ ಆಫೀಸು ಸ್ಟ್ಯಾಂಪು.

ಎಲ್. ಡೇವಿಡ್ಸನ್,
ಅಕ್ಟಿಂಗ್ ಚೀಫ್ ಸೆಕ್ರಟರಿ.

ಆರ್. ಮಾರ್ಟಿನ್ಸರ ಮಾತ್ರೆಗಳು ನಂ. 2.

ಡಮಿಯಾನ ಮತ್ತು ಕಂಪೌಂಡ್ ಫೊಸ್ಫರಸ್ ಕೂಡಿರುವ ಈ ಮಾತ್ರೆಗಳು ದಿವ್ಯವಾದ ಏಳು ಔಷಧಿಗಳಿಂದ ತಯಾರಿಸಲ್ಪಟ್ಟಿವೆ. ಇದು ಕೂಡಲೇ ಗುಣಪಡಿಸುವ ಶಕ್ತಿಯುಳ್ಳದ್ದಾಗಿದ್ದು ಮಲಬದ್ಧತೆ, ಬಾಡಿದ ಮುಖ, ತಲೆಸಿಡಿತ; ಅಜೀರ್ಣ, ಸ್ನಾಯುಗಳ ಬಲಹೀನತೆ, ಸರ್ವ ವಿಧದ ಹೆಂಗಸರ ಬಲಹೀನತೆ, ಮೊದಲಾದ ರೋಗಗಳಿಗೆ ಸಿದ್ಧೌಷಧವು. ಅದಲ್ಲದೆ ಮೂತ್ರ ರೋಗ, ಭ್ರಾಂತಿ, ಗಂಡಿಗೆ ಬಡಿಯೋಣ್ಕು ರಾತ್ರಿ ಬೆವರುವುದು, ಈ ರೋಗಗಳಿಗೂ ಗುಣಕಾರಿ. ವಿದ್ಯಾ ಕೆಲಸ ಮಾಡುವವರಿಗೆ ಅತ್ಯುಪಕಾರಿ. ಪ್ರತಿ ಬಾಟ್ಲಿಯಲ್ಲಿ ೪೦ ಮಾತ್ರೆಗಳಿವೆ. ಬಾಟ್ಲಿಗೆ ರೂ. ೧—೮—೦.

ಆರ್. ಮಾರ್ಟಿನ್ಸರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮಲು ಗೂರಲು, ಶ್ವಾಸ, ಸೀತ, ನೆಗಡಿ, ಗಂಟಲುನೋವು, ಎದೆ ನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನೆಮಾಡಿ ಪರೀಕ್ಷಿಸಿ ನೋಡಲಿ. ಅನಂತರ ಯಾವ ಬೇರೆ ಔಷಧಕ್ಕೂ ಗಮನ ಕೊಡದಿರುವಿರಿ. ಎಲ್ಲಾ ವಿಧವಾದ ಕೆಮ್ಮಿಗೂ ರಾಣಿಯಾಗಿಯೂ, ಎದೆಗೆ ಬಲಕೊಟ್ಟು ಮೇಲ್ಕಂಡ ರೋಗಗಳು ತಲೆಯಿಕ್ಕದಂತೆ ಮಾಡುತ್ತವೆ.

೬೦ ಮಾತ್ರೆಗಳ ಸೀಸೆ ಒಂದಕ್ಕೆ ರೂ. ೧—೦—೦.

ಆರ್. ಮಾರ್ಟಿನ್ಸರ ಮೇಹರೋಗಕ್ಕೆ ಮಿಶ್ರಣ.

ಗಂಡಸರು ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡ ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ ಅಥವಾ ಹೊಸತಾಗಿದ್ದರೂ ಸರಿ. ಬಿಳಿಪು ಹೋಗುವುದು, ಉರಿಯುವುದು ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೇ ಮೂತ್ರ ಉರಿಯುವುದನ್ನು ನಿಲ್ಲಿಸಿ, ಮೂತ್ರವು ಬಿಳುಪಾಗಿ ನಿರ್ಮಲವಾಗುವುದಲ್ಲದೆ ರೋಗದ ಪಟ್ಟನ್ನೇ ಅಡಗಿಸಿಬಿಡುತ್ತದೆ. ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ. ಬೆಲೆ ಸೀಸೆ ಒಂದಕ್ಕೆ ರೂ. ೧—೮—೦. ವಿಳಾಸ:—

ಆರ್. ಡಿ. ಕಟ್ಲೆ ಮತ್ತು ಕಂಪೆನಿ, **R. D. Kately & Co.**

ನಂಬ್ರ ಡಿ. ಫ್ರೆಯರ್ ರೋಡ್, *No. D. Frere Road,*

ಮುಂಬಯಿ. *Near Wright & Co. Fort Bombay.*

ಮೈಸೂರು ಊದಬತ್ತಿಗಳು.

ಇಂಡಿಯಾ ದೇಶದಲ್ಲಿ ನಡದಿರುವ ಯಗ್ಜಬೀಶನ್‌ಗಳಲ್ಲಿ ಸುಮಾರು 95 ಸರ್ಟಿಫಿಕೇಟುಗಳನ್ನು 32 ಮೆಡಲುಗಳನ್ನು ಹೊಂದಿರುವ ನಮ್ಮ ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕಸಮಯದಲ್ಲಿಯೂ ರತಿಕರ ಉಲ್ಲಾಸ ಸಮಯದಲ್ಲಿಯೂ ಸಹ ಅತ್ಯವಶ್ಯಕವಾದ್ದರಿಂದ ಪ್ರತಿ ಒಬ್ಬರು ಈ ಕೆಳಗೆ ಇರುವ ಸುಗಂಧ ದ್ರವ್ಯಗಳನ್ನು ತರಿಸಿ ಆನಂದ ಹೊಂದುವದಲ್ಲದೆ ಸ್ವದೇಶ ವ್ಯಾಪಾರಕ್ಕೂ ಪ್ರೋತ್ಸಾಹಿಸುವರೆಂದು ನಂಬಿರುತ್ತೇವೆ.

ಊದಬತ್ತಿಗಳು 24 ರೂ. ತೂಕದ ಶೇರು 1ಕ್ಕೆ ರೂ. 12-0-0, 5-0-0, 3-0-0 2—8—0, 1—4—0, 1—0—0

ಅರಗಜ ಮತ್ತು ಬಿಲ್ಲೆಗಳು ತೊಲಾ 1ಕ್ಕೆ 2—0—0, 1—0—0 0—12—0, 0—6—0

ಸುಗಂಧಿ ಕಾಡರ್ನ 1ಕ್ಕೆ 0—1—0. **ಬಾಲಗ್ರಹ** ಧೂಪ ಟಿನ್ 1ಕ್ಕೆ 0—8—0. **ಸುವಾಸನೇ ಸುಣ್ಣ** ಸೀಸೆ 1ಕ್ಕೆ 0-2-0, ಇದಲ್ಲದೆ ಇನ್ನು **ಅನೇಕ ತರಹ ಸೆಂಟ್ಸು**ಗಳು, ಯಸೆನ್ಸ್‌ಗಳು, ಸುಗಂಧ ದ್ರವ್ಯಗಳು, ಬೆಳ್ಳಿಯಿಂದ ತಯಾರಿಸಿದ ಸಣ್ಣ ಸಣ ವಿಗ್ರಹಗಳು, ಬಣ್ಣದ ಸಾಮಾನುಗಳು ಸಹ ಇರುತ್ತವೆ. ಮತ್ತು ವರ್ಷಕ್ಕೆ ಎರಡಾವರ್ತಿಗೆ ಕಡಿಮೆಯಿಲ್ಲದೆ

ಬಹುಮಾನ ಹಂಚಲ್ಪಡುತ್ತೆ.

ಟಿ. ಎಲ್. ಉಪಾಧ್ಯಾಯ ಎಂಡ್ ಸನ್ಸ್

ಸುಗಂಧಕಾರಿ, ಮೈಸೂರು.

☞ ಇದನ್ನು ದಯವಿಟ್ಟು ನಿಮ್ಮ ಸ್ನೇಹಿತರುಗಳಲ್ಲಿ ಪ್ರಚುರಪಡಿಸಿರಿ.

ಪಿ. ಸುಬ್ಬರಾಯಿಯವರ

ಲೋಕ ಪ್ರಸಿದ್ಧವಾದ ಆಯುರ್ವೇದ

ಔಷಧಗಳು.

ರಕ್ತಾಮೃತ:— ಕಾಫಿ, ಟೀ ಇವುಗಳಿಗೆ ಬದಲಾಗಿ ಉಪಯೋಗಿಸುವ ಚೂರ್ಣವು ಅನೇಕ ಬೇರುಗಳಿಂದಲೇ ಮಾಡಲ್ಪಟ್ಟಿದೆ. ಕಾಫಿ, ಟೀ, ಇವುಗಳಿಂದುಂಟಾಗುವ ಕೇಡುಗಳೊಂದೂ, ಇಲ್ಲದೇ, ಜೀರ್ಣಶಕ್ತಿಯನ್ನು ಹೆಚ್ಚಿಸಿ, ಕ್ಷಯರೋಗ, ತಲೆನೋವು ಮುಂತಾದ್ದನ್ನು ಹೋಗಲಾಡಿಸುವದು. ರಕ್ತಶುದ್ಧಿಯನ್ನು ಮಾಡಿ ನರಸಂಬಂಧವನ್ನು ಬಲಪಡಿಸುತ್ತದೆ. ಇದನ್ನು ಬಿಡದೆ ಉಪಯೋಗಿಸುತ್ತಿದ್ದರೆ, ಅಜೀರ್ಣದಿಂದಲೂ ಮಧುಮೂತ್ರದಿಂದಲೂ ಕಷ್ಟಪಡುವವರು ಶೀಘ್ರದಲ್ಲಿ ಗುಣ ಹೊಂದುವರು. ಜ್ವರದವರಿಗೂ ಬಸಿರು ಬಾಣಂತಿಯರಿಗೂ, ವಾಂತಿಭೇದಿ ಮುಂತಾದ ರೋಗಕಾಲಗಳಲ್ಲಿಯೂ ಶರೀರದ ಉಷ್ಣವನ್ನು ನಿಶ್ಚಯವಾಗಿ ತಗ್ಗಿಸುವದು. ವಿದ್ಯಾರ್ಥಿಗಳಿಗೂ, ಉದ್ಯೋಗಸ್ಥರಿಗೂ, ಅನಿಷ್ಟವಾದ ಕಾಫಿ, ಟೀ ಮುಂತಾದುವುಗಳಿಗೆ ಬದಲಾಗಿ ಮಕ್ಕಳು ದೊಡ್ಡವರೆಲ್ಲರು ಉಪಯೋಗಿಸಬಹುದು. ಅರ್ಧ ತೊಲೆ ಚೂರ್ಣವು ಒಂದು ಬಟ್ಟಲು ಕಷಾಯಕ್ಕೆ ಸಾಕು. 20 ಸಲಕ್ಕೆ ಉಪಯೋಗಿಸುವಷ್ಟು ಚೂರ್ಣವಿರುವ ಟಿನ್ 1ಕ್ಕೆ 6 ಆಣೆ ವಿ. ಪಿ. ಚಾರ್ಜು 3. ಆಣೆ 8 ಆಣೆ ತಪಾಲಾ ಸ್ಟಾಂಪುಗಳನ್ನು ನಮಗೆ ಕಳುಹಿಸುವವರಿಗೆ 1 ಟಿನ್ ಮುಂದಾಗಿ ಹಾಸಲು ಕೊಟ್ಟು ಕಳುಹಿಸಲ್ಪಡುವದು.

ಸುಗಂಧನಾಸಿಕಾ ಚೂರ್ಣ:— ಈ ನಾಸಿಕಾ ಚೂರ್ಣವು ಅತ್ಯುತ್ತಮವಾದ ಸುಗಂಧ ವಸ್ತುಗಳಿಂದ ತಯಾರಿಸಿದ್ದು. ಇದನ್ನು ಸಾಧಾರಣ ನಸ್ಯದೊಡನೇ ಕೊಂಚ ಸೇರಿಸಿ ಉಪಯೋಗಿಸಿದರೆ ಹೊಗೆಸೊಪ್ಪಿನ ದುರ್ವಾಸನೆ ಮೂಲಕವಾಗಿ ಹೋಗುವದಲ್ಲದೆ ಮನಸ್ಸಿಗೆ ಸಂತೋಷವಾದ ಸುವಾಸನೆಯನ್ನು ಕೊಡುವದು. ಇದು ತಲೆನೋವು, ಪಿತ್ತದಿಂದ ತಲೆ ತಿರುಗುವದು, ಪೀನಸ ಮುಂತಾದ ರೋಗಗಳನ್ನು ನಿವರ್ತಿ ಮಾಡಿ ಕ್ರಮೇಣ ನಸ್ಯದ ದುರಭ್ಯಾಸವನ್ನು ಹೋಗಲಾಡಿಸುವದು. ಒಂದು ಸೀಸೆ ಒಂದು ತಿಂಗಳಿಗೆ ಸಾಕು. ಸೀಸೆ 1ಕ್ಕೆ 4. ಆಣೆ ಟಪ್ಪಾಲು ಚಾರ್ಜು 1 ಸೀಸೆಯಿಂದ 3 ಸೀಸೆವರಿಗೆ 3 ಆಣೆ 4 ಸೀಸೆಯಿಂದ 6 ಸೀಸೆವರಿಗೆ 5 ಆಣೆ. 7 ಸೀಸೆಯಿಂದ 12 ಸೀಸೆವರಿಗೆ 7 ಆಣೆ.

ಅಶೋಕಘೃತ:— ಸ್ತ್ರೀಗಳಿಗೆ ಕ್ರಮತಪ್ಪಿ ಬಹಿಷ್ಟೆಯಾಗೋಣ, ಮುಟ್ಟಾದ ಕಾಲದಲ್ಲಿ ಬಹು ನೋವುಂಟಾಗುವಿಕೆ, ಮುಟ್ಟು ಕಳೆಯುವವರೆಗೂ ತೊಡೆಯ ಸಂದಿನಲ್ಲಿ ವಿಪರೀತವಾಗಿ ಬಾಧೆಯಾಗುವುದು. ಹೊತ್ತು ಗೊತ್ತಿಲ್ಲದೇ ಮುಟ್ಟಾಗೋಣ, ಅತ್ಯಲ್ಪವಾಗಿಯಾಗಲಿ ಅಥವಾ ಅತ್ಯಧಿಕವಾಗಿಯಾಗಲಿ ರಜಸ್ಸು ಸುರಿಯುವುದು. ಮಕ್ಕಳಿಲ್ಲದೆ ಬಹುಕಾಲ ಬಂಜೆಯಾಗಿರುವುದು. ವಾಡಿಕೆಯಾಗಿ ಗರ್ಭಸ್ರಾವವಾಗುವಿಕೆ, ಇವೇ ಮೊದಲಾಗಿ ನಾನಾ ತರದ ವ್ಯಾಧಿಗಳಿಗೂ ಅತ್ಯುತ್ತಮವಾದ ಔಷಧವು. ಆರೋಗ್ಯ ಮತ್ತು ಅಂದವಾಗಿಯೂ ಇರತಕ್ಕ ಮಕ್ಕಳನ್ನು ಪಡೆಯಬೇಕೆಂದು ಬಯಸುವ ಪ್ರತಿಯೊಬ್ಬ ಸ್ತ್ರೀಯು ನಮ್ಮ ಅಶೋಕಘೃತವನ್ನು ಅತ್ಯವಶ್ಯವಾಗಿ ಉಪಯೋಗಿಸಬೇಕು; ಸೀಸೆ 1ಕ್ಕೆ 1 ರೂಪಾಯಿ, ಎರಡು ಸೀಸೆವರಿಗೆ ವಿ. ಪಿ. ಚಾರ್ಜು 5 ಆಣೆ.

☞ ಈ ಪ್ರಾಂತ್ಯದಲ್ಲಿ ಕನ್ನಡ, ತೆಲುಗು, ಮಲೆಯಾಳ ಈ ಭಾಷೆಗಳು ತಿಳಿಯುವದಿಲ್ಲವಾದುದರಿಂದ ಪೋಷಕರು ದಯವಿಟ್ಟು ಆರ್ಡರುಗಳನ್ನು ಮತ್ತು ಪತ್ರವ್ಯವಹಾರಗಳನ್ನು ಇಂಗ್ಲೀಷಿನಲ್ಲಾಗಲೀ, ತಮಿಳಿನಲ್ಲಾಗಲೀ ಸ್ಪಷ್ಟವಾಗಿ ತಿಳಿಯುವಂತೆ ಬರಿಯಬೇಕು.

MY ADDRESS.

P. SUBBA ROY.
Ayurvedic Pharmacy,
Sri Perumalkoil,
SANNATHY, TANJORE.

ನಮ್ಮ ವಿಳಾಸ:—

ಪಿ. ಸುಬ್ಬರಾಯಿ,
ಆಯುರ್ವೇದ ಔಷಧಶಾಲಾ,
ಶ್ರೀ ವೆಂಕಟೇಶ ಪೆರುಮಾಳ್ ದೇವಸ್ಥಾನ,
ಸನ್ನಿಧಿ, ತಂಜಾವೂರು.

ಎಂದೂ ತಪ್ಪದೆ ಅಪ್ರತಿಮವಾದ ಗುಣಕೊಡುವ

ಲೋಕಪ್ರಸಿದ್ಧ ಔಷಧಿಗಳು.

ಈ ನಮ್ಮ ಔಷಧಿಗಳನ್ನು ಪ್ರಯೋಗಿಸುವವರಿಗೆ ಹೊಮಿಯೋಪತಿ ಔಷಧಗಳು ರೋಗಗಳನ್ನು ಬಹು ಬೇಗನೇ ಗುಣಪಡಿಸುತ್ತದೆಂಬದನ್ನು ಹೇಳಬೇಕಾದ್ದಿಲ್ಲ.

.ಟೂರಕಬ್.

ಮೆದುಳಿನ ಅಶಕ್ತಿ, ನರಗಳ ಬಲಹೀನತೆ, ತಲೆಸಿಡಿತ, ತಲೆನೋವು, ಶಿರೋಭ್ರಮಣ, ನಾಡಿ ತೀವ್ರವಾಗಿ ಒಡಿಯುವದು, ರಕ್ತಹೀನತೆ, ರಾತ್ರಿಕಾಲ ಬೆವರುವದು,-ಪ್ರಮೇಹ, ಮೇಹ, ಅಸ್ಥಿಸ್ರಾವ, ಬಿಳೇ ಸೆರಗು ಹೋಗುವದು, ಬಿಳೇ ಮೇಹ, ಜನನೇಂದ್ರಿಯಗಳ ಬಲಹೀನತೆ, ಧಾತುನಷ್ಟ, ಇಂದ್ರಿಯಪತನ, ಸ್ವಪ್ನೇಂದ್ರಿಯ ಮೊದಲಾದ ಸಕಲ ರೋಗಗಳಿಗೆ ಇದಕ್ಕಿಂತ ಉತ್ತಮ ಔಷಧಿಯು ಬೇರೊಂದಿಲ್ಲವೆಂತ ಹೊಮಿಯೋಪತಿ ವೈದ್ಯರ ಅನುಭವದ ಸಿದ್ಧಾಂತ. ಅಜೀರ್ಣ, ಅಗ್ನಿಮಾಂದ್ಯಕ್ಕೆ ಇದು ಕೊಡಬಹುದೇ ಸರಿ. ಔಷಧಿಯ ಕ್ರಯ ಶೀಸೆ 1ಕ್ಕೆ ರೂ. 1-8-0; ವಿ. ಪಿ. ಸಹಿತ ರೂ. 1-12-0.

ಡಾಕ್ಟರ್ ಬಾಸಕ್‌ರ ಮೂಲವ್ಯಾಧಿ ತೈಲ ಮತ್ತು ಮಾತ್ರೆ:— ಇದು ಮೂಲವ್ಯಾಧಿ ಮತ್ತು ಮೊಳೆಯ ಸಾವಿರಾರು ರೋಗಿಗಳನ್ನು ವರ್ಷಂಪ್ರತಿ ಗುಣಮಾಡುತ್ತಿದೆ. ಕ್ರಯ ಒಂದು ಶೀಸೆ ತೈಲ ಮತ್ತು ಒಂದು ಶೀಸೆ ಮಾತ್ರೆಗಳಿಗೆ ರೂ. 2—4—0 ಮಾತ್ರ. ವಿ. ಪಿ. 0-6-0.

ರಾಷ್ಟ್ರದ ಉತ್ಕರ್ಷಕ್ಕೆ ಅಥವಾ ಸಮಾಜದ ಸುಧಾರಣೆಗೆ ಆ ರಾಷ್ಟ್ರದ ಅಥವಾ ಸಮಾಜದ ಘಟಕಾವಯವಗಳಾದ ಸರ್ವ ಸಾಧಾರಣ ವ್ಯಕ್ತಿಗಳಿಗೆ—ಉಚ್ಚ ತರದ ಶಿಕ್ಷಣವಲ್ಲಾದರೂ—ಮಧ್ಯಮ ಮತ್ತು ಕನಿಷ್ಠ ತರಗತಿಯ ವಿದ್ಯಾಭ್ಯಾಸವು ಅವಶ್ಯಕವಾಗಿದೆಂಬೀ ವಿಷಯದಲ್ಲಿ ಈಗ ವಾದವಿಲ್ಲ. ಉಪಯುಕ್ತತೆಯ ದೃಷ್ಟಿಯಿಂದ ಮಧ್ಯಮ ತರಗತಿಯ ಶಿಕ್ಷಣವು ರಾಷ್ಟ್ರ ಪೋಷಕವೇ ಆದರೂ ಅದನ್ನು ಹೊಂದುವುದು ರಾಷ್ಟ್ರದೊಳಗಿನ ಯಚ್ಚ ಯಾವತ್ತು ವ್ಯಕ್ತಿಗಳಿಗೆ ಸಾಧ್ಯವಿಲ್ಲ. ಒಂದನೇ ಕಾರಣವು ಯಾವುದೆಂದರೆ, ಈ ಎರಡನೇ ತರಗತಿಯ ವಿದ್ಯಾಭ್ಯಾಸವು ಕೊಂಚ ಹೆಚ್ಚು ಖರ್ಚಿನದಾದುದರಿಂದ ಬಡಬಗ್ಗರಿಗೆ ಅದು ಕೈಗೆ ಮುಟ್ಟದ ಹಣ್ಣೇ ಆಗಿದೆ! ಇನ್ನೊಂದು ಸಂಗತಿ ಏನೆಂದರೆ; ಇಧಾಗಲಿ ಉಚ್ಚ ಶಿಕ್ಷಣವಾಗಲಿ ಬರೇ ದ್ರವ್ಯಸಾಧ್ಯವೆಂತ ಹೇಳಲಾಗದು. ಬುದ್ಧಿಸಾಮರ್ಥ್ಯವೂ ಅದಕ್ಕೆ ಬೇಕಾಗಿದೆ. ಸಾರಾಂಶ, ಮಾಧ್ಯಮಿಕ ಶಿಕ್ಷಣಕ್ಕೆ ದ್ರವ್ಯ ಹಾಗೂ ಬುದ್ಧಿ ಈ ಎರಡೂ ಸಾಧನೆಗಳು ಅವಶ್ಯವಾಗಿರುವುದರಿಂದ ಇವುಗಳ ಅನುಕೂಲತೆಯಿದ್ದಲ್ಲಿಯೇ ಅದು ಸಾಧ್ಯವಾದುದೆಂಬುವುದು ಅನುಭವದಿಂದಲೇ ಸ್ಪಷ್ಟವಾಗುತ್ತದೆ. ಆದರೆ ಪ್ರಾಥಮಿಕ ಶಿಕ್ಷಣದ ಸಂಗತಿಯು ಹಾಗಲ್ಲ. ದ್ರವ್ಯಾನುಕೂಲತೆ ಇಲ್ಲದವನೂ ಇದನ್ನು ತೆಕ್ಕೊಳ್ಳಬಹುದು. ಹಾಗೆಯೆ ಬುದ್ಧಿಯಲ್ಲಿ ಚತುರುಕತನವಿಲ್ಲಾದರೂ ಸಾಮಾನ್ಯವಾಗಿ ಓದು, ಬರಹ, ಲೆಕ್ಕ ಈ ಸಂಗತಿಗಳನ್ನು ಕಲಿಯಲು ಯಾರಿಗೂ ಒಂದು ವಿಶೇಷ ತೊಂದರೆ ಬಾರದು.

ಪ್ರಾಥಮಿಕ ಶಿಕ್ಷಣದ ಉಪಯುಕ್ತತೆಯನ್ನೂ ಮಹತ್ವವನ್ನೂ ಬರೇ ಲೇಖನ ಮೂಲಕವಾಗಿ ಸಿದ್ಧಪಡಿಸಿ ತೋರಿಸುವುದಕ್ಕಿಂತ ಇದನ್ನು ವ್ಯವಹಾರದಲ್ಲಿ ತಂದಂತಹ ಬರೋಡಾ ಸಂಸ್ಥಾನದ ವಿದ್ಯಾಖಾತೆಯ ಕಳೆದ ವರುಷದ ವರದಿಯನ್ನು ಕೊಂಚ ಮಟ್ಟಿಗೆ ಪರಿಶೀಲಿಸಿದರೆ ಅದರಿಂದ ನಮ್ಮ ಮೇಲಿನ ವಿಧಾನದ ಸತ್ಯತ್ವವು ಚನ್ನಾಗಿ ಸ್ಪಷ್ಟವಾಗುವುದು. ಬರೋಡಾ ಸಂಸ್ಥಾನದಲ್ಲಿ ಪ್ರಾಥಮಿಕ ಶಿಕ್ಷಣವು ಖಡ್ಡಾಯದ ರೂಪದಿಂದ ಮತ್ತು ನಿರ್ವೇತನವಾಗಿ ಪ್ರಾರಂಭಿಸಿ ಹತ್ತು ವರ್ಷಗಳಾದವು. ನಿರ್ವೇತನವಾಗಿ ಎಂದರೆ ಸಂಬಳವೇನೂ ಇಲ್ಲದೆ ಖಡ್ಡಾಯದ ಕ್ರಮದಿಂದ ಶಿಕ್ಷಣವನ್ನು ಪ್ರಾರಂಭಿಸಿದ ಕಾರಣ ಈ ಹತ್ತು ವರ್ಷಗಳ ಅವಧಿಯಲ್ಲಿ ಆ ಸಂಸ್ಥಾನದೊಳಗಿನ ಸಮಾಜದ ಮೇಲೆ ಎಷ್ಟೋ ಸುಪರಿಣಾಮವಾದುದು ಕಂಡುಬರುತ್ತದೆ. ಆ ಸಂಸ್ಥಾನದ ಜನಸಂಖ್ಯೆಯು ೨೦ ಲಕ್ಷ ಇದ್ದು ಶಾಲೆಗೆ ಹೋಗತಕ್ಕ ವಯಸ್ಸಿನವರು ಹುಡುಗರು ಹುಡುಗಿಯರು ಕೂಡಿ ೩ ಲಕ್ಷ ಇದ್ದಾರೆ. ಈ ಮೂರು ಲಕ್ಷ ಬಾಲಬಾಲಕಿಯರಲ್ಲಿ ೨,೫೦,೦೦೦ ಮಕ್ಕಳು ಶಾಲೆಗಳಲ್ಲಿ ಶಿಕ್ಷಣವನ್ನು ಹೊಂದುತ್ತಿದ್ದಾರೆ. ಇದರ ಅರ್ಥವೇನೆಂದರೆ, ಶಿಕ್ಷಣ ಹೊಂದಲು ಯೋಗ್ಯ ವಯಸ್ಸಿನ ಹುಡುಗರಲ್ಲಿ ೧೦೦ಕ್ಕೆ ೯೦ರಿಂದಲೂ ಹೆಚ್ಚು ಹುಡುಗರು ವಿದ್ಯಾರ್ಜನೆ ಮಾಡುತ್ತಿದ್ದಾರೆ. ಹುಡುಗರ ಪ್ರಮಾಣವು ಈ ರೀತಿಯಿಂದ ಬೀಳುತ್ತದಾದರೆ ಹುಡುಗಿಯರ ಪ್ರಮಾಣ ಮಾತ್ರ ೧೦೦ಕ್ಕೆ ೮೧ ಬರುತ್ತದೆ. ಬರೋಡೆ ಸಂಸ್ಥಾನದ ಈ ಸಂಖ್ಯೆಯನ್ನು ನೋಡುವಾಗಲೆ ಬ್ರಿಟಿಷ್ ಹಿಂದೂಸ್ಥಾನದ ಸಂಖ್ಯೆಯನ್ನು ತುಲನೆಗಾಗಿ ಪರೀಕ್ಷಿಸಿದರೆ ಇಲ್ಲಿ ೧೦೦ಕ್ಕೆ ೨೫ ಹುಡುಗರು, ೬ ಹುಡುಗಿಯರು ವಿದ್ಯೆಯನ್ನು ಕಲಿಯುವುದು ಕಂಡುಬಂದೀತು! ಬರೋಡೆಯಲ್ಲಿ ಸಾಧಾರಣವಾಗಿ ಹಳ್ಳಿಗೊಂದು ಪ್ರಾಥಮಿಕ ಶಾಲೆ ಹೀಗೆ ಕ್ರಮವಿದೆ; ಬ್ರಿಟಿಷ್ ಪ್ರಾಂತ್ಯದಲ್ಲಿ ಐದು ಹಳ್ಳಿಗಳಿಗೊಂದು ಶಾಲೆಯು ಬರುತ್ತದೆ. ಸಂಸ್ಥಾನದ ವಾರ್ಷಿಕ ಉತ್ಪನ್ನವು ೧॥ ಕೋಟಿ ರೂಪಾಯಿಯದಿದೆ; ವಿದ್ಯಾಖಾತೆಯಲ್ಲಿ ಸಾಧಾರಣವಾಗಿ ೧೯ ಲಕ್ಷ ಖರ್ಚಾಗುತ್ತದೆ. ಇಂಡಿಯಾ ಸರಕಾರದ ಉತ್ಪನ್ನವು ೧೨೦ ಕೋಟಿ ರೂಪಾಯಿದಾಗುತ್ತದೆ. ಈ ಉತ್ಪನ್ನದೊಳಗಿನ ೬೭ ಕೋಟಿ ರೂ. ಮತ್ತು ಫೀಸುಗಳ ವಸೂಲಿನ ೨ ಕೋಟಿ ರೂ. ಕೂಡಿ ೯ ಕೋಟಿ ರೂ. ಶಿಕ್ಷಣದ ಖಾತೆಯಲ್ಲಿ ಖರ್ಚಾಗುತ್ತದೆ. ಎಂದರೆ ಅಲ್ಲಿ ಉತ್ಪನ್ನದ ೧/೮ ಭಾಗವು ಖರ್ಚಾಗುತ್ತದಾದರೆ ಇಲ್ಲಿ ೧/೧೫ ಭಾಗವು ವಿನಿಯೋಗಿಸಲ್ಪಡುತ್ತದೆ.

ಬರೋಡಾ ಸಂಸ್ಥಾನದಲ್ಲಿ ಪ್ರಾಥಮಿಕ ಶಿಕ್ಷಣವು ಈ ರೀತಿಯಿಂದ ಮುಂದರಿಸಿದ ಕಾರಣ ಮಧ್ಯಮ ಮತ್ತು ಉಚ್ಚ ತರಗತಿಯ ಶಿಕ್ಷಣವು ಆ ಮಾನದಿಂದಲೇ ಅಲ್ಲಿ ಅಭಿವೃದ್ಧಿಯಲ್ಲಿ ಇದೆ. ಇದು ಆಶ್ಚರ್ಯವಲ್ಲ. ಕಾರಣವೇನೆಂದರೆ, ಪ್ರಾಥಮಿಕ ಶಿಕ್ಷಣಾಲಯದಲ್ಲಿ ಎಲ್ಲರಿಗೆ ಪ್ರವೇಶವು ಸಿಗುವಾಗ ಅದರ ಮೇಲ್ ತರಗತಿಯ ಶಿಕ್ಷಣವನ್ನು ಪಡೆಯಲು ಯೋಗ್ಯರಾದ ಅನೇಕ ವಿದ್ಯಾರ್ಥಿಗಳನ್ನು ಆ ಪ್ರಾಥಮಿಕ ಶಿಕ್ಷಣದಿಂದ ತಯಾರಿಸಿದ್ದಂತಾಗುತ್ತದೆ. ನಮ್ಮಲ್ಲಿ ಪ್ರಾಥಮಿಕ ಶಿಕ್ಷಣವು ಖಡ್ಡಾಯ ಕ್ರಮದ್ದಲ್ಲದುದರಿಂದ ಶಿಕ್ಷಣಾರ್ಹರಾದ ಅನೇಕ ಹುಡುಗರು ಮೂಲೆಗೊತ್ತಲ್ಪಟ್ಟಂತಾಗಿದ್ದಾರೆ. ಮಧ್ಯಮ ಅಥವಾ ಉಚ್ಚ ಶಿಕ್ಷಣವು ತನಗೆ ಸಾಧ್ಯವಿದೆಂಬ ಆತ್ಮವಿಶ್ವಾಸವು ವಿದ್ಯಾರ್ಥಿಯಲ್ಲಿ ಹುಟ್ಟಬೇಕಾದರೆ ಅಥವಾ ಅವನ ಪಾಲಕರಲ್ಲಿ 'ಇವನು ಮುಂದಿನ ಶಿಕ್ಷಣಕ್ಕೆ ಅರ್ಹನಿದ್ದಾನೆ'ಂದು ನಂಬಿಕೆ ಹುಟ್ಟಬೇಕಾದರೆ ಮೊದಲು ಅವನ ಪ್ರಾಥಮಿಕ ಶಿಕ್ಷಣವು ಮುಗಿಯಬೇಕು. ಅದಿಲ್ಲದೆ ಸ್ವತಃ ಅವನಿಗಾಗಲಿ, ಅವನ ಪಾಲಕವರ್ಗಕ್ಕಾಗಲಿ, ಅವನ ಯೋಗ್ಯಾಯೋಗ್ಯತೆಯ ಪರಿಜ್ಞಾನವು ಹ್ಯಾಗಾದೀತು? ಆದುದರಿಂದಲೇ ಬರೋಡಾ ಸಂಸ್ಥಾನದಲ್ಲಿ ಹತ್ತು ವರ್ಷಗಳ ಹಿಂದೆಯೇ ಖಡ್ಡಾಯದ ಪ್ರಾಥಮಿಕ ಶಿಕ್ಷಣವು ಪ್ರಾರಂಭಿಸೋಣಾಯಿತು. ಇದರಿಂದ ಬ್ರಾಹ್ಮಣ ಮತ್ತು ಬ್ರಾಹ್ಮಣೇತರ ಮೇಲ್ ಜಾತಿಗಳಲ್ಲಿ ಮಾತ್ರವಲ್ಲ; ಅಸ್ಪೃಶ್ಯ ಮತ್ತು ಹೀನಜಾತಿಗಳಲ್ಲಿ ಕೂಡ ಸುಪರಿಣಾಮವುಂಟಾಗಿದೆ.

ಈ ದೃಷ್ಟಿಯಿಂದ, ಬರೋಡಾ ಸಂಸ್ಥಾನದ ಶಿಕ್ಷಣ ಪ್ರಸಾರಣೆಯ ವರದಿಯನ್ನು ನಿರೀಕ್ಷಿಸಿದರೂ ನಮ್ಮ ಮೇಲಿನ ಅನುಮಾನವೇ ದೃಢವಾಗುತ್ತದೆ. ಆ ವರದಿಯೊಳಗಿನ ಅಸ್ಪೃಶ್ಯರ ಜನಸಂಖ್ಯೆ ಮತ್ತು ಅದೇ ವರ್ಗದ ವಿದ್ಯಾರ್ಥಿಗಳ ಸಂಖ್ಯೆ ಇವುಗಳನ್ನು ನೋಡಿದರೆ ಅಲ್ಲಿ ೧೦೦ಕ್ಕೆ ೧೧ಕ್ಕಿಂತಲೂ ಹೆಚ್ಚು ಪ್ರಮಾಣದಿಂದ ಅಸ್ಪೃಶ್ಯರು ವಿದ್ಯಾರ್ಜನೆಯನ್ನು ಮಾಡುತ್ತಿದ್ದುದು ಕಂಡುಬರುತ್ತದೆ. ಬ್ರಾಹ್ಮಣರಲ್ಲದ ಬೇರೆ ಸಾಮಾನ್ಯ ಜಾತಿಗಳಲ್ಲಿ ವಿದ್ಯಾರ್ಥಿಗಳ ಪ್ರಮಾಣವು ಬ್ರಾಹ್ಮಣರ ಪ್ರಮಾಣದಷ್ಟೇ ಇದೆ. ಈ ಎಲ್ಲ ಸಂಗತಿಗಳಿಗನುಸಾರವಾಗಿಯೇ ಆ ಸಂಸ್ಥಾನದಲ್ಲಿ ಸ್ತ್ರೀ ಶಿಕ್ಷಣವು ಸಹ ಬಹು ಸಮಾಧಾನಕರವಾಗಿದೆ.

ಬರೋಡಾ ಸಂಸ್ಥಾನದ ವಿದ್ಯಾ ಇಲಾಖೆಯ ವರದಿಯನ್ನು ಕಣ್ಣೆದುರಿಟ್ಟುಕೊಂಡು ನೋಡುವಾಗ ಇಲ್ಲಿಯ ವಿದ್ಯಾ ಇಲಾಖೆಗೂ ಅದಕ್ಕೂ ಅನೇಕ ಸಂಗತಿಗಳಲ್ಲಿ ತಾಳೆ ಬೀಳುವುದಿಲ್ಲ. ನಮ್ಮ ಸರಕಾರದವರು ಹಿಂದೂಸ್ಥಾನದಲ್ಲಿ ರೈಲು ಮೋಟಾರು ಮುಂತಾದ ನವಸುಧಾರಣೆಗಳನ್ನು ತಂದವರಾದರೂ ಬರೋಡೆಯ ವಿದ್ಯಾ ಇಲಾಖೆಯು ರೈಲಿನಿಂದ ಪ್ರವಾಸಮಾಡುತ್ತದೆ; ಮತ್ತು ನಮ್ಮ ವಿದ್ಯಾ ಇಲಾಖೆಯು ಕಿಟ್ಟನ ಎತ್ತು ಗಾಡಿಯಲ್ಲಿ ಕೂತುಕೊಂಡು ಮೆಲ್ಲಮೆಲ್ಲನೆ ಹೋಗುತ್ತಿದೆ. ಹೀಗಿರಲು ಇವೆರಡರ ತಾಳೆಯಾಗಲಿ, ಓಟದಲ್ಲಿ ಅದರ ಬೆನ್ನನ್ನು ಹಿಡಿಯುವುದರಲ್ಲಿ ಇದರ ಗತಿಸಾಮ್ಯವಾಗಲಿ ಹ್ಯಾಗೆ ಸಾಧ್ಯವಾದೀತು? ಕಿಟ್ಟನ ಗಾಡಿಗಾದರೂ ಎತ್ತುಗಳ ಬದಲು ಇಂಜನನ್ನು ಜೋಡಿಸಿದರೆ ಅದು ರೈಲಿನಷ್ಟು ಅಲ್ಲಾದರೂ ಅದರ ಹಿಂದೆ ಹಿಂದೆಯಾದರೂ ಓಡೀತು. ನಮ್ಮ ಹಿಂದೂಸ್ಥಾನದ ವಿದ್ಯಾ ಇಲಾಖೆಯು ಖಡ್ಡಾಯದ ಪ್ರಾಥಮಿಕ ಶಿಕ್ಷಣವನ್ನು ಪ್ರಾರಂಭಿಸಿದರೆ ಮಧ್ಯಮ ಉಚ್ಚ ಶಿಕ್ಷಣಗಳ ಪ್ರಸಾರಣೆ, ಅಸ್ಪೃಶ್ಯರ ಉದ್ಧಾರ, ಸ್ತ್ರೀ ವಿದ್ಯಾಭ್ಯಾಸ ಈ ಎಲ್ಲ ಸಂಗತಿಗಳು ನಿರಾಯಾಸವಾಗಿ ಕೈಗೂಡುವವು. ಈ ಸಂಗತಿಗಳನ್ನು ಸಾರ್ವಭೌಮ ಸರಕಾರವೇ ಮೊದಲಾಗಿ ಮಾಡಿ ಮಾಂಡಲಿಕರಿಗೆ ಮಾದರಿ ಹಾಕಿ ಕೊಡಬೇಕಿತ್ತು. ಆದರೆ ಬರೋಡದಂಥಾ ಒಂದು ೨೦ ಲಕ್ಷ ಜನ ಸಂಖ್ಯೆಯ ಸಂಸ್ಥಾನದ ಅಧಿಪತಿಗಳು ತಮ್ಮ ಜವಾಬ್ದಾರಿಯನ್ನೂ ಕರ್ತವ್ಯವನ್ನೂ ಚೆನ್ನಾಗಿ ಅರಿತು ಶಿಕ್ಷಣ ದಾನದಲ್ಲಿ ಈ ರೀತಿಯಿಂದ ಸ್ತುತ್ಯಣೀಯವಾದ ಪದ್ಧತಿಯನ್ನು ಅಂಗೀಕರಿಸಿ ಅದರ ಸುಪರಿಣಾಮವನ್ನು ತೋರಿಸಿ ಕೊಡುವಾಗಲೂ ನಮ್ಮ ಸರಕಾರವು ಅದನ್ನು ಅನುಕರಿಸಿ ಇರದು. ಇದು ನಮ್ಮ ದುರ್ದೈವವೇ ಸರಿ. ದೇಶೀಯರಿಂದ ರಾಜ್ಯಕಾರಭಾರವಾಗದು; ಅವರು ಅಪಾತ್ರರು ಮುಂತಾದ ನಿರರ್ಥಕ ವಿಧಾನವನ್ನು ಮಾಡಿ ನಮ್ಮ ಸ್ವರಾಜ್ಯದ ಅರ್ಹತೆಯನ್ನು ಮರೆಮಾಡುವವರಿಗೆ ಬರೋಡಾ ಸಂಸ್ಥಾನದ ಈ ವಿದ್ಯಾಭಿವೃದ್ಧಿಯು ಒಂದು ಉತ್ತಮವಾದ ಉತ್ತರವೇ ಆಗಿದೆ.

ಈ ಪರೀಕ್ಷಣಾತ್ಮಕ ಲೇಖವನ್ನು ಮುಗಿಸುವುದಕ್ಕಿಂತ ಮುಂಚೆ ಒಂದು ಮಾತನ್ನು ಹೇಳುವುದು ಅಪರಿಹಾರ್ಯವಾಗಿದೆ. ಅದೇನೆಂದರೆ, ನಮ್ಮ ಸರಕಾರದವರು ದಿವಂಗತರಾದ ಗೋಖಲೆಯವರ ಇಚ್ಛೆಯಂತೆ ಇಲ್ಲಿ ಖಡ್ಡಾಯದ ಪ್ರಾಥಮಿಕ ಶಿಕ್ಷಣವನ್ನು ಈಗಲ್ಲದಿದ್ದರೂ ಮಹಾ ಯುದ್ಧ ಮುಗಿದ ಕೂಡಲೆ ಪ್ರಾರಂಭಿಸಿ ವಿದ್ಯಾದಾನದ ಮಹತ್ಪುಣ್ಯವನ್ನು ತಮ್ಮ ಸೆರಗಿನಲ್ಲಿ ಕಟ್ಟಿಕೊಳ್ಳಬೇಕು.

ಹಿಂದೂಸ್ಥಾನದಲ್ಲಿ ಸ್ತ್ರೀ ಶಿಕ್ಷಣದ ಪ್ರಚಾರ.

ಲೇಖಾಂಕ ೨.

ಈ ವಿಷಯದಲ್ಲಿ ಡಿಸ್ಟ್ರಿಕ್ಟ್ ಬೋರ್ಡುಗಳೂ ಮುನಿಸಿಪಾಲಿಟಿಗಳೂ ಅಲ್ಲಲ್ಲಿ ಚರ್ಚೆ ಎತ್ತಿ ತಮ್ಮ ಅಭಿಪ್ರಾಯವನ್ನು ಸೂಚಿಸಿರುತ್ತವೆ. ಇವುಗಳ ಸಾರಾಂಶವನ್ನು ಈ ಕೆಳಗೆ ಕೊಟ್ಟಿರುವೆವು:—

(1) ಪ್ರಾಥಮಿಕ ಶಿಕ್ಷಣವನ್ನು ಸರಕಾರದಿಂದ ನೇಮಕವಾದ ವಿದ್ಯಾ ಇಲಾಖಾ ಆಫೀಸರರ ಸೂಚನೆಗಳ ಸಹಾಯದಿಂದ ಲೋಕಲ್ ಬೋರ್ಡುಗಳು ವಹಿಸಿಕೊಂಡಿರಬೇಕು. ಬೋರ್ಡುಗಳಲ್ಲಿ ದ್ರವ್ಯಾನುಕೂಲ ತುಟ್ಟಿಯಾಗಿರುವುದರಿಂದ ಅಗತ್ಯವಿರುವ ಸಹಾಯವನ್ನು ಸರಕಾರದವರು ಮಾಡಬೇಕು.

(2) ಬಾಲಿಕಾ ಪಾಠಶಾಲೆಗಳಿಲ್ಲದ ಸ್ಥಳಗಳಲ್ಲಿ ಗಂಡು ಹೆಣ್ಣು ಮಕ್ಕಳನ್ನು ಒಟ್ಟಿಗೆ ಒಂದೇ ಸಾಲೆಗೆ ದಾಖಲು ಮಾಡುವುದಾದರೂ ಅಲ್ಲಲ್ಲಿ ಬಾಲಿಕಾ ಪಾಠಶಾಲೆಗಳನ್ನು ಬೇರೆಯಾಗಿ ಏರ್ಪಡಿಸಬೇಕು.

(3) ಸ್ತ್ರೀ ವಿದ್ಯಾಭ್ಯಾಸವು ಬಹಳ ಹಿಂದುಳಿದ ಕಾರಣ ಮಾಫಿಯಾಗಿಯೇ ಹೆಣ್ಣು ಮಕ್ಕಳಿಗೆ ವಿದ್ಯೆ ಹೇಳಿಕೊಡಬೇಕು.

(4) ಈಗಿನ ಸ್ಥಿತಿಯಲ್ಲಿ ಜಾತಿವಾರ್ ಶಾಲೆಗಳನ್ನು ಸ್ಥಾಪಿಸಬೇಕಾಗುವುದು.

(5) ಓದು, ಬರಹ, ಲೆಕ್ಕ, ಮಾತ್ರವಲ್ಲ, ಸಂಗೀತ ಕಿಂಡರ್‌ಗಾರ್ಟನ್ ಮತ್ತು ಗೃಹಕೃತ್ಯದ ಕೆಲಸವನ್ನು ತಿಳಿದುಕೊಳ್ಳಲಿಕ್ಕೆ ಅತೀ ಅಗತ್ಯವಾದ ಕೆಲವು ವಿಷಯಗಳು ಇವನ್ನು ಆಯಾ ಸ್ಥಳದ ಸ್ಥಿತಿಗತಿಗೆ ಅನುಸಾರವಾಗಿ ಕಲಿಸಬೇಕು.

(6) ಸೆಕೆಂಡರಿ ಶಾಲೆಗಳ ಸಂಖ್ಯೆಯನ್ನು ಹೆಚ್ಚಿಸಬೇಕು; ಮತ್ತು ಗೃಹಕೃತ್ಯದ ವಹಿವಾಟಿನಲ್ಲಿ ಒಂದು ಬಾಲಿಕೆಯು ಸಹಭಾಗಿನಿಯಾಗಿ ತನ್ನ ಜವಾಬ್ದಾರಿಗಳನ್ನು ಪೂರೈಸಿಕೊಳ್ಳಲಿಕ್ಕೆ ಬೇಕಾದ ಜ್ಞಾನ—ಅಂದರೆ ಮಕ್ಕಳ ಆರೈಕೆ, ಆರೋಗ್ಯ ವಿಚಾರ, ಇಂಗ್ಲಿಷ ಭಾಷೆಯ ಪರಿಚಯ, ಚಿತ್ರಲೇಖನ, ಕಸೂತಿ ಮತ್ತು ಹೊಲಿಗೆ ಕೆಲಸ ಇವುಗಳನ್ನು ಕಲಿಸಬೇಕು. ಇದಕ್ಕಿಂತಲೂ ಮೇಲ್ ದರ್ಜೆಗಳಲ್ಲಿ ಕಲಿಯುವ ಅನುಕೂಲತೆ ಮತ್ತು ಮನಸ್ಸು ಇದ್ದವರಿಗೋಸ್ಕರ ಕೆಲವು ಜಿಲ್ಲೆಗಳಿಗೆ ಕೂಡಿ ಒಂದೊಂದು ಕಾಲೇಜನ್ನು ಏರ್ಪಡಿಸಬೇಕು.

(7) ಟ್ರೈನಿಂಗ್ ಹೊಂದುವವರ ಸಂಖ್ಯೆ ಹೆಚ್ಚಾಗುವಂತೆ ಟ್ರೈನಿಂಗ್ ಶಾಲೆಗಳ ಸಂಖ್ಯೆ ಹೆಚ್ಚಿಸಬೇಕು; ವೇತನಗಳ ಸೂಬಲಗು ಮತ್ತು ಸಂಖ್ಯೆ ವರ್ಧಿಸಬೇಕು.

(8) ಸಾಲೆಗಳ ವಿಶಿಷ್ಟ ಆಡಳಿತೆಯ ಭಾರವನ್ನು ಇನ್ಸ್‌ಪೆಕ್ಟರುಗಳಿಗೆ ಒಪ್ಪಿಸಿಕೊಟ್ಟು, ಇನ್ಸ್‌ಪೆಕ್ಟ್ರೆಸ್ಸುಗಳು ಶಿಕ್ಷಣ ಕ್ರಮ, ಕಲಿಸುವಿಕೆಯ ವಿಷಯಗಳು ಮುಂತಾದ್ದನ್ನು ನಿಶ್ಚೈಸುವ ಭಾರವನ್ನು ವಹಿಸಿಕೊಳ್ಳಬೇಕು.

(9) ಸಾಧ್ಯವಿದ್ದ ಮಟ್ಟಿಗೆ ಉಪಾಧ್ಯಾಯಿನಿಯರನ್ನು ಶಾಲೆಯ ಕೆಲಸಕ್ಕೆ ನೇಮಿಸಬೇಕು; ತರಬೇತಾದ ಉಪಾಧ್ಯಾಯಿನಿಯರು ದೊರಕುವುದಿಲ್ಲವೆಂಬುದರಿಂದ ಉಪಾಧ್ಯಾಯರನ್ನು ನೇಮಿಸುವುದು ಸರಿಯಲ್ಲ.

(10) ಹಿಂದುಸ್ಥಾನದ ಹೆಣ್ಣು ಮಕ್ಕಳಲ್ಲಿ ಹಿಂದೀ ಸ್ತ್ರೀಯಲ್ಲಿ ಯಾವ ಸದ್ಗುಣ ಇರಬೇಕೊ ಅಂಥಾ ಸದ್ಗುಣಗಳು ಪುಟವಿಟ್ಟಂತೆ ಆಗುವ ರೀತಿಯ ವಿದ್ಯಾಭ್ಯಾಸವನ್ನು ಬಾಲಿಕಾ ಪಾಠಶಾಲೆಗಳಲ್ಲಿ ಕೊಡಬೇಕು.

ಈ ಸೂಚನೆಗಳನ್ನು ಪರ್ಯಾಲೋಚಿಸಿದರೆ ಸೂಚನಾಕರ್ತರು ಎಷ್ಟರ ಮಟ್ಟಿಗೆ ಈ ವಿಷಯದಲ್ಲಿ ಆಗ್ರಹವುಳ್ಳವರೆಂಬುದು ಸ್ಪಷ್ಟವಾಗುತ್ತಿವೆ. ಹೆಣ್ಣು ಶಿಶುಗಳಿಗೆ ತಾಯಿಯಾದವಳು ಆಡಿಸುವಾಗ ವಿನೋದಕ್ಕಾಗಿ ಕೆಲವು ಪ್ರಶ್ನೆಗಳನ್ನು ಕೇಳುವ ವಾಡಿಕೆಯುಂಟು. "ಮಗೂ! ನೀನು ಬೆಳೆದು ಪ್ರಾಯಕ್ಕೆ ಬರುವಾಗ ನಿನ್ನನ್ನು ದೊಡ್ಡ ಕುಟುಂಬದಲ್ಲಿ ಮದುವೆ ಮಾಡಿಕೊಡುವರು. ಆಗ ನಿನಗೆ ಏನೇನು ಚಿನ್ನಾಭರಣ ಮಾಡಿಸಬೇಕು?" ಎಂದಾಗ "ಕಿವಿಗೆ ಮುತ್ತಿನ ಓಲೆ, ೨೦೦೦ ರೂಪಾಯಿ ಬೆಲೆಯ ಕುಟುಕಿನ ಜೋಡು, ಕುತ್ತಿಗೆ ಕಠ್ಠಾಣಿ, ಗಜ್ಜೆಟೀಕಿ, ಸೊಂಟಕ್ಕೆ ಗಜ ಪವನಿನ ಪಟ್ಟಿ, ಮೂಗಿಗೆ ೫೦೦ ರೂಪಾಯಿ ಬೆಲೆಯ ಟೀಕಿ, ಎರಡು ಕೈಗಳ ಬೆರಳುಗಳಿಗೆ ನವರತ್ನದ ಉಂಗುರಗಳು" ಹೀಗೆ ಸಾಮಾನ್ಯವಾಗಿ ಹತ್ತು ಯಾ ಹನ್ನೆರಡು ಸಾವಿರ ರೂಪಾಯಿಯ ವಿಲೆವಾರಿ ಹೇಳುವುದುಂಟು. ಆಟ ಮುಗಿದೊಡನೆ ಈ ವಸ್ತುಗಳಲ್ಲಿ ಒಂದೂ ಕಾಣಲಾರದು. ಮುಂದೆ ಆ ಮಗುವಿಗೆ ಈ ಪಟ್ಟಿಯ ಅಂಶಾಂಶದಷ್ಟು ಬೆಲೆಯ ಚಿನ್ನಾಭರಣಗಳನ್ನು ಮಾಡಿಸುವ ಯೋಗ್ಯತೆಯು ಇಲ್ಲದಿರಬಹುದು. ಇಂಡಿಯಾ ಗವರ್ನಮೆಂಟಿನವರ ಪ್ರಶ್ನೆಗಳಿಗೆ ಸ್ಥಳೀಯ ಜನರು ಕೊಟ್ಟಂಥಾ ಉತ್ತರಗಳಲ್ಲಿ ಅದೇ ಸಾಮ್ಯವು ಹೊಳೆಯುತ್ತಿದೆ. ಕೆಲವು ಕಡೆಗಳಲ್ಲಿ ಮೀಟಿಂಗುಗಳಿಗೆ ಬಹಳ ಕಡಿಮೆ ಮೆಂಬರುಗಳು ಹಾಜರಿದ್ದರು. ಡಿಸ್ಟ್ರಿಕ್ಟ್ ಬೋರ್ಡು ಅಥವಾ ತಾಲೋಕು ಬೋರ್ಡುಗಳಲ್ಲಿ ಸಾಮಾನ್ಯವಾಗಿ ಪ್ರೆಸಿಡೆಂಟರು ಅಥವಾ ವೈಸ್ ಪ್ರೆಸಿಡೆಂಟರು ಬರೆದ ಸೂಚನೆಗಳಿಗೆ ಮೆಂಬರುಗಳು ತಲೆ ಅಲ್ಲಾಡಿಸಿದರು. ಹೀಗಾಗಿ ಈ ವಿಷಯದ ವಾಸನೆಯು ಸರಿಯಾಗಿ ಮನಸ್ಸಿಗೆ ಹತ್ತದರಿಂದಲೂ ಅಥವಾ ಸ್ವಾಭಾವಿಕವಾಗಿ ಜನರಲ್ಲಿ ಸ್ಥಿರವಾಗಿ ನೆಲಸಿರುವ ಮೌಢ್ಯ ಅಥವಾ ಅಶ್ರದ್ಧೆಗಳ ದೆಸೆಯಿಂದಲೊ ಮುಂದೆ ಬಂದ ಸೂಚನೆಗಳಲ್ಲಿ ಸಮಂಜಸವಾದ ಉತ್ತರ ದೊರೆಯಲಿಲ್ಲ. ಇಷ್ಟೆ ಅಲ್ಲ! ಸರಕಾರದವರು ಈ ವರೆಗೆ ಯಾವ ಕ್ರಮಗಳನ್ನು ಬಾಲಿಕಾ ಪಾಠಶಾಲೆಗಳಲ್ಲಿ ಜಾರಿಗೆ ತಂದಿದ್ದರೋ ಅದೇ ಕ್ರಮಗಳು ಶ್ಲಾಘ್ಯ, ಅವನ್ನೆ ಇನ್ನೂ ವರ್ಧಿಸಬೇಕು. ಅವನ್ನು ವರ್ಧಿಸಲಿಕ್ಕೆ ಸಾಕಷ್ಟು ಹಣಸಹಾಯ ಮಾಡುವಲ್ಲಿ ಯೂರೋಪಿನ ಯುದ್ಧವು ಅಭ್ಯಂತರವಾಗಿದೆ. ಅದು ಮುಗಿದೊಡನೆ ಎಲ್ಲವೂ ನೆಟ್ಟಗಾಗುವುದು ಎಂದು ಸರಕಾರದವರು ತಮ್ಮ ಬೆನ್ನನ್ನು ತಾವೇ ತಟ್ಟಿ ತಮ್ಮ ಪ್ರಯತ್ನಗಳನ್ನು ಪ್ರಜಾಜನಗಳು ಕೊಂಡಾಡಿದರು ಎಂಬ ಭಾವನೆಯನ್ನು ಪಾರ್ಲಿಮೆಂಟ ಸಭೆಯವರಿಗೆ ತೋರಿಸಿ ಕಡೆಗೆ ಈ ಅಭಿಪ್ರಾಯಗಳನ್ನು ಸಂಗ್ರಹ ಮಾಡಿ ಅವುಗಳ ಮೇಲೆ ಠರಾವು ಸಹಿತವಾದ ರಿಪೋರ್ಟ ಪಾರ್ಲಿಮೆಂಟ ಸಭೆಯ ಗ್ರಂಥಾಲಯದ ಅಟ್ಟಳಿಗೆಯಲ್ಲಿ ನಿದ್ರಾವಸ್ಥೆಯನ್ನು ಹೊಂದುವುದು.

ಇದರಿಂದ ಪ್ರಜಾಜನಗಳಲ್ಲಿ ವಿವೇಚನಾಶಕ್ತಿಯು ಇನ್ನೂ ತಲೆದೋರಿದೆಯೊ ಎಂಬುದೇ ಸಂದೇಹ. ನಾಭಿಯಲ್ಲಿ ಹುಟ್ಟಿದ ರೋಗದಿಂದ ನಾಲಿಗೆ ವಿವರ್ಣವಾಗಿದ್ದರೆ ನಾಲಿಗೆಯನ್ನು ಕೆರೆದು ತೊಳೆದು ಶುದ್ಧ ಮಾಡಿದರಿಂದ ಈ ರೋಗವು ಹೋಗುವುದೋ? ಈ ವರೆಗೆ ಮಾಡಿದ ಪ್ರಯತ್ನಗಳೂ ಇನ್ನೂ ಮುಂದೆ ಮಾಡಲಿಕ್ಕೆ ಸೂಚಿಸಿದ ಕ್ರಮಗಳೂ ಈ ರೀತಿಯಾಗಿ ನಾಲಿಗೆಯನ್ನು ತೊಳೆದು ಶುದ್ಧಮಾಡುವ ಪ್ರಯತ್ನಗಳೆ ಅಲ್ಲದೆ ನಾಭಿಯಲ್ಲಿ ಹುಟ್ಟಿದ ರೋಗವನ್ನು ಆಮೂಲವಾಗಿ ಕೀಳಲಿಕ್ಕೆ ಮಾಡುವ ಪ್ರಯತ್ನಗಳಲ್ಲ. ನಾಲಿಗೆಯು ತೊಳೆದ ಸ್ವಲ್ಪ ಸಮಯದ ವರೆಗೆ ಶುದ್ಧವಾಗಿರುವುದು; ಆದರೆ ಯಥಾಪೂರ್ವದಂತೆ ಬಣ್ಣ ಕೆಡುವುದು. ಈ ಮಾತುಗಳು ವಾಸ್ತವವಾದುವುಗಳೊ ಎಂಬುದನ್ನು ಮೇಲಿನ ಸೂಚನೆಗಳ ಪರಿಶೀಲನೆಯಿಂದ ಗೊತ್ತುಮಾಡಬಹುದು.

ಸೂಚನೆಗಳಲ್ಲಿ 1, 2, 3, 4, 6, 7, ಇವುಗಳು ತೀರಾ ದ್ರವ್ಯಾನುಕೂಲದ ಮೇಲೆಯೇ ಹೊಂದಿವೆ. ಬೋರ್ಡಿನವರ ಹತ್ತರ ಹಣವಿಲ್ಲ; ಸರಕಾರಕ್ಕೆ ಯುದ್ಧದ ಚಿಂತೆ ಹತ್ತಿ ಇದೆ; ಇದಲ್ಲದೆ ಹಿಂದುಸ್ಥಾನದಿಂದ ಯುದ್ಧದ ವಿಷಯವಾಗಿ ಒದಗಿಸಲ್ಪಟ್ಟ ದ್ರವ್ಯಸಹಾಯವು ಸಾಕಷ್ಟು ಅಲ್ಲವೆಂಬುದಾಗಿಯೂ ಇಂಥ ಯುದ್ಧ ಕಾಲದಲ್ಲಿ ಈ ದೇಶದಲ್ಲಿ ಶಾಂತತೆ ಇದ್ದು ಎಲ್ಲವೂ ಇತರ ಕಾಲದಲ್ಲಿ ನಡೆಯುವಂತೆ ನಿಶ್ಚಿಂತವಾಗಿ ನಡೆಯುತ್ತಿರುವಾಗ ಹಿಂದೀ ಜನರು ತಾವಾಗಿಯೇ ಸರಕಾರಕ್ಕೆ ಹೆಚ್ಚಿನ ದ್ರವ್ಯಾನುಕೂಲವನ್ನು ಒದಗಿಸಿಕೊಡಬೇಕಿತ್ತು ಎಂದು ಇಂಗ್ಲಿಷ ಪತ್ರಿಕೆಗಳಲ್ಲಿ ಕೆಲವು ವಾದಿಸಿ, ಹಿಂದುಸ್ಥಾನದಿಂದ ಈ ವರೆಗೆ ಒದಗಿಸಲ್ಪಟ್ಟ ಯುದ್ಧ ಸೌಕರ್ಯಗಳು ಅತ್ಯಲ್ಪವೆಂದು ಡಂಗುರ ಹೊಯ್ಯುತ್ತವೆ. ಸರಕಾರದವರು ಈ ಅಭಿಪ್ರಾಯಕ್ಕೆ ಸಹಿಹಾಕದಿದ್ದರೂ ಯುದ್ಧವು ಇದೇ ರೀತಿಯಲ್ಲಿ ನಡೆಯುತ್ತಲಿದ್ದರೆ, ನಮ್ಮ ಸ್ವಂತ ರಾಜಭಕ್ತಿಯ ನಿದರ್ಶನವಾಗಿ ಇನ್ನಷ್ಟು ನಾವು ಸಹಾಯ ಮಾಡಬೇಕಾದುದು ನಮ್ಮ ಕರ್ತವ್ಯವಾಗಿದೆ. ಹೀಗಾದ ಕಾರಣ ತತ್ಕಾಲದಲ್ಲಿ ಸರಕಾರದಿಂದ ಈ ಸ್ತ್ರೀ ವಿದ್ಯಾಪ್ರಚಾರದ ಮಹತ್ವದ ವಿಷಯಕ್ಕೆ ಹೆಚ್ಚಿನ ಸಹಾಯ ದೊರೆಯುವುದು ದುರ್ಲಭ. ಆದಕಾರಣ ಸೂಚನೆಗಳೆಲ್ಲಾ ಬಡವನ ಆಸೆಯಂತೆ ನಿರರ್ಥಕವಾಗುವುವು.

ಪ್ರಾಥಮಿಕ ಶಿಕ್ಷಣದ ಭಾರವನ್ನು ಲೋಕಲ್ ಬೋರ್ಡುಗಳು ವಹಿಸಿಕೊಳ್ಳಬೇಕು ಎಂಬುದರ ಅಭಿಪ್ರಾಯವೇನು? ಲೋಕಲ್ ಬೋರ್ಡುಗಳ ವ್ಯವಹಾರವೆಲ್ಲ ಅವರ ಕೈಕೆಳಗಿರುವ ಆಯಾಯ ಉಪಾಸಕರ (experts) ಮೇಲೆಯೇ ಹೊಂದಿರುತ್ತದೆ. ಇಂಜಿನಿಯರ್ ಇಲಾಖೆಯ ಉದ್ಯೋಗಸ್ಥರು ಆರೋಗ್ಯ ಇಲಾಖೆಯ ಉದ್ಯೋಗಸ್ಥರು ಮತ್ತು ಇನ್ನೂ ಹಲವು ಉಪಾಸಕರು ಅಗತ್ಯವೆಂದು ಸೂಚಿಸಿದ

ಕಡೆಗೆ ಹಣವನ್ನು ಸೆಂಕ್ಷನ್ ಮಾಡುವ ಒಣ ಅಧಿಕಾರವು ಮಾತ್ರ ಬೋರ್ಡುಗಳಲ್ಲಿ ಇರುತ್ತದೆ. ಅವುಗಳ ವಿಮರ್ಶೆಮಾಡುವಷ್ಟು ಶಕ್ತಿಯೂ ಸ್ವತಂತ್ರವೂ ಅವರಿಗೆ ಇಲ್ಲ. ಹಣವಿಲ್ಲದಿದ್ದರೆ ಸಾಲವನ್ನು ಸರಕಾರದವರಿಂದಾಗಲೀ ಅಥವಾ ಇತರ ವಿಧಾನದಿಂದಾಗಲೀ ಎತ್ತಬೇಕಾಗುತ್ತದೆ. ಅಲ್ಲಲ್ಲಿ ಸರಕಾರದವರು ದ್ರವ್ಯಸಹಾಯ ಮಾಡುವ ಸಂದರ್ಭವೂ ಇದೆ. ಇದರಲ್ಲಿ ವಿರೋಧವಾಗಿ ಚರ್ಚಿಸುವವರು ಅತಿ ವಿರಳ. ಅವರ ಚರ್ಚೆಗಳೂ ಅನೇಕ ಸಲ ತೇಲಿಹೋಗುತ್ತವೆ. ಹಲವು ಸಲ ಈ ಬಗೆಯಲ್ಲಿ ಸೋತು ಹೋದವರು ಹತಾಶರಾಗಿ ಸಭೆಯ ಕೆಲಸಗಳಲ್ಲಿ ನಿರಾಸಕ್ತಿಯುಳ್ಳವರು ಆಗುವರು. ಅಥವಾ ತಮ್ಮ ಮೆಂಬರಿಕೆಯ ಅವಧಿ ಮುಗಿದೊಡನೆ ಪುನಃ ಸಭೆಗೆ ಸೇರುವ ಲವಲವಿಕೆಯನ್ನು ತೋರ್ಪಡಿಸುವುದಿಲ್ಲ. ಹೀಗಾಗಿ ನಿಜವಾದ ದೇಶಪ್ರೇಮ, ದೇಶ ವಾತ್ಸಲ್ಯವಿರುವವರು ಹಿಂದೆ ಸರಿದು, ತಮ್ಮ ಬುಡುಬುಡಿಕೆಯ ನಾದದಿಂದಲೆ ಬಹುಮಾನ ಬಿರುದುಗಳನ್ನು ಹೊಂದಬೇಕೆಂದು ಇರುವವರು, ತಮ್ಮ ನೆಂಟರಿಷ್ಟರಿಗೆ ಉದ್ಯೋಗಗಳು ಸಿಕ್ಕಬೇಕೆಂದು ಬಯಸಿ ಸ್ವಾರ್ಥ ತುಂಬಿ ತುಳುಕುವವರು, ಮಹಾ ಜನರಲ್ಲಿ ಮೆಂಬರನೆಂಬ ಗೌರವವನ್ನು ತೋರ್ಪಡಿಸಬೇಕೆಂಬ ಕುತೂಹಲವುಳ್ಳವರು, ಇಂಥವರಿಗೆ ಈ ಲೋಕಲ್ ಬೋರ್ಡುಗಳು ತಮ್ಮ ಆಶಾಪೂರ್ತಿಗೆ ತಕ್ಕ ದಾರಿಯಾಗುತ್ತವೆ. ಇಂಥ ಕಟೂಕ್ತಿಗಳ ಯೋಗ್ಯಾಯೋಗ್ಯತೆಯನ್ನು ತಿಳಿಯಬೇಕಾದರೆ ನಮ್ಮ ಸಂಸ್ಥಾನಕ್ಕೆ ಲೋಕಲ್ ಬೋರ್ಡು ಆಡಳಿತೆಯಲ್ಲಿ ಆದರ್ಶಸ್ಥಾನವಾಗಬೇಕಾದ ಮದ್ರಾಸು ಮುನಿಸಿಪಾಲಿಟಿಯ ವಹಿವಾಟುಗಳನ್ನು ವರ್ತಮಾನಪತ್ರಿಕೆಗಳಲ್ಲಿ ಓದಿದರೆ ಗೊತ್ತಾಗುವುದು.

ಇಂಥ ಮೆಂಬರುಗಳು ನಾಲಿಗೆಗೆ ಔಷಧ ಲೇಪನ ಮಾಡಲಿಕ್ಕೆ ಪ್ರಯತ್ನಿಸುವುದು ವಿಶೇಷವಲ್ಲ. ಇವರಿಗೆ ವೈದ್ಯರು ಯಾರು? ದೇಶಭಾಷಾಪರಿಚಯವಿಲ್ಲದ ಇನ್ಸ್‌ಪೆಕ್ಟರುಗಳು. ಅವರಲ್ಲಿ ಎಷ್ಟು ಮಂದಿ ವಿಲಾಯತಿಯಲ್ಲಿ ಹೆಸರು ವಾಸಿಯಾದ ಶಾಲೆಗಳನ್ನು ನೋಡಿರುವರೆಂಬುದು ಎಲ್ಲರೂ ತಿಳಿಯಲು ಪ್ರಯತ್ನಿಸಬೇಕಾದ ಸಂಗತಿಯಾಗಿದೆ. ಇವರು ದೇಶಭಾಷಾ ವಾಸನೆಯೇ ಇಲ್ಲದೆ, ಹಿಂದೀ ಜನರ ನಡತೆನಡವಳಿಕೆಗಳ ಗೊತ್ತು ಇಲ್ಲದೆ ವಿಲಾಯತಿಯ ಗ್ರಂಥಗಳಿಂದ ಎತ್ತಿ ಬರೆದಿರುವ ಸೂಚನೆಗಳನ್ನು ಇಲ್ಲಿ ಜಾರಿಗೆ ತರಬೇಕೆಂದು ಪ್ರಯತ್ನಿಸುತ್ತಲಿದ್ದಾರೆ. ಇದರಿಂದ ಆಗುವ ಮತ್ತು ಈ ವರೆಗೆ ಆದ ಕೆಡಕು ಎಷ್ಟೆಂದು ಜನರು ಇನ್ನೂ ಕಣ್ಣುತೆರೆಯಲಿಲ್ಲ. ಕೊಡಗು, ಮೈಸೂರಿನ ಗಟ್ಟದ ಬದಿಗಳಲ್ಲಿ ಕಾಫಿ ಧಾರಾಳವಾಗಿ ಬೆಳೆಯುತ್ತಿದೆ ಎಂದು ನಮ್ಮ ಬಯಲು ಸೀಮೆಯಲ್ಲಿ ಅಥವಾ ಕರಾವಳಿಯಲ್ಲಿ ಅದನ್ನೆ ಬೆಳೆಸಿದರೆ ಫಸಲು ಬರುವುದೇ? ಅಥವಾ ಇಲ್ಲಿ ಕರಾವಳಿಯಲ್ಲಿ ತೆಂಗಿನಕಾಯಿ ಸಮೃದ್ಧಿಯಾಗಿ ಬೆಳೆಯುತ್ತದೆಂದು ಅದನ್ನೆ ಕೊಡಗು ಸೀಮೆಯಲ್ಲಿ ಬೆಳೆಸಲು ಪ್ರಯತ್ನಿಸಿದರೆ ಉಪಯೋಗವೇನಾದೀತು? ಬಾಲಕರ ಪಾಠಶಾಲೆಗಳಲ್ಲಿ ಯಾವ ದುಃಸ್ಥಿತಿಯು ಕಂಡು ಬರುತ್ತಿದೆಯೊ ಅದೇ ಬಾಲಿಕಾ ಪಾಠಶಾಲೆಗಳಲ್ಲಿಯೂ ಹಬ್ಬಿ ಅದೇ ಮನೆಮನೆಗಳಲ್ಲಿ ಹಬ್ಬಲು ತೊಡಗಿದೆ.

ಇದಲ್ಲದೆ ಇಂಥ ಮೇಲ್ವಿಚಾರಣೆಯ ಸಂಖ್ಯೆಯು ಬಹಳ ಕಡಿಮೆ. ಒಂದೊಂದು ತಾಲೂಕು ಬೋರ್ಡಿನಿಂದ ಇವರಿಗೆ ಹೋದ ಪತ್ರಗಳ ಪ್ರತ್ಯುತ್ತರವು ಎಷ್ಟು ಕಾಲಕ್ಕೆ ಸಿಕ್ಕುತ್ತದೆ ಎಂಬದನ್ನು ವಿಚಾರಿಸಿದರೆ ಈ ರೀತಿಯ ಆಡಳಿತೆಯಿಂದ ಸರಕಾರಿ ಹಣ ದುರ್ವ್ಯಯವಾಯಿತೆಂದು ಹೇಳಬೇಕಾದ್ದಿಲ್ಲ. ಇಂಗ್ಲಿಷ್ ಗೊತ್ತಿಲ್ಲದ ಉಪಾಧ್ಯಾಯ ಉಪಾಧ್ಯಾಯಿನಿಯರು ಇಂಗ್ಲಿಷ್ ಭಾಷೆಯಲ್ಲಿ ಪತ್ರವ್ಯವಹಾರ ನಡೆಸಬೇಕಂತೆ! ವರ್ಷಕ್ಕೊಮ್ಮೆ ಸಂದರ್ಶನೆ! ಇತರ ಕಾಲದಲ್ಲಿ ಶಾಲೆಯ ಸ್ಥಿತಿ ಹೇಗಿದೆ ಎಂದು ನೋಡುವವರಿಲ್ಲ. ಬರೆದ ಪತ್ರಗಳಿಗೆ ಉತ್ತರ ಸಿಕ್ಕುವುದಕ್ಕೆ ಎಷ್ಟೊ ಸಾವಕಾಶ! ಇಂಥ ರೀತಿಯಲ್ಲಿ ಶಾಲೆಗಳ, ಸಂಖ್ಯೆಯನ್ನು ಹೆಚ್ಚಿಸುವುದಕ್ಕಿಂತಲೂ "ನಿಮ್ಮ ನಿಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ ಯಾವದೊಂದು ಏರ್ಪಾಡನ್ನು ಮಾಡಿರಿ, ಅದಕ್ಕೆ ದ್ರವ್ಯಾನುಕೂಲ ಒದಗಿಸುತ್ತೇವೆ. ಇಂತಿಷ್ಟು ವಿಷಯಗಳನ್ನು ಕಲಿಯಲೇ ಬೇಕು. ಅವನ್ನು ಶಾಲೆಯಿಂದ ಅಥವಾ ಖಾಸಗಿಯಾಗಿ ಕಲಿತರೂ ಸಾಕು" ಎಂದು ಹೇಳುವುದು ಮತ್ತಷ್ಟು ಒಳ್ಳೆದಲ್ಲವೆ? ಈ ವಿಷಯವನ್ನು ಇನ್ನೂ ಚರ್ಚಿಸುವೆವು.

ಮದ್ಯಪಾನವೂ ಯುವಕರೂ.

ಮದ್ಯಪಾನದ ಅಭ್ಯಾಸವು ಒಬ್ಬನಿಗೆ ಸಾಮಾನ್ಯವಾಗಿ ಯೌವ್ವನ ಪ್ರಾಯದಲ್ಲಿ ಹಿಡಿದುಕೊಳ್ಳುತ್ತದೆ. ಒಂದು ಸಮಾಜದ ರೀತಿನೀತಿಗಳ ಪ್ರಕಾರ ನಡೆಯಬೇಕೆಂಬ ಆಲೋಚನೆಯು ಯುವಕರಲ್ಲಿ ಹುಟ್ಟುತ್ತಾ ಬರುವಾಗ ಅವರು ಈ ಮದ್ಯಪಾನದಲ್ಲಿ ಮಹಾ ಕೇಡುಂಟೆಂದು ತಿಳಿಯದೆ ಈ ಉರುಳಲ್ಲಿ ಸಿಕ್ಕಿಬೀಳುತ್ತಾರೆ. ಯೌವ್ವನಾವಸ್ಥೆಗೆ ಹೆಜ್ಜೆ ಇಡುತ್ತಿರುವಾಗಲೇ ತಾವು ಇನ್ನು ಹುಡುಗರಲ್ಲ; ಸುತ್ತಮುತ್ತಲಿನ ಪ್ರಾಯಸ್ಥರಂತೆ ವರ್ತಿಸಬೇಕೆಂಬ ಆಸೆಯು ಯುವಕರಲ್ಲಿ ಉಂಟಾಗುತ್ತದೆ. ಮದ್ಯದಂಗಡಿಗೆ ಹೋಗುವ ಪ್ರಾಯಸ್ಥರು ಇಂಥಾ ಅವಸ್ಥೆಯಲ್ಲಿರುವ ಯುವಕರನ್ನು ಮದ್ಯದಂಗಡಿಗೆ ಕರಕೊಂಡು ಹೋಗಿ ಮದ್ಯವನ್ನು ಕೊಟ್ಟರೆ ಅದನ್ನು ಬೇಡವೆಂತ ನಿರಾಕರಿಸುವದು ಯುವಕರಿಗೆ ಸುಲಭಸಾಧ್ಯವಲ್ಲ. ಹೀಗೆ ಇಂಥಾ ದುರಭ್ಯಾಸವು ಪ್ರಾಯಸ್ಥರಾದ ಜತೆಗಾರರಿಂದಲೊ ಸ್ನೇಹಿತರಿಂದಲೊ ಯುವಕರಿಗೆ ಅಂಟಿಕೊಳ್ಳುತ್ತದೆ. ಇಂಥಾ ಅಭ್ಯಾಸದಿಂದ ಕಡೆಗೆ ಜೀವಮಾನವೇ ಹಾಳಾಗಿ ಹೋಗುವ ಸಂಭವವುಂಟು. ಸರ್. ಟಿ. ಎಸ್. ಕ್ಲೌಸ್ಟನ್, ಡಿ. ಡಿ. ರವರು "ನನ್ನ ಬಳಿಗೆ ಚಿಕಿತ್ಸೆ ಬಗ್ಗೆ ಬಂದ ೨೦೦೦ ಮದ್ಯಪಾಯಿಗಳಲ್ಲಿ ಕಡಿಮೆ ಎಂದರೆ $\frac{9}{10}$ನೇ ಮಂದಿ ೨೧ ವರ್ಷದ ಮೊದಲೇ ಮದ್ಯವನ್ನು ಬಹಳವಾಗಿ ಕುಡಿಯ ಹತ್ತಿದ್ದರಿಂದ ಹುಚ್ಚರಾಗಿದ್ದರು. ಈ ಪ್ರಾಯದಲ್ಲಿ ಮದ್ಯಪಾನದ ತೀಕ್ಷ್ಣತೆಯನ್ನು ಸಹಿಸಿಕೊಳ್ಳುವ ಶಕ್ತಿಯು ಮೆದುಳಿಗೆ ಇರುವದಿಲ್ಲ. ಈ ವಯಸ್ಸಿನಲ್ಲಿ ಯುವಕರ ಜೀವನ ತತ್ವವಿಜ್ಞಾನದ ಚಲನೆಯು ಬಲವಾಗಿರುತ್ತದೆ. ಪ್ರತಿಬಂಧನೆಯ ಶಕ್ತಿಯು ಬಲಹೀನ ಸ್ಥಿತಿಯಲ್ಲಿದೆ. ನೈತಿಕ ಜ್ಞಾನವು ಘಟ್ಟಿಯಾಗಿರುವದಿಲ್ಲ. ಮೆದುಳಿನ ಅರೆಗಳು ಅಪೂರ್ಣವಾಗಿರುತ್ತವೆ. ದೇಹ ಪ್ರಕೃತಿಯೂ ಪೂರ್ಣ ಸ್ಥಿತಿಗೆ ಮುಟ್ಟಿರುವುದಿಲ್ಲ. ಇಂಥಾ ಕಾಲದಲ್ಲಿ ಯಾವದಾದರೂ ದುರಭ್ಯಾಸವು ಅಂಟಿಕೊಂಡದ್ದೇ ಆದರೆ ಅದು ಯುವಕರ ದುರ್ದೈವವೇ ಸರಿ. ಅದರಲ್ಲಿಯೂ ಮದ್ಯಪಾನವು ಬಹಳ ಅಪಾಯಕರ. ಆದುದರಿಂದ ಅದನ್ನು ಯುವಕರು ಸೇವಿಸಲೇ ಕೂಡದು" ಎಂತ ಹೇಳುತ್ತಾರೆ.

ಗ್ಲಾಸ್‌ಗೋ ಪಟ್ಟಣದ ಡಾಕ್ಟರ್ ಡುಕನರವರು ನಡು ಪ್ರಾಯದವರೆಗೆ ಮದ್ಯವನ್ನು ತಕ್ಕೊಳ್ಳಲೇ ಕೂಡದೆಂತ ಹೇಳುವರು. ನಡು ಪ್ರಾಯದ ನಂತರ ಮದ್ಯಪಾನವು ಅಪಾಯಕರವಲ್ಲವೆಂತ ಅವರ ಅಭಿಪ್ರಾಯವಲ್ಲ. ಆದರೆ ಈ ಅಭ್ಯಾಸವನ್ನು ಆ ಪ್ರಾಯದ ವರೆಗೆ ಮಾಡದಿದ್ದರೆ ಮದ್ಯಪಾನದ ಅಭ್ಯಾಸದಿಂದ ಉಂಟಾಗುವ ಕೆಡಕುಗಳಿಗೆ ಸ್ವಲ್ಪ ತಡೆಕಟ್ಟಿದಂತಾಗುವದೆಂತ ಅವರ ಅಭಿಪ್ರಾಯ.

ಸರ್. ರೋಬರ್ಟ್ಸ್ ಬೇಡೆನ್ ಪವೆಲ್‌ರವರು ಯುವಕರ ಬಗ್ಗೆ ಬರೆದ ಒಂದು ಪುಸ್ತಕದಲ್ಲಿ "ಮದ್ಯಪಾನವು ಎಂದೂ ಒಬ್ಬನನ್ನು ಪರಿಪಾಟಳೆಗಳಿಂದ ಬಿಡಿಸುವದಿಲ್ಲವೆಂಬದನ್ನು ಮರೆಯಬೇಡಿರಿ. ಅದು ಪರಿಪಾಟಳೆಗಳನ್ನು ಹೆಚ್ಚಿಸುತ್ತದೆಯೇ ಹೊರತು ಕಡಿಮೆಮಾಡುವದಿಲ್ಲ. ಸಂಕಷ್ಟ ತೊಂದರೆಗಳೇನೆಂಬದು ಕುಡಿಕನ ತಿಳುವಳಿಕೆಗೆ ಸ್ವಲ್ಪ ಹೊತ್ತಿಗೆ ಬಾರದ ಹಾಗೆ ಮಾಡುತ್ತದೇನೋ ನಿಜ; ಆದರೆ ಅದು ಒಂದು ಸಾರಿಗೆ ಎಲ್ಲಾ ವಿಷಯಗಳನ್ನು ಮರೆತುಬಿಡುವ ಹಾಗೆ ಮಾಡುತ್ತದೆ. ಅವನಿಗೆ ಹೆಂಡತಿ ಮಕ್ಕಳು ಇದ್ದರೆ ಅವರ ಬಗ್ಗೆ ಕೆಲಸ ಮಾಡಿ ಅವರನ್ನು ಪೋಷಣೆ ಮಾಡತಕ್ಕವನೇ ತಾನು ಎಂಬದನ್ನು ಕುಡಿಕನ ತಲೆಯಿಂದ ಮದ್ಯಪಾನವು ಹೊರಡಿಸಿಬಿಡುತ್ತದೆ. ಮತ್ತು ಎಲ್ಲಾ ಕೆಲಸಗಳಿಗೂ ಅವನನ್ನು ಅಯೋಗ್ಯನನ್ನಾಗಿ ಮಾಡುತ್ತದೆ" ಎಂಬದಾಗಿ ಬರೆದಿರುವರು.

ದೇಶದ ಏಳಿಗೆಯ ಮೂಲಕಾರಣರಾದ ಈ ಯುವಕರ ತಲೆಯನ್ನೇ ಹಾಳು ಮಾಡುವ ಮದ್ಯಪಾನದ ಅಭ್ಯಾಸದ ಹುಟ್ಟಡಗಿಸುವರೆ ಪ್ರಯತ್ನಿಸುವದು ಪ್ರತಿ ಒಬ್ಬ ದೇಶಬಾಂಧವನ ಕರ್ತವ್ಯವು.

ಪತ್ರವ್ಯವಹಾರ.

ಪತ್ರಕರ್ತರೇ,

ಸುಖಸ್ಯಾನಂತರಂ ದುಃಖಂ। ದುಃಖಸ್ಯಾನಂತರಂ ಸುಖಂ। ಎಂಬ ವಚನದಂತೆ ನಮ್ಮ ಸಾರ್ವಭೌಮ ಸರಕಾರದವರ ಯುದ್ಧಮಂತ್ರಿಯಾದ ಲಾರ್ಡ ಕಿಚನರ ಪ್ರಭುಗಳ ಆಕಸ್ಮಿಕ ಮರಣದಿಂದುಂಟಾದ ವಿಷಾದವನ್ನು ತೋರ್ಪಡಿಸುವದಕ್ಕಾಗಿ ಕೂಡಿದ ಸಹಸಂತಾಪ ಸೂಚಕಸಭೆಯು ಆಗಿ ಕೆಲವು ದಿನಗಳು ಕಳೆಯುವಷ್ಟರೊಳಗೆನೇ ಮಲಬಾರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಮುನ್ಸಿಪಾಲ್ ಮತ್ತು ತಾಲೂಕು ಬೋರ್ಡುಗಳ ಕಡೆಯಿಂದ ಮದ್ರಾಸ್ ನ್ಯಾಯವಿಧಾಯಕ ಸಭೆಯ ಮೆಂಬರಿಕೆಗೆ ನಮ್ಮ ಜಿಲ್ಲೆಯಿಂದ ಉಮೇದ್ವಾರರಾಗಿ ನಿಂತಿದ್ದ ಕಾರ್ಕಳದ ಪ್ರಸಿದ್ಧ ವಕೀಲರೂ, ವಾಕ್ಪಟುಗಳೂ, ಲೋಕಹಿತ ತತ್ಪರರೂ ಆದ ಮಾನ್ಯ ಕೆ. ಸದಾಶಿವ ಭಟ್ಟರವರು ಮತ್ತು ಜಮೀನುದಾರರ ಪರವಾಗಿ ಉಮೇದ್ವಾರರಾಗಿ ನಿಂತಿದ್ದ ಮಲೆಬಾರಿನ ಮಾನ್ಯ ಕಾವಿಲ್‌ಪರಮ್ಬಿಲ್ ನಾಯರವರು ಸಹ ಚುನಾವಣೆಯಲ್ಲಿ ಜಯಶೀಲರಾಗಿ ಮೆಂಬರರಾಗಿ ಆರಿಸಲ್ಪಟ್ಟ ಸಂತೋಷಾರ್ಥವಾಗಿ ಒಂದು ಆಚಾರಪ್ರದರ್ಶಕ ಸಭೆಯನ್ನು ಕೂಡಿಸುವ

ಮತ್ತೊಂದು ಸಂದರ್ಭವು ನಮ್ಮ ಮುಲ್ಕಿ ಯುನಿಯನ್ ಕ್ಲಬ್ಬಿನವರಿಗೆ ಬಂದೊದಗಿತು. ನಮ್ಮ ಕ್ಲಬ್ಬಿನವರು ಈ ಮೊದಲು ದರ್ಬಾರ್‌ಡೆ ಮಹಾರಾಜಾ ಚಕ್ರವರ್ತಿಯವರ ಜನ್ಮ ದಿನ ಮೊದಲಾದವುಗಳನ್ನು ಆಚರಿಸಿ ಯುದ್ಧಫಂಡಿಗೆ ವಂತಿಗೆ ಕಳುಹಿಸಿ ಇವೇ ಮೊದಲಾದ ಹಲವು ವಿಧಗಳಿಂದ ತಮ್ಮಲ್ಲಿರುವ ರಾಜಭಕ್ತಿಯನ್ನು ತೋರ್ಪಡಿಸಿದಂತೆ ಲೋಕ ಹಿತೈಷಿಗಳಾದ ಮುಂದಾಳುಗಳನ್ನು ಸನ್ಮಾನಿಸುವ ಮತ್ತು ಗೌರವಿಸುವ ಈ ಸುಸಂದರ್ಭವನ್ನು ಕಳಕೊಳ್ಳದೆ ಲೋಕಹಿತದ ಕಡೆಗೆ ತಮಗಿರುವ ಆಸಕ್ತಿಯನ್ನು ತೋರ್ಪಡಿಸಿದ ನಮ್ಮ ಕ್ಲಬ್ಬಿನ ಚಾಲಕರ ಕರ್ತವ್ಯ ತತ್ಪರತೆಯು ಪ್ರಶಂಸನೀಯವಾದದ್ದು. ಶ್ರೀ ದೇವರು ನಮ್ಮ ಕ್ಲಬ್ಬಿನ "ರಾಜಭಕ್ತಿ ಮತ್ತು ಲೋಕಹಿತಾಸಕ್ತಿ" ಎಂಬ ಈ ಎರಡು ಕಣ್ಣುಗಳನ್ನು ಇದೇ ರೀತಿ ಸಾಭೀತಿಯಿಂದ ಕಾಪಾಡಲೆಂದು ಹಾರೈಸುತ್ತೇವೆ. ಅಸ್ತು ಇಂದಿನ ಸಭೆಯು ಮನೋರಮಾಭವನದ ವಿಶಾಲವಾದ ಹೋರ್ಪಾರ್ಟದಲ್ಲಿ ನೆರೆಯಿತು. ಪ್ರತಿಷ್ಠಿತ ಪುರುಷರೂ ವಿನಯಸಂಪನ್ನರೂ ಆದ ಪಡುಬಿದ್ರೆ ಪೇಟೆಯ ರಾ। ಬದಿರಾಜಯಾನೆ ಕಿನ್ಯಕ್ಕಬಳ್ಳಾಳರವರು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದರು. ಸಭಾಕಾರ್ಯಕ್ಕೆ ಪ್ರಾರಂಭವಾಗುತ್ತಲೆ ಕಾರ್ಯದರ್ಶಿಗಳಾದ ರಾ। ಕೆ. ಶ್ರೀನಿವಾಸರಾಯರು ಸಭೆಗೆ ಆಮಂತ್ರಣದ ಕಾರಣವನ್ನು ತಿಳಿಸಿದನಂತರ ರಾ। ಬಂಗ್ಲೆಕಾರರವರು ಕಾರ್ಕಳದ ಒಗ್ಗಟ್ಟಿನ ಮತ್ತು ಕಾರ್ಯಸಾಧನದ ವಿಷಯವಾಗಿ ಹಲವು ಸಂಗತಿಗಳನ್ನು ಪ್ರಸ್ತಾಪಿಸಿ ಮಾನ್ಯ ಭಟ್ಟರವರ ಉತ್ಸಾಹ, ಕಾರ್ಯಚಟುವಟಿಕೆ ಮೊದಲಾದ ಗುಣಗಳನ್ನು ಶ್ಲಾಘಿಸಿ ಅವರ ಕಾರ್ಯಕಾಲದಲ್ಲಿ ನಮ್ಮ ಜಿಲ್ಲೆಯವರಿಗೆ ಇರುವ ಕುಂದುಕೊರತೆಗಳ ನಿವಾರಣೆಯೂ, ಹೆಚ್ಚಿನ ಸೌಲಭ್ಯ ಸೌಕರ್ಯಗಳೂ ಉಂಟಾಗುವದೆಂದು ಹಾರೈಸಿ ಮಾನ್ಯ ಭಟ್ಟರವರಿಗೆ ಆಯುರಾರೋಗ್ಯವನ್ನೂ, ಶ್ರೇಯಸ್ಸನ್ನೂ ಚಿಂತಿಸಿ ತನ್ನ ಭಾಷಣವನ್ನು ಮುಗಿಸಿದರು. ತರುವಾಯ ರಾ। ಮುಕುಂದಾಚಾರ್ಯರು ಮಾನ್ಯ ಕಾವಿಲ್‌ಪರಮುಪಿಲ್ ನಾಯರರ ಮತ್ತು ಮಾನ್ಯ ಭಟ್ಟರವರ ವಿಷಯವಾಗಿ ಸಹ ಕೆಲವು ಮಾತುಗಳನ್ನಾಡಿದರು. ರಾ! ಮುಕುಂದಚಾರ್ಯರ ಭಾಷಣದ ತರುವಾಯ ಮಾನ್ಯ ಭಟ್ಟರವರಿಗೂ ಮಾನ್ಯ ನಾಯರರಿಗೂ ಸಂತೋಷಸೂಚಕವಾದ ತಂತೀ ಕೊಡತಕ್ಕದೆಂತ ನಿರ್ಣಯಿಸಲಾಯಿತು. ಬಳಿಕ ರಾ। ಕೆ. ಶ್ರೀನಿವಾಸರಾಯರು ಮೊನ್ನೆಯ ಸಭೆಯವರು ಬಿಟ್ಟ ಸಹಸಂತಾಪಸೂಚಕ ತಂತಿಗೆ ಗವರ್ನಮೆಂಟ ಪ್ರಾಯಿವೇಟ ಸೆಕ್ರೆಟರಿಯವರಿಂದ ಬಂದ ಪ್ರತ್ಯುತ್ತರವನ್ನು ಓದಿಹೇಳಿದರು. ಅನಂತರ ಅಧ್ಯಕ್ಷರವರು ಮಾನ್ಯ ಭಟ್ಟರವರ ಅಭಿಜ್ಞತೆಯ ವಿಷಯವಾಗಿಯೂ ಅವರು ನ್ಯಾಯವಿಧಾಯಕ ಸಭೆಯಲ್ಲಿ ನಮ್ಮ ಜಿಲ್ಲೆಯವರಾಗಿ ಮಾಡಬೇಕಾದ ಹಲವು ಕೆಲಸಗಳ ವಿಷಯವಾಗಿಯೂ ಪ್ರಸ್ತಾಪಿಸಿ ತನಗೆ ಇಂದಿನ ಸಭೆಯ ಅಧ್ಯಕ್ಷಸ್ಥಾನವನ್ನು ಕೊಟ್ಟು ಗೌರವಿಸಿದ ಬಗ್ಗೆ ಸಭಿಕರನ್ನು ಅಭಿವಂದಿಸಿ ತನ್ನ ಭಾಷಣವನ್ನು ಮುಕ್ತಾಯಗೊಳಿಸಿದರು. ಅಧ್ಯಕ್ಷರವರು ರೂ. ೧೦ ಕೊಟ್ಟು ಕ್ಲಬ್ಬಿನ ಪೋಷಕರಾದರು. ಕೊನೆಗೆ ಸಭಿಕರೆಡೆಯಿಂದ ಅಧ್ಯಕ್ಷರವರಿಗೆ ಧನ್ಯವಾದವನ್ನಿತ್ತು ಮಹಾರಾಜಾ ಚಕ್ರವರ್ತಿಯವರ ಹೆಸರಿನ ಜಯಘೋಷದೊಡನೆ ಸಭೆಯು ಮುಕ್ತಾಯವಾಯಿತು.

ಮುಲ್ಕಿ ತಾ. 16–7–15. ಮೆಂಬರರಲ್ಲೊಬ್ಬ.

ಉಪಾಧ್ಯಾಯರೂ ಅವರ ತರ್ಬೇತಿಯೂ.

ಈಗಿನ ತರ್ಬೇತಿಯಿಂದ ಉಪಾಧ್ಯಾಯರಿಗೆ ಬೇಕಾದ ಅನುಭವಗಳೆಲ್ಲ ಲಭಿಸಿ ಟ್ರೈನಿಂಗ್ ಶಾಲೆಯಿಂದ ಹೊರಡುವಾಗ್ಯೆ ಅವರು ಸರ್ವವಿಧಗಳಲ್ಲೂ ತಮ್ಮ ಕರ್ತವ್ಯವನ್ನು ನಡಿಸಲು ಶಕ್ತರಾದವರಾಗಿ ಹೊರಡುತ್ತಿರುವರೋ ಎಂಬದು ಆ ಶಾಲೆಗಳ ಇನ್ಸ್‌ಪೆಕ್ಟರವರಿಗೆನೇ ಗೊತ್ತಿರತಕ್ಕ ಪ್ರಮೇಯವಾಗಿದೆ. ಹಳ್ಳಿಪಳ್ಳಿಗಳಲ್ಲಿರುವ ನಮಗೆ ಈ ಮಾಸ್ತರುಗಳು ಟ್ರೈನಿಂಗ್ ಶಾಲೆಯಿಂದ ಹಿಂತಿರುಗಿಕೊಂಡು ಬರುವಾಗ್ಯೆ ತಮ್ಮ ನಡೆನುಡಿಗಳಲ್ಲಿ ಕೆಲವು ಹೊಸ ಮರ್ಜಿಗಳನ್ನು ಮಾತ್ರ ಸಂಗ್ರಹಿಸಿಕೊಂಡು ಬರುವಂತೆ ತೋರುತ್ತದೆ. ತಿಂಗಳಿಗೆ ಬರೇ ಏಳು ರೂಪಾಯಿಗಳಿಂದ ತನ್ನ ಮ, ತನ್ನ ಹತ್ತಿರದ ಇಲ್ಲವೆ ಕುಟುಂಬದ ಪೋಷಣೆಯನ್ನು ಸಹ ನಡಿಸಿಕೊಂಡು, ಅವರೊಂದಿಗೆ ಒಂದು ಚಿಕ್ಕ ಗುಡಿಸಲಿನಲ್ಲಿಯೆ ತುಂಬಾ ಬಟ್ಟೆ ಸಹ ಇಲ್ಲದೆ ಕಾಲಕ್ಷೇಪ ಮಾಡಬೇಕಾಗುತ್ತಿದ್ದ ಒಬ್ಬ ಯುವಕನನ್ನು ಅವನ ಮೇಲೆ ಜೀವನಕ್ಕೆ ಹೊಂದಿಕೊಂಡಿರುವವರ ಸಹವಾಸದಿಂದ ತಪ್ಪಿಸಿ, ತಿಂಗಳಿಗೆ ಸುಮಾರು ಹತ್ತು ರೂಪಾಯಿ ಕೊಟ್ಟು, ಅನುಭವವಿಲ್ಲದವರಿಗೆ ದುರ್ಮಾರ್ಗ ದುರಾಚಾರ ದುಶ್ಶೀಲಗಳಿಗೆ ಪಾಠಶಾಲೆಯಂತಿರುವ ಮಂಗಳೂರಿಗೆ ಒಯ್ದು ಅಲ್ಲಿ ಬಿಟ್ಟುಬಿಟ್ಟರೆ ಏನು ಪರಿಣಾಮವಾದೀತೆಂಬದನ್ನು ಪಾಠಕ ಮಹಾಶಯರು ತಾವೇ ಯೋಚಿಸಿ ನೋಡಿರಿ. ಇಷ್ಟರಲ್ಲಿ ಸರಕಾರದವರು ಕೊಡುವ ಸ್ಟೈಪೆಂಡಿನ ಹಣ ವೆಚ್ಚಕ್ಕೆ ಸಾಕಾಗದೆ ಮನೆಯಿಂದ ಹೆಚ್ಚಿಗೆ ಹಣ ತಂದು ವೆಚ್ಚ ಮಾಡಲು ಶಕ್ತರಾದ ಸಹಪಾಠಿಗಳ ಸಹವಾಸವೂ ಉಂಟಾದ್ದಲ್ಲಿ ಹೇಳತಕ್ಕದ್ದೇನು?

ದುರ್ಬುದ್ಧಿ ದುಶ್ಶೀಲಗಳಿಗೆ ಮನಸ್ಸು ಸುಲಭವಾಗಿ ತಿರುಗುವ ಪ್ರಾಯದವರಾದ ಉಪಾಧ್ಯಾಯರುಗಳನ್ನು ತರಬೇತು ಮಾಡುವ ಶಾಲೆಗಳು ಪಟ್ಟಣಗಳಲ್ಲಿರುವದು ನನ್ನ ಮನಸ್ಸಿಗೆ ಅಷ್ಟು ಪ್ರಶಸ್ತವಾಗಿ ತೋರುವದಿಲ್ಲ. ಈ ಟ್ರೈನಿಂಗ್ ಶಾಲೆಗಳು ಹಳ್ಳಿಪಳ್ಳಿಗಳಲ್ಲಿ ಇರುವುದಾದರೆ ಅಲ್ಲಿ ಇವರಿಗೆ ಕೊಡತಕ್ಕ ಟ್ರೈನಿಂಗಿನ ಬೆಲೆ ಕಡಿಮೆಯಾಗದೆ ಇವರಿಗೆ ಸಿಕ್ಕುವ ಉಪಕಾರವು ಬಹಳವಾಗಿ ವೃದ್ಧಿಯಾಗುತ್ತಿತ್ತು. ಈ ವಿಷಯದಲ್ಲಿ ಇನ್ನೂ ಒಂದು ಮಾತು ಹೇಳಲಿಕ್ಕಿದೆ, ಪ್ರಾಥಮಿಕ ಶಾಲೆಗಳಿಗೆ ಹೆಚ್ಚು ಕಲಿತ ಉಪಾಧ್ಯಾಯರು ಸಿಕ್ಕುವದು ಅಪರೂಪವಾಗಿದೆ. ಇಂಥಾ ಉಪಾಧ್ಯಾಯರುಗಳು ಲಭಿಸಬೇಕಾದರೆ ಅವರಿಗೆ ಒಂದು ತರದ ಆಕರ್ಷಣೆಯನ್ನು ಉಂಟುಮಾಡಬೇಕಾಗುವದು ಮಾತ್ರವಲ್ಲ ಅವರು ಆ ಉದ್ಯೋಗವನ್ನು ಬಿಟ್ಟು ಇತರೋದ್ಯೋಗಗಳಿಗೆ ಕಾಲು ಹಾಕದಂತೆ ಉಪಾಯವನ್ನೂ ಕಲ್ಪಿಸಬೇಕು. ಹಾಗೆ ಮಾಡುವದರ ಬದಲಾಗಿ ಅವರನ್ನು ಇತರ ಉದ್ಯೋಗಗಳಿಗೆ ಹೋಗುವಂತೆ ಪ್ರೇರೇಪಿಸುವ ಅನುಕೂಲತೆಗಳನ್ನು ಈಗಿನ ಕ್ರಮಗಳು ಒದಗಿಸಿಕೊಡುವದು ಕಾಣುತ್ತದೆ. ಉದಾಹರಣೆಗಾಗಿ ಒಂದು ಪ್ರಾಥಮಿಕ ಶಾಲೆಯಲ್ಲಿ ಕೆಲಸ ಮಾಡುವ ಸ್ಕೂಲ್ ಫೈನಲ್ ಅಥವಾ ಮೆಟ್ರಿಕ್ಯುಲೇಶನ್ ಕಲಿತ ಉಪಾಧ್ಯಾಯರನ್ನು ತೆಗೆದುಕೊಳ್ಳುವ. ಇವರನ್ನು ಈಗಿನ ರೂಲ್‌ಗಳ ಪ್ರಕಾರ ಸೆಕೆಂಡರಿ ಟ್ರೈನಿಂಗ್ ಸ್ಕೂಲಿಗೆ ಕಳುಹಿಸಿ ತರ್ಬೇತು ಮಾಡುವರು. ಎಲಿಮೆಂಟರಿ ಶಾಲೆಯಲ್ಲಿ ಕಲಿಸತಕ್ಕ ಉಪಾಧ್ಯಾಯನಿಗೆ ಈ ಸೆಕೆಂಡರಿ ಟ್ರೈನಿಂಗಿನಿಂದ ಹೆಚ್ಚು ಪ್ರಯೋಜನ ದೊರೆಯುವಂತಿಲ್ಲ ಮಾತ್ರವಲ್ಲ; ಯಾವದಾದರೊಂದು ಸೆಕೆಂಡರಿ ಶಾಲೆಗೆ ಹೋಗಿ ಸೇರಿಕೊಂಡು ಹೆಚ್ಚಿಗೆ ಸಂಬಳ ಪಡೆಯಬೇಕೆಂಬ ಆಸೆಯು ಆತನಲ್ಲಿ ಹುಟ್ಟುವದು.

ಎಲಿಮೆಂಟರಿ ಶಾಲೆಗಳಲ್ಲಿ ಕಲಿಸತಕ್ಕ ಸ್ಕೂಲ್ ಫೈನಲ್ ಅಥವಾ ಇಂಟರ್ ಮೀಡಿಯೇಟ್ ಪರೀಕ್ಷೆಗಳಲ್ಲಿ ಪಾಸಾದ ಉಪಾಧ್ಯಾಯರಿಗೆ ಟ್ರೈನಿಂಗ್ ಅವಶ್ಯವಿಲ್ಲವೆಂತಲೂ ಸೆಕೆಂಡರಿ ಶಾಲೆಗಳಲ್ಲಿ ಸಿಕ್ಕುವಷ್ಟು ಸಂಬಳವು ಅವರಿಗೆ ಪ್ರಾಥಮಿಕ ಶಾಲೆಗಳಲ್ಲೇ ಸಿಕ್ಕಲು ಅನುಕೂಲ ಉಂಟೆಂತಲೂ ಗೊತ್ತುಮಾಡಿದರೆ ಪ್ರಾಥಮಿಕ ಶಾಲೆಗಳಿಗೆ ಹೆಚ್ಚು ಕಲಿತ ಉಪಾಧ್ಯಾಯರ ಅಭಾವವಿರದು.

ಮದ್ರಾಸಿನಲ್ಲಿ ಸದ್ಯ ನೆರೆಯಲಿಕ್ಕಿದೆಯೆಂಬ ಅಥವಾ ಈಗಲೇ ನೆರೆದು ನಡಿಸುತ್ತಿರಬಹುದಾದ ವಿದ್ಯಾಇಲಾಖಾ ಕ್ರಮಸುಧಾರಣಾ ಕಮಿಟಿಯವರು ಈ ಸಂಗತಿಗಳನ್ನು ಯೋಚಿಸಿ ಇತ್ಯರ್ಥಿಸುವರೆಂದು ನಂಬಿಕೊಂಡಿದ್ದೇನೆ.

ವಾಮನ.

ಮಾರಾಟಕ್ಕೆ ತಯ್ಯಾರದೆ.

ಕಾಸರಗೋಡು ತಾಲೂಕು ಮೊಗ್ರಾಲ್ ಮಾಗಣೆ ಕಸಬಾ ಗ್ರಾಮದಲ್ಲಿರುವ ಸಾವುಕಾರ ಕುಂಞಪಕ್ಕಿ ಬ್ಯಾರಿಗಳವರ ಬಾಬತು ಸದರಿ ತಾಲೂಕು ಪುತ್ತೂರು, ಕುಂಬುಡಾಜೆ, ಕನ್ಯಾರು, ಬಾರೆ, ಕೂಡ್ಲು, ಪಳ್ಳಿಕೆರೆ ಈ ಗ್ರಾಮಗಳಲ್ಲಿರುವ ಆಸ್ತಿಗಳನ್ನು ಮಾರಾಟಮಾಡುವ ಬಗ್ಗೆ ಮಂಗಳೂರ ಶಹರ ಗೋಳಿಕಟ್ಟೆ ಬಜಾರದಲ್ಲಿರುವ ಸಿ. ಅಬ್ದುಲ್‌ರಹಿಮಾನ ಹಜಾರ ಬ್ಯಾರಿಗಳ ಮಗ ಸಿ. ಮಹಮೂದ ಬ್ಯಾರಿಯಾದ ನಾನು ಪವರ್ ಓಪ್ ಯೆಟರ್ನಿ ಮೂಲಕ ಅಧಿಕಾರಪಟ್ಟಿರುತ್ತೇನೆ. ಅವಶ್ಯವಿರುವ ಎಲ್ಲಾ ಮಾಹಿತಿಯನ್ನು ನನ್ನ ಕೂಡೆ ಕೇಳಿ ತಿಳಕೊಳ್ಳಬಹುದು.

C. Mohomood,
C/o C. Abdul Rahiman Koragappa,
Hoige Bazar, Mangalore.

ಯುದ್ಧ ಸಮಾಚಾರ.

———.೦.———

ಪ್ರಪಂಚವೇ ಕಂಡರಿಯದ ಮಹಾ ಘೋರವಾದ ಸಂಗ್ರಾಮವು ಅತ್ಯಂತ ಭಯಂಕರವಾಗಿ ನಡೆಯುತ್ತಿರುವದು. ಫ್ರಾನ್ಸ್, ಬೆಲ್ಜಿಯಂ, ರುಶ್ಯಾ, ಆಸ್ಟ್ರಿಯಾ, ಇಟಲಿ, ಬಾಲ್ಕ್ಯಾನ್ ಸಂಸ್ಥಾನ, ಏಷ್ಯಾಮೈನರಿನಲ್ಲಿ — ಎಲ್ಲಾ ಕಡೆಗಳಲ್ಲಿ ಮಿತ್ರಮಂಡಲಿಯವರು ಮುಂದರಿದು ಶತ್ರುಗಳ ಕೂಡೆ ಕದನ ಮಾಡುತ್ತಿದ್ದಾರೆ. ಯುದ್ಧಗಳು ಒಂದು ಸಾವಿರ ಮೈಲಿಗಿಂತಲೂ ಹೆಚ್ಚಾದ ಪ್ರದೇಶದಲ್ಲಿ ನಡೆಯುತ್ತಿರುವದು. ಎರಡು ಕಡೆಗಳಲ್ಲೂ ಲಕ್ಷಾಂತರ ಸೇನಿಕರು ನಿಂತು ಕದನ ಮಾಡುತ್ತಿದ್ದಾರೆ.

ಪಶ್ಚಿಮ ರಣರಂಗದಲ್ಲಿ.

ಪಶ್ಚಿಮ ರಣರಂಗದಲ್ಲಿ ನಡೆಯುತ್ತಿರುವ ಕದನಗಳಲ್ಲಿ ಬ್ರಿಟಿಷ ಮತ್ತು ಫ್ರೆಂಚ ಸೇನಿಕರು ಸೇರುವ ಸಂಧಿ ಸ್ಥಳದಲ್ಲಿ ಅಂದರೆ ಸೊಮ್ಮೆ ಪ್ರಾಂತ್ಯದಲ್ಲಿ ನಡೆಯುತ್ತಿರುವ ಯುದ್ಧವೇ ವಿಶೇಷವಾದದ್ದು. ಟ್ರೋನೆಸ್ ಅರಣ್ಯದ ಮೇಲೆ ಜರ್ಮನರು ಆನಾವರ್ತಿ ಹಲ್ಲೆಮಾಡಿ ಬಹಳ ಮಂದಿ ಸೇನಿಕರನ್ನು ಬಲಿಕೊಟ್ಟು ಕಟ್ಟಕಡೆಗೆ ಹೇಗೂ ಆ ಅಡವಿಯನ್ನು ನುಗ್ಗಿದರು. ಈ ಅರಣ್ಯದಲ್ಲಿ ಕದನವು ಇನ್ನೂ ನಡೆಯುತ್ತಿದೆ. ಈ ಅಡವಿಯ ಪಶ್ಚಿಮದಲ್ಲಿ ಬ್ರಿಟಿಷ ಸೇನಿಕರು ಮೆಮೆತ್ಸ್ ಅರಣ್ಯದಲ್ಲಿಯೂ, ಒವಿಲ್ಲರ್ಸ್ ಮತ್ತು ಲಾಬಾಸ್ಸೆ ಪ್ರಾಂತ್ಯದಲ್ಲಿಯೂ ಜಯಪ್ರದರಾಗಿರುವರು. ಜರ್ಮನರು ರೋಷಾವೇಶದಿಂದ ಮೆಮೆತ್ಸ್ ಅರಣ್ಯದಲ್ಲಿ ಆನೇಕಾವರ್ತಿ ನುಗ್ಗಿ ಬಂದು ತಾವು ಕಳಕೊಂಡ ಪ್ರಾಂತ್ಯಗಳನ್ನು ತಿರಿಗಿ ಪಡೆಯಲು ಯತ್ನಿಸಿದರು. ಆದರೆ ಮೆಮೆತ್ಸ್ ಅರಣ್ಯದ ಹೆಚ್ಚಿನ ಭಾಗವೂ ಅನೇಕ ಕಂದಕಗಳೂ ಬ್ರಿಟಿಷರ ಸ್ವಾಧೀನದಲ್ಲಿಯೇ ಉಳಿದಿರುವವು. ಬ್ರಿಟಿಷರು ಇಲ್ಲಿ ಜರ್ಮನರ ಒಂದು ದೊಡ್ಡ ಹೊವಿಜರ್ ಫಿರಂಗಿಯನ್ನೂ ೩ ಫೀಲ್ಡ್ ಗನ್ಸ್ ಎಂಬ ದೊಡ್ಡ ಫಿರಂಗಿಗಳನ್ನೂ ಹಿಡಿದಿರುತ್ತಾರೆ. ಟ್ರೋನೆಸ್ ಅರಣ್ಯದಲ್ಲಿ ಗಾಯ ಒಡೆಯದ ೧೮೯ ಶತ್ರು ಸೇನಿಕರೂ ಮೆಮೆತ್ಸ್ ಅರಣ್ಯದಲ್ಲಿ ಗಾಯ ಒಡೆಯದ ೨೯೬ ಶತ್ರುಸೇನಿಕರೂ ಬ್ರಿಟಿಷರ ಶೆರೆಬಿದ್ದಿರುವರು. ಬ್ರಿಟಿಷರ ವಾಯುನಾವೆಗಳಲ್ಲಿ ಒಂದರ ಮೇಲೆ ಶತ್ರುಗಳ ವಾಯುನಾವೆಯು ಗುಂಡು ಹಾರಿಸಿದ್ದರಿಂದ ಅದು ನಷ್ಟ ಹೋಗಿರುವದು. ಬ್ರಿಟಿಷರ ವಾಯುನಾವೆಗಳಲ್ಲಿ ೩ ಹಿಂದೆ ಬರಲಿಲ್ಲ.

ಸೊಮ್ಮೆ ನದಿಯ ದಕ್ಷಿಣದಲ್ಲಿ ಫ್ರೆಂಚರು ನುಗ್ಗಿ ಹೋಗಿ ಬ್ಯಾಚೆಸ್ ಮತ್ತು ಬಾಲೆಕ್ಸ್ ಎಂಬ ಪ್ರಾಂತ್ಯಗಳ ಮಧ್ಯೆ ಇದ್ದ ಶತ್ರುಗಳ ಒಂದು ಸಣ್ಣ ಕೋಟೆಯನ್ನು ಕೆಡವಿ ೧೦೦ ಮಂದಿಯನ್ನು ಶೆರೆಹಿಡಿದರು. ವೆರ್ಡನಿನ ಉತ್ತರದಲ್ಲಿ ಫ್ಲ್ಯೂರಿ, ಫ್ಲ್ಯೂರಿ ಚುಪಿನ್ ಅರಣ್ಯ ಮೊದಲಾದ ಪ್ರಾಂತ್ಯಗಳಲ್ಲಿ ಜರ್ಮನರು ಭೀಕರವಾಗಿ ಗುಂಡುಹಾರಿಸುತ್ತಿದ್ದಾರೆ. ಫ್ರೆಂಚ ಫಿರಂಗಿಗಳೂ ಎದುರಾಗಿ ರೋಷಾವೇಶದಿಂದ ಗುಂಡು ಹಾರಿಸುತ್ತಲಿವೆ. ಸೊಮ್ಮೆಯ ಬಳಿ ವಾಯುನಾವೆಗಳು ಅತಿತೀಕ್ಷ್ಣತೆಯಿಂದ ಕೆಲಸ ಮಾಡುತ್ತಿದ್ದ ಜರ್ಮನರ ಹಲವು ವಾಯುನಾವೆಗಳ ಮೇಲೆ ಹಲ್ಲೆಮಾಡಿ ೪ ವಾಯುನಾವೆಗಳನ್ನು ಕೆಳಗೆ ದೊಬ್ಬಿರುತ್ತವೆ. ಸೊಮ್ಮೆಯ ದಕ್ಷಿಣದಲ್ಲಿ ಜುಲಾಯಿ ತಾ. ೯ರಿಂದ ತಾ. ೧೨ರ ವರೆಗೆ ಫ್ರೆಂಚರು ೧೩೦೦ ಶತ್ರುಗಳನ್ನು ಶೆರೆಹಿಡಿದಿರುತ್ತಾರೆ.

ಬ್ರಿಟಿಷ ಸೇನಿಕರು ಹತ್ತು ದಿವಸಗಳಿಂದ ಎಡೆಬಿಡದೆ ರಾತ್ರಿ ಹಗಲು ಕದನಮಾಡಿ ಶತ್ರುಗಳು ಬಲಕಾಯಿಸಿಕೊಂಡಿದ್ದ ೧೪ ಸಾವಿರ ಗಜ ವಿಸ್ತೀರ್ಣದ ಪ್ರಾಂತ್ಯಗಳನ್ನು ಹಿಡಕೊಂಡಿರುವರು. ಜರ್ಮನರು ಬಲಕಾಯಿಸಿಕೊಂಡಿದ್ದ ಈ ರಣರಂಗಗಳನ್ನು ವಶವಾಡಿಕೊಳ್ಳುವದು ಬ್ರಿಟಿಷರಿಗೆ ಸುಲಭಸಾಧ್ಯವಾಗಿರಲಿಲ್ಲ. ಜರ್ಮನರು ಒಂದು ಸಾಲಿನ ಹಿಂದೆ ಮತ್ತೊಂದು ಸಾಲು ಫಿರಂಗಿಗಳನ್ನೂ ರಿಜರ್ವ್ ಸೇನೆಗಳನ್ನೂ ಇಟ್ಟು ೩ರಿಂದ ೪ ಸಾವಿರ ಗಜ ಆಳವಾದ ಕಂದಕಗಳನ್ನು ನಿರ್ಮಿಸಿ, ೫ ಗ್ರಾಮಗಳನ್ನು ಕೋಟೆಗಳಿಂದಲೂ ಬಲಕಾಯಿಸಿಕೊಂಡಿದ್ದರು. ಇಂಥಾ ಕಂದಕಗಳನ್ನೂ ಸಾಲುಸಾಲು ಕೋಟೆಗಳನ್ನೂ ಒಡೆದು ಬಾರ್ಬ್ಡ್ ತಂತಿಗಳನ್ನು ಕಿತ್ತು ಮುಂದರಿಯುವ ಕೆಲಸವು ಬ್ರಿಟಿಷರಿಗೆ ಅತ್ಯಂತ ಶ್ರಮವಾಗಿಯೇ ಇತ್ತು. ಆದರೂ ಬ್ರಿಟಿಷರು ಅತ್ಯಂತ ಸಾಹಸದಿಂದ ಈ ಎಲ್ಲಾ ಕಂದಕಗಳನ್ನೂ ಕೋಟೆಗಳನ್ನೂ ಗೆದ್ದುಕೊಂಡಿರುವರು. ಟ್ರೋನೆಸ್ ಅರಣ್ಯವೆಲ್ಲಾ ಬ್ರಿಟಿಷರ ಸ್ವಾಧೀನವಾಗಿದೆ. ಈ ಕದನದಲ್ಲಿ ಬ್ರಿಟಿಷರು ಫೀಲ್ಡ್ ಗನ್‌ಗಳೆಂಬ ೨೬ ಫಿರಂಗಿಗಳನ್ನೂ, ಒಂದು ನೌಕಾವೆ ಫಿರಂಗಿಯನ್ನೂ ಒಂದು ಭಾರವಾದ ಹೊವಿಜರ್ ಫಿರಂಗಿಯನ್ನೂ ಹಿಡಕೊಂಡರು. ಶೆರೆಬಿದ್ದ ಶತ್ರುಗಳ ಸಂಖ್ಯೆ ೭೫೦೦ಕ್ಕೆ ಮಿಕ್ಕಿರುವದು. ಬ್ರಿಟಿಷ ಸೇನಿಕರು ಮುಂದರಿಯುವದೇನೋ ಸಾವಕಾಶವಾದೀತು. ಆದರೆ ನುಗ್ಗಿಹೋಗಿ ಆಕ್ರಮಿಸಿಕೊಂಡ ಸ್ಥಳಗಳನ್ನು ಮೊದಲಾಗಿ ಬಲಕಾಯಿಸಿಕೊಂಡು ನಂತರ ಮುಂದರಿಸಬೇಕೆಂದೇ ಬ್ರಿಟಿಷರ ಸಂಕಲ್ಪವಾಗಿದೆ.

ಮ್ಯೂಸಿನ ಬಲಕಡೆಯಲ್ಲಿ ಜರ್ಮನರು ರಭಸದಿಂದ ಫಿರಂಗಿಗಳನ್ನು ಹಾರಿಸುತ್ತಿದ್ದಾರೆ. ಎಡಪಕ್ಷದಲ್ಲಿಯೂ ಗುಂಡುಹಾರಿಸುತ್ತಿದ್ದಾರೆ. ಮ್ಯೂಸಿನ ಬಲಕಡೆಯಲ್ಲಿ ಜರ್ಮನರು ಹಲವುಸಾರಿ ಹಲ್ಲೆಮಾಡಿ ಬಹಳ ಮಂದಿ ಸೇನಿಕರನ್ನು ಕಳಕೊಂಡರು. ನಂತರ ಫುಪಿನ್ ಅರಣ್ಯದಲ್ಲಿ ಸ್ವಲ್ಪ ಜಯಹೊಂದಿದರು.

ಮೆಮೆತ್ಸ್ ಅರಣ್ಯದಲ್ಲಿ ಜರ್ಮನರು ತೀಕ್ಷ್ಣವಾಗಿ … ಮೇಲೆ ಬಿದ್ದು ಸ್ವಲ್ಪ ಮುಂದರಿದರು. ಆದರೆ ಬ್ರಿಟಿಷರು ಪುನಃ ನುಗ್ಗಿಹೋಗಿ ಕಳಕೊಂಡ ಪ್ರದೇಶಗಳನ್ನೆಲ್ಲಾ ಆಕ್ರಮಿಸಿಕೊಂಡರು. ಟ್ರೋನೆಸ್ ಅರಣ್ಯದಲ್ಲಿಯೂ ಬ್ರಿಟಿಷ ಸೇನಿಕರು ಹಲವು ಹೊಸ ಠಾಣ್ಯಗಳನ್ನು ಗೆದ್ದುಕೊಂಡಿದ್ದಾರೆ.

ವೆರ್ಡನಿನಲ್ಲಿ ಜರ್ಮನರ ೬ ರೆಜಿಮೆಂಟ್ ಸೇನಿಕರು ಸೊವಿಲ್ಲೆ ಕೋಟೆಯ ಮೇಲೆ ಭೀಕರವಾಗಿ ಹಲ್ಲೆಮಾಡಿ ಸ್ವಲ್ಪ ಸ್ಥಳವನ್ನು ಆಕ್ರಮಿಸಿಕೊಂಡರೂ ಜರ್ಮನರಿಗೆ ಆದ ಜನನಷ್ಟವು ವಿಪರೀತವಾಗಿದೆ. ಜರ್ಮನರು ಈ ಪ್ರಾಂತ್ಯದಲ್ಲಿ ಸೊವಿಲ್ಲೆ, ಚೆನ್ನೊಯ್ಸ್ ಲಾಫೀ ಎಂಬೀ ಸ್ಥಳಗಳ ಮೇಲೆ ಅತಿ ತೀಕ್ಷ್ಣತೆಯಿಂದ ಗುಂಡು ಹಾರಿಸುತ್ತಲಿದ್ದಾರೆ. ಫ್ರೆಂಚರ ಶೆರೆಬಿದ್ದ ಜರ್ಮನ ಸೇನಿಕರು ಇನ್ನೂ ಬಹಳ ಸಣ್ಣ ವಯಸ್ಸಿನವರು ಎಂತ ಗೊತ್ತಾಗುತ್ತದೆ.

ತಾ. ೧೭ರಲ್ಲು ಬಂದ ತಂತೀವಾರ್ತೆಯಿಂದ ಬ್ರಿಟಿಷ ಸೇನಿಕರು ಇರುವ ಪ್ರಾಂತ್ಯದಲ್ಲಿ ಕದನಗಳು ಘೋರವಾಗಿ ನಡೆದಿರುತ್ತವೆ. ಬ್ರಿಟಿಷರ ಕಾಲಾಳು ಸೇನಿಕರು ನುಗ್ಗಿಹೋಗಿ ಇನ್ನೂ ಕೆಲವು ಹೊಸ ಠಾಣ್ಯಗಳನ್ನು ವಶಮಾಡಿಕೊಂಡರು. ಜರ್ಮನರ ಕೆಲವು ಹೊವಿಜರ್‌ಗಳೆಂಬ ಫಿರಂಗಿಗಳೂ ಬ್ರಿಟಿಷರಿಗೆ ದೊರಕಿರುವವು. ಸುಮಾರು ೪ ಮೈಲುಗಳಲ್ಲಿ ಶತ್ರುಗಳು ಬಲಕಾಯಿಸಿಕೊಂಡಿದ್ದ ಸ್ಥಳಗಳನ್ನು ಬ್ರಿಟಿಷರು ಆಕ್ರಮಿಸಿಕೊಂಡಿರುವರು ಎಂತ ತಿಳಿದುಬರುತ್ತದೆ.

ಬ್ರಿಟಿಷರು ಶತ್ರುಗಳ ಮೇಲೆ ನುಗ್ಗಿಹೋಗಿ ಕದನಮಾಡುತ್ತಿರುವದರಿಂದ ಕದನವು ಅತಿ ಘೋರವಾಗಿರುವದು. ಬ್ರಿಟಿಷ ಸೇನೆಯಲ್ಲಿಯೂ ಬಹಳ ಮಂದಿ ಪ್ರಾಣಾಪಾಯ ಹೊಂದುತ್ತಿದ್ದಾರೆಂಬದು ದಿನೇ ದಿನೇ ಬರುತ್ತಿರುವ ನ್ಯಾಯಪಟ್ಟಿ ಮತ್ತು ಹತರಾದ ಬ್ರಿಟಿಷ ಆಫೀಸರರ ದೊಡ್ಡ ಪಟ್ಟಿಯಿಂದ ತಿಳಿದುಬರುತ್ತದೆ. ಆದರೆ ಪ್ರತಿಕಡೆಯಲ್ಲಿಯೂ ಬ್ರಿಟಿಷರಿಗೆ ಅನುಕೂಲವಾಗಿಯೇ ಕದನವು ನಡೆದಿರುತ್ತದೆ. ಬ್ರಿಟಿಷರು ನುಗ್ಗಿಹೋಗಿ ಕದನಮಾಡಲು ಪ್ರಾರಂಭಮಾಡಿದ ದಿನದಿಂದ ೧೦ ಸಾವಿರ ಜರ್ಮನ ಸೇನಿಕರು ಬ್ರಿಟಿಷರ ಶೆರೆಬಿದ್ದಿರುವರು. ಒಂದು ದಿನದಲ್ಲಿ ೨ ಸಾವಿರ ಶತ್ರು ಸೇನಿಕರು ಶೆರೆಬಿದ್ದಿರುತ್ತಾರೆ. ಶತ್ರುಗಳ ಬಹಳ ಯುದ್ಧಸಾಮಾಗ್ರಿಗಳೂ ಬ್ರಿಟಿಷರಿಗೆ ದೊರಕಿರುತ್ತವೆ. ಕೆಲವು ಗ್ರಾಮಗಳು ಬ್ರಿಟಿಷರ ವಶವಾಗಿವೆ. ಒಂದು ಕಡೆಯಲ್ಲಿ ಬ್ರಿಟಿಷರು ಶತ್ರುಗಳನ್ನು ೩ ಮೈಲು ಹಿಂದಕ್ಕೆ ದೂಡಿರುವರು.

ಪೂರ್ವರಣರಂಗ.

ಈ ರಣರಂಗದ ಸ್ಟೋಕೊಡ್ ಎಂಬಲ್ಲಿ ಜರ್ಮನರು ರೋಷಾವೇಶದಿಂದ ಕದನ ಮಾಡುತ್ತಿದ್ದಾರೆ. ಅವರ ವಾಯುನಾವೆಗಳು ರುಶ್ಯನರ ಸೇನಾಪಾಳಿನ ಹಿಂದೆ ಅನೇಕ ಬೊಂಬುಗಳನ್ನು ಎಸೆದಿರುವವು. ಸ್ಟೋಕೊಡ್ ನದಿಯನ್ನು ಶತ್ರುಗಳು ದಾಟಲೆತ್ನಿಸಿದರೂ ಸಾರ್ಥಕ ಹೊಂದಲಿಲ್ಲ.

ಸ್ಟೋಕೊಡಿನ ಎಡದಡದಲ್ಲಿ ನುಗ್ಗಿಬಂದು ರುಶ್ಯನರೊಡನೆ ಕದನಮಾಡಬೇಕೆಂದು ಜರ್ಮನರು ಯತ್ನಿಸಿದರು. ಆದರೆ ರುಶ್ಯನರು ಅವರನ್ನು ಹಿಂದಕ್ಕೆ ಓಡಿಸಿರುತ್ತಾರೆ. ರಿಗ್ಗಾ ಪ್ರಾಂತ್ಯದಲ್ಲಿ ನಡೆಯುವ ಕದನವು ರುಶ್ಯನರಿಗೆ ಅನುಕೂಲವಾಗಿಯೇ ಇದೆ. ಇಲ್ಲಿ ರುಶ್ಯನರು ಕೆಮ್ಮರ್ನ್ ಎಂಬಲ್ಲಿಗೆ ಮುಂದರಿದಿರುತ್ತಾರೆ.

ಇಟಲಿ.

ಇಟಲಿಯಿಂದ ವಿಶೇಷ ವರ್ತಮಾನಗಳು ಬಂದಿರುವದಿಲ್ಲವಾದರೂ ಬಂದಿರುವ ವರ್ತಮಾನಗಳು ಇಟಲಿಯನರಿಗೆ ಅನುಕೂಲವಾಗಿಯೇ ಇರುತ್ತವೆ. ಟೆಂಟ್ರಿನೋದಲ್ಲಿ ಇಟಲಿಯನರು ನುಗ್ಗಿಹೋಗಿ ಕದನ ಮಾಡುತ್ತಿರುವದರಿಂದ ಆಸ್ಟ್ರಿಯನರು ಪೂರ್ವ ರಣರಂಗಕ್ಕೆ ಕಳುಹಿಸಿದ ತಮ್ಮ ಸೇನಿಕರನ್ನು ಅರ್ಧ ದಾರಿಯಿಂದಲೇ ಹಿಂದೆ ಕರಸಿರುವರು ಎಂಬ ವಾರ್ತೆ ಬಂದಿದೆ.

ಟರ್ಕಿ.

ಈ ರಣರಂಗದಿಂದ ವಿಶೇಷ ವಾರ್ತೆಗಳು ಬಂದಿರುವದಿಲ್ಲ. ತುರ್ಕರು ಬೈಬರ್ಟ್ ಎಂಬ ಪರ್ವತ ಸಾಲುಗಳಿಂದ ಹಿಂದೆ ಸರಿಯುತ್ತಿದ್ದಾರೆ.

ಎರ್ಜರಮಿನಲ್ಲಿ ರುಶ್ಯನರು ದಿನೇ ದಿನೇ ಮುಂದರಿಯುತ್ತಲಿದ್ದಾರೆ. ಒಂದು ವಾರದಲ್ಲಿ ರುಶ್ಯನರು ೧೬೭ ಆಫೀಸರರನ್ನೂ ೧೭೪೪ ಸೇನಿಕರನ್ನೂ ಬಹಳ ಯುದ್ಧಸಾಮಾಗ್ರಿಗಳನ್ನೂ ಹಿಡಿದರು. ಎರ್ಜರಮಿನ ಪಶ್ಚಿಮದಲ್ಲಿ ರುಶ್ಯನರು ಮಮೂಕ್ತನ್ ಎಂಬ ಪಟ್ಟಣದ ಮೇಲೆ ಹಲ್ಲೆ ಮಾಡಿ ಅದನ್ನು ಹಿಡಿದರು. ತುರ್ಕರು ಆ ಪಟ್ಟಣಕ್ಕೆ ಬೆಂಕಿಕೊಟ್ಟು ಪಟ್ಟಣವನ್ನು ಬಿಟ್ಟುಹೋಗಿರುವರು.

ಬಾಲ್ಕ್ಯಾನ್ ಸಂಸ್ಥಾನ.

ರುಶ್ಯನರಿಗೆ ಸಿಕ್ಕಬಾರದೆಂಬದಾಗಿ ಓಡಿಹೋದ ಒಂದು ಸಾವಿರ ಆಸ್ಟ್ರಿಯನರು ರುಮೇನಿಯಕ್ಕೆ ಹೋಗಿರುವರು. ಇವರನ್ನೆಲ್ಲಾ ರುಮೇನಿಯರು ಹಿಡಕೊಂಡಿದ್ದಾರೆ. ಬಲ್ಗೇರಿಯನರ ಒಂದು ಸೇನೆಯವರು ದಂಗೆ ಎದ್ದು ಜರ್ಮನ ಸೇನಾಧಿಪತಿಯನ್ನು ಕೊಂದುಹಾಕಿದರೆಂಬ ವಾರ್ತೆ ಇದೆ.

ಪೂರ್ವ ಆಫ್ರೀಕ.

ಜನರಲ್ ಸ್ಮಟ್ಸರವರು ಮುಂದಕ್ಕೆ ನುಗ್ಗಿಹೋಗಿ ಜರ್ಮನರ ವಿಸ್ತಾರವಾದ ದೇಶದ ಮೈಕಿ ಉತ್ತರ ಭಾಗವನ್ನೆಲ್ಲಾ ಸ್ವಾಧೀನ ಮಾಡಿಕೊಂಡಿರುವರು. ಟಂಗಾ ಎಂಬ ಪ್ರದೇಶವು ತಾ. ೭ರಲ್ಲು ಬ್ರಿಟಿಷರಿಗೆ ಸ್ವಾಧೀನವಾಗಿದೆ.

ಜಲಾಂತರ್ಗಾಮಿ ನಾವೆಗಳು.

ಅಡ್ರಿಯಾಟಿಕ್ ಸಮುದ್ರದಲ್ಲಿ ಆಸ್ಟ್ರಿಯನರ ಕ್ರೂಜರ್ ಯುದ್ಧನಾವೆಗಳು ಬ್ರಿಟಿಷರ ಎರಡು ಹಡಗುಗಳನ್ನು ಮುಳುಗಿಸಿರುತ್ತವೆ. ಹತ್ತು ಮಂದಿ ಹತರಾಗಿರುವರು. ೯ ಮಂದಿ ಗಾಯ ಒಡೆದಿರುವರು. ಕೆಲವರು ಶೆರೆಬಿದ್ದಿರುವರು.

~~~~~

ವಿದೇಶ ವೃತ್ತಾಂತ.

~~~~~

ಫ್ರಾನ್ಸ್‌ದೇಶದಲ್ಲಿ ಜನನ ಸಂಖ್ಯೆಯು ಕಡಿಮೆಯಾಗುತ್ತಿರುವದರಿಂದ ಮುಂದೆ ದೇಶಕ್ಕೆ ಮಹಾ ವಿಪತ್ತುಬಂದೊದಗಬಹುದೆಂಬ ಆಲೋಚನೆಯಿಂದ ಎಮ್. ಬೆಂಜಟ್ ಎಂಬವರು ಫ್ರೆಂಚ ಪಾರ್ಲಿಮೆಂಟಿನಲ್ಲಿ ಈ ವಿಷಯದಲ್ಲಿ ಒಂದು ಹೊಸ ಹಂಚಿಕೆಯನ್ನು ಮಾಡಬೇಕಾಗಿ ಸೂಚಿಸಿರುವರು. ಈ ಹಂಚಿಕೆಯ ಪ್ರಕಾರ ಒಬ್ಬ ಫ್ರೆಂಚ ತಾಯಿಗೆ ೧ನೇ ಮತ್ತು ೨ನೇ ಮಕ್ಕಳವರೆಗೆ ಪ್ರತಿ ಒಂದು ಮಗುವಿಗೆ ೨೦ ಪೌಂಡು, ೩ನೇ ಮಗುವಿಗೆ ೪೦ ಪೌಂಡು, ೪ನೇ ಮಗುವಿಗೆ ೮೦ ಪೌಂಡು, ನಂತರ ಮಗು ಒಂದಕ್ಕೆ ೪೦ ಪೌಂಡು ಪ್ರಕಾರ ಸರಕಾರದವರು ಪ್ರೀಮಿಯಂ ಕೊಡಬೇಕಾಗುವದು. ಮಗುವಿನ ಆರೈಕೆಯನ್ನು ಚೆನ್ನಾಗಿ ಮಾಡುವಹಾಗೆ ಮಗುವಿಗೆ ಒಂದು ವರ್ಷ ಆದನಂತರ ಮಾತ್ರ ಈ ಹಣವು ಕೊಡೋಣಾಗುವದು. ಹೆಂಗಸು ಮದುವೆಯಾಗಲಿ, ಆಗದಿರಲಿ, ಈ ಹಣವು ಕೊಡೋಣಾಗುವದಲ್ಲದೆ ಈ ಹಣದಲ್ಲಿ ತಾಯಿಗಲ್ಲದೆ ಇತರರ್ಯಾರಿಗೂ ಹಕ್ಕಿಲ್ಲ. ಯಾವ ತರದ ಸಾಲದ ಜವಾಬ್ದಾರಿಯೂ ಈ ಹಣಕ್ಕಿಲ್ಲ. ೪ ಮಕ್ಕಳಾದನಂತರ ಮಾತ್ರ ತಂದೆಗೆ ಈ ಹಣದಿಂದ ಸ್ವಲ್ಪ ಬೋನಸ್ ಕೊಡೋಣಾಗುವದು. ಈ ನಾಲ್ಕು ಮಕ್ಕಳನ್ನು ಹುಟ್ಟಿದಂದಿನಿಂದ ಆರೈಕೆ ಮಾಡಿದ್ದೇನೆಂದು ತಂದೆಯು ಋಜುಪಡಿಸಿದರೆ ಅವನಿಗೆ ೮೦ ಪವನುಗಳು ಕೊಡೋಣಾಗುವದು. ಈ ಹಣವನ್ನು ಸರಕಾರದವರು ಕ್ರಮವಾಗಿ ಕೊಡಲಿಕ್ಕಾಗುವ ಹಾಗೆಯೂ ಈ ಹಂಚಿಕೆಯನ್ನು ಪಾರ್ಲಿಮೆಂಟಿನ ಮುಂದೆ ತಂದವನು ಒಂದು ಉಪಾಯವನ್ನು ಸೂಚಿಸಿರುವನು. ಪ್ರಾಯಭರಿತರಾದರೂ ಮದುವೆಯಾಗದಿರುವ ಯೌವನಸ್ಥರ ಮತ್ತು ಯೌವನಸ್ಥೆಯರ ಮೇಲೆಯೂ ಮಕ್ಕಳಾ

ಗೆದ ಗಂಡಸ್ಪೊಡರ ಮೇಲೆಯೂ ಒಂದೇ ಮಗು ಇರುವ ಹೆತ್ತವರ ಮೇಲೆಯೂ ತೆರಿಗೆಯನ್ನು ಹಾಕಿ, ಆ ತೆರಿಗೆಯಿಂದ ಕೂಡಿಬಂದ ಹಣವನ್ನು ಮಕ್ಕಳಿರುವ ತಾಯಿಯಂದಿಯರಿಗೆ ಹಂಚಿಕೊಡಬೇಕೆಂಬದೇ ಆ ಫ್ರೆಂಚಮನುಷ್ಯನ ಸೂಚನೆ.

ಐರ್ಲ್ಯಾಂಡಿಗೆ ತತ್ಕಾಲಿಕವಾಗಿ ಸ್ವತಂತ್ರ ಅಧಿಕಾರವು ಕೊಡೋಣಾಗುವದು ಎಂಬದಾಗಿ ಪ್ರಧಾನ ಮಂತ್ರಿಯಾಗಿರುವ ಮಿ| ಆಸ್ಕ್ವಿತರವರು ಪಾರ್ಲಿಮೆಂಟ ಸಭೆಯಲ್ಲಿ ಹೇಳಿರುತ್ತಾರೆ. ಐರ್ಲ್ಯಾಂಡಿನ ಈ ಹೋಮ್ ರೂಲಿಗೆ ಅಲಸ್ಟರಿನ ೬ ಪ್ರದೇಶಗಳನ್ನು ಸೇರಿಸುವದಿಲ್ಲ. ಐರಿಸ್ ಪಾರ್ಲಿಮೆಂಟಿನಲ್ಲಿ ಕಾಮನ್ಸ್ ಸಭೆಯ ಐರಿಸ್ ಮೆಂಬರರು ಸೇರಿರುವರು. ಡಬ್ಲಿನಿನಲ್ಲಿ ಒಂದು ಅಪೀಲ ಕೋರ್ಟು ಇರುವದು. ಇಂಪೀರಿಯಲ್ ಸರಕಾರದವರು ಇವನ್ನು ರೂಪಿಸುವರು. ಈ ತತ್ಕಾಲಿಕ ವ್ಯವಸ್ಥೆಯು ಯುದ್ಧ ಕಾಲ ಮತ್ತು ಯುದ್ಧ ಮುಗಿದು ಒಂದು ವರ್ಷದ ವರೆಗೆ ಇರುವದು. ಸರಕಾರದವರು ಈ ಕ್ರಮವನ್ನು ನಂತರವೂ ಕಾಯಂ ಆಗಿ ಜಾರಿಗೆ ತರದಿದ್ದರೆ ತಕ್ಕವಾದ ಹೊಸ ವ್ಯವಸ್ಥೆಯನ್ನು ಜಾರಿಗೆ ತರುವವರೆಗೆ ಈ ಕ್ರಮವು ಹಾಗೆಯೇ ಉಳಿಯುವದು ಎಂತ ತಿಳಿದುಬರುತ್ತದೆ.

ಉತ್ತರ ಹಿಂದೂಸ್ಥಾನ.

ಅಹಮ್ಮದಾಬಾದಿನಲ್ಲಿ ಜರಗಲಿಕ್ಕಿರುವ ೧೬ನೇ ಮುಂಬಾಯಿ ಪ್ರಾಂತಿಕ ಸಭೆಗೆ ಅಧ್ಯಕ್ಷರಾಗಲು ಮಾನ್ಯ ಎಂ. ಎ. ಜಿನ್ನಾರವರು ಒಪ್ಪಿಕೊಂಡಿದ್ದಾರೆ.

ಹಿಂದೂಸ್ಥಾನದ ದೇಶೀಯ ರಾಜರುಗಳ ಒಂದು ಸಭೆಯು ಒಕ್ಟೋಬರ ತಿಂಗಳ ತಾ. ೩೦ರಲ್ಲು ದಿಲ್ಲಿ ನಗರದಲ್ಲಿ ಕೂಡಲಿಕ್ಕಿದೆ. ತಂತಮ್ಮ ದೇಶಗಳಿಗೆ ಸಂಬಂಧಪಟ್ಟ ಕೆಲವು ವಿಶೇಷ ಪ್ರಶ್ನೆಗಳನ್ನು ಚರ್ಚಿಸುವದೇ ಈ ಸಭೆಯ ಮುಖ್ಯ ಉದ್ದೇಶವಾಗಿದೆ.

ತಾ. ೧೬ರಲ್ಲು ಅಲ್ಲಹಾಬಾದಿನಲ್ಲಿ ಕೂಡಿಬಂದ ಮುನ್ಸಿಪಾಲ್ ಬೋರ್ಡಿನಲ್ಲಿ ಚುನಾಯಿತರಾದ ಪಂಡಿತ ಮೋತಿಲಾಲಸೇನ್ ಮತ್ತು ಇತರ ೧೧ ಹಿಂದೂ ಮುನ್ಸಿಪಾಲ್ ಕೌನ್ಸಲರು ರಾಜಿನಾಮೆ ಕೊಟ್ಟು ಒಂದೇ ಗುಂಪಾಗಿ ಕೌನ್ಸಿಲ ಸಭೆಯಿಂದ ಹೊರಗೆ ಹೋದರು. ಹಿಂದೂ ಮೆಂಬರರಲ್ಲಿ ಇಬ್ಬರು ಮಾತ್ರ ರಾಜಿನಾಮೆ ಕೊಡಲಿಲ್ಲ. ಅಲ್ಲಹಾಬಾದಿನಲ್ಲಿ ಮುನ್ಸಿಪಲ್ ಬೋರ್ಡು ಸಂಬಂಧ ಉಂಟಾದ ಹೊಸ ಆಕ್ಟು ಈ ಮೆಂಬರರಿಗೆ ಅಸಮ್ಮತವಾದುದೇ ಈ ರಾಜಿನಾಮೆಗೆ ಕಾರಣ.

ಇದೇ ಬರುವ ಆಗೋಸ್ತ್ ತಾ. ೪ಕ್ಕೆ ಬ್ರಿಟಿಷರಿಗೂ ಜರ್ಮನರಿಗೂ ಯುದ್ಧ ಪ್ರಾರಂಭವಾಗಿ ೨ ವರ್ಷಗಳಾಗುವದರಿಂದ ಆ ದಿನ ಎಲ್ಲಾ ದೇವಾಲಯಗಳಲ್ಲಿ ಆರಾಧನೆ ನಡೆಯುವದು. ಆ ದಿನ ಕ್ರೈಸ್ತ ದೇವಾಲಯಗಳಿಗೆ ಯಾ ಹಿಂದೂ ದೇವಸ್ಥಾನಗಳಿಗೆ ಈ ಸಂಬಂಧ ಹೋಗುವ ಎಲ್ಲಾ ಸರಕಾರಿ ನೌಕರರಿಗೆ ಆರಾಧನೆ ನಡೆಯುವ ಸಮಯ ರಜೆ ಕೊಡೋಣಾಗುವದು.

ಭಾರತೀಯ ವಾಣಿಜ್ಯ ಸಂಘದ ಪರವಾಗಿ ಸರ್. ಫಜುಲ್‌ಭಾಯಿ ಕರಿಂಭಾಯಿಯರವರು ವರಿಷ್ಟ ನ್ಯಾಯವಿಧಾಯಕ ಸಭೆಯ ಮೆಂಬರರಾಗಿ ನೇಮಿಸಲ್ಪಟ್ಟಿರುವರು.

ಜೂನ್ ತಿಂಗಳೊಂದರಲ್ಲಿಯೇ ಬಂಗಾಳ ಪ್ರೆಸಿಡೆನ್ಸಿಯಲ್ಲಿ ಸುಮಾರು ೯ ಲಕ್ಷ ಮೂಲಧನದಿಂದ ೬ ಹೊಸ ಕಂಪೆನಿಗಳು ಸ್ಥಾಪಿಸೋಣಾಗಿರುವವು.

ಜುಲಾಯಿ ತಾ: ೮ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ೮೦೬ ಮಂದಿಗೆ ಪ್ಲೇಗ ಬೇನೆಯು ಸೋಂಕಿ ೬೧೦ ಮರಣಗಳಾಗಿರುವವು. ಈ ಪೈಕಿ ಮುಂಬಾಯಿಯಲ್ಲಿ ೩೧೧ ಮಂದಿಗೆ ಪ್ಲೇಗು ಸೋಂಕು ತಗಲಿ ೨೩೬ ಮಂದಿಯೂ ಮದ್ರಾಸಿನಲ್ಲಿ ೮೦ ಮಂದಿಗೆ ಪ್ಲೇಗು ಸೋಂಕು ತಗಲಿ ೫೭ ಮಂದಿಯೂ, ಬಂಗಾಳದಲ್ಲಿ ಒಬ್ಬನಿಗೆ ಪ್ಲೇಗು ಸೋಂಕು ತಗಲಿ ಒಬ್ಬನೂ ಬಿಹಾರದಲ್ಲಿ ೧೧ ಮಂದಿಗೆ ಸೋಂಕು ತಗಲಿ ೧೦ ಮಂದಿಯೂ, ಬರ್ಮದಲ್ಲಿ ೧೪೯ ಮಂದಿಗೆ ಸೋಂಕು ತಗಲಿ ೧೪೦ ಮಂದಿಯೂ, ಮಧ್ಯ ಸಂಸ್ಥಾನದಲ್ಲಿ ೯ ಮಂದಿಗೆ ಸೋಂಕು ತಗಲಿ ೬ ಮಂದಿಯೂ, ಮೈಸೂರಲ್ಲಿ ೧೭೧ ಮಂದಿಗೆ ಸೋಂಕು ತಗಲಿ ೮೨ ಮಂದಿಯೂ, ಹೈದರಾಬಾದಿನಲ್ಲಿ ೧೦೮ ಮಂದಿಗೆ ಸೋಂಕು ತಗಲಿ ೬೯ ಮಂದಿಯೂ ಮೃತರಾದರು.

ತಾ. ೧೪ ಬೆಳಿಗ್ಗೆ ಕಲ್ಕತ್ತೆಯ ಪೋಲಿಸಿನವರು "ಬಂಗಾಳಿ" ಪತ್ರಿಕೆಯ ಅಸಿಸ್ಟಾಂಟ ಎಡಿಟರರಾದ ಮ| ರಾ| ಶ್ಯಾಮಸುಂದರ ಚಕ್ರವರ್ತಿಯವರ ಮನೆಗೆ ಹೋಗಿ ಮನೆ ಜಪ್ತಿಮಾಡಿ ಕೆಲವು ಕಾಗದ ಪತ್ರಾದಿಗಳನ್ನು ಹಿಡಿದು ಚಕ್ರವರ್ತಿಯವರನ್ನು ಕೈದು ಮಾಡಿರುವರು. ಮ| ರಾ| ಚಕ್ರವರ್ತಿಯವರು ಹಿಂದೆ ಮ| ರಾ| ಅರವಿಂದ ಘೋಷರೊಡನೆ "ವಂದೇ ಮಾತರಂ" ಪತ್ರಿಕೆಯ ಜ್ಯೊಂಟ್ ಎಡಿಟರಾಗಿದ್ದರು. ೧೯೧೦ನೇ ಇಸವಿಯಲ್ಲಿ ಅವರಿಗೆ ೬ ತಿಂಗಳುಗಳ ಠಾಪು ಶಿಕ್ಷೆ ಆಗಿತ್ತು. ಸೂರತಿನಲ್ಲಿ ನಡೆದ ಕಾಂಗ್ರೆಸ್ ಸಭೆಯು ಚಿತ್ರಂಡವಾದ ನಂತರ ಇವರು ಕಾಂಗ್ರೆಸಿಗೆ ತಿರಿಗಿ ಸೇರಲಿಲ್ಲ.

ನಮ್ಮ ಹಿಂದೂ ದೇಶೀಯರಲ್ಲನೇಕರು ರೈಲುಗಾಡಿಯಲ್ಲಿ ಪ್ರಯಾಣಮಾಡುವಾಗ "ಐರೋಪ್ಯರಿಗೋಸ್ಕರ ರಿಜರ್ವ್ ಮಾಡಲ್ಪಟ್ಟಿರುವುದು" (Reserved for Europeans) ಎಂಬದಾಗಿ ಬರೆಯಲ್ಪಟ್ಟ ಅಥವಾ ಇಂತಹ ವಾಕ್ಯವುಳ್ಳ ಹಲಿಗೆಯನ್ನು ತೂಗುಗಟ್ಟಿರುವ ಮೂರನೆಯ ತರಗತಿಯ ಗಾಡಿಯನ್ನು ನೋಡಿರುವರಷ್ಟೆ. ಇಂತಹ ಹಲಿಗೆಯಿಂದ ಅಲಂಕೃತವಾದ ಗಾಡಿಯೊಳಕ್ಕೆ ನಮ್ಮವರಾರೂ ಧೈರ್ಯದಿಂದ ಪ್ರವೇಶಿಸಲಾರರು. ಆದ ಕಾರಣ ಈ ವಿಷಯದಲ್ಲಿ ವ್ಯಾಜ್ಯನಡೆದು ತೀರ್ಮಾನವಾದ ಸಂಗತಿಯು ಬೊಂಬಾಯಿನ ಒಂದು ಆಂಗ್ಲ ಪತ್ರಿಕೆಯಲ್ಲಿ ಪ್ರಕಟವಾಗಿದುವುದರಿಂದ ಅದನ್ನು ನಮ್ಮ ವಾಚಕರ ಅವಗಾಹನೆಗಾಗಿ ಈ ಕೆಳಗೆ ಪ್ರಕಟಿಸಿರುವೆವು:— "ಮಾತ್ರದಾಸ್ ರಾಮಚಂದ್ರ ಎಂಬವರಿಗೂ, ಇಂಡಿಯಾ ಸ್ಟೇಟ್ ಸೆಕ್ರೆಟರಿಯವರಿಗೂ ನಡೆದ ವ್ಯಾಜ್ಯದ ತೀರ್ಮಾನವು ಸಿಂಧ್' ಲಾ ರಿಪೋರ್ಟಿನ ೫ನೆಯ ಸಂಪುಟದ ೧೪೦ನೆಯ ಪುಟದಲ್ಲಿ ಪ್ರಕಟವಾಗಿದೆ. ಅದರಲ್ಲಿ ೩ನೆಯ ತರಗತಿಯ ಗಾಡಿಗಳಿಗೆ "ಐರೋಪ್ಯರಿಗೋಸ್ಕರ ಮೀಸಲಾಗಿದೆ" ಎಂಬ ವಾಕ್ಯವುಳ್ಳ ಹಲಿಗೆಯನ್ನು ತಗುಲಿ ಹಾಕುವುದು,—ಐರೋಪ್ಯರಿಗೆ ಆ ತೆರನಾದ ನ್ಯಾಯವಲ್ಲದ ಅನುಕೂಲ್ಯಗಳನ್ನೊದಗಿಸಿಕೊಡುವ ವಿಷಯವು ಯಾವ 'ಲಾ' (ನ್ಯಾಯ)ದಲ್ಲಿಯೂ ಇಲ್ಲದುದರಿಂದ—ಶುದ್ಧ ಅನ್ಯಾಯವೆಂತಲೂ, ಅಂತಹ ಹಲಿಗೆ ಅಥವಾ ಬರಹವುಳ್ಳ ೩ನೆಯ ತರಗತಿಯ ಗಾಡಿಯಲ್ಲಿ ಕುಳಿತುಕೊಂಡಿರುವ ಹಿಂದೂದೇಶೀಯನನ್ನು ಗಾಡಿಯಿಂದ ಹೊರಕ್ಕೆಳೆದ ಅಪರಾಧಕ್ಕೆ ರೈಲ್ವೆಕಂಪೆನಿಯ ಸೇವಕನೇ ಹೊರತು ಮತ್ತಾರೂ ಗುರಿಯಾಗುವುದಿಲ್ಲವೆಂತಲೂ ನ್ಯಾಯಾಧೀಶರು (ಜಡ್ಜಿಯವರು) ತೀರ್ಮಾನಮಾಡಿರುವ ಭಾಗವು ವಿವರಿಸಲ್ಪಟ್ಟಿದೆ. ನಮ್ಮ ದೇಶೀಯರನೇಕರು ಮೇಲೆಹೇಳಿದ ರೀತಿಯಲ್ಲಿ ಮೀಸಲಾಗಿಟ್ಟ ಗಾಡಿಯೊಳಕ್ಕೆ ಪ್ರವೇಶಿಸುವುದು 'ಲಾ' ಪ್ರಕಾರ ಅಕ್ರಮವೆಂದು ಇದುವರೆಗೂ ತಿಳಿದುಕೊಂಡಿದ್ದರು. ಆದರೆ ಈಚೆಗೆ ಆ ವಿಷಯದಲ್ಲಿ ಮಾಡಲ್ಪಟ್ಟಿರುವ ನ್ಯಾಯವಿಮರ್ಶೆಯಿಂದ "ಐರೋಪ್ಯರಿಗೋಸ್ಕರ ಮೀಸಲಾಗಿಟ್ಟಿದೆ" ಎಂಬ ವಾಕ್ಯವು ಯಾವ ಕಾನೂನಿನಲ್ಲಿಯೂ ಇಲ್ಲದ ಪೊಳ್ಳುಮಾತೆಂದು ನಿರ್ಧಾರವಾಯಿತು. ಆದುದರಿಂದ ಇನ್ನುಮುಂದೆ ನಮ್ಮವರು ಪ್ರಯಾಣಮಾಡುವ ಕಾಲದಲ್ಲಿ ಸ್ಥಳಸಂಕೋಚ ಅಥವಾ ಅನಾನುಕೂಲಗಳುಂಟಾದಾಗ ಮೇಲ್ಕಂಡ ಜಡ್ಜಿಯವರ ತೀರ್ಮಾನವನ್ನು ಆಚರಣೆಗೆ ತಂದುಕೊಂಡು ಪ್ರಯೋಜನ ಪಡೆಯಬಹುದು."

ದಕ್ಷಿಣ ಹಿಂದೂಸ್ಥಾನ.

ಮದ್ರಾಸ್ ಕಾಂಗ್ರೆಸ್ ಕಮಿಟಿಯವರು ಬರುವ ರಾಷ್ಟ್ರೀಯ ಸಭೆಗೆ ಅಧ್ಯಕ್ಷರನ್ನಾಗಿ ಮ| ರಾ| ಸಿ. ವಿಜಯರಾಘವಾಚಾರ್ಯರ್, ಮಿಸೆಸ್ ಬಿಸೆಂಟ್, ದಿವಾನ್ ಬಹದ್ದೂರ್ ಎಲ್. ಎ. ಗೋವಿಂದ ರಾಘವ ಅಯ್ಯರ್, ಮ| ರಾ| ಎನ್. ಸುಬ್ಬರಾವ್, ಸರ್ ಎಸ್. ಸುಬ್ರಮಣಿಯ್ಯರ್, ಮಿ| ಮಜರುಲ್ ಹೇಕು, ಮಿ| ಹಸಾನ್ ಇಮಾಮ್—ಈ ಏಳು ಮಂದಿಯಲ್ಲಿ ಒಬ್ಬರನ್ನು ಆರಿಸಬಹುದೆಂತ ನಿರ್ಣಯಿಸಿರುತ್ತಾರೆ.

ಮೈಸೂರು ಯುನಿವರ್ಸಿಟಿ ಮಸೂದೆಯು ತಾ. ೧೭ರಲ್ಲು ಮೈಸೂರು ನ್ಯಾಯ ನಿರ್ಮಾಣ ಸಭೆಯ ಮುಂದೆ ಚರ್ಚಿಸಲ್ಪಟ್ಟು ಮಂಜೂರಾಯಿತು.

ಮೈಸೂರು ಚೀಫ್ ಕೋರ್ಟಿನಲ್ಲಿ ತಾ. ೧೩ರಲ್ಲು ಒಂದು ಮಾನನಷ್ಟ ದಾವೆಯು ಇತ್ಯರ್ಥವಾಯಿತು. ಮೈಸೂರು ಲೆಜಿಸ್ಲೇಟಿವ್ ಎಸೆಂಬ್ಲಿಯ ಮೆಂಬರರಾದ ಮ| ರಾ| ಕರ್ಣಿಕ ಕೃಷ್ಣಮೂರ್ತಿರಾವ್ ರವರು ಸ್ಥಳಿಕ ಡಿಸ್ಟ್ರಿಕ್ಟ್ ಬೋರ್ಡುಗಳ ಪರವಾಗಿ ಈ ಸಭೆಗೆ ಆರಿಸಲ್ಪಡಲು ಅರ್ಹರಲ್ಲ ಎಂಬದಾಗಿ ಬೆಂಗಳೂರಲ್ಲಿ ಪ್ರಕಟವಾಗುವ "ಒಕ್ಕಲಿಗರ ಪತ್ರಿಕೆ"ಯಲ್ಲಿ ಪ್ರಕಟವಾದುದರಿಂದ ಸದರಿ ರಾ| ಕೃಷ್ಣಮೂರ್ತಿರಾಯರು "ಒಕ್ಕಲಿಗರ ಪತ್ರಿಕೆ"ಯ ಸಂಘದ ಪ್ರೆಸಿಡೆಂಟ, ಸೆಕ್ರೆಟರಿ ಮತ್ತು ಎಡಿಟರರ ಮೇಲೆ ಬೆಂಗಳೂರು ಸಿಟಿ ಮೇಜಿಸ್ಟ್ರೇಟರಲ್ಲಿ ಮಾನನಷ್ಟ ದಾವೆ ಹೂಡಿದ್ದರು. ಆದರೆ ಮೇಜಿಸ್ಟ್ರೇಟರು ತನಿಕೆ ಪ್ರಾರಂಭದಲ್ಲಿಯೇ ಪ್ರೆಸಿಡೆಂಟರನ್ನೂ ಸೆಕ್ರೆಟರಿಯರನ್ನೂ ಖುಲಾಸುಪಡಿಸಿ ಎಡಿಟರ ವಿಚಾರಣೆ ಮಾತ್ರ ನಡಿಸಿದರು. ಎಡಿಟರರು ವಿಚಾರಣೆಯ ಕಾಲ ತಾನು ಇತರ ಅಗತ್ಯ ಜಂಬರದ ಮೇಲೆ ಇರುವಾಗ ಸಬ್ ಎಡಿಟರರು ಆ ತಪ್ಪನ್ನು ಮಾಡಿದ್ದರೆಂದೂ ಆ ತಪ್ಪು ತನ್ನ ಅವಗಾಹನೆಗೆ ಬಂದಾಕ್ಷಣ ತಾನು ಅದೇ ಪತ್ರಿಕೆಯ ಮತ್ತೊಂದು ಸಂಚಿಕೆಯಲ್ಲಿ ವಾದಿಯ ಕ್ಷಮಾಪಣೆ ಕೇಳಿದ್ದೆನೆಂದೂ ವಾದಿಸಿದ್ದರಿಂದ ಮೆಜಿಸ್ಟ್ರೇಟರು ಎಡಿಟರರನ್ನೂ ಖುಲಾಸುಪಡಿಸಿದರು. ಈ ತೀರ್ಮಾನದ ಮೇಲೆ ಮ| ರಾ| ಕೃಷ್ಣ

ಮೂರ್ತಿರಾಯರು ಮೈಸೂರು ಚೀಫ್ ಕೋರ್ಟಿಗೆ ರಿವಿಜನ್ ಆಗಬೇಕೆಂದು ಬರಕೊಂಡರು. ಚೀಫ್ ಕೋರ್ಟಿನಲ್ಲಿ ಜಸ್ಟಿಸ್ ಸರ್ ಲೆಸ್ಲಿ ಮಿಲ್ಲರವರೂ ಜಸ್ಟಿಸ್ ಹುಮ್ಮಹುಸೇನರವರೂ ಈ ಮೊಕದಮೆಯು ತನಕಿ ನಡಿಸಿ ವಾದಿಯ ಮನವಿಯನ್ನು ತಳ್ಳಿಹಾಕಿ ಈ ಮೊಕದಮೆಯು ಚೀಫ್ ಕೋರ್ಟಿನವರು ಕೈಹಾಕುವಷ್ಟರ ಮಟ್ಟಿಗೆ ಮಹತ್ವವಾದುದಲ್ಲ. ಎಡಿಟರರನ್ನು ಖುಲಾಸೆಪಡಿಸಿದ್ದು ಸರಿಯಲ್ಲದಿದ್ದ ಪಕ್ಷಕ್ಕೂ ವಾದಿಯು ಸಿವಿಲ್ ಕೋರ್ಟಿಗೆ ಹೋಗಬಹುದಿತ್ತು. ಮತ್ತು ಮುದ್ದೆಯಾಳಿಯು ತನ್ನಿಂದಾದ ತಪ್ಪನ್ನು ಸರಿಪಡಿಸಲು ಆದಷ್ಟು ಮಟ್ಟಿನ ಪ್ರಯತ್ನಮಾಡಿ ಕ್ಷಮಾಪಣೆ ಕೇಳಿದ್ದಲ್ಲದೆ ಅದನ್ನು ತನ್ನ ಪತ್ರಿಕೆಯಲ್ಲಿ ತಿದ್ದಿ ಪ್ರಕಟಿಸಿರುತ್ತಾನೆ ಎಂದು ತೀರ್ಮಾನದಲ್ಲಿ ಬರದಿರುವರು.

ಮೈಸೂರು ಮಹಾರಾಜ ಕಾಲೇಜಿಯ ಪ್ರಿನ್ಸಿಪಾಲರಾಗಿದ್ದ ಮೆ| ಟಿ. ಡೆನ್‌ಹಾಮರವರು ಮೈಸೂರು ಯುನಿವರ್ಸಿಟಿಯ ರಿಜಿಸ್ಟ್ರಾರರಾಗಿ ನಿಯಮಿಸಲ್ಪಟ್ಟಿರುವರು.

ತಿರುಚಿನಾಪಳ್ಳಿ ಜಡ್ಜರಾಗಿದ್ದ ಮೆ| ಹಾರ್ಡಿಂಜ ದೊರೆಗಳನ್ನು ಕೊಂದ ಸೈಯದ್ ಇಸ್ಮಯೇಲನಿಗೆ ಇದೇ ತಾ. ೧೨ರಲ್ಲಿ ಫಾಶಿಗೆ ಹಾಕಲಾಯಿತು. ಅವನ ಸಂಬಂಧಿಕರು ಕೇಳಿಕೊಂಡ ಪ್ರಕಾರ ಸರಕಾರದವರು ಹೆಣವನ್ನು ಸಂಬಂಧಿಕರಿಗೆ ಬಿಟ್ಟುಕೊಟ್ಟಿರುವರು.

ಮದ್ರಾಸ್ ಸರಕಾರದವರು ಆಯಾ ಡಿಸ್ಟ್ರಿಕ್ಟುಗಳ ಬೋರ್ಡು ಎಲಿಮೆಂಟರಿ ಶಾಲೆಗಳಲ್ಲಿ ಬೇಕಾದ ಉಪಾಧ್ಯಾಯರನ್ನು ಹೆಚ್ಚಿಸುವರೆಯೂ ಉಪಾಧ್ಯಾಯರ ಸಂಬಳಗಳನ್ನು ಹೆಚ್ಚಿಸುವರೆಯೂ ಹೆಚ್ಚಿಗೆ ಕೆಪಿಟೇಶನ್ ಎಲೋವೆನ್ಸ್ ಕೊಡುವರೆಯೂ ಸೆಕಂಡರಿ ಶಾಲೆ ಕಾಲೇಜುಗಳ ಭಾಷಾಪಂಡಿತರ ಸಂಬಳಗಳ ದರವನ್ನು ಹೆಚ್ಚಿಸುವರೆಯೂ ೧೯೧೧-೧೨ರಿಂದ ೧೯೧೫-೧೬ನೇ ಇಸವಿಗಳಲ್ಲಿ ಸ್ಥಾಪಿತವಾದ ಎಲಿಮೆಂಟರಿ ಶಾಲೆಗಳನ್ನು ನಡಿಸಿಕೊಂಡು ಬರುವರೆಯೂ ಒಟ್ಟಿಗೆ ೧೬,೬೨,೬೩೦ ರೂಪಾಯಿ ಸಬ್‌ಸಿಡಿ ಗ್ರೇಂಟಾಗಿ ಸೆಂಕ್ಷನ್ ಮಾಡಿರುತ್ತಾರೆ. ಈ ಪೈಕಿ ಲೋಕಲ್ ಬೋರ್ಡುಗಳಿಗೆ ೧೫,೧೩,೯೫೩ ರೂಪಾಯಿಗಳೂ ಮುನ್ಸಿಪಲ್ ಕೌನ್ಸಿಲುಗಳಿಗೆ ೧,೪೭,೬೭೭ ರೂಪಾಯಿಗಳೂ ದೊರಕುವವು.

ದಕ್ಷಿಣ ಕನ್ನಡ

P. D. LIMA.

Dental Surgeon, Mangalore.

ಇವರು ಈಗ ತಾನೇ ಸರ್ಕೀಟಿನಿಂದ ಹಿಂತೆರಳಿ ಬಂದಿರುವರು. ಅಮೇರಿಕದಿಂದ ಭಾರೀ ಕೃತಕ ದಂತಗಳನ್ನು ತರಿಸಿಕೊಂಡಿಟ್ಟಿರುವರು. ಈ ಸುಸಮಯವನ್ನು ಕಳಕೊಳ್ಳಬೇಡಿರಿ. ಮಿತವಾದ ದರದಲ್ಲಿ ಹಲ್ಲುಗಳನ್ನು ಸರಿಪಡಿಸಿಕೊಡುವರು.

ಪಿ. ಡಿ. ಲಿಮಾ.
ದಂತ ವೈದ್ಯರು, ಬಡಿಯರರ ಶಾಪಿನ ಬಳಿ,
ಮಂಗಳೂರು

FOR IMMEDIATE SALE.

A Mulgeni property, near Kadri Post Office, yeilding a net income of Rs. 211—3—0.

Apply to:—

Dr. A. A. PEREIRA,
Camp Siddapur,
COORG

ಮಾರಾಟಕ್ಕಿದೆ.

ಕದ್ರಿ ಪೋಸ್ಟ ಆಫೀಸಿನ ಬಳಿ ರೂ. ೨೧೧—೩—೦ ಐನ ಹುಟ್ಟುವಳಿ ಇರುವ ಒಂದು ಮೂಲಗೇಣಿ ಆಸ್ತಿಯು ತ್ವರಿತದಲ್ಲಿ ಮಾರೋಣಾಗುವದು.—ಬೇಕಾದವರು ಕೆಳಗಿನ ವಿಳಾಸಕ್ಕೆ ಬರಿಯುವದು.

ಡಾಕ್ಟರ್ ಎ. ಎ. ಪರೇರ,
ಕ್ಯಾಂಪ್ ಸಿದ್ದಾಪುರ,
ಕೊಡಗು.

ನೋಟೀಸು.

ಮೆಸರ್ಸ್ ಸ್ಟೀವನ್ ಎಂಡ್ ಸನ್,
ಬಿಸ್ಕುಟು ಮೆನ್ಯುಫೆಕ್ಚರರು.

ಇವರು ತಮ್ಮ ಶಾಪನ್ನು ಬಲ್ಮಠ ರಸ್ತೆಯಲ್ಲಿರುವ ಮೆ| ಜೊಕಿನ್ ಲೊರೆನ್ಸ್ ಸಾಲ್ದಾಂಞಾ ಮನೆಯ ಎದುರಿರುವ ಮೆ| ಮೋನ ಪ್ಯಾಸರ ಕಟ್ಟಡಕ್ಕೆ ವೈದಿರುತ್ತಾರೆ.

ಸ್ಟಿವನ್ ಎಂಡ್ ಸನ್,
ಮಂಗಳೂರು.

ಕಾರ್ಕಳ:— ಬಹುಮಾನಪಟ್ಟಿ, ಕೆ. ಸದಾಶಿವ ಭಟ್ಟರವರು ಮದ್ರಾಸು ನ್ಯಾಯವಿಧಾಯಕ ಸಭೆಯ ಮೆಂಬರರಾಗಿ ಆರಿಸಲ್ಪಟ್ಟ ಸಂತೋಷವನ್ನು ಸೂಚಿಸುವ ಬಗ್ಗೆ ಕಾರ್ಕಳ ಬೋರ್ಡು ಎಲಿಮೆಂಟರಿ ಶಾಲಾ ಉಪಾಧ್ಯಾಯರು ತಮ್ಮ ಸ್ವಂತಖರ್ಚಿನಿಂದ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಹಣ್ಣುಕಾಯಿ ಸಕ್ಕರೆಯನ್ನು ಸಮರ್ಪಣೆ ಮಾಡಿಸಿ ಸದರಿ ಶಾಲಾ ಮಕ್ಕಳಿಗೆ ಸಕ್ಕರೆಯನ್ನು ಹಂಚಿ ಉದ್ದೇಶವನ್ನು ಮಕ್ಕಳಿಗೆ ತಿಳಿಸಿ ಬಹುಮಾನಪಟ್ಟಿ ಭಟ್ಟರವರ ಕೀರ್ತಿಯು ನಮ್ಮ ದೇಶದಲ್ಲಿ ಹೆಚ್ಚುಕಾಲ ಉಳಿಯುವಂತೆ ಶ್ರೀ ದೇವರು ಅವರಿಗೆ ಆಯುರಾರೋಗ್ಯವನ್ನು ದಯಪಾಲಿಸುವಂತೆ ಮಕ್ಕಳಿಂದ ದೇವರ ಪ್ರಾರ್ಥನೆಯನ್ನು ಮಾಡಿಸಿ ಶ್ರೀದೇವರ ಪ್ರಸಾದವನ್ನು ಆ ದಿನವೇ ಬಹುಮಾನಪಟ್ಟಿ ಭಟ್ಟರವರಿಗೆ ಕಳುಹಿಸಿಕೊಟ್ಟು ಶಾಲೆಯಲ್ಲಿ ನಡಿಸಿದ ಸಂತೋಷದ ವಿಷಯವನ್ನು ಭಟ್ಟರವರಿಗೆ ಸೂಚಿಸಿದರು, ಶಾಲಾ ಉಪಾಧ್ಯಾಯರೆಲ್ಲರು ಸಂತೋಷ ಸೂಚನೆಯನ್ನು ಕಳುಹಿಸಿಕೊಟ್ಟದಕ್ಕೆ ಅವರು ಪ್ರತಿವಂದನೆಯನ್ನು ಹೇಳಿ ಮಕ್ಕಳಿಗೂ ಉಪಾಧ್ಯಾಯರೆಲ್ಲರಿಗೂ ಶ್ರೀ ದೇವರು ಒಳ್ಳೇದನ್ನು ದಯಪಾಲಿಸಲಿ ಎಂಬದಾಗಿ ಆಶೀರ್ವಾದವನ್ನು ಅತೀ ಸಂತೋಷಚಿತ್ತದಿಂದ ತಿಳಿಸಿರುವರು.

ಬರುವ ಆದಿತ್ಯವಾರ ಹಿಂದು ಬಾಲಿಕಾ ಪಾಠಶಾಲೆಯಲ್ಲಿ ಬಹುಮಾನಪಟ್ಟ ಭಟ್ಟರವರಿಗೆ, ಪೇಟೆಯ ಪ್ರಮುಖ ಗೃಹಸ್ಥರೂ ವಕೀಲರೂ ಕೂಡಿ ಬಹುಮಾನ ಪತ್ರವನ್ನು ಒಪ್ಪಿಸುವರಾಗಿ ತಿಳಿಯುತ್ತೇನೆ.

ಮಂಗಳೂರು.

ಗ್ರಂಥ ವಿಮರ್ಶೆ.

ಶಾರೀರ ಶಾಸ್ತ್ರಸಾರ:—ಗ್ರಂಥಕರ್ತರು ಮ| ರಾ| ಎಲ್. ಸ್ವಾಮಿರಾವ್, ಬಿ. ಎ., ಮೈಸೂರು—ಈ ಪುಸ್ತಕವು ನಮ್ಮ ಕಡೆಗೆ ಅಭಿಪ್ರಾಯಕ್ಕಾಗಿ ಒಂದು ಬಹಳ ದಿವಸಗಳಾದವು. ಇದರಲ್ಲಿ ಗ್ರಂಥಕಾರರು ಶರೀರದ ಕುರಿತು ವಿವರಣೆಯನ್ನು ಸಂಕ್ಷೇಪವಾಗಿಯೂ, ಸುಗಮವಾಗಿಯೂ ಬರೆದಿರುವರು; ಈ ಪುಸ್ತಕದಲ್ಲಿ ೧೨ ಪ್ರಕರಣಗಳಿದ್ದು ಕೊನೆಗೆ, ಈ ಹಕ್ಕು ಪ್ರಕರಣಗಳಲ್ಲಿ ಹೇಳಿದ ವಿಷಯಗಳನ್ನು ಪುನಃ ಸರಿಯಾಗಿ ಜ್ಞಾಪಕಕ್ಕೆ ತರಲು ಸುಲಭವಾಗುವಂತೆ ಪ್ರಶ್ನೆಗಳಿರುವವು. ಅಲ್ಲದೆ, "ಮಾನುಷ ಶರೀರ"ದ ಚಿತ್ರವು ಪುಸ್ತಕದ ಪ್ರಾರಂಭದಲ್ಲಿದ್ದು ಮಧ್ಯ ಮಧ್ಯದಲ್ಲಿ ಸಹ ಆಯಾ ವಿಷಯಕ್ಕನುಗುಣವಾಗಿ ಆಯಾ ಭಾಗದ ಚಿತ್ರವನ್ನು ಕೊಟ್ಟಿರುವ ಕಾರಣ ವಿಷಯವು ಇನ್ನೂ ಸುಬೋಧವಾಗಿದೆ. ಮಾತ್ರವಲ್ಲ, ಗ್ರಂಥಕರ್ತರ ಭಾಷೆಯೂ ಸಾಧಾರಣ ಸ್ತ್ರೀ ಪುರುಷರಿಗೆ ತಿಳಿಯುವಂತೆ ಸುಲಭ ಶೈಲಿಯಲ್ಲಿ ಇರುವದರಿಂದ ಪ್ರಸ್ತಾವನೆಯಲ್ಲಿ ಮ| ರಾ| ಸ್ವಾಮಿರಾಯರು ಹೇಳುವಂತೆ ಲೋವರ್ ಸೆಕೆಂಡರಿ ವಿದ್ಯಾರ್ಥಿಗಳಿಗೆ ಮಾತ್ರವಲ್ಲ ಬೇರೆ ಸಾಮಾನ್ಯ ವಾಚಕರಿಗೂ ಈ ಪುಸ್ತಕದಿಂದ ಜ್ಞಾನಲಾಭವಾಗದೆ ಇರದು. ಇವರು ಉಪಯೋಗಿಸಿದ "ಮೊದಲು ಬಳಿ" ಈ ಶಬ್ದವು ಅಪೂರ್ವವಾಗಿದ್ದರೂ "ಮಸ್ತಿಷ್ಕ ಪುಂಜ"ವೆಂಬ ಸಂಸ್ಕೃತ ಶಬ್ದದಲ್ಲಿದ್ದ ಅರ್ಥಗ್ರಾಹಕತೆಯನ್ನೂ ಗಾಂಭೀರ್ಯವನ್ನೂ ಉಂಟುಮಾಡಲಾರದು. ಅದರೆ ಇವರಿಗೆ ಕನ್ನಡ ಶಬ್ದಗಳಲ್ಲಿಯೇ ವಿಶೇಷ ತಾತ್ಪರ್ಯವಿರಬಹುದೆಂದು ಗ್ರಹಿಸಿದರೆ "ಬೆನ್ನೆಲುಬು" ಈ ಕನ್ನಡ ಶಬ್ದವನ್ನು ಬಿಟ್ಟು "ಪೃಷ್ಠವಂಶ" ಎಂಬ ಸಂಧಿಯಿಂದ ಪ್ರತೀಕಟಿವಾದ ಸಂಸ್ಕೃತ ಪದವನ್ನು ಅವರು ಪ್ರಯೋಗಿಸಿರುವರು. ಇಂಥಾ ಒಂದೆರಡು ಸಂಗತಿಗಳನ್ನು ಬಿಟ್ಟರೆ ಈ ಪುಸ್ತಕವು ಉತ್ತಮವಾಗಿದೆಂಬುದಕ್ಕೆ ಸಂದೇಹವಿಲ್ಲ. ಕನ್ನಡ ಭಾಷೆಯಲ್ಲಿ ಇಂಥಾ ಶಾಸ್ತ್ರೀಯ ಪುಸ್ತಕಗಳು ಅತ್ಯಗತ್ಯವಾಗಿವೆ. ಕನ್ನಡಿಗರು ಗ್ರಂಥಕಾರರ ಪರಿಶ್ರಮವನ್ನು ಸಾರ್ಥಕಗೊಳಿಸುವರೆಂದು ನಾವು ನಂಬುತ್ತೇವೆ.

ಇಲ್ಲಿಯ ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸೆನಿಟರಿ ಆಫೀಸರಾಗಿರುವ ರಾವ್ ಸಾಹೇಬ್ ಪಿ. ವರ್ಗಿಸರವರು ರೂ. ೩೫೦ರ ಸೀನಿಯರ್ ಗ್ರೇಡಿಗೆ ಬಡ್ತಿ ಹೊಂದಿರುತ್ತಾರೆ.

ಮಲೆಬಾರು ಮತ್ತು ದಕ್ಷಿಣಕನ್ನಡಾ ಜಿಲ್ಲೆಗಳ ವರ್ಗದಾರರ ಪರವಾಗಿ ಮದ್ರಾಸ್ ನ್ಯಾಯವಿಧಾಯಕ ಸಭೆಯ ಮೆಂಬರುತನಕ್ಕೆ ಉಮೇದ್ವಾರರಾಗಿದ್ದ ಮ| ರಾ| ಕಾವಲಪರ ಮೂಪಿಲ್ ನಾಯರ್ ಮತ್ತು ಮ| ರಾ| ಮನ್ನಾರ್‌ಗಾಟ್ ಮೂಪಿಲ್ ನಾಯರರ ಚುನಾವಣೆ ನಡೆದು ಮ| ರಾ| ಕಾವಲಪರ ಮೂಪಿಲ್ ನಾಯರರಿಗೆ ೧೪೬ ಓಟುಗಳೂ, ಮ| ರಾ| ಮನ್ನಾರ್‌ಗಾಟ್ ಮೂಪಿಲ್ ನಾಯರರಿಗೆ ೧೦೧ ಓಟುಗಳೂ ದೊರಕಿರುವವು. ಹೀಗೆ ಮ| ರಾ| ಕಾವಲಪರ ಮೂಪಿಲ್ ನಾಯರರಿಗೆ ಹೆಚ್ಚಿನ ಓಟುಗಳು ದೊರಕ್ಕಿದುದರಿಂದ ವರ್ಗದಾರರ ಪರವಾಗಿ ಅವರು ಮದ್ರಾಸ್ ನ್ಯಾಯವಿಧಾಯಕ ಸಭೆಯ ಮೆಂಬರರಾಗಿ ಆರಿಸಲ್ಪಟ್ಟಿರು ಎಂತ ತಿಳಿಸಲು ಸಂತೋಷಪಡುತ್ತೇವೆ.

ಡಿಸ್ಟ್ರಿಕ್ಟ್ ಪೋಲಿಸ್ ಸುಪರಿಂಟೆಂಡೆಂಟರ ಹೆಡರಾಗಿದ್ದ ಪೋಲಿಸ್ ಸಬ್ ಇನ್ಸ್‌ಪೆಕ್ಟರ್ ರಾ| ಕೃಷ್ಣ ಸಟ್ರಗೆ

ಕಾಸರಗೋಡ ಕಸಬೆಗೂ, ಕಾಸರಗೋಡು ಕಸಬೆಯಲ್ಲಿ ಸಬ್ ಇನ್ಸ್‌ಪೆಕ್ಟರರಾಗಿರುವ ರಾ। ರಾಮಕೃಷ್ಣರಾಯರಿಗೆ ಇಲ್ಲಿಯ ಟೌನಿಗೂ, ಟೌನಿನಲ್ಲಿ ಸಬ್ ಇನ್ಸ್‌ಪೆಕ್ಟರರಾಗಿರುವ ಮೆ। ಲೋಬರಿಗೆ ಬಂಟ್ವಾಳಕ್ಕೂ, ಬಂಟ್ವಾಳದ ರಾ. ಯು. ತಿಮ್ಮಪ್ಪನವರಿಗೆ ಚಾರ್ಮಾಡಿ ಸ್ಟೇಶನಿಗೂ ವರ್ಗವಾಗಿರುದೆ ಎಂತ ತಿಳಿಯುತ್ತೇವೆ.

ಮೆ। ಅಲ್ವರಿಸ್ ಬಿ. ಎ. ಎಲ್. ಎಲ್. ಬಿಯವರ ಚಿನ್ನದ ವಾಚು ಸರಪಣಿಯು ಇದೇ ತಾ. ೧೯ನೇ ರಾತ್ರಿ ಕಳವಾಗಿ ಹೋಗಿತ್ತು. ಮೆ। ಅಲ್ವರಿಸರ ಕೆಲಸದವನಾದ ಜೋನಿ ಲುವಿಸ್ ಎಂಬವನು ಅಂದೇ ರಜೆ ತಕ್ಕೊಂಡು ಹೋಗಿದ್ದುದರಿಂದ ಪೋಲಿಸ್ ಕನ್‌ಸ್ಟೇಬಲ್ ಮಿಂಗೆಲ್ ಲೋಬು ಎಂಬವನು ಅವನನ್ನು ಹುಡುಕಿಕೊಂಡು ಹೋಗಿ ತಾ. ೧೮ರಲ್ಲು ಪಡುಬಿದ್ರಿಯಲ್ಲಿ ಜೋನಿ ಲುಯಿಸನ ಮಾವನ ಮನೆಯಲ್ಲಿ ಅವನನ್ನು ಹಿಡಿದು ಮನೆ ಜಡ್ತಿ ಮಾಡಿದ್ದಲ್ಲಿ ಕಳವಾದ ಸರಪಣಿಯು ದೊರಕಿತೆಂದೂ ಪೋಲಿಸಿನವರು ಅವನನ್ನು ಕೈದು ಮಾಡಿ ವಿಚಾರಣೆಗೆ ಗುರಿಪಡಿಸಿರುವರೆಂದೂ ತಿಳಿಯುತ್ತೇವೆ.

ಇದೇ ತಾ. ೧೭ನೇ ರಾತ್ರಿ ಜಪ್ಪು ದೊಡ್ಡಿಯಲ್ಲಿ ಒಂದು ವಿಚಿತ್ರ ಕಳವು ನಡೆದಿರುವದು. ದೊಡ್ಡಿಯಲ್ಲಿ ಕಟ್ಟಿದ್ದ ಒಂದು ಆಡನ್ನು ಯಾರೋ ಕಳ್ಳರು ಕೊಂದು ಮಾಂಸವನ್ನು ತಕ್ಕೊಂಡು ಹೋಗಿ ಚರ್ಮವನ್ನು ಅಲ್ಲಿಯೇ ಬಿಟ್ಟು ಹೋಗಿರುವರಂತೆ.

ಇಲ್ಲಿಯ ಡಿಸ್ಟ್ರಿಕ್ಟ್ ಬೋರ್ಡು ಇಂಜಿನಿಯರರಾಗಿ ನೇಮಿಸಲ್ಪಟ್ಟ ಮ। ರಾ। ಯು. ಸಂಜೀವರಾವ್, ಎ. ಎಮ್. ಐ. ಸಿ. ಇರವರು ಇದೇ ತಾ. ೧೮ರಲ್ಲು ಚಾರ್ಜು ತಕ್ಕೊಂಡಿರುತ್ತಾರೆ.

ಬೀಬಿ ಅಲಾಬಿಯ ಬಳಿ ಹಗಲು ಹೊತ್ತಿಗೆ ಉಳ್ಳಾಲ ಪಳ್ಳಿಬ್ಯಾರಿಯನ್ನು ಕೊಂದುಹಾಕಿದನೆಂಬದಾಗಿ ಕೈದು ಮಾಡಲ್ಪಟ್ಟ ಬಜಿಲ ಪಳ್ಳಿಬ್ಯಾರಿಯ ಮೇಲಿನ ಖೂನಿ ಮೊಕದಮೆ ತನಕಿಯು ಇಲ್ಲಿಯ ಟೌನ್ ಮೇಜಿಸ್ಟ್ರೇಟರಲ್ಲಿ ನಡಿಯುತ್ತಿದೆ. ಇದೇ ತಾ. ೧೮ರಲ್ಲು ಟೌನ್ ಮೆಜಿಸ್ಟ್ರೇಟರು ಈ ಖೂನಿ ನಡೆದ ಸ್ಥಳ ತನಕಿ ನಡಿಸಿರುತ್ತಾರೆ.

ಇಲ್ಲಿ ಸಿವಿಲ್ ಅಸಿಸ್ಟಾಂಟ ಸರ್ಜನರಾಗಿರುವ ಮ। ರಾ। ಬಿ. ರಾಮಚಂದ್ರರಾವರು ಕಡಪ್ಪ ಡಿಸ್ಟ್ರಿಕ್ಟಿನ ಆಕ್ಟಿಂಗ್ ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸೆನಿಟರಿ ಆಫೀಸರರಾಗಿ ನೇಮಿಸಲ್ಪಟ್ಟಿರುತ್ತಾರೆ.

ಡಾಕ್ಟರ್ ಪೇಜಾವರ ಭವಾನಿರಾಯರು ಇಲ್ಲಿಯ ಸಿವಿಲ್ ಅಸಿಸ್ಟಾಂಟ ಸರ್ಜನರಾಗಿ ನೇಮಿಸಲ್ಪಟ್ಟಿರುತ್ತಾರೆ.

ಮದ್ರಾಸ್ ಆಸ್ಪತ್ರಿಹಡಗಕ್ಕೆ ಜೂನ ತಿಂಗಳಲ್ಲಿ ಮೆ। ಆರ್. ಎಸ್. ಪರ್ಶಿವಲ್ ರೂ. ೨೫; ಮ। ರಾ। ಆ. ಭವಾನಿರಾವ್ ರೂ. ೧೦; ಲಾರ್ಡ ಬಿಶೋಪ ಡಾಕ್ಟರ್ ಪೌಲ್ ಪಿರೆನಿ ರೂ. ೧೦; ರಾವ್ ಬಹದ್ದೂರ್ ಎನ್. ಸುಬ್ಬರಾವ್ ರೂ. ೮; ಮ। ರಾ। ಎ. ಶ್ರೀನಿವಾಸಪೈ ರೂ. ೪; ಮ। ರಾ। ಎಮ್. ಮುಕುಂದರಾವ್ ರೂ. ೩; ರಾವ್ ಬಹದ್ದೂರ್ ಆರ್. ರಾಮರಾವ್ ರೂ. ೨; ಮ। ರಾ। ಕೆ. ಪಿ. ರಾಮರಾವ್ ರೂ. ೨; ಮೆ। ಎಮ್. ನೌರೋಜಿ ರೂ. ೨; ಮ। ರಾ। ಗೊಲ್ಲರಕೇರಿ ಕೃಷ್ಣರಾವ್ ರೂ. ೨; ಮ। ರಾ। ಜಿ. ಸುವರ್ಣ ರೂ. ೧; ಈ ಪ್ರಕಾರ ವಂತಿಗೆ ಕೊಟ್ಟಿರುತ್ತಾರೆ.

ಜುಲಾಯಿ ತಾ. ೧೨ರಲ್ಲು ಬಂಟ್ವಾಳ ಫೋರ್ಜರಿ ಮೊಕದಮೆಯು ಸೆಶ್ಶನ್ಸಿನಲ್ಲಿ ತನಕಿಗೆ ಪ್ರಾರಂಭವಾಯಿತು. ಈ ಮೊಕದಮೆಯಲ್ಲಿ ಬಂಟ್ವಾಳ ಪೋಸ್ಟು ಆಫೀಸಿನ ಬಟ್ವಾಡೆಯವನು ಮನಿಆರ್ಡರ್ ಹಣವನ್ನು ಹಣ ತಲಪತಕ್ಕವನಿಗೆ ಕೊಡದೆ ಮನಿಆರ್ಡರ್ ಫಾರ್ಮಿನಲ್ಲಿ ಫೋರ್ಜರಿ ಮಾಡಿದ್ದನೆಂತ ಆಪಾದಿಸಲ್ಪಟ್ಟಿದ್ದನು. ಆಪಾದಿತನು ರೂ. ೨೫, ೩೦ ಮತ್ತು ೨೦ನ್ನು ಕೊಡಬೇಕಾದವರಿಗೆ ಕೊಡದೆ ಮೋಸ ಮಾಡಿದನೆಂಬದಾಗಿ ಜಡ್ಜರು ಅಭಿಪ್ರಾಯಪಟ್ಟು ಒಂದೊಂದು ತಕ್ಸೀರಿನ ಮೇಲೆ ಎಂಟೆಂಟು ತಿಂಗಳ ಕಠಿಣ ಸಜಾ ವಿಧಿಸಿದರು.

ಅನಂತರ ಕುಂದಾಪುರ ಸಬ್ ಮೇಜಿಸ್ಟ್ರೇಟರಿಂದ ಕಮಿಟ್ ಮಾಡಲ್ಪಟ್ಟ ಮೊಕದಮೆಯು ತನಕಿಯಾಯಿತು. ಈ ಮೊಕದ್ದಮೆಯಲ್ಲಿ ನಡಿಗೆಹಿತ್ಲು ಮಂಜ ಎಂಬವನು ಜನವರಿ ತಾ. ೪ರಲ್ಲು ಚೆಪ್ಪರ ಮಾರ್ಲ ಎಂಬವನನ್ನು ಕೊಂದನೆಂಬದಾಗಿ ಇಂಡಿಯನ್ ಪಿನಲ್‌ಕೋಡಿನ ೩೦೪ನೇ ಪ್ರಕರಣದ ಮೇಲೆ ವಿಚಾರಣೆಗೆ ಗುರಿಯಾಗಿದ್ದನು. ಜಡ್ಜರು ಆಪಾದಿತನು ತಪ್ಪಿತಸ್ಥನಲ್ಲವೆಂದು ಅಭಿಪ್ರಾಯಪಟ್ಟು ಅವನನ್ನು ಖುಲಾಸು ಪಡಿಸಿರುವರು.

ಇಲ್ಲಿಯ ಮುನ್ಸಿಪಲ್ ಕೌನ್ಸಿಲಿನ ಈ ತಿಂಗಳ ಸಾಮಾನ್ಯ ಸಭೆಯು ಇದೇ ತಾ. ೨೫ನೇ ಮಂಗಳವಾರ ಕೂಡುವದು.

ಮ। ರಾ। ರಾ। ಸದಾಶಿವ ಭಟ್ಟರವರು ಮದ್ರಾಸು ನ್ಯಾಯನಿರ್ಮಾಣ ಸಭೆಯ ಮೆಂಬರರಾಗಿ ಆರಿಸಲ್ಪಟ್ಟ ಸಂತೋಷ ಮತ್ತು ಈ ಜಿಲ್ಲೆಗೆ ಅಪೂರ್ವವಾಗಿ ದೊರಕಿದ ಈ ಬಹುಮಾನ ಸೂಚನಾರ್ಥವಾಗಿ ನಾಳೆ ದಿನ ಇಲ್ಲಿಯ ಕೊಸ್ಮೊಪೊಲಿಟನ್ ಕ್ಲಬ್ಬಿನಲ್ಲಿ ಪಟ್ಟಣಿಗರ ಸಭೆಯು ಕೂಡುವದು. ಜಿಲ್ಲೆಯ ಎಲ್ಲಾ ಕಡೆಗಳ ಪ್ರತಿನಿಧಿಗಳಿಗೆ ಈ ಸಭೆಗೆ ಬರಲು ಆಮಂತ್ರಣಗಳು ಕೊಡೋಣಾಗಿವೆ.

ನಗರಕಾರ್ ಎಂಡ್ ಸನ್ಸ್‌ರವರ ವಿಜ್ಞಾಪನೆ.

ಯುದ್ಧದ ದೆಸೆಯಿಂದ ಸಮಸ್ತ ಬಡವೆಗಳ ಕ್ರಯವು ಏರಿರುವದು. ವಸ್ತ್ರದ ಕ್ರಯವೂ ವಿಪರೀತವಾಗಿ ಏರಿಹೋಗಿದೆ ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕೆಂತಿಲ್ಲ. ಅನೇಕ ಊರುಗಳಿಂದ ಸಂಗ್ರಹಿಸಲ್ಪಟ್ಟಿರುವ ನಾನಾ ಸಮಾನೆಯ ಜವಳಿಯನ್ನು ನಮ್ಮ ಗಿರಾಕಿಗಳೂ ಇತರರೂ ಸುಲಭ ದರಗಳಲ್ಲಿ ಏಲಂ ಮೂಲಕ ಪಡಕೊಳ್ಳುವಂತೆ ಈ ತಿಂಗಳ ತಾ. ೨೪ರಿಂದ ಏಲಮನ್ನು ನಮ್ಮ ಮಳಿಗೆಗಳಲ್ಲಿಯೇ ಪ್ರಾರಂಭಿಸುವೆವು. ಲಾಭದಲ್ಲಿಯೇ ವಿಶೇಷ ದೃಷ್ಟಿಯಿಡದೆ ಈ ಏಲಂ ನಡಿಸೋಣಾಗುವದರಿಂದ ಸರ್ವರೂ ಇದರ ಪ್ರಯೋಜನವನ್ನು ಪಡಕೊಳ್ಳಬೇಕಾಗಿ ವಿಜ್ಞಾಪಿಸಿಕೊಳ್ಳುತ್ತೇವೆ.

ಹೊಸದುರ್ಗ:— ಇಲ್ಲಿಂದ ಸುಮಾರು ೨ ಮೈಲು ಈಶಾನ್ಯ ದಿಕ್ಕಿನಲ್ಲಿರುವ ದೆಳಿಕ್ಕೊತು ಎಂಬಲ್ಲಿ ಒಂದು ಬೋರ್ಡು ಎಲಿಮೆಂಟರಿ ಶಾಲೆಯನ್ನು ಉದಾರ ಗವರ್ನಮೆಂಟಿನವರು ಸ್ಥಾಪಿಸಿ ಸುಮಾರು ವರ್ಷಗಳಾದರೂ ಸದರಿ ಶಾಲೆಯ ಹೆಬ್ಬಾಗಿಲು ಇನ್ನೂ ಕಂಟ್ರಾಕ್ಟದಾರರಿಂದಲ್ಲೋ ಯಾರಿಂದಲೋ ಸರಿಪಡಿಸಲಿಲ್ಲ. ಇಂದಿಗೆ ಸುಮಾರು ಎರಡು ಮೂರು ತಿಂಗಳ ಈಚೆಗೆ ಅದು ಎರಡು ಮೂರು ಹುಡುಗರ ಮೈಮೇಲೆ ಬಿದ್ದು ಸ್ವಲ್ಪ ಸ್ವಲ್ಪ ಜಖಂ ಆಗಿತ್ತು. ಆ ಜಖಂ ೨ ದಿವಸಗಳಲ್ಲಿ ವಾಸಿಯಾಗಿದ್ದರಿಂದ ಯಾರಿಗೂ ತಿಳಿಯಪಡಿಸಲು ಅಗತ್ಯವಿಲ್ಲವಿತ್ತು. ಎರಡು ಮೂರು ದಿವಸಗಳ ಈಚೆಗೆ ಬಾಲಕ ದರ್ಜೆಯ ಒಬ್ಬ ಸಣ್ಣ ಹುಡುಗನ ಕಾಲಿನ ಮೇಲೆ ಅದು ಬಿದ್ದು ಬಹಳ ಜಖಂ ಆದ್ದರಿಂದ ಕ್ರಮವಾಗಿ ಶಾಲೆಗೆ ಬರುವ ಹುಡುಗನು ನಡಿಯಲಿಕ್ಕೆ ಆಗದೆ ಮಲಗಿದಲ್ಲಿಂದ ಏಳಲಿಕ್ಕಾಗುವದಿಲ್ಲ. ಅಬಲರಾದ ಚಿಕ್ಕ ಮಕ್ಕಳು ದಾರಿಗೆ ತಡೆಯಾಗಿ ಇಟ್ಟ ಅತಿ ಭಾರವಾದ ಈ ಹೆಬ್ಬಾಗಲನ್ನು ಅತಿಕ್ರಮಿಸಿ ಹ್ಯಾಗೆ ದಾಟಬೇಕೋ ಎಂಬ ಸಂಗತಿಯು ಇಲಾಖೆಯ ಉದ್ಯೋಗಸ್ಥರೇ ಆಲೋಚಿಸಿದರೆ ತಿಳಿಯುವದು. ಹೆಬ್ಬಾಗಿಲನ್ನು ತಡೆಯಾಗಿಡದಿದ್ದರೆ ಗ್ರೌಂಡಿನ ಒಳಗಿರುವ ಸಸ್ಯಾದಿಗಳನ್ನು ದನ ಮುಂತಾದವುಗಳು ಬಂದು ತಿನ್ನುವವು. ಆದ್ದರಿಂದ ಮೇಲುದ್ಯೋಗಸ್ಥರು ಈ ಕುರಿತು ಸ್ವಲ್ಪ ವಿಮರ್ಶಿಸಿ ಮಕ್ಕಳ ಹಿತಚಿಂತನೆಯನ್ನು ಆಲೋಚಿಸುವದಾದರೆ ಬಹಳ ಉಪಕಾರವಾಗುತ್ತಿತ್ತು. ಅಷ್ಟುಮಾತ್ರವಲ್ಲ; ಅತೀ ಶ್ರದ್ಧೆಯಿಂದ ಮಕ್ಕಳನ್ನು ಕಲಿಸುತ್ತಿರುವ ಸ್ಥಳೀಕ ಉಪಾಧ್ಯಾಯರಾದ ಪಿ. ಕುಂಞಂಬು ನಾಯರ ಎಂಬವರನ್ನು ಇಲ್ಲಿಂದ ತ್ರಿಕರಿಪ್ಪೂರ ಎಂಬಲ್ಲಿಗೆ ವರ್ಗಾಯಿಸಲಾಯಿತಂತೆ. ಇದು ಸಹಾ ಮಕ್ಕಳ ಕಲಿಯುವಿಕೆಗೆ ಒಂದು ಹಾನಿಕರವಾದ ಸಂಗತಿಯೇ.

ಜೇನಸು ಧಾರಣೆ. (ರಖಂ)

ಮಸ್ಸಿ ಹೊಸ ಅಕ್ಕಿ	6— 0—0	6— 4—0
ಗಾಡಿ ರಾಶಿ ಹೊಸ ,,	5— 3—0	5— 4—0
ಗುಡ್ಡು ,, ,,	5—10—0	5—14—0
ಅವ್ವಲ್ ಬೆಳ್ತಿಗೆ ,,	6— 4—0	6—12—0
ಗುಡ್ಡು ಬೆಳ್ತಿಗೆ ,,	5—12—0	6— 0—0
ಊಟು ಸುಗ್ಗಿ ,,	5— 8—0	5—13—0
ರಂಗೂನು ಬೆಳ್ತಿಗೆ ಗೋಣಿ ೧ರ	9—10—0	9—12—0
ಗೋದಿ ಗೋಣಿ ೧ರ	11—12—0	12— 0—0
ಹುರುಳಿ ಗೋಣಿ ೧ರ	6— 2—0	6— 8—0
ಕಡಲೆ ಗೋಣಿ ೧ರ ಬೊಂಬೈ	8—12—0	10— 8—0
ತೊಗರಿ ಗೋಣಿ ೧ರ		11— 4—0
ತೊಗರಿ ಬೇಳೆ ಗೋಣಿ ೧ರ	12— 8—0	14— 8—0
ಉದ್ದು ಗೋಣಿ ೧ರ	10— 8—0	11— 4—0
ಊರುಬೆಲ್ಲ ಖಂಡಿ ೧ರ		50— 0—0
ಉಪ್ಪು ಗೋಣಿ ೧ರ	4— 8—0	4—10—0
ಕೊಬ್ರಿ ಖಂಡಿ ೧ರ	95— 0—0	105—8—0
ಕೊಬ್ರಿ[illegible] ಖಂಡಿ ೧ರ		16— 8—0
ಎಳ್ಳಿಂಡಿ ಖಂಡಿ ೧ರ ಬೊಂಬೈ	25— 0—0	32— 8—0
ಕೊಬ್ರಿ ಎಣ್ಣೆ ಮಣ ೧ರ	7— 6—0	7—12—0
ಎಳ್ಳೆಣ್ಣೆ ಮಣ ೧ರ (ಕುರಾಸನ)		5— 4—0
ಚಿಮಣಿ ಎಣ್ಣೆ ಪೆಟ್ಟಿಗೆ ೧ರ	6— 0—0	6—11—0
ಮೋರಿಸ್ ಸಕ್ಕರೆ ಮಣ ೧ರ		4—14—0
ಕಾಫಿ ಖಂಡಿ ೧ರ	225— 0—0	235—0—0
ಹೊಸಬೇಗೋಟು ಖಂಡಿ೧ರ	82— 0—0	85— 0—0
ಹೊಸ ಗೇರುಬೀಜ ಮುಡಿ ೧ರ		2—11—0
ಕಬ್ಬಿಣ ಖಂಡಿ ೧ರ		75— 0—0
ತಾಂಬ್ರ ತಗಡು ಮಣ ೧ರ	28— 0—0	30— 0—0
ತಾಂಬ್ರ ಪಾತ್ರೆಗಳು ಮಣ ೧ರ	23— 0—0	28— 0—0
ಚೀನಿ ಬೆಳ್ಳಿ ಸೇರು ೧ರ		24— 0—0
ಸಣ್ಣ ಹೆಸರು ಮುಡಿ ೧ರ	5— 4—0	5— 6—0

1916-17ನೇ ಇಸವಿಯ ಇಂಡಿಯಾ ಗವರ್ನಮೆಂಟ್ ಕನ್‌ವರ್ಶನ್ ಲೋನ್ ಎಂಬ ಮಾರ್ಪಡಿಸಬಹುದಾದ ಸಾಲವು.

ಪೋಸ್ಟ್ ಆಫೀಸು ಉಪಭಾಗವು.

1931ನೇ ಇಸವಿಗೆ ಮುಂಚಿತವಾಗಿ ಸಲ್ಲಿಸತಕ್ಕದ್ದಲ್ಲದ ಪರಂತು 1936 ನೇ ಇಸವಿಯೊಳಗಾಗಿ ನೂರಕ್ಕೆ ನೂರರಂತೆ ಪೂರಾ ಮರುಪಾವತಿಯಾಗತಕ್ಕ ಸಾಲವು.

ಸಾಲಿಯಾನಾ ವರ್ಷ ಒಂದರ ಸೇಕಡಾ 4ರ ದರದ ಬಡ್ಡಿಯು ಅರ್ಧವರ್ಷಕ್ಕೊಮ್ಮೆ ಎಂದರೆ ಎಪ್ರೀಲ್ 1ನೇ ತಾರೀಕಿನಲ್ಲಿಯೂ ಮತ್ತು ಅಕ್ಟೋಬರು 1 ನೇ ತಾರೀಕಿನಲ್ಲಿಯೂ ಸಲಾಯಿಸಲ್ಪಡುವುದು.

ಸೇಕಡಾ 3ರಂತೆ ಮತ್ತು 3½ಯಂತೆ ರೂಪಾಯಿ ನಾಣ್ಯದಲ್ಲಿರುವ ಸಾಲಗಳನ್ನು ಮಾರ್ಪಡಿಸಿಕೊಳ್ಳಲು ಅರ್ಜಿದಾರರು ಅರ್ಹರಾಗಿರುತ್ತಾರೆ.

ಅರ್ಜಗಳು 100 ರೂಪಾಯಿ-ಯಾ-ಅದರ ಅಪವರ್ತ್ಯಗಳ ಬಗ್ಗೆ (ಎಂದರೆ 200, 300 ಈ ಮೇರೆಗೆ) ಇದ್ದು 5,000 ರೂಪಾಯಿಗಳಿಗೆ ಮೀರಿರ ಕೊಡದು ಮತ್ತು ಸೇವಿಂಗ್ಸ್ ಬ್ಯಾಂಕ್ ಕೆಲಸವು ನಿರ್ವಹಿಸಲ್ಪಡುವ ಪ್ರತಿಯೊಂದು ಟಪ್ಪಾಲ್ ಆಫೀಸಿನಲ್ಲಿಯೂ 1916ನೇ ಇಸವಿಯ ಜೂನ್ 14ನೇ ತಾರೀಖಿನಿಂದ 1916ನೇ ಇಸವಿಯ ಸಪ್ಟಂಬರ್ 25ನೇ ತಾರೀಖಿನ (ಇದು ಸೇರಿ) ವರೆಗೆ ಅವು ಅಂಗೀಕರಿಸೋಣಾಗುವವು. ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟರನಾಗಿದ್ದರೂ ಅಲ್ಲದಿದ್ದರೂ ಸರಿಯೇ, ಯಾವನೇ ಆದರೂ ಅರ್ಜಿನಾಡಬಹುದು.

ಎಷ್ಟು ಮೊಬಲಗುಗಳಿಗೆ ಅರ್ಜಿಮಾಡಲ್ಪಡುತ್ತದೋ ಆ ಪೂರಾ ಮೊಬಲಗುಗಳನ್ನು ಅರ್ಜಗಳ ಸಂಗಡ ಡಿಪಾಜಿಟು ಮಾಡತಕ್ಕದ್ದು ಮತ್ತು ಅಷ್ಟೇ ಮೊಬಲಗುಗಳ (ಗವರ್ನಮೆಂಟ್ ಸೆಕ್ಯೂರಿಟಿ) ಪತ್ರವು ಅರ್ಜಿದಾರರಿಗೆ ಕೊಡಲ್ಪಡುವುದು. ಡಿಪಾಜಿಟುಗಳು ರೊಕ್ಕವಾಗಿ ಕೊಡಲ್ಪಡಬಹುದು ಅಥವಾ ಪೂರಾ ಯಾ ಒಂದು ಭಾಗವು ಪ್ರತ್ಯೇಕವಿರುವ ಸೇವಿಂಗ್ಸ್ ಬ್ಯಾಂಕ್ ಲೆಕ್ಕಗಳಿಂದ ವಿತ್‌ಡ್ರಾಯಲ್ ಯಾನೆ ಈಸುಕೊಳ್ಳುವದರ ಮೂಲಕವಾಗಿ ಕೊಡಲ್ಪಡಬಹುದು.

ಟಪ್ಪಾಲು ಆಫೀಸಿನ ಮುಖಾಂತರ ಪಡೆದ ಮತ್ತು ಟಪ್ಪಾಲು ಆಫೀಸಿನ ಅಧಿಕಾರಿಗಳ ವಶದಲ್ಲಿಯೇ ಇಡಲ್ಪಟ್ಟ ಹೊಸ ಸಾಲಪತ್ರಗಳ ಬಡ್ಡಿಯ ಮೇಲೆ ಇನ್‌ಕಮ್‌ಟ್ಯಾಕ್ಸು ಹೊರಿಸೋಣಾಗಲಿಕ್ಕಿಲ್ಲ.

ಅರ್ಜಿದಾರರಿಗೆ, ರೂಪಾಯಿ ನಾಣ್ಯದಲ್ಲಿರುವ ಇಂಡಿಯಾ ಗವರ್ನಮೆಂಟಿನವರ ಸೇಕಡಾ 3½ ಬಡ್ಡಿಯ ಸೆಕ್ಯೂರಿಟಿ ಪತ್ರಗಳನ್ನು ಹೊಂದಿದವರು ಅವುಗಳ ಅಂಕಿತ ಮೌಲ್ಯದ ಸೇಕಡಾ 96 ರೂಪಾಯಿ ಪ್ರಕಾರವೂ ಅಥವಾ ಸೇಕಡಾ 3ರ ಬಡ್ಡಿಯ ಸೆಕ್ಯೂರಿಟಿ ಪತ್ರಗಳನ್ನು ಹೊಂದಿದವರು ಅವುಗಳ ಅಂಕಿತ ಮೌಲ್ಯದ ಸೇಕಡಾ 82½ರ ಪ್ರಕಾರವೂ, ಅವರು ಪಡೆಯುವ ಹೊಸ ಸಾಲದ ಮೊಬಲಗಿಗೆ ಸಮಾನವಾಗುವಷ್ಟು ಮೊಬಲಗಿನ ಮಟ್ಟಿಗೆ ಪರಭಾರೆಮಾಡಿ ಹೊಸ ಸಾಲವಾಗಿ ಮಾರ್ಪಡಿಸುವ ಹಕ್ಕುಗಳು ಕೊಡಲ್ಪಡುವುವು.

ಮಾರ್ಪಡಿಸುವ ಹಕ್ಕುಗಳುಳ್ಳವರು ಮಾರ್ಪಡಿಸುವ ಬಗ್ಗೆ ಮಾಡುವ ಅರ್ಜಗಳು, 1916ನೇ ಇಸವಿಯ ಅಕ್ಟೋಬರ್ 16ನೇ ತಾರೀಖಿನಿಂದ 1917ನೇ ಇಸವಿಯ ಜನವರಿ 16ನೇ ತಾರೀಖಿನ (ಇದು ಸೇರಿ) ವರೆಗೆ ಅಂಗೀಕರಿಸಲ್ಪಡುವುವು. ಮಾರ್ಪಡಿಸೋಣಾಗುವ ಸೆಕ್ಯೂರಿಟಿ ಪತ್ರಗಳ ಬಾಬತು 1916ನೇ ಇಸವಿಯ ಸಪ್ಟಂಬರು 30 ತಾರೀಖಿನ ವರೆಗಿನ ಬಡ್ಡಿಯು ಮಾರ್ಪಡಿಸುವ ಕಾಲದಲ್ಲಿ ರೊಕ್ಕವಾಗಿ ಸಲಾಯಿಸಲ್ಪಡುವುದು. ಇವುಗಳ ಬದಲಾಗಿ ಸಾದರುಮಾಡಲ್ಪಟ್ಟ ಹೊಸ ಸಾಲದ ಮೇಲಣ ಬಡ್ಡಿಯು 1916ನೇ ಇಸವಿಯ ಅಕ್ಟೋಬರ 1ನೇ ತಾರೀಖಿನಿಂದ ಎಣಿಸಲ್ಪಡುವುದು.

ತಪಸೀಲು ಮಾಹಿತಿ ಅಡಗಿರುವ ನೋಟೀಸಿನ ನಕಲುಗಳು ಮತ್ತು ಅರ್ಜಿಯ ಫಾರಂಗಳನ್ನು ಸೇವಿಂಗ್ಸ್ ಬ್ಯಾಂಕ್ ಕೆಲಸವು ನಿರ್ವಹಿಸಲ್ಪಡುವ ಯಾವ ಪೋಸ್ಟಾಫೀಸಿನಿಂದಾದರೂ ಪಡೆಯಬಹುದು. ಬೇಕಾದರೆ ಇದಕ್ಕೆ ಅನುಬಂಧಿಸಿರುವ ಅರ್ಜಿಯ ಫಾರಮನ್ನೇ ಉಪಯೋಗಿಸಬಹುದು.

1916-1917ನೇ ಇಸವಿಯ ಇಂಡಿಯಾ ಗವರ್ನಮೆಂಟಿನವರು ತೆಗೆಯುವ ಸೇಕಡಾ 4ರ ಬಡ್ಡಿಯ ಕನ್‌ವರ್ಶನ್ ಲೋನ್ ಎಂಬ ಮಾರ್ಪಡಿಸಬಹುದಾದ ಸಾಲದ ಬಗ್ಗೆ ಪೋಸ್ಟು ಆಫೀಸುಗಳ ಪರಿಮುಖವಾಗಿ ಮಾಡುವ ಅರ್ಜಿಯ ನಮೂನೆ.

ಸೇವಿಂಗ್ಸ್ ಬ್ಯಾಂಕ್ ಕೆಲಸವು ನಿರ್ವಹಿಸಲ್ಪಡುವ ಯಾವದೊಂದು ಪೋಸ್ಟ್ ಆಫೀಸಿನಲ್ಲಿ 1916ನೇ ಇಸವಿಯ ಸಪ್ಟಂಬರ 25ನೇ ತಾರೀಖು ದಾಟಿಹೋಗುವದರೊಳಗಾಗಿ ಹಾಜರುಮಾಡಲ್ಪಡಬೇಕು. ಅವಶ್ಯವಿದ್ದರೆ ಇದೇ ಫಾರ್ಮನ್ನು ಕತ್ತರಿಸಿ ಉಪಯೋಗಿಸಬಹುದು).

ಬಹಳ ಸ್ಪಷ್ಟವಾಗಿ ಬರೆಯಬೇಕು.

ನಾಧ

ನಾನು 1916ನೇ ಇಸವಿಯ ಜೂನ್ 8ನೇ ತಾರೀಕಿನ ಇಂಡಿಯಾ ಗಜೇಟಿನ ವಿಶೇಷ ಸಂಚಿಕೆಯಾಗಿ ಛಾಯಿಸ್ ಮಾಡಲ್ಪಟ್ಟ ಇಸ್ತಿಹಾರಿನಲ್ಲಿ ಪ್ರಕಟಿಸಲ್ಪಟ್ಟ 1916-17ನೇ ವರ್ಷದ ಸೇಕಡಾ 4ರ ಬಡ್ಡಿಯ ಕನ್‌ವರ್ಶನ್ ಲೋನ್ ಎಂಬ ಮಾರ್ಪಡಿಸಬಹುದಾದ ಸಾಲದ ಪೈಕಿ ರೂ. ಬಗ್ಗೆ ಈ ಮೂಲಕ ದರಖಾಸ್ತು (ಅರ್ಜಿ) ಮಾಡುತ್ತೇನೆ.

ನಾನು ದರಖಾಸ್ತು ಮಾಡಿದ ಸಾಲದ ಮೊಬಲಗಿನ ಬಗ್ಗೆ,

(1) ನಾನು ರೊಕ್ಕವಾಗಿ ರೂ. ....
ಚೆಕ್ ಮೂಲವಾಗಿ ರೂ. ....
ಈ ಮೂಲಕ ಒಪ್ಪಿಸುತ್ತೇನೆ.

(2) ಪೋಸ್ಟು ಆಫೀಸು ಸೇವಿಂಗ್ಸ್ ಬ್ಯಾಂಕಿನಲ್ಲಿ ನನ್ನ ಲೆಕ್ಕದಲ್ಲಿ ಜಮು ಇರುವ ಮೊಬಲಗಿನಿಂದ ರೂ. .... ಈ ಬಗ್ಗಾಗಿ ಈಸುಕೊಳ್ಳಲು ನಾನು ಅಧಿಕಾರಗೊಳಿಸುತ್ತೇನೆ ಮತ್ತು ಪಾಸ್‌ಬುಕ ನ್ನು ಇದರೊಂದಿಗೆ ಲಗತ್ ಮಾಡಿದ್ದೇನೆ.

ಜುಮಲಾ ...

ರೊಕ್ಕವಾಗಿ ಯಾ ಚೆಕ್ ಮುಖಾಂತರವಾಗಿ ಪಾವತಿಮಾಡಿದ ಮೊಬಲಗುಗಳನ್ನು ಮತ್ತು ಸೇವಿಂಗ್ಸ್ ಬ್ಯಾಂಕ್ ಲೆಕ್ಕದಿಂದ ಈಸುಕೊಂಡು ಪಾವತಿಮಾಡಿದ ಮೊಬಲಗುಗಳನ್ನು ಆ ಬಗ್ಗೆ ಬಿಟ್ಟ ಸ್ಥಳಗಳಲ್ಲಿ ಪ್ರತಿಪ್ರತ್ಯೇಕವಾಗಿ ಕಾಣಿಸತಕ್ಕದ್ದು. ಅನಾವಶ್ಯಕವಾದ ವಾಕ್ಯಗಳು ಯಾವುವೂ ಇದ್ದರೆ ಅವನ್ನು ಹೊಡೆದುಬಿಡತಕ್ಕದ್ದು.

A. ನನ್ನ ಬಳಿಯಿಂದ ಅಂಗೀಕರಿಸೋಣಾದ ಸಾಲದ ಮೊಬಲಗನ್ನು ನನ್ನ ಬಗ್ಗಾಗಿ ಪೋಸ್ಟ್ ಮತ್ತು ಟೆಲಿಗ್ರಾಫ್ ಇಲಾಖೆಯ ಅಕೌಂಟಂಟ್ ಜನರಲ್‌ರವರು ಇಟ್ಟುಕೊಳ್ಳಬಹುದಾಗಿ ಮತ್ತು ಆ ಬಾಬತು ಬಡ್ಡಿಯನ್ನು-

(i) .... ಪೋಸ್ಟ್ ಆಫೀಸಿನಲ್ಲಿ ತೆರೆದಿರುವ ನನ್ನ ಪ್ರತ್ಯೇಕದ ನಂ. .... ನೇ ಸೇವಿಂಗ್ಸ್ ಬ್ಯಾಂಕ್ ಲೆಕ್ಕದಲ್ಲಿ, (ಅರ್ಜಿದಾರನಿಗೆ ಈ ಮೊದಲೇ ತೆರೆಯಲ್ಪಟ್ಟ ಲೆಕ್ಕವು ಇಲ್ಲದಿದ್ದರೆ (i)ನೇ ಕಲಮನ್ನು ಹೊಡೆದುಬಿಡತಕ್ಕದ್ದು).

(ii) .... ಪೋಸ್ಟ್ ಆಫೀಸಿನಲ್ಲಿ ಈ ಬಗ್ಗಾಗಿ ತೆರೆಯಲ್ಪಡುವ ಒಂದು ಸೇವಿಂಗ್ಸ್ ಬ್ಯಾಂಕ್ ಲೆಕ್ಕದಲ್ಲಿ, ಜಮಾ ದಾಖಲು ಮಾಡಬೇಕಾಗಿ ಅಪೇಕ್ಷಿಸುತ್ತೇನೆ.

B. ನನ್ನ ಬಳಿಯಿಂದ ಅಂಗೀಕರಿಸೋಣಾದ ಸಾಲದ ಮೊಬಲಗಿನ ಬಗ್ಗೆ .... ಖಜಾನೆಯಲ್ಲಿ ಬಡ್ಡಿ ಪಾವತಿಯಾಗುವಂತೆ ನಮೂದಿಸಲ್ಪಟ್ಟು ಈ ಕೆಳಗಿನ ಮೌಲ್ಯದ ಪ್ರಾಮಿಸರಿ ನೋಟುಗಳು ನನಗೆ ಕೊಡಲ್ಪಡಬೇಕಾಗಿ ಅಪೇಕ್ಷಿಸುತ್ತೇನೆ.

A ಅಥವಾ B ಕಲಮನ್ನು ಥರಾಯಿಸಿ ಉಳಿದದ್ದನ್ನು ಹೊಡೆದುಬಿಡತಕ್ಕದ್ದು.

1916-17ನೇ ಇಸವಿಯ ಸೇಕಡಾ 4ರ ಬಡ್ಡಿಯ ಕನ್‌ವರ್ಶನ್ ಲೋನ್ ಎಂಬ ಮಾರ್ಪಡಿಸಬಹುದಾದ ಸಾಲದ ಬಗ್ಗೆ ನನ್ನಿಂದ ದರಖಾಸ್ತು ಮಾಡಲ್ಪಟ್ಟ ಮೊಬಲಗಿಗೆ ಸಮಾನವಾದಷ್ಟು ಮೊಬಲಗಿನಮಟ್ಟಿಗೆ ಸೇಕಡಾ 3½ ಯಾ 3ರ ಬಡ್ಡಿಯ ರೂಪಾಯಿ ನಾಣ್ಯದಲ್ಲಿರುವ ಇಂಡಿಯಾ ಗವರ್ನಮೆಂಟಿನವರ ಸೆಕ್ಯೂರಿಟಿ ಪತ್ರಗಳನ್ನು ಮಾರ್ಪಡಿಸಲು ಸ್ವಾತಂತ್ರ್ಯಗೊಳಿಸುವ ಒಂದು ಹುಕುಮು ಯಾನೆ ಅಧಿಕಾರಪತ್ರವನ್ನು ಸಹಾ ನನಗೆ ಕೊಡಿಸಬೇಕಾಗಿ ಅಪೇಕ್ಷಿಸುತ್ತೇನೆ.

ಹೆಸರು.................. ವಿಳಾಸ ತಾರೀಖು ....

ಪೋಸ್ಟ್ ಆಫೀಸಿನಲ್ಲಿ ಹಾಜರು ಮಾಡಿದ ತಾರೀಖು.................. ರಿಜಿಸ್ಟರು ನಂ..................

(ಅಂಗೀಕರಿಸುವ ಪೋಸ್ಟ್ ಮಾಸ್ಟರನಿಂದ ನಮೂದಿಸಲ್ಪಡತಕ್ಕದ್ದು). (ಹೆಡ್ ಪೋಸ್ಟ್ ಮಾಸ್ಟರನಿಂದ ನಮೂದಿಸಲ್ಪಡತಕ್ಕದ್ದು)

ಹೆಡ್ ಆಫೀಸು ಸ್ಟಾಂಪು.

ಎಲ್. ಡೇವಿಡ್ಸನ್,
ಆಕ್ಟಿಂಗ್ ಚೀಫ್ ಸೆಕ್ರೆಟರಿ.

ಆರ್. ಮಾರ್ಟಿನ್ಸನ ಮಾತ್ರೆಗಳು ನಂ. 2.

"ಏಕೇನ ಕ್ರಿಯತೇ ಕರ್ಮ ಫಲಂಭುಂಕ್ತೇ ಮಹಾಜನಃ" ಒಬ್ಬನು ಕುಕೃತ್ಯವನ್ನು ನಡಿಸುವುದು, ಹಲವರು ಅದರ ಫಲವನ್ನನುಭವಿಸುವುದು. ಈ ಮಾತಿನಂತೆ ಸರ್ವಿಯದ ಒಬ್ಬ ತಲೆತಿರುಕನು ಮಾಡಿದ ಅನಿಷ್ಟಿತ ಕೃತ್ಯಕ್ಕಾಗಿ ಆ ಇಡೀ ಜನಾಂಗವನ್ನೇ ಆಹುತಿ ಕೊಡಲು ಆಸ್ಟ್ರಿಯದ ಅರಸನು ಪ್ರಾರಂಭಿಸಿದ ಈ ರಣಯಜ್ಞದಲ್ಲಿ ಜರ್ಮನಿ, ಟರ್ಕಿ, ಬಲ್ಗೇರಿಯಾ ಈ ತ್ರಿಕೂಟಗಳು ಕ್ರಮೇಣ ಸೇರಿದವು. ಆಸ್ಟ್ರಿಯಾ ಮತ್ತು ಜರ್ಮನೀ ಈ ಚಂಡಮುಂಡರು ಸರ್ವಿಯರನ್ನು ಕಾಡುವಾಗ ಫ್ರಾನ್ಸಿಗೆ ಅದರ ಸಹಾಯಕ್ಕೆ ಇಳಿಯಲೇ ಬೇಕಾಯಿತು. ತಟಸ್ಥನಾಗಿರುವ ಬೆಲ್‌ಜಿಯಮಿನ ತಾಟಸ್ಥ್ಯವನ್ನು ಭಂಗಿಸಲು ಅನಿರೊಡನೆ ಆದ ಒಪ್ಪಂದದ ಕರಾರಿಗೆ ಕಾಗದದ ಚೂರೆಂದು ಹೆಸರುಕೊಟ್ಟು ತನ್ನ ಸೈನ್ಯಬಲ, ಗುಂಡು ತುಪಾಕಿ—ಬಲ, ಯಂತ್ರಬಲ ಮುಂತಾದ ಸಾಧನಗಳಿಂದ ಯುದ್ಧಮದವು ತಲೆಗೆ ಅಡರಿಹೋದ ಜರ್ಮನಿಯು ಬೆಲ್‌ಜಮು ದೇಶವನ್ನು ಹೊಕ್ಕು ಆ ಅನಪರಾಧಿ ರಾಷ್ಟ್ರದ ಸ್ವಾತಂತ್ರ್ಯದ ಮೂಗುತಿಯನ್ನು ಹರಿಯುವಾಗ ಈ ದುಃಶಾಸನನ ತೋಳುಗಳನ್ನು ಕತ್ತರಿಸುವುದಕ್ಕಾಗಿ ನಮ್ಮ ಇಂಗ್ಲಿಷ ಪ್ರಭುಗಳಿಗೆ ಕೈಯಲ್ಲಿ ಶಸ್ತ್ರ ಹಿಡಿಯುವ ಪ್ರಸಂಗವು ಒದಗಿತು. ಅತ್ತ ರಸಿಯನಿಗೂ ಆಸ್ಟ್ರಿಯನ್ನರ ಪಾರಿಪತ್ಯವನ್ನು ಮಾಡಬೇಕಾಗಿ ಬಂತು. ಮುಂದೆ ಬರಬರುತ್ತ ಈ ಯುದ್ಧನದಿಯ ಪಾತ್ರವು ವಿಸ್ತಾರವಾಗುತ್ತ ಹೋಗಿ ಒಂದು ಕಡೆಯಲ್ಲಿ ಮೇಲೆ ಹೇಳಿದಂತೆ ಜರ್ಮನಾದಿ ಶತ್ರುಕೂಟದವರು ತಮ್ಮ ತಂಡವನ್ನು ಬೆಳಸಿಕೊಳ್ಳುವಾಗ ನಮ್ಮ ಮಿತ್ರಸಂಘದವರಲ್ಲಿ ಇಂಗ್ಲಂಡ, ಫ್ರಾನ್ಸ್, ರಶಿಯಾ, ಇಟಲಿ ಈ ದೊಡ್ಡ ದೊಡ್ಡ ರಾಷ್ಟ್ರಗಳೂ ಬೆಲ್‌ಜಮ, ಸರ್ವಿಯಾ ಮುಂತಾದ ಚಿಕ್ಕಚಿಕ್ಕ ದೇಶಗಳೂ ಕೂಡಿ ಒಂದು ಪಕ್ಷವಾಗಿ ನಿಂತುಕೊಂಡವು. ಇಂಗ್ಲಂಡದ ವಿಸ್ತಾರವಾದ ಸಾಮ್ರಾಜ್ಯದ ಹೊಟ್ಟೆಯೊಳಗೆ ಹಿಂದುಸ್ಥಾನದಂತೆ, ಆಫ್ರಿಕದ ಕೆಲವು ಭಾಗ, ಹಾಗೆಯೇ ಆಸ್ಟ್ರೇಲಿಯಾ, ಕೆನಡಾ ಮೊದಲಾದ ಜನಾಂಗಗಳು ಸೇರಿಹೋಗಿರುವುದರಿಂದ ಅವುಗಳಿಗೆ ಸಾಮ್ರಾಜ್ಯದ ರಕ್ಷಣೆಗಾಗಿ ಈ ಯುದ್ಧದ ಭಾಗಿಗಳಾಗಿರಬೇಕಾಗಿದೆ. ಈ ಮಹಾ ಯುದ್ಧದ ರಣಕ್ಷೇತ್ರವು ಅತಿ ವಿಸ್ತಾರವಾಗಿದ್ದು ಅನೇಕ ಕಡೆಗಳಲ್ಲಿ ಬೆಳೆಯುತೊಂಡು ಹೋಗಿದೆ. ಈ ಎರಡು ವರ್ಷದ ಅವಧಿಯಲ್ಲಿ ಪೂರ್ವ, ಪಶ್ಚಿಮ ರಣಕ್ಷೇತ್ರಗಳಲ್ಲಿ ಅಲ್ಲದೆ ಟರ್ಕಿ, ಆಫ್ರಿಕಾ ಮೊದಲಾದ ಎಲ್ಲ ಯುದ್ಧ ಭೂಮಿಗಳಲ್ಲಿ ಆದ ಪ್ರಾಣಹಾನಿಯು ಇಂತಿಷ್ಟೇ ಎಂದು ಹೇಳುವುದು ಅಸಾಧ್ಯವಾಗಿದೆ. ಆದರೂ ಒಂದೆರಡು ಕೋಟಿ ಜನಸಂಖ್ಯೆಯಾದರೂ ಈ ಯುದ್ಧದ ನಿಮಿತ್ತದಿಂದ ವೀರಸ್ವರ್ಗವನ್ನು ಪಡೆದಿರಬಹುದೆಂದು ತಜ್ಞರು ಅಭಿಪ್ರಾಯ ಪಡುತ್ತಾರೆ! ಯುದ್ಧವು ಪ್ರಾರಂಭಿಸಿದ ಕೆಲವು ತಿಂಗಳುಗಳ ವರೆಗೆ ಮಾತ್ರ ಶತ್ರುಪಕ್ಷದವರು ಕೈಕಾಲುಗಳನ್ನು ಯಥೇಷ್ಟ ಪಸರಿಸಿದ್ದಾಯಿತು. ಆದರೆ ಈ ಒಂದು ವರ್ಷದ ಅವಧಿಯಲ್ಲಿ ನಮ್ಮ ಮಿತ್ರರಾಷ್ಟ್ರಗಳ ಸಾಧನ ಸಾಮಗ್ರಿಗಳು ಮತ್ತು ಉಪಕರಣಗಳು ಬೇಕಷ್ಟು ಸಿದ್ಧವಾಗಿರುವುದರಿಂದ ಇವರು ಶತ್ರುಗಳನ್ನು ಹಿಂದಕ್ಕೆ ಅಟ್ಟುತ್ತಲಿದ್ದಾರೆಂಬುವುದು ದಿನದಿನದ ಯುದ್ಧವಾರ್ತೆಗಳನ್ನು ತಾತ್ಪರ್ಯದಿಂದೋದುವವರಿಗೆ ನವೀನವಾಗಿ ಹೇಳಬೇಕಾದುದಿಲ್ಲ. ಇನ್ನೊಂದು ವಿಶೇಷವೇನೆಂದರೆ—ಮಿತ್ರಸಂಘದವರು ಸಂರಕ್ಷಕ (defensive) ಪದ್ಧತಿಯನ್ನು ಬಿಟ್ಟು ಅಭಿಯೋಗಕರ (offensive) ಪದ್ಧತಿಯನ್ನು ಅಂಗೀಕರಿಸಿರುವುದರಿಂದಂತೂ ಜರ್ಮನರು ತಮ್ಮ ಬಿಡಾರ ಕಟ್ಟಿಕೊಂಡು ಹಿಂದೆಯೇ ಹೋಗುತ್ತಿದ್ದಾರೆ. ಮತ್ತು ಇದೇ ಕ್ರಮವು ಇನ್ನೂ ಕೆಲವು ಸಮಯ ನಡದರೆ ಬೆಲ್‌ಜಮ, ಸರ್ವಿಯಾ, ಪೋಲಾಂಡ ಮತ್ತು ಫ್ರಾನ್ಸಿನ ಕೆಲ ಪ್ರದೇಶ ಇವುಗಳನ್ನೆಲ್ಲ ಬಿಟ್ಟುಕೊಟ್ಟು ಜರ್ಮನ, ಆಸ್ಟ್ರಿಯನ್ನರಿಗೆ ಸ್ವಸ್ಥಾನವಲ್ಲದೆ ಬೇರೆ ಗತಿಯಾಗಲಾರದು.

ಈ ಮಹಾಯುದ್ಧದ ಪರಿಣಾಮದ ಕಡೆಗೆ ಲಕ್ಷ್ಯಕೊಟ್ಟರೆ ಸಾತ್ವಿಕನಾದವನ ಹೃದಯವು ಕರಗಿ ಹೋಗದೆ ಇರದು. ಪ್ರಾಣಹಾನಿಯೆಷ್ಟು! ಉಧ್ವಸ್ತವಾದ ದೇಶಗಳೆಷ್ಟು! ಜಲಸಮಾಧಿಯನ್ನು ಹೊಂದಿದ ಸಾಹಿತ್ಯಗಳೆಷ್ಟು? ಸತ್ಯ, ನ್ಯಾಯ, ನೀತಿ, ದಯೆ ಇವುಗಳನ್ನು ಉಲ್ಲಂಘಿಸಿ ಮಾಡಿದ ಅನರ್ಥಗಳೆಷ್ಟು! ಈ ಎಲ್ಲ ಅನರ್ಥಾಸ್ಪದ ಸಂಗತಿಗಳಿಗೆ ಜರ್ಮನರೇ ಹೊಣೆಗಾರರಲ್ಲದೆ ಅನ್ಯರಲ್ಲ. ಇಂಗ್ಲಂಡದ ವೈಭವ, ವ್ಯಾಪಾರ, ಅಧಿಕಾರ ಇವುಗಳನ್ನು ನೋಡಿ ಹೊಟ್ಟೆಕಿಚ್ಚು ಪಡುತ್ತಿರುವ ಜರ್ಮನಿಯು "ಈ ಯುದ್ಧವು ನಮಗೆ ಹೇಳಿದ್ದಲ್ಲ; ಇದು ನಮಗೆ ಬೇಡ" ಎಂದು ಹೇಳಿದ ಇಂಗ್ಲಂಡದ

ಹಿತೋಕ್ತಿಯನ್ನು ಕೇಳದೆ ಬಂದ್ಧ್ಯಯುದ್ಧದಲ್ಲಿ ಇಳಿದು ಇಂಗ್ಲಂಡಕ್ಕೂ ಅದರಲ್ಲಿ ಬರುವಂತೆ ಮಾಡಿತಲ್ಲವೇ? ಹೀಗಿರುವಾಗ ಈ ಎಲ್ಲ ಅನರ್ಥಕ್ಕೆ ಆಸ್ಪದವು ಜರ್ಮನಿಯೇ ಎಂತ ಸ್ಪಷ್ಟವಾಗುತ್ತದೆ. ಇರಲಿ; ಎರಡು ವರ್ಷಗಳ ವರೆಗೆ ಅವಿರತವಾಗಿ ನಡೆಯುತ್ತಿರುವ ಈ ಯುದ್ಧದ ಸಂಗತಿಯನ್ನು ಆಲೋಚಿಸಿದರೆ ಯುರೋಪದ ನೈತಿಕ ಸ್ಥಿತಿಯು ಹೀನವಾಗಿದೆಂತಲೇ ಬಹು ಕಷ್ಟದಿಂದ ಹೇಳಬೇಕಾಗುತ್ತದೆ. ೧೮-೧೯ನೇ ಶತಕಗಳಿಂದ ಯುರೋಪವು ಜಗತ್ತಿನಲ್ಲಿ ಎಲ್ಲ ಸಂಗತಿಗಳಲ್ಲಿ ತಾನೇ ಪ್ರಮುಖವೆಂದು ತಿಳಿಯುತ್ತಿದೆ. ತಾನು ಕೊಟ್ಟರೆ ಬೇರೆಯವರಿಗೆ ಧರ್ಮವಿದೆ, ಶಾಸ್ತ್ರವಿದೆ; ವಿದ್ಯೆ ಇದೆ; ತತ್ವಜ್ಞಾನದಲ್ಲಿ ತನ್ನ ಕೈ ಹಿಡಿಯುವವರು ಯಾರೂ ಇಲ್ಲ; ನೀತಿ ಮೀಮಾಂಸೆಯು ತನ್ನಿಂದಲೇ ಬೇರೆ ಖಂಡದ ಜನರು ಕಲಿಯಬೇಕಾದುದು; ನಾಗರಿಕತೆಯ ಜನ್ಮವು ತನ್ನಲ್ಲಿಯೇ; ಎಂಬೀ ತರದ ಅಭಿಪ್ರಾಯವು ಅಲ್ಲಿ ನೆಲೆಗೊಂಡಿತ್ತು. ಆದರೆ ಎಡೆಬಿಡದೆ ಎರಡು ವರ್ಷಗಳಿಂದ ನಡೆಯುತ್ತಿರುವ ಈ ಅನರ್ಥಸ್ವಪ್ನ ಯುದ್ಧವನ್ನು ನಿಲ್ಲಿಸುವುದು ಅಲ್ಲಿಯ ಯಾವೊಬ್ಬನ ಬುದ್ಧಿವಂತಿಕೆಯಲ್ಲಾಗಲಿ, ಅಲ್ಲಿಯ ತತ್ವಜ್ಞಾನ, ನೀತಿ ಮೀಮಾಂಸೆ, ನವ ಸಂಸ್ಕೃತಿ, ಸತ್ಯ ಧರ್ಮ ಮುಂತಾದವುಗಳಲ್ಲಾಗಲಿ ಸಾಮರ್ಥ್ಯವಿಲ್ಲದ್ದನ್ನು ನೋಡಿ ಹೆದ್ದರಾದ ನಾವು ಪೌರ್ವಾತ್ಯರಾದರೂ ಎಷ್ಟೋ ಪಾಲಿನಿಂದ ಒಳ್ಳೆಯವರು, ಅತಿ ಬುದ್ಧಿವಂತರಾದ ಜರ್ಮನರಂತಹರು ಸಾಕು—ಬೇಡೆಂತಲೇ ಹೇಳಬೇಕಾಗುತ್ತದೆ. ಆದರೆ ದೇವರು ಸತ್ಯೈಕ ಪಕ್ಷಪಾತಿಯಾದ ಕಾರಣ ಅಸತ್ಪಕ್ಷಿಗಳಾದ ಈ ಜರ್ಮನರ ಬುದ್ಧಿವಂತಿಕೆಗೆ ತಕ್ಕ ಪ್ರಾಯಶ್ಚಿತ್ತವನ್ನು ವಿಧಿಸಿ ಸತ್ಯಾನುಯಾಯಿಗಳಾದ ನಮ್ಮ ಮಿತ್ರರಾಷ್ಟ್ರಗಳಿಗೆ ಬೇಗನೇ ಜಯ ಕೊಡ್ಬಾನೆಂದು ನಾವು ನಂಬುತ್ತೇವೆ.

ಬರುವ ಆಗಸ್ಟ ತಾ. ೪ಕ್ಕೆ ಯುದ್ಧದ ವರ್ಷಾರಂಭದ ದಿವಸವು ಬರುವುದರಿಂದ ಎಲ್ಲ ಬ್ರಿಟಿಷ್ ಪ್ರಜೆಗಳು ತಮ್ಮ ಪ್ರಭುವಿಗೆ ಜಯ ಪ್ರಾಪ್ತಿಯಾಗಲೆಂದು ದೇವರಲ್ಲಿ ಪ್ರಾರ್ಥಿಸುವರು. ನಾವೂ ಕೂಡ ಪ್ರಜಾಕರ್ತವ್ಯಕ್ಕನುಸಾರವಾಗಿ ಅದನ್ನೇ ಪ್ರಾರ್ಥಿಸಿ ಈ ಅಗ್ರಲೇಖವನ್ನು ಮುಗಿಸುತ್ತೇವೆ.

"ಶಾಭಾಸು! ಭಟ್ಟರೇ, ಶಾಭಾಸು!!"

'ಶಾಭಾಸು! ಭಟ್ಟರೇ, ಶಾಭಾಸು!!' ಎಂದು ಈಗ ನಾವು ಹೇಳುತ್ತೇವೆ. ನಿಮ್ಮ ಮೆಂಬರಿಕೆಯ ೩ ವರ್ಷಗಳ ಅವಧಿ ದಾಟಿದ ನಂತರವೂ ಅದೇ ರೀತಿಯಾಗಿ ನಾವು ಹೇಳುವಂತೆ ಆಗಲಿ ಎಂದು ವಿನೋದಗರ್ಭಿತವಾದ ಮಾತುಗಳಿಂದ ಮ॥ ರಾ॥ ರಾಮಮೋಹನರಾಯರು ಇದೇ ತಿಂಗಳ ೨೨ನೇ ತಾರೀಕಿಗೆ 'ಓನರೆಬಲ್' ಭಟ್ಟರಿಗೆ ಮದ್ರಾಸು ನ್ಯಾಯವಿಧಾಯಕ ಸಭೆಯಲ್ಲಿ ದಕ್ಷಿಣಕನ್ನಡ ಮತ್ತು ಮಲೆಬಾರು ಜಿಲ್ಲೆಗಳ ಪರವಾಗಿ ಪ್ರತಿನಿಧಿಯಾಗಿ ಆದ ಚುನಾವಣೆಯು ಸಂತೋಷ ಸೂಚಕವಾಗಿ ಮಂಗಳೂರು ಕೊಸ್ಮೊಪೊಲಿಟನ್ ಕ್ಲಬ್ಬಿನಲ್ಲಿ ಜರಗಿದ ಸಭೆಯಲ್ಲಿ ಭಾಷಣಮಾಡಿದರು. ಸಭೆಗೆ ಈ ಜಿಲ್ಲೆಯ ವೋಟರುಗಳೂ, ಇತರ ಮಾನ್ಯ ಗೃಹಸ್ಥರೂ ಬಂದು ಸೇರಿದ್ದರು. ಗಾಯನ ಫಲಾಹಾರಗಳಿಂದ ಆಮಂತ್ರಿತರನ್ನು ಉಪಚರಿಸಿದ ನಂತರ ಮ॥ ರಾ॥ ಸುಜೀರ ರಘುನಾಥಯ್ಯನವರು ಸಭೆಯಲ್ಲಿ ಎದ್ದು ನಿಂತು, ಮ॥ ರಾ॥ ಭಟ್ಟರ ಚುನಾವಣೆಯ ಬಗ್ಗೆ ನಮ್ಮ ಜಿಲ್ಲೆಯವರಿಗೆ ಆದ ಆನಂದವನ್ನೂ ಈ ಕಾಲದಲ್ಲಿ ನಮ್ಮ ಕೋರಿಕೆಯನ್ನು ಸಫಲ ಮಾಡುವುದಕ್ಕೆ ಮಲಬಾರಿನ ವೋಟರರೂ, ಇತರ ಮಾನ್ಯ ಗೃಹಸ್ಥರೂ ಮಾಡಿದ ಪ್ರಯತ್ನಗಳನ್ನೂ ಕುರಿತು ಭಾಷಣಮಾಡಿದರು. ಈ ಕಾಲದಲ್ಲಿ ಮಹಾ ಭಯಂಕರವಾದ ಯುದ್ಧವು ಯೂರೋಪಿನಲ್ಲಿ ಎರಡು ವರ್ಷಗಳಿಂದಲೂ ನಡೆಯುತ್ತಲಿರುವಾಗ, ನಮ್ಮ ಹಿಂದೂಸ್ಥಾನದ ಜನರು ಅನನ್ಯಭಾವದಿಂದ ತನುಮನಧನಗಳನ್ನು ಅರ್ಪಿಸಿದ ಕಾರಣ ಪಾರ್ಲಿಮೆಂಟ ಸಭೆಯವರು ಕೂಡಾ ಇಲ್ಲಿಯ ಜನರ ರಾಜಭಕ್ತಿಯನ್ನು ಕೊಂಡಾಡಿದಲ್ಲದೆ, ಹಲವು ಕಾಲದಿಂದ (ಕಾಂಗ್ರೆಸ) ರಾಷ್ಟ್ರೀಯ ಸಭೆಯಲ್ಲಿ ಜನರು ತಮಗೆ ಇತರ ವಸಾಹತ್ತುಗಳಲ್ಲಿರುವ ಬಗೆಯ ರಾಜಕೀಯ ಸ್ವಾತಂತ್ರ್ಯವನ್ನು ಕೊಡಬೇಕೆಂದು ಚರ್ಚಿಸುವ ಧ್ಯೇಯವು ವಾಸ್ತವಿಕವೆಂದು ವಿಲಾಯತಿಯಲ್ಲಿ ಹಲವರ ಅಭಿಪ್ರಾಯವಿದೆ ಎಂತಲೂ, ಈ ರೀತಿಯ 'ನೂತನ ಅವಲೋಕನದ' ಫಲವು ನಮಗೆ ಸಿಕ್ಕಬೇಕಾದ ಕಾಲದಲ್ಲಿ ಅದಕ್ಕೆ ಪ್ರಜೆಗಳನ್ನು ಸಿದ್ಧಗೊಳಿಸಲಿಕ್ಕೂ, ಪ್ರಜೆಗಳ ಅಹವಾಲುಗಳನ್ನು ಸರಕಾರದ ಮುಂದಿಡುವುದಕ್ಕೂ ಯೋಗ್ಯರಾದವರನ್ನೆ ನಾವು ನ್ಯಾಯವಿಧಾಯಕ ಸಭೆಗಳಿಗೆ ಮೆಂಬರುಗಳಾಗಿ ಆರಿಸಬೇಕೆಂತಲೂ ಈಗ ನಾವು ಮಾಡಿದ ಚುನಾವಣೆಯು ಮಂಜೂರಾದ ಕಾರಣ ನಮ್ಮ ಕೋರಿಕೆಗಳಲ್ಲಿ ಹಲವು ನೆರವೇರಬಹುದೆಂದು ಮ॥ ರಾ॥ ರಘುನಾಥಯ್ಯನವರು ಗಂಭೀರ ವಾಕ್ಯಗಳಿಂದ ಭಾಷಣಮಾಡಿದರು. ಸಬ್‌ಜಡ್ಜರಾಗಿದ್ದು ಪೆನ್‌ಶನ್ ಹೊಂದಿ ವಿಶ್ರಾಂತಿ ಸುಖವನ್ನು ಅನುಭವಿಸಬೇಕಾದ ಕಾಲದಲ್ಲಿಯೂ ಕೂಡಾ ಸ್ವಕೀಯ ರಾಜ್ಯಭಾರವನ್ನು ಜನರ ಅನುಕೂಲತೆಗೆ ಸರಿಯಾಗಿ ನಡೆಸುವ ಸಾಮರ್ಥ್ಯವುಳ್ಳವರು ನಮ್ಮಲ್ಲಿಯೂ ಇದ್ದಾರೆ ಎಂದು ತೋರಿಸಿ ಈಚೆಗೆ ಮೂರು ವರ್ಷಗಳಿಂದ ಮಂಗಳೂರು ತಾಲೂಕು ಬೋರ್ಡಿನ ತಾಲೂಕುಬೋರ್ಡ ಪ್ರೆಸಿಡೆಂಟರಾಗಿ ರವಷ್ಟಾದರೂ ಜನರ ಗೋಳಿಗೆ ಎಡೆಕೊಡದೆ ಕಾರ್ಯನಿರ್ವಾಹ ಮಾಡುತ್ತಲಿರುವ ಇವರು ಮುನ್ಸಿಪಾಲಿಟಿಯ ಮತ್ತು ತಾಲೂಕು ಬೋರ್ಡುಗಳ ಅಂದರೆ ಸ್ವಕೀಯ ರಾಜ್ಯಭಾರದ ಪ್ರತಿನಿಧಿಯಾಗಿ ಈ ಉತ್ಸವ ದಿನದಲ್ಲಿ ಮುಂದಾಳಾಗಿ ಭಾಷಣ ಮಾಡಿದುದು ಕಾಲೋಚಿತವೇ ಸರಿ. ಇವರನ್ನು ಅನುಮೋದಿಸಿ ಮ॥ ರಾ॥ ಎ. ಶ್ರೀನಿವಾಸಪೈಯವರು ಸುಲಲಿತವಾಗಿ ಒಂದೆರಡು ಮಾತುಗಳನ್ನಾಡಿದರು. ಅನಂತರ ಮ॥ ರಾ॥ ರಾಮಮೋಹನರಾಯರು ಮೇಲಿನಂತೆ ತಮ್ಮ ಅಭಿಪ್ರಾಯವನ್ನು ಸೂಚಿಸಿದರು.

ಅನಂತರ ಮ॥ ರಾ॥ ಭಟ್ಟರು ಕೊಟ್ಟ ಭಾಷಣವನ್ನು ಇನ್ನೊಂದು ಕಡೆಯಲ್ಲಿ ಮುದ್ರಿಸಿರುವೆವು. ಮೆಂಬರಿಕೆಯು ಬರೇ ಗೌರವಾರ್ಥವಾಗಿ ಪಡೆಯುವಂಥಾದ್ದಲ್ಲ; ಅನೇಕ ಜವಾಬ್ದಾರಿಗಳೂ ಅದರ ಹಿಂದೆಯೇ ಇವೆ ಎಂಬುದನ್ನು ತಾನು ಚನ್ನಾಗಿ ಬಲ್ಲೆ ಎಂದು ಅವರು ಹೇಳಿದ ಮಾತುಗಳಿಂದ ಸಭೆಯಲ್ಲಿ ತಾನು ಕಾಲಿಡುವಾಗಲೇ ತನ್ನ ಕರ್ತವ್ಯದ ಕಡೆಗೆ ಚನ್ನಾಗಿ ದೃಷ್ಟಿ ಇಟ್ಟಿರುವರೆಂದು ಸ್ಪಷ್ಟವಾಗುತ್ತದೆ. ಇದಲ್ಲದೆ ತನ್ನನ್ನು ಆರಿಸಿದ ವೋಟರುಗಳ ಜವಾಬ್ದಾರಿಯನ್ನು ಎತ್ತಿ ಮಾತಾಡಿ ತಾನು ತನಗೆ ಅಗತ್ಯವಿರುವ ಅನುಭವವನ್ನು ಜನಗಳಿಂದ ಪಡೆಯಲಿಕ್ಕೆ ಆತುರವುಳ್ಳವನೆಂದೂ ಜನರು ಅದಕ್ಕೆ ಅನುಕೂಲವಾಗಿ ತಮ್ಮ ಅಹವಾಲೆಗಳ ಆಧಾರವಾಗಿರುವ ದಾಖಲೆಗಳನ್ನು ಸಂಗ್ರಹಿಸಿ ತನಗೆ ಸಹಾಯಕರಾಗಬೇಕೆಂದೂ ಈ ಬಗ್ಗೆ ಕಲ್ಲಿಕೋಟೆಯಲ್ಲಿಯೂ ಇಲ್ಲಿಯೂ ಒಂದೊಂದು ಆಫೀಸನ್ನು ತೆರೆಯುವೆನೆಂದೂ ಅವರು ಹೇಳಿದರಿಂದ ಅವರಿಗೆ ವ್ಯವಹಾರ ಜ್ಞಾನವು ತುಂಬಾ ಇದೆ ಎಂದು ನಾವು ತಿಳಿಯಬೇಕು. ಅವರು ಮೂರು ವರ್ಷಗಳ ಕಾಲದೊಳಗೆ ದಕ್ಷಿಣಕನ್ನಡವನ್ನು ರಾಮರಾಜ್ಯವಾಗಿ ಮಾಡುತ್ತೇನೆಂದೂ ಸಭೆಯಲ್ಲಿ ಎದುರುವಾದಿಗಳ ಎದೆಯನ್ನು ತಲ್ಲಣಗೊಳಿಸುವೆನೆಂದೂ ಉತ್ತರನಂತೆ ಕೊಚ್ಚುವುದಿಲ್ಲ. ನಮ್ಮ ಜಿಲ್ಲೆಗೆ ಇದ್ದ ಅಡಚಣೆಗಳಲ್ಲಿ ಅತೀ ಮುಖ್ಯವಾದುವು ಯಾವುವೆಂದೂ ಮುಖಂಡರೊಡನೆ ಚರ್ಚಿಸಿ ಅವುಗಳ ಕಡೆಗೆ ತಾನು ಗಮನಕೊಡುವೆನೆಂದೂ ಈ ಪೈಕಿ ಅತೀ ಮುಖ್ಯವಾದ ಕನ್ನಡಾ ಮೈಸೂರು ರೈಲ್ವೆಯ ವಿಷಯವನ್ನು ಸಭಾಸದರ ಮುಂದಿಟ್ಟರು.

ಅವರ ಸೂಚನೆಯನ್ನು ಮನ್ನಿಸಿ ಈ ಜಿಲ್ಲೆಯ ಮುಖಂಡರು ಇಲ್ಲಿಯ ಕೊಂಗ್ರೆಸ್ ಕಮಿಟಿಯನ್ನು ಚೇತನಕ್ಕೆ ತಂದು ನಮ್ಮ ಅಹವಾಲೆಗಳನ್ನು ಅದರಲ್ಲಿ ಚರ್ಚಿಸಿ ಅತಿ ಮುಖ್ಯವಾದುವುಗಳಲ್ಲಿ ತಮ್ಮ ಅಭಿಪ್ರಾಯವನ್ನು ಮ॥ ರಾ॥ ಭಟ್ಟರಿಗೆ ಆಗಾಗ್ಗೆ ತಿಳಿಸುತ್ತಲಿದ್ದರೆ ಮೂರು ವರ್ಷಗಳ ಅವಧಿ ದಾಟುವಾಗ "ಶಾಭಾಸು! ಭಟ್ಟರೇ, ಶಾಭಾಸು!!" ಎಂದು ನಾವೆಲ್ಲರು ಏಕಕಂಠರಾಗಿ ಹೇಳಲಿಕ್ಕೆ ಸಾಧ್ಯವಿದೆ.

ಮಂಗಳೂರು ಕೊಸ್ಮೊಪೊಲಿಟನ್ ಕ್ಲಬ್ಬಿನಲ್ಲಿ

'ಓನರೆಬಲ್' ಭಟ್ಟರ ಭಾಷಣ.

ಮಹಾಶಯರೇ, ನನ್ನ ಬಂಧುಗಳೇ, ನನ್ನ ಮಿತ್ರರೇ,

ತಾವು ನನ್ನಲ್ಲಿ ಗುಣೋನ್ನತಿಯನ್ನು ಕಲ್ಪಿಸಿಕೊಂಡು, 'ನಾನೊಬ್ಬ ಸಾರ್ವಜನಿಕ ಹಿತೈಷಿ' ಇತ್ಯಾದಿ ಇತ್ಯಾದಿಯಾಗಿ ಹೇಳಿ ನನ್ನನ್ನು ಮೇಲಕ್ಕೆಟ್ಟಿ ಕೊಂಡಾಡುವಷ್ಟು ಯೋಗ್ಯತೆಯು ನನ್ನಲ್ಲಿ ಇಲ್ಲವೆಂಬುದು ನನಗೆನೇ ಗೊತ್ತಿದೆ. ಆದಕಾರಣ ತಾವು ತಮ್ಮ ಉದಾತ್ತ ಮನಸ್ಸಿನಲ್ಲಿ ನನ್ನ ವಿಷಯವಾಗಿ ಇದ್ದ ವಿಶೇಷ ವಿಶ್ವಾಸವನ್ನು ತೋರ್ಪಡಿಸುವುದಕ್ಕೆ ಈ ಹೊತ್ತು ದಯಾಭಾವದಿಂದಲೂ ಉತ್ಸಾಹದಿಂದಲೂ ವರ್ತಿಸಿದ್ದನ್ನು ಕಣ್ಣಾರೆ ಕಂಡು ನನ್ನ ಕೊರಳಿನ ನರೆಗಳು ಬಂದಿಷ್ಟು ಹಿಗ್ಗಿದ್ದೇ ಆದರೆ, ನನ್ನ ಕಡೆಗೆ ತಾವು ಕೊಂಚ ಕೃಪಾದೃಷ್ಟಿಯಿಂದ ನೋಡಬೇಕೆಂಬುದಾಗಿ ಕೈಜೋಡಿಸುವೆನು. ಚುನಾವಣೆಯ ದ್ವಾರಾ ನಾನು ಮದ್ರಾಸು ನ್ಯಾಯವಿಧಾಯಕ ಸಭೆಯ ಒಳ ಹೋಗುವ ಸಂದರ್ಭದಲ್ಲಿ ತಮ್ಮ ಎದೆಗಳು ಹಿಡಿಯಲಾರದಷ್ಟು ಸಂತೋಷದಿಂದ ಉಕ್ಕುವುದರ ನಿದರ್ಶನವಾಗಿ ಇಂಥ ಸಂಭ್ರಮದ ಸಭೆಯನ್ನು ಏರ್ಪಡಿಸಿರುವದಕ್ಕಾಗಿ ತಮ್ಮೆಲ್ಲರನ್ನು ಕೃತಜ್ಞಪೂರ್ವಕವಾಗಿ ವಂದಿಸುತ್ತೇನೆ. ಸಭೆಯಲ್ಲಿ ದಯಾಭಾವದಿಂದ ವ್ಯಕ್ತಗೊಳಿಸಿದ ಶ್ಲಾಘನೆಗೆ ನಾನು ಪಾತ್ರನಲ್ಲವೆಂತ ಪ್ರಾರಂಭದಲ್ಲಿಯೇ ಹೇಳಿರುವೆನು. ಆದರೆ ಚುನಾವಣೆಯಲ್ಲಿ ನನ್ನ ವಿಜಯವು ನನ್ನ ಅಷ್ಟರಲ್ಲಿ ಮಾತ್ರವಲ್ಲ; ಈ ಜಿಲ್ಲೆಯ

ಸಮಸ್ತ ಸಮುದಾಯದವರಲ್ಲಿಯೂ ವಿಶೇಷ ಸಂತೋಷವನ್ನುಂಟು ಮಾಡಿರುವದೆಂಬುದನ್ನು ಈ ಸಭಾ ಮೂಲಕ ತಿಳಕೊಂಡು ಆನಂದಪಡುತ್ತೇನೆ. ನನ್ನನ್ನು ಚುನಾಯಿಸಿರುವರೆಂಬ ವಾರ್ತೆಯು ಹೊರಬಿದ್ದಂದಿನಿಂದ ತಮ್ಮ ಸಂತೋಷವನ್ನೂ ಹಿತೋಕ್ತಿಗಳನ್ನೂ ಸೂಚಿಸಿ ಹಲವು ಟೆಲಿಗ್ರಾಮುಗಳೂ ಪತ್ರಗಳೂ ನನಗೆ ಬಂದಿವೆ. ಇಂಥಾ ಪತ್ರಗಳ ಮೂಲಕ ನನ್ನನ್ನು ಈ ಜಿಲ್ಲೆಯವರು ಪ್ರೋತ್ಸಾಹಿಸುವದು ವಾಸ್ತವಿಕವೆಂದು ತಿಳಿದುಕೊಂಡಿರುವೆನು. ಆದರೆ ಇತರ ಜಿಲ್ಲೆಗಳ ಪರಗೃಹಸ್ಥರಿಂದ ಬಂದಂಥಾ ಈ ಪತ್ರಗಳಿಗೋಸ್ಕರ ನಾನು ಅವರಿಗೆ ವಿಶೇಷವಾಗಿ ಕೃತಜ್ಞನಾಗಿರುವೆನು. ಈ ಜಿಲ್ಲೆಯನ್ನು ಬಿಟ್ಟು ಹೋಗಿರುವರಾದರೂ ಇದನ್ನು ಮರೆಯದೆ ಈ ಜಿಲ್ಲೆಯ ಮೇಲೆ ಪೂರ್ಣ ಅನುರಾಗವಿರುವ ಅಂಥಾ ಮಹನೀಯರ ಪ್ರಸ್ತಾಪವು ಇಲ್ಲಿ ಅಗತ್ಯ ತೋರುವದು. ದೇಶದ ಹಿತೈಷಿತೆಯ ಕೆಲಸಕ್ಕೆ ಕೈಹಾಕುವಂತೆ ಉತ್ತೇಜನಕೊಟ್ಟ ಮೆ। ಆರ್. ಎ. ಗ್ರೆಹೆಮರು ಒಬ್ಬರು. ಇನ್ನು ಮೆ। ಮೆಕ್ವೀನ್‌ರು, ಮ। ರಾ। ಚಂತನ್‌ರು, ಮ। ರಾ। ಬಿ. ಆನಂದರಾಯರು ಮ। ರಾ। ಕುಂಞಿರಾಮನ್‌ರು, ಸೇಲಮಿನ ಹೆಸರುವಾಸಿಯಾದ ಮತ್ತು ಹಿಂದೆ ಇಲ್ಲಿಯ ಗವರ್ನಮೆಂಟ್ ಕಾಲೇಜಿನಲ್ಲಿ ಉಪಾಧ್ಯಾಯರಾಗಿದ್ದ ಮ। ರಾ। ವಿಜಯ ರಾಘವಾಚಾರ್ಯರು, ಇತರ ಪ್ರಮುಖ ಗೃಹಸ್ಥರು ಇವರಿಗೆಲ್ಲ ಒಟ್ಟಿಗವಾಗಿ ನನ್ನ ವಂದನೆಗಳನ್ನು ಅರ್ಪಿಸುವುದಕ್ಕೆ ಈ ಸುಕಾಲವು ಒಂದೊದಗಿರುವದು ತುಂಬಾ ಸಂತೋಷಕರ.

ಕೆಲವು ತಿಂಗಳ ಹಿಂದೆ ನನ್ನ ಸ್ನೇಹಿತರಲ್ಲಿ ಕೆಲವರು ಈ ಚುನಾವಣೆಗೆ ನಾನು ಉಮೇದ್ವಾರನಾಗಬೇಕೆಂದು ಇಚ್ಛೈಸಿದಾಗ, ನನಗಿಂತ ಹೆಚ್ಚಿನ ಯೋಗ್ಯತೆಯೂ ದ್ರವ್ಯಾನುಕೂಲವೂ ಪೂಜ್ಯತ್ವವೂ ಇರುವ ಗೃಹಸ್ಥರು ಈ ಜಿಲ್ಲೆಯಲ್ಲಿ ಇದ್ದಾರೆಂದು ನಾನು ಒಂದುಸಲ ನಿರಾಕರಿಸಿದೆನು. ಆದರೆ ನಾನು ಒಂದುವೇಳೆ ಜಯಹೊಂದದಿದ್ದರೂ ದಕ್ಷಿಣ ಕನ್ನಡದವರು ಇಂಥ ಚುನಾವಣೆಗೆ ಪ್ರಯತ್ನಿಸುವಾಗ ಅವರಿಗೆ ಎದುರಾಗುವ ಅಭ್ಯಂತರಗಳು ಬಯಲಿಗೆ ಬಂದು, ಈ ಜಿಲ್ಲೆಗೆ ಪ್ರತ್ಯೇಕ ಪ್ರತಿನಿಧಿಯನ್ನು ಚುನಾಯಿಸುವ ಹಕ್ಕು ಸಿಕ್ಕುವುದು ಅಗತ್ಯವೆಂಬುದನ್ನು ಸ್ಪಷ್ಟಗೊಳಿಸುವುದಕ್ಕಾದರೂ ನಾನು ಉಮೇದ್ವಾರನಾಗುವಂತೆ ಅವರು ಹಟ ಹಿಡಿದರು. ಹೀಗಾಗಿ ನನಗಿಂತ ಹೆಚ್ಚಿನ ಯೋಗ್ಯತೆಯವರು ಇರುವುದನ್ನು ಮನಸ್ಸಿಗೆ ಹಚ್ಚಿಕೊಳ್ಳದೆ ನಾನು ಈ ಕೆಲಸಕ್ಕೆ ಎದುರಾಗಬೇಕಾಯಿತು. ಈ ಕಾಲದಲ್ಲಿ ಕೆಲವು ಶುಭಚಿನ್ಹಗಳು ನನಗೆ ಸಹಾಯಕವಾದುವು. ಈಚೀಚೆಗೆ ಈ ಜಿಲ್ಲೆಯವರು ರಾಜಕೀಯ ಮತ್ತು ಸಾರ್ವಜನಿಕ ಸಂಸ್ಥೆಗಳ ಕಡೆಗೆ ಹೆಚ್ಚಿನ ಗಮನ ಕೊಡಲು ತೊಡಗಿರುವರು. ಮತ್ತು ಮಲೆಬಾರಿನ 'ವೋಟರು'ಗಳು ಈ ಜಿಲ್ಲೆಯಿಂದ ಒಬ್ಬ ಪ್ರತಿನಿಧಿಯಾದರೂ ಇರಬೇಕೆಂದು ನಾವು ಹೇಳಿಕೊಂಡಲ್ಲಿ ಅದು ನ್ಯಾಯವೆಂದು ಸಮ್ಮತಿಸಿದರು. ಹೀಗಾಗಿ ಮಲೆಬಾರಿನಿಂದಲೇ ನನಗೆ ೪೫ ವೋಟುಗಳು ಸಿಕ್ಕಲಿಕ್ಕೆ ಎಡೆಯಾಯಿತು. ನನಗಿಂತ ಎಷ್ಟೋ ಪೂಜ್ಯರಾದವರು ಈ ಕೆಲಸದಲ್ಲಿ ತನುಮನಗಳನ್ನು ಅರ್ಪಿಸಿ ನನಗೆ ಸಹಾಯ ಮಾಡುವುದಕ್ಕೆ ಉದ್ಯುಕ್ತರಾಗಿದ್ದರು. ಈ ಎಲ್ಲಾ ಕಾರಣಗಳಿಂದ ನಮ್ಮ ಪ್ರಯತ್ನವು ಕೈಗೂಡಿತು. ಆದರೆ ಇದೊಂದು ಅಪೂರ್ವ ವಿಷಯವಲ್ಲ. ಹಿಂದೆ ಮೆ। ಪಿ. ಎಫ್. ಎಕ್ಸ್. ಸಾಲ್ಡಾಂಞರೂ, ದಿವಾನ ಬಹದ್ದೂರ ಎನ್. ಸುಬ್ರಾಯರೂ ಇದೇ ರೀತಿಯಲ್ಲಿ ಈ ಜಿಲ್ಲೆಯಿಂದ ಪ್ರತಿನಿಧಿ ಸ್ಥಾನವನ್ನು ಅಲಂಕರಿಸಿರುವರು. ಇವರಿಬ್ಬರೂ ಈ ಶಹರಿನ ಗೃಹಸ್ಥರು. ಈಗ ಚಿಕ್ಕದೊಂದು ಊರಿನವನಾದ ನನಗೆ ನೀವೆಲ್ಲರೂ ಸಹಾಯ ಮಾಡಿದ್ದರಿಂದ ಈ ಶಹರಿನಿಂದ ದೂರವಾಗಿರುವ ಊರುಗಳಲ್ಲಿಯೂ ದೇಶಹಿತೈಷತೆಯ ಲಕ್ಷಣಗಳು ಕಂಡುಬರುತ್ತವೆಂದೂ ಅದಕ್ಕೆ ನಿಮ್ಮ ಆಶೀರ್ವಾದವೂ ಸಹಕಾರವೂ ಅಗತ್ಯ ಇದೆ ಎಂದೂ ಸ್ಪಷ್ಟವಾಗುತ್ತಿದೆ.

ನನ್ನ ಮೆಂಬರಿಕೆಯ ಕಾಲದಲ್ಲಿ ನನ್ನಿಂದ ವಿಶೇಷ ಕಾರ್ಯಗಳು ಆಗಬಹುದು ಎಂದು ಹಲವರು ನಂಬಿರುವಂತೆ ಅವರ ಪತ್ರಗಳಿಂದ ಕಂಡು ಬರುತ್ತದೆ. ಈ ಮೆಂಬರಿಕೆಯಲ್ಲಿ ಗೌರವದೊಂದಿಗೆ ಅನೇಕ ಜವಾಬ್ದಾರಿಗಳೂ ಅಡಕವಾಗಿವೆ ಎಂದು ನಾನು ಚೆನ್ನಾಗಿ ಬಲ್ಲೆ. ಮತ್ತು ಅಂಥ ಜವಾಬ್ದಾರಿಗಳನ್ನು ನಿರ್ವಹಿಸುವುದಕ್ಕೆ ಅಗತ್ಯವಿದ್ದ ಸಮಯವನ್ನು ನಾನು ವ್ಯಯಮಾಡಲು ಸಿದ್ಧವಾಗಿಯೇ ಇದ್ದೇನೆ. ಇದಲ್ಲದೆ ನನ್ನ ಕಾರ್ಯ ಸಾಧನೆಗೆ ಸರಕಾರದವರೊಡನೆ ಹೆಚ್ಚಿನ ಹೊಕ್ಕು ಬಳಿಕೆಯೂ ವಿವೇಚನೆಯೂ ಧಾರಾಳವಾಗಿ ಬೇಕಾಗಿವೆ ಎಂದು ನಾನು ನಿಶ್ಚಯವಾಗಿಯೂ ನಂಬಿರುವೆನು. ಆದರೆ ನ್ಯಾಯವಿಧಾಯಕ ಸಭೆಯ ಕ್ರಮಗಳು ಅನೇಕ ವಿಧಾನದಿಂದ ಮೆಂಬರರ ಕೈಕಟ್ಟುವ ಕಾರಣ ಅಲ್ಲಿ ಕಾರ್ಯಭಾರವು ಸುಲಭ ಸಾಧ್ಯವಲ್ಲ. ಇದಲ್ಲದೆ ನೂತನವಾಗಿ ಸಭೆಯಲ್ಲಿಟ್ಟ ಮೆಂಬರನು ಅಲ್ಲಿಯ ಕಾರ್ಯ ಕ್ರಮಗಳ ಅನುಭವ ಹೊಂದಲಿಕ್ಕೆ ಸ್ವಲ್ಪ ಸಮಯವು ಬೇಕಾಗುತ್ತಿದೆ. ಆದ್ದರಿಂದ ಕೆಲವು ಕಾಲದವರೆಗೆ ನನ್ನ ಚಟುವಟಿಕೆಯ ಕುರುಹುಗಳೇ ಇಲ್ಲವೆಂದು ತಾವು ಅಸಮಾಧಾನಚಿತ್ತರಾಗಬಾರದೆಂದು ನನ್ನ ವಿಜ್ಞಾಪನೆ.

ಒಬ್ಬ ಮೆಂಬರನಿಂದ ಅನೇಕ ಸೌಕರ್ಯಗಳು ಸಿಕ್ಕಬಹುದೆಂದು ಹಾರೈಸುವ ಮುಂಚೆ ಈ ವಿಷಯದಲ್ಲಿ ಒಂದಿಷ್ಟು ಭಾರವು ನಿಮಗೂ ಕೂಡಿಯದೆ ಎಂಬುದನ್ನು ಬೇರೆ ಹೇಳಬೇಕಾದ್ದಿಲ್ಲ. ಮೆಂಬರನು ನಿಮ್ಮ ಕಡೆಯಿಂದ ಸಭೆಯಲ್ಲಿ ವ್ಯವಹರಿಸುವ ಒಬ್ಬ ವಕೀಲನು; ಅವನಿಗೆ ಬೇಕಾದ ದಾಖಲೆಗಳನ್ನು ಅಂದರೆ ಚರ್ಚಿಸಬೇಕಾದ ವಿಷಯಗಳಲ್ಲಿ ಅಗತ್ಯವಿರುವ ಅನುಭವವನ್ನು ಸಂಗ್ರಹಿಸಿ ಕೊಟ್ಟು ಅವನಿಗೆ ಪ್ರೋತ್ಸಾಹಗೊಳಿಸುವ ಭಾರವು ನಿಮ್ಮ ಮೇಲೆ ಇದೆ. ಸ್ವದೇಶಾಭಿಮಾನಿಯ ಹಿಂದಿನ ಸಂಚಿಕೆಗಳಲ್ಲಿ ಈ ಜಿಲ್ಲೆಯ ಅಡಚಣೆಗಳು ಪ್ರಕಟಿಸಲ್ಪಟ್ಟಿವೆ ಎಂದು ಮ। ರಾ। ಸು. ರಘುನಾಥಯ್ಯನವರು ಸೂಚಿಸಿದರು. ಆ ಪಟ್ಟಿಯು ಸಾಕಷ್ಟು ದೊಡ್ಡದೇ ಇದೆ. ಇದಲ್ಲದೆ ಈ ಜಿಲ್ಲೆಯಗಿಂತಲೂ ಅತೀ ದೊಡ್ಡದಾದ ಮಲೆಬಾರಿನಲ್ಲಿ ಇದಕ್ಕಿಂತಲೂ ಹೆಚ್ಚಿನ ಅಡಚಣೆಗಳು ಇರಬಹುದು. ಹೀಗೆ ಎರಡೂ ಜಿಲ್ಲೆಗಳಿಗೆ ಪ್ರತಿನಿಧಿಯಾದ ನಾನು ಅವುಗಳಲ್ಲಿ ಕೆಲವನ್ನಾದರೂ ನಿವಾರಿಸಲಿಕ್ಕೆ ನನ್ನ ಮೆಂಬರಿಕೆಯ ಮಾಯಿದೆ ಎಂದೆಂದಿಗೂ ಸಾಲದು. ಆದಕಾರಣ ಇಲ್ಲಿಯ ಮುಖಂಡರು ಸಭೆ ಸೇರಿ ಅಲ್ಲಲ್ಲಿಯ ಕುಂದುಕೊರತೆಗಳಲ್ಲಿ ಅತೀ ಮಹತ್ವದವುಗಳನ್ನು ಮಾತ್ರ ಹೆಕ್ಕಿ ತೆಗದು ನನಗೆ ಸೂಚಿಸಿದರೆ ಆ ವಿಷಯವಾಗಿ ಬೇಕಾದ ಪ್ರಯತ್ನಗಳನ್ನು ಮಾಡಲಿಕ್ಕೆ ಸಾಧ್ಯವಿದೆ. ಈ ಎಲ್ಲಾ ವಿಷಯಗಳಲ್ಲಿ ಪತ್ರವ್ಯವಹಾರ ನಡಿಸುವುದಕ್ಕೂ ಅಗತ್ಯವಿರುವ ಧಾಖಲೆಗಳನ್ನು ಸಂಗ್ರಹಿಸುವುದಕ್ಕೂ ಇಲ್ಲಿಯೂ ಕಲ್ಲಿಕೋಟೆಯಲ್ಲಿಯೂ ಒಂದೊಂದು ಆಫೀಸನ್ನು ತೆರೆಯಬೇಕೆಂದಿರುವೆನು. ಅಲ್ಲಿ ಸಂಗ್ರಹವಾಗುವ ದಾಖಲೆಗಳು ಮುಂದಿನ ಮೆಂಬರುಗಳಿಗೂ ಪ್ರಯೋಜನಕರವಾಗುವಂತೆ ಏರ್ಪಡಿಸುವುದೆ ನನ್ನ ಉದ್ದೇಶ.

ಈಗ ತತ್ಕಾಲದಲ್ಲಿ ನಮ್ಮ ಜಿಲ್ಲೆಯವರು ವಿಶೇಷ ಗಮನ ಕೊಡತಕ್ಕ ವಿಷಯವು ನಮ್ಮ ಜಿಲ್ಲೆಗೂ ಮೈಸೂರು ಪ್ರಾಂತ್ಯಕ್ಕೂ ರೈಲು ರಸ್ತೆ ಹಾಕಿಸುವ ಪ್ರಯತ್ನವೇ. ಈಗ ಮೈಸೂರು ಸರಕಾರದವರು ಕೊಚ್ಚಿ ಬಂದರದ ಕಡೆಗೆ ಕಣ್ಣಿಟ್ಟಿರುವರು. ಈ ಸಮಯದಲ್ಲಿ ನಾವು ನಿದ್ರಾವಸ್ಥೆಯನ್ನು ತಾಳಿದರೆ ನಮ್ಮ ಅಸಡ್ಡೆಯಿಂದಲೇ ನಮ್ಮ ಜಿಲ್ಲೆಯ ದೆಸೆಗೆಡಿಸಿದಂತೆ ಆಗುವ್ಹದು ನಿಶ್ಚಯ. ಈ ಕಾಲದಲ್ಲಿ ಮೆ। ವಾಯ್ಬರ್ಟರು ಇಲ್ಲಿಯ ಕಲೆಕ್ಟರಾಗಿ ಇದ್ದುದು ನಮ್ಮ ಸುಯೋಗವೆನ್ನಬೇಕು. ಅವರು ಈ ವಿಷಯದಲ್ಲಿ ನಮಗೆ ತುಂಬಾ ಸಹಕಾರಿಗಳಾಗಿರುವರು. ಅದ್ದರಿಂದ ನಾವು ಈ ವಿಷಯದಲ್ಲಿ ಈಗಲೇ ತಕ್ಕ ವ್ಯವಸ್ಥೆ ಮಾಡಬೇಕಾಗುವುದು.

ಇವಲ್ಲದೆ ಇಲ್ಲಿ ಗೇಣಿ ಬಾಕಿ ಆಕ್ಟನ್ನು ತೆಗದುಹಾಕಿರುವರು. ಎಸ್ಟೇಟ ಲೇಂಡ್ ಆಕ್ಟನ್ನು ಜಾರಿಗೆ ತರಲಿಲ್ಲ. ಹೀಗಾಗಿ ಗೇಣಿ ಬಾಕಿ ಕ್ರಮವ್ಯಾಜ್ಯವನ್ನೆ ತರಬೇಕಾಗಿದ್ದು ವರ್ಗದಾರನಿಗೆ ನಷ್ಟ, ಗೇಣಿದಾರನಿಗೆ ದುರ್ದಶೆ ಬರುವುದಕ್ಕೆ ತುಂಬಾ ಎಡೆ ಇದೆ. ಇದಕ್ಕೆ ಅಗತ್ಯವಾದ ವ್ಯವಸ್ಥೆಯನ್ನು ನಾವು ಮಾಡಬೇಕಾಗಿರುವುದು. ಇಂಥ ಚರ್ಚೆಗಳನ್ನು ಎತ್ತುವ ಕಾಲದಲ್ಲಿ ನಿಮ್ಮ ಆಲೋಚನೆಯ ಸಹಾಯವೂ ಬೆಂಬಲವೂ ನನಗೆ ಇರಬೇಕಾದ್ದು ಅತ್ಯಾವಶ್ಯಕ.

ಹೀಗೆ ನಮ್ಮ ಸರಕಾರದಿಂದ ಈ ಎರಡೂ ಜಿಲ್ಲೆಗಳಿಗೆ ನನ್ನ ಕೈಲಾದಷ್ಟು ಸೌಕರ್ಯಗಳನ್ನು ಒದಗಿಸಿಕೊಡುವಂತೆಯೂ ತಾವು ನನ್ನ ಮೇಲಿಟ್ಟ ವಿಶ್ವಾಸವು ನಿರರ್ಥಕವಾಗದಂತೆಯೂ ಆಗಲೆಂದು ಶ್ರೀ ಭಗವಂತನನ್ನು ಪ್ರಾರ್ಥಿಸಿ ನನ್ನ ಮಾತುಗಳನ್ನು ಮುಗಿಸಿರುವೆನು.

ಮಕ್ಕಳು ಹೊಗೆಸೊಪ್ಪು ಸೇದುವ ಕಾರಣವೇನು?

ಮಕ್ಕಳು ಹೊಗೆಸೊಪ್ಪು ಸೇದುವದು ಕೆಟ್ಟದೆಂಬ ವಿಷಯವು ಸರ್ವಸಾಧಾರಣವಾಗಿ ಎಲ್ಲರಿಗೂ ಗೊತ್ತಿರುವ ಸಂಗತಿಯೇ ಆಗಿದೆ. ಅದು ಮಕ್ಕಳ ದೇಹವನ್ನೂ ಬುದ್ಧಿಯನ್ನೂ ಆರೋಗ್ಯವನ್ನೂ ಕೆಡಿಸುತ್ತದೆಂಬದಾಗಿ ಶಾಲೆಗಳಲ್ಲಿಯೂ ಮನೆಗಳಲ್ಲಿಯೂ ಮಕ್ಕಳಿಗೆ ಕಲಿಸುತ್ತೇವೆ. ಇಂಥಾ ಬೋಧನೆಗಳಿಂದ ಫಲಿತಾಂಶವು ಬಾರದ್ದರಿಂದ ಕಾನೂನುಗಳ ಮುಖಾಂತರವಾದರೂ ಈ ದುರಭ್ಯಾಸವನ್ನು ಹತಬಡೆಯಬೇಕೆಂಬ ಚಳವಳವು ನಡೆಯುತ್ತಿದೆ. ಹೀಗಿದ್ದರೂ ಬೀಡಿ ಸಿಗರೇಟು ಸೇದುವ ಮಕ್ಕಳ ಸಂಖ್ಯೆ ಕಳೆದ ೧೦ ವರ್ಷಗಳಲ್ಲಿ ಸೇಕಡಾ ೪೦ರಂತೆ ಹೆಚ್ಚಿಯದೆ. ಇದಕ್ಕೆ ಕಾರಣವೇನು?—ಪ್ರಾಯಸ್ಥರು ಬೀಡಿ ಸೇದುವದರಿಂದಲೇ ಅವರು ಸೇದುತ್ತಾರೆ. ಸದ್ಯ ಪ್ರಾಯಸ್ಥರ ಈ ಅಭ್ಯಾಸವು ಮಕ್ಕಳಿಗೆ ಆದರ್ಶವಾಗಿರುವಷ್ಟು ಕಾಲ ಶಾಲೆಗಳಲ್ಲಿ ಬೋಧಿಸುವದರಿಂದಲಾಗಲೀ ಕಾನೂನು ಕಾಯಿದೆಗಳನ್ನು ಜಾರಿಗೆ ತರುವದರಿಂದಲಾ

ಗಲೀ ಯಾವಪ್ರಯೋಜನವೂ ಇರದು. ಪ್ರಾಯಸ್ಥರ ಈ ಅಭ್ಯಾಸವು ಕೆಟ್ಟದೆಂಬದು ಹುಡುಗರಿಗೆ ಗೊತ್ತಿಲ್ಲ. ಹುಡುಗರಿಂದ ಮಾನಿಸಲ್ಪಡತಕ್ಕ ಈ ಪ್ರಾಯಸ್ಥರ ಅಭ್ಯಾಸವು ಕೆಟ್ಟದೆಂದು ಹುಡುಗರಿಗೆ ಹೇಳುವದೂ ಸರಿಯಲ್ಲ. ಹೀಗೆ ಹೇಳಿದರೆ ಹುಡುಗರ ಎದುರಿಗೆ ಅವರನ್ನು ಅವಮಾನಪಡಿಸಿದಂತಾಗುವದು. ಆದುದರಿಂದ ಹುಡುಗರಿಗೆ ನಾವು "ನಿಮ್ಮ ಹೆತ್ತವರು ಮತ್ತು ಉಪಾಧ್ಯಾಯರು ಮಾಡಿದಂತೆ ಮಾಡು" ಎಂತ ಹೇಳಲೇ ಬೇಕು. ಆದರೆ ಅದರೊಟ್ಟಿಗೆ "ಅವರ ಅಭ್ಯಾಸಗಳನ್ನು ಮಾತ್ರ ಅನುಸರಿಸ ಬೇಡ" ಎಂತ ಕೂಡಿಸಬೇಕಾಗುತ್ತದೆ. ಇದು ಸರಿಯಲ್ಲ; ಹೆತ್ತವರು ವ ಉಪಾಧ್ಯಾಯರು ತಾವೇ ಮಕ್ಕಳಿಗೆ ಕಲಿಸುವ ಬೋಧನೆಗನುಸಾರವಾಗಿ ವರ್ತಿಸಿದರೆ ಹೀಗೆ ಹೇಳುವ ಅಗತ್ಯವಿಲ್ಲ.

ನಮ್ಮ ಹುಡುಗರನ್ನೂ ರಾಷ್ಟ್ರವನ್ನೂ ಕೆಡಿಸಿ ಬಿಡುವ ಅಭ್ಯಾಸಗಳಲ್ಲಿ ಇದಕ್ಕಿಂತ ಕೆಟ್ಟ ಅಭ್ಯಾಸವು ಬೇರೆ ಇಲ್ಲ. ಯಾಕಂದರೆ ಈ ಅಭ್ಯಾಸವು ಮಕ್ಕಳಲ್ಲಿಯೂ ಯುವಕರಲ್ಲಿಯೂ ದಿನೇ ದಿನೇ ಹೆಚ್ಚುತ್ತಾ ಬರುತ್ತದೆ. ಬೀಡಿ ಸೇದುವ ಹುಡುಗನು ತಾನು ತನ್ನ ಜತೆಗಾರರಲ್ಲಿ ಶೂರನು ಎಂದು ಭಾವಿಸಿಕೊಳ್ಳುತ್ತಾನೆ. ಬೀಡಿ ಸಿಗರೇಟು ಸೇದುವವರಿಗೆ ಮಾತ್ರ ಸಭ್ಯ ಮನುಷ್ಯರು ಎಂದು ಹೇಳುತ್ತಾರೆಂಬದೇ ಹುಡುಗರ ಭಾವನೆ. ಆದರೆ ಸಿಗರೇಟ್ ಅಭ್ಯಾಸಕ್ಕೆ ತುತ್ತಾದವರು ಶೂರರಲ್ಲ. ಅಂಥವರು ಅಭ್ಯಾಸದ ಗುಲಾಮರು, ಕರುಣೆಗೆ ಯೋಗ್ಯರು. ಆದರೆ ಬೀಡಿ ಸಿಗರೇಟ್ ಅಭ್ಯಾಸಕ್ಕೆ ಬಲಿಯಾಗದ ಹುಡುಗನೇ ಶೂರನು.

ಈ ಅಭ್ಯಾಸವು ಒಬ್ಬನಿಗೆ ಸಣ್ಣ ವಯಸ್ಸಿನಲ್ಲಿ ಸೋಂಕಿಕೊಂಡರೆ ಅದರಿಂದುಂಟಾಗುವ ಕೆಡಕು ಅಧಿಕವಾಗುವದು. ೨೦ ವರ್ಷಗಳ ಹಿಂದೆ ಈ ಅಭ್ಯಾಸವು ಸೋಂಕಿಕೊಳ್ಳುವ ಸರಾಸರಿ ವಯಸ್ಸು ೨೨ ಆಗಿತ್ತು. ಈಗ ಸರಾಸರಿ ೧೧ ವರ್ಷ ವಯಸ್ಸಿನೊಳಗಿನ ಹುಡುಗರಿಗೆ ಈ ಅಭ್ಯಾಸವು ಸೋಂಕುತ್ತದೆ. ಈಗ ೧೧ ವರ್ಷ ವಯಸ್ಸಿನ ಮೇಲಿನ ಬೀಡಿ ಸೇದುವ ಅಭ್ಯಾಸದ ಹುಡುಗರು ಶಾಲೆಗಳಲ್ಲಿ ಸೇಕಡಾ ೭೫ರಂತೆ ಇರುವರು. ಕೆಲವು ಶಾಲೆಗಳಲ್ಲಿ ಸೇಕಡಾ ೯೦ರಂತೆ ಬೀಡಿ ಸೇದುವ ಇಂಥಾ ಹುಡುಗರಿರುವರು ಎಂಬದಾಗಿ ಗೊತ್ತಿಗೆ ಬಂದದೆ.

ಹುಡುಗರು ಸ್ವಭಾವಿಕವಾಗಿ ಈಗ ಬೀಡಿ ಸಿಗರೇಟನ್ನು ಪ್ರಥಮತಾ ಸೇದಲು ಪ್ರಾರಂಭಿಸುವರು. ಸಿಗರೇಟಿನ ಅಭ್ಯಾಸವು ಮದ್ಯಪಾನದ ಅಭ್ಯಾಸಕ್ಕಿಂತಲೂ ಕೆಟ್ಟದ್ದಾಗಿದೆ. ಇಂಥಾ ದುರಭ್ಯಾಸಕ್ಕೆ ಕಾರಣರು ಯಾರು?—"ಏನು! ನನ್ನ ತಂದೆ, ಶಾಲೆಯ ಉಪಾಧ್ಯಾಯರು ಮತ್ತು ಪಟ್ಟಣದ ಸಭ್ಯ ಗೃಹಸ್ಥರು ಸಿಗರೇಟು ಬೀಡಿ ಸೇದುವದಿಲ್ಲವೋ? - ಅವರಿಗೆ ಏನಾಗಿಯದೆ? ಹುಡುಗರಾದ ನಾವು ಸಿಗರೇಟು ಸೇದಬಾರದಂತೆ. ನಾವು ಸೇದಿದರೆ ಗುಲಾಮರಂತೆ! ಕರುಣೆಗೆ ಯೋಗ್ಯರಂತೆ! ಹಾಗಾದರೆ ನನ್ನ ತಂದೆ, ಶಾಲೆಯ ಮುಖ್ಯೋಪಾಧ್ಯಾಯರು, ಸಹ ಗುಲಾಮರೋ?" ಎಂದು ಒಬ್ಬ ಹುಡುಗನು ತನ್ನಲ್ಲಿ ತಾನೇ ಕೇಳಿಕೊಳ್ಳುವನೆಂತ ಭಾವಿಸಿದರೆ ಅಂಥಾ ಹುಡುಗನ ಈ ಪ್ರಶ್ನೆಗಳಿಗೆ ಉತ್ತರಕೊಡಲು ಸಾಧ್ಯವಿದೆಯೋ? ಇಲ್ಲವೇ ಇಲ್ಲ. ಆದುದರಿಂದ ದೇಶದ ಏಳಿಗೆಯ ಮೂಲ ಕಾರಣರಾಗಿರುವ ಈ ಮಕ್ಕಳ ಅಭಿವೃದ್ಧಿಗೆ ತಡೆಯಾಗಿರುವ ಈ ಕೆಟ್ಟ ಅಭ್ಯಾಸವನ್ನು ಪ್ರಥಮತಾ ಹೆತ್ತವರು, ಉಪಾಧ್ಯಾಯರು, ಮಕ್ಕಳಿಗೆ ಆದರ್ಶದಂತಿರುವ ಸಭ್ಯಗೃಹಸ್ಥರು ಬಿಡಬೇಕು. ಹಾಗಾಗಿ ಈ ದುರಭ್ಯಾಸವನ್ನು ಬಿಡದೆ ಇದ್ದು ಮಕ್ಕಳಿಗೆ ಮಾತ್ರ ಬುದ್ಧಿ ಹೇಳುವದರಿಂದಲಾಗಲೀ ಕಾನೂನು ಕಾಯಿದೆಗಳನ್ನು ಏರ್ಪಡಿಸುವದರಿಂದಾಗಲೀ ಈ ದುರಭ್ಯಾಸದ ಹತಬಡೆಯುವದೆಂದರೆ ಕನಸಿನೊಳಗಿನ ಗಂಜೀ ಸರಿ.

ಗೊಬ್ಬರಗಳನ್ನು ರೈತರಿಗೆ ಸಂಗ್ರಹಿಸಿ ಕೊಡಲು ಆಗತ್ಯವುಳ್ಳ ಪರಸ್ಪರ ಸಹಾಯಕ ಸಂಘಗಳು.

ಈ ಜಿಲ್ಲೆಯಲ್ಲಿ ಪರಸ್ಪರ ಸಹಾಯ ಸಂಘಗಳ ಚಟುವಟಿಕೆಯು ಹಣದ ಲೇವಾದೇವಿಗಳಲ್ಲಿ ಮಾತ್ರ ತೋರಿಬರುವದು. ಇತರ ವಿಷಯಗಳಲ್ಲಿ ಸಹಕಾರ ವಾದವನ್ನು ನಾವು ಇನ್ನೂ ಪ್ರಾರಂಭಿಸಿರೆವು. ಹಣದ ಲೇವಾದೇವಿಯು ಸರಾಗವಾಗಿ ನಡೆದು ತೃಪ್ತಿಕರವಾದ ಫಲವು ಇದರಿಂದ ಪ್ರಾಪ್ತವಾಗಬೇಕಾದರೆ ದೇಶದಲ್ಲಿ ಯಥಾರ್ಥವಾದ ಸಂಪತ್ತಿರಬೇಕು. ಭೂಸಾಗುವಳಿಯು ಕಸಬುದಾರರಾದ ರೈತರೇ ವಿಶೇಷವಾಗಿರುವ ಈ ದೇಶದಲ್ಲಿ ರೈತರ ಸಂಪದಭಿವೃದ್ಧಿಗೆ ಅನುಕೂಲವಾದ ಏರ್ಪಾಡುಗಳು ದೇಶದ ಸಂಪತ್ತನ್ನು ವೃದ್ಧಿಗೊಳಿಸುವವು. ಈ ಜಿಲ್ಲೆಯ ಜಮಿನಾನು ವಿಶೇಷ ಫಲವತ್ತಾಗಿರದು. ಕಾಡುಗಳಿಂದ ದೊರಕುವ ಸೊಪ್ಪುಗಳ ಗೊಬ್ಬರದ ವಿನಹ ಬೇರೊಂದು ಗೊಬ್ಬರದ ಪರಿಚಿತಿಯು ನಮ್ಮಲ್ಲಿ ಈ ತನಕ ವಿಶೇಷವಾಗಿರದು. ಸೊಪ್ಪು ಮೊದಲು ದೊರಕಿದಂತೆ ಈಗ ದೊರಕುವದಿಲ್ಲ, ದೊರಕುವ ಸಂಭವಗಳು ಬಹಳ ಕಡಮೆಯಾಗಿ ಬರುತ್ತಿವೆ. ಆದ್ದರಿಂದ ಜಮೀನನ್ನು ಫಲವತ್ತಾಗಿ ಮಾಡಲು ಅಗತ್ಯವುಳ್ಳ ನೂತನ ಗೊಬ್ಬರಗಳು ಯಾವವಿವೆ ಮತ್ತು ಇವುಗಳನ್ನು ಅತಿ ಬಡವರಾದ ನಮ್ಮಲ್ಲಿಯ ರೈತರಿಗೆ ಹೇಗೆ ಸಂಗ್ರಹಿಸಿಕೊಡಬಹುದೆಂಬದನ್ನು ವಿಚಾರಿಸಿ ತಿಳಿಯುವುದು ಅಗತ್ಯ. ಗೊಬ್ಬರಗಳ ಮತ್ತು ಅವುಗಳನ್ನು ಉಪಯೋಗಿಸುವ ವಿಧಾನಗಳ ಕುರಿತು ಈಗಲೀಗೆ ಹಲವು ನೂತನವಾದ ಮತ್ತು ವಿಶೇಷ ಲಾಭಕರವಾದ ಸಂಗತಿಗಳು ಗೊತ್ತಾಗುತ್ತ ಬರುತ್ತವೆ. ನೈಟ್ರೇಟ್ ಒಫ್ ಸೋಡಾ (Nitrate of Soda) ಎಂಬ ಸೌಳು ಗೊಬ್ಬರವನ್ನು ಬಗೆ ಬಗೆಯ ಪೈರುಗಳಿಗೆ ಉಪಯೋಗಿಸಿದಲ್ಲಿ ವಿಶೇಷ ಪ್ರಯೋಜನ ಉಂಟಾಗುತ್ತದೆಂತ ದೃಷ್ಟಾಂತಗಳ ಮೂಲಕ ಅಲ್ಲಲ್ಲಿ ತಿಳಿದುಬಂದಿರುವದು. ಹಿಂಡಿಯನ್ನು ಗೊಬ್ಬರವಾಗಿ ಉಪಯೋಗಿಸಿದಲ್ಲಿ ಅದರಿಂದ ಸಹ ಬೆಳೆಯು ಸಮೃದ್ಧಿಯಾಗಿ ರೈತರ ಲಾಭವು ಅಧಿಕವಾಗುತ್ತದೆಂತ ತಿಳಿದು ಮುಂಬಯಿ ಪ್ರಾಂತ್ಯದ ಕೆಲವು ರೈತರು ಹಿಂಡಿಯನ್ನು ತಮ್ಮ ಗದ್ದೆಗೆ ಹಾಕಲು ಪ್ರಾರಂಭಿಸಿರುವರು. ಮುಂಬಯಿ ಪ್ರಾಂತ್ಯದಲ್ಲಿ ಹಿಂಡಿ, ನೈಟ್ರೇಟ್ ಒಫ್ ಸೋಡಾ ಮೊದಲಾದ ಗೊಬ್ಬರಗಳ ಸಂಗ್ರಹವನ್ನಿಟ್ಟು ರೈತರುಗಳಿಗೆ ಇವುಗಳನ್ನು ಬೇಕಾದಂತೆ ಕೊಡಲು ಪರಸ್ಪರ ಸಹಾಯ ಸಂಘಗಳು ಸ್ಥಾಪಿಸಲ್ಪಟ್ಟಿವೆ. ರೂ. ೭೫೦೦೦ರ ಭಂಡವಾಳದ ಇಂಥಾದೊಂದು ಸಂಘವು ಗೊಬ್ಬರದ ವ್ಯಾಪಾರದಿಂದ ಸೇಕಡಾ ೨೫ರಂತೆ ಲಾಭವನ್ನು ಪಡೆದಿರುವದರ ಹೊರತು ರೈತರಿಗೆ ಹಿಂಡಿಯನ್ನು ಪೇಟೆ ಧಾರಣೆಗಿಂತ ಅಗ್ಗವಾದ ದರದಲ್ಲಿ ಒದಗಿಸಿ ಕೊಡುತ್ತಿರುವದು. ಮುಂಬಯಿಯ ದಕ್ಷಿಣ ಪ್ರದೇಶಗಳಲ್ಲಿಯ ಕಬ್ಬಿನ ಸಾಗುವಳಿ ಪ್ರಾಂತ್ಯಗಳಲ್ಲಿ ಈ ವ್ಯವಸಾಯಕ್ಕೆ ಬೇಕಾದ ಗೊಬ್ಬರವನ್ನು ಸಂಗ್ರಹಿಸಿ ಕೊಡಲು ರೂ. ೨೦,೦೦೦ ಭಂಡವಾಳದ ಒಂದು ಪರಸ್ಪರ ಸಹಾಯಕ ಸಂಘವು ಸ್ಥಾಪಿಸಲ್ಪಟ್ಟಿರುವದು.

ನಮ್ಮ ಜಿಲ್ಲೆಯಲ್ಲಿ ಇಂಥಾ ಸಂಘಗಳನ್ನು ಸ್ಥಾಪಿಸಬಹುದು. ಒಂದುವೇಳೆ ಪ್ರಾರಂಭದಲ್ಲಿ ಈ ಸಂಘಗಳನ್ನು ಪ್ರತ್ಯೇಕವಾಗಿ ಸ್ಥಾಪಿಸುವದು ಅನನುಕೂಲವೆಂತ ಕಂಡು ಬಂದರೆ 'ಲೇವಾದೇವಿ' ಪರಸ್ಪರ ಸಹಾಯಕ ಸಂಘಗಳು (Cooperative Credit Societies) ಗೊಬ್ಬರಗಳ ಸಂಗ್ರಹವನ್ನು ಇಟ್ಟುಕೊಂಡು ತಮ್ಮ ಸಂಘದ ಮೆಂಬರುಗಳಲ್ಲಿ ರೈತರಾಗಿರುವಂಥವರಿಗೆ ಅವುಗಳನ್ನು ವಿಕ್ರಯಿಸುವ ಉಪಕಾರವನ್ನು ನಮ್ಮ ಸಂಘದವರು ಕೈಕೊಳ್ಳಬಹುದು. ಗೊಬ್ಬರಗಳ ವ್ಯಾಪಾರದ ಕಂಪೆನಿಯವರು ಮುಖ್ಯವಾಗಿ ನೈಟ್ರೇಟ್ ಸಂಘದವರು ಪರಸ್ಪರ ಸಹಾಯಕ ಸಂಘಗಳಿಗೆ ತಮ್ಮ ಗೊಬ್ಬರವು ನಿರಾಯಾಸವಾಗಿ ದೊರೆಯುವಂತೆ ಮಾಡುತ್ತಾರೆಂಬದಾಗಿ ತಿಳಿಯುತ್ತೇವೆ.

ಗೊಬ್ಬರಗಳ ಸಂಗ್ರಹದಲ್ಲಿ ಇಷ್ಟು ಅನುಕೂಲತೆಗಳಿರುವಾಗ ಪರೀಕ್ಷಾರ್ಥವಾಗಿ ಯಾವದೂ ಪರಸ್ಪರ ಸಹಾಯಕ ಸಂಘಗಳು ರೈತರ ಅಭಿವೃದ್ಧಿಯ ಈ ಏರ್ಪಾಡನ್ನು ಏಕೆ ಪ್ರಾರಂಭಿಸಕೂಡದು?

ಪತ್ರವ್ಯವಹಾರ.

ಪತ್ರಕರ್ತರೇ,

ಚೇಯರ್‌ಮೇನರ ಚುನಾವಣೆ ಪ್ರಾರಂಭದಿಂದ ಇಲ್ಲಿಯ ಮುನ್ಸಿಪಲ್ ವಿಷಯಗಳು ತಮ್ಮ ಪತ್ರದಲ್ಲಿ ಬಂದ ರೀತಿಯಲ್ಲಿಯೇ ಪಟ್ಟಣಿಗರ ಅನುಭವಾರ್ಥವಾಗಿ ಇನ್ನು ಮುಂದೆಯೂ ಇವುಗಳ ಪ್ರಸ್ತಾಪವನ್ನು ತಮ್ಮ ಪತ್ರದಲ್ಲಿ ಆಗಿಂದಾಗ್ಯೆ ಮಾಡುವದು ಅಗತ್ಯವಾಗಿದೆ. ರಾವ್ ಸಾಹೇಬ ಡಾಕ್ಟರ ವರ್ಗೀಸರವರು ಚೇಯರ್ಮೇನರಾದ್ದರಿಂದ ನಮ್ಮಲ್ಲಿ ಎರಡು ಕೋರಿಕೆಗಳಿಗೆ ಕಾರಣವುಂಟು. ಮುನ್ಸಿಪಲ್ ಕೌನ್ಸಿಲಿನ ಮೂಲಕ ನಡೆಯುವ ರೋಗಿಗಳ ಪರಾಂಬರಿಕೆ ಮತ್ತು ಆರೋಗ್ಯ ಏರ್ಪಾಡುಗಳು ಮುಂಚೆಗಿಂತ ಇನ್ನಷ್ಟು ಹೆಚ್ಚಿನ ಆಸಕ್ತಿಯಿಂದ ನಡಿಸೋಣಾಗುವವೆಂದು ಕೋರುತ್ತೇವೆ. ಈಗ ಸೆನಿಟರಿ ಡಿಪಾರ್ಟಮೆಂಟಿಗೆ ಚೇತನವು ವಿಶೇಷವಾಗಿದ್ದಂತೆ ತೋರಿಬರುವದಿಲ್ಲ. ಹಲವು ವಾರಗಳಂದಿನಿಂದ ಪಾಯಿಖಾನೆಗಳ ದಾರಿಯನ್ನು ಸಹ ತೋಟಿಗಳು ಸಂದರ್ಶಿಸುವುದನ್ನು ಬಿಟ್ಟಿದ್ದರಿಂದ ಮನೆ ವಠಾರಗಳಲ್ಲಿ ಗಲೀಜನ್ನು ಹೇಳಿ ತೀರಿಸುವದು ಕಷ್ಟ. ಕಾಫಿ ದುಖಾನು ಅಥವಾ ಮಖಾನುಗಳಿಂದ ಆಗುವ ಅನಾರೋಗ್ಯಕ್ಕೆ ಮಿತಿಯೇ ಇಲ್ಲ. ಮನೆ, ಬಚ್ಚಲು ಕೊಟ್ಟಿಗೆ, ಪಾಯಿಖಾನೆಗಳನ್ನು ಪುರಜನರು ಕಟ್ಟಿಸುವಾಗ ಇವುಗಳಿಗೆ ಬೇಕಾದ ಲೈಸನ್ಸು ಸಾಧಾರಣ ಕಟ್ಟಡಗಳು ಪೂರ್ಣ ತೀರಿ ಒಂದೆರಡು ತಿಂಗಳುಗಳಾದನಂತರ ದೊರಕುತ್ತವೆ. ಈ ಭಾಗದಲ್ಲಿ ಸೆನಿಟರಿ ಇಲಾಖೆಯ ಸಹಕಾರವು ಜನರಿಗೆ ಒಂದಿಷ್ಟಾದರೂ ಇಲ್ಲ. ಮುನ್ಸಿಪಲ್ ಸೆನಿಟರಿ ಇಲಾಖೆಯ ಆಫೀಸರರ ಮೇಲ್ವಿಚಾರವು ಯಾರ ಕೈಯಲ್ಲಿ? ಮತ್ತು ಅದು ಮಾಡತಕ್ಕವರು ಯಾರೆಂಬುದು ಯಾರಿಗೂ ತಿಳಿಯದು.

ರೋಗಿಗಳ ಪರಾಂಬರಿಕೆಯಾದರೋ ಈ ಮೊದಲೇ ಡಾಕ್ಟರರ ಕೈಕೆಳಗೆನೇ ನಡಿಯುತ್ತದೆ. ಅದರ ಗುಣದೋಷಗಳು ಡಾಕ್ಟರರೇ ತಿಳಕೊಂಡಿರುವರಾದ್ದರಿಂದ ಅದನ್ನು ಕುರಿತು ವಿಶೇಷ ಪ್ರಸ್ತಾಪಗಳನ್ನು ಎತ್ತಬೇಕೆಂತಿಲ್ಲ. ನಿಷ್ಕಾರಣವಾಗಿ ಜನರು ಬಹಳ ಹೊತ್ತು ಕಾಯುವದು, ಮತ್ತು ಡಾಕ್ಟರರನ್ನು ನೋಡಲಿಕ್ಕಾಗದೆ ನಿರಾಶೆಗೊಂಡು ಮನೆಗೆ ಹೋಗುವದು, ಇಂಥಾ ಕೊರತೆಗಳಿಗೆ ಎಡೆಕೊಡದಂತೆ ಡಾಕ್ಟರ್ ಚೇಯರ್‌ಮೇನರು ಮಾಡಿದರೆ ಬಹಳ ಉಪಕಾರವಾದೀತು. ಆಸ್ಪತ್ರೆಯ ಔಷಧಿಗಳ ಮಿಶ್ರಣ ಕೋಣೆಯಿಂದ ಔಷಧಿಗಳು ಹ್ಯಾಗೆ ಕೊಡೋಣಾಗುತ್ತವೆ ಎಂಬುವ ವಿಷಯ ಇನ್ನಷ್ಟು ಹೆಚ್ಚಿನ ಮೇಲ್ವಿಚಾರ ಅಗತ್ಯ ತೋರಬಹುದು. ಮೊದಲು ಬಂದವರು, ನಂತರ ಬಂದವರು, ಬಡವರು, ದೊಡ್ಡವರು ಎಂಬುವದರಲ್ಲಿ ತಾರತಮ್ಯವಿದೆಯೋ, ಅಂಥಾ ತಾರತಮ್ಯ ವಿಚಾರವನ್ನು ಹ್ಯಾಗೆ ಮಾಡಬಹುದು? ಎಂಬೀ ವಿಷಯಗಳನ್ನು ಡಾಕ್ಟರ್ ಚೇಯರ್‌ಮೇನರು ಪದೇ ಪದೇ ಲಕ್ಷ್ಯಕ್ಕೆ ತಂದುಕೊಳ್ಳುವದು ಅಗತ್ಯ.

(ಮುಂದೆ ಸಾಗುವದು)

ಯಕ್ಷಗಾನಿ.

ಯೂರೋಪದ ಮಹಾಯುದ್ಧ.

ಬ್ರಿಟಿಷರು ಶತ್ರುಗಳ ಮೇಲೆ ನುಗ್ಗಿಹೋಗಿ ಮಾಡಿದ ಮಹಾ ಕದನದ ದ್ವಿತೀಯಾರಂಭವು ಸಮಾಪ್ತಿಯಾಗುತ್ತಾ ಬಂತು. ಬ್ರಿಟಿಷ ಸೇನಿಕರು ಈಗ ಶತ್ರುಗಳಿಂದ ಗೆದ್ದುಕೊಂಡ ಸ್ಥಳಗಳನ್ನು ಬಲಕಾಯಿಸುತ್ತಾ ನುಗ್ಗಿಬರುವ ಶತ್ರುಗಳನ್ನು ಎದುರಿಸುತ್ತಾ ಇದ್ದಾರೆ. ಘೋರ ಕಾಳಗವು ನಡಿಯುತ್ತಿದೆಯಾದರೂ ಬ್ರಿಟಿಷರು ಗೆದ್ದುಕೊಂಡ ಎಲ್ಲಾ ಸ್ಥಳಗಳನ್ನು ತಮ್ಮ ಸ್ವಾಧೀನತೆಯಲ್ಲಿಯೇ ಇಟ್ಟುಕೊಂಡಿರುವರು. ಒಟ್ಟಾರೆ ಹೇಳುವದಾದರೆ ಈ ದ್ವಿತೀಯಾರಂಭದ ಕದನಗಳಲ್ಲಿ ಜರ್ಮನರು ಬಲಕಾಯಿಸಿಕೊಂಡಿದ್ದ ೩ನೇ ಸೇನಾಸಾಲು ಸುಮಾರು ೫ ಮೈಲು ವಿಸ್ತೀರ್ಣದಲ್ಲಿ ಮುರಿಯಲ್ಪಟ್ಟಿತು. ಬ್ರಿಟಿಷರ ಸೇನಾಸಾಲು ಈಗ ಟ್ರೈನ್‌ವಾಲಿನ ಬಡಗುವ ಮಡಲಿನ ಆಚೆಬಾಜಿನಿಂದ ತೆಂಮೂಡಲಿಗೆ ಇನ್ನೂ ಜರ್ಮನರ ವಶವಿರುವ ಪೋಜಿಯಾಸ್ಸಿನ ದಕ್ಷಿಣದಲ್ಲಿ ಮುಂದರಿದದೆ. ಬೆಜಂಟಿನ್ ಲೆ-ಪೆಟಿಟನ ಪೂರ್ವೋತ್ತರದಲ್ಲಿ ಉತ್ತರಕ್ಕೆ ಮತ್ತು ಸ್ವಲ್ಪ ಪೂರ್ವಕ್ಕೆ ಲೋಂಗೆವೆಲ್ ಎಂಬಲ್ಲಿಗೆ ವಿಸ್ತರಿಸಿ ಅಲ್ಲಿಂದ ತಿರಿಗಿ ದಕ್ಷಿಣಕ್ಕೆ ಗಲ್ಲಿಮೊಂಟಿನ ಪಶ್ಚಿಮಕ್ಕೆ ಹಾರ್ಡೆಕೋರ್ಟಿನ ಫ್ರೆಂಚ ನೆಲೆಯವರೆಗೆ ವಿಸ್ತರಿಸಿಯದೆ. ಹೀಗೆ ಬ್ರಿಟಿಷರಿಗೆ ಜಯದ ಮೇಲೆ ಜಯವೇ ಆಗುತ್ತಿರುವದಾದರೂ ದಿನೇದಿನೇ ಬರುತ್ತಿರುವ ಪ್ರಾಣಾಪಾಯ ಹೊಂದಿದ ಬ್ರಿಟಿಷ ಆಫೀಸರರ ಪಟ್ಟಿಯಿಂದ ಒಂದ ವೇಳೆ ಜನಸಾಮಾನ್ಯರು ಧೃತಿಗೆಡಬಹುದು. ಆದರೆ ಬಹಳ ಕಾಲದಿಂದ ಬೆಳೆದುಬಂದ ಈ ಮಹಾ ಯುದ್ಧವನ್ನು ಮುಂದೆಬಂದು ಕಾಢಾದಿ ಜರ್ಮನರ ಕ್ಷಾತ್ರೀಯ ವೃತ್ತಿಯನ್ನು ನಿರ್ಮೂಲನಮಾಡಿಬಿಡಬೇಕೆಂದು ಬ್ರಿಟಿಷರು ಸಂಕಲ್ಪಮಾಡಿರುವದರಿಂದ ಈಗ ಭೀಕರ ಸ್ವರೂಪದಲ್ಲಿ ನಡೆಯುವ ಕದನದಲ್ಲಿ ಬಹಳ ಪ್ರಾಣಾಪಾಯಗಳು ಆಗುವದೇನೋ ಆಶ್ಚರ್ಯವಲ್ಲ. ಅದರಲ್ಲಿಯೂ ಬ್ರಿಟಿಷರಿಗೆ ಈ ಕದನಗಳಲ್ಲಿ ಆಗುವ ಫಲಿತಾಂಶವನ್ನು ಲೆಕ್ಕಿಸುವದಾದರೆ, ಆ ಪ್ರಾಣನಷ್ಟವು ಅಲ್ಪವಾದುದೆಂದೇ ಹೇಳಬೇಕು.

ಪಶ್ಚಿಮ ರಣರಂಗದಲ್ಲಿ.

ವೆರ್ಡನಿನ ಕಾಳಗವು ಇನ್ನೂ ಅಂತ್ಯವಾಗಿರುವದಿಲ್ಲ. ವೆರ್ಡನಿನಲ್ಲಿ ಭೀಕರ ಕಾಳಗಗಳೇನೂ ನಡೆಯುವದಿಲ್ಲವಾದರೂ ಅದರ ಆಜುಬಾಜಿನಲ್ಲಿರುವ ದಿನ್ನೆ ೩೦೪ ಮೊದಲಾದ ಪ್ರಾಂತ್ಯಗಳಲ್ಲಿ ಜರ್ಮನರ ಸೇನಿಕರು ಹಲ್ಲೆಮಾಡುತ್ತಿದ್ದಾರೆ. ಆದರೆ ಫ್ರೆಂಚರು ಅವರಿಗೆ ಬಿಟ್ಟುಕೊಡದೆ ಪ್ಲರೆಯಲ್ಲಿ ಮುಂದಾಯುತ್ತಲಿರುವರು. ಫ್ರೆಂಚರು ಸೊಮ್ಮೆಯಲ್ಲಿ ಒಟ್ಟಿಗೆ ಜುಲಾಯಿ ತಾ. ೧೩ರವರೆಗೆ ಶತ್ರುಗಳ ೨೩೫ ಆಫೀಸರರನ್ನೂ, ೧೧,೯೭೬ ಸೇನಿಕರನ್ನೂ, ೬೫ ಫಿರಂಗಿಗಳನ್ನೂ, ೮೯ ಯಂತ್ರಚಾಲಿತ ಫಿರಂಗಿಗಳನ್ನೂ, ಇನ್ನು ಅನೇಕ ವಿಧದ ಯುದ್ಧ ಸಾಮಾಗ್ರಿಗಳನ್ನೂ ಸೆರೆಹಿಡಿದಿರುತ್ತಾರೆ. ಫ್ರೆಂಚರು ತಿಯಾಮೋಂಟಿನ ತೆಂಕಡುವಲು ದಿಕ್ಕಿನಲ್ಲಿ ಜರ್ಮನರ ಕಂದಕಗಳನ್ನು ಸ್ವಾಧೀನಮಾಡಿಕೊಂಡಿರುವರೆಂತ ಜರ್ಮನರೇ ಪ್ರಕಟಿಸಿರುತ್ತಾರೆ. ಫ್ರೆಂಚರ ಸಹಾಯಕ್ಕೆ ಪಶ್ಚಿಮ ರಣರಂಗಕ್ಕೆ ಹೋದ ರಶ್ಯನರ ಸೇನಿಕರು ಒಂದು ಕಡೆಯಲ್ಲಿ ಜರ್ಮನ ಕಂದಕಗಳ ಮೇಲೆಬಿದ್ದು ಕೆಲವರನ್ನು ಹತಬಡೆದು ಕೆಲವರನ್ನು ಸೆರೆಹಿಡಿದಿರುವರು.

ಕೈಸರರು ಈಗ ಸೊಮ್ಮೆಯ ರಣರಂಗದಲ್ಲಿರುವರೆಂಬದಾಗಿ ಬರ್ಲಿನ್ ನಗರದ ವಾರ್ತೆಯಿಂದ ತಿಳಿದುಬರುತ್ತದೆ.

ಬ್ರಿಟಿಷರ ಜನರಲ್ ಸರ್ ಹೇಗರವರು ಪುನಃ ಬ್ರಿಟಿಷರಿಗೆ ದೊಡ್ಡ ಜಯವಾಗಿರುವದೆಂತ ತಿಳಿಯಪಡಿಸಿರುತ್ತಾರೆ. ಬ್ರಿಟಿಷರು ಜರ್ಮನರ ೨ನೇ ಸೇನಾಸಾಲಿನ ೧೫೦೦ ಗಜ ರಣರಂಗದ ಮೇಲೆ ಬಿದ್ದು ಬೆಜಂಟಿನ್ ಪೆಟಿಟ್‌ನಿಂದ ಮತ್ತು ಲೋಂಗ್‌ವಾಲಿನ ಪಶ್ಚಿಮದಲ್ಲಿ ತಮ್ಮ ಸೇನಾಸಾಲುಗಳನ್ನು ರೂಪಿಸಿದರು. ಇಲ್ಲಿ ಕೈದುಡುಕಿನ ಕಾಳಗವು ಎಡೆಬಿಡದೆ ನಡೆದು ಬ್ರಿಟಿಷರು ಶತ್ರುಗಳ ಮುಖ್ಯಸ್ಥಾನವನ್ನೇ ಹಲ್ಲೆಮಾಡಿ ೧೨೪ ಕಾವಲಿ ಸೇನಿಕರನ್ನು ಸೆರೆಹಿಡಿದರು. ಹೀಗೆ ಒವಿಲ್ಲರ್ಸ್ ಲಾಬೊಸೆಲ್ಲೆ ಗ್ರಾಮವು ಬ್ರಿಟಿಷರ ಕೈಯಲ್ಲಾಯಿತು. ಬ್ರಿಟಿಷರ ಕೈಸೇರಿದ ಶತ್ರುಗಳ ಕಾಗದಪತ್ರಾದಿಗಳಿಂದ ಶತ್ರುಸೇನೆಗಳಲ್ಲಿ ವಿಪರೀತ ನಷ್ಟವಾಗಿರುವದೆಂತಲೂ ಜರ್ಮನರ ಈಗಿನ ಒಂದು ಕಂಪೆನಿ ಸೇನೆ ಅಂದರೆ ಒಬ್ಬ ಆಫೀಸರನು ಮತ್ತು ೧೨ ಸೇನಿಕರೆಂತಲೂ, ಈ ಕಂಪೆನಿ ಸೇನೆಯು ಬ್ರಿಟಿಷರ ಫಿರಂಗಿಗಳ ಹೊಡತವನ್ನು ಎದುರಿಸಲಾರದೆ ಎದೆಗುಂದಿರುವರೆಂತಲೂ ತಿಳಿದುಬರುತ್ತದೆ.

ಬ್ರಿಟಿಷರು ಪುನಃ ಹೆಚ್ಚಿಗೆ ಸೇನಿಕರನ್ನು ಸೆರೆಹಿಡಿದಿರುತ್ತಾರೆ. ಒಟ್ಟಿಗೆ ೧೮೯ ಆಫೀಸರರು, ೧೦,೭೭೯ ಸೇನಿಕರು ಬ್ರಿಟಿಷರ ಸೆರೆಬಿದ್ದಿರುವರು. ಶತ್ರುಗಳ ಬಹಳ ಯುದ್ಧ ಸಾಮಾಗ್ರಿಗಳೂ ಬ್ರಿಟಿಷರ ವಶವಾಗಿರುತ್ತವೆ.

ಡೆಲ್‌ವಿಲ್ಲೆ ಅರಣ್ಯ ಮತ್ತು ಲೋಂಗ್‌ವೆಲ್ಲೆಯಲ್ಲಿ ಕಠಿಣ ಕಾಳಗ ನಡೆದು ಜರ್ಮನರು ಸ್ವಲ್ಪ ಮುಂದರಿದರು. ಆದರೆ ಇಲ್ಲಿ ಜರ್ಮನರಿಗಾದ ನಷ್ಟವು ಅತಿ ವಿಶೇಷವಾಗಿರುವದು. ಮತ್ತು ಬ್ರಿಟಿಷರು ಪುನಃ ನುಗ್ಗಿಹೋಗಿ ಈ ಪ್ರಾಂತ್ಯದಲ್ಲಿ ಕಳಕೊಂಡ ಸ್ಥಳಗಳನ್ನು ಹಿಂದೆ ಪಡಕೊಂಡಿರುತ್ತಾರೆ. ಲೋಂಗ್‌ವೆಲ್ಲೆ ಬೆಜಂಟಿನ್‌ನಲ್ಲಿ ಬ್ರಿಟಿಷರು ಮತ್ತಷ್ಟು ಮುಂದರಿದಿರುವರು. ಜುಲಾಯಿ ತಾ. ೧೪ರಲ್ಲು ಸೆರೆಬಿದ್ದ ಜರ್ಮನ ಸೇನಾಧಿಪತಿಯ ದೈನಿಯಲ್ಲಿ ಬವೇರಿಯನರ ೬ನೇ ರೆಜಿಮೆಂಟ್ ಸೇನೆಯ ೩೫೦೦ ಮಂದಿಯಲ್ಲಿ ೩೦೦೦ ಮಂದಿ ಹತರಾಗಿರುವರೆಂತ ಬರೆದಿತ್ತು. ಮತ್ತೊಂದು ದೈನಿಯಲ್ಲಿ ೧೭೦೦ ಬವೇರಿಯನ್ ಸೇನಿಕರಲ್ಲಿ ೯೮೦ ನಷ್ಟವಾಗಿರುವರೆಂತ ಸೂಚಿಸಿತ್ತು. ಇತರ ೨ ಬವೇರಿಯನ್ ರೆಜಿಮೆಂಟ್‌ಸೇನೆಗಳಿಗೂ ಅಪರಿಮಿತವಾದ ನಷ್ಟವಾಗಿರುತ್ತದೆ. ಬ್ರಿಟಿಷರು ಫೂರಿಸ್ ಅರಣ್ಯದಲ್ಲಿ ಮುಂದರಿದು ಅರಣ್ಯದಿಂದ ಶತ್ರುಗಳನ್ನು ಓಡಿಸಿರುವರು. ರಾತ್ರಿಕಾಲ ಶತ್ರುಗಳು ಪುನಃ ಬ್ರಿಟಿಷರ ಮೇಲೆ ಬಿದ್ದರು. ಆದರೆ ಬ್ರಿಟಿಷರು ಶತ್ರುಗಳಿಗೆ ಎಲ್ಲಿಯೂ ಬಿಟ್ಟುಕೊಡಲಿಲ್ಲ. ಬೆಜಂಟಿನ್ ಲೋಂಗ್‌ವೆಲ್ಲೆ ಸಾಲಿನಲ್ಲಿ ಬ್ರಿಟಿಷರು ಪುನಃ ೧೦೦೦ ಗಜ ಮುಂದರಿದಿರುತ್ತಾರೆ. ಲೋಂಗ್‌ವೆಲ್ಲೆಗ್ರಾಮ ಮತ್ತು ಡೆಲ್‌ವಿಲ್ಲೆ ಅರಣ್ಯದಲ್ಲಿ ಇನ್ನೂ ರೋಷಾವೇಶದಿಂದ ಕದನವು ನಡೆಯುತ್ತಿದೆ.

ಹಾರ್ಡೆಕೋರ್ಟು ಗುಡ್ಡೆ ಮತ್ತು ಸೊಮ್ಮೆಯ ಮಧ್ಯೆ ಫ್ರೆಂಚರು ಮುಂದರಿದು ೪೦೦ ಮಂದಿ ಶತ್ರುಗಳನ್ನು ಸೆರೆಹಿಡಿದಿರುವರು. ಬಾರ್ಲೆಕ್ಸ್ ಮತ್ತು ಸೊಯೆಕೋರ್ಟಿನ ಮಧ್ಯೆ ಇದ್ದ ಶತ್ರುಗಳ ಕಂದಕಗಳ ಮೊದಲನೇ ಸಾಲನ್ನು ಫ್ರೆಂಚರು ಸ್ವಾಧೀನಮಾಡಿಕೊಂಡಿರುತ್ತಾರೆ. ಸೊಮ್ಮೆಯ ಉತ್ತರದಲ್ಲಿ ಸ್ವಾಧೀನಮಾಡಿಕೊಂಡ ಸ್ಥಳಗಳನ್ನು ಫ್ರೆಂಚರು ಬಲಕಾಯಿಸಿಕೊಂಡು ಎಸ್ಟ್ರೆಸ್‌ನಿಂದ ವರ್ಮಾಂಡ್ ಒವಿಲ್ಲರ್ಸಿನ ವರೆಗೆ ಶತ್ರುಗಳ ಮೇಲೆ ಬಿದ್ದು ೨೯೦೦ ಮಂದಿ ಶತ್ರುಸೇನಿಕರನ್ನೂ ೩ ಫಿರಂಗಿಗಳನ್ನೂ ೩೦ ಯಂತ್ರಚಾಲಿತ ಫಿರಂಗಿಗಳನ್ನೂ ಸೆರೆಹಿಡಿದಿರುತ್ತಾರೆ. ಪೋಜಿಯರ್ಸ್ಸಿನಿಂದ ಗುಲ್ಲಿಮೊಂಟಿನ ವರೆಗಿನ ರಣರಂಗಗಳಲ್ಲಿ ಈಗ ಕಠಿಣಕಾಳಗ ಪ್ರಾರಂಭವಾಗಿದೆ. ಬ್ರಿಟಿಷರಿಗೆ ಜಯದ ಮೇಲೆ ಜಯವಾಗುತ್ತಲಿದೆ.

ಪೂರ್ವ ರಣರಂಗ.

ರುಶ್ಯಾ ರಣರಂಗದ ವೋಲಿನಿಯದಲ್ಲಿ ಕಠಿಣಕಾಳಗ ನಡೆದು ರುಶ್ಯನರು ತಾ. ೧೬ರಲ್ಲು ಶತ್ರುಗಳ ೩೧೭ ಆಫೀಸರರನ್ನೂ ೧೨,೬೩೭ ಸೇನಿಕರನ್ನೂ ೩೦ ಫಿರಂಗಿಗಳನ್ನೂ ಸೆರೆಹಿಡಿದಿರುತ್ತಾರೆ. ಜರ್ಮನರು ಲುಕ್ಸಿನಿಂದ ಲಿಪ್ಪನದಿಯ ಹಿಂದೆ ಸರಿದಿರುವರೆಂತ ಜರ್ಮನರೇ ಪ್ರಕಟಿಸಿರುತ್ತಾರೆ. ಇದರಿಂದ ರುಶ್ಯನರ ಒತ್ತಾಟವು ಲೆಂಬರ್ಗಿನ ಕಡೆಗೆ ಅತಿ ತೀಕ್ಷ್ಣವಾಗಿರುವದೆಂತ ಊಹಿಸಬೇಕಾಗುತ್ತದೆ. ರಿಗ್ಗಾ ರಣರಂಗದಲ್ಲಿ ಕಳಕೊಂಡ ಕಂದಕಗಳನ್ನು ಪುನಃ ಪಡೆಯಲು ಜರ್ಮನರು ಯತ್ನಿಸಿದರು. ಆದರೆ ಅವರ ಪ್ರಯತ್ನವು ನಿರರ್ಥಕವಾಗಿರುವದು. ವೋಲಿನಿಯದಲ್ಲಿ ರುಶ್ಯನರಿಗೆ ಆದ ಜಯದಿಂದ ಶತ್ರುಗಳು ಲಿಪ್ಪನದಿಯ ಉತ್ತರ ದಡವನ್ನು ಪೂರ್ಣವಾಗಿ ಬಿಟ್ಟುಹೋಗುವ ಹಾಗೆ ಆಯಿತು.

ರುಶ್ಯನರು ಕಾರ್ಪೇಥಿಯನ ಕಣಿವೆಗಳನ್ನು ದಾಟಿ ಮುಂದರಿಯುತ್ತಿದ್ದಾರೆ.

ರುಶ್ಯನರು ಶತ್ರುಗಳನ್ನು ಕೆಳಗಿನ ಲಿಪ್ಪಾದಿಂದ ಓಡಿಸಿ, ಅವರು ಬಲಕಾಯಿಸಿಕೊಂಡಿದ್ದ ೧೦ ಮೈಲು ವಿಸ್ತೀರ್ಣದ ಪ್ರಾಂತ್ಯವನ್ನು ಸ್ವಾಧೀನಮಾಡಿಕೊಂಡಿರುತ್ತಾರೆ. ೨೦೦ ಸಾವಿರ ಆಸ್ತ್ರಿಯನ ಸೇನಿಕರು ಮಾತ್ರ ರುಶ್ಯದ ದಕ್ಷಿಣಪ್ರಾಂತ್ಯದ ರಣರಂಗದಲ್ಲಿರುವರೆಂತ ಯುದ್ಧವೈಜ್ಞಾನಿಕರು ಅಭಿಪ್ರಾಯಪಡುತ್ತಾರೆ. ರುಶ್ಯನರಿಗೆ ಲಿಪ್ಪಾನದಿಯ ರಣರಂಗಗಳಲ್ಲಿ ಜಯವಾಗುತ್ತಲಿದೆ. ಅವರು ಡ್ವೀನ ನದಿಯನ್ನು ದಾಟಿರುವರೆಂತ ಜರ್ಮನರು ಪ್ರಕಟಿಸಿರುತ್ತಾರೆ.

ಇಟಲಿ.

ಇಟಲಿ ರಣರಂಗದಲ್ಲಿ ಇಟಲಿಯನರು ಪಸೂಬಿಯೋ, ಪೋಸಿನ ಮತ್ತು ಎಸ್ಟಿಕೋದಲ್ಲಿ ಜಯಹೊಂದಿರುತ್ತಾರೆ.

ಟರ್ಕಿ.

ಕೌಕಾಸಸಿನಲ್ಲಿ ಬೈಬರ್ಟ ಎಂಬ ಸ್ಥಳವು ರುಶ್ಯನರ ಸ್ವಾಧೀನವಾಗಿದೆ. ಈ ಪಟ್ಟಣಕ್ಕೆ ತುರ್ಕರು ಬೆಂಕಿಕೊಟ್ಟು ಹೋಗಿರುವರು. ರುಶ್ಯನರ ಕೊಸಕ ಸೇನಿಕರು ೩೩ ಟರ್ಕಿ ಆಫೀಸರರನ್ನೂ ೬೦೮ ಸೇನಿಕರನ್ನೂ ೨ ಯಂತ್ರಚಾಲಿತ ಫಿರಂಗಿಗಳನ್ನೂ ಸೆರೆಹಿಡಿದಿರುತ್ತಾರೆ. ಕೌಕಾಸಸಿನಲ್ಲಿರುವ ರುಶ್ಯನರು ಮುಂದರಿಯುತ್ತಲಿದ್ದು ಕಳೆದ ಕೆಲವು ದಿವಸಗಳಲ್ಲಿ ೮೫ ತುರ್ಕಿ ಆಫೀಸರರನ್ನೂ ೧೨೦೦ ಸೇನಿಕರನ್ನೂ ಸೆರೆಹಿಡಿದಿರುತ್ತಾರೆ. ರುಶ್ಯನರು ಬೈಬರ್ಟಿಗೆ ೪೫ ಮೈಲು ಉತ್ತರದಲ್ಲಿರುವ ಗುಮೋಶಖಾನ್ ಎಂಬ ಸ್ಥಳವನ್ನು ಹಿಡಿದಿರುತ್ತಾರೆ.

ಬಾಲ್ಕಾನ್.

ಈ ರಣರಂಗದಿಂದ ವಿಶೇಷ ವಾರ್ತೆಗಳೇನೂ ಬಂದಿರುವದಿಲ್ಲ.

ಪೂರ್ವ ಆಫ್ರಿಕ.

ಪೂರ್ವ ಆಫ್ರಿಕದಲ್ಲಿ ವಿಕ್ಟೋರಿಯಾ ಸರೋವರದ ಬಳಿ ಇರುವ ಟುಕುನ್ನ ಎಂಬ ಸ್ಥಳವು ಬ್ರಿಟಿಷರ ಸ್ವಾಧೀನವಾಗಿರುತ್ತದೆ.

ಜಲಾಂತರ್ಗಾಮಿ ನಾವೆಗಳು.

ಮೆಡಿಟರೇನಿಯನ್ ಸಮುದ್ರದಲ್ಲಿ ಜರ್ಮನರು ಬ್ರಿಟಿಷರ "ವಿಕ್ಸಿಜು" ಎಂಬ ಹಡಗವನ್ನು ಮುಳುಗಿಸಿರುತ್ತಾರೆ. ರುಶ್ಯನರ ಜಲಾಂತರ್ಗಾಮಿ ನಾವೆಯು ಜರ್ಮನರ "ಕ್ಲೈಮ" ಎಂಬ ಹಡಗವನ್ನು ಮುಳುಗಿಸಿರುತ್ತದೆ. ಬ್ರಿಟಿಷರ "ಯುಪ್ರೋಬಿಯ" "ವಿಲ್ಸನ್ ಹಾಲ್" "ಎಂಜಲಿನಿಯ" "ವರ್ಜೀನಿಯ" ಇಟಲಿಯನರ "ಸಿರೆ" "ಎಂಗೆಲ್ಲಾ" ಫ್ರೆಂಚರ "ವಿಲ್ಲೆಡಿವನ್" ಹಡಗಗಳು ಮುಳುಗಿಸಲ್ಪಟ್ಟಿವೆ.

ಬ್ರಿಟಿಷರ "ಗ್ರೇಂಗೆರೊವನ್" ಮತ್ತು "ಕವಾರ್" ಎಂಬ ಹಡಗಗಳು ಮೆಡಿಟರೇನಿಯನ್ ಸಮುದ್ರದಲ್ಲಿ ಮುಳುಗಿಸಲ್ಪಟ್ಟಿವೆ. ನಾವಿಕರು ರಕ್ಷಿಸಲ್ಪಟ್ಟಿರುವರು. "ನೈಸರ್" ಎಂಬ ಬ್ರಿಟಿಷರ ಹಡಗವೂ ಜರ್ಮನರ ಜಲಾಂತರ್ಗಾಮಿ ನಾವೆಗೆ ತುತ್ತಾಗಿದೆ.

ಉತ್ತರ ಹಿಂದೂಸ್ಥಾನ.

ಜುಲಾಯಿ ತಾ. ೧೫ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ೧೧೮೦ ಮಂದಿಗೆ ಪ್ಲೇಗಬೇನೆಯು ಹೊಂಕಿ ೮೩೮ ಮರಣಗಳಾದವು. ಈ ಪೈಕಿ ಮುಂಬಾಯಿ ಸಂಸ್ಥಾನದಲ್ಲಿ ೩೨೪, ಮದ್ರಾಸ್ ೭೮, ಬಂಗಾಳ ೧, ಬಿಹಾರ್ ಮತ್ತು ಒರಿಸ್ಸ ೮, ಯುನೈಟೆಡ್ ಪ್ರೊವಿನ್ಸ್ ೯, ಬರ್ಮ ೧೭೪, ಮಧ್ಯ ಸಂಸ್ಥಾನ ೩, ಮೈಸೂರು ೧೧೯, ಹೈದರಾಬಾದ್ ೧೮೧ ಮರಣಗಳಾದವು.

ಹಿಂದೂಸ್ಥಾನದ ರೈಲ್ವೆಗಳಿಂದ ಇದೇ ಕಳೆದ ಎಪ್ರಿಲ್ ತಾ. ೧ರಿಂದ ಜುಲಾಯಿ ತಾ. ೮ರವರೆಗೆ ಕಳೆದ ವರ್ಷದ ಇದೇ ಸಮಯಕ್ಕಿಂತಲೂ ೮೯,೪೫,೪೯೧ ರೂಪಾಯಿಗಳ ಹೆಚ್ಚಿಗೆ ಹುಟ್ಟುವಳಿ ಆಗಿರುತ್ತದೆ.

ಹಿಂದೀ ರಾಜಕುಮಾರನೊಬ್ಬನ ವಿಷಯ ಒಂದು ಪತ್ರಿಕೆಯಲ್ಲಿ ಪ್ರಕಟವಾದ ವಾರ್ತೆಯಿಂದ ಹಿಂದೀ ಜನರ ರಾಜನಿಷ್ಠೆಯ ಮಹತ್ವವು ಹೊರಬಿದ್ದಿರುತ್ತದೆ. ಯುದ್ಧ ಪ್ರಾರಂಭವಾದಾಗ ಆ ರಾಜಕುಮಾರನು ವೈಸರಾಯರವರಿಗೆ ಮಾಡಿದ ವಿಜ್ಞಾಪನೆಯಲ್ಲಿ "ನನಗೆ ೧೬ ವರ್ಷ ಎಂಬದು ನಿಜ. ಆದರೆ ೧೬ ವಯಸ್ಸಿನ ಹಿಂದೀಯು ಮನುಷ್ಯನೇ ಆಗಿರುತ್ತಾನೆ. ಸಾರ್ವಭೌಮರಿಗಾಗಿ ಸೇವೆ ಮಾಡಲು ರಣರಂಗಕ್ಕೆ ಹೋಗಲಿಕ್ಕೆ ತನಗೆ ಅಪ್ಪಣೆ ಪಾಲಿಸಬೇಕು. ನನ್ನ ಪ್ರಜಾ ಜನರೆಲ್ಲಾ ಯುದ್ಧಕ್ಕೆ ಹೋಗುತ್ತಲಿದ್ದಾರೆ. ನಾನು ಈಗ ಸುಮ್ಮನೆ ಕೂತುಕೊಂಡು ನಂತರ ರಾಜ್ಯಭಾರಮಾಡಲಿಕ್ಕೆ ಆರಂಭಿಸಿದಾಗ ಅವರು 'ನಾವು ಸ್ವಾತಂತ್ರ್ಯಕ್ಕಾಗಿ ಕಾದಾಡುತ್ತಿರುವಾಗ, ನೀನೇನು ಮಾಡುತ್ತಿದ್ದೀ' ಎಂದು ಕೇಳಲಿಕ್ಕಿಲ್ಲವೋ" ಎಂಬದಾಗಿ ಬರೆದಿದ್ದನು. ಈ ವಿಜ್ಞಾಪನೆಯನ್ನು ವೈಸರಾಯ ಪ್ರಭುಗಳು ಮಾನ್ಯಮಾಡಿ ಆ ರಾಜಕುಮಾರನಿಗೆ ರಣರಂಗಕ್ಕೆ ಹೋಗಲು ಅಪ್ಪಣೆ ಕೊಟ್ಟದ್ದರಿಂದ ಆ ರಾಜಕುಮಾರನು ಫ್ರಾನ್ಸ್ ರಣರಂಗಕ್ಕೆ ಹೋಗಬಹುದಾಯಿತು.

ಕಲ್ಕತ್ತೆಯ ಮಿಸ್ ರೆಗೀನ ಗುಹಾ ಎಂಬ ಮಹಿಳೆಯು ತನ್ನನ್ನು ವಕೀಲಿಪಟ್ಟಿಗೆ ಸೇರಿಸಬೇಕೆಂದು ಕಲ್ಕತ್ತಾ ಹೈಕೋರ್ಟಿಗೆ ಮನವಿಮಾಡಿಕೊಂಡಿರುವಳು.

~~~~~~

"ಇಂಡಿಯನ್ ಕನ್ಸಾಲಿಡೇಶನ್ ಬಿಲ್" ಎಂಬ ಮಸೂದೆಯು ಈಚೆಗೆ ಬ್ರಿಟಿಷ ಪಾರ್ಲಿಮೆಂಟ ಸಭೆಯ ಮುಂದೆ ತರಲ್ಪಟ್ಟಿರುವದು. ಇದ್ದ ಕಾಯಿದೆಗಳನ್ನೇ ಏಕೀಕರಿಸುವದು ಈ ಮಸೂದೆಯ ಉದ್ದೇಶವಾಗಿರುವದೆಂದು ಮೊದಲು ಮೊದಲು ಸೂಚಿಸಲ್ಪಟ್ಟದ್ದರಿಂದ ಈ ಕಾಯಿದೆಯಿಂದ ಹಿಂದೂಸ್ಥಾನದ ಪ್ರಜೆಗಳಿಗೆ ಬಾಧಕ ಉಂಟೆಂದು ಯಾರೂ ಭಾವಿಸಿರಲಿಲ್ಲ. ಆದರೆ ಈಗ ನೋಡುವಾಗ ಈ ಮಸೂದೆಯ ತಿದ್ದುಪಡಿಯು ಪಾಸಾಗಿ ಕಾಯಿದೆಯ ಸಂಪೂರ್ಣ ಸ್ವರೂಪವನ್ನು ಹೊಂದಿದರೆ ಹಿಂದೀಜನರ ಕೆಲವು ಸ್ವಾತಂತ್ರ್ಯಗಳು ಮುಳುಗಿಹೋಗುವದೆಂಬದಾಗಿ ಹಿಂದೂಸ್ಥಾನದಲ್ಲಿ ಬಹಳ ಭೀತಿ ಉಂಟಾಗಿರುವದು. ಈ ಮಸೂದೆಯ ತಿದ್ದುಪಡಿಯು ಕಾಯಿದೆಯಾಗಿ ಜಾರಿಗೆ ಬಂದರೆ ಸರಕಾರದ ಕಾರ್ಯನಿರ್ವಾಹಕರಿಂದ ಯಾವದೊಂದು ಅನ್ಯಾಯವಾಯಿತೆಂದು ತೋರಿದ ಪಕ್ಷದಲ್ಲಿ ಸ್ಟೇಟ್ ಸೆಕ್ರೆಟರಿಯವರ ಮೇಲೆ ದಾವೆಮಾಡುವ ಹಕ್ಕು ಹಿಂದೀಜನರಿಗೆ ತಪ್ಪಿಹೋಗಿ ಈ ಸಂಬಂಧವಾಗಿ ಕಾಯಿದೆಗಳನ್ನು ಏರ್ಪಡಿಸುವ ಸ್ವಾತಂತ್ರ್ಯವು ಹಿಂದೂಸ್ಥಾನ ಹಾಗು ಪ್ರಾಂತಿಕ ಸರಕಾರಗಳಿಗೆ ದೊರೆಯುವದು. ಹಿಂದೀಜನರ ಅನಾದಿಕಾಲದಿಂದಿದ್ದ ಈ ಹಕ್ಕಿನ ವಿರೋಧವಾಗಿರುವ ಈ ಕಲಂನ್ನು ಆ ಮಸೂದೆಯಿಂದ ತೆಗೆದುಹಾಕಬೇಕೆಂಬುದಾಗಿ ದೇಶದಲ್ಲೆಲ್ಲಾ ಸಾರ್ವಜನಿಕಸಭೆಗಳು ಕೂಡಿ ಪ್ರಾಂತಿಕ, ವರಿಷ್ಠ ಸರಕಾರಗಳಿಗೂ ಸ್ಟೇಟ ಸೆಕ್ರೆಟರಿಗಳಿಗೂ ಬಿನ್ನಹಪತ್ರಗಳನ್ನು ಕಳುಹಿಸಿಕೊಟ್ಟದೆ. ಇಷ್ಟೇ ಅಲ್ಲ; ಲಂಡನ್ ಚೇಂಬರ್ ಒಫ್ ಕಾಮರ್ಸ್ ಎಂಬ ಲಂಡನಿನ ಪ್ರಮುಖ ವ್ಯಾಪಾರಿ ಸಂಘದವರು ತಮ್ಮ ಪ್ರತಿನಿಧಿಗಳ ಮುಖಾಂತರವಾಗಿಯೂ ಇದೇ ವಿಜ್ಞಾಪನೆಯನ್ನು ಸ್ಟೇಟ ಸೆಕ್ರೆಟರಿಗಳಿಗೆ ಮಾಡಿಕೊಂಡಿರುವರು. ಆದರೆ ಈ ವಿನಂತಿಗೆ ಸ್ಟೇಟ ಸೆಕ್ರೆಟರಿಯವರು ನಿಷೇಧಾರ್ಥಕ ಉತ್ತರವನ್ನು ಕೊಟ್ಟಿರುವದಾಗಿಯೂ ಪ್ರಸಿದ್ಧವಾಗಿದೆ. ಹಿಂದೀ ಜನರಿಗೆ ಅಸಮ್ಮತವೂ ಚರ್ಚಾಸ್ಪದವೂ ಆಗಿರುವ ಈ ತಿದ್ದುಪಡಿ ಮಸೂದೆಯನ್ನು ಈಗಣ ಯುದ್ಧ ಮುಗಿಯುವವರೆಗೆ ಪಾರ್ಲಿಮೆಂಟಿನ ಮುಂದೆ ತಾರದೆ ನಿಲ್ಲಿಸಬೇಕೆಂದು ನಿರ್ಧರಿಸಿ, ಈ ನಿರ್ಣಯವನ್ನು ಸ್ಟೇಟ್ ಸೆಕ್ರೆಟರಿಯವರಿಗೆ ಶ್ರುತಪಡಿಸಿಕೊಳ್ಳುವದಕ್ಕಾಗಿ ಮುಂಬಾಯಿ, ಮದ್ರಾಸ ಮೊದಲಾದ ಅನೇಕ ಸ್ಥಳಗಳಲ್ಲಿ ಮಹಾ ಸಭೆಗಳು ಕೂಡುತ್ತಿವೆ.

~~~~~~

ಬೀಡಿ ಸಿಗರೇಟು ಮೊದಲಾದವುಗಳನ್ನು ಸೇದುವ ಮಕ್ಕಳ ಸಂಖ್ಯೆಯು ಹಿಂದೂಸ್ಥಾನದಲ್ಲಿ ಹೆಚ್ಚಾಗುತ್ತಿರುವದರಿಂದ ದೇಶದ ಏಳಿಗೆಗೆ ಮಹಾ ಕೇಡುಂಟೆಂಬದು ಈಗ ತಾನೇ ಸರ್ವರಿಗೂ ವಿದಿತವಾಗುತ್ತಾ ಬರುತ್ತಿದೆ. ಮಕ್ಕಳು ಹೊಗೆಸೊಪ್ಪು ಸೇದದಂತೆ ಮಾಡುವಂಥಾ ಒಂದು ಮಸೂದೆಯು ಪಂಜಾಬ್ ನ್ಯಾಯವಿಧಾಯಕ ಸಭೆಯ ಮುಂದೆ ಮಾನ್ಯ ಸರ್ದಾರ್ ಗಜ್ಜಾನ್ ಸಿಂಘರವರಿಂದ ತರಲ್ಪಟ್ಟಿರುವದು. ಈ ಮಸೂದೆಯ ವಿಷಯವಾಗಿ ಪಂಜಾಬು ಸರಕಾರದವರು ಪ್ರಜಾಜನರ ಅಭಿಪ್ರಾಯವನ್ನು ಕೇಳಿರುತ್ತಾರೆ.

~~~~~~

ಬರುವ ರಾಷ್ಟ್ರೀಯ ಸಭೆಯ ಅಧ್ಯಕ್ಷರನ್ನಾಗಿ ಮಾನ್ಯ ವಿಜಯ ರಾಘವಚಾರ್ಯರ್, ಬಾಬು ಅಂಬಿಕಚರಣ ಮುಜುಮ್‌ದಾರ, ಸರ್ ಸಯ್ಯದ್ ಆಲಿ ಇಮಾಮ್–ಇವರಲ್ಲಿ ಒಬ್ಬರನ್ನು ಆರಿಸಬಹುದೆಂತ ನಾಗಪುರದ ರಾಷ್ಟ್ರೀಯ ಸಭಾ ಕಮಿಟಿಯವರು ನಿರ್ಣಯಿಸಿರುತ್ತಾರೆ.

~~~~~~

ಅಲ್ಲಹಾಬಾದ್ ಮುನ್ಸಿಪಾಲ್ ಬೋರ್ಡಿನ ಹಿಂದೀ ಮೆಂಬರರಲ್ಲಿ ೧೨ ಮಂದಿ ರಾಜೀನಾಮೆ ಕೊಟ್ಟಿರೆಂತ ಕಳೆದ ಸಂಚಿಕೆಯಲ್ಲಿ ತಿಳಿಸಿದೆವಷ್ಟೆ. ಈ ಪೈಕಿ ಬಾಬು ದಾತಿಯೋದರ ದಾಸರೆಂಬವರು ರಾಜೀನಾಮೆಯನ್ನು ಹಿಂತೆಗೆದರು. ಇತರ ೧೧ ಮಂದಿಯ ರಾಜೀನಾಮೆಯು ಸ್ವೀಕರಿಸಲಾಗಿದೆ.

~~~~~~

ಒಬ್ಬ ಹಿಂದೀ ಹೆಂಗಸು ಗಂಡನಿರುವಾಗಲೇ ಎರಡನೇ ವಿವಾಹವನ್ನು ಮಾಡಿಕೊಂಡಳೆಂಬ ಮೊಕದಮೆಯು ಕಲ್ಕತ್ತೆಯ ಜೋರಬಾಗನ್ ಎಂಬಲ್ಲಿಯ ಮೇಜಿಸ್ಟ್ರೇಟ ಕೋರ್ಟಿಗೆ ತನಿಕಿಗೆ ಬಂದಿರುವದು. ಕುಮುದನಾಥ ಸರ್ಕಾರರೆಂಬ ಹೆಸರಿನ ವಕೀಲರು ಈ ಮೊಕದಮೆಯಲ್ಲಿ ವಾದಿ. ವಾದಿಯ ಪತ್ನಿಯು ತನ್ನ ಅತ್ತೆಯ ಸಹಾಯದಿಂದ ತನ್ನ ದಾಯವಾದಿಯನ್ನು ಮದುವೆಮಾಡಿಕೊಂಡಳೆಂಬದೇ ಈ ಮೊಕದಮೆಯ ವಾದವು. ವಾದಿಯೂ, ಅವನ ಪತ್ನಿಯೂ ಅವನ ದಾಯವಾದಿಯೂ ೧೯೧೦ನೇ ಇಸವಿಯಲ್ಲಿ ವಾದಿಯ ಮಾವನು ಮೃತನಾಗುವ ವರೆಗೆ ಒಂದೇ ಮನೆಯಲ್ಲಿ ವಾಸವಾಗಿದ್ದರು. ಅಂದಿನಿಂದ, ವಾದಿಗೂ ಅತ್ತೆಗೂ ಮನಕ್ಲೇಶವುಂಟಾಯಿತು. ೧೯೧೧ನೇ ಇಸವಿಯಲ್ಲಿ ವಾದಿಯಪತ್ನಿಯು ಕಾಣೆಯಾದುದರಿಂದ ವಾದಿಯು ಜಪ್ತಿ ವಾರಂಟು ತಕ್ಕೊಂಡು ಅತ್ತೆಯ ಮನೆ ಜಪ್ತಿ ಮಾಡಿದ್ದಲ್ಲಿ ಹೆಂಡತಿಯ ಪತ್ತೆ ದೊರೆಯಲಿಲ್ಲ. ಈಚೆಗೆ ವಾದಿಯು ಕಲಕತ್ತೆಗೆ ಹೋದಾಗ ತನ್ನ ಹೆಂಡತಿಯು ವಿಧವೆ ಎಂಬ ನೆವಮಾಡಿಕೊಂಡು ೧೮೭೨ನೇ ಸ್ಪೆಶ್ಯಲ್ ಮೆರಿಯೇಜ್ ಆಕ್ಟಿನ ಪ್ರಕಾರ ತಾಯಿಯ ಒಪ್ಪಿಗೆಯಿಂದ ತನ್ನ ದಾಯವಾದಿಗೆ ವಿವಾಹವಾಗಿದ್ದಳು ಎಂಬದಾಗಿ ತಿಳಿಯಬಂತು. ಎಂತ ವಾದಿಯು ಫಿರ್ಯಾದು ಮಾಡಿರುತ್ತಾನೆ.

~~~~~~

"ಪೂನೆಯಲ್ಲಿರುವ ಡಖ್ಖಾನ್ ಎಡ್ಯುಕೇಶನಲ್ ಸೊಸೈಟಿ" ಎಂಬ ವಿದ್ಯಾ ಸಂಘದವರು ನಡಿಸುವ ನವೀನ ಮರಾಠಿ ಶಾಲೆಗೆ ದಿವಾನ್ ಬಹದ್ದೂರ್ ಕಾಶಿನಾಥ ರಾಮಚಂದ್ರ ಗೋಡ್‌ಬೋಲೆಯವರು ೧೦,೦೦೦ ರೂ. ದಾನ ಮಾಡಿರುವರು. ಈ ಹಣದ ಬಡ್ಡಿಯನ್ನು ಬಡ ಮತ್ತು ಚತುರರಾದ ವಿದ್ಯಾರ್ಥಿಗಳ ಬಗ್ಗೆ ಪ್ರಯೋಗಿಸಬೇಕೆಂಬದು ದಾನಿಯ ಅಪೇಕ್ಷೆ.

~~~~~~

ಮ॥ ಬಾಲಗಂಗಾಧರ ತಿಲಕರವರು ಮೇ ತಿಂಗಳಲ್ಲಿ ಬೆಳ್ಗಾವಿನಲ್ಲಿಯೂ ಜೂನು ತಿಂಗಳಲ್ಲಿ ಅಹಮ್ಮದ್ ನಗರದಲ್ಲಿಯೂ ಸ್ವರಾಜ್ಯದ ಸಂಬಂಧ ಕೊಟ್ಟ ಭಾಷಣಗಳು ರಾಜದ್ರೋಹಕರವಾಗಿದೆಂಬದಾಗಿ ಪೂನೆಯ ಪೋಲಿಸ್ ಡಿಪ್ಯುಟಿ ಇನ್ಸ್‌ಪೆಕ್ಟರ್ ಜನರಲರವರು ಪೂನೆಯ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಿಗೆ ತಿಳಿಸಿರುವರು. ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ತಿಲಕರವರಿಗೆ ಸಮ್ಮನ್ಸ್ ಕೊಟ್ಟು ಇಂಡಿಯನ್ ಪಿನಲ್ ಕೋಡಿನ ೧೦೮ ಮತ್ತು ೧೧೨ ಪ್ರಕರಣದ ಮೇಲೆ ಅವರು ಒಂದು ವರ್ಷದ ತನಕ ಒಳ್ಳೇ ರೀತಿಯಿಂದ ವರ್ತಿಸುತ್ತೇನೆಂಬದಾಗಿ ತನ್ನ ಸ್ವಂತ ಜವಾಬ್ದಾರಿಯ ಮೇಲೆ ೨೦,೦೦೦ ರೂಪಾಯಿಗಳ ಜಾಮೀನನ್ನೂ ಹತ್ತತ್ತು ಸಾವಿರ ರೂಪಾಯಿಗಳ ಇತರ ಎರಡು ಜಾಮೀನುಗಳನ್ನೂ ಯಾಕೆ ಕೊಡಕೂಡದೆಂಬದಾಗಿ ತಿಲಕರನ್ನು ಕೇಳಿರುವರು. ತಿಲಕರವರಿಗೆ ಕೊಟ್ಟ ಈ ನೋಟೀಸಿನ ತನಕಿಯು ಇದೇ ತಾ. ೩೧ನೇ ಶುಕ್ರವಾರ ನಡೆಯುವದು.

~~~~~~

ದಕ್ಷಿಣ ಹಿಂದೂಸ್ಥಾನ.

ಕೊಲೊಂಬೋದಲ್ಲಿ ಅಕಸ್ಮತ್ತಾಗಿ ಕಠಿಣ ಬಿರುಗಾಳಿ ಬೀಸಿ ಮೀನು ಹಿಡಿಯುವ ನೂರಾರು ಮಂದಿ ಪ್ರಾಣ ಕಳಕೊಂಡರು. ಸರಕಾರದವರ ದೋಣಿಗಳು ಕೆಲವರನ್ನು ರಕ್ಷಿಸಿದವು ಎಂಬ ವಾರ್ತೆ ಬಂದದೆ.

~~~~~~

ಮದ್ಯಪಾಯಿಗಳು ಒಂದು ಸಾರಿಗೆ ಎಲ್ಲಾ ವಿಷಯಗಳನ್ನು ಮರೆತುಬಿಡುತ್ತಾರೆಂಬದು ಮದ್ರಾಸಿನ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರ ಮುಂದೆ ತನಕಿಗೆ ಬಂದ ಒಂದು ಮೊಕದಮೆಯಿಂದ ಗೊತ್ತಾಗುತ್ತದೆ. ಆರ್ಥರ್ ಮತ್ಯೂಸ್ ಎಂಬವನು ಕಳೆದ ಮೇ ತಾ. ೧೬ರಲ್ಲು ಮದ್ರಾಸಿನ ಜನನ ಮರಣ ಮೆಡಿಕಲ್ ರಿಜಿಸ್ಟ್ರಾರ್ ಆಫೀಸಿಗೆ ಹೋಗಿ ತನ್ನ ತಂದೆ ಜೇಮ್ಸ್ ಮತ್ಯೂಸ್ ನಿನ್ನೆಯ ದಿನ ಸತ್ತುಹೋದನೆಂಬದಾಗಿಯೂ ಮರುದಿನ ಅವನ ಸಮಾಧಿಮಾಡಲಾಯಿತೆಂದೂ ವರದಿ ಮಾಡಿದನು. ರಿಜಿಸ್ಟ್ರಾರರು ಈ ಸಂಬಂಧ ವಿಚಾರಮಾಡಿದ್ದಲ್ಲಿ ಆರ್ಥರ್ ಮತ್ಯೂಸ್ ಹೇಳಿದ ಸ್ಥಳದಲ್ಲಿ ಆ ದಿನ ಯಾವ ಮರಣವೂ ಸಂಭವಿಸಲಿಲ್ಲವೆಂದೂ ಯಾರಿಗೂ ಸಮಾಧಿ ಕೊಡಲಿಲ್ಲವೆಂದೂ ತಿಳಿದುಬಂತು. ಅನಂತರ ರಿಜಿಸ್ಟ್ರಾರರು ಬಹಳ ಕಷ್ಟದಿಂದ ವಿಚಾರ ನಡಿಸಿ ಜೇಮ್ಸ್ ಮತ್ಯೂಸನು ಜೀವದಿಂದಿದ್ದಾನೆಂದು ತಿಳಿದು ಅವನನ್ನು ತನ್ನ ಬಳಿಗೆ ಕರೇ ಕಳುಹಿಸಿದ್ದರಿಂದ ಸತ್ತುಹೋಗಿದ್ದನೆಂದು ಹೇಳಿದ ತಂದೆಯು ರಿಜಿಸ್ಟ್ರಾರರಲ್ಲಿಗೆ ಬಂದು ತನಗೂ ತನ್ನ ಮಗನಿಗೂ ೨ ದಿವಸಗಳ ಹಿಂದೆ ಜಗಳವಾಗಿತ್ತೆಂದೂ ಮಗನು ಸಿಟ್ಟಿನಿಂದ ಈ ಕೃತ್ಯವನ್ನು ಮಾಡಿದ್ದರಿಂದ ಕ್ಷಮಿಸಬೇಕೆಂದೂ ಹೇಳಿದನು. ಮುನಿಸಿಪಾಲಿಟಿಯವರು ಮಗನನ್ನು ವಿಚಾರಣೆಗೆ ಗುರಿಮಾಡಿದ್ದಲ್ಲಿ ತಾನು ಬಹಳವಾಗಿ ಮದ್ಯ ಕುಡಿದಿದ್ದುದರಿಂದ ಆ ಕೃತ್ಯವನ್ನು ಮಾಡಿದ್ದೆನೆಂದು ವಾಗ್ಮೂಲ ಕೊಟ್ಟನು. ಮೆಜಿಸ್ಟ್ರೇಟರು ಅವನಿಗೆ ರೂ. 5 ಜುಲುಮಾನೆ ವಿಧಿಸಿದರು.

~~~~~~

ಉತ್ತರ ಕನ್ನಡ.

ಹೊನ್ನಾವರ:—ಈ ಜಿಲ್ಲೆಗೆ ಘಟ್ಟದ ಕೆಳಗಿನ ಪ್ರದೇಶಗಳಲ್ಲಿ ಮನುಷ್ಯರನ್ನು ಅಕಸ್ಮಾತ್ತಾಗಿ ಯಮಪುರಿಯ ಹೆಬ್ಬಾಗಿಲನ್ನು ಪ್ರವೇಶ ಮಾಡಿಸುವ ಪ್ಲೇಗು ಎಂಬ ಮಹಾ ವ್ಯಾಧಿಯು ಇಷ್ಟು ದಿವಸಗಳ ವರೆಗೆ ಸೋಂಕಿದ್ದಿಲ್ಲ: ಆದರೆ ಇದೇ ಕಳೆದ ೧೯೧೬ನೇ ಇಸವಿ ಮಾರ್ಚ, ಎಪ್ರಿಲ್ ಮೇ ತಿಂಗಳುಗಳಲ್ಲಿ ಪ್ಲೇಗಿನ ಕ್ರಿಮಿಗಳು (ಹೊನ್ನಾವರ) ಇಲ್ಲಿ ಅಂಕುರಿಸಿ ಹೇರಳವಾದ ಇಲಿಗಳನ್ನು ಕೊಂದುಹಾಕಿ ೪-೫ ಜನರು ಮೃತಪಟ್ಟರು. ಹೆಚ್ಚಿನ ನಷ್ಟವೇನು ಸಂಭವಿಸಲಿಲ್ಲ. ಬಳಿಕ ಜನರು ತಕ್ಕಷ್ಟು ಜಾಗ್ರತೆಯಿಂದ ಉಳಿದು ಅದರ ನಾಮನಿರ್ಮೂಲ ಮಾಡಿದರು. ಈಗ ೫-೬ ದಿವಸಗಳಿಂದ ಮತ್ತೆ ಉದ್ಭವಿಸಿರುತ್ತದೆಂತಲೂ ೫ ಜನರು ಅದೇ ವ್ಯಾಧಿಯಿಂದ ಮೃತರಾದರೆಂತಲೂ ನಿಷ್ಕರ್ಷೆಯಾಗಿದೆ. ಇಲಿಗಳು ಇನ್ನೂ ಬೀಳುತ್ತಾ ಇವೆ ಎಂದು ತಿಳಿದು ಬಂದಿದೆ. ಆದರೆ ಕೆಲವು ಜನರು ಇದು ಪ್ಲೇಗು ಅಲ್ಲಾ; ಈ ಊರಲ್ಲಿ ವಾಸಿಸುವ

ಒಂದು ದೊಡ್ಡ ಭೂತವು ಕ್ಷಣಕ್ಕೆ ಕೋಪೋದ್ರೇಕದಿಂದ ಪರ್ವತಾಕಾರವಾಗಿ ಬೆಳೆದು ಮೇಘ ಘರ್ಜನೆಯನ್ನು ಲಜ್ಜೆಗೊಳಿಸುವ ಬೊಬ್ಬೆಯನ್ನಿಕ್ಕುತ್ತಾ ಪಟ್ಟಣದಲ್ಲಿ ಸುಳಿದಾಡಿ ಮನುಷ್ಯರ ಗಮನವನ್ನು ನಿರೀಕ್ಷಿಸಿ ಎದುರಾದವರನ್ನು ಭಕ್ಷಿಸುವದೆಂತಲೂ (ಹೊಡಿಯುತ್ತದೆ) ಅನ್ನುತ್ತಾರೆ. ಇದು ಆಶ್ಚರ್ಯಕರ ಸಂಗತಿಗಳಲ್ಲಿ ಒಂದಾಗಿರುತ್ತದೆ.

ಕರ್ಕಿ:—ಇಲ್ಲಿ ಇರುವ ಗಂಡು ಹುಡುಗರ ಶಿಕ್ಷಣಾಲಯವು ೩-೪ ವರ್ಷಗಳಿಂದ ನಾದುರಸ್ತ (ಮೋಲ್ಮನೆ) ಆಗಿ ಇದ್ದುದರಿಂದ ಅದಕ್ಕೆ ಹೊಂದಿ ಕರ್ಕಿ ಕೇಶವ ದೇವಾಲಯಗಳಲ್ಲಿ ವಿದ್ಯಾ ಶಿಕ್ಷಣ ಕಲಿಸುವ ಬಗ್ಗೆ ಏರ್ಪಡಿಸಿತ್ತು. ಈಗ ೩-೪ ವರ್ಷಗಳಾದವು. ಗ್ರಾಮವರ್ಗಣಿಯಿಂದಾಗಲೀ ಸಂಕಾರದವರಾಗಲೀ ಕಟ್ಟಿಸಲಿಲ್ಲ. ಆ ದೇವಾಲಯದಲ್ಲಿ ವಿದ್ಯಾಭಿರುಚಿಯುಳ್ಳ ಹುಡುಗರಿಗೆ ಯೋಗ್ಯ ಶಿಕ್ಷಣ ಕಲಿಸುವದಿಲ್ಲವು. ಯಾಕಂದರೆ, ಅದು ದೇವಾಲಯ ಆದ ಕಾರಣ ಅಲ್ಲಿಗೆ ಹೋಗಿ ಬರುವ ಜನರ ಸಂಖ್ಯೆಯೇ ಬಹಳ. ಅವರೂ ಸಹ ಸುಮ್ಮಗೇ ಅಲ್ಲಿಗೆ ಹೋಗಿ ತಮ್ಮ ಕೆಲಸ ತೀರಿಸಿಕೊಂಡು ಬರುವದಿಲ್ಲವು. ಮಾಸ್ತರರ ಹತ್ತರ ಮಾತನಾಡುತ್ತಾ ಕುಳಿತು ಹುಡುಗರ ವಿದ್ಯಾ ಶಿಕ್ಷಣಕ್ಕೆ ವಿಘ್ನಕಂಟಕರಾಗುವರು. ಅದು ಅಲ್ಲದೆ ಬ್ರಾಹ್ಮಣ ಮೊದಲಾದ ಮೇಲಾದ ಮತದ ಮಾಸ್ತರರು ಬಂದರೆ ಆ ಶಾಲೆಯಲ್ಲಿ ಕಲಿಸಲಿಕ್ಕೆ ಬಿಡುವರು. ಬೇರೆ ಅನ್ಯಮತದವರು ಬಂದರೆ ದೇವಸ್ಥಾನದ ಒಳಗೆ ಯಾ ಚಂದ್ರ ಶಾಲೆಗೆ ಹೋಗಲಿಕ್ಕೆ ಬಿಡದೆ ಅವರ ಮೇಲೆ ರಿಪೋರ್ಟು ಮಾಡಿ ಅವರನ್ನು ಅಟ್ಟುವರು. ಹೀಗಿರುವಲ್ಲಿ ಒಳ್ಳೇ ವಿದ್ವಾಂಸರಾದ ಅನ್ಯಮತದ ಮಾಸ್ತರರು ಇಲ್ಲಿಗೆ ಬರುವದು ಅಸಾಧ್ಯವಾಗಿರುವದು. ಆದಕಾರಣ ಹುಡುಗರು ತಮ್ಮ ವಯೋಮಾನವನ್ನು ವೃಥಾ ಕಳೆದುಕೊಳ್ಳುವರು. ಮತ್ತು ಕೆಲ ವಿದ್ಯಾಗೌರವವುಳ್ಳವರೂ ಕನ್ನಡ ವರ್ನಾಕ್ಯುಲರ ಸ್ಕೂಲ್ ಫ್ಯಾನಲ್ ಪರೀಕ್ಷೆಗೆ ಹೋಗಲಿಚ್ಛಿಸುವವರೂ ಬೇರೆ ಬೇರೆ ಶಾಲೆಗಳಿಗೆ ಹೋಗಿ ಶಿಕ್ಷಣ ಹೊಂದುವರು. ಈ ಪ್ರಕಾರ ಇನ್ನೂ ಕೆಲವು ಕಾಲ ಕಳೆದರೆ ಶಾಲೆಯು ಇಳಿತರಕ್ಕೆ ಬರುವದಾಗಿ ಕಾಣುತ್ತದೆ. ಮಹಾರಾಜ ಸರಕಾರದವರಿಗೆ ಯುದ್ಧ ಪ್ರಸಂಗವು ಬಂದೊದಗಿರುವದರಿಂದ ಅವರಿಂದ ಈ ಶಾಲೆಯನ್ನು ಕಟ್ಟಿಸುವರೇ ಅನನುಕೂಲವೆಂದು ಎಲ್ಲರಿಗೂ ಗೊತ್ತೇ ಉಂಟು. ಇನ್ನು ಇದ್ದರೊಳಗಾಗಿ ಪ್ರಮುಖರು ವರ್ಗಣಿಯಿಂದ ಹಣಗೂಡಿಸಿ ವಿದ್ಯಾಮಂದಿರವನ್ನು ಕಟ್ಟಿಸಿದಲ್ಲಿ ಬಡ ಹುಡುಗರ ಕಲ್ಯಾಣವಾಗುವದಲ್ಲದೆ ಸದರಿ ಜನರು ದೇಶೋನ್ನತಿಗೂ ರಾಷ್ಟ್ರೋನ್ನತಿಗೂ ಕಾರಣೀಭೂತರಾಗುವರೆಂದು ಕೋರುತ್ತೇನೆ.

ದಕ್ಷಿಣ ಕನ್ನಡ

ನೋಟೀಸು.

ಮೆಸರ್ಸ್ ಸ್ಟೀವನ್ ಎಂಡ್ ಸನ್,
ಬಿಸ್ಕುಟು ಮೆನ್ಯುಫೆಕ್ಚರರು,

ಇವರು ತಮ್ಮ ಶಾಪನ್ನು ಬಲ್ಮಠ ರಸ್ತೆಯಲ್ಲಿರುವ ಮೆ| ಜೊಕಿನ್ ಲೊರೆನ್ಸ್ ಸಾಲ್ಡಾಂಞರ ಮನೆಯ ಎದುರಿರುವ ಮೆ| ಮೋನ ಪ್ಯಾಸರ ಕಟ್ಟಡಕ್ಕೆ ವೈದಿರುತ್ತಾರೆ.

ಸ್ಟಿವನ್ಸ್ ಎಂಡ್ ಸನ್ಸ್,
ಮಂಗಳೂರು.

P. D. LIMA.

Dental Surgeon, Mangalore.

ಇವರು ಈಗ ತಾನೇ ಸರ್ಕೀಟಿನಿಂದ ಹಿಂತೆರಳಿ ಬಂದಿರುವರು. ಅಮೇರಿಕದಿಂದ ಭಾರೀ ಕೃತಕ ದಂತಗಳನ್ನು ತರಿಸಿಕೊಂಡಿಟ್ಟಿರುವರು. ಈ ಸುಸಮಯವನ್ನು ಕಳಕೊಳ್ಳಬೇಡಿರಿ. ಮಿತವಾದ ದರದಲ್ಲಿ ಹಲ್ಲುಗಳನ್ನು ಸರಿಪಡಿಸಿಕೊಡುವರು.

ಪಿ. ಡಿ. ಲಿಮಾ.
ದಂತ ವೈದ್ಯರು, ಒಡೆಯರರ ಶಾಫಿನ ಬಳಿ,
ಮಂಗಳೂರು.

FOR IMMEDIATE SALE.

A Mulgeni property, near Kadri Post Office, yeilding a net income of Rs. 211—3—0.

Apply to:—

Dr. A. A. PEREIRA,
Camp Sidapur,
COORG.

ಮಾರಾಟಕ್ಕಿದೆ.

ಕದ್ರಿ ಪೋಸ್ಟ ಆಫೀಸಿನ ಒಳಿ ರೂ. 211—3—0 ಎನ ಹುಟ್ಟುವಳಿ ಇರುವ ಒಂದು ಮೂಲಗೇಣಿ ಆಸ್ತಿಯು ತ್ವರ್ಯದಲ್ಲಿ ಮಾರೋಣಾಗುವದು—ಬೇಕಾದವರು ಕೆಳಗಿನ ವಿಳಾಸಕ್ಕೆ ಬರಿಯುವದು.

ಡಾಕ್ಟರ್ ಎ. ಎ. ಪೆರೇರ,
ಕ್ಯಾಂಪ್ ಸಿದ್ಧಾಪುರ,
ಕೊಡಗು.

ಕುಂಬಳೆ:—ಇಲ್ಲಿಯ ಲೋಕಲ್ ಫಂಡ್ ಬಂಗ್ಲೆಗೆ ಸರಿಯಾದ ಭದ್ರತೆ ಇಲ್ಲದ್ದರಿಂದ ಒಳಗಿದ್ದ ಸಾಮಾನುಗಳು ಈ ಮೊದಲು ೨-೩ ದಫೆ ಕಳವಾಗಿರುವದಾಗಿಯೂ ಈಚೆಗೆ ಪುನಹಾ ಒಂದು ತಾಂಬ್ರದ ಪಾತ್ರವು ಕಳವಾಗಿರುವದಾಗಿಯೂ ವರ್ತಮಾನವಿದೆ.

ಈ ಮೊದಲಿನ ಸಂಚಿಕೆಯೊಂದರಲ್ಲಿ ಪ್ರಕಟಿಸಿದಂತೆ ಇಲ್ಲಿಯ ಮೆ| ಶ್ರೀನಿವಾಸಕೃಷ್ಣ ನಾಯಕ್ ಕಂಪೆನಿಯಿಂದ ಕಳವಾದ ಉದ್ದಿನ ಮೊಕದ್ದಮೆಯಲ್ಲಿ ಕೈದುಮಾಡಿದ ರಾಮ ಶ್ಯಾನಭಾಗನಿಗೆ ೨ ತಿಂಗಳು ಅಬ್ದುಲ್ಲ ಬ್ಯಾರಿಗೆ ೬ ತಿಂಗಳ ಸಜಾ ವಿಧಿಸಲಾಯಿತು.

ಇದೇ ತಾ. ೨೧ನೇ ಶುಕ್ರವಾರ ಇಲ್ಲಿಗೆ ಸಮೀಪ ಕೊಡ್ಯಮೆ ಮಸೀದಿಯಲ್ಲಿ ಮಾಪಿಳ್ಳೆಯವರೊಳಗೆ ಜಗಳವಾಗಿ ಮಸೀದಿಯಿಂದ ಇಳಿಯುತ್ತಲೇ ಒಬ್ಬ ಮಾಪಿಳ್ಳೆಯು ಇಬ್ಬರನ್ನು ಚೂರಿಯಿಂದ ಜಖಂ ಮಾಡಿದನು. ಇವರನ್ನು ಸಾಯಂಕಾಲವೇ ಆಸ್ಪತ್ರಿಗೆ ವೈದಿರುವರು.

ಮಂಗಳೂರು.

ಇದೇ ಕಳದ ಜೂನು ತಿಂಗಳಲ್ಲಿ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಒಟ್ಟು ೪೦೮೦ ಜನನವೂ ೨೩೦೯ ಮರಣವೂ ಆಗಿರುತ್ತದೆ. ಈ ಪೈಕಿ ಜನನ. ಮಂಗಳೂರು ಮುನ್ಸಿಪಾಲಿಟಿ ಗಂಡು ೫೫, ಹೆಣ್ಣು ೬೦=೧೧೫; ಮಂಗಳೂರು ತಾಲೂಕು ಗಂಡು ೩೭೬, ಹೆಣ್ಣು ೩೮೯=೭೬೫; ಉಡುಪಿ ತಾಲೂಕು ಗಂಡು ೩೯೩, ಹೆಣ್ಣು ೩೯೩=೭೮೬; ಕುಂದಾಪುರ ತಾಲೂಕು ಗಂಡು ೨೬೮, ಹೆಣ್ಣು ೨೪೦=೫೦೮; ಕಾರ್ಕಳ ತಾಲೂಕು ಗಂಡು ೨೨೦, ಹೆಣ್ಣು ೧೯೫=೪೧೫; ಕಾಸರಗೋಡು ತಾಲೂಕು ಗಂಡು ೪೩೨, ಹೆಣ್ಣು ೪೫೭=೮೮೯; ಉಪ್ಪಿನಂಗಡಿ ತಾಲೂಕು ಗಂಡು ೩೨೬, ಹೆಣ್ಣು ೨೮೫=೬೧೧. ಜುಮಲಾ ಗಂಡು ೨೦೬೨, ಹೆಣ್ಣು ೨೦೧೮ ಒಟ್ಟು ಜನನ ೪೦೮೦. ಆಯಾ ತಾಲೂಕುಗಳ ಮರಣ ಸಂಖ್ಯೆಯು ಈ ರೀತಿಯಾಗಿದೆ:—ಮುನ್ಸಿಪಾಲಿಟಿ ಗಂಡು ೫೧, ಹೆಣ್ಣು ೩೭=೮೮; ಮಂಗಳೂರು ತಾಲೂಕು ಗಂಡು ೨೦೯, ಹೆಣ್ಣು ೧೭೧=೩೮೦; ಉಡುಪಿ ತಾಲೂಕು ಗಂಡು ೨೦೩, ಹೆಣ್ಣು ೧೫೫=೩೫೮; ಕಾರ್ಕಳ ತಾಲೂಕು ಗಂಡು ೧೪೨, ಹೆಣ್ಣು ೧೩೯=೨೮೧; ಕಾಸರಗೋಡು ತಾಲೂಕು ಗಂಡು ೧೯೩, ಹೆಣ್ಣು ೧೫೫=೩೪೮; ಉಪ್ಪಿನಂಗಡಿ ತಾಲೂಕು ಗಂಡು ೨೪೦, ಹೆಣ್ಣು ೨೫೨=೪೯೨; ಕುಂದಾಪುರ ತಾಲೂಕು ಗಂಡು ೧೭೦, ಹೆಣ್ಣು ೧೩೦=೩೦೦. ಜುಮಲಾ ಗಂಡು ೧೨೦೮, ಹೆಣ್ಣು ೧೧೦೧=೨೩೦೯.

ದಕ್ಷಿಣಕನ್ನಡ ಜಿಲ್ಲೆಯಲ್ಲಿರುವ ಎಲಿಮೆಂಟರಿ ಶಾಲೆಗಳ ಸಂಖ್ಯೆಯು ಈ ರೀತಿಯಾಗಿರುವುದು:—ಮುನ್ಸಿಪಾಲಿಟಿ,—ಹುಡುಗರ ಶಾಲೆ ೨೪, ಹೆಮ್ಮಕ್ಕಳ ಶಾಲೆ ೫=೨೯; ಮಂಗಳೂರು ತಾಲೂಕು ಹು. ಶಾ. ೧೨೯; ಹೆ. ಶಾ ೪=೧೩೩; ಕಾರ್ಕಳ ತಾಲೂಕು ಹು. ಶಾ. ೭೪; ಹೆ. ಶಾ. ೬=೮೦; ಉಡುಪಿ ತಾಲೂಕು ಹು. ಶಾ. ೮೨, ಹೆ. ಶಾ. ೫=೮೭; ಕುಂದಾಪುರ ತಾಲೂಕು ಹು. ಶಾ. ೫೧, ಹೆ. ಶಾ. ೨=೫೩; ಕಾಸರಗೋಡು ತಾಲೂಕು ಹು. ಶಾ. ೮೯. ಹೆ. ಶಾ. ೪=೯೩; ಉಪ್ಪಿನಂಗಡಿ ತಾಲೂಕು ಹು. ಶಾ. ೭೫, ಹೆ. ಶಾ. ೨=೭೭; ಇಡೀ ಡಿಸ್ಟ್ರಿಕ್ಟಿನಲ್ಲಿ ಸರಕಾರದಿಂದ ಸಹಾಯ ದೊರೆಯದ ಶಾಲೆಗಳೂ ಕೂಡಿ ಒಟ್ಟಿಗೆ ೫೪೭ ಹುಡುಗರ ಶಾಲೆಗಳೂ, ೨೭ ಹೆಮ್ಮಕ್ಕಳ ಶಾಲೆಗಳೂ ಇವೆ. ಹೀಗೆ ಒಟ್ಟಿಗೆ ೫೭೪ ಎಲಿಮೆಂಟರಿ ಶಾಲೆಗಳು ಇಡೀ ಜಿಲ್ಲೆಯಲ್ಲಿವೆ.

ಜಿಲ್ಲೆಯ ಎಲಿಮೆಂಟರಿ ಶಾಲೆಯಲ್ಲಿರುವ ಹುಡುಗರ ಮತ್ತು ಹೆಮ್ಮಕ್ಕಳ ಸಂಖ್ಯೆ ಈ ರೀತಿಯಾಗಿರುವದು:—ಮುನ್ಸಿಪಾಲಿಟಿ, ಹುಡುಗರು ೨೧೦೩; ಹೆಮ್ಮಕ್ಕಳು ೧೩೭೩=೩೪೭೬; ಮಂಗಳೂರು ತಾಲೂಕು ಹು. ೭೧೧೮, ಹೆ. ೧೭೦೧=೮೮೧೯; ಕಾರ್ಕಳ ತಾಲೂಕು ಹು. ೪೨೧೫, ಹೆ. ೯೭೧=೫೧೮೬; ಉಡುಪಿ ತಾಲೂಕು ಹು. ೪೧೯೪, ಹೆ. ೧೨೭೨=೫೪೬೬; ಕುಂದಾಪುರ ತಾಲೂಕು ಹು. ೨೪೬೯, ಹೆ. ೪೪೬=೨೯೧೫; ಕಾಸರಗೋಡು ತಾಲೂಕು, ಹು. ೪೯೧೪, ಹೆ. ೧೧೦೬=೬೦೨೦; ಉಪ್ಪಿನಂಗಡಿ ತಾಲೂಕು ಹು. ೩೨೬೬, ಹೆ. ೭೨೯=೪೦೧೫. ಜುಮಲಾ ಹುಡುಗರು ೨೮,೩೦೨, ಹೆಮ್ಮಕ್ಕಳು ೭೩೯೮=೩೫೭೦೦.

ಶ್ರೀರಾಮಕೃಷ್ಣ ಭವನದ ವಿದ್ಯಾರ್ಥಿಗಳ ವಿಜ್ಞಾಪನೆಯನ್ನು ಈ ಸಂಚಿಕೆಯಲ್ಲಿ ಪ್ರಕಟಿಸಿರುವೆವು. ವಿದ್ಯಾರ್ಜನೆಯಲ್ಲಿ ಕುತೂಹಲವಿದ್ದರೂ ಹಣದ ಅಡಚಣೆಯಿಂದ ವಿದ್ಯಾಭ್ಯಾಸವನ್ನು ಮುಂದರಿಸಲು ಅಸಾಧ್ಯವಾಗಿರುವ ಬಡ ಬಂಟರ ವಿದ್ಯಾರ್ಥಿಗಳಿಗೆ ಸಹಾಯ ಮಾಡುವ ಬಗ್ಗೆ ಈ ವಿದ್ಯಾರ್ಥಿ ಸಂಘದವರು ಸ್ಥಾಪಿಸಿದ ಫಂಡಿಗೆ ಶ್ರೀಮಂತರಾದ ಬಂಟರು ಧಾರಾಳ ಸಹಾಯ ಮಾಡಿ ಈ ಭವನದವರು ಕೈಕೊಂಡ ಕಾರ್ಯವು ತುದಿ ಮುಟ್ಟುವಂತೆ ಮಾಡಬೇಕೆಂಬದೇ ನಮ್ಮ ಅಪೇಕ್ಷೆಯಾಗಿದೆ.

ಪುತ್ತೂರು ಡಿವಿಜನ್ ಆಫೀಸರರಾದ ಮ| ರಾ| ಕೆ. ರಾಮವರ್ಮರಾಜರವರು ಸರ್ವೆ ಟ್ರೈನಿಂಗ್ ಪಡೆಯುವದರಿಂದ ಇಲ್ಲಿಯ ರೆವಿನ್ಯೂ ಡಿವಿಜನಲ್ ಆಫೀಸರರಾದ ಮೆ| ಕುಂಜ್ಞಾಯನ್ ಸಾಹೇಬರು ಪುತ್ತೂರಿಗೂ ಇಲ್ಲಿಯ ಡಿವಿಜನಲ್ ಆಫೀಸರರಾದ ರಾವ್ ಬಹದ್ದೂರ್ ಸಿ. ಗೋಪಾಲನ್ ನಾಯರರು ರೆವಿನ್ಯೂ ಡಿವಿಜನಲ್ ಆಫೀಸರರಾಗಿಯೂ ಅಸಿಸ್ಟಾಂಟ ಕಲೆಕ್ಟರರಾದ ಮಿ| ಪೈಂಟರ್‌ರವರು ಡಿವಿಜನಲ್ ಆಫೀಸರರಾಗಿಯೂ ನೇಮಿಸಲ್ಪಟ್ಟಿರುವರು.

ಮಂಗಳೂರು ತಾಲೂಕು ಬೋರ್ಡಿಗೆ ಒಳಪಟ್ಟ ನಂಬ್ರ ೧ನೇ ಮಂಗಳೂರು ಇಲೆಕ್ಟೋರಲ್ ಸರ್ಕಲಿನಿಂದ ಮಂಗಳೂರು ತಾಲೂಕು ಬೋರ್ಡಿನ ಒಬ್ಬ ಮೆಂಬರನ ಚುನಾವಣೆಯು ನಡೆಯತಕ್ಕದಿದೆ. ಈ ಒಬ್ಬ ಉಮೇದ್ವಾರರನ್ನು ಸೂಚಿಸಿ ಕಳುಹಿಸೋಣಾಗುವ ಸಿಫಾರಸು ಪತ್ರವು ಮಂಗಳೂರು ಟವನ್ ಡೆಪ್ಯುಟಿ ತಹಸೀಲದಾರರ ಬಳಿಗೆ ೧೯೧೬ನೇ ಇಸವಿ ಆಗೋಸ್ತು ತಾ. ೩ನೇ ಗುರುವಾರ ದಿವಸ ಬೆಳಿಗ್ಗೆ ಘಂಟೆ ೧೧ರಿಂದ ಸಾಯಂಕಾಲ ಘಂಟೆ ೫ರವರೆಗೆ ಕಳುಹಿಸತಕ್ಕದ್ದು. ಈ ಸಿಫಾರಸಿಗೆ ಇರಬೇಕಾದ ಆಕ್ಷೇಪಗಳು ಆಗೋಸ್ತು ತಾ. ೧೪ನೇ ಸೋಮವಾರ ದಿವಸ ಕಳುಹಿಸೋಣಾಗಬೇಕು. ಈ ಆಕ್ಷೇಪಗಳ ಇತ್ಯರ್ಥವು ಆಗೋಸ್ತು ತಿಂಗಳ ತಾ. ೧೭ನೇ ಗುರುವಾರ ರೆವಿನ್ಯೂ ಡಿವಿಜನಲ್ ಆಫೀಸರರ ಕಚೇರಿಯಲ್ಲಿ ಮಾಡೋಣಾಗಿ ಸಿಫಾರಸು ಪತ್ರಗಳ ಮೂಲಕ ಸೂಚಿಸೋಣಾದ ಉಮೇದ್ವಾರರ ಮಂಜೂರಾತಿಯು ಆಗೋಸ್ತು ತಾ. ೧೯ರಲ್ಲಿ ಪ್ರಕಟಿಸಲ್ಪಟ್ಟು ಉಮೇದ್ವಾರರ ಸಂಖ್ಯೆಯು ಒಬ್ಬನಿಗಿಂತ ಮಿಕ್ಕಿದ ಸಂಗತಿಯಲ್ಲಿ ವೋಟುಗಳ ಮೂಲಕ ಚುನಾವಣೆಯು ಸಪ್ಟಂಬರ ತಾ. ೭ನೇ ಗುರುವಾರ ಬೆಳಿಗ್ಗೆ ೧೧ ಘಂಟೆಯಿಂದ ಸಾಯಂಕಾಲ ಘಂಟೆ ೫ರವರೆಗೆ ಟವನ್ ಡಿಪ್ಯುಟಿ ತಹಸೀಲದಾರರಲ್ಲಿ ನಡೆಯುವದು.

ಜಗಲಿ ಕಳವು ಮಾಡುತ್ತಿದ್ದ ಪುಲೆಮಾಳಿ ಅಚ್ಯುತ್ತನೆಂಬವನಿಗೆ ತಾಲೂಕು ಆಫೀಸಿನಲ್ಲಿ ಹೆಡ್ ಎಕೌಂಟಾಂಟರಾಗಿದ್ದ ರಾ| ರಾಮನ್ನಾಯಕರಲ್ಲಿ ಖಜಾನೆ ಪೆಟ್ಟಿಗೆ ಮತ್ತು ಬೀಗ ಇತ್ಯಾದಿ ಕಳವು ಮಾಡಿದ ತಪ್ಪಿನ ಮೇಲೆ ೬ ತಿಂಗಳ ಕಠಿಣ ಸಜೆಯು ವಿಧಿಸೋಣಾಗಿದೆ.

ತಹಸೀಲದಾರರಾದ ಮಿ| ಮರಿಯಾನ್ ಪ್ಯಾಸರಲ್ಲಿ ಸುಮಾರು ೫೦ ರೂಪಾಯಿ ಕ್ರಯ ಬಾಳುವ ಧನ ಕಳವು ಮಾಡಲು ಯತ್ನಿಸಿದನೆಂಬದಾಗಿ ಆಪಾದಿಸಲ್ಪಟ್ಟ ಮಾಧವನೆಂಬವನಿಗೆ ೧ ತಿಂಗಳ ಕಠಿಣ ಸಜಾ ವಿಧಿಸೋಣಾಗಿದೆ.

ಶ್ರೀ ಕೃಷ್ಣ ವಿಲಾಸ ಸಂಘದ ೫ನೇ ವಾರ್ಷಿಕೋತ್ಸವವು ಇದೇ ತಾ. ೨೩ನೇ ಆದಿತ್ಯವಾರ ೪ ಘಂಟೆಗೆ ರಾ| ಎನ್. ವಾಸಪ್ಪನವರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಜರಗಿತು. ಪ್ರಥಮತ ದೇವತಾಸ್ತೋತ್ರವಾದ ನಂತರ ಸಂಘದ ಕಾರ್ಯದರ್ಶಿಯವರಿಂದ ವಾರ್ಷಿಕ ವರದಿಯು ಓದಲ್ಪಟ್ಟಿತು. ಈ ಸಂಘವು ಗಾಣಿಗ ಯುವಕರಿಂದ ಸ್ಥಾಪಿಸಲ್ಪಟ್ಟು ತಮ್ಮ ಜಾತಿಯ ಅಭ್ಯುದಯಕ್ಕಾಗಿ ಸದರಿ ಸಂಘದ ಸದಸ್ಯರು ಒಂದು ಭಜನೆ ಮಂದಿರವನ್ನೂ, ವಾಚನಾಲಯವನ್ನೂ, ಪರಸ್ಪರ ಧನಸಹಾಯಕ ಸಂಘವನ್ನೂ ಏರ್ಪಡಿಸಿ, ಸ್ವಜಾತಿಯ ಏಳಿಗೆಗೆ ಅನುಕೂಲವಾದ ಸಾಧನೆಗಳನ್ನು ಸಿದ್ಧಿಸುವದಕ್ಕಾಗಿ ತಮ್ಮ ತನುಮನಧನವನ್ನರ್ಪಿಸುತ್ತಿರುವರಾಗಿ ಈ ವರದಿಯಿಂದ ಕಂಡು ಬರುತ್ತದೆ. ನಂತರ ಅಧ್ಯಕ್ಷರು ಕಾಲೋಚಿತ ಭಾಷಣ ಮಾಡಿ ಅತಿಥಿಗಳು ಪುಷ್ಪ, ಫಲತಾಂಬೂಲಾದಿಗಳನ್ನು ಸ್ವೀಕರಿಸಿ, ರಾಜಗೀತೆ ಮಂಗಲದೊಡನೆ ಸಭೆಯು ಮುಕ್ತಾಯವಾಯ್ತು. ಆ ಜಾತಿಯ ಗೃಹಸ್ಥರಲ್ಲನೇಕರು ಈ ಸಂಘದ ಸದಸ್ಯರಾಗಿಲ್ಲವೆಂದು ತೋರುವದರಿಂದ ಇವರು ಇಂಥಾ ಸಂದರ್ಭವನ್ನು ಬಿಡದೆ ಆದಷ್ಟು ತ್ವರ್ಯದಿಂದ ಸಂಘದ ಸದಸ್ಯರಾಗಿ ತಮ್ಮ ಜಾತಿಯ ಏಳಿಗೆಯ ಈ ಪವಿತ್ರ ಕಾರ್ಯದಲ್ಲಿ ಪ್ರವೃತ್ತರಾಗುವದು ಅವರ ಕರ್ತವ್ಯವೆಂಬುದನ್ನು ನಾವು ಪ್ರತ್ಯೇಕ ಸೂಚಿಸಬೇಕೆಂತಿಲ್ಲ. ಈ ಸಂಘವು ಗಾಣಿಗರ ಏಳಿಗೆಗೂ ರಾಷ್ಟ್ರೋನ್ನತಿಗೂ ಕಾರಣವಾಗಿ ಬಾಳಬೇಕೆಂಬದಾಗಿ ಕೋರುವೆವು.

ಕಳೆದ ಶನಿವಾರ ಇಲ್ಲಿಯ ಕೊಸ್ಮೊಪೊಲಿಟನ್ ಕ್ಲಬ್ಬಿನಲ್ಲಿ ಮ| ರಾ| ರಾ| ಬಹುಮಾನಪಟ್ಟ ಕೆ. ಸದಾಶಿವ ಭಟ್ಟರ ಬಹುಮಾನಾರ್ಥವಾಗಿ ಈ ಜಿಲ್ಲಾ ಜನರ ಮತ್ತು ಇಲ್ಲಿಯ ಪಟ್ಟಣಿಗರ ಸೋಷಿಯಲ್ ಗಾದರಿಂಗ್ ಎಂಬ ಸಂತೋಷ ಸೂಚನಾರ್ಥ ಸಭೆಯು ಕೂಡಿತ್ತು. ಮಂಗಳೂರಿನ ಮತ್ತು ಪುತ್ತೂರು, ಕುಂದಾಪುರ, ಬಂಟವಾಳ ಮೊದಲಾದ ಪ್ರಾಂತ್ಯಗಳಿಂದ ಪ್ರಮುಖ ಗೃಹಸ್ಥರೆಲ್ಲರೂ ಈ ಸಭೆಗೆ ದಯಮಾಡಿ ಬಂದಿದ್ದರು. ಸಭಾ ಪ್ರಾರಂಭದಲ್ಲಿ ಗಾಯನವು ನಡೆಯುತ್ತಿದ್ದು ಕಾಫಿ, ಚಾ, ವಗೈರೆಗಳ ಫಲಹಾರಗಳು ಆದನಂತರ ಬಂದಿದ್ದ ಮಹನೀಯರೆಲ್ಲರೂ ಸಭೆ ಸೇರಿದರು. ಮಂಗಳೂರು ತಾಲೂಕು ಬೋರ್ಡು ಪ್ರೆಸಿಡೆಂಟರಾದ ಮ| ರಾ| ರಾ| ಸುಜೀರ ರಘುನಾಥಯ್ಯನವರು ಒಂದು ಚಿಕ್ಕ ಭಾಷಣದಲ್ಲಿ ಭಟ್ಟರವರು ಜಯಶೀಲರಾದ್ದರಿಂದ ಉಂಟಾದ ಸಂತೋಷವನ್ನೂ ನ್ಯಾಯವಿಧಾಯಕ ಸಭೆಯ ಮೆಂಬರರಾಗಿ ಭಟ್ಟರು ಮಾಡತಕ್ಕಿರುವ ಕೆಲಸಗಳನ್ನೂ ಕುರಿತು ಮಾತಾಡಿದರು. ನಂತರ ಎ. ಶ್ರೀನಿವಾಸ ಪೈಗಳವರೂ ಬ್ಯಾರಿಷ್ಟರ ರೈರವರೂ ಕಾಲೋಚಿತ ಭಾಷಣಗಳಲ್ಲಿ ಭಟ್ಟರವರನ್ನು ಅಭಿನಂದಿಸಿದರು. ಎಲ್ಲಾ ಭಾಷಣಗಳಿಗೆ ಉತ್ತರ ರೂಪವಾಗಿ ಭಟ್ಟರವರು ಮಾಡಿದ ಭಾಷಣವನ್ನು ಇನ್ನೊಂದು ಕಡೆಯಲ್ಲಿ ಮುದ್ರಿಸಿರುವೆವು. ಮ| ರಾ| ರಾ| ದಿವಾನ್ ಬಹದ್ದೂರ್ ಎ. ವೆಂಕಟರಮಣ ಪೈಗಳವರು ಹೂಮಾಲೆಯನ್ನು ಹಾಕಿ ಭಟ್ಟರವರನ್ನು ಆಶೀರ್ವದಿಸಿದನಂತರ ಸಭೆಯು ಮುಕ್ತಾಯವಾಯಿತು.

ಮಾರಣೇ ದಿನ ಅಂದರೆ ಆದಿತ್ಯವಾರ ಸಾಯಂಕಾಲ ಘಂಟೆ ೬ಕ್ಕೆ ಕೊಸ್ಮೊಪೊಲಿಟನ್ ಕ್ಲಬ್ಬಿನ ಮೆಂಬರರ ಇನ್ನೊಂದು ವಿನೋದ ಸಭೆಯು ಕೂಡಿತ್ತು. ಈ ಸಭೆಯು ಡಾಕ್ಟರ ರಾಮಬಾಳಿಗರವರನ್ನು ಸತ್ಕರಿಸುವ ಬಗ್ಗೆ ಏರ್ಪಡಿಸಲ್ಪಟ್ಟಿತು. ಕಡಪಾ ಜಿಲ್ಲೆಯ ಜಿಲ್ಲಾ ಸರ್ಜನರಾಗಿ ಬಾಳಿಗರವರು ನೇಮಿಸಲ್ಪಟ್ಟಿದ್ದರಿಂದ ತಮಗುಂಟಾದ ಸಂತೋಷವನ್ನು ವ್ಯಕ್ತಗೊಳಿಸಿ ರಾವ್ ಬಹದ್ದೂರ್ ಸುಬ್ಬರಾವ್, ಡಾಕ್ಟರ್ ಎಲ್. ಪಿ ಫರ್ನಾಂಡೀಸ್, ರಾ| ಕೆ. ಸದಾಶಿವ ಭಟ್ಟ, ರಾ| ರೈರವರು ಈ ಸಂದರ್ಭದಲ್ಲಿ ಮಾತಾಡಿದರು. ಕೊಸ್ಮೊಪೊಲಿಟನ್ ಕ್ಲಬ್ಬಿನ ಚಟುವಟಿಕೆಯಲ್ಲಿ ವಿಶೇಷವಾದ ಅನುರಾಗವುಳ್ಳಂಥಾ ಡಾಕ್ಟರ್ ಬಾಳಿಗರವರಂಥವರು ಕ್ಲಬ್ಬನ್ನು ಬಿಟ್ಟು ಹೋಗುವ ಮೂಲಕ ಮೆಂಬರರೆಲ್ಲರಿಗೆ ಉಂಟಾದ ವ್ಯಾಕುಲತೆಯನ್ನೂ ಡಾಕ್ಟರರು ಬೇಗನೆ ಇಲ್ಲಿಯ ಜಿಲ್ಲಾ ಸರ್ಜನರಾಗಿ ಬರಬೇಕೆಂಬುವ ಅಪೇಕ್ಷೆಯನ್ನೂ ಸಭಿಕರಲ್ಲಿ ಅನೇಕರು ವ್ಯಕ್ತಗೊಳಿಸಿದರು. ಡಾಕ್ಟರ್ ಬಾಳಿಗರವರು ಸಭಿಕರೆಲ್ಲರನ್ನು ವಂದಿಸಿ ಮಾತಾಡಿದ ನಂತರ ಮ| ರಾ| ರಾ| ಸುಜೀರ ರಘುನಾಥಯ್ಯನವರು ಡಾಕ್ಟರರಿಗೆ ಹೂಮಾಲೆಯನ್ನು ಹಾಕಿ ಆಶೀರ್ವದಿಸಿದ ನಂತರ ಸಭೆಯು ತೀರಿತು.

ಇಲ್ಲಿಯ ಸೈಂಟ್ ಅಲೋಸಿಯಸ್ ಕೊಲೇಜಿನ ಸಂಸ್ಕೃತ ಪಂಡಿತರಾದ ಬ್ರಹ್ಮಶ್ರೀ ಪಂಡಿತ ನಿಡ್ಯೋಡಿ ಅನಂತ ಉಪಾಧ್ಯಾಯರಿಗೆ ಸಂಸ್ಕೃತದಲ್ಲಿ ಅದರಲ್ಲಿಯೂ ಸಂಸ್ಕೃತ ವ್ಯಾಕರಣದಲ್ಲಿರತಕ್ಕ ಮಹಾ ಪಾಂಡಿತ್ಯಕ್ಕಾಗಿ ಉಡುಪಿಯ ಶ್ರೀ ಅದಮಾರು ಶ್ರೀ ಪಾದಂಗಳವರು ಒಂದು ಚಿನ್ನದ ಮೆಡಲನ್ನು ದಯಪಾಲಿಸಿರುವರು.

ಕೆ. ದಯಾ ಮತ್ತು ಕಂಪೆನಿ, ಹಂಪನಕಟ್ಟೆ, ಮಂಗಳೂರು.—ಇವರ ಜಾಹಿರಾತನ್ನು ವಾಚಕರ ಅವಗಾಹನೆ ಬಗ್ಗೆ ಈ ಸಂಚಿಕೆಯೊಂದಿಗೆ ಇಟ್ಟಿರುವೆವು.

ಕಳೆದವಾರ ಮಂಗಳೂರು ಮುನಿಸಿಪಾಲಿಟಿಯಲ್ಲಿ ೨ ಪ್ಲೇಗು ಮರಣಗಳಿದ್ದವು.

~~~~~~

ಉದಾರಿಗಳೂ ದಾನಶೀಲರೂ ಆದ ಮಹಾನುಭಾವರಿಗೆ ಶ್ರೀ ರಾಮಕೃಷ್ಣ ಭವನದ ವಿದ್ಯಾರ್ಥಿಗಳ ವಿಜ್ಞಾಪನೆ:—

ವಿದ್ಯಾರ್ಜನೆಯಲ್ಲಿ ವಿಶೇಷ ಕುತೂಹಲರಾಗಿದ್ದರೂ ಹಣದ ಅಡಚಣೆಯಿಂದ ಬಹಳ ಸಂಕಷ್ಟಗಳಿಗೆ ಗುರಿಯಾಗುವ ನಮ್ಮ ಜಾತಿಯ ಬಡ ವಿದ್ಯಾರ್ಥಿಗಳ ತೊಂದರೆಗಳನ್ನು ಕೈಲಾದಮಟ್ಟಿಗೆ ನಿವಾರಣೆ ಮಾಡುವ ಬಗ್ಗೆ ಜಾತಿವತ್ಸಲರಾದ ಕೊಲ್ನಾಡು ಕೂಸಮ್ಮ ಸೆಡ್ತಿಯರು ದಿವಂಗತರಾದ ಅತ್ತಾವರ ವೆಂಕಪ್ಪ ಪೂಂಜರವರ ಹೆಸರಲ್ಲಿ ವರ್ಷ ೧ಕ್ಕೆ ರೂಪಾಯಿ ೨೪—೦—೦ ಮತ್ತು ಸ್ವರ್ಗಸ್ಥರಾದ ಮರಕಡ ಅಪ್ಪಯ್ಯ ಸೆಟ್ಟರವರ ಸ್ಮರಣಾರ್ಥವಾಗಿ ಅವರ ವಾರೀಸುದಾರರು ಕೊಟ್ಟ ಹಣದ ಬಡ್ಡಿಯಿಂದ ವರ್ಷ ೧ರ ರೂಪಾಯಿ ೭೫—೦—೦ ಹೀಗೆ ಎರಡು ವಿದ್ಯಾರ್ಥಿ ವೇತನಗಳನ್ನು ಬಂಟರ ಯಾನೆ ನಾಡವರ ಸಂಘದವರು ಕೊಡುತ್ತಿದ್ದಾರೆ. ಇದಲ್ಲದೆ ಬರುವ ಜನವರಿ ಲಾಗಾಯಿತು ಅತ್ತಾವರ ಉಂಞಕ್ಕೆ ಸೆಡ್ತಿಯರು ಸಂಘದ ಮೂಲಕ ವರ್ಷ ಒಂದಕ್ಕೆ ರೂಪಾಯಿ ೪೮—೦—೦ರ ವಿದ್ಯಾರ್ಥಿವೇತನ ಕೊಡುವುದಾಗಿ ಒಪ್ಪಿ ಕರಾರು ಬರಕೊಟ್ಟಿರುತ್ತಾರೆ. ಮಂಗಳೂರಿಗೆ ವಿದ್ಯಾರ್ಜನೆಗೋಸ್ಕರ ಬರುವ ನಮ್ಮ ಜಾತಿಯ ಬಡ ಹುಡುಗರ ಸಂಖ್ಯೆಯು ಈ ವರ್ಷ ಹೆಚ್ಚಾಗಿ ಸಂಘವು ಮಾಡುವ ಧನಸಹಾಯವು ಅವರ ಶಾಲಾಸಂಬಳ ಊಟದ ಖರ್ಚು ವಗೈರೆಗೆ ಸಾಕಾಗದೆ ಇರುವುದರಿಂದ ನಾವು ಮೇಲೆ ಹೇಳಿದ ಫಂಡನ್ನು ಸ್ಥಾಪಿಸಿರುತ್ತೇವೆ. ಇದೇ ತಿಂಗಳಾರಭ್ಯದಿಂದ ಏಳು ಜನ ಬಡ ವಿದ್ಯಾರ್ಥಿಗಳು ಈ ಫಂಡಿನಿಂದ ಸಹಾಯ ಪಡೆಯುತ್ತಿದ್ದಾರೆ. ಈ ಬಗ್ಗೆ ತಿಂಗಳೊಂದಕ್ಕೆ ಸುಮಾರು ರೂಪಾಯಿ ೪೦ ಬೇಕಾಗುವುದು. ಜನರು ನಮ್ಮ ಕೆಲಸವನ್ನಾದರೂ ಮೆಚ್ಚಿ ಮನಸ್ಸು ಮಾಡುವರೆಂಬ ನಿರೀಕ್ಷಣೆಯಿಂದ ಕಾರ್ಯವನ್ನು ಈ ಮೊದಲೇ ಮುಂದರಿಸಿರುತ್ತೇವೆ. ಇದು ವರೆಗೆ ಈ ಫಂಡಿಗೆ ಧನಸಹಾಯ ಮಾಡಲಿಕ್ಕೆ ಒಪ್ಪಿರುವ ಮಹನೀಯರ ಹೆಸರು ಮತ್ತು ಮೊಬಲಗು ಈ ಕೆಳಗೆ ಕಾಣಿಸಿಯದೆ. ತಾವು ತಿಂಗಳೊಂದಕ್ಕೆ ಯಾ ವರುಷ ಒಂದಕ್ಕೆ ಕೊಡುವ ಸಹಾಯ ಧನ ಇಂತಿಷ್ಟೆಂಬದನ್ನು ದಯವಿಟ್ಟು ತಿಳಿಸಬೇಕಾಗಿಯೂ, ತಮ್ಮ ಪ್ರಥಮ ಕಂತಿನ ಐವೇಜನ್ನು ವಸೂಲು ಕೊಡಬೇಕಾಗಿಯೂ ಪ್ರಾರ್ಥಿಸುತ್ತೇವೆ. ಎಷ್ಟು ಕಿಂಚಿತ ಸಹಾಯವನ್ನಾದರೂ ಬಹಳ ಸಂತೋಷದಿಂದ ಸ್ವೀಕರಿಸುವೆವು. ತಾವು ತರುವ ಐವೇಜಿಗೆ ನಮ್ಮ ಫಂಡಿನ ಕಾರ್ಯದರ್ಶಿಯ ದಸ್ಕತು ಇರುವ ಛಾಪಾ ರಶೀದಿ ಕೊಡಲ್ಪಡುವುದು. ಮತ್ತು ಫಂಡಿನ ಆದಾಯ ವೆಚ್ಚದ ವಾರ್ಷಿಕ ವರದಿಯು ಕೂಡಾ ಕಳುಹಿಸಲಾದೀತು.

ಶ್ರೀ ರಾಮಕೃಷ್ಣ ವಿದ್ಯಾರ್ಥಿಭವನ, ಮಂಗ್ಳೂರು ತಾ. 25-7-1916 | ಮೂಲ್ಕಿ ರಾಮಣ್ಣ ಸೆಟ್ಟಿ, ಕಾರ್ಯದರ್ಶಿ.

ಈ ಬಗ್ಗೆ ದಾನ ಕೊಟ್ಟವರ ಹೆಸರು ಮತ್ತು ಮೊಬಲಗು:—ಮ| ರಾ| ರಾ| ರಾವ್ ಬಹದ್ದೂರ್ ಅತ್ತಾವರ ರಾಮಯ್ಯ ಪೂಂಜರು (ವರ್ಷ 1ಕ್ಕೆ) ರೂಪಾಯಿ ೧೦೦; ರಾ| ಬ್ರಹ್ಮಾವರ ಮಹಾಬಲೇಶ್ವರ ಸೆಟ್ರು ವ. ೧ಕ್ಕೆ ರೂ. ೫೦; ರಾ| ಅತ್ತಾವರ ದೇವಪ್ಪ ಪೂಂಜರು ವ. ೧ಕ್ಕೆ ರೂ. ೩೬; ರಾ| ಬಾಕ್ರೈಲು ತಿಮ್ಮಪ್ಪ ಸೆಟ್ರು ವ. ೧ಕ್ಕೆ ರೂ. ೨೪; ರಾ| ಕೊಡಿಯಾಲಗುತ್ತು ಕೃಷ್ಣ ಸುಲಾಯರು ವ. ೧ಕ್ಕೆ ರೂ. ೧೨; ರಾ| ಬೆಳ್ಳೂರುಗುತ್ತು ಲಕ್ಷ್ಮಣ ಪೂಂಜರು ವ. ೧ಕ್ಕೆ ರೂ. ೧೨; ರಾ| ಅತ್ತಾವರ ಬಾಲಕೃಷ್ಣ ಸೆಟ್ರು ವ. ೧ಕ್ಕೆ ರೂ. ೬೦; ರಾ| ಮೂಲ್ಕಿ ರಾಮಣ್ಣ ಸೆಟ್ರು ವ. ೧ಕ್ಕೆ ರೂ. ೪, ರಾ| ವಕೀಲ ಮಹಾಬಲ ಹೆಗ್ಗಡೆರು, ವ. ೧ಕ್ಕೆ ರೂ. ೧೫; ರಾ| ಶ್ರೀ ರಾಮಕೃಷ್ಣ ವಿದ್ಯಾರ್ಥಿಭವನದ ನಿವಾಸಿಗಳು (ತಿಂಗಳು ೧ಕ್ಕೆ) ರೂ. ೪; ರಾ| ಡಾಕ್ಟರ್ ಬಿ. ರಾಮಣ್ಣ ಸೆಟ್ರು (ವರ್ಷ ೧ಕ್ಕೆ) ರೂ. ೨೫; ರಾ| ಕೊಡಿಯಾಲಗುತ್ತು ನಾರಾಯಣ ಸೆಟ್ರು ವ. ೧ಕ್ಕೆ ರೂ. ೧೨; ರಾ| ಸಿರುಭಾಗಿಲು ರಾಮಯ ಆಳ್ವರು ವ. ೧ಕ್ಕೆ ರೂ. ೨೫.

~~~~~~

ನಗರಕಾರ್ ಎಂಡ್ ಸನ್ಸ್‌ರವರ ವಿಜ್ಞಾಪನೆ.

ಯುದ್ಧದ ದೆಸೆಯಿಂದ ಸಮಸ್ತ ಒಡವೆಗಳ ಕ್ರಯವು ಏರಿರುವದು. ವಸ್ತ್ರದ ಕ್ರಯವೂ ವಿಪರೀತವಾಗಿ ಏರಿಹೋಗಿದೆ ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕೆಂತಿಲ್ಲ. ಅನೇಕ ಊರುಗಳಿಂದ ಸಂಗ್ರಹಿಸಲ್ಪಟ್ಟಿರುವ ನಾನಾ ನಮೂನೆಯ ಜವಳಿಯನ್ನು ನಮ್ಮ ಗಿರಾಕಿಗಳೂ ಇತರರೂ ಸುಲಭ ದರಗಳಲ್ಲಿ ಏಲಂ ಮೂಲಕ ಪಡಕೊಳ್ಳುವಂತೆ ಈ ತಿಂಗಳ ತಾ. ೨೪ರಿಂದ ಏಲವನ್ನು ನಮ್ಮ ಮಳಿಗೆಗಳಲ್ಲಿಯೇ ಪ್ರಾರಂಭಿಸಿರುವೆವು. ಲಾಭದಲ್ಲಿಯೇ ವಿಶೇಷ ದೃಷ್ಟಿಯಿಡದೆ ಈ ಏಲಂ ನಡಿಸೋಣಾಗುವದರಿಂದ ಸರ್ವರೂ ಇದರ ಪ್ರಯೋಜನವನ್ನು ಪಡಕೊಳ್ಳಬೇಕಾಗಿ ವಿಜ್ಞಾಪಿಸಿಕೊಳ್ಳುತ್ತೇವೆ.

1916-17ನೇ ಇಸವಿಯ ಇಂಡಿಯಾ ಗವರ್ನ್ಮೆಂಟ್
ಕನ್‌ವರ್ಶನ್ ಲೋನ್ ಎಂಬ ಮಾರ್ಪಡಿಸಬಹುದಾದ ಸಾಲವು.

ಪೋಸ್ಟ್ ಆಫೀಸು ಉಪಭಾಗವು.

1931ನೇ ಇಸವಿಗೆ ಮುಂಚಿತವಾಗಿ ಸಲ್ಲಿಸತಕ್ಕದ್ದಲ್ಲದ ಪರಂತು 1936 ನೇ ಇಸವಿಯೊಳಗಾಗಿ ನೂರಕ್ಕೆ ನೂರರಂತೆ ಪೂರಾ ಮರುಪಾವತಿಯಾಗತಕ್ಕ ಸಾಲವು.

ಸಾಲಿಯಾನಾ ವರ್ಷ ಒಂದರ ಸೇಕಡಾ 4 ರ ದರದ ಬಡ್ಡಿಯು ಅರ್ಧವರ್ಷಕ್ಕೊಮ್ಮೆ ಎಂದರೆ
ಎಪ್ರೀಲ್ 1ನೇ ತಾರೀಕಿನಲ್ಲಿಯೂ ಮತ್ತು ಅಕ್ಟೋಬರು 1 ನೇ ತಾರೀಕಿನಲ್ಲಿಯೂ ಸಲಾಯಿಸಲ್ಪಡುವುದು.

ಸೇಕಡಾ 3 ರಂತೆ ಮತ್ತು $3\frac{1}{2}$ ಯಂತೆ ರೂಪಾಯಿ ನಾಣ್ಯದಲ್ಲಿರುವ ಸಾಲಗಳನ್ನು ಮಾರ್ಪಡಿಸಿಕೊಳ್ಳಲು ಅರ್ಜಿದಾರರು ಅರ್ಹರಾಗಿರುತ್ತಾರೆ.

ಅರ್ಜಿಗಳು 100 ರೂಪಾಯಿ-ಯಾ-ಅದರ ಅಪವರ್ತ್ಯಗಳ ಬಗ್ಗೆ (ಎಂದರೆ 200, 300 ಈ ಮೇರೆಗೆ) ಇದ್ದು 5,000 ರೂಪಾಯಿಗಳಿಗೆ ಮೀರಿರ ಕೂಡದು ಮತ್ತು ಸೇವಿಂಗ್ಸ್ ಬ್ಯಾಂಕ್ ಕೆಲಸವು ನಿರ್ವಹಿಸಲ್ಪಡುವ ಪ್ರತಿಯೊಂದು ಟಪ್ಪಾಲ್ ಆಫೀಸಿನಲ್ಲಿಯೂ 1916ನೇ ಇಸವಿಯ ಜೂನ್ 14ನೇ ತಾರೀಖಿನಿಂದ 1916ನೇ ಇಸವಿಯ ಸಪ್ಟಂಬರ್ 25ನೇ ತಾರೀಖಿನ (ಇದು ಸೇರಿ) ವರೆಗೆ ಅವು ಅಂಗೀಕರಿಸೋಣಾಗುವವು. ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟರನಾಗಿದ್ದರೂ ಅಲ್ಲದಿದ್ದರೂ ಸರಿಯೇ, ಯಾವನೇ ಆದರೂ ಅರ್ಜಿಮಾಡಬಹುದು.

ಎಷ್ಟು ಮೊಬಲಗುಗಳಿಗೆ ಅರ್ಜಿಮಾಡಲ್ಪಡುತ್ತದೋ ಆ ಪೂರಾ ಮೊಬಲಗುಗಳನ್ನು ಅರ್ಜಿಗಳ ಸಂಗಡ ಡಿಪಾಜಿಟು ಮಾಡತಕ್ಕದ್ದು ಮತ್ತು ಅಷ್ಟೇ ಮೊಬಲಗುಗಳ (ಗವರ್ನಮೆಂಟ್ ಸೆಕ್ಯೂರಿಟಿ) ಪತ್ರವು ಅರ್ಜಿದಾರರಿಗೆ ಕೊಡಲ್ಪಡುವುದು. ಡಿಪಾಜಿಟುಗಳು ರೊಕ್ಕವಾಗಿ ಕೊಡಲ್ಪಡಬಹುದು ಅಥವಾ ಪೂರಾ ಯಾ ಒಂದು ಭಾಗವು ಪ್ರಕೃತವಿರುವ ಸೇವಿಂಗ್ಸ್ ಬ್ಯಾಂಕ್ ಲೆಕ್ಕಗಳಿಂದ ವಿಥ್‌ಡ್ರಾಯಲ್ ಯಾನೆ ಈಸುಕೊಳ್ಳುವದರ ಮೂಲಕವಾಗಿ ಕೊಡಲ್ಪಡಬಹುದು.

<u>ಟಪ್ಪಾಲು ಆಫೀಸಿನ ಮುಖಾಂತರ ಪಡೆದ ಮತ್ತು ಟಪ್ಪಾಲು ಆಫೀಸಿನ ಅಧಿಕಾರಿಗಳ ವಶದಲ್ಲಿಯೇ ಇಡಲ್ಪಟ್ಟ ಹೊಸ ಸಾಲಪತ್ರಗಳ ಬಡ್ಡಿಯ ಮೇಲೆ ಇನ್‌ಕಮ್‌ಟ್ಯಾಕ್ಸು ಹೊರಿಸೋಣಾಗಲಿಕ್ಕಿಲ್ಲ.</u>

ಅರ್ಜಿದಾರರಿಗೆ, ರೂಪಾಯಿ ನಾಣ್ಯದಲ್ಲಿರುವ ಇಂಡಿಯಾ ಗವರ್ನಮೆಂಟಿನವರ ಸೇಕಡಾ $3\frac{1}{2}$ ಬಡ್ಡಿಯ ಸೆಕ್ಯೂರಿಟಿ ಪತ್ರಗಳನ್ನು ಹೊಂದಿದವರು ಅವುಗಳ ಅಂಕಿತ ಮೌಲ್ಯದ ಸೇಕಡಾ 96 ರೂಪಾಯಿ ಪ್ರಕಾರವೂ ಅಥವಾ ಸೇಕಡಾ 3ರ ಬಡ್ಡಿಯ ಸೆಕ್ಯೂರಿಟಿ ಪತ್ರಗಳನ್ನು ಹೊಂದಿದವರು ಅವುಗಳ ಅಂಕಿತ ಮೌಲ್ಯದ ಸೇಕಡಾ $82\frac{1}{2}$ರ ಪ್ರಕಾರವೂ, ಅವರು ಪಡೆಯುವ ಹೊಸ ಸಾಲದ ಮೊಬಲಗಿಗೆ ಸಮಾನವಾಗುವಷ್ಟು ಮೊಬಲಗಿನ ಮಟ್ಟಿಗೆ ಪರಭಾರೆಮಾಡಿ ಹೊಸ ಸಾಲವಾಗಿ ಮಾರ್ಪಡಿಸುವ ಹಕ್ಕುಗಳು ಕೊಡಲ್ಪಡುವುವು.

ಮಾರ್ಪಡಿಸುವ ಹಕ್ಕುಗಳುಳ್ಳವರು ಮಾರ್ಪಡಿಸುವ ಬಗ್ಗೆ ಮಾಡುವ ಅರ್ಜಿಗಳು, 1916ನೇ ಇಸವಿಯ ಅಕ್ಟೋಬರ್ 16ನೇ ತಾರೀಖಿನಿಂದ 1917ನೇ ಇಸವಿಯ ಜನವರಿ 16ನೇ ತಾರೀಖಿನ (ಇದು ಸೇರಿ) ವರೆಗೆ ಅಂಗೀಕರಿಸಲ್ಪಡುವುವು. ಮಾರ್ಪಡಿಸೋಣಾಗುವ ಸೆಕ್ಯೂರಿಟಿ ಪತ್ರಗಳ ಬಾಬತು 1916ನೇ ಇಸವಿಯ ಸಪ್ಟಂಬರು 30 ತಾರೀಖಿನ ವರೆಗಿನ ಬಡ್ಡಿಯು ಮಾರ್ಪಡಿಸುವ ಕಾಲದಲ್ಲಿ ರೊಕ್ಕವಾಗಿ ಸಲಾಯಿಸಲ್ಪಡುವುದು. ಇವುಗಳ ಬದಲಾಗಿ ಸಾದರುಮಾಡಲ್ಪಟ್ಟ ಹೊಸ ಸಾಲದ ಮೇಲಣ ಬಡ್ಡಿಯು 1916ನೇ ಇಸವಿಯ ಅಕ್ಟೋಬರ 1ನೇ ತಾರೀಖಿನಿಂದ ಎಣಿಸಲ್ಪಡುವುದು.

ತಪಸೀಲು ಮಾಹಿತಿ ಅಡಗಿರುವ ನೋಟಿಸಿನ ನಕಲುಗಳು ಮತ್ತು ಅರ್ಜಿಯ ಫಾರಂಗಳನ್ನು ಸೇವಿಂಗ್ಸ್ ಬ್ಯಾಂಕ್ ಕೆಲಸವು ನಿರ್ವಹಿಸಲ್ಪಡುವ ಯಾವ ಪೋಸ್ಟಾಫೀಸಿನಿಂದಾದರೂ ಪಡೆಯಬಹುದು. ಬೇಕಾದರೆ ಇದಕ್ಕೆ ಅನುಬಂಧಿಸಿರುವ ಅರ್ಜಿಯ ಫಾರಮನ್ನೇ ಉಪಯೋಗಿಸಬಹುದು.

1916-1917ನೇ ಇಸವಿಯ ಇಂಡಿಯಾ ಗವರ್ನಮೆಂಟಿನವರು ತೆಗೆಯುವ ಸೇಕಡಾ 4ರ ಬಡ್ಡಿಯ ಕನ್‌ವರ್ಶನ್ ಲೋನ್ ಎಂಬ ಮಾರ್ಪಡಿಸಬಹುದಾದ ಸಾಲದ ಬಗ್ಗೆ ಪೋಸ್ಟು ಆಫೀಸುಗಳ ಪರಿಮುಖವಾಗಿ ಮಾಡುವ ಅರ್ಜಿಯ ನಮೂನೆ.

(ಸೇವಿಂಗ್ಸ್ ಬ್ಯಾಂಕ್ ಕೆಲಸವು ನಿರ್ವಹಿಸಲ್ಪಡುವ ಯಾವದೊಂದು ಪೋಸ್ಟ್ ಆಫೀಸಿನಲ್ಲಿ 1916ನೇ ಇಸವಿಯ ಸಪ್ಟಂಬರ 25ನೇ ತಾರೀಕು ದಾಟಿಹೋಗುವದರೊಳಗಾಗಿ ಹಾಜರು ಮಾಡಲ್ಪಡಬೇಕು. ಅವಶ್ಯವಿದ್ದರೆ ಇದೇ ಫಾರ್ಮನ್ನು ಕತ್ತರಿಸಿ ಉಪಯೋಗಿಸಬಹುದು).

ಬಹಳ ಸ್ಪಷ್ಟವಾಗಿ ಬರೆಯಬೇಕು.

ನಾದ

ನಾನು 1916ನೇ ಇಸವಿಯ ಜೂನ್ 8ನೇ ತಾರೀಕಿನ ಇಂಡಿಯಾ ಗಜೇಟಿನ ವಿಶೇಷ ಸಂಚಿಕೆಯಾಗಿ ಫಾಯಿಸ್ ಮಾಡಲ್ಪಟ್ಟ ಇಸ್ತಿಹಾರಿನಲ್ಲಿ ಪ್ರಕಟಿಸಲ್ಪಟ್ಟ 1916-17ನೇ ವರ್ಷದ ಸೇಕಡಾ 4ರ ಬಡ್ಡಿಯ ಕನ್‌ವರ್ಶನ್ ಲೋನ್ ಎಂಬ ಮಾರ್ಪಡಿಸಬಹುದಾದ ಸಾಲದ ಪೈಕಿ ರೂ. .... ಬಗ್ಗೆ ಈ ಮೂಲಕ ದರಖಾಸ್ತು (ಅರ್ಜಿ) ಮಾಡುತ್ತೇನೆ.

ನಾನು ದರಖಾಸ್ತು ಮಾಡಿದ ಸಾಲದ ಮೊಬಲಗಿನ ಬಗ್ಗೆ,

(1) ನಾನು — ರೊಕ್ಕವಾಗಿ ರೂ. .... / ಚೆಕ್ ಮೂಲವಾಗಿ ರೂ. .... ಈ ಮೂಲಕ ಒಪ್ಪಿಸುತ್ತೇನೆ.

(2) ಪೋಸ್ಟು ಆಫೀಸು ಸೇವಿಂಗ್ಸ್ ಬ್ಯಾಂಕಿನಲ್ಲಿ ನನ್ನ ಲೆಕ್ಕದಲ್ಲಿ ಜಮೆ ಇರುವ ಮೊಬಲಗಿನಿಂದ ರೂ. .... ಈ ಬಗ್ಗಾಗಿ ಈಸುಕೊಳ್ಳಲು ನಾನು ಅಧಿಕಾರಗೊಳಿಸುತ್ತೇನೆ ಮತ್ತು ಪಾಸ್‌ಬೂಕನ್ನು ಇದರೊಂದಿಗೆ ಲೇಶ್ ಮಾಡಿದ್ದೇನೆ.

ಜುಮಲಾ ...

(ರೊಕ್ಕವಾಗಿ ಯಾ ಚೆಕ್ ಮೂಲವಾಗಿ ಪಾವತಿಮಾಡಿದ ಮೊಬಲಗುಗಳನ್ನು ಮತ್ತು ಸೇವಿಂಗ್ಸ್ ಬ್ಯಾಂಕ್ ಲೆಕ್ಕದಿಂದ ಈಸುಕೊಂಡು ಪಾವತಿಮಾಡಿದ ಮೊಬಲಗುಗಳನ್ನು ಆ ಬಗ್ಗೆ ಬಿಟ್ಟ ಸ್ಥಳಗಳಲ್ಲಿ ಪ್ರತಿಪ್ರತ್ಯೇಕವಾಗಿ ಕಾಣಿಸತಕ್ಕದ್ದು. ಅನಾವಶ್ಯಕವಾದ ವಾಕ್ಯಗಳು ಯಾವುವೂ ಇದ್ದರೆ ಅವನ್ನು ಹೊಡೆದುಬಿಡತಕ್ಕದು.)

A. ನನ್ನ ಬಳಿಯಿಂದ ಅಂಗೀಕರಿಸೋಣಾದ ಸಾಲದ ಮೊಬಲಗನ್ನು ನನ್ನ ಬಗ್ಗಾಗಿ ಪೋಸ್ಟ್ ಮತ್ತು ಟೆಲಿಗ್ರಾಫ್ ಇಲಾಖೆಯ ಅಕೌಂಟಾಂಟ್ ಜನರಲ್‌ರವರು ಇಟ್ಟುಕೊಳ್ಳಬಹುದಾಗಿ ಮತ್ತು ಆ ಬಾಬತು ಬಡ್ಡಿಯನ್ನು--

೧೧. ವಾತಮುರಾರಿ ಬಾಮ. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ ೩ ಬಾಟ್ಲಿಗೆ ೧ ರೂ. ೬ ಆಣೆ.

೧೨ ಗಜಕರ್ಣ ಕೇಸರಿ ಮುಲಾಮು. ತುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯೂ ವದಿಲ್ಲ ಸುವಾಸಿಕವಾಗಿದೆ. ಡಬ್ಬಿಗೆ ೪ ಆಣೆ.

೧೩. ಸವ್ವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗುಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

B. M. Nath & Co., *Ayurvedic Chemists,*
Vepery Post, MADRAS.

ಸ್ವದೇಶಾಭಿಮಾನಿ

ಮಂಗಳೂರು ಶುಕ್ರವಾರ ತಾರೀಕು 4ನೇ ಅಗೋಸ್ತು 1916.

ನಾಗಪಂಚಮೀ.

ಹಿಂದೂ ಧಾರ್ಮಿಕರಿಗೆ ಚಾತುರ್ಮಾಸದ ನಾಲ್ಕು ತಿಂಗಳುಗಳು ಹಬ್ಬಹುಣ್ಣಿಮೆಗಳಿಂದಲೂ, ವ್ರತವೈಕಲ್ಯಗಳಿಂದಲೂ ಬಹು ಸಂತೋಷದಿಂದ ಹೋಗುತ್ತವೆ. ಅದರಲ್ಲಿಯೂ ಶ್ರಾವಣ ತಿಂಗಳವಂತೂ ವಾರವ್ರತ, ನಾಗಪಂಚಮೀ, ಕೃಷ್ಣಾಷ್ಟಮೀ, ನೂಲಹುಣ್ಣಿಮೆ ಮುಂತಾದ ಉತ್ಸವಗಳಲ್ಲಿ ಹ್ಯಾಗೆ ಹೋಗುತ್ತದೆಂಬುವದು ಗೊತ್ತೇ ಆಗುವದಿಲ್ಲ. ಈ ತಿಂಗಳು ಮಳೆಯ ಮಧ್ಯಕಾಲವಾದ್ದರಿಂದ ಆ ಸಮಯದಲ್ಲಿ ಬೇರೆ ಬೇರೆ ವ್ರತಗಳ ಉದ್ದೇಶದಿಂದ ಮನೆಯಲ್ಲಿಯೇ ಕುಳಿತು ದೇವರನ್ನು ಪ್ರಾರ್ಥಿಸುವ ಕ್ರಮವನ್ನು ಹಿಂದುಗಳ ಪೂರ್ವಜರು ಇಟ್ಟದ್ದು ಅವರ ಬುದ್ಧಿಮತ್ತೆಯನ್ನೂ, ವ್ಯವಹಾರನೈಪುಣ್ಯವನ್ನೂ ವ್ಯಕ್ತಗೊಳಿಸುತ್ತದೆ. ಗಣೇಶಚತುರ್ಥಿ, ರಥಸಪ್ತಮೀ ಮೊದಲಾದವುಗಳಂತೆ ಈ ಹೊತ್ತಿನ ನಾಗಪಂಚಮಿಯು ಕೂಡ ಮುಖ್ಯವಾದ ಹಬ್ಬಗಳಲ್ಲಿ ಒಂದಾದ್ದರಿಂದ ಈ ವಿಷಯದಲ್ಲಿ ಕೆಳಗೆ ಒಂದೆರಡು ಮಾತುಗಳನ್ನು ಬರೆಯುತ್ತೇವೆ.

ನಾಗಪಂಚಮಿಯು ಹಿಂದೂಜನರಲ್ಲಿ ಸಾಧಾರಣವಾಗಿ ಸಾರ್ವತ್ರಿಕವಾಗಿದೆ. ಈ ದಿವಸವನ್ನು ಆಚರಿಸುವ ರೂಢಪದ್ಧತಿಯಲ್ಲಿ ಕೆಲಕೆಲವು ಕಡೆಗಳಲ್ಲಿ ಬೇರೆಬೇರೆ ಪ್ರಕಾರಗಳಿದ್ದರೂ ನಾಗಪೂಜೆಯು ಮಾತ್ರ ಎಲ್ಲ ಕಡೆಗಳಲ್ಲಿ ಇದ್ದದ್ದು ಕಂಡುಬರುತ್ತದೆ. ಕೆಲವು ದೇಶಗಳಲ್ಲಿ ಮಣ್ಣಿನಿಂದ ನಾಗಪ್ರತಿಮೆಯನ್ನು ತಯಾರಿಸಿ ಅದನ್ನು ಪೂಜಿಸುವರು. ಕೆಲವು ಕಡೆಗಳಲ್ಲಿ ಹಿಟ್ಟಿನಿಂದ ಎಲೆಗಳ ಮೇಲೆ ನಾಗವನ್ನು ಬಿಡಿಸುವರು. ಇನ್ನು ಕೆಲವು ಕಡೆಗಳಲ್ಲಿ ಗೋಡೆಯ ಮೇಲೆ ನಾಗಪ್ರತಿಮೆಯನ್ನು ಬರೆಯುವರು. ಬೇರೆ ಕೆಲವು ದೇಶಗಳಲ್ಲಂತೂ ಶಿಲಾಮಯ ನಾಗಗಳನ್ನೇ ಪೂಜಿಸುವರು. ಪೂಜೆಯಲ್ಲಿ ಷೋಡಶೋಪಚಾರಗಳನ್ನು ಅರ್ಪಿಸುವುದು ಮುಖ್ಯವೇ ಆದರೂ ಈ ದಿವಸ ನಾಗದೇವರಿಗೆ ಒಂದಿಷ್ಟು ಹಾಲನ್ನು ಕೊಡುವದು ಮುಖ್ಯವಿಧಿಯು. ಬೇಸಾಯಗಾರರಾದರೂ ಈ ದಿನದಲ್ಲಿ ಗುದ್ದಲಿ ಮುಂತಾದ್ದರಿಂದ ಭೂಮಿಯನ್ನು ಅಗಿಯಲಾರರು. ಇನ್ನು ಕೆಲವು ಕಡೆಯಲ್ಲಿ ಹೀಗೊಂದು ಸಂಪ್ರದಾಯವಿದೆ. ಏನೆಂದರೆ, ಹೆಂಗಸರು ನಾಗಪಂಚಮೀ ದಿವಸ ಕಾಯಿಪಲ್ಲೆಗಳನ್ನು ಸಹ ಕೊಯ್ಯುವದಿಲ್ಲ. ಇಂಥಾ ರೂಢಿಗಳು ಸರ್ಪಗಳಿಗೆ ಹಿಂಸೆಯು ಸುತರಾಂ ಆಗಕೂಡದೆಂಬ ಶ್ರದ್ಧೆಯಿಂದಲೇ ಪ್ರಚಾರದಲ್ಲಿ ಬಂದಿರಬಹುದೆಂಬುದಾಗಿ ತೋರುತ್ತದೆ.

ನಾಗಪಂಚಮಿಯ ಪ್ರವರ್ತನೆಯು ಹ್ಯಾಗುಂಟಾಯಿತೆಂಬುವ ವಿಷಯದಲ್ಲಿ ಹಲವರು ಹಲವುತರದ ಕಾರಣಗಳನ್ನು ಕೊಡುತ್ತಾರೆ. ದ್ವಾಪರದಲ್ಲಿ ಶ್ರೀಕೃಷ್ಣನು ತನ್ನ ಸಹಚರರಾದ ಬಾಲಕರೊಡನೆ ಆಡುತ್ತಿರುವಾಗ ಅವನ ಕಂದುಕವು (ಚಂಡುವು) ಕದಂಬ ವೃಕ್ಷದ ಕೊಂಬೆಗಳಲ್ಲಿ ಸಿಕ್ಕಿಬಿತ್ತು. ಅದನ್ನು ತೆಗೆಯಲು ಶ್ರೀ ಕೃಷ್ಣನು ಮರವನ್ನೇರಿದಾಗ ಅದರ ಕೊಂಬೆಯು ಮುರಿದು ಕೃಷ್ಣನ ಒಟ್ಟಿಗೆನೇ ಅಡಿಯಲ್ಲಿ ಹರಿದುಕೊಂಡು ಹೋಗುವ ಪ್ರವಾಹದಲ್ಲಿ ಬಿತ್ತು. ಆ ಕಲಿಯಾ ಪ್ರವಾಹದಲ್ಲಿ ಕಾಲಿಮವೆಂಬ ಅತಿ ಭಯಂಕರವಾದ ಸರ್ಪವು ಇತ್ತು. ಕೃಷ್ಣನು ನೀರಿನ ಅಡಿಗೆಹೋಗಿ ಅದರೊಡನೆ ಹೋರಾಡಿ ಅದನ್ನು ದಣಿಸಿ ನಿಃಸತ್ವಪಡಿಸಿದನು; ಮತ್ತು ಇದೇ ಪಂಚಮೀ ದಿವಸ ನಿಃಸತ್ವವಾದ ಆ ಸರ್ಪದೊಡನೆ ಪ್ರವಾಹದಿಂದ ಮೇಲಕ್ಕೆ ಬಂದನು. ಮೂಲತಃ ದುಷ್ಟವಾದರೂ ಆ ಸರ್ಪವು ಶ್ರೀ ಕೃಷ್ಣನನ್ನು ಏನೂಮಾಡದೆ ಅವನನ್ನು ಕಾಪಾಡಿತು ಎಂದು ತಿಳಿದು ಆ ದಿವಸ ಗೋಪಾಲರೆಲ್ಲರು ಆ ಸರ್ಪಕ್ಕೆ ಉಪಕಾರಸ್ಮರಣಾರ್ಥವಾಗಿ ಹಾಲು ಮುಂತಾದ ಉಪಚಾರಗಳನ್ನು ಕೊಟ್ಟರು. - ಅಂದಿನಿಂದ ಇದೇ ಕ್ರಮವು ರೂಢಿಯಲ್ಲಿ ಬಂತು. ನಾಗಪಂಚಮೀ ವಿಷಯದ ಈ ಉಪಪತ್ತಿಯು ಅಷ್ಟೊಂದು ಸಮರ್ಪಕವಾಗಿ ತೋರುವುದಿಲ್ಲ. ದ್ವಾಪಾರದ ಅಂತ್ಯದಲ್ಲಿ ಪರೀಕ್ಷಿತಿಯು ಸರ್ಪಸತ್ರಮಾಡಿದ್ದಾನೆ. ಸರ್ಪಗಳ ವಿಷಯದಲ್ಲಿ ಕೃಷ್ಣಾವತಾರವಾದಂದಿನಿಂದ ಪೂಜ್ಯಬುದ್ಧಿಯು ಇದ್ದದ್ದಾದರೆ ಕೃಷ್ಣಭಕ್ತನಾದ ಪರೀಕ್ಷಿತಿಯು ಸರ್ಪಸತ್ರವನ್ನು ಆರಂಭಿಸುತ್ತಿದ್ದಿಲ್ಲ. ಶಾಸ್ತ್ರದೃಷ್ಟಿಯಿಂದ ಇದರ ಉಪಪತ್ತಿಯನ್ನು ಹೇಳುವುದಾದರೆ- "ನನ್ನ ಕುಲದಲ್ಲಿ ಮೊದಲು ಯಾರಾದರೂ ಸರ್ಪದಂಶದಿಂದ ಮೃತವಾಗಿಹೋಗಿದ್ದರೆ ಅವರ ಅಧೋಗತಿಯು ಈ ವ್ರತದಾನದಿಂದ ಹೋಗಲಿ." ಎಂಬ ಅರ್ಥದ ಮಂತ್ರವನ್ನು ಆಲೋಚಿಸಬೇಕು. ಈ ಮಂತ್ರದಲ್ಲಿ ಹೇಳಿದ ತಿಳುವಳಿಕೆಯಿಂದಲೇ ಈ ವ್ರತವು ರೂಢಿಯಲ್ಲಿ ಬಂದಿರಬಹುದೆಂತ ಕಾಣುತ್ತದೆ. ಆದರೆ ಐತಿಹಾಸಿಕರು ಈ ವಿಷಯದಲ್ಲಿ ಬೇರೊಂದು ಉಪಪತ್ತಿಯನ್ನು ತೋರಿಸುವರು. ಉತ್ತರದ ಆರ್ಯರು ದಕ್ಷಿಣ ದೇಶದಲ್ಲಿ ಪ್ರವೇಶಿಸುವುದಕ್ಕಿಂತ ಮೊದಲು ದ್ರಾವಿಡ ಜನರಲ್ಲಿ ಸರ್ಪಗಳನ್ನೂ ವೃಕ್ಷಗಳನ್ನೂ ಪೂಜಿಸುವ ಕ್ರಮವಿತ್ತು. ದೇವತಾಕೋಟಿಯಲ್ಲಿ ಪ್ರಾಣಘಾತಕವಾದ ಸರ್ಪವನ್ನು ಸೇರಿಸಿಕೊಂಡು ಅದರ ಪೂಜೆಯನ್ನು ಮಾಡುವ ಪದ್ಧತಿಯು ಅವರಲ್ಲಾದರೂ ಹ್ಯಾಗೆ ಬಂತೆಂಬೀ ವಿಷಯದಲ್ಲಿ ಸರ್ಪದಂಶದಿಂದುಂಟಾದ ಪ್ರಾಣಹಾನಿಯೇ ಕಾರಣವಾಗಿರಬೇಕೆಂದು ಊಹಿಸುತ್ತಾರೆ. ಮುಂದೆ ಆರ್ಯರು ದ್ರಾವಿಡರನ್ನು ಜಯಿಸಿ ದಕ್ಷಿಣದಲ್ಲಿ ಬಂದನಂತರ ಆರ್ಯರ ಮತ್ತು ದ್ರಾವಿಡರ ಹೊಕ್ಕುಬಳಿಕೆಯಾದಲ್ಲಿ ದ್ರಾವಿಡರ ಈ ನಾಗಪೂಜೆಯ ಪದ್ಧತಿಯನ್ನು ಸಹ ಆರ್ಯರು ಅನುಕರಿಸಿದರು. ಕ್ರಮೇಣ ಅಂಗೀಕರಿಸಿದರು. ಈಗಿನ ನಾಗಪಂಚಮಿ ಕೂಡ ಇದರದೇ ಒಂದು ಕುರುಹು.

ನಾಗಪಂಚಮಿಯ ವ್ರತವು ಕಾಲಿಯ ಸರ್ಪವು ಕೃಷ್ಣನನ್ನು ಕೊಲ್ಲದೆ ರಕ್ಷಿಸಿದ್ದರಿಂದ ಬಂದಿದ್ದಿರಲಿ ಅಥವಾ ಈ ಐತಿಹಾಸಿಕರ ಮಾತಿನಂತೆ ದ್ರಾವಿಡರ ಅನುಕರಣೆಯಿಂದ ಬಂದದ್ದಿರಲಿ, ಈಗ ಹಿಂದೂ ಜನರಲ್ಲಿ ಈ ಹಬ್ಬವು ಸಾರ್ವತ್ರಿಕವಾಗಿದೆಂದು ಹೇಳಲು ಸಂಕೋಚ ತೋರುವುದಿಲ್ಲ. ಈ ದಿವಸ ವಿಧಿಪೂರ್ವಕವಾಗಿ ನಾಗಪೂಜೆಯನ್ನು ಮಾಡಿದ ನಂತರ ಪ್ರಾರ್ಥನೆಯ ಒಂದು ಮಂತ್ರವನ್ನು ಹೇಳಬೇಕಾಗುತ್ತದೆ. ಆ ಮಂತ್ರವು ಯಾವದು ಎಂಬುದನ್ನು ಇಲ್ಲಿ ತೋರಿಸುವದಕ್ಕಿಂತ ಅದರ ಅರ್ಥವನ್ನೇ ಹೇಳಿದರೆ ಸಾಕೆಂದು ತೋರುತ್ತದೆ. ಆ ಪ್ರಾರ್ಥನೆಯ ಮಂತ್ರದಲ್ಲಿ ಹೇಳಿಕೊಳ್ಳುವದೇನೆಂದರೆ—"ಈ ಶ್ರಾವಣ ಶುಕ್ಲ ಪಂಚಮೀ ದಿವಸ ನಿಮ್ಮನ್ನು ನಾವು ಪೂಜಿಸಿರುವೆವು. ಆದರಿಂದ ನೀವು ಸಂತುಷ್ಟರಾಗಿ ನಮಗೆ ಸುಖಕೊಡುವವರಾಗಿರಿ. ನಮ್ಮ ನ್ಯೂನಾತಿರಿಕ್ತಗಳನ್ನು ಕ್ಷಮಿಸಿರಿ. ನಿಮ್ಮ ಅನುಗ್ರಹದಿಂದ ಭಾರತೀಯರಿಗೆ ವಿಷಬಾಧೆಯು ಉಂಟಾಗದೆ ಇರಲಿ."

ಈ ಹೊತ್ತು ಈ ಪ್ರಾರ್ಥನೆಯನ್ನು ಮಾಡುವಾಗಲೇ ನಾವು ಭಾರತೀಯರು ನಾಗಗಳಿಗೆ ಇನ್ನೊಂದು ಹೊಸ ಪ್ರಾರ್ಥನೆಯನ್ನೂ ಮಾಡಬೇಕಾಗಿದೆ. ಈ ಹೊತ್ತು 'ನಾಗನ' ದಿವಸವಾದುದರಿಂದ ಹ್ಯಾಗೆ ಇದು ನಾಗಪಂಚಮಿಯಾಗಿದೆಯೋ ಹಾಗೆಯೇ ನಮ್ಮ ಬ್ರಿಟಿಷರು ಯುದ್ಧದಲ್ಲಿ ಸೇರಿದ 'ಅಗಸ್ತ್ಯ-ಚತುರ್ಥಿ'ಯು ಈ ಹೊತ್ತೇ ಬಂದಿರುವದರಿಂದ "ಯುದ್ಧ ಪಂಚಮಿ"ಯೂ ಆಗಿದೆ. ಈ "ಯುದ್ಧ ಪಂಚಮಿ"ಯು, ಸಲುವಾಗಿ ನಾಗಗಳಿಗೆ ಪ್ರಜೆಗಳಾದ ನಾವು ಪ್ರಾರ್ಥಿಸಬೇಕಾದುದೇನೆಂದರೆ—ನಾಗದೇವತೆಗಳೇ! ನಿಮ್ಮಂತೆಯೇ ಯುದ್ಧದೊಳಗಿನ ಶತ್ರುಗಳು ಲೋಕವನ್ನು ಪೀಡಿಸುತ್ತಿದ್ದಾರೆ. ನೀವು ಬಾಯಿಂದ ವಿಷಮಯವಾದ ಗಾಳಿಯನ್ನು ಬಿಡುವಂತೆ ಇವರು ಸಹ ವಿಷಧೂಮ್ರದ ಗುಂಡುಗಳನ್ನು ಬಿಡುತ್ತಿದ್ದಾರೆ. ನಿಮ್ಮಲ್ಲಿರುವುದಕ್ಕಿಂತಲೂ ಎಷ್ಟೋ ಅಧಿಕವಾಗಿ ಈ ನಮ್ಮ ಸಾಮ್ರಾಜ್ಯ ಶತ್ರುಗಳಲ್ಲಿ ವಕ್ರಗಮನವು ಕಂಡುಬರುತ್ತದೆ. ಪ್ರಾಣಿಗಳನ್ನು ಕೊಲ್ಲಲು ನಿಮ್ಮಲ್ಲಿ ಒಂದೇ ಆಯುಧವಿರುವುದು; ಆದರೆ ಇವರಲ್ಲಿ ಪ್ರಾಣಹಾರಕ ಆಯುಧಗಳ ಸಂಖ್ಯೆಯೇ ಗೊತ್ತಾಗದು. ಮತ್ತು ಆದುದರಿಂದಲೇ ಇವರು ಮಾಡುವ ಪ್ರಾಣಹಾನಿಯು ಅಸಂಖ್ಯವಾಗಿದೆ. ನಿಮಗಿಂತಲೂ ಇವರು ಕ್ರೂರ ಕೆಲಸಗಳಲ್ಲಿ ಮುಂದಾಳುಗಳಾಗಿದ್ ದಾರೆಂಬುದಕ್ಕೆ ಈ ಮಹಾ ಯುದ್ಧದೊಳಗಿನ ವರ್ತಮಾನಗಳೇ ಸಾಕ್ಷಿಯಾಗಿವೆ. ಆದುದರಿಂದ ನಾಗದೇವತೆಗಳೇ, ಈ ಹೊತ್ತು ಪಂಚಮೀ ದಿವಸ ನಾವು ಪ್ರಾರ್ಥಿಸುವದೇನೆಂದರೆ, ನಮ್ಮ ಬ್ರಿಟಿಷರಿಗೆ ಯುದ್ಧದಲ್ಲಿ ವಿಪಕ್ಷಗಳಾಗಿ ನಿಂತ ಈ ಶತ್ರು ಸಮುದಾಯಕ್ಕೆ ಸುಬುದ್ಧಿಯನ್ನು ಕೊಟ್ಟು ಯುದ್ಧವನ್ನು ಆದಷ್ಟು ಬೇಗನೆ ನಿಲ್ಲಿಸುವಂತೆ ಮಾಡಿರಿ. ಜಯವು ನಮ್ಮ ಅರಸರ ಕಡೆಗೇ ಇರಲಿ. ಬರುವ ನಾಗಪಂಚಮಿಯು ಬರುವಷ್ಟರೊಳಗೆ ಲೋಕವೆಲ್ಲ ಶಾಂತ ಸ್ಥಿತಿಯಲ್ಲಿ ಇರುವುದನ್ನು ನೀವು ನೋಡಬೇಕು. ಇದೇ ನಮ್ಮ ಪ್ರಾರ್ಥನೆಯು."

ಈ ಹೊತ್ತಿನ ಪ್ರಾರ್ಥನೆಗೆ ಔಚಿತ್ಯದ ದೃಷ್ಟಿಯಿಂದ ನಾಗದೇವತೆಗಳೇ ಭಾಗಿಗಳಾಗಿವೆಂಬುದು ವಾಚಕರಿಗೆ ಇನ್ನೊಮ್ಮೆ ನೆನಪು ಹುಟ್ಟಿಸಬೇಕಾದುದಿಲ್ಲ. ನಾಗಪಂಚಮಿಯ ದಿವಸದಲ್ಲೆ ಅಗಸ್ತ್ಯ-ಚತುರ್ಥಿಯು ಬಂದಿರುವುದರಿಂದ ಇದಕ್ಕೆ ಈ ಹೊತ್ತಿನ ಮಟ್ಟಿಗೆ "ಯುದ್ಧಪಂಚಮಿ"ಯೆಂದು ಹೆಸರು ಕೊಡಬಹುದು. ಈ ಹೆಸರಿಗೆ ತಕ್ಕದಾದ ಪ್ರಾರ್ಥನೆಯು ಯಾವುದೆಂಬದನ್ನು ನಾವು ಮೇಲೆ ತಿಳಿಸಿದ್ದೇವೆ. ಆ ರೀತಿಯಿಂದ

ನಮ್ಮ ನಾಗರೀಕರು ಈ ಹೊತ್ತು ಪ್ರಾರ್ಥಿಸಿ ಎರಡೂ ಪಂಚಮಿಗಳನ್ನು ಸಾಂಗಗೊಳಿಸುವರೆಂದು ನಾವು ನಂಬುತ್ತೇವೆ.

ಇಂಡಸ್ಟ್ರಿಯಲ್ ಕಮಿಶನಿನ ಪ್ರೆಸಿಡೆಂಟರಾದ ಸರ್ ತೋಮಸ್ ಹೊಲ್ಲೆಂಡರವರು ಮದ್ರಾಸಿಗೆ ಬಂದದ್ದು.

ಹಿಂದೂಸ್ಥಾನದಲ್ಲಿ ಕೈಗಾರಿಕೆಗಳ ಏಳಿಗೆಯನ್ನು ಹೇಗೆ ಸಾಧಿಸಬಹುದೆಂಬುವ ವಿಷಯವನ್ನು ಯೋಚಿಸಲಿಕ್ಕೆ 'ಇಂಡಸ್ಟ್ರಿಯಲ್ ಕಮಿಶನ್' ನೇಮಿಸಲ್ಪಟ್ಟಿರುವಂಥಾದ್ದನ್ನು ವಾಚಕರು ಈ ಮೊದಲೇ ತಿಳಿದಿರಬಹುದು. ಈ ಕಮಿಶನಿಗೆ ಅಧ್ಯಕ್ಷರಾಗಿರುವಂಥಾ ಸರ್ ತೋಮಸ್ ಹೊಲ್ಲೆಂಡರವರು ಕೆಲವು ದಿನಗಳ ಹಿಂದೆ ಮದ್ರಾಸಿಗೆ ಬಂದಿದ್ದರು. ದಕ್ಷಿಣ ಹಿಂದೂಸ್ಥಾನದ 'ಚೆಂಬರ್ಸ್ ಒಫ್ ಕೊಮರ್ಸ್' ಹಿಂದೀ ವರ್ತಕರ ಕೂಟವು ಇವರನ್ನು ಸಂದರ್ಶಿಸಿ ಈ ಸಂಸ್ಥಾನದ ಕೈಗಾರಿಕೆಗಳ ಸ್ಥಿತಿಗತಿಯನ್ನು ಇವರಿಗೆ ತಿಳಿಯಹೇಳಿರುತ್ತಾರೆ. ಈ ವರ್ತಕರ ಕೂಟದ ಮೆಂಬರರಿಗೆ ಸರ್ ತೋಮಸರವರು ಕೊಟ್ಟ ಉತ್ತರದಿಂದ ಇಂಡಸ್ಟ್ರಿಯಲ್ ಕಮಿಶನಿನ ಕಾರ್ಯನಿರ್ವಾಹವು ಹೇಗೆ ನಡಿಸೋಣಾಗುವದೆಂಬದು ಗೊತ್ತಾಗುತ್ತದೆ.

ಚುರುಕಾದ ಕೆಲಸಗಾರರು ಪಾಶ್ಚಾತ್ಯ ದೇಶಗಳಲ್ಲಿ ಇದ್ದಂತೆ ಇಲ್ಲಿ ಇರರು. ಕೈಗಾರಿಕೆಗಳ ಸ್ಥಾಪನೆಗೆ ಇದೊಂದು ದೊಡ್ಡ ಕೊರತೆ ಎಂಬ ಪ್ರತಿಕೂಲ ವಾದವು ಇರುವದು. ಈ ವಾದವು ಆಧಾರವಿಲ್ಲದ್ದೆಂದು ಸರ್ ತೋಮಸರವರು ಹೇಳಿರುತ್ತಾರೆ. ಟಾಟಾರವರ ಕಬ್ಬಿಣ ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿರುವ ಅತಿ ಜಾಣರಾದ ಹಿಂದೀ ಕೆಲಸಗಾರರು ಅನೇಕರಿರುವರು. ಚುರುಕುತನದಲ್ಲಿ ಪಾಶ್ಚಾತ್ಯರಿಗೆ ಇವರು ಸರಿಯಾಗಿರುವರು. ಹಿಂದೀ ಕೆಲಸಗಾರರಿಗೆ ಚುರುಕಾಗಿ ಕೆಲಸ ಮಾಡುವ ಅವಕಾಶವು ದೇಶದಲ್ಲಿ ಪ್ರಾಪ್ತವಾಗದೆ ಇದ್ದದ್ದರಿಂದ ಇಲ್ಲಿಯ ಕೆಲಸಗಾರರ ಜಾಣ್ಮೆಯು ಸರಿಯಾಗಿ ವ್ಯಕ್ತವಾಗದೆ ಅಲ್ಲಿಯೇ ಮೊಂಡಾಗಿ ಹೋಗಿದೆ. ಹಿಂದೂಸ್ಥಾನದಲ್ಲಿ ಕೈಗಾರಿಕೆಗಳಿಗೆ ಬೇಕಾದ ಕೆಲಸಗಾರರು ಇರುವರೆಂಬ ಸರ್ ತೋಮಸ್‌ರವರ ಅಭಿಪ್ರಾಯವು ಹೀಗೆ ಅನುಕೂಲವೇ ಆಗಿರುವದು. ಕೈಗಾರಿಕೆಗಳಿಗೆ ಬೇಕಾದ ಬಂಡವಾಳ ಮತ್ತು ಶಿಕ್ಷಣ, ಇವೆರಡೂ ಈ ದೇಶದಲ್ಲಿ ಬೇಕಾಗಿರುವವು. ಆದರೆ ಇವೆರಡನ್ನೂ ಸಂಗ್ರಹಿಸಿಕೊಳ್ಳುವ ವಿಷಯ ವಿವರವಾದ ಮಾಹಿತಿಯು ಸರ್ ಹೊಲ್ಲೆಂಡರವರ ಮಾತುಗಳಲ್ಲಿ ತೋರಿಬರುವದಿಲ್ಲ.

ದೇಶದ ಬೇರೆ ಬೇರೆ ಸಂಸ್ಥಾನಗಳಿಗೆ ಹೋಗಿ ಅಲ್ಲಲ್ಲಿಯ ಸ್ಥಳೀಕ ವಿದ್ಯಮಾನಗಳನ್ನು ಸ್ವತಹ ತಿಳಕೊಳ್ಳುವದು, ಆಯಾ ಸಂಸ್ಥಾನಗಳಲ್ಲಿ ಈ ಕಮಿಶನಿನ ಕೆಲಸವನ್ನು ಮಾಡತಕ್ಕ ಸ್ಥಳೀಕ ಕಮ್ಮಿಟಿಗಳನ್ನು ಏರ್ಪಡಿಸುವದು, ಕೈಗಾರಿಕೆ ಮಾಹಿತಿದಾರರ ವಿಚಾರಣೆ, ನಂತರ ಆಯಾ ಸಂಸ್ಥಾನಿಕ ಕಮ್ಮಿಟಿಗಳ ಮತ್ತು ಕಮಿಶನಿನವರ ಪರಿಷತ್ತು ಕೂಡುವದು, ಮತ್ತು ಈ ಪರಿಷತ್ತಿನವರು ನಿಶ್ಚಯಿಸಬಹುದಾದ ನಿರ್ಣಯಗಳನ್ನು ಜಾರಿಗೆ ತರಲು ಅಗತ್ಯವುಳ್ಳ ಏರ್ಪಾಡುಗಳೇನೆಂಬುದಾಗಿ ಸೂಚಿಸುವದು, ಅಗತ್ಯ ಕಂಡರೆ ಎಲ್ಲಾ ಸಂಸ್ಥಾನಗಳ ಬಗ್ಯೆ ಇಂಡಿಯಾ ಸರಕಾರದಲ್ಲಿ ಒಂದು ಶಾಖೆಯನ್ನೇ ಏರ್ಪಡಿಸಬೇಕೆಂದು ಸೂಚಿಸುವದು,—ಕೈಗಾರಿಕೆ ಕಮಿಶನಿನವರ ಕಾರ್ಯವಿವರವು ಈ ರೀತಿಯಾಗಿದೆ. ಕಮಿಶನಿನವರು ಶೋಧಿಸುವ ಇನ್ನೊಂದು ವಿಶೇಷ ವಿಚಾರವು ಇರುವದು. ಸರಕಾರದ ಸಹಾಯ. ಈ ಸಹಾಯವನ್ನು ದ್ರವ್ಯರೂಪದಲ್ಲಿ ಕೊಡುವದೋ, ಕೈಗಾರಿಕೆಗಳಿಗೆ ಬೇಕಾದ ಯಂತ್ರಸಾಹಿತ್ಯಗಳನ್ನು ಒದಗಿಸಿ ಕೊಡುವುದೋ ಇತ್ಯಾದಿ—ಶೋಧನೆಯನ್ನು ಕಮಿಶನಿನವರು ನಡಿಸುವರು.

ಕಮಿಶನ್ ಕಾರ್ಯಕ್ರಮಗಳ ವಿವರವು ಬಹಳ ಪ್ರೋತ್ಸಾಹಕರವಾಗಿ ತೋರುವದು. ಇದರ ಶೋಧನೆಯ ಫಲವು ಸಹ ಇಷ್ಟೇ ಸಂತೋಷಕರವಾಗಿ ಪರಿಣಮಿಸಲೆಂಬುದಾಗಿ ಕೋರುತ್ತೇವೆ.

ಸ್ವದೇಶದ ಬಣ್ಣಗಳು.

ಹಿಂದೂ ದೇಶದ ಸಸ್ಯವರ್ಗದಲ್ಲಿಯೂ ಖನಿಜ ವರ್ಗದಲ್ಲಿಯೂ ಬಣ್ಣದ ವಸ್ತುಗಳು ಹೇರಳವಾಗಿ ತುಂಬಿವೆ. ಪೂರ್ವದಲ್ಲಿ ನಮ್ಮ ದೇಶದವರು ಈ ಬಣ್ಣಗಳಿಂದಲೇ ನಾನಾ ವಿಧವಾದ ಮನೋಹರವಾದ ರಂಗುಗಳನ್ನು ಹಾಕುತ್ತಿದ್ದರು." ಆ ಕಾಲಕ್ಕೆ ನಮ್ಮ ದೇಶದಲ್ಲಿ ದೊರೆಯುವ ವಸ್ತುಗಳಿಂದ ಮಾಡುತ್ತಿದ್ದ ಬಣ್ಣಗಳೇ ಹೊರತು ಬೇರೆ ಯಾವವೂ ಇರಲಿಲ್ಲ. ಈಗಲಾದರೋ 'ಕಾಲವು ವಿಪರ್ಯಾಸವಾಗಿದೆ. ಜರ್ಮನಿಯವರು ಮಹತ್ತರವಾಗಿ ತಯಾರುಮಾಡುತ್ತಿರುವ ಕೋಲ್ ಟಾರ್ ಬಣ್ಣಗಳನ್ನು (Coal tar dyes) ಬಿಟ್ಟರೆ ಗತಿಯಿಲ್ಲ. (ಕೋಲ್ ಟಾರ್ ಬಣ್ಣಗಳೆಂದರೆ ಕೀಲೆಣ್ಣೆಗೆ ನಾನಾ ಸಂಸ್ಕಾರಗಳನ್ನು ಮಾಡಿ, ಆ ಮೂಲಕ ತಯಾರು ಮಾಡುವ ಬಣ್ಣಗಳು). "ಬಣ್ಣಗಳ ಅರಸ"ನೆಂದು ಪ್ರಖ್ಯಾತಿ ಹೊಂದಿದ್ದ ನೀಲಿಯು ಕೂಡ ಮೂಲೆಗೆ ಬಿದ್ದು ಹೋಯಿತು. ಇದಕ್ಕೆ ಕಾರಣವೇನು? ಬಣ್ಣ ಮಾಡುವ ಶಾಸ್ತ್ರವು ಈ ಮೂವತ್ತು ವರ್ಷಗಳಲ್ಲಿ ಸಂಪೂರ್ಣವಾಗಿ ಬದಲಾವಣೆ ಹೊಂದಿದೆ. ಪೂರ್ವಿಕರ ಅನುಭವದಿಂದ ಮಾಡುತ್ತಿದ್ದ ಈ ಕಸಬಿನ ಸ್ಥಾನದಲ್ಲಿ ರಸಾಯನ ಶಾಸ್ತ್ರವು ತಲೆದೋರಿ ಈ ಕಸಬಿಗೆ ಹೊಸ ರೂಪವನ್ನು ಕೊಟ್ಟಿದೆ.

ಆದಕಾರಣ ಸ್ವಭಾವಸಿದ್ಧವಾದ ಬಣ್ಣಗಳು ಮೂಲೆಗೆ ಬೀಳುವುದು ಆಶ್ಚರ್ಯವಲ್ಲ. ಕೋಲ್‌ಟಾರ್ ಬಣ್ಣಗಳಿಂದ ಎಷ್ಟು ಕೆಲಸವಾಗಬಹುದೋ ಅಷ್ಟು ಕೆಲಸವು ಸ್ವಭಾವಸಿದ್ಧವಾದ ಬಣ್ಣಗಳಿಂದ ಆಗಲಾರದೆಂದಲ್ಲ. ಆದರೆ ಸ್ವಭಾವಸಿದ್ಧವಾದ ಸಸ್ಯವರ್ಗದ ಬಣ್ಣಗಳ ವಿಚಾರದಲ್ಲಿ ನಮ್ಮವರು ತಕ್ಕಷ್ಟು ಕೃಷಿಮಾಡದೆ ಉದಾಸೀನ ಮಾಡುತ್ತ ಬಂದುದರಿಂದ, ಅವುಗಳ ಉಪಯೋಗವೂ, ಅವುಗಳನ್ನು ಹೊಸ ಹೊಸ ರೂಪದಲ್ಲಿ ಮಾಡುವ ವಿಧಾನಗಳೂ ತಿಳಿಯದೆ ಹೋಗುವುದಕ್ಕೆ ಕಾರಣವಾಯಿತು. ಸ್ವಭಾವಸಿದ್ಧವಾಗಿ ಸಸ್ಯಗಳಲ್ಲಾಗಲಿ ಖನಿಜಗಳಲ್ಲಾಗಲಿ ಬಣ್ಣದ ವಸ್ತುಗಳು ಶುದ್ಧ ರೂಪದಲ್ಲಿ ದೊರೆಯುವುದಿಲ್ಲ. ಅವುಗಳಲ್ಲಿ ಕಲ್ಮಷಗಳು ಬೆರೆತಿರುವುದರಿಂದ, ಯಾವ ರೂಪದಲ್ಲಿ ದೊರೆಯುವುದೋ ಆ ರೂಪದಲ್ಲಿಯೇ ಬಣ್ಣವನ್ನು ಉಪಯೋಗಿಸಿದರೆ, ಬಣ್ಣವು ಗಟ್ಟಿಯಾಗಿ ನಿಲ್ಲುವುದಿಲ್ಲ. ಅಲ್ಲದೆ ಬಣ್ಣಹಾಕಿದ ಪದಾರ್ಥಗಳು ಕೆಡುವುದೂ ಉಂಟು. ಕೆಲವು ಸಂದರ್ಭಗಳಲ್ಲಿ ಬಣ್ಣವು ಹಾಕುವಾಗಲೇ ಕಂದಿರುವುದಲ್ಲದೆ, ಸ್ವಲ್ಪಕಾಲದಲ್ಲಿಯೇ ಮತ್ತಷ್ಟು ಮಾಸಿ ಹೋಗುವುದೂ ಉಂಟು. ಆದಕಾರಣ ಸ್ವಭಾವಸಿದ್ಧವಾಗಿ ದೊರೆಯುವ ಬಣ್ಣದ ವಸ್ತುಗಳಲ್ಲಿ ಸೇರಿರುವ ಮಲಿನ ಪದಾರ್ಥಗಳನ್ನು ಪ್ರತ್ಯೇಕಿಸಿ, ಬಣ್ಣಗಳನ್ನು ಶುದ್ಧರೂಪದಲ್ಲಿ ತೆಗೆಯುವುದಕ್ಕೆ ತಕ್ಕ ವಿಧಾನವನ್ನು ಕಂಡುಹಿಡಿಯಬೇಕು. ಇದು ಸುಲಭವಾದ ಕೆಲಸವಲ್ಲ. ಏಕೆಂದರೆ, ಒಂದೊಂದು ಬಣ್ಣಕ್ಕೂ ಒಂದೊಂದು ವಿಧಾನವನ್ನು ಬೇರೆ ಬೇರೆಯಾಗಿ ಕಂಡುಹಿಡಿಯಬೇಕಾಗಿರುತ್ತದೆ.

ಬಣ್ಣವನ್ನು ಶುದ್ಧವಾಗಿ ತೆಗೆದ ಮೇಲೆ, ಅದನ್ನು ಯಾವ ಯಾವ ನಾರಿಗೆ ಅಥವಾ ಯಾವ ಯಾವ ನೂಲಿಗೆ ಯಾವ ಯಾವ ರೀತಿಯಿಂದ ಹಾಕಬೇಕು, ಅದಕ್ಕೆ ಯಾವ ಯಾವ ಎಲೆಕಾರಗಳನ್ನು (mordants) ಎಷ್ಟೆಷ್ಟು ಪ್ರಮಾಣದಿಂದ ಸೇರಿಸಬೇಕು, ಎಂಬ ಇವೇ ಮೊದಲಾದ ವಿಚಾರಗಳನ್ನು ಪರೀಕ್ಷಿಸಬೇಕು. ಎಲ್ಲಾ ವಿಧವಾದ ನಾರುಗಳಿಗೂ, ದಾರಗಳಿಗೂ ಅಥವಾ ಎಲ್ಲಾ ವಿಧವಾದ ನೂಲುಗಳಿಗೂ ಒಂದೇ ರೀತಿ ಬಣ್ಣಹಾಕುವುದಕ್ಕಾಗುವುದಿಲ್ಲ. ಅದದಕ್ಕೇ ಬೇರೆ ಬೇರೆ ಈ ವಿಷಯಗಳನ್ನು ಚೆನ್ನಾಗಿ ಪರಿಶೋಧಿಸಬೇಕು.

ಮೇಲೆ ಹೇಳಿದ ಎರಡು ವಿಷಯಗಳನ್ನೂ ಕುರಿತು ಯುದ್ಧವಾರಂಭವಾದ ದಿನದಿಂದೀಚೆಗೆ ಕಾನ್‌ಪುರದ ರಸಪ್ರಯೋಗಶಾಲೆಯಲ್ಲಿ (Laboratory) ಅನೇಕ ಪರಿಶೋಧನೆಗಳನ್ನು ನಡೆಯಿಸಿರುತ್ತಾರೆ. ಇದರಿಂದ ಸ್ವಭಾವಸಿದ್ಧವಾದ ಅನೇಕ ಬಣ್ಣದ ವಸ್ತುಗಳ ವಿಚಾರವು ಆಮೂಲಾಗ್ರವಾಗಿ ಹೊರಪಟ್ಟಿದೆ. ಸೀಮೆಯಿಂದ ಬರತಕ್ಕ ಕೃತಕ ಬಣ್ಣಗಳು (Synthetic dyes) ಕಡಿಮೆಯಾಗಿ ಹೋಗಿರುವ ಈ ಕಾಲದಲ್ಲಿ ನಮ್ಮ ದೇಶದ ನೆಯ್ಗೆಯವರೂ ಬಣ್ಣಹಾಕುವವರೂ ಸ್ವದೇಶದ ಸ್ವಭಾವಸಿದ್ಧವಾದ ಬಣ್ಣಗಳನ್ನು ಉಪಯೋಗಿಸುವ ವಿಚಾರದಲ್ಲಿ, ಅವರಿಗೆ ಎಷ್ಟೋ ಪ್ರಯೋಜನಕರವಾದ ವಿಷಯಗಳನ್ನು ತಿಳಿಸಿಕೊಟ್ಟಿದೆ. ಇಷ್ಟು ಕಾಲವೂ ಭಾವಿಸಿದ್ದಂತೆ ನಮ್ಮ ದೇಶದ ಬಣ್ಣಗಳು ನಿಷ್ಪ್ರಯೋಜನವಲ್ಲವೆಂಬ ಸಂಗತಿಯನ್ನು ಈಚೆಗೆ ಅವರು ಮನಗಂಡಿರುವರು. ಆದದಿಂದ ನಮ್ಮ ದೇಶದ ಬಣ್ಣಗಳು ಕಾಲಾನುಕಾಲದಲ್ಲಿ ಮತ್ತೆ ಚಿಗುರಿಕೊಳ್ಳಬಹುದೆಂಬ ಶುಭ ಸೂಚನೆಯುಂಟಾಗಿದೆ. ಅದೃಷ್ಟ ಚೆನ್ನಾಗಿದ್ದರೆ, ಬಣ್ಣಗಳಿಗಾಗಿ ನಾವು ಅನ್ಯದೇಶದವರ ಕೈಯನ್ನೇ ಕಾಯಬೇಕಾಗಿಲ್ಲವೆಂಬ ದಿನವು ಎಂದಾದರೂ ಒಂದು ದಿನ ಬಂದೇ ಬಂದೀತು. ಕೋಲ್‌ಟಾರ್ ಬಣ್ಣಗಳನ್ನೇ ಸಂಪೂರ್ಣವಾಗಿ ವರ್ಜಿಸಿ ಕೆಲಸ ಮಾಡಬೇಕೆಂದು ಇದರ ಅರ್ಥವಲ್ಲ. ಹಾಗೆ ಬಯಸುವುದೂ ತಪ್ಪು. ಆದರೆ ನಮ್ಮ ದೇಶದ ಸಸ್ಯವರ್ಗಗಳಲ್ಲಿ ದೊರೆಯುವ ಮಂಜಿಷ್ಠ, ಅರಸಿನ, ಸಪ್ಪಂಗ, ನೀಲಿ, ಹಳದಿ ಪಾವಟೆ, ಕಾಚು, ಜಾಲಾರಿ (ಅರಗು ಬಣ್ಣ) ಇವೇ ಮುಂತಾದ ಬಣ್ಣಗಳನ್ನು ಪರೀಕ್ಷಿಸಿಯುದ್ಧ ನಿಂತ ಮೇಲೆ ಕೂಡ ಅವುಗಳನ್ನು ಏತಕ್ಕೆ ಬಳಕೆಯಲ್ಲಿ ತರಕೂಡದು? ಕಾನ್‌ಪುರದ ರಸಪ್ರಯೋಗಶಾಲೆಯಲ್ಲಿ ಕೆಲವು ಬಣ್ಣಗಳನ್ನು ಪರೀಕ್ಷೆಮಾಡಿ ನೋಡಿದೆ. ಅವುಗಳಲ್ಲಿ ವಿಧ ವಿಧವಾದ ಬಣ್ಣಗಳ ಪರೀಕ್ಷೆ

ಯಾಗಿದೆ. ಕೆಲವನ್ನು ಈ ಕೆಳಗೆ ಕೊಟ್ಟಿದೆ. ಬಣ್ಣಗಳ ಅಭಾವದಿಂದ ನಮ್ಮಲ್ಲಿಯ ಕೆಲವು ದೊಡ್ಡ ದೊಡ್ಡ ನೆಯ್ಗೆಯ ಕಾರ್ಖಾನೆಯುವರು ತಮ್ಮ ಕೆಲಸವನ್ನು ನಿಲ್ಲಿಸಿಬಿಡಬೇಕೆಂದಿದ್ದ ಸಮಯದಲ್ಲಿ ಕಾನ್‌ಪುರದಲ್ಲಿರುವ ಸಂಯುಕ್ತ ಪ್ರಾಂತಗಳ ಕೈಗಾರಿಕೆಯ ಡೈರೆಕ್ಟರವರು ಬಣ್ಣಗಳ ವಿಚಾರದಲ್ಲಿ ಸಲಹೆ ಕೊಟ್ಟು ಮಾಡಿದ ಉಪಕಾರದಿಂದ ಆ ಕಾರ್ಖಾನೆಗಳು ಈಗ ಮತ್ತೆ ಚೇತರಿಸಿಕೊಳ್ಳುವ ಸ್ಥಿತಿಯಲ್ಲಿವೆ.

ಕೆಂಪು ಬಣ್ಣಗಳು.

ಮಂಜಿಷ್ಠ (ಇಷ್ಟ ಮಧುಕ), Manjith (Rubia Cordifolia)—ಅನ್ಯದೇಶದಿಂದ ಬರುವ "ಅಲಿಜರೀನ್" (alizarine) ಎಂಬ ಬಣ್ಣಕ್ಕೆ ಬದಲಾಗಿ, ಇದನ್ನು ಹತ್ತಿಯ ದಾರಕ್ಕೆ ಹಾಕಿದರೆ ಉತ್ಕೃಷ್ಟವಾದ ಕೆಂಪು ಛಾಯೆಯು ಇಳಿಯುತ್ತದೆ. ನಮಗೆ ದೊರೆತ ಮಂಜಿಷ್ಠದಲ್ಲಿ ಹಳದಿಯ ಬಣ್ಣವು ಸ್ವಲ್ಪಮಟ್ಟಿಗೆ ಬೆರೆತಿದ್ದುದರಿಂದ, ಅದನ್ನು ಬೇರೆ ತೆಗೆಯಲಾಗಿ, ನೀಲಛಾಯೆಯುಳ್ಳ ಕೆಂಪು ಬಣ್ಣವು ಉಂಟಾಯಿತು. ಮಂಜಿಷ್ಠವು ನಮ್ಮ ದೇಶದಲ್ಲಿ ಹೇರಳವಾಗಿ ದೊರೆಯುತ್ತದೆ.

ಪತಂಗ (ಸಪ್ಪಂಗ), Sappan (wood Cœsalpinia sappan—ಯಾವ ವಿಧವಾದ ದಾರದ ಮೇಲಾದರೂ ಈ ಬಣ್ಣವನ್ನು ಹಾಕಬಹುದು. ಇದರಿಂದ ಶ್ರೇಷ್ಠವಾದ ಕೆಂಪು ಛಾಯೆಯು ಇಳಿಯುತ್ತದೆ. ಈ ಪತಂಗ ಬಣ್ಣದ ಜೊತೆಗೆ ಅಲ್ಯೂಮಿನದ ಅಂಟು ರಸವನ್ನು (Alumina mordant) ಸೇರಿಸಲಾಗಿ ನಾನಾ ವಿಧವಾದ ಕೆಂಪು ಛಾಯೆಗಳು ಹೊರಟವು. ಇವು ಒಂದೊಂದೂ ರಮ್ಯವಾಗಿಯೂ ಝುಗಝುಗನೆ ಮಿರುಗುತ್ತಲೂ ಇವೆ.

ಹಳದಿ (ಮಡ್ಡೀಮರ), Al Morinda Citrifolia)—ಇದು ಒಂದು ಪ್ರಸಿದ್ಧವಾದ ಕೆಂಪು ಬಣ್ಣ. ಅಲ್ಯೂಮಿನದ ಅಂಟುರಸವನ್ನು ಇದರ ಜೊತೆಗೆ ಬೆರಸಲಾಗಿ ಪ್ರಜ್ವಲಿಸುವ ಕೆಂಪು ಬಣ್ಣಗಳು ಹೊರಟವೆ.

ಕುಸುಂಬೆ, Safflower (Carthamus Tinctorius)—ಇದರಿಂದ ಹತ್ತಿಯ ನೂಲಿಗೆ ಗುಲಾಬಿ ರಂಗನ್ನು ಏರಿಸಬಹುದು.

ರಕ್ತಚಂದನ, Red Sandalwood (Pterocarpus Santalinus)—ಇದು ಸಾಮಾನ್ಯವಾಗಿ ದಕ್ಷಿಣ ದೇಶದಲ್ಲಿ ಬೆಳೆಯುತ್ತದೆ. ಈ ಮರದ ಚಕ್ಕೆಯಿಂದ ಮಾಡಿದ ಕೆಂಪು ಬಣ್ಣಕ್ಕೆ ಬಹಳ ಬೆಲೆಯಾಗುತ್ತದೆ. ಅಲ್ಯೂಮಿನದ ಅಂಟುರಸದೊಡನೆ ಇದನ್ನು ಹತ್ತಿಯ ಬಟ್ಟೆಗೆ ಹಾಕಬಹುದು.

ಅರಳಿ (ಅಶ್ವತ್ಥ) Sacred Peepal—ಇದರ ಬೇರಿನಿಂದ ಮಾಸಿದ ಕೆಂಪು ಬಣ್ಣವನ್ನು ಮಾಡಬಹುದು.

ಅರಗು ಬಣ್ಣ (ಜಾಲಾರಿ) Lacdye—ಸುಪ್ರಸಿದ್ಧವಾದ ಈ ಬಣ್ಣವು ಸಂಯುಕ್ತ ಪ್ರಾಂತದ ಮಿರ್ಜಾಪೂರಿನಲ್ಲಿ ಯಥೇಷ್ಟವಾಗಿ ದೊರೆಯುವುದು. ಇದರಿಂದ ಉಣ್ಣೆಗೂ ರೇಷ್ಮೆಗೂ ಕೆಂಪು ಬಣ್ಣವನ್ನು ಹಾಕಬಹುದು.

ಹಳದಿಯ ಬಣ್ಣಗಳು.

ದಾಳಿಂಬೆ; ವಜ್ರದ ನೀಲಿಯಗಿಡ; ಆಡುಸೋಗೆ (Adhatoda vasica); ಹಲಸು—ಇವುಗಳಲ್ಲೆಲ್ಲ ಗಟ್ಟಿ ಹಳದಿಯ ಬಣ್ಣವು ಇದೆ. ಇವುಗಳಿಂದ ಬರುವ ಬಣ್ಣವನ್ನು ಯಾವ ದಾರಕ್ಕಾದರೂ ಹಾಕಬಹುದು. ಹತ್ತಿಯ ದಾರಕ್ಕೆ ಮಾತ್ರ ಅಲ್ಯೂಮಿನದ ಅಂಟುರಸವನ್ನಾಗಲಿ ತಗರದ ಅಂಟುರಸವನ್ನಾಗಲಿ ಸೇರಿಸಿಕೊಂಡು ಹಾಕಬೇಕು. ಸಾಧಾರಣವಾಗಿ ಇನ್ನೂ ಪರಿಶುದ್ಧವಾದ ಬಣ್ಣವು ಹೊರಡಬೇಕಾದರೆ ಬಣ್ಣ ಮಾಡುವ ನೀರಿಗೆ ಸ್ವಲ್ಪ ವಜ್ರವನ್ನಾಗಲಿ ಗೋಂದನ್ನಾಗಲಿ ಬೆರಸಿದರೆ, ಬಣ್ಣದಲ್ಲಿರುವ ಸ್ತಂಭಕವು (tannin) ಅಡಿಯಲ್ಲಿ ತಂಗುವುದಲ್ಲದೆ ಅದರ ಜೊತೆಯಲ್ಲಿ ಇತರ ಕಲ್ಮಷಗಳನ್ನೂ ಎಳೆದುಕೊಳ್ಳುತ್ತದೆ.

ಹೊನ್ನೆ (Mallotus Philippineniss)—ಇದು ರೇಷ್ಮೆಗೆ ಹಾಕುವುದಕ್ಕೆ ಯೋಗ್ಯವಾದ ಹಳದಿಯ ಬಣ್ಣ.

ಪಾರಿಜಾತದ ಮರ (Nyctanthes Arbortrists)—ಇದರಿಂದ ಬಹು ಪ್ರಕಾಶವಾದ ಹಳದಿಯ ಬಣ್ಣವು ಹೊರಡುತ್ತದೆ. ಅಲ್ಯೂಮಿನದ ಅಂಟುರಸದೊಡನೆ ಬಹಳ ಚೆನ್ನಾಗಿ ರಂಗು ಕಟ್ಟಬಹುದು.

ಅರಿಸಿನ; ಮುತ್ತುಗ; ನೊಗೆಮರ ಅಥವಾ ಬಿಳಿಯ ದೇವದಾರು—ಇವುಗಳಿಂದಲೂ ಕೆಲವು ಉಪಯುಕ್ತವಾದ ಹಳದಿಯ ಬಣ್ಣಗಳು ದೊರೆಯುತ್ತವೆ.

ನೀಲಿಯ ಬಣ್ಣ.

ಅನಾದಿಯಾಗಿರುವ ನೀಲಿಯ ಗಿಡವು ಈ ಬಣ್ಣಕ್ಕೆ ಸುಪ್ರಸಿದ್ಧವಾಗಿದೆ. ಇದರ ಉಪಯೋಗವು ಕಸಬುದಾರರನೇಕರಿಗೆ ತಿಳಿದಿದೆ.

ಕಂದು ಬಣ್ಣಗಳು.

ಕಾಚು (ಅಥವಾ ಕಗ್ಗಲಿಯ ಮರ); ಅಕ್ರೋಟು—ಮೊದಲನೆಯದು ಹತ್ತಿಗೂ, ಎರಡನೆಯದು ರೇಷ್ಮೆಗೂ ಬಣ್ಣ ಹಾಕುವುದಕ್ಕೆ ಬರುವುದು. ಇವೆರಡರಿಂದಲೂ ಉತ್ಕೃಷ್ಟವಾದ ಗಟ್ಟಿ ಕಳೆದು ಬಣ್ಣಗಳನ್ನು ಮಾಡಬಹುದು. ಇವೆರಡೂ ನಮ್ಮ ದೇಶದಲ್ಲಿ ಹೇರಳವಾಗಿ ದೊರೆಯುವುವು.

ಇಷ್ಟೇ ಅಲ್ಲದೆ, ಮೇಲೆ ಹೇಳಿದ ಬಣ್ಣಗಳನ್ನು ಒಂದಕ್ಕೊಂದು ಬೆರಸಿ ಅವವುಗಳಿಗೆ ತಕ್ಕ ಅಂಟುರಸಗಳನ್ನು (mordants) ಸೇರಿಸಿದರೆ, ಸಾಮಾನ್ಯವಾಗಿ ಯಾವ ಬಣ್ಣ ಬೇಕಾದರೂ ಆಗುವುದು. ಹೇಗೆಂದರೆ, ಕೆಂಪು ಬಣ್ಣಕ್ಕೆ ತಗರದ ಅಂಟುರಸವನ್ನು ಸೇರಿಸಿದರೆ ಅರುಣ ವರ್ಣವೂ, ಅಲ್ಯೂಮಿನದ ಅಂಟುರಸವನ್ನು ಸೇರಿಸಿದರೆ ಕುಂಕುಮವರ್ಣವೂ, ಕಬ್ಬಿಣದ ಅಂಟುರಸವನ್ನು ಸೇರಿಸಿದರೆ ಧೂಮ್ರ ಅಥವಾ ಮೇಘವರ್ಣವೂ, ಕ್ರೋಂ ಅಂಟುರಸವನ್ನು ಸೇರಿಸಿದರೆ ರಕ್ತನೀಲವರ್ಣವೂ ಉಂಟಾಗುವುವು.

ಹಳದಿ ಮತ್ತು ಕೆಂಪು ಬಣ್ಣಗಳನ್ನು ಸೇರಿಸಿದರೆ ಅರುಣವರ್ಣವೂ ಕಿತ್ತಳೆಯ ಬಣ್ಣವೂ, ಹಳದಿ ಮತ್ತು ನೀಲವರ್ಣಗಳನ್ನು ಸೇರಿಸಿದರೆ ಮೇಘವರ್ಣವೂ ಈ ಪ್ರಕಾರ ನಾನಾ ವಿಧವಾದ ಬಣ್ಣಗಳಾಗುವುವು.

ಯಾವ ಸ್ತಂಭಕ (tannin) ಅಥವಾ ಒಗರು ರಸಕ್ಕಾಗಲಿ ಅನ್ನಭೇದಿಯನ್ನು (Ferrous Sulphate) ಸೇರಿಸಿದರೆ ವಿಧವಿಧವಾದ ಕಪ್ಪು ಬಣ್ಣಗಳನ್ನೂ ಬೂದಿ ಬಣ್ಣಗಳನ್ನೂ ಮಾಡಬಹುದು. ಇದರ ಜೊತೆಗೆ ಅಪ್ಪಟವಾಗಿ ತೆಗೆದ ಅಚ್ಚನೀಲಿಯನ್ನು ಸೇರಿಸಿದರೆ, ಕಗ್ಗಪ್ಪು ಬಣ್ಣಗಳು ಉಂಟಾಗುವುವು.

(ಅರ್ಥಸಾಧಕ ಪತ್ರಿಕೆ).

ಹುಚ್ಚರು ಹೆಚ್ಚುವದರ ಕಾರಣವೇನು?

ಭೂಲೋಕದ ಸರ್ವ ಪ್ರಾಂತ್ಯಗಳಲ್ಲಿಯೂ ಹುಚ್ಚರ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಲಿದೆ. ಭೂಲೋಕದ ಇತರ ಪ್ರಾಂತ್ಯಗಳನ್ನು ಬಿಟ್ಟು ನಮಗೆ ಸಂಬಂಧಪಟ್ಟ ಇಂಗ್ಲಾಂಡ್ ಮತ್ತು ವೇಲ್ಸಿನ ಸಂಖ್ಯೆಯನ್ನು ನೋಡುವದಾದರೂ ಈ ಸಂಖ್ಯೆಯು ವರ್ಷಂಪ್ರತಿ ಹೆಚ್ಚುತ್ತಿದೆ ಎಂಬದು ಬ್ರಿಟಿಷ ಸರಕಾರದವರು ೧೯೧೫ನೇ ಇಸವಿಯಲ್ಲಿ ನೇಮಿಸಿದ ಕಮಿಷನಿನವರು ಗೊತ್ತುಹಚ್ಚಿದ ಸಂಖ್ಯೆಯಿಂದ ತಿಳಿದುಬರುತ್ತದೆ. ಇಂಗ್ಲಾಂಡ್ ವೇಲ್ಸಿನಲ್ಲಿ ೧೮೫೯ನೇ ಇಸವಿಯಲ್ಲಿ ೨೧,೧೫೮ ಮಂದಿ ಅಂದರೆ ಹತ್ತು ಸಾವಿರ ಮಂದಿಗೆ ೧೧.೮ರಂತೆ ಹುಚ್ಚರಿದ್ದರು. ೧೮೯೯ನೇ ಇಸವಿಯಲ್ಲಿ ಹುಚ್ಚರ ಸಂಖ್ಯೆಯು ೪೧,೧೯೪ ಮಂದಿ ಅಂದರೆ ಹತ್ತುಸಾವಿರಕ್ಕೆ ೨೦.೨ರಂತೆ ಹೆಚ್ಚಿತು. ಹೀಗೆ ಈ ಸಂಖ್ಯೆಯು ಅಧಿಕವಾಗುತ್ತಾ ಹೋಗಿ ೧೯೧೫ನೇ ಇಸವಿಯಲ್ಲಿ ಹುಚ್ಚರ ಸಂಖ್ಯೆಯು ೧೩೪,೦೦೦ವಾಯಿತು. ಅಂದರೆ ೧೦,೦೦೦ಕ್ಕೆ ೩೭.೧ರಂತೆ ಹುಚ್ಚರಾದರು. ಹೀಗೆ ೧೦ ವರ್ಷಗಳಿಗೊಮ್ಮೆ ತೆಗೆದ ಸಂಖ್ಯೆಯಿಂದ ಹುಚ್ಚರು ದಿನೇ ದಿನೇ ಹೆಚ್ಚುತ್ತಿದ್ದಾರೆಂಬದು ನಿರ್ವಿವಾದವು. ಇದಕ್ಕೆ ಕಾರಣವೇನು ಎಂಬದನ್ನು ವಿಚಾರಿಸುದ್ದಲ್ಲಿ ಬೇರೆ ಬೇರೆ ಉತ್ತರವು ದೊರಕುವದು. ಕೆಲವರು ಪಿತೃಪ್ರಾಪ್ತವಾದುದೆಂದೂ ಇನ್ನು ಕೆಲವರು ಈ ನವನಾಗರಿಕತೆಯ ಕಾಲದಲ್ಲಿ ಉಂಟಾಗಿರುವ ಜೀವನದ ಚಿಂತೆಯೇ ಇದಕ್ಕೆ ಕಾರಣವೆಂದೂ ವಿಧವಿಧವಾಗಿ ಹೇಳುವರು. ಆದರೆ ಡಾಕ್ಟರ್ ಎಲ್. ಎಸ್. ಫೊರ್ಬೆಸ್ ವಿನ್ಸ್‌ಲೋ ಎಂಬ ಪ್ರಖ್ಯಾತ ವೈದ್ಯರು ಈ ವಿಷಯದಲ್ಲಿ ಹೇಳಿರುವ ಅಭಿಪ್ರಾಯವೇ ಈ ನವಸುಧಾರಣೆಯ ಕಾಲದಲ್ಲಿ ಒಪ್ಪುವಂಥಾದ್ದಾಗಿದೆ. ಅವರು ಹೇಳುವದೇನೆಂದರೆ:—ನವಸುಧಾರಣೆಯ ಕಾಲದ ಜೀವನಮಾರ್ಗದ ಚಿಂತೆಯು ಈ ಭಯಂಕರವಾದ ಸ್ಥಿತಿಗೆ ಕಾರಣವಲ್ಲ; ದುರ್ಗುಣಗಳೇ ಕಾರಣ. ೧. ಮದ್ಯಪಾನಮಾಡುವದು, ೨. ಸಿಗರೇಟ್ ಬೀಡಿ ಸೇದುವದು, ೩. ಪಿತೃಪ್ರಾಪ್ತ—ಈ ಮೂರು ಕಾರಣಗಳಿಂದ ಹುಚ್ಚರ ಸಂಖ್ಯೆಯು ಹೆಚ್ಚುತ್ತಿದೆಂಬದು ಆ ಪ್ರಖ್ಯಾತ ವೈದ್ಯರ ಅನುಭವಸಿದ್ಧಾಂತ. ಮೂರನೇ ಕಾರಣಕ್ಕಿಂತ ೧ನೇ ೨ನೇ ಕಾರಣಗಳಿಂದ ಹುಚ್ಚರಾದವರು ಹೆಚ್ಚು ಮಂದಿ. ಮದ್ಯಪಾನ ಸಂಬಂಧವಾಗಿ ತಕ್ಕ ನಿಬಂಧನೆಗಳು ಆಗುವ ತನಕ ವ ಅದರ ಅಭ್ಯಾಸವು ಕಡಿಮೆಯಾಗುವ ತನಕ ರಾಷ್ಟ್ರೀಯವು ಕೇವಲ ಕನಿಷ್ಠಾವಸ್ಥೆಗೆ ಇಳಿಯುತ್ತಾ ಹೋಗುವದು ಎಂದು ಡಾಕ್ಟರ್ ವಿನ್ಸ್‌ಲೋರವರು ಕಂಠೋಕ್ತವಾಗಿ ಸಾರಿರುವರು. ಇವರ ಈ ಹೇಳಿಕೆಯನ್ನು ಪ್ರಪಂಚದ ಯಾವ

ಸಂಭಾವಿತನಾದರೂ "ಅಲ್ಲ" ಎಂದು ಹೇಳಲು ಸಾಧ್ಯವಿಲ್ಲ. ಯಾಕಂದರೆ ಸರ್ವಸಾಧಾರಣವಾಗಿ ಮದ್ಯಪಾನದಭ್ಯಾಸವೂ, ಬೀಡಿ ಸಿಗರೇಟು ಸೇದುವ ಅಭ್ಯಾಸವೂ ಮನುಷ್ಯರನ್ನು ಅರೆ ಭ್ರಾಂತರಾಗ ಮಾಡುತ್ತದೆಂಬದು ಎಲ್ಲರಿಗೂ ತಿಳಿದೇ ಇದೆ. ನಮ್ಮ ಹಿಂದೂಸ್ಥಾನವನ್ನು ನೋಡುವವಾದರೆ ಇಲ್ಲಿಯೂ ಮದ್ಯಪಾಯಿಗಳು ಹೆಚ್ಚುತ್ತಲಿದ್ದಾರೆ. ಬೀಡಿ ಸೇದುವವರೂ ಹೆಚ್ಚುತ್ತಿದ್ದಾರೆ. ಅಷ್ಟೇ ಅಲ್ಲ; ಇವರೊಟ್ಟಿಗೆ ಹುಚ್ಚರ ಸಂಖ್ಯೆಯೂ ಅಧಿಕವಾಗುತ್ತಿದೆ ಎಂಬದು ದೇಶಬಾಂಧವರಿಗೆ ಗೊತ್ತಿರುವ ಸಂಗತಿಯಾಗಿರುವದರಿಂದ ಡಾಕ್ಟರ್ ವಿನ್ಸ್ಲೋರವರ ಅಭಿಪ್ರಾಯವು ನಾವೂ ಒಪ್ಪತಕ್ಕದ್ದೇ ಆಗಿದೆ. ಹೀಗಿರುವಲ್ಲಿ ರಾಷ್ಟ್ರವನ್ನು, ರಾಷ್ಟ್ರದ ಜನರನ್ನು, ದೇಶದ ಏಳಿಗೆಯ ಬುನಾದಿ ಕಲ್ಲಿನಂತಿರುವ ಯುವಕರನ್ನು ಹಾಳುಮಾಡಿಬಿಡುವ ಈ ದುರಭ್ಯಾಸಗಳು ಕಡಿಮೆಯಾಗುವಂತೆ ಪ್ರಯತ್ನಿಸುವದು ಪ್ರತಿ ಒಬ್ಬ ಸುಶಿಕ್ಷಿತನ ಕರ್ತವ್ಯವೆಂದು ಬೇರೆ ಹೇಳಬೇಕೇ? ಪರಂತು, ಮದ್ಯಪಾನ, ಬೀಡಿ ಸಿಗರೇಟುಗಳ ಅಭ್ಯಾಸಗಳು ಈಗಲೀಗ ಸುಶಿಕ್ಷಿತರಿಗೆ ಅಂಟಲು ಪ್ರಾರಂಭವಾಗಿದೆಂಬ ನಾದವನ್ನು ಕೇಳುವದು ತುಂಬಾ ಶೋಚನೀಯವಾಗಿದೆ.

ಶಾಲಾ ಹಾಸಲು ಠೇವಣಾತಿಗಳು.

ಅಯ್ಯಾ,

ಪುತ್ತೂರು ಸಹಕಾರ ಸಂಘದಲ್ಲಿ ವಿದ್ಯಾರ್ಥಿಗಳಿಗೋಸ್ಕರ ಶಾಲಾ ಹಾಸಲು ಠೇವಣಾತಿಗಳು ಎಂಬ ಹೊಸ ವಿಧದ ಠೇವಣಾತಿಗಳನ್ನು ಏರ್ಪಡಿಸಿದ್ದಾರೆ. ೭ ಯಾ ೧೪ ವರ್ಷಗಳ ವರೆಗೆ ತಿಂಗಳು ೧೮ರ ಸಂಘಕ್ಕೆ ೧ ರೂಪಾಯಿ ಅಥವಾ ಅದರ ಸಮ ಅಪವರ್ತ್ಯವಾಗುವ ಒಂದು ನಿರಖು ಮೊಬಲಗನ್ನು ಪಾವತಿ ಮಾಡುವವನಿಗೆ ೫ನೇ ವರ್ಷದ ಆಖೈರ ನಂತರದಿಂದ ೭ ಯಾ ೧೪ ವರ್ಷಗಳಿಗೆ ಅನುಕ್ರಮವಾಗಿ ೧೫ನೇ ಯಾ ೧೮ನೇ ವರ್ಷದ ಆಖೈರು ವರೆಗೆ ಪ್ರತಿ ವರ್ಷದಲ್ಲಿಯೂ ಈ ಕೆಳಗೆ ಕಾಣಿಸಿದಷ್ಟು ಯಾ ಅವುಗಳಿಗೆ ತಾಳೆ ಬೀಳುವ ಅಪವರ್ತ್ಯಗಳಷ್ಟು ಮೊಬಲಗುಗಳು ಕೊಡೋಣಾಗುವವು.

೭, ೮, ೯ನೇ ವರ್ಷಗಳಲ್ಲಿ ಪ್ರತಿ ವರ್ಷಕ್ಕೆ ರೂ. ೫.
೯, ೧೦ನೇ ವರ್ಷಗಳಲ್ಲಿ ಪ್ರತಿ ವರ್ಷಕ್ಕೆ ರೂ. ೧೦.
೧೧, ೧೨, ೧೩ನೇ ವರ್ಷಗಳಲ್ಲಿ ಪ್ರತಿ ವರ್ಷಕ್ಕೆ ರೂ. ೨೨.
೧೪, ೧೫, ೧೬ನೇ ವರ್ಷಗಳಲ್ಲಿ ಪ್ರತಿ ವರ್ಷಕ್ಕೆ ರೂ. ೪೨.

ಮೇಲೆ ಹೇಳಿದಂತೆ ಠೇವಣಾತಿದಾರನಿಗೆ ವರ್ಷಂಪ್ರತಿ ಕೊಡೋಣಾಗುವ ಮೊಬಲಗುಗಳು ಸೆಕೆಂಡರಿ ಶಾಲೆಗಳಲ್ಲಿ ವಸೂಲು ಮಾಡುವರೆ ನಮೂದಿಸಿರುವ ಹಾಸಲುಗಳ ದರಗಳಿಗೆ ಸರಿಯಾಗಿರುವವು. ಆದ್ದರಿಂದ, ಒಬ್ಬನಿಗೆ ಒಂದು ಮಗು ಹುಟ್ಟಿದ ಕೂಡಲೇ ಈ ರೀತಿ ಮಾಸಂಪ್ರತಿ ಯಥಾನುಶಕ್ತಿ ಐವಜನ್ನು ಕಟ್ಟುತ್ತಾ ಬಂದರೆ, ಮಗುವಿನ ವಿದ್ಯಾಭಿವೃದ್ಧಿಗೆ ಉತ್ತರೋತ್ತರ ಅನುಕೂಲಪಡಿಸಿಕೊಳ್ಳಬಹುದು. ಸೆಕೆಂಡರಿ ಶಾಲೆಗಳು ಇರುವ ಎಲ್ಲಾ ಊರುಗಳಲ್ಲಿನ ಸಹಕಾರ ಸಂಘಗಳಲ್ಲಿ ಇಂಥಾ ಠೇವಣಾತಿಗಳ "ಬ್ಯಾಲೂ"ವನ್ನು ಏರ್ಪಡಿಸುವುದು ಬಹಳ ಒಳ್ಳೇದು, ತಪಸೀಲು ಬೇಕಾದರೆ ನಮಗೆ ಬರೆದು ತಿಳಕೊಳ್ಳಬಹುದು.

ಪುತ್ತೂರು ಸಹಕಾರ ಸಂಘ, ತಾ. 31-7-1916. ಬಿ. ಆನಂದರಾವ್, ಅಧ್ಯಕ್ಷ.

ಪತ್ರವ್ಯವಹಾರ.

ಪತ್ರಕರ್ತರೇ,

ಮುನ್ಸಿಪಾಲಿಟಿಯ ಉತ್ಪತ್ತಿಯಲ್ಲಿ ಸಾಧಾರಣ ಅರೆವಾಸಿಗಿಂತ ಹೆಚ್ಚು ಇಲ್ಲಿಯ ವೆನ್‌ಲೋಕ್ ಮತ್ತು ಹೆಂಗಸರ ಮತ್ತು ಮಕ್ಕಳ ಆಸ್ಪತ್ರೆಗಳಿಗೆ ಸಲ್ಲುತ್ತದೆ. ಆಸ್ಪತ್ರೆಗಳಲ್ಲಿ ಬಡವರೂ ದೊಡ್ಡವರೂ ಚಿಕಿತ್ಸೆ ಹೊಂದುತ್ತಾರೆ ಮತ್ತು ಔಷಧಗಳನ್ನು ಪಡೆಯುತ್ತಾರೆ. ಬಡವರಿಗೆ ಸಿಕ್ಕಬೇಕಾದ ಸಹಾಯವು ದೊಡ್ಡವರ ಬಗ್ಯೆ ನಿರಾಕರಿಸಿ ಹೋಗದಂತೆ ಇಂತಿಷ್ಟು ಉತ್ಪತ್ತಿಗಿಂತ ಹೆಚ್ಚು ಪಡೆಯುವವರು ಔಷಧಿ ಬಗ್ಯೆ ಕ್ರಯ ಕೊಡಬೇಕೆಂಬುವ ಕ್ರಮವಿರುವದು. ಇಂಥಾ ಕ್ರಮದಿಂದ ನಿಜವಾದ ಪ್ರಯೋಜನ ವಿದೆಯೋ ಎಂತ ಡಾಕ್ಟರ್ ಚೇಯರ್ಮೆನರು ನೋಡಿಕೊಳ್ಳುವದು ಅಗತ್ಯ. ಈ ಕ್ರಮದ ವಿಷಯವಾದರೋ ನನ್ನ ಅಭಿಪ್ರಾಯವು ಬೇರೆಯಾಗಿರುವದು. ಇದರಿಂದ ಬಡವರ ಬಾಯಿಗೆ ಅಡ್ಡ ಬರುವ ಸಂಭವಗಳು ಹೆಚ್ಚಿರುವವೆಂತ ನನಗೆ ತೋರುತ್ತದೆ. ಯಾಕಂದರೆ, ಔಷಧಿಗಳ ಕ್ರಯುವು ವಿಪರೀತವಾಗಿ ಹೆಚ್ಚಿರುವದು. ಆಸ್ಪತ್ರೆಯವರು ಸಂಪನ್ನ ರೋಗಿಗಳಿಂದ ಪಡೆಯುವ ಕ್ರಯವು ಬಹಳ ಅಲ್ಪ. ಅಂದರೆ ಔಷಧಿ ಮೌಲ್ಯಕ್ಕಿಂತ ಕಡಮೆ. ಇದಲ್ಲದೆ ಈ ಔಷಧಿಗಳಿಗೆ ಸರಿಯಾದ ಕ್ರಯವನ್ನು ಹಾಕತಕ್ಕ ಸಿಬಂದಿ ವಿಸಾರ್ಡು ಆಸ್ಪತ್ರೆಯಲ್ಲಿ ಇರದಾದ್ದರಿಂದ ಕ್ರಯಕ್ಕೆ ಔಷಧಿಗಳನ್ನು ಕೊಡುವದರಲ್ಲಿ ಬಹಳ ಗಲಿಬಿಲಿಯಾಗುವ ಸಂಭವಗಳುಂಟು. ಔಷಧಿ ಮಾರಿ ಸಿಕ್ಕುವ ಐವಜು ಸಹ ಬಹಳ ಸ್ವಲ್ಪವಾಗಿರುವದು. ಹೆಚ್ಚಾದರೆ ೧೦೦ ಯಾ ೨೦೦ ರೂಪಾಯಿಗಳಿಗೆ ಮಿಕ್ಕದಂತೆ ಕಾಣುತ್ತದೆ. ಮುನ್ಸಿಪಾಲಿಟಿಯವರು ಸಾಧಾರಣ ೨೦ ಸಾವಿರಗಳಿಗೆ ಮಿಕ್ಕಿದ ಐವಜನ್ನು ಆಸ್ಪತ್ರೆಗಳ ಬಗ್ಯೆ ಖರ್ಚುಮಾಡುವಾಗ ಈ ನೂರು ಯಾ ಇನ್ನೂರು ರೂಪಾಯಿಗಳನ್ನು ಪಡದು ಧರ್ಮಾಸ್ಪತ್ರೆ ಎಂಬ ಹೆಸರಿಗೆ ಕೊರತೆ ತರುವದು ನನ್ನಂಥವರಿಗೆ ಸರಿಕಾಣದು. ಅದಲ್ಲದೆ ದೊಡ್ಡವರು; ಇವರ ದಾಕ್ಷಿಣ್ಯ ಸರ್ವರಿಗೂ ಹೆಚ್ಚು. ಔಷಧಿಗಂತೂ ಕ್ರಯಕೊಡುತ್ತಾರೆ—ಎಂದ ಬಳಿಕ ಕ್ರಯ ಕೊಡಲಾರದ ಬಡವರಿಗೆ, ಇಂಥವರ ಎಡೆಯಲ್ಲಿ ಸರಿಯಾದ ಉಪಚಾರಗಳು ದೊರಕದೆ ಇರುವ ಸಂದರ್ಭಗಳು ಬಂದೊದಗಬಹುದು. ಆದ್ದರಿಂದ ಡಾಕ್ಟರರು ಇದನ್ನೆಲ್ಲ ಯೋಚಿಸಿಕೊಂಡು ಆಸ್ಪತ್ರೆಗಳಲ್ಲಿ ಔಷಧಿಗಳನ್ನು ಮಾರುವ ಏರ್ಪಾಡನ್ನು ತೆಗೆದು ಹಾಕಲು ಕೌನ್ಸಿಲಿನವರಿಗೆ ಸಿಫಾರಸು ಮಾಡಬಹುದು.

ಮತ್ತೊಂದು ಚಿಕ್ಕ ಮಾತು—ಡಾಕ್ಟರರ ಕೈಕೆಳಗಿನ ಸಿಬ್ಬಂದಿ. ವಾರ್ಡ ಕೂಲಿಯಿಂದ ದಾದಿಯರು, ದಾದಿಯರಿಂದ ಕಂಪೌಂಡರರುಗಳು, ಕಂಪೌಂಡರರಿಂದ ಡಾಕ್ಟರ ಶಿಬಾವಟದ ಸಿಬಂದಿ, ಗುಮಾಸ್ತರೋ, ಕ್ಲಾರ್ಕರೋ ಇತ್ಯಾದಿಗಳು—ಇವರೆಲ್ಲರು ಡಾಕ್ಟರರ ನೌಕರರು ಎಂಬೀ ವಿಷಯವು ಈ ಸಿಬಂದಿಯವರಿಗೆಲ್ಲವರಿಗೂ ತಿಳಿದಿದೆ. ಆದರೆ ಜನರ ಅನುಕೂಲತೆಗಾಗಿ ಈ ಸಿಬಂದಿಯು ಡಾಕ್ಟರರವರ ಬಗ್ಯೆ ಪ್ರಜೆಗಳು ಕೊಟ್ಟ ತೆರಿಗೆಗಳ ಹಣದಿಂದ ಇಡೋಣಾಗಿರುವದು. ತಾವು ಜನರ ನೌಕರರು ಎಂಬ ಭಾವವು ಈ ಸಿಬಂದಿಯಲ್ಲಿ ಕಾಣಬರುವ ಹಾಗೆ ಡಾಕ್ಟರರು ಮಾಡಿದರೆ ಮತ್ತಷ್ಟು ಉಪಕಾರವಾಗುವದು. ಸಿಟ್ಟು, ಅವಸರ, ನಿರ್ಲಕ್ಷ್ಯ, ನಿಷ್ಠುರತೆ, ನಿರ್ದಯೆ—ಇವು ಆಸ್ಪತ್ರೆಯ ವರಾರದಲ್ಲಿ ಇರತಕ್ಕಂಥವುಗಳಲ್ಲ. ರೋಗಿಗಳಿಗೆ ಶರೀರದಲ್ಲಿ ಮಾತ್ರವಲ್ಲ; ಚಿತ್ತದಲ್ಲಿ ಸಹ ಸ್ವಸ್ಥತೆ ಇರದು. ಇಂಥವರನ್ನು ಶುದ್ಧ ಹೃದಯದಿಂದಲೂ ಪ್ರೀತಿಭಾವದಿಂದಲೂ ಕಂಡರೆ ಔಷಧಿಗಳ ಮೂಲಕ ದೊರಿಯುವದಕ್ಕಿಂತ ಹೆಚ್ಚಾದ ಉಪಶಮನವು ರೋಗಿಗಳಿಗೆ ದೊರಿಯುವದು.

ಹೆಚ್ಚೇನು? ಮುನ್ಸಿಪಲ್ ಆಡಳಿತೆಯಲ್ಲಿ ವಿಶೇಷವಾಗಿರುವ ಎರಡು ಖಾತೆಗಳು ಆರೋಗ್ಯ ಮತ್ತು ಔಷಧ. ಇವುಗಳ ಮೇಲ್ವಿಚಾರ ಇರುವಂಥವರ ಕೈಯಲ್ಲಿ ಕೌನ್ಸಿಲಿನ ಕಾರ್ಯನಿರ್ವಾಹದ ಭಾರವೂ ಸೇರಿರುವದು. ಆದ್ದರಿಂದ ಈ ಎರಡು ಶಾಖೆಗಳ ಆಡಳಿತೆಯು ನಮ್ಮ ಡಾಕ್ಟರ ಚೇಯರ್ಮೆನರ ಮೇಲ್ವಿಚಾರದಲ್ಲಿ ಹ್ಯಾಗೆ ನಡಿಯುವದೆಂಬದನ್ನು ಬಹಳ ಆತುರದಿಂದ ಎದುರು ನೋಡುತ್ತಿರುವೆನು.

ಯಕ್ಷಗಾನಿ.

ಸ್ವಾಮಿ, ಪತ್ರಕರ್ತರೇ,

ಪ್ರೊಫೆಸ್ಸರ್ ಎಲ್. ಕೆ. ಶ್ಯಾಹಾರವರು ಇಲ್ಲಿಗೆ ಬಂದು ತಮ್ಮ ಆಶ್ಚರ್ಯಕರವಾದ ಪ್ರಯೋಗಗಳನ್ನು ಮಾಡಿ ಇಲ್ಲಿಯ ಜನರಿಗೆ ಆನಂದವನ್ನುಂಟುಮಾಡಿರುವರು. ಇವರು ಇಲ್ಲಿ 5—6 ನಾಟಕಗಳನ್ನು ಆಡಿ ತೋರಿಸಿದರು. ಇವರ ಅಸ್ತ್ರವಿದ್ಯೆಯೂ, ಶಬ್ದ ಭೇದತ್ವವೂ, ಮೆಸ್ಮರಿಜಮ್ (ಪ್ರತೀಕರಣ) ಮೊದಲಾದ ಹಲವು ಚಮತ್ಕೃತಿಗಳು ಇಲ್ಲಿಯವರಿಗೆ ತುಂಬಾ ವಿಸ್ಮಯವನ್ನುಂಟುಮಾಡಿರುವವು. ಇವರು ತಮ್ಮ ಕಡೇ ಆಟವನ್ನು ಆಡಿ ಅದರ ಉತ್ಪತ್ತಿಯನ್ನು ಇಲ್ಲಿಯ ಯೂನಿಯನ್ ಕ್ಲಬ್ಬಿನ ಫಂಡಿಗೆ ಕೊಟ್ಟಿರುತ್ತಾರೆ. ಪ್ರೊಫೆಸ್ಸರರವರ ಈ ಉದಾರತ್ವವು ಪ್ರಶಂಸನೀಯವೂ ಅನುಕರಣೀಯವೂ ಆಗಿರುವದು. ಊರೂರು ತಿರುಗಿ ಪರಿಶ್ರಮದಿಂದ ಸಂಪಾದಿಸುವ ಸಂಪತ್ತನ್ನು ಈ ರೀತಿ ಸದ್ವಿನಿಯೋಗಕ್ಕೆ ವೆಚ್ಚಮಾಡುವ ಪ್ರೊಫೆಸ್ಸರಂಥವರೇ ನಿಜವಾದ ಸಂಪನ್ನರು—ಅಂದರೆ ಸಂಪತ್ತಿನ ಅಧಿಕಾರಿಗಳು ವಿನಹ ಒಂದು ಚಿಕ್ಕಾಸಾದರೂ ಸದ್ವಿನಿಯೋಗಕ್ಕೆ ವೆಚ್ಚಮಾಡದೆ ತಮ್ಮಿಂದ ಸಂಪಾದಿಸಲ್ಪಡುವ ಧನದ ರಾಶಿಯನ್ನು ಮಹಾಶೇಷನಂತೆ ಕಾಯುವ ಕೃಪಣ ಧನಾಢ್ಯರು ಸಂಪತ್ತಿನ ಅಧಿಕಾರಿಗಳಲ್ಲ—ಇಂಥವರು ಸಂಪತ್ತಿನ ಗುಲಾಮರು ಎಂದು ಹೇಳಬಹುದು. ಪ್ರೊಫೆಸ್ಸರರವರಿಗೆ ಇಲ್ಲಿಯ ಕ್ಲಬ್ಬಿನ ಕಡೆಯಿಂದ ಒಂದು ಭಂಗಾರದ ಬಹುಮಾನ ಪದಕವು ಕಡೇ ಆಟದ ದಿನ ಹೊಸಂಗಡಿ ಅರಮನೆಯ ರಾ| ಚನ್ನರಾಯ ಸಾವಂತರ ಕೈಯಿಂದ ಕೊಡಿಸೋಣಾಯಿತು. ಮರುದಿನ ಒಂದು ಟೀ ಪಾರ್ಟಿಯು ಕ್ಲಬ್ಬಿನವರಿಂದ ಕೊಡಲ್ಪಟ್ಟಿತು. ಸ್ವಾಮಿ, ಈ ಪತ್ರವನ್ನು ಮುಗಿಸಬೇಕಾದರೆ ಇನ್ನೊಂದು ಸಂಗತಿಯನ್ನು ಉಲ್ಲೇಖಿಸಬೇಕಾಗಿದೆ ಅದೇನಂದರೆ—ಕ್ಲಬ್ಬಿನ ಫಂಡಿನ ಸಹಾಯಾರ್ಥವಾಗಿ ಆಡಿತೋರಿಸಿದ ನಾಟಕದ ಟಿಕೇಟುಗಳು ಹೆಚ್ಚಾಗಿ ಮಾರಿಹೋಗುವಂತೆ ಕ್ಲಬ್ಬಿನ ಮೆಂಬರರಲ್ಲಿ ಹಲವರು ಬಹಳ ಪ್ರಯತ್ನಿಸಿರುವರು. ನಮ್ಮ ಯುವಕ ಸಮುದಾಯದಲ್ಲಿ ರಾ| ಕಾಸರ್ಗೋಡ ವಿಶ್ವೇಶ್ವರರಾವ್ ಮತ್ತು ರಾ| ಪುಂಡಲೀಕ ರಾಮಕಮ್ತಿ ಮೊದಲಾದ ಹಲವರು ಈ ವಿಷಯ ಪಡಕೊಂಡ ಪರಿಶ್ರಮವು ಇಲ್ಲಿ ಉಲ್ಲೇಖಿಸದಿರಲು ಸಾಧ್ಯವಿಲ್ಲ. ನಮ್ಮ ಯುವಕ ಸಮುದಾಯದಲ್ಲಿ ಈ ರೀತಿ ಸ್ವಾವಲಂಬನವೂ, ಸಾರ್ವಜನಿಕ ಕೆಲಸಗಳ ಸ್ವಯಂ ಸೇವಕತ್ವದಲ್ಲಿ ಉತ್ಸಾಹವೂ, ತಲೆದೋರಿರುವಂಥಾದ್ದು ನಮ್ಮ ಊರಿನ ಭಾಗ್ಯೋದಯದ ಶುಭಚಿನ್ಹೆಯೆಂತಲೇ ತಿಳಕೊಳ್ಳಬೇಕು. ಅಸ್ತು ಶ್ರೀ ದೇವರು ನಮ್ಮ ಯುವಕ ಸಮುದಾಯದಲ್ಲಿ ಇಂಥಾ ಭಾವನೆಗಳನ್ನು ಅಭಿವೃದ್ಧಿ ಪಡಿಸಲಿ.

ಮುಲ್ಕಿ, ತಾ. 30-7-1917. ಕ್ಲಬ್ಬಿನ ಮೆಂಬರರಲ್ಲೊಬ್ಬ.

ಯೂರೋಪದ ಮಹಾಯುದ್ಧ.

ಪೂರ್ವ ರಣರಂಗದಲ್ಲಿ ವಿಶೇಷ ಮಾರ್ಪಾಟಗಳಾಗಿರುವದರಿಂದ ಆ ರಣರಂಗದ ಸ್ಥಿತಿಗತಿಯು ಮಹತ್ವದ್ದಾಗಿರುವದು. ಆಸ್ಟ್ರೋ-ಜರ್ಮನರ ದಕ್ಷಿಣ ಪ್ರಾಂತ್ಯದ ಸೇನೆಯು ಲೆಂಬರ್ಗನ್ನು ತಮ್ಮ ಪ್ರಾಮುಖ್ಯ ಸ್ಥಾನವನ್ನಾಗಿ ಮಾಡಿಕೊಂಡಿರುವದು ಸರಿಯಷ್ಟೆ. ಆದರೆ ಈ ಲೆಂಬರ್ಗು ಈಗ ಬೆಕ್ಕಿನ ತಲೆಯಮೇಲಿನ ದೀಪದಂತಿದೆ. ರುಶ್ಯನರು ಹೀಗೆಯೇ ಮುಂದಕ್ಕೆ ಒತ್ತುತ್ತಾ ಬಂದರೆ ಬಹುಬೇಗನೇ ಲೆಂಬರ್ಗಿನಲ್ಲಿರುವ ಆಸ್ಟ್ರೋ—ಜರ್ಮನ ಸೇನಿಕರು ಲೆಂಬರ್ಗನ್ನು ಬಿಟ್ಟು ಹಿಂದೆ ಸರಿಯದೆ ಉಪಾಯವಿಲ್ಲ. ಅಷ್ಟೇ ಅಲ್ಲ; ಈ ರಣರಂಗದ ಬಹಳ ವಿಸ್ತಾರವಾದ ನೆಲೆಯ ಎರಡು ಪಕ್ಕಗಳಲ್ಲಿಯೂ ರುಶ್ಯನರು ವಿಶೇಷ ಚಟುವಟಿಕೆಯನ್ನು ತೋರಿಸಿ, ರಿಗ್ಗಾ ರಣರಂಗದಲ್ಲಿ ನುಗ್ಗಿಹೋಗಿ ಮುಂದರಿಯುತ್ತಲಿದ್ದಾರೆ. ಮತ್ತೊಂದು ಕಡೆಯಲ್ಲಿ ಹಂಗೇರಿಯ ಸರಹದ್ದನ್ನು ದಾಟುತ್ತಲಿದ್ದಾರೆ. ಒಟ್ಟಾರೆಯಾಗಿ ಹೇಳಬೇಕಾದರೆ ಮಧ್ಯದಲ್ಲಿ ಅಂದರೆ ಲೆಂಬರ್ಗಿನಲ್ಲಿರುವ ಆಸ್ಟ್ರಿಯನರ ಸ್ಥಿತಿಯು ಈಗ ಆಪತ್ತಿನಲ್ಲಿದೆ.

ಪಶ್ಚಿಮ ರಣರಂಗದಲ್ಲಿ.

ಈ ರಣರಂಗದಲ್ಲಿಯೂ ಬ್ರಿಟಿಷರು ಶತ್ರುಗಳಿಗೆ ಬಿಟ್ಟುಕೊಡುವಹಾಗೆ ತೋರುವದಿಲ್ಲ. ಪೋಜಿಯರ್ಸ್ಸಿನಲ್ಲಿ ಹೆಚ್ಚಿನ ಅಂಶವು ಬ್ರಿಟಿಷರ ಸ್ವಾಧೀನವಾಗಿದೆ. ಜರ್ಮನರು ಅತಿ ರೋಷಾವೇಶದಿಂದ ಬ್ರಿಟಿಷರ ನೆಲೆಗಳಮೇಲೆ ಬಿದ್ದರೂ ಬ್ರಿಟಿಷರು ಪೋಜಿಯರ್ಸ್ಸಿನ ಉತ್ತರದಲ್ಲಿ ಪುನಃ ಕೆಲವು ಭಾಗಗಳನ್ನು ಆಕ್ರಮಿಸಿಕೊಂಡಿರುತ್ತಾರೆ. ಸೊಮ್ಮೆ ರಣರಂಗಕ್ಕೆ ಶತ್ರುಗಳು ಪುನಃ ಹೆಚ್ಚಿಗೆ ಕಾಲಾಳು ಸೇನಿಕರನ್ನೂ ಫಿರಂಗಿಗಳನ್ನೂ ಕಳುಹಿಸಿಕೊಟ್ಟಿರುವರು... ಶತ್ರುಗಳ ತೋಪುಗಳು ಭೀಕರ ಸ್ವರೂಪದಿಂದ ಸಿಂಹ ಗರ್ಜನೆಯನ್ನು ಮಾಡುತ್ತಲಿವೆ. ಹೀಗೆ ತೋಪುಗಳನ್ನು ಎಡೆಬಿಡದೆ ಹಾರಿಸಿ ಶತ್ರುಗಳ ಕಾಲಾಳು ಸೇನಿಕರು ಮುಂದರಿಯ ಪ್ರಯತ್ನಿಸಿದರು. ಆದರೆ ಬ್ರಿಟಿಷರ ಯಾವ ಕಂದಕಗಳ ಸಾಲಿಗೂ ಅವರಿಂದ ಸಮೀಪಿಸಲಿಕ್ಕಾಗಲಿಲ್ಲ. ಶತ್ರುಗಳ ಪ್ರಾಣಾಪಾಯವು ವಿಶೇಷವಾಗಿರಬಹುದು. ಈ ನೆಲೆಯ ಇತರ ಕಡೆಗಳಲ್ಲಿ ಕೈದುಡುಕಿನ ಕಾಳಗವು ನಡೆದು ಬ್ರಿಟಿಷರ ಕಾಲಾಳು ಸೇನಿಕರು ಮುಂದೆ ಒತ್ತಿರುವರು. ಪೋಜಿಯರ್ಸ್ಸಿನ ಎಲ್ಲಾ ಭಾಗವು ಈಗ ಬ್ರಿಟಿಷರದ್ದಾಗಿದೆ. ದಿನವೆಲ್ಲಾ ಕೈದುಡುಕಿನ ಕಾಳಗವು ಅತಿ ರೋಷಾವೇಶದಿಂದ ನಡೆದಿರುವದು. ಪೋಜಿಯರ್ಸ್ ಗ್ರಾಮದ ಪಶ್ಚಿಮದಲ್ಲಿ ಬ್ರಿಟಿಷರು ಮುಂದಕ್ಕೆ ನುಗ್ಗಿಹೋಗಿ ೨ ಕಂದಕಗಳನ್ನು ಪಡೆದಿರುತ್ತಾರೆ.

ಪೋಜಿಯರ್ಸ್ ಒಂದು ಸಣ್ಣ ಪ್ರಸ್ಥಭೂಮಿಯ ಶಿಖರದಲ್ಲಿರುವ ಗ್ರಾಮ. ಇಲ್ಲಿ ಜರ್ಮನರು ತೋಪುಗಳನ್ನು ಹೂಡಿ ಬ್ರಿಟಿಷರ ಮೇಲೆ ಘೋರ ಗರ್ಜನೆಯನ್ನು ಮಾಡುತ್ತಿದ್ದರು. ಇಷ್ಟರವರೆಗೆ ಬ್ರಿಟಿಷರು ಮತ್ತು ಫ್ರೆಂಚರು ಶತ್ರುಗಳ ೨೬,೨೩೪ ಸೇನಿಕರನ್ನೂ ೧೪೦ ಫಿರಂಗಿಗಳನ್ನೂ ಇನ್ನು ಅತಿರೇಕ ಕೊಳ್ಳೆಯನ್ನೂ ಹಿಡಿದಿರುತ್ತಾರೆ. ಪೋಜಿಯರ್ಸ್ಸಿನಲ್ಲಿ ಅತಿ ಕ್ರೂರತನದ ಕದನವು ನಡೆದಿರುತ್ತದೆ. ಜರ್ಮನರು ಕೂಡಾ ಕಠಿಣವಾಗಿಯೂ ಶೂರತನದಿಂದಲೂ ಕಾದಾಡಿರುವರು. ರೈಫಲ್ ಕೋವಿಗಳು ಇಲ್ಲಿ ಪ್ರಯೋಗಿಸಲ್ಪಡಲಿಲ್ಲ. ಛೂರಿಗಳಿಂದ, ಸನೀನುಗಳಿಂದ ಒಬ್ಬರೊಬ್ಬರನ್ನು ತಿವಿದುಕೊಂಡರು. ಬ್ರಿಟಿಷ ಕಡೆಯ ಆಸ್ಟ್ರೇಲಿಯನ ಸೇನಿಕರು ಸನೀನುಗಳಿಂದ ಜರ್ಮನರ ಒಂದು ಸೇನಾಪಾಳೆಯವನ್ನೇ ನಾಶಿಸಿಬಿಟ್ಟರು. ಬ್ರಿಟಿಷರ ತೋಪುಗಳು ಶತ್ರುಗಳಲ್ಲಿ ವಿಶೇಷ ನಷ್ಟವನ್ನುಂಟುಮಾಡಿರುವದು.

ಪೋಜಿಯರ್ಸ್ಸಿನ ಉತ್ತರದಲ್ಲಿ ಮತ್ತು ಬೆಜೆಂಟಿನ್-ಲೆ-ಪೆಟಿಟನಲ್ಲಿ ಬ್ರಿಟಿಷರು ಶತ್ರುಗಳ ಪ್ರಾಮುಖ್ಯವಾದ ಕಂದಕಗಳನ್ನು ಹಿಡಿದಿರುತ್ತಾರೆ. ಬಲಕಡೆಯಲ್ಲಿ ಬ್ರಿಟಿಷರು ಶತ್ರುಗಳನ್ನು ಡೆಲ್‌ವಿಲ್ಲೆ ಅಡವಿಯ ಪಶ್ಚಿಮದಿಂದ ಓಡಿಸಿರುತ್ತಾರೆ. ಲೊಂಗೆವಿಲ್ಲೆ ಉತ್ತರ ಭಾಗವು ಬ್ರಿಟಿಷರ ಸ್ವಾಧೀನವಾಗಿದೆ. ಪೋಜಿಯರ್ಸ್ಸಿನಲ್ಲಿಯೂ ಲೊಂಗ್‌ವಿಲ್ಲೆ ಮತ್ತು ಡೆಲ್‌ವಿಲ್ಲೆಯ ಆಜುಬಾಜಿನಲ್ಲಿ ಕಠಿಣ ತೋಪು ಕಾಳಗವು ನಡೆದಿರುತ್ತದೆ. ಬ್ರಿಟಿಷರು ಜರ್ಮನರನ್ನು ಎಲ್ಲಾ ಕಡೆಯಲ್ಲಿಯೂ ತಡೆದಿರುತ್ತಾರೆ. ಕಡೆಗೆ ಬಂದ ವಾರ್ತೆಯಿಂದ ಡೆಲ್‌ವಿಲ್ಲೆ ಅರಣ್ಯವೆಲ್ಲವೂ ಬ್ರಿಟಿಷರ ಸ್ವಾಧೀನವಾಗಿ ಹೋಗಿಯದೆಂತ ತಿಳಿದುಬರುತ್ತದೆ. ಬ್ರಿಟಿಷರು ಜುಲಾಯಿ ತಾ. ೧೪ರಿಂದ ಸೊಮ್ಮೆಯಲ್ಲಿ ೨೪ ಚಚೌಕ ಮೈಲು ವಿಸ್ತೀರ್ಣದ ಪ್ರಾಂತ್ಯಗಳನ್ನು ಗೆದ್ದುಕೊಂಡು ಅವನ್ನು ತಮ್ಮ ಹತೋಟಿಯಲ್ಲಿಟ್ಟುಕೊಂಡಿರುವರು.

ಇನ್ನು ಫ್ರಾನ್ಸ್ ರಂಗದ ಕಡೆಗೆ ದೃಷ್ಟಿಸುವದಾದರೆ ಅಲ್ಲಿಯೂ ಫ್ರೆಂಚರಿಗೆ ದಿನೇ ದಿನೇ ಜಯವಾಗುತ್ತಲಿದೆಂಬ ವಾರ್ತೆ ಕೇಳಸಿಕ್ಕುತ್ತಿದೆ. ಸೊಮ್ಮೆಯಲ್ಲಿ ಫ್ರೆಂಚರು ಜುಲಾಯಿ ತಾ. ೨೦ರ ನಂತರ ಶತ್ರುಗಳ ೬೦ ಯಂತ್ರಚಾಲಿತ ಫಿರಂಗಿಗಳನ್ನು ಸೆರೆಹಿಡಿದಿರುತ್ತಾರೆ. ಥಿಯಾಮೊಂಟನಲ್ಲಿ ೫ ಯಂತ್ರಚಾಲಿತ ಫಿರಂಗಿಗಳೂ ೪೦ ಸೇನಿಕರೂ ಫ್ರೆಂಚರಿಗೆ ಸೆರೆಬಿದ್ದಿರುತ್ತಾರೆ. ದಿನ್ನೆ ೩೦೪ರ ಬಳಿ ಕಠಿಣ ತೋಪುಕಾಳಗವು ನಡಿಯುತ್ತಿದೆ. ಥಿಯಾಮೊಂಟಿನ ಪಶ್ಚಿಮದಲ್ಲಿ ಫ್ರೆಂಚರು ಮುಂದೆ ಸಾಗಿರುತ್ತಾರೆ. ಫ್ರೆಂಚರು ಜರ್ಮನರ ೨ ವಾಯುನಾವೆಗಳನ್ನು ಸೊಮ್ಮೆಯಲ್ಲಿಯೂ ಒಂದು ವಾಯುನಾವೆಯನ್ನು ವೆರ್ಡನಿನಲ್ಲಿಯೂ ಕೆಳಗೆದೊಬ್ಬಿ ಪೊಸಜೆಸಿನಲ್ಲಿ ಜರ್ಮನರ ಒಂದು ನಾವೆಯನ್ನು ನಾಶಮಾಡಿರುತ್ತಾರೆ. ಫ್ರೆಂಚರ ವಾಯುನಾವೆಗಳು ಜರ್ಮನರ ಇತರ ಕೆಲವು ಪಾಳೆಯಗಳಿಗೂ ಬೊಂಬುಗಳನ್ನು ಎಸೆದು ಸುರಕ್ಷಿತವಾಗಿ ಹಿಂದಿರುಗುತ್ತವೆ.

ಪೂರ್ವ ರಣರಂಗ.

ಸ್ಟೈರ್ ನದಿಯ ಬಲದತದಲ್ಲಿ ರುಶ್ಯನರ ಜನರಲ್ ಸಕರೊಫೆಯವರು ೪೦೦೦ ಶತ್ರುಸೇನಿಕರನ್ನು ಸೆರೆಹಿಡಿದಿರುತ್ತಾರೆ. ಗೆಲೀಶಿಯ ಮತ್ತು ಬ್ರೋಡಿಗೆ ೧೦ ಮೈಲುಗಳ ಉತ್ತರದಲ್ಲಿ ಕಾಳಗವು ನಡಿಯುತ್ತಿದೆ. ಕೆವ್ಕಾರ್ ಡಿಸ್ಟ್ರಿಕ್ಟಿನಲ್ಲಿ ನುಗ್ಗಿಬಂದ ಜರ್ಮನರು ವಿಶೇಷ ನಷ್ಟಪಟ್ಟು ಎರಡು ಕಡೆಯಲ್ಲಿ ಹಿಂದೆ ಓಡಿರುತ್ತಾರೆ. ರುಶ್ಯನರು ಸ್ಲೊನಿಯೊವ್ಕ ನದಿಯನ್ನು ದಾಟಿ ಶತ್ರುಗಳನ್ನು ಹಿಂದಟ್ಟುತ್ತಿದ್ದಾರೆ. ಶತ್ರುಗಳ ೫ ಫಿರಂಗಿಗಳೂ ೬ ಯಂತ್ರಚಾಲಿತ ಫಿರಂಗಿಗಳೂ ರುಶ್ಯನರ ಕೈಸೇರಿವೆ. ರುಶ್ಯನರು ಬ್ರೋಡಿಗೆ ಹತ್ತರ ಸೇರುವದರಿಂದ ಲೆಂಬರ್ಗಿನಲ್ಲಿರುವ ಆಸ್ಟ್ರಿಯನರ ಸೇನೆಗೆ ಹೆದರಿಕೆ ತಾಗಿದೆ. ರುಶ್ಯನರ ಜನರಲ್ ಶಕರೊಫೆಯವರು ಜುಲಾಯಿ ತಾ. ೧೬-೨೫ರಲ್ಲಿ ನಡೆದ ಕದನಗಳಲ್ಲಿ ೩೪೦೦೦ ಆಸ್ಟ್ರಿಯ ಮತ್ತು ಜರ್ಮನ ಸೇನಿಕರನ್ನೂ ೪೫ ಫಿರಂಗಿಗಳನ್ನೂ ೭೧ ಯಂತ್ರಚಾಲಿತ ಫಿರಂಗಿಗಳನ್ನೂ ಸೆರೆಹಿಡಿದಿರುತ್ತಾರೆ.

ಕಡೆಗೆ ಬಂದ ವಾರ್ತೆಯಿಂದ ರುಶ್ಯನರು ಬ್ರೋಡಿಯನ್ನು ಸ್ವಾಧೀನಮಾಡಿಕೊಂಡರೆಂತಲೂ ಬುಕ್ಲಿನ ಪಶ್ಚಿಮದಲ್ಲಿದ್ದ ಶತ್ರುಗಳ ಸೇನಾನೆಲೆಯನ್ನು ಮುರಿದರೆಂತಲೂ ತಿಳಿಯಬರುತ್ತದೆ. ರುಶ್ಯನರು ಈ ಕದನದಲ್ಲಿ ೩೬೦೦೦ ಆಸ್ಟ್ರಿಯನರನ್ನೂ ಜರ್ಮನರನ್ನೂ ೧೧೪ ಫಿರಂಗಿಗಳನ್ನೂ ಸೆರೆಹಿಡಿದಿರುತ್ತಾರೆ. ರುಶ್ಯನರು ಸ್ಟೊಕೊಡ್ ನದಿಯ ಪಶ್ಚಿಮದಲ್ಲಿ ತಮ್ಮ ನೆಲೆಗಳನ್ನು ಬಲಕಾಯಿಸಿಕೊಂಡು ಕೊವೆಲ್-ಬ್ರೋಡಿಯ ನೆಲೆಯಲ್ಲಿ ಮುಂದರಿಯುತ್ತಲಿದ್ದಾರೆ. ನೀಸ್ಟರಿನ ದಕ್ಷಿಣದಲ್ಲಿಯೂ ರುಶ್ಯನರು ಜಯಪ್ರದರಾಗಿರುವರು. ಶತ್ರುಗಳು ಪ್ರತಿಕಡೆಯಲ್ಲಿಯೂ ಹಿಂದೆ ಸರಿಯುತ್ತಿದ್ದಾರೆ. ಈ ಎಲ್ಲಾ ವರ್ತಮಾನಗಳಿಂದ ರುಶ್ಯನರು ಕಳೆದವರ್ಷ ಕಳಕೊಂಡ ಎಲ್ಲಾ ಪ್ರಾಂತ್ಯಗಳನ್ನು ಇನ್ನು ಕೆಲವು ಕಾಲದಲ್ಲಿಯೇ ಜರ್ಮನರಿಂದ ಕಸಕೊಂಡು ಸದ್ಯದಲ್ಲಿ ಜರ್ಮನರ ಸರಹದ್ದಿಗೆ ಮುಟ್ಟತಕ್ಕವರಿದ್ದಾರೆಂತ ಭಾವಿಸಬೇಕಾಗುತ್ತದೆ.

ರಿಗ್ಗಾ ರಣರಂಗದಲ್ಲಿಯೂ ರುಶ್ಯನರು ಶತ್ರುಗಳನ್ನು ಕಠಿಣವಾಗಿ ಸೋಲಿಸಿರುವರು. ತಾ. ೧೬ರಲ್ಲಿ ರುಶ್ಯನರು ಜರ್ಮನರ ಮೊದಲನೇ ಸೇನಾಸಾಲನ್ನು ಸಮುದ್ರದಿಂದ ಒಳಪ್ರಾಂತ್ಯದಲ್ಲಿ ೧೦ ಮೈಲುಗಳವರೆಗೆ ಸ್ವಾಧೀನಮಾಡಿಕೊಂಡಿರುತ್ತಾರೆ. ಮತ್ತೊಂದು ಕಡೆಯಲ್ಲಿ ರುಶ್ಯನರು ಶತ್ರುಗಳ ಮೂರನೇ ಸೇನಾಸಾಲಿನವರೆಗೆ ತಲಪಿರುವರು.

ಇಟಲಿ ರಣರಂಗ.

ಈ ರಣರಂಗದಿಂದ ವಿಶೇಷ ವರ್ತಮಾನಗಳು ಬಂದಿರುವದಿಲ್ಲವಾದರೂ ನಡೆಯುತ್ತಿರುವ ಕದನಗಳೆಲ್ಲವೂ ಇಟಲಿಯನರಿಗೆ ಅನುಕೂಲವಾಗಿಯೇ ಇವೆ.

ಟರ್ಕಿ ರಣರಂಗ.

ರುಶ್ಯನರಿಗೂ ಟರ್ಕಿ ಸೇನಿಕರಿಗೂ ಕೌಕಾಸಸ್ ಪ್ರಾಂತ್ಯದಲ್ಲಿ ಕದನಗಳು ನಡಿಯುತ್ತಿವೆ. ಈ ಪ್ರಾಂತ್ಯದ ಅರ್ಮೀನಿಯದಲ್ಲಿದ್ದ ತುರ್ಕಿ ಸೇನಿಕರು ರುಶ್ಯನರಿಗೆ ಬೆನ್ನು ತೋರಿಸಿರುವರು. ರುಶ್ಯನರು ಅರ್ಮೀನಿಯದ ಎರ್ಜಿಂಗಾನ್ ಎಂಬ ತುರ್ಕರ ಪಟ್ಟಣಕ್ಕೆ ಹತ್ತರ ಸೇರುತ್ತಿದ್ದಾರೆ. ಕಡೆಗೆ ಬಂದ ವಾರ್ತೆಯಿಂದ ಎರ್ಜಿಂಗಾನ್ ರುಶ್ಯನರ ಸ್ವಾಧೀನವಾಯಿತೆಂತ ತಿಳಿದುಬರುತ್ತದೆ. ಹೀಗೆ ಈವರೆಗೆ ತುರ್ಕರ ಸ್ವಾಧೀನವಿದ್ದ ಅರ್ಮೀನಿಯ ಎಂಬ ಪ್ರದೇಶವೆಲ್ಲಾ ರುಶ್ಯನರ ಸ್ವಾಧೀನವಾದಂತಾಯಿತು. ರುಶ್ಯನರು ಅರ್ಮೀನಿಯದಿಂದ ಓಡುತ್ತಿರುವ ತುರ್ಕಿ ಸೇನಿಕರನ್ನು ಹಿಂದಟ್ಟುತ್ತಿದ್ದಾರೆ. ಎರ್ಜಿಂಗಾನಿನಲ್ಲಿದ್ದ ತುರ್ಕರ ಯುದ್ಧಸಾಮಗ್ರಿಗಳು ರುಶ್ಯನರಿಗೆ ದೊರಕಿರುತ್ತವೆ. ಎರ್ಜಿಂಗಾನ್ ರುಶ್ಯನರ ಸ್ವಾಧೀನವಾದುದರಿಂದ ಟ್ರೆಬಿಜೊಂಡು-ಎರ್ಜರಮ್ ದಾರಿ ರುಶ್ಯನರಿಗೆ ದೊರಕಿ ಟ್ರೆಬಿಜೊಂಡಿನ ಸಮುದ್ರ ಕರಾವಳಿಯನ್ನು ರುಶ್ಯನರು ನಿರಾತಂಕವಾಗಿ ಪ್ರಯೋಗಿಸುವಂತೆ ಆಯಿತು. ಈ ಮಾರ್ಗದಿಂದ ರುಶ್ಯನರು ಎರ್ಜಿಂಗಾನಿಗೆ ೧೩೦ ಮೈಲು ದೂರದಲ್ಲಿ ತುರ್ಕರು ಬಲಕಾಯಿಸಿಕೊಂಡಿದ್ದ ಸಿವಾಸ್ ಎಂಬಲ್ಲಿಯ ನೆಲೆಗೆ ಸುಲಭವಾಗಿ ಮುಂದರಿದು ತುರ್ಕಿ ಸಾಮ್ರಾಜ್ಯದ ಅಂತರ್ಯದಂತಿರುವ ಅನಟೋಲಿಯನ್ ಮೈದಾನುಗಳನ್ನು ನುಗ್ಗಬಹುದು.

ಬಾಲ್ಕಾನ್.

ಈ ರಣರಂಗದಿಂದ ವಿಶೇಷ ವಾರ್ತೆ ಬಂದಿರುವದಿಲ್ಲ, ಇಟಲಿಯನರ ವಾಯುನಾವೆಗಳು ಡುರಾಜ್ಜೋ ಪಟ್ಟಣದ ಮೇಲೆ ಕೆಲವು ಬೊಂಬುಗಳನ್ನು ಹಾಕಿರುತ್ತವೆ.

ಬಾಲ್ಕಾನಿನಲ್ಲಿ ಸರ್ವಿಯನರು ಬಲ್ಗೇರಿಯನರನ್ನು ಪೊದೇನ ಎಂಬ ಗ್ರೀಕ ಪ್ರಾಂತ್ಯದಿಂದ ಹಿಂದಕ್ಕೆ ಅಟ್ಟಿರುವರೆಂತ ಪ್ರಕಟವಾಗಿದೆ.

ಪೂರ್ವ ಆಫ್ರೀಕ.

ಬ್ರಿಟಿಷ ಜನರಲ್ ಸೊಟೆಯವರು ಜುಲಾಯಿ ತಾ. ೨೪ರಲ್ಲು ದಕ್ಷಿಣದಲ್ಲಿದ್ದ ಜರ್ಮನರ ಸೇನೆಯನ್ನು ಸ್ಟೀಲಿಂಗೆನ್‌ಬರ್ಗ ಮತ್ತು ಇರಂಗದ ಮಧ್ಯೆ ಇರುವ ಪ್ರಾಮುಖ್ಯ ನೆಲೆಯಿಂದ ಓಡಿಸಿಬಿಟ್ಟಿರುತ್ತಾರೆ. ಕೆಲವು ಫಿರಂಗಿಗಳು ಬ್ರಿಟಿಷ ಸೇನಿಕರಿಗೆ ದೊರಕಿರುತ್ತವೆ.

ಜಲಾಂತರ್ಗಾಮಿ ನಾವೆಗಳು.

ಜರ್ಮನರ ಜಲಾಂತರ್ಗಾಮಿ ನಾವೆಯು ನೋರ್ವೆಯವರ "ಕೆನಿಂಗನ್" ಎಂಬ ನಾವೆಯನ್ನು ಉತ್ತರ ಸಮುದ್ರದಲ್ಲಿ ಮುಳುಗಿಸಿರುತ್ತವೆ. ಜರ್ಮನರ ಡಿಸ್ಟ್ರೋಯರ್ ನಾವೆಗಳು ಇನ್ನೂ ಕೆಲವು ನಾವೆಗಳನ್ನು ಹಿಡಿದಿರುತ್ತವೆ.

ಉತ್ತರ ಹಿಂದೂಸ್ಥಾನ.

ಇದೇ ಕಳೆದ ಜುಲಾಯಿ ತಾ. ೨೯ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ೧೭೬೦ ಮಂದಿಗೆ ಪ್ಲೇಗಬೇನೆಯು ಸೋಂಕಿ ೧೩೪೪ ಮಂದಿ ಮೃತರಾದರು. ಈ ಪೈಕಿ ಮುಂಬಾಯಿ ಸಂಸ್ಥಾನದಲ್ಲಿ ೧೩; ಮದ್ರಾಸ್ ೫೭; ಬಿಹಾರ್ ಮತ್ತು ಒರಿಸ್ಸ ೬; ಸಂಯುಕ್ತ ಸಂಸ್ಥಾನ ೧೮; ಬರ್ಮ ೨೬೧; ಮೈಸೂರು ೧೫೪; ಹೈದರಾಬಾದ್ ೨೮೯ ಮರಣಗಳಾಗಿರುವವು.

ಮಾನ್ಯ ಬಾಲಗಂಗಾಧರ ತಿಲಕರವರ ೬೦ನೇ ವರುಷದ ಉತ್ಸವವು ಜುಲಾಯಿ ತಾ. ೨೩ನೇ ಆದಿತ್ಯವಾರ ಪೂನೆಯಲ್ಲಿ ಅತಿ ವಿಜೃಂಭಣೆಯಿಂದ ನಡೆದಿರುತ್ತದೆ. ಈ ಸಂದರ್ಭದಲ್ಲಿ ಮಾನ್ಯ ತಿಲಕರವರಿಗೆ ಅವರ ಮಿತ್ರವರ್ಗದವರಿಂದ ಒಂದು ಲಕ್ಷ ರೂಪಾಯಿಯು ಬಹುಮಾನವಾಗಿ ಕೊಡೋಣಾಗಿದೆ. ಈ ಸಮಾರಂಭಕ್ಕೆ ಡಾಕ್ಟರ್ ಪಟ್‌ವರ್ಧನರವರು ಅಧ್ಯಕ್ಷರಾಗಿದ್ದರು. ತಿಲಕರವರು ಮಾಡಿದ ದೇಶಸೇವೆಯನ್ನು ಕುರಿತು ಅಧ್ಯಕ್ಷರವರು ಸೂಚಿಸಿ ಅರ್ಥಗರ್ಭಿತವಾದ ಭಾಷಣಮಾಡಿ ಬಹುಮಾನಪತ್ರವನ್ನೂ ೮೫,೫೮೫ ರೂಪಾಯಿಗಳಿದ್ದ ಒಂದು ಚೀಲವನ್ನೂ ೭೫೦೦ ರೂಪಾಯಿಗಳಿದ್ದ ಮತ್ತೊಂದು ಚೀಲವನ್ನೂ ಇನ್ನು ಇತರ ಸ್ನೇಹಿತರಿಂದ ಬಂದಿದ್ದ ಬಹುಮಾನಗಳನ್ನೂ ಮಾನ್ಯ ತಿಲಕರವರಿಗೆ ಒಪ್ಪಿಸಿದರು. ತಿಲಕರವರು ಬಹುಮಾನಪತ್ರವನ್ನೂ ರೂಪಾಯಿಗಳಿದ್ದ ಚೀಲಗಳನ್ನೂ ಉತ್ಸಾಹದಿಂದ ಸ್ವೀಕರಿಸಿ, ಈ ಹಣವನ್ನು ತಾನು ತನ್ನ ಬಗ್ಗೆ ಉಪಯೋಗಿಸುವದಿಲ್ಲವೆಂದೂ ಈ ಹಣಕ್ಕೆ ತನ್ನ ಹಣವನ್ನೂ ಕೂಡಿಸಿ ದೇಶಸೇವೆ ಬಗ್ಗೆ ಉಪಯೋಗಿಸುವರೆ ಹಿಂದೆಕೊಡುವೆನೆಂದೂ ಕಾಲೋಚಿತ ಮಾತುಗಳಿಂದ ಹೇಳಿದರು. ಈ ಸಮಾರಂಭಕ್ಕೆ ಸುಮಾರು ೮೦೦೦ ಮಂದಿ ಕೂಡಿಬಂದಿದ್ದರು.

ಮುಲ್ತಾನ್ ಡಿಸ್ಟ್ರಿಕ್ಟಿನ ರಾವಿ ನದಿಯ ಸಿಧೂಸಿ ಕಡವಿನಲ್ಲಿ ದೋಣಿ ಮುಣುಗಿ ೮೦ ಮಂದಿ ನೀರಿನಪಾಲಾದರೆಂಬ ವಿಷಾದಕರ ವಾರ್ತೆಯು ಬಂದಿರುವದು. ನೀರಿನ ಪಾಲಾದ ಈ ಪ್ರಯಾಣಿಕರೂ ೩ ಎಮ್ಮೆಗಳೂ, ೧ ಒಂಟೆಯೂ, ೩ ಕುದುರೆಗಳೂ ಒಂದು ದೋಣಿಯಲ್ಲಿ ಕುಳಿತು ನದಿಯ ಆಚೇ ದಡಕ್ಕೆ ಸಮೀಪಿಸುತ್ತಲೇ ದೋಣಿಗಾರರಲ್ಲಿ ಇಬ್ಬರು ದೋಣಿಯಿಂದ ದಡಕ್ಕೆ ಹಾರಿ ದೋಣಿಯನ್ನು ಹಗ್ಗದಿಂದ ಎಳೆದರು. ಹಗ್ಗವು ಕಡಿದು ಹೋದ್ದರಿಂದ ದೋಣಿಯೂ ನೀರಿನ ಸೆಳವಿಗೆ ಸಿಕ್ಕಿ ದೂರಕ್ಕೆ ಹೋಗಿ, ಕೆಲವು ಗಜ ದೂರದಲ್ಲಿದ್ದ ಒಂದು ಸೇತುವೆಗೆ ತಗಲಿ ದೋಣಿಯಲ್ಲಿದ್ದವರೆಲ್ಲರೂ ಮುಣುಗಿ ಹೋದರು. ಈ ಪೈಕಿ ಸುಮಾರು ಒಂದು ಮೈಲು ದೂರದಲ್ಲಿ ನೀರಿನ ಮೇಲೆ ತೇಲಾಡುತ್ತಿದ್ದ ಒಂದು ಹಲಿಗೆಯ ಮೇಲೆ ೫ ವರ್ಷದ ಒಂದು ಮಗು ಮಾತ್ರ ಜೀವಿತವಾಗಿ ದೊರಕಿರುತ್ತದೆ.

~~~~~

ಮಾನ್ಯ ತಿಲಕರವರಿಂದ ಜಾಮೀನು ಕೇಳಿದ ಮೊಕದ್ದಮೆಯ ತನಿಕೆಯು ಇದೇ ತಾ. ೭ ಯಾ ೧೧ಕ್ಕೆ ಪ್ರಾರಂಭವಾಗುವದು.

~~~~~

ಕಿಚನರ್ ಮೆಮೋರಿಯಲ್ ಫಂಡಿಗೆ ಉದಯಪುರದ ಮಹಾರಾಜರವರು ರೂಪಾಯಿ ೧೦,೦೦೦; ಬರೋಡೆಯ ಗಾಯಕವಾಡರು ರೂಪಾಯಿ ೫೦೦೦ ವಂತಿಗೆ ಕೊಟ್ಟಿರುತ್ತಾರೆ.

~~~~~

"ಇಂಡಿಯನ್ ಕನ್ಸಾಲಿಡೇಶನ್ ಬಿಲ್" ಎಂಬ ಮಸೂದೆಯು ಈಚೆಗೆ ಬ್ರಿಟಿಷ್ ಪಾರ್ಲಿಮೆಂಟ ಸಭೆಯ ಮುಂದೆ ತರಲ್ಪಟ್ಟಿರುವದೆಂದು ಹಿಂದಿನ ಸಂಚಿಕೆಯಲ್ಲಿ ತಿಳಿಸಿದ್ದೆವಷ್ಟೆ. ಈ ಬಿಲ್ ಪಾಸಾಗಿ ಜಾರಿಗೆ ಬಂದರೆ ಸ್ಟೇಟ್ ಸೆಕ್ರೆಟರಿಯವರ ಮೇಲೆ ದಾವೆಮಾಡುವ ಹಕ್ಕು ಹಿಂದೀ ಜನರಿಗೆ ಇಲ್ಲದೆಹೋಗುವದು ಮಾತ್ರವೇ ಅಲ್ಲ; ಹಿಂದೀ ಸಂಸ್ಥಾನಿಕರಾಗಲೀ ಅವರ ಪ್ರಜೆಗಳಾಗಲೀ ಅಥವಾ ಹಿಂದೂಸ್ಥಾನಕ್ಕೆ ನೆರೆಯಲ್ಲಿರುವ ಬೇರೆ ಜನರಾಗಲೀ ಬ್ರಿಟಿಷ ಇಂಡಿಯನ್ ಪ್ರಜಾ ಜನರಂತೆಯೇ ಯಾವದಾದರೂ ಒಂದು ಅಧಿಕಾರಕ್ಕೆ ನೇಮಿಸಲ್ಪಡಬಹುದೆಂಬದಾಗಿಯೂ ಹಿಂದೂಸ್ಥಾನದೊಳಗಿನ ಯಾವದಾದರೊಂದು ವ್ಯಾಪಾರ ಸಂಘಕ್ಕೆ ಸಂಬಂಧಿಸಿದ ಮನುಷ್ಯನು ಕಾರ್ಯನಿರ್ವಾಹಕ ಸಭೆಗೆ ನೇಮಿಸಲ್ಪಡಬಹುದೆಂಬದಾಗಿಯೂ ಆ ಮಸೂದೆಯಲ್ಲಿ ಸೂಚಿಸೋಣಾಗಿರುವದು. ಈ ಭಾಗವು ಸಹಾ ಹಿಂದೀಜನರಿಗೆ ಇರುವ ಹಕ್ಕು ಕಡಿಮೆ ಮಾಡುವಂಥಾದ್ದರಿಂದ ಇವಕ್ಕೆ ಲೋಕಮತವು ವಿರೋಧವಾಗಿದೆಂಬದಾಗಿ ತೋರಿಸುವ ಸಭೆಗಳು ಹಿಂದೂಸ್ಥಾನದಲ್ಲೆಲ್ಲಿಯೂ ಕೂಡುತ್ತಲಿವೆ.

~~~~~

ಮಾನ್ಯ ಬಾಲಗಂಗಾಧರ ತಿಲಕರವರು ಸರ್. ವೆಲಂಟೈನ್ ಚಿರೋಲರ ಮೇಲೆ ಮಾಡಿದ ಮಾನನಷ್ಟದಾವೆ ಸಂಬಂಧ ಸದ್ಯದಲ್ಲಿಯೇ ಇಂಗ್ಲಾಂಡಿಗೆ ಹೋಗತಕ್ಕವರಿದ್ದಾರೆಂತ ಹಿಂದಿನ ಸಂಚಿಕೆಯಲ್ಲಿ ತಿಳಿಸಿರುವೆವಷ್ಟೆ. ಆದರೆ ಈಗ ಮುಂಬಾಯಿ ಸರಕಾರದವರು ತಿಲಕರವರಿಗೆ ಇಂಗ್ಲಾಂಡಿಗೆ ಪ್ರಯಾಣಮಾಡಲು ಪಾಸ್‌ಪೋರ್ಟ ಕೊಡುವದೆ ನಿರಾಕರಿಸಿದರೆಂಬ ವರ್ತಮಾನವು ಪ್ರಕಟವಾಗಿದೆ.

~~~~~

ಬಂಗಾಳಿ ಪತ್ರಿಕೆಯ ಆಸಿಸ್ಟಾಂಟ ಎಡಿಟರರಾಗಿದ್ದ ಮ| ರಾ| ಶ್ಯಾಮಸುಂದರ ಚಕ್ರವರ್ತಿಯವರನ್ನು ಬಂಗಾಳ ಪೋಲಿಸಿನವರು ಒಂದು ಪಕ್ಷದ ಹಿಂದೆ ಕೈದುಮಾಡಿದ್ದರಷ್ಟೆ. ಇವರನ್ನು ಜುಲಾಯಿ ತಾ. ೨೮ರಲ್ಲು ಖುಲಾಸು ಪಡಿಸಿ ತಿರಿಗಿ ಡಿಫೆನ್ಸ್ ಆಫ್ ಇಂಡಿಯಾ ಆಕ್ಟಿನ ಮೇಲೆ ಕೈದುಮಾಡಿರುತ್ತಾರೆ.

~~~~~

ಮುಂಬಾಯಿ ಹೈಕೋರ್ಟಿನ ಜಡ್ಜರಾಗಿದ್ದ ಜಸ್ಟಿಸ್ ಸರ್. ಡಿ. ಡಾವರರವರು ಕಳೆದ ೪ ತಿಂಗಳುಗಳಿಂದ ವ್ಯಾಧಿತರಾಗಿದ್ದು ಇದೇ ಜುಲಾಯಿ ತಾ. ೨೯ರಲ್ಲು ಕಾಲವಾದರು. ಇವರು ಸಂಭಾವಿತ ಪಾರ್ಶಿ ಕುಟುಂಬದಲ್ಲಿ ೧೮೫೭ನೇ ಇಸವಿಯಲ್ಲಿ ಹುಟ್ಟಿದರು. ಮುಂಬಾಯಲ್ಲಿ ಪ್ರಥಮತಃ ವಕೀಲರಾಗಿದ್ದು ನಂತರ ಹೈಕೋರ್ಟ ಜಡ್ಜರಾಗಿಯೂ ಕೆಲವು ಕಾಲ ಚೀಫ್ ಜಡ್ಜರಾಗಿಯೂ ಕೆಲಸ ನೋಡಿದ್ದರು. ೧೯೧೧ನೇ ಇಸವಿಯಲ್ಲಿ ಜೋರ್ಜ ಚಕ್ರವರ್ತಿಯವರು ಮುಂಬಾಯನ್ನು ಸಂದರ್ಶಿಸಿದ ಸಂದರ್ಭದಲ್ಲಿ ಅವರಿಗೆ ಸರ್. ಎಂಬ ಬಹುಮಾನವು ಕೊಡೋಣಾಯಿತು.

~~~~~

ಲೇಡಿಹಾರ್ಡಿಂಜರ ಹೆಸರಿನಿಂದ ಡಿಲ್ಲಿಯಲ್ಲಿ ಸ್ಥಾಪಿಸೋಣಾದ ಹೆಂಗಸರ ವೈದ್ಯಕಾಲೇಜಿಗೆ ಡಿಲ್ಲಿಯ ರಾಯಿ ಬಹದ್ದೂರ್ ಸರ್ದಾರ್ ನಾರಾಯಣ ಸಿಂಘರವರು ಆ ಕಾಲೇಜಿಯಲ್ಲಿ ಕಲಿಯುವ ಸಿಕ್ಕಮತದ ಹುಡುಗಿಯರ ಬಗ್ಗೆ ಹೊಸ್ಟೆಲ್ ಕಟ್ಟಿಸುವರೆ ರೂ. ೧೫,೦೦೦ವನ್ನೂ ಅದೇ ಮತದ ಬಡ ಹುಡುಗಿಯರ ವಿದ್ಯಾಭ್ಯಾಸದ ಬಗ್ಯೆ ವೇತನಗಳನ್ನು ಕೊಡುವರೆ ರೂ. ೩೫,೦೦೦ವನ್ನೂ ದಾನಮಾಡಿರುತ್ತಾರೆ.

~~~~~

ಬಂಗಾಳದ ಸಿಬಾಪುರ ಇಂಜಿನಿಯರಿಂಗ್ ಕಾಲೇಜಿಯ ಹಿಂದೀ ವಿದ್ಯಾರ್ಥಿಗಳು ಮುಷ್ಕರಹಾಕಿರುವದರಿಂದ ಸದರಿ ಕಾಲೇಜು ಮುಚ್ಚಲ್ಪಟ್ಟಿರುವದು. ವಿದ್ಯಾರ್ಥಿಗಳ ಬಿಡಾರಕ್ಕೆ ಕಾಲೇಜು ಪ್ರಿನ್ಸಿಪಾಲರಾದ ಮೆ| ಬಿ. ಹೀಟನರವರು ಫಕ್ಕನೇ ಸಂದರ್ಶಿಸಿದ್ದಲ್ಲಿ ಯಾರೋ ಅವರಿಗೆ ಕಲ್ಲು ಹೊಡೆದರಂತೆ. ಹಾಜರುಪಟ್ಟಿ ಕರೆದಾಗ ೪ ವಿದ್ಯಾರ್ಥಿಗಳು ಹಾಜರಿರದ್ದರಿಂದ ಶಾಲಾ ಅಧಿಕಾರಿಗಳು ಆ ನಾಲ್ಕು ವಿದ್ಯಾರ್ಥಿಗಳನ್ನು ಕಾಲೇಜಿಯಿಂದ ತೆಗೆದುಹಾಕಿದರು. ಈ ಕಾರಣದಿಂದ ಹಿಂದೂ ವಿದ್ಯಾರ್ಥಿಗಳು ಒಟ್ಟಾಗಿ ಪ್ರಿನ್ಸಿಪಾಲರ ಈ ಆಜ್ಞೆಯನ್ನು ವಿರೋಧಿಸಿ, ಒಂದು ಅರ್ಜಿ ಪ್ರಿನ್ಸಿಪಾಲರಿಗೆ ಕಳುಹಿಸಿಕೊಟ್ಟರು. ಈ ಅರ್ಜಿಗೆ ಕಲ್ಲುಬಿಸಾಡಿದವರು ಯಾರೆಂತ ತಿಳಿಯಪಡಿಸಿದ್ದಲ್ಲಿ ಈ ಸಂಬಂಧ ಪುನರಾಲೋಚಿಸಲಾದೀತೆಂಬ ಉತ್ತರವು ಪ್ರಿನ್ಸಿಪಾಲರಿಂದ ದೊರಕಿತೆಂದೂ ವಿದ್ಯಾರ್ಥಿಗಳಿಗೆ ಪ್ರಿನ್ಸಿಪಾಲರು ಕೇಳಿಕೊಂಡ ಶರ್ತಗಳನ್ನು ಪೂರೈಸಲು ಅಸಂದರ್ಭವಾಗಿ ಮುಷ್ಕರಹಾಕಿದರೆಂದೂ ಒಂದು ಪತ್ರಿಕೆಯಲ್ಲಿ ಪ್ರಕಟವಾಗಿದೆ. ವಿದ್ಯಾರ್ಥಿಗಳು ಹೀಗೆ ಮಾಡಿದ್ದರಿಂದ ಶಾಲಾ ಬೋರ್ಡು ಅಧಿಕಾರಿಗಳು ಕಾಲೇಜನ್ನು ಮುಚ್ಚಿಬಿಟ್ಟಿರುವರೆಂದೂ ನವಂಬರ ತಿಂಗಳ ವರೆಗೆ ಕಾಲೇಜು ತೆರೆಯೋಣಾಗಲಿಕ್ಕಿಲ್ಲವೆಂದೂ ಅನಂತರ ಈ ವಿದ್ಯಾರ್ಥಿಗಳನ್ನು ಕಾಲೇಜಿಗೆ ಸೇರಿಸಿಕೊಳ್ಳುವ ಸಂಬಂಧ ಆಲೋಚಿಸಲಾದೀತೆಂದೂ ನೋಟೀಸು ಕೊಟ್ಟಿರುವರೆಂತ ತಿಳಿದುಬರುತ್ತದೆ.

~~~~~

ಕಲ್ಕತ್ತೆಯಲ್ಲಿರುವ ಏಸಿಯಾಟಿಕ್ ಪೆಟ್ರೋಲಿಯಮ್ ಕಂಪೆನಿಯ ಕಟ್ಟಡದಲ್ಲಿ ಬೆಂಕಿ ಉಂಟಾಗಿ ಸುಮಾರು ೧೫-೨೦ ಸಾವಿರ ರೂಪಾಯಿಗಳ ನಷ್ಟ ಸಂಭವಿಸಿರುವದು.

~~~~~

ದಕ್ಷಿಣ ಹಿಂದೂಸ್ಥಾನ.

~~~~~

ರಾಜಾರಾಜೇಶ್ರಿ ವೆಂಕಟಗಿರಿ-ರಾಜರವರು ಜುಲಾಯಿ ತಾ. ೧೫ನೇ ಶನಿವಾರ ವೆಂಕಟಗಿರಿಯ ಅಡವಿಯಲ್ಲಿ ಬೇಟೆಯಾಡುತ್ತಿರುವಾಗ ಅಕಸ್ಮಾತ್ತಾಗಿ ತನ್ನ ಕೋವಿಯಿಂದಲೇ ಸಿಡಿದ ಮದ್ದಿನಿಂದ ವಿಧಿವಶರಾದರು. ಮೃತ ರಾಜರವರು ಎರಡಾವರ್ತಿ ಮದ್ರಾಸ್ ನ್ಯಾಯವಿಧಾಯಕ ಸಭೆಯಲ್ಲಿ ಮೆಂಬರರಾಗಿದ್ದರು. ಹಲವು ಧರ್ಮಕಾರ್ಯಗಳ ಬಗ್ಗೆ ಧಾರಾಳ ಹಣ ಸಹಾಯ ಮಾಡಿದ್ದವರು.

~~~~~

ಸೇಲಮ್ ಕಾಲೇಜಿಯ ಪ್ರಿನ್ಸಿಪಾಲರಾಗಿದ್ದ ಮ| ರಾ| ಪಿ. ಶೇಷಾದ್ರಿ ಎಮ್. ಎ. ರವರು ರೂ ೫೦೦-೭೦೦ ಸಂಬಳದ ಮೇಲೆ ಬೆನಾರಿಸಿನ ಸೆಂಟ್ರಲ್ ಹಿಂದೂ ಕಾಲೇಜಿನ ವೈಸ್ ಪ್ರಿನ್ಸಿಪಾಲರಾಗಿ ನೇಮಿಸಲ್ಪಟ್ಟಿರುವರು. ಈ ಕಾಲೇಜು ಯುನಿವರ್ಸಿಟಿಯಾಗಿ ಮಾರ್ಪಡುವ ವರೆಗೆ ಇವರೇ ಬೆನಾರಿಸ್ ಕಾಲೇಜಿಯ ಪ್ರಿನ್ಸಿಪಾಲರಾಗಿರುವರು.

~~~~~

ಮೈಸೂರು ಯುನಿವರ್ಸಿಟಿಗೆ ಮ| ರಾ| ಎಚ್. ವಿ. ನಂಜುಂಡಯ್ಯ ಎಮ್. ಎ. ಎಮ್. ಎಲ್. ಸಿ. ಐ ಇ. ರವರು I ವೈಸ್ ಚೇಯರ್ಮೇನರಾಗಿ ನೇಮಿಸಲ್ಪಟ್ಟಿರುತ್ತಾರೆ. ಮ| ರಾ| ನಂಜುಂಡಯ್ಯನವರು ಮೈಸೂರು ಕೌನ್ಸಿಲಿನ ರಿಟಾಯರ್ಡ್ ಮೆಂಬರರು, ಯುನಿವರ್ಸಿಟಿ ಕಮಿಟಿಯ ಚೇಯರ್ಮೇನರಾಗಿದ್ದು ಯುನಿವರ್ಸಿಟಿಯ ಸ್ಥಾಪನೆ ಸಂಬಂಧ ತಕ್ಕ ಆಲೋಚನೆ ನಡಿಸಿ ವರದಿಮಾಡಿದವರು. ಯುನಿವರ್ಸಿಟಿ ಸೆನೇಟಿಗೆ ೪೬ ಫೆಲ್ಲೋಗಳು ಸಹಾ ನೇಮಿಸಲ್ಪಟ್ಟಿರುತ್ತಾರೆ. ಮೈಸೂರು ಚೀಫ್ ಕೋರ್ಟಿನ ಚೀಫ್ ಜಡ್ಜರಾದ ಸರ್. ವೆಸ್ಲಿ, ಮಿಲ್ಲರ್; ಮಹಾರಾಜರ ಖಾಸಗಿ ಸೆಕ್ರೆಟರಿಯಾಗಿರುವ (ಈಗ ರಜೆಯಲ್ಲಿರುವರು) ಮೆ| ಆರ್. ಎಚ್. ಕೆಂಬಲ್ ಸಿ. ಐ. ಇ; ಮೈಸೂರು ಕೌನ್ಸಿಲಿನ ರಿಟಾಯರ್ಡ್ ಮೆಂಬರರೂ ದಿವಾನ್ ಬಹದ್ದೂರ್ ಕೆ. ಪಿ. ಪುಟ್ಟಣ್ಣ ಚೆಟ್ಟಿ; ಮೈಸೂರು ವಿದ್ಯಾಖಾತೆಯ ರಿಟಾಯರ್ಡ್ ಇನ್ಸ್‌ಪೆಕ್ಟರ್ ಜನರಲರಾದ ಮೆ. ಥಾಬ್ಬಾ; ಮದ್ರಾಸ್ ಕ್ರಿಸ್ಟಿಯನ್ ಕಾಲೇಜಿಯ ರೆವರೆಂಡ್ ಜೋರ್ಜ ಪಿಟ್ಟೆಂಡ್ರಿಗ್ ಮೊದಲಾದ ೪೭ ಹೆಸರುಗಳು ಈ ಪಟ್ಟಿಯಲ್ಲಿ ಸೇರಿರುತ್ತವೆ.

~~~~~

ಹಿಂದೂಸ್ಥಾನದ ಕೈಗಾರಿಕೆಯ ವಿಷಯ ವಿಚಾರಿಸುವರೆ ನೇಮಿಸಲ್ಪಟ್ಟ ಕಮಿಷನಿನ ಪ್ರೆಸಿಡೆಂಟರಾದ ಸರ್. ಟಿ. ಹೊಲ್ಲಾಂಡರವರು ಈಗ ಮದ್ರಾಸಿನಲ್ಲಿರುವರು. ಜುಲಾಯಿ ತಾ. ೨೮ರಲ್ಲು ಸರ್. ಹೊಲ್ಲಾಂಡರವರಿಗೆ ದಕ್ಷಿಣ ಹಿಂದೂಸ್ಥಾನದ ವಾಣಿಜ್ಯ ಸಂಘದವರು ಒಂದು ಬಹುಮಾನ ಪತ್ರವನ್ನು ಅರ್ಪಿಸಿದರು. ಸರ್. ಹೊಲ್ಲಾಂಡರವರು ಈ ಬಹುಮಾನ ಪತ್ರಕ್ಕೆ ಸಮರ್ಪಕವಾದ ಉತ್ತರ ಕೊಟ್ಟು ಮದ್ರಾಸ್ ಸಂಸ್ಥಾನದ ವ್ಯಾಪಾರ ಸಂಬಂಧ ಬಹುಮಾನ ಪತ್ರದಲ್ಲಿ ಸೂಚಿಸೋಣಾದ ವಿಷಯಗಳಿಗೆ ತಕ್ಕ ನಿಗಾ ಕೊಡುವೆನೆಂದು ಹೇಳಿರುವರು.

~~~~~

ಮದ್ರಾಸ್ ನ್ಯಾಯವಿಧಾಯಕ ಸಭೆಗೆ ಮೆಸರ್ಸ್. ಟಿ. ರಂಗ ಆಚಾರ್ಯರ್, ದಿ ರೆವರೆಂಡ್ ಜೋರ್ಜ ಪಿಟ್ಟೆಂಡ್ರಿಗ್, ಎ. ಸೂರ್ಯನಾರಾಯಣರಾವ್ ಪಂತ್ಲು, ಎ.
~~~~~

ಎಸ್. ಕೃಷ್ಣರಾವ್ ಪಂತ್ಲು, ಪಿ. ಶಿವರಾವ್, ದಿವಾನ್ ಬಹದ್ದೂರ್ ಎ. ಎಸ್. ರೆಡ್ಡಿಯರ್, ಬಿ. ವಿ. ನರಶಿಂಹ ಅಯ್ಯರ್, ಕೆ. ಸದಾಶಿವ ಭಟ್ಟ, ರಾವ್ ಬಹದ್ದೂರ್ ವಿ. ಕೆ. ರಾಮಾನುಜ ಆಚಾರ್ಯರ್, ಕೆ. ರಾಮ ಅಯ್ಯಂಗಾರ್, ಕೆ. ಆರ್. ವಿ. ಕೃಷ್ಣರಾವ್ ಪಂತ್ಲು, ರಾಮನಾಡಿನ ರಾಜರು, ಬಿ. ವೆಂಕಟಪತಿರಾಜು, ಕೆ. ಚಿದಂಬರನಾಥ ಮುದಲಿಯರ್, ಕಾವಲಪರ ಮೂಪಿಲ್ ನಾಯರ್, ಯಾಕೂಬ್ ಹುಸೇನ್, ಖಾನ್ ಬಹದ್ದೂರ್ ಅಹಮ್ಮದ್ ತಂಬಿ ಮರಕಯರ್, ಗೋರ್ಡನ್ ಪ್ರೆಜರ್, ಜೆ. ಒ. ರೊಬಿನ್ಸನ್ ಮತ್ತು ಇ. ಎಫ್. ಬಾರ್ಬರ್,—ಇವರು ಮೆಂಬರರಾಗಿ ಆರಿಸಲ್ಪಟ್ಟಿರುವರು.

ಸರಕಾರದ ಆಫೀಸರರ ಪೈಕಿ ಸರ್ಜನ್ ಜನರಲ್ ಡಬ್ಲ್ಯು. ಬಿ. ಬೆನ್ನರ್‌ಮೆನ್, ಜೆ. ಪಿ. ಬೆಡ್‌ಫೋರ್ಡ್, ಎನ್. ಎಸ್. ಬ್ರೊಡಿ, ಎಲ್. ಇ. ಬಕ್ಲೆ, ಆರ್. ಬಿ. ಕ್ಲೆಗ್, ಎಲ್. ಡೆವಿಡ್‌ಸನ್, ಕರ್ನೆಲ್ ಡಬ್ಲ್ಯು. ಎಮ್. ಎಲ್ಲಿಸ್, ಎಚ್. ಪಿ. ಡಬ್ಲ್ಯು. ಗಿಲ್‌ಮೇನ್, ಎಸ್. ಬಿ. ಮೂರ್ತಿ; ದಿವಾನ್ ಬಹದ್ದೂರ್ ಪಿ. ರಾಜಗೋಪಾಲ ಆಚಾರ್ಯರ್, ಎಸ್. ಶ್ರೀನಿವಾಸ ಅಯ್ಯಂಗಾರ್, ಜೆ. ಸ್ಟೋನ್, ಸಿ. ಜೆ. ಟೊಡ್‌ಹಂಟರ್,—ನ್ಯಾಯ ವಿಧಾಯಕ ಸಭೆಗೆ ಮೆಂಬರರಾಗಿ ನೇಮಿಸಲ್ಪಟ್ಟಿರುತ್ತಾರೆ.

ಆರ್ಕಾಡಿನ ಪ್ರಿನ್ಸ್, ರೆವೆರೆಂಡ್ ಜೆ. ಎಲೆನ್, ಮೆಸ್ಸರ್ಸ್ ರಾವ್ ಬಹದ್ದೂರ್ ಎಸ್. ಎ. ಚೆಟ್ಟಿಯರ್, ಟಿ. ರಿಚ್‌ಮೊಂಡ್, ಸರ್. ಎಫ್. ಜೆ. ಇ. ಸ್ಪ್ರಿಂಗ್, ರಾವ್ ಬಹದ್ದೂರ್ ಕೆ. ಸೂರ್ಯನಾರಾಯಣಮೂರ್ತಿ ನ್ಯಾಡು, ಸೆರುಗಾಡದ ಜಮೀನ್ದಾರರು—ಇವರನ್ನು ಸರಕಾರದವರು ನ್ಯಾಯವಿಧಾಯಕ ಸಭೆಯ ನೋನ್ ಆಫೀಸಿಯಲ್ ಮೆಂಬರರಾಗಿ ನೇಮಿಸಿರುತ್ತಾರೆ.

ದಕ್ಷಿಣ ಕನ್ನಡ

P. D. LIMA.

Dental Surgeon, Mangalore.

ಇವರು ಈಗ ತಾನೇ ಸರ್ಕೀಟಿನಿಂದ ಹಿಂತಿರಳಿ ಬಂದಿರುವರು. ಅಮೇರಿಕದಿಂದ ಭಾರೀ ಕೃತಕ ದಂತಗಳನ್ನು ತರಿಸಿಕೊಂಡಿಟ್ಟಿರುವರು. ಈ ಸುಸಮಯವನ್ನು ಕಳಕೊಳ್ಳಬೇಡಿರಿ. ಮಿತವಾದ ದರದಲ್ಲಿ ಹಲ್ಲುಗಳನ್ನು ಸರಿಪಡಿಸಿಕೊಡುವರು.

ಪಿ. ಡಿ. ಲಿಮಾ.
ದಂತ ವೈದ್ಯರು, ಒಡೆಯರರ ಶಾಪಿನ ಬಳಿ,
ಮಂಗಳೂರು

ನೋಟೀಸು.

ಮೆಸರ್ಸ್ ಸ್ಟೀವನ್ ಎಂಡ್ ಸನ್,
ಬಿಸ್ಕುಟು ಮೆನ್ಯುಫೆಕ್ಟರರು.

ಇವರು ತಮ್ಮ ಶಾಪನ್ನು ಬಲ್ಮಠ ರಸ್ತೆಯಲ್ಲಿರುವ ಮೆ| ಜೊಕಿನ್ ಲೊರೆನ್ಸ್ ಸಾಲ್ಡಾಂಞರ ಮನೆಯ ಎದುರಿರುವ ಮೆ| ಮೋನ ಪ್ಯಾಸರ ಕಟ್ಟಡಕ್ಕೆ ವೈದಿರುತ್ತಾರೆ.

ಸ್ಟಿವನ್ ಎಂಡ್ ಸನ್.
ಮಂಗಳೂರು.

FOR IMMEDIATE SALE.

A Mulgeni property, near Kadri Post Office, yeilding a net income of Rs. 211—3—0.

Apply to:—

Dr. A. A. PEREIRA,
Camp Sidapur,
COORG

ಮಾರಾಟಕ್ಕಿದೆ.

ಕದ್ರಿ ಪೋಸ್ಟ ಆಫೀಸಿನ ಬಳಿ ರೂ. 211—3—0 ಐನ ಹುಟ್ಟುವಳಿ ಇರುವ ಒಂದು ಮೂಲಗೇಣಿ ಆಸ್ತಿಯು ತ್ವರ್ಯದಲ್ಲಿ ಮಾರೋಣಾಗುವದು—ಬೇಕಾದವರು ಕೆಳಗಿನ ವಿಳಾಸಕ್ಕೆ ಬರಿಯುವದು.

ಡಾಕ್ಟರ್ ಎ. ಎ. ಪೆರೇರ,
ಕ್ಯಾಂಪ್ ಸಿದ್ಧಾಪುರ,
ಕೊಡಗು.

ಪುತ್ತೂರು:— ಬಹುಮಾನಪಟ್ಟ ಮ| ರಾ| ರಾ| ಸದಾಶಿವ ಭಟ್ಟರವರು ಇದೇ ತಿಂಗಳ ತಾ. ೨೭ರಲ್ಲು ಬೆಳಿಗ್ಯೆ ಇಲ್ಲಿಗೆ ದಯಪಾಲಿಸಿದ್ದರು. ಮಧ್ಯಾಹ್ನದಲ್ಲಿ ಅವರು ಜೈನ ವಿದ್ಯಾರ್ಥಿಭವನವನ್ನೂ, ಸೆಕೆಂಡರಿ ಶಾಲೆಯನ್ನೂ, ಸರಕಾರಿ ಹುಡುಗಿಯರ ಶಾಲೆಯನ್ನೂ, ಸೆಂಟ್ರಲ್ ಬ್ಯಾಂಕನ್ನೂ, ಪರಸ್ಪರ ಸಹಾಯಕ ಸಂಘವನ್ನೂ ಸಂದರ್ಶಿಸಿದರು. ತಾಲೂಕು ಬೋರ್ಡು ಮೆಂಬರರಾದ ಹಾಗಲವಾಡಿ ಮೊಖದಮ್ ಇಸ್ಮಾಯಿಲ್ ಸಾಹೇಬರಲ್ಲಿ ಅವರಿಗೆ ಒಂದು ಟೀ ಪಾರ್ಟಿಯೂ ಇತ್ತು. ಆಖೈರಿಗೆ ಮ| ರಾ| ಭಟ್ಟರವರು ಇಲ್ಲಿಯ ಯೂನಿಯನ್ ಕ್ಲಬ್ಬಿಗೆ ಹೋದರು. ಅಲ್ಲಿ ಸರಕಾರಿ ಉದ್ಯೋಗಸ್ತರು, ವಕೀಲರು, ತಾಲೂಕು ಬೋರ್ಡು ಮೆಂಬರರು, ಊರಿನ ಎಲ್ಲಾ ಜಾತಿಯ ಮುಖಂಡರು ಕೂಡಾ ಒಟ್ಟುಗೂಡಿ ಫಲಹಾರ ತಾಂಬೂಲ ಇತ್ಯಾದಿಗಳಿಂದ ಮ| ರಾ| ಭಟ್ಟರವರಿಗೆ ಸತ್ಕರಿಸಿ, ಅವರಿಗೆ ನ್ಯಾಯವಿಧಾಯಕ ಸಭೆಯ ಮೆಂಬರಿಕೆಯಾದುದಕ್ಕೆ ಆನಂದಸೂಚಕವಾದ ಭಾಷಣಗಳನ್ನು ಮಾಡಿದರು. ಮರುದಿನ ಬೆಳಿಗ್ಯೆ ಮ| ರಾ| ಭಟ್ಟರವರು ಇಲ್ಲಿಯ ಸೆಕೆಂಡರಿ ಶಾಲೆಯಗೋಸ್ಕರ ಪಡಕೊಂಡ ವಿಶಾಲವಾದ ಸ್ಥಳವನ್ನು ನೋಡಿ ಬೆಳಗ್ಗಿನ ಮೋಟೋರಿನಲ್ಲಿ ಬಂಟವಾಳಕ್ಕಾಗಿ ಕಾರ್ಕಳಕ್ಕೆ ಹೋದರು.

ಇಲ್ಲಿಯ ಮತ್ತು ಬಾಜೂಗ್ರಾಮಗಳಲ್ಲಿನ ಕೆಥೊಲಿಕರ ಪೈಕಿ ಕೆಲವರು ತಮಗೋಸ್ಕರ ಪ್ರತ್ಯೇಕ ಒಂದು ಸಹಕಾರ ಸಂಘವನ್ನು ಸ್ಥಾಪಿಸಬೇಕಾಗಿ ರಿಜಿಸ್ತ್ರಾರವರಿಗೆ ಅರ್ಜಿಮಾಡಿದ್ದಾರೆ. ಆದರೆ ಮೊದಲೇ ಇರುವ ಪುತ್ತೂರು ಸಹಕಾರ ಸಂಘಕ್ಕೆ ಸೇರಿದ ಕೆಥೊಲಿಕ ಮೆಂಬರರ ಪೈಕಿ ಬಹುಪಕ್ಷದವರು ಮೇಲ್ಕಂಡ ಅರ್ಜಿಗೆ ಸಹಿಮಾಡಲಿಲ್ಲ; ಮತ್ತು ಆ ರೀತಿ ಕೆಥೋಲಿಕರಿಗೆಂದು ಪ್ರತ್ಯೇಕ ಸಂಘ ಸ್ಥಾಪಿಸಿದರೂ ಕೂಡಾ, ತಾವು ಮೊದಲೇ ಇರುವ ಪುತ್ತೂರು ಸಂಘದಲ್ಲೇ ಇರುತ್ತೇವೆಯೆಂದೂ ಹೊಸ ಸಂಘಕ್ಕೆ ಸೇರುವದಿಲ್ಲವೆಂದೂ ಅನೇಕರು ಹೇಳಿ ತಮಗೆ ಅನಂತರ ಪುತ್ತೂರು ಸಂಘದಲ್ಲಿ ಉಳಕೊಳ್ಳಲಿಕ್ಕೆ ಬಿಡುತ್ತಾರೋ ಇಲ್ಲವೊ ಎಂಬ ಸಂಶಯಪಡುತ್ತಾರೆ. ಆದರೆ ಪುತ್ತೂರು ಸಂಘದಲ್ಲಿ ಮೊದಲೇ ಇದ್ದ ಕೆಥೋಲಿಕರಿಗೆ ಹೊಸತಾಗಿ ಸ್ಥಾಪಿಸಬಹುದಾದ ಕೆಥೋಲಿಕ ಸಂಘಕ್ಕೆ ಸೇರಲು ಮನಸ್ಸಿಲ್ಲದಿದ್ದರೆ, ಅವರು ಪುತ್ತೂರು ಸಂಘದಲ್ಲೇ ಇನ್ನುಮುಂದೆಯೂ ಇರಲಿಕ್ಕೆ ಏನೂ ಅಡ್ಡಿಯಿರುವದಿಲ್ಲವೆಂದು ತೋರುತ್ತದೆ.

ಇದೇ ೧೯೧೬ನೇ ಇಸವಿ ಅಕ್ಟೋಬರ ತಾ. ೧ಕ್ಕೆ ಆರಂಭವಾಗಿ ೧೯೧೭ನೇ ಇಸವಿ ಸಪ್ಟಂಬರ ೩೦ಕ್ಕೆ ಅಂತ್ಯವಾಗುವ ಶೇಂದಿ ಅಂಗಡಿ ಗುತ್ತಿಗಳು ಬರುವ ಅಗೊಸ್ತು ೪ರಲ್ಲು ಬೆಳ್ತಂಗಡಿಯಲ್ಲಿಯೂ ತಾ. ೭ರಲ್ಲು ಪುತ್ತೂರಲ್ಲಿ ಇಲ್ಲಿಯ ಡಿವಿಜನ್ ಡಿಪ್ಯುಟಿ ಕಲೆಕ್ಟರವರಿಂದ ಏಲಂ ಮಾಡೋಣಾಗುವದು.

ಇಲ್ಲಿ ಕೆಲವು ದಿವಸಗಳಿಂದ ಮಳೆ ಸರಿಯಾಗಿ ಬೀಳದೆ ಬಿಸಿಲು ಕಾದು ಬೈಲುಗದ್ದೆಗಳು ಒಣಗುತ್ತಾ ಬಂದಿರುವವು. ಬೆಟ್ಟುಗದ್ದೆಗಳ ಹಾಡು ಹೇಳತಕ್ಕದ್ದಿಲ್ಲ. ಅನೇಕ ಗದ್ದೆಗಳು ಸಾಗುವಳಿ ಮುಂದರಿಸುವರೆ ನೀರಿಲ್ಲದೆ ಬಂಜರು ಬೀಳುವ ಸ್ಥಿತಿಗೆ ಬಂದಿರುತ್ತದೆ.

ಇಲ್ಲಿಯ ಮುನ್ಸಿಫ ಕೋರ್ಟು ಕಂಪೌಂಡಿನ ಒಳಗೆ ಕೋರ್ಟು ವಕೀಲರ ಉಪಯೋಗದ ಬಗ್ಯೆ ಇರುವ ಶೆಡ್ಡಿನೊಳಗೆ ವಕೀಲರು ಮತ್ತು ಅವರ ಹತ್ತರ ಕೆಲಸವಿದ್ದಾಗ ಆಯಾಯ ವಕೀಲರ ಕ್ಲಾರ್ಕರು ಮಾತ್ರ ಪ್ರವೇಶಿಸಬಹುದಲ್ಲದೆ ಬೇರೆ ಯಾರೊಬ್ಬರೂ ಪ್ರವೇಶಿಸಕೂಡದು, ಇದಕ್ಕೆ ವಿರೋಧವಾಗಿ ನಡಕೊಳ್ಳುವವರನ್ನು ನ್ಯಾಯಕ್ಕೆ ಗುರಿಪಡಿಸಲಾದೀತೆಂಬ ಸಂಗತಿ ಎಲ್ಲಾ ಜನರು ತಿಳಿದಿರಬೇಕಾಗಿ ವಕೀಲ ಶೆಡ್ಡಿನ ಗೋಡೆಗೆ ಡಿಸ್ಟ್ರಿಕ್ಟ್ ಮುನ್ಸಿಫರ ದಸ್ಕತಿನಲ್ಲಿ ಇದೇ ೨೪ನೇ ತಾರೀಕಿನ ನೋಟೀಸು ಹಚ್ಚಲ್ಪಟ್ಟಿರುವದು. ವಕೀಲ ಶೆಡ್ಡಿನಲ್ಲಿ ಈ ರೂಲು ಜ್ಯಾರಿಗೆ ತಂದದ್ದು ಶೋಚನೀಯಕರವಾದದ್ದು.

ಮಂಗಳೂರು.

ಜೀವಿ ಆಲಾಪಿಯ ೨೬ ಹಗಲುಹೊತ್ತಿಗೆ ಉಳ್ಳಾಲ ಪಳ್ಳಿಬ್ಯಾರಿಯನ್ನು ಕೊಂದುಹಾಕಿದನೆಂಬದಾಗಿ ಆಪಾದಿಸಲ್ಪಟ್ಟ ಬಜಿಲ ಪಳ್ಳಿಬ್ಯಾರಿಯನ್ನು ಟೌನ್ ಮೆಜಿಸ್ಟ್ರೇಟರು ಸೆಶ್ಶನಿಗೆ ಕಮಿಟ್‌ಮಾಡಿರುತ್ತಾರೆ.

ಬಂಟವಾಳಕ್ಕೆ ಸೇರಿದ ನಂದಾವರದಲ್ಲಿ ಕೆ. ಡಿ. ಕೊಧ್ಯ ಮತ್ತು ಕೆ. ಡಿ. ಕಾದ್ರಿ ಎಂಬ ಇಬ್ಬರು ಮಾಪಿಳ್ಳೆಯರನ್ನು ಚೆರಿಯ ಆಲಿ ವಗೈರೆ ೯ ಜನರು ಕಳೆದ ಎಪ್ರಿಲ್ ತಾ. ೨೮ರಲ್ಲು ಕೊಂದುಹಾಕಿದ ಮೊಕದ್ದಮೆ ತನಿಕೆಯು ಇದೇ ಕಳೆದ ಜುಲಾಯಿ ತಾ. ೩೧ರಿಂದ ಇಲ್ಲಿಯ ಸೆಶ್ಶನ್ನಲ್ಲಿ ನಡೆಯುತ್ತಿದೆ.

ಇಲ್ಲಿಯ ಬ್ರಾಹ್ಮಣಿ ಗರ್ಲ್‌ಸ್ಕೂಲಿನ ವಠಾರದ ಮನೆಯಲ್ಲಿ ಚಾಕರಿಗಿದ್ದ ಕೆತ್ರಿಯ ಎಂಬ ಹೆಸರಿನ ಹಿಂದೀ ಕ್ರೈಸ್ತ ಹೆಂಗಸು ಇದೇ ತಾ. ೨೯ನೇ ಶನಿವಾರ ಬಾವಿಗೆ ಹಾರಿ ಆತ್ಮಹತ್ಯಮಾಡಿಕೊಂಡಿರುವಳು.

ಮೆ. ಅಲ್ವರಿಸ್ ಬಿ. ಎ., ಎಲ್. ಎಲ್. ಬಿ. ಯವರ ಚಿನ್ನದ ವಾಚು ಸರಪಣಿ ಕಳವುಮಾಡಿದ ಜೋನಿ ಲುವಿಸನಿಗೆ ಟೌನ್ ಮೆಜಿಸ್ಟ್ರೇಟರು ೩ ತಿಂಗಳ ಕಠಿಣ ಸಜಾ ವಿಧಿಸಿರುತ್ತಾರೆ.

ಜೆಪ್ಪು ಸೆಮಿನರಿಯ ತಾಂಬ್ರದ ಪಾತ್ರೆ ಇತ್ಯಾದಿಗಳನ್ನು ಕಳವುಮಾಡಿದ ಆಲ್ಬರ್ಟ್ ಯಾನೆ ಬಂಟು ಎಂಬವನಿಗೆ ೨ ತಿಂಗಳ ಸಜಾ ವಿಧಿಸೋಣಾಗಿರುತ್ತದೆ.

ಉಡ್ಪಿಯಲ್ಲಿ ಇನ್ಶೂರ್ ಕಂಪೆನಿಯ ಏಜಂಟರಾಗಿದ್ದ ಕಾಳಿಂಗರಾವ್‌ರವರು ರಾಜಮ್ಮ ಎಂಬ ಹೆಂಗಸಿನ ಹೆಸರಿ

ನಲ್ಲಿ ರೂ. ೫೦೦೦ಕ್ಕೆ ಇನ್ಶೂರುಮಾಡಿಸಿ ಕಂಪೆನಿಗೆ ಮೋಸಮಾಡಿದ್ದರೆಂಬ ಅಪವಾದದ ಮೇಲೆ ಕುಂದಾಪುರ ಜ್ವಾಯಿಂಟ್ ಮೇಜಿಸ್ಟ್ರೇಟರು ಕಾಳಿಂಗರಾವ್, ಪೈ. ಕೃಷ್ಣ ತಂತ್ರಿ, ಸಗ್ರಿ ಗುರುರಾಯಾಚಾರ್ಯ, ಆರೂರು ಬಾಲಕೃಷ್ಣರಾವ್, ರಾಜಮ್ಮ—ಇವರಿಗೆ ಶಿಕ್ಷೆಯನ್ನು ವಿಧಿಸಿದ್ದರೆಂದು ತಿಳಿಸಿತ್ತಷ್ಟೆ. ಈ ಮೊಕದ್ದಮೆಯ ಅಪೀಲು ತನಿಖೆಯು ಸೆಶ್ಶನ್ಸ್ ಕೋರ್ಟಿನಲ್ಲಿ ನಡೆದು ಸೆಶ್ಶನ್ಸ್ ಜಡ್ಜರು ೧ನೇ ಅಪಾದಿತ ಕಾಳಿಂಗರಾವ್, ೨ನೇ ಅಪಾದಿತ ಪೈ. ಕೃಷ್ಣತಂತ್ರಿ, ೪ನೇ ಅಪಾದಿತ ಆರೂರು ಬಾಲಕೃಷ್ಣರಾವ್ ಇವರನ್ನು ಬಿಡುಗಡೆಮಾಡಿಸಿ, ೩ನೇ ಅಪಾದಿತ ಸಗ್ರಿ ಗುರುರಾಯಾಚಾರ್ಯನಿಗೆ ಮತ್ತು ೫ನೇ ಅಪಾದಿತಳಾದ ರಾಜಮ್ಮಗೆ ಮೂಲತೀರ್ಮಾನವನ್ನೇ ಕಾಯಂ ಮಾಡಿದರು.

ಬಂಗಾಳ ಸರಕಾರದವರಿಂದ ನೇಮಿಸೋಣಾದ ಸ್ಟೇಟ್ ಮೆಡಿಕಲ್ ಫೆಕಲ್ಟಿಬೋರ್ಡಿನವರು ನಡಿಸಿದ ವೈದ್ಯಪರೀಕ್ಷೆಯಲ್ಲಿ ಇಲ್ಲಿಯ ಮ| ರಾ| ಯು. ಉಪೇಂದ್ರಪೈ ಮತ್ತು ಮ| ರಾ| ಸೂರಲ್ ತಮ್ಮಯ್ಯ ಮಾಡರವರು ತೇರ್ಗಡೆ ಹೊಂದಿರುತ್ತಾರೆ.

ಪಟ್ಟಣದಲ್ಲಿ ವರ್ಷ ಒಂದಕ್ಕೆ ಸುಮಾರು ೧೦೦೦ ಗೋವುಗಳ ವಧೆಯಾಗುತ್ತಿರುವದಾಗಿ ತಿಳಿದುಬರುವದರಿಂದಲೂ ಪಟ್ಟಣದ ನ ದೇಶದ ಅಭಿವೃದ್ಧಿಗೆ ಅಗತ್ಯವಾಗಿರುವ ಗೋವುಗಳ ರಕ್ಷಣೆಯಲ್ಲಿ ಅಭಾವ ಉಂಟಾಗಿರುವದರಿಂದ ಜನರ ಆರೋಗ್ಯವು ಯಥಾ ರೀತಿಯಲ್ಲಿಲ್ಲವಾದುದರಿಂದಲೂ ಗೋವುಗಳ ರಕ್ಷಣೆಯನ್ನು ಹೇಗೆ ಕೈಕೊಳ್ಳಬಹುದೆಂಬ ವಿಷಯವನ್ನು ಆಲೋಚಿಸುವದೆ ಹಿಂದೀ ಜನಗಳ ಮಹಾ ಸಭೆಯು ಕೆನರಾ ಹ್ಯಾಸ್ಕೂಲಿನ ಭುವನೇಂದ್ರ ಸಭಾಸದನದಲ್ಲಿ ಇದೇ ಅಗೋಸ್ತು ತಿಂಗಳ ತಾ. ೬ನೇ ಆದಿತ್ಯವಾರ ಮಧ್ಯಾಹ್ನ ೪-೩೦ ಗಂಟೆಗೆ ಕೂಡಿಬರುವದು. ಸರ್ವರಿಗೂ ಸುಸ್ವಾಗತವಿದೆ.

ಕಳೆದ ಸರ್ತಿ ಕೂಡಿದ ಇಲ್ಲಿಯ ಮುನ್ಸಿಪಲ್ ಕೌನ್ಸಿಲರರ ಮೀಟಿಂಗಿನಲ್ಲಿ ಕೆಲವು ವಿಶೇಷ ಸಂಗತಿಗಳಿದ್ದವು. ದೇರೆಬೈಲು ಗ್ರಾಮದಲ್ಲಿ ಈಗ ಪಟ್ಟಣದ ಗಲೀಜನ್ನು ಹುಗಿಯುವ ಸ್ಥಳದ ಸಮೀಪ ಸುಮಾರು ೨೦ ಎಕ್ರೆ ಸ್ಥಳವನ್ನು ರೋಮನ್ ಕೆಥೋಲಿಕ ಮತಾಂತರಗೊಳ್ಳುವ ತೋಟಿಗಳ ಬಗ್ಗೆ ಸರಕಾಸ್ತಿನ ಮೇಲೆ ಕೊಡಬೇಕೆಂತ ರೋಮನ್ ಕೆಥೋಲಿಕ ಜೆಜುಯಿಟ್ ಗುರುಗಳೊಬ್ಬರ ಒಂದು ಅರ್ಜಿಯು ಸಭೆಯ ಮುಂದೆ ಬಂದಿತ್ತು. ಪ್ರಕೃತ ಕೆಥೋಲಿಕ ತೋಟಿಗಳ ಸಂಖ್ಯೆಯು ೫ ಯಾ ೬ ಮಂದಿಯಾಗಿರುವದರಿಂದ ತೋಟಿಗಳಿಗೆ ವಾಸ್ತವ್ಯಗಳನ್ನು ಒದಗಿಸಿಕೊಡುವ ವಿಷಯವನ್ನು ಸರಕಾರದವರ ಸಹಾಯ ಪಡಕೊಂಡು ಮುನ್ಸಿಪಲ್ ಕೌನ್ಸಿಲಿನವರೇ ಕೈಕೊಳ್ಳುವುದು ಉಚಿತವೆಂದು ನಿರ್ಣಯಿಸಲ್ಪಟ್ಟಿತು.

ಮುನ್ಸಿಪಲ್ ವಾರ್ಡುಗಳ ವಿಭಜನೆಯನ್ನು ಅಗತ್ಯ ಕಂಡರೆ ಮಾರ್ಪಡಿಸಿ ಆಯಾ ವಾರ್ಡುಗಳಿಗೆ ಕೌನ್ಸಿಲರರ ಸಂಖ್ಯೆಯನ್ನು ಸರಕಾರದವರ ಸೂಚನೆ ಮೇರೆಗೆ ನಿರ್ಣಯಿಸಲು ಕೌನ್ಸಿಲಿನ ಮೆಂಬರರ ಉಪಕಮ್ಮಿಟಿಯೊಂದು ಏರ್ಪಡಿಸಲ್ಪಟ್ಟಿರುವದು.

ಪೆಂಟ್‌ಲೆಂಡ್ ಪೇಟೆಯಲ್ಲಿ ಪ್ರಕೃತ ಏಲಂ ಆಗಿ ಹೋದ ಸ್ಥಳಗಳಿಗೆ ದಕ್ಷಿಣದಲ್ಲಿರುವ ಸ್ಥಳಗಳ ನಕ್ಷೆ ವಗೈರೆ ಸರಕಾರದವರಿಗೆ ಕಳುಹಿಸಿಕೊಡಲು ಕೌನ್ಸಿಲಿನ ಮುಂದೆ ಇಡೋಣಾಗಿತ್ತು. ಕೌನ್ಸಿಲಿನವರು ಇದನ್ನು ಮಂಜೂರು ಮಾಡಿ ಪ್ಲೇನುಗಳು ಸರಕಾರಕ್ಕೆ ಕಳುಹಿಸೋಣಾಗಿವೆ. ಈ ಸ್ಥಳಗಳ ವಿಸ್ತೀರ್ಣವು ಮೊದಲಿನ ಸ್ಥಳಗಳಂತೆ ೧೫ ಸೆಂಟ್ಸ್ ಮಾತ್ರವಾಗಿರದು. ೨೦ ಯಾ ೨೧ ಸೆಂಟ್ಸ್‌ಗಳಿಗೆ ಏರಿಕ್ಕಿದೆ. ಮತ್ತು ಹೀಗೆ ವಿಂಗಡಿಸಿ ಕೊಡೋಣಾಗುವ ಪ್ರತಿಯೊಂದು ಸ್ಥಳದಲ್ಲಿ ಒಂದೊಂದು ಕಟ್ಟೋಣವನ್ನು ಕಟ್ಟಬೇಕೆಂಬುವ ಕಡ್ಡಾಯದ ನಿಯಮವು ಇರದೆಂಬದಾಗಿ ತೋರಿಬರುತ್ತದೆ. ಬಡವರಿಗನೇ ಈ ಸ್ಥಳಗಳನ್ನು ಭಿಂಗವಿಸಿಕೊಡಬೇಕೆಂಬುವ ಸೂಚನೆಯು ಸರಕಾರದವರಿಂದ ಮನ್ನಿಸಲ್ಪಡಲಿಲ್ಲ. ಪಟ್ಟಣದಲ್ಲಿ ಅಥವಾ ಪಟ್ಟಣದ ಸಮೀಪವಿರುವ ಖಾಲಿ ಸ್ಥಳಗಳನ್ನು ಬಡವರ ಬಗ್ಗೆ ಉಪಯೋಗಿಸಬಹುದೆಂದು ಸರಕಾರದವರಿಂದ ಸೂಚಿಸೋಣಾಗಿದೆ.

ಕೂಳೂರು ಕಡವಿಗೆ ಹೋಗುವ ರಸ್ತೆಯಲ್ಲಿರುವ ಪಟ್ಟಣದ ಒಳಗಿನ ಕಂಬಳದ ಸಂಕದ ಕಮಾನು ಒಂದೆರಲ್ಲಿ ಬಿರುಕು ಬಿದ್ದಿರುವದರಿಂದ ಮೋಟಾರ್ ಮತ್ತು ಇತರ ಎಲ್ಲಾ ಗಾಡಿಗಳ ವೈವಾಟವು ಈ ಸಂಕದ ಮೇಲೆ ನಡಿಯಕೂಡದೆಂದು ಬೇಲಿಯು ಹಾಕೋಣಾದ್ದರಿಂದ ಈಗ ಆ ರಸ್ತೆಯನ್ನು ಬಿಟ್ಟು ಗಾಡಿಗಳು ಕದ್ರೋಳಿ ಮಾರ್ಗವಾಗಿ ಹೋಗುತ್ತವೆ. ಗಾಡಿಗಳಿಗೂ ಪ್ರಯಾಣಿಕರಿಗೂ ಇದರಿಂದ ಬಹಳ ಅಡಚಣೆಯುಂಟಾಗಿರುವದು. ಮೋಟಾರ್ ಭಂಡಿಗಳ ನಡದಾಟವು ಸಂಸ್ಥಾನದ ಎಲ್ಲಾ ಪ್ರಾಂತ್ಯದಲ್ಲಿ ಹೆಚ್ಚುತ್ತ ಬಂದಿರುವದರಿಂದ ಈಗ ರಸ್ತೆ [illegible] ಸಂಕಗಳ ಬಲವನ್ನು ಪರೀಕ್ಷಿಸಿ ನೋಡಬೇಕೆಂತ ಸರಕಾರದವರ ಹುಕುಂ ಬಂದಿರುವದಾಗಿ ಕೇಳುತ್ತೇವೆ.

ಮಂಗಳೂರು ಫಿರ್ಕಾ ತಾಲೂಕು ಬೋರ್ಡು ಮೆಂಬರಿಕೆಗೆ ಮ. ರಾ. ರಾ. ಕಬ್ಬೆಮಾರ್ ರಘುಚಂದ್ರ ಬಲ್ಲಾಳರು ಮತ್ತು ಮ. ರಾ. ರಾ. ಮುಲ್ಕಿ ದೊಡ್ಡಮನೆ ಶೇಸುಸೆಟ್ಟಿಯವರು ಉಮೇದ್ವಾರರಾಗಿರುವರೆಂಬದಾಗಿ ತಿಳಿಯುತ್ತೇವೆ.

ಬ್ರಿಟಿಷ ಸಾಮ್ರಾಜ್ಯದವರಿಗೂ ಜರ್ಮನರಿಗೂ ಯುದ್ಧ ಪ್ರಾರಂಭವಾಗಿ ಇಂದಿಗೆ ೨ ವರ್ಷಗಳಾಗಿರುವದರಿಂದ ಈ ದಿನ ಎಲ್ಲಾ ದೇವಾಲಯಗಳಲ್ಲಿ ನಮ್ಮ ಸಾಮ್ರಾಜ್ಯಕ್ಕೆ ಜಯವಾಗುವ ಹಾಗೆ ದೇವತಾರಾಧನೆಯು ನಡೆದಿರುವದು. ಸರಕಾರದ ಆಫೀಸರರೂ ಇದಕ್ಕೆ ಭಾಗಿಗಳಾಗುವಂತೆ ಈ ದಿನ ಮಧ್ಯಾಹ್ನದ ವರೆಗೆ ಎಲ್ಲಾ ಆಫೀಸುಗಳಿಗೆ ರಜೆ ಕೊಡೋಣಾಗಿದೆ.

ಈ ಪ್ರಾಂತ್ಯಗಳ ವಸ್ತ್ರ ನೇಯಿಗೆಯವರ ಅನುಭವದ ಬಗ್ಗೆ ಮೈಸೂರಿನ ಅರ್ಥ ಸಾಧಕ ಪತ್ರಿಕೆಯಲ್ಲಿ ಪ್ರಕಟವಾಗಿರುವ "ಸ್ವದೇಶದ ಬಣ್ಣಗಳು" ಎಂಬ ಲೇಖನವನ್ನು ಈ ಸಂಚಿಕೆಯ ಇನ್ನೊಂದು ಪಾನಿನಲ್ಲಿ ಪ್ರಕಟಿಸಿರುತ್ತೇವೆ.

ಕಳೆದ ವಾರ ಮಂಗಳೂರು ಮುನಿಸಿಪಾಲಿಟಿಯಲ್ಲಿ ಪ್ಲೇಗು ಮರಣವಿದ್ದಿಲ್ಲ.

ಒಬ್ಬ ಬಾತ್ಮೀದಾರರಿಂದ:—ಕಳೆದ ತಿಂಗಳ ತಾ. ೩೦ನೇ ಆದಿತ್ಯವಾರ ಬೆಳಿಗ್ಯೆ ೧೧ ಗಂಟೆಗೆ ಬಲ್ಮಠದ ಮೆ| ಜೋರ್ಜ್ ಚಾಲಿಸರ ಮೊಮ್ಮಗ ದೇವಪ್ರಸಾದ ಸೋನ್ಸರ ಕ್ಲಬ್ಬಿಗೂ, ಬಿ. ಎಮ್. ಪ್ರೆಸಿನ ಬಿ. ಕ್ಲಬ್ಬಿನವರಿಗೂ ಕ್ರಿಕೆಟ್ ಪಂದ್ಯಾಟವು ಸುರುವಾಗಿ ಸದರಿ ದೇವಪ್ರಸಾದ ಕ್ಲಬ್ಬಿನವರು ಹಿಂಜರಿದ್ದರಿಂದ ಬಿ. ಕ್ಲಬ್ಬಿನ ಸೆಕ್ರೆಟರಿಯವರಾದ ಮೆ| ಸ್ಪೆನ್ಸರ್ ಫಿನೆಹಾಸರಿಗೆ ಹೂವಿನ ಹಾರಗಳನ್ನು ಹಾಕಿ ಸನ್ಮಾನಿಸಿದರೆಂದು ಕೇಳುತ್ತೇವೆ.

ಅಮ್ಮೆಂಬಳ ಸುಬ್ಬರಾವ್ ಪೈ. ಮೆಮೋರಿಯಲ್ ಫಂಡ್.

೧೯೧೬-೧೭ನೇ ಇಸವಿ ಬಾಬತು ಈ ಫಂಡಿನಿಂದ ಕೊಡೋಣಾದ ಲೋನ್ ಸ್ಕೊಲರ್ ಸಿಪ್ಪಿನ ವಿವರ:—

ರಾ| ವಿ. ದಯಾನಂದ ಕಾಮತ್ ತಿಂಗಳಿಗೆ ರೂ. ೧೫; ಕೆ. ಎಲ್. ಆಚಾರ್ಯ ರೂ. ೧೫; ರೆಂಜಾಳ ಹರಿಶಣಯಿ ರೂ. ೧೫; ಟಿ. ಲಕ್ಷ್ಮಣ ಶಣಯಿ ರೂ. ೧೦; ಬಿ. ಬಾಲಕೃಷ್ಣ ಪುರಾಣಿಕ ರೂ. ೧೦; ಯು. ಪುಂಡಲೀಕ ಶಣಯಿ ರೂ. ೭-೮-೦; ಅರ್ಕುಳ ವೈಕುಂಟ ಶಣಯಿ ರೂ. ೧೦.

ಟಿ. ಲಕ್ಷ್ಮಣ ಶಣಯಿ ಬಿ. ಎ. ಪರೀಕ್ಷೆಗೆ ಕಲಿಯಲಿಕ್ಕೆ ಮದ್ರಾಸಿಗೆ ಹೋಗುವ ಸಮಯ ಹೆಚ್ಚಿಗೆ ರೂ. ೫೫ ಕೊಡೋಣಾಗುವದು.

ಆರ್. ಹರಿ ಶಣಯಿ ತಾನು ಮೆಖೇನಿಕಲ್ ಎಂಡ್ ಎಲೆಕ್ಟ್ರಿಕಲ್ ಇಂಜನಿಯರಿಂಗ್ ಕ್ಲಾಸಿಗೆ ಸೇರಿದ್ದೇನೆಂತ ಈ ಫಂಡಿನ ಕಮಿಟಿಯವರಿಗೆ ಸಮಾಧಾನಪಡಿಸದಿದ್ದರೆ ಅವರ ಬಗ್ಗೆ ಸೆಂಕ್ಷನ್ ಆದ ಹಣವನ್ನು ಹಿಂದೆ ತೆಗೆಯೋಣಾಗಿ ತೊನ್ಸೆ ಗೋವಿಂದ ಪೈ ರೂ. ೧೦; ಗುರುಪುರ ವೆಂಕಟ್ರಾಯ ಪೈ ರೂ. ೨-೮, ಪೆರ್ಡೂರ್ ವಿಠಲ ಕಾಮತ್ ರೂ. ೪ ಇವರಿಗೆ ಸ್ಕೊಲರ್‌ಸಿಪ್ ಕೊಡೋಣಾಗುವದು.

ದಕ್ಷಿಣಕನ್ನಡಾ ಜಿಲ್ಲೆಯ ಚರಿತ್ರೆ ಮತ್ತು ಭೂತಾಳ ಪಾಂಡ್ಯರಾಯನ ಅಳಿಯಸಂತಾನದ ಕಟ್ಟಿನ ಜ್ಯಾಹೀರಾತುಗಳನ್ನು ವಾಚಕರ ಅವಗಾಹನೆ ಬಗ್ಗೆ ಇಟ್ಟಿರುವೆವು.

ಜೀನಸು ಧಾರಣೆ. (ರಖಂ)

ಮಸ್ಕತಿ ಹೊಸ ಅಕ್ಕಿ	6— 0—0	6— 4—0
ಗಾಡಿ ರಾಶಿ ಹೊಸ ,,	5— 3—0	5— 4—0
ಗುಡ್ಡು ,, ,,	5—10—0	5—14—0
ಅವ್ವಲ್ ಬೆಳ್ತಿಗೆ ,,	6— 4—0	6—12—0
ಗುಡ್ಡು ಬೆಳ್ತಿಗೆ ,,	5—12—0	6— 0—0
ಊಚು ಸುಗ್ಗಿ ,,	5— 8—0	5—13—0
ರಂಗೂನು ಬೆಳ್ತಿಗೆ ಗೋಣಿ ೧ರ	9—10—0	9—12—0
ಗೋಧಿ ಗೋಣಿ ೧ರ	11—12—0	12— 0—0
ಹುರುಳಿ ಗೋಣಿ ೧ರ	6— 2—0	6— 8—0
ಕಡಲೆ ಗೋಣಿ ೧ರ ಬೊಂಬ್ಯೆ	8—12—0	10— 8—0
ತೊಗರಿ ಗೋಣಿ ೧ರ		11— 4—0
ತೊಗರಿ ಬೇಳೆ ಗೋಣಿ ೧ರ	12— 8—0	14— 8—0
ಉದ್ದು ಗೋಣಿ ೧ರ	10— 8—0	11— 4—0
ಊರಬೆಲ್ಲ ಖಂಡಿ ೧ರ		50— 0—0
ಉಪ್ಪು ಗೋಣಿ ೧ರ	4— 8—0	4—10—0
ಕೊಬ್ರಿ ಖಂಡಿ ೧ರ	95— 0—0	105—8—0
ಕೊಬ್ರಿಹಿಂಡಿ ಖಂಡಿ ೧ರ		16— 8—0
ಎಳ್ಳಿಂಡಿ ಖಂಡಿ ೧ರ ಬೊಂಬ್ಯೆ	25— 0—0	32— 8—0
ಕೊಬ್ರಿ ಎಣ್ಣೆ ಮಣ ೧ರ	7— 6—0	7—12—0
ಎಳ್ಳೆಣ್ಣೆ ಮಣ ೧ರ (ಕುಡಾಸನ)		5— 4—0
ಚಿಮಿಣಿ ಎಣ್ಣೆ ಪೆಟ್ಟಿಗೆ ೧ರ	6— 0—0	6—11—0
ಮೋರಿಸ್ ಸಕ್ಕರೆ ಮಣ ೧ರ		4—14—0
ಕಾಫಿ ಖಂಡಿ ೧ರ	225— 0—0	235—0—0
ಹೊಸಬೆಳಿಗೋಟು ಖಂಡಿ ೧ರ	82— 0—0	85— 0—0
ಹೊಸ ಗೇರುಬೀಜ ಮುಡಿ ೧ರ		2—11—0
ಕಬ್ಬಿಣ ಖಂಡಿ ೧ರ		75— 0—0
ತಾಂಬ್ರ ತಗಡು ಮಣ ೧ರ	28— 0—0	30— 0—0
ತಾಂಬ್ರ ಪಾತ್ರೆಗಳು ಮಣ ೧ರ	23— 0—0	28— 0—0
ಚೀನಿ ಬೆಳ್ಳಿ ಸೇರು ೧ರ		24— 0—0
ಪಚ್ಚೆ ಹೆಸರು ಮುಡಿ ೧ರ	5— 4—0	5— 6—0

1916-17ನೇ ಇಸವಿಯ ಇಂಡಿಯಾ ಗವರ್ನಮೆಂಟ್

ಕನ್‌ವರ್ಶನ್ ಲೋನ್ ಎಂಬ ಮಾರ್ಪಡಿಸಬಹುದಾದ ಸಾಲವು.

ಪೋಸ್ಟ್ ಆಫೀಸು ಉಪಭಾಗವು.

1931ನೇ ಇಸವಿಗೆ ಮುಂಚಿತವಾಗಿ ಸಲ್ಲಿಸತಕ್ಕದ್ದಲ್ಲದ; ಪರಂತು 1936 ನೇ ಇಸವಿಯೊಳಗಾಗಿ ನೂರಕ್ಕೆ ನೂರರಂತೆ ಪೂರಾ ಮರುಪಾವತಿಯಾಗತಕ್ಕ ಸಾಲವು.

ಸಾಲಿಯಾನಾ ವರ್ಷ ಒಂದರ ಸೇಕಡಾ 4 ರ ದರದ ಬಡ್ಡಿಯು ಅರ್ಧವರ್ಷಕ್ಕೊಮ್ಮೆ ಎಂದರೆ ಎಪ್ರೀಲ್ 1ನೇ ತಾರೀಕಿನಲ್ಲಿಯೂ ಮತ್ತು ಅಕ್ಟೋಬರು 1 ನೇ ತಾರೀಕಿನಲ್ಲಿಯೂ ಸಲಾಯಿಸಲ್ಪಡುವುದು.

ಸೇಕಡಾ 3 ರಂತೆ ಮತ್ತು 3½ ಯಂತೆ ರೂಪಾಯಿ ನಾಣ್ಯದಲ್ಲಿರುವ ಸಾಲಗಳನ್ನು ಮಾರ್ಪಡಿಸಿಕೊಳ್ಳಲು ಅರ್ಜಿದಾರರು ಅರ್ಹರಾಗಿರುತ್ತಾರೆ.

ಅರ್ಜಿಗಳು 100 ರೂಪಾಯಿ-ಯಾ-ಅದರ ಅಪವರ್ತ್ಯಗಳ ಬಗ್ಗೆ (ಎಂದರೆ 200, 300 ಈ ಮೇರೆಗೆ) ಇದ್ದು 5,000 ರೂಪಾಯಿಗಳಿಗೆ ಮೀರದ ಹೊರತು ಮತ್ತು ಸೇವಿಂಗ್ಸ್ ಬ್ಯಾಂಕ್ ಕೆಲಸವು ನಿರ್ವಹಿಸಲ್ಪಡುವ ಪ್ರತಿಯೊಂದು ಟಪ್ಪಾಲ್ ಆಫೀಸಿನಲ್ಲಿಯೂ 1916ನೇ ಇಸವಿಯ ಜೂನ್ 14ನೇ ತಾರೀಖಿನಿಂದ 1916ನೇ ಇಸವಿಯ ಸಪ್ಟಂಬರ್ 25ನೇ ತಾರೀಖಿನ (ಇದು ಸೇರಿ) ವರೆಗೆ ಅವು ಅಂಗೀಕರಿಸಲ್ಪಡುವವು. ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟರನಾಗಿದ್ದರೂ ಅಲ್ಲದಿದ್ದರೂ ಸರಿಯೇ, ಯಾವನೇ ಆದರೂ ಅರ್ಜಿಮಾಡಬಹುದು.

ಎಷ್ಟು ಮೊಬಲಗುಗಳಿಗೆ ಅರ್ಜಿಮಾಡಲ್ಪಡುತ್ತದೋ ಆ ಪೂರಾ ಮೊಬಲಗುಗಳನ್ನು ಅರ್ಜಿಗಳ ಸಂಗಡ ಡಿಪಾಜಿಟು ಮಾಡತಕ್ಕದ್ದು ಮತ್ತು ಅಷ್ಟೇ ಮೊಬಲಗುಗಳ (ಗವರ್ನಮೆಂಟ್ ಸೆಕ್ಯೂರಿಟಿ) ಪತ್ರವು ಅರ್ಜಿದಾರರಿಗೆ ಕೊಡಲ್ಪಡುವುದು. ಡಿಪಾಜಿಟುಗಳು ರೊಕ್ಕವಾಗಿ ಕೊಡಲ್ಪಡಬಹುದು ಅಥವಾ ಪೂರಾ ಯಾ ಒಂದು ಭಾಗವು ಪ್ರಕೃತವಿರುವ ಸೇವಿಂಗ್ಸ್ ಬ್ಯಾಂಕ್ ಲೆಕ್ಕಗಳಿಂದ ವಿಥ್‌ಡ್ರಾಯಲ್ ಯಾನೆ ಈಸುಕೊಳ್ಳುವದರ ಮೂಲಕವಾಗಿ ಕೊಡಲ್ಪಡಬಹುದು.

ಟಪ್ಪಾಲು ಆಫೀಸಿನ ಮುಖಾಂತರ ಪಡೆದ ಮತ್ತು ಟಪ್ಪಾಲು ಆಫೀಸಿನ ಅಧಿಕಾರಿಗಳ ವಶದಲ್ಲಿಯೇ ಇಡಲ್ಪಟ್ಟ ಹೊಸ ಸಾಲಪತ್ರಗಳ ಬಡ್ಡಿಯ ಮೇಲೆ ಇನ್‌ಕಮ್‌ಟ್ಯಾಕ್ಸು ಹೊರಿಸೋಣಾಗಲಿಕ್ಕಿಲ್ಲ.

ಅರ್ಜಿದಾರರಿಗೆ, ರೂಪಾಯಿ ನಾಣ್ಯದಲ್ಲಿರುವ ಇಂಡಿಯಾ ಗವರ್ನಮೆಂಟಿನವರ ಸೇಕಡಾ 3½ ಬಡ್ಡಿಯ ಸೆಕ್ಯೂರಿಟಿ ಪತ್ರಗಳನ್ನು ಹೊಂದಿದವರು ಅವುಗಳ ಅಂಕಿತ ಮೌಲ್ಯದ ಸೇಕಡಾ 96 ರೂಪಾಯಿ ಪ್ರಕಾರವೂ ಅಥವಾ ಸೇಕಡಾ 3ರ ಬಡ್ಡಿಯ ಸೆಕ್ಯೂರಿಟಿ ಪತ್ರಗಳನ್ನು ಹೊಂದಿದವರು ಅವುಗಳ ಅಂಕಿತ ಮೌಲ್ಯದ ಸೇಕಡಾ 82½ರ ಪ್ರಕಾರವೂ, ಅವರು ಪಡೆಯುವ ಹೊಸ ಸಾಲದ ಮೊಬಲಗಿಗೆ ಸಮಾನವಾಗುವಷ್ಟು ಮೊಬಲಗಿನ ಮಟ್ಟಿಗೆ ಪರಭಾರೆಮಾಡಿ ಹೊಸ ಸಾಲವಾಗಿ ಮಾರ್ಪಡಿಸುವ ಹಕ್ಕುಗಳು ಕೊಡಲ್ಪಡುವುವು.

ಮಾರ್ಪಡಿಸುವ ಹಕ್ಕುಗಳುಳ್ಳವರು ಮಾರ್ಪಡಿಸುವ ಬಗ್ಗೆ ಮಾಡುವ ಅರ್ಜಿಗಳು, 1916ನೇ ಇಸವಿಯ ಅಕ್ಟೋಬರ್ 16ನೇ ತಾರೀಖಿನಿಂದ 1917ನೇ ಇಸವಿಯ ಜನವರಿ 16ನೇ ತಾರೀಖಿನ (ಇದು ಸೇರಿ) ವರೆಗೆ ಅಂಗೀಕರಿಸಲ್ಪಡುವುವು. ಮಾರ್ಪಡಿಸೋಣಾಗುವ ಸೆಕ್ಯೂರಿಟಿ ಪತ್ರಗಳ ಬಾಬತು 1916ನೇ ಇಸವಿಯ ಸಪ್ಟಂಬರು 30 ತಾರೀಖಿನ ವರೆಗಿನ ಬಡ್ಡಿಯು ಮಾರ್ಪಡಿಸುವ ಕಾಲದಲ್ಲಿ ರೊಕ್ಕವಾಗಿ ಸಲಾಯಿಸಲ್ಪಡುವುದು. ಇವುಗಳ ಬದಲಾಗಿ ಸಾದರುಮಾಡಲ್ಪಟ್ಟ ಹೊಸ ಸಾಲದ ಮೇಲಣ ಬಡ್ಡಿಯು 1916ನೇ ಇಸವಿಯ ಅಕ್ಟೋಬರ 1ನೇ ತಾರೀಖಿನಿಂದ ಎಣಿಸಲ್ಪಡುವುದು.

ವಿಪರೀತ ಮಾಹಿತಿ ಅಡಗಿರುವ ನೋಟೀಸಿನ ನಕಲುಗಳು ಮತ್ತು ಅರ್ಜಿಯ ಫಾರಂಗಳನ್ನು ಸೇವಿಂಗ್ಸ್ ಬ್ಯಾಂಕ್ ಕೆಲಸವು ನಿರ್ವಹಿಸಲ್ಪಡುವ ಯಾವ ಪೋಸ್ಟಾಫೀಸಿನಿಂದಾದರೂ ಪಡೆಯಬಹುದು. ಬೇಕಾದರೆ ಇದಕ್ಕೆ ಅನುಬಂಧಿಸಿರುವ ಅರ್ಜಿಯ ಫಾರಮನ್ನೇ ಉಪಯೋಗಿಸಬಹುದು.

1916-1917ನೇ ಇಸವಿಯ ಇಂಡಿಯಾ ಗವರ್ನಮೆಂಟಿನವರು ತೆಗೆಯುವ ಸೇಕಡಾ 4ರ ಬಡ್ಡಿಯ ಕನ್‌ವರ್ಶನ್ ಲೋನ್ ಎಂಬ ಮಾರ್ಪಡಿಸಬಹುದಾದ ಸಾಲದ ಬಗ್ಗೆ ಪೋಸ್ಟು ಆಫೀಸುಗಳ ಪರಿಮುಖವಾಗಿ ಮಾಡುವ ಅರ್ಜಿಯ ನಮೂನೆ.

ಈ ಎಲ್ಲಾ ಸಂಗತಿಗಳನ್ನು ಆಲೋಚಿಸುವಾಗ ಪ್ರಯಾಣಿಕರ ಸೌಕರ್ಯದ ಕಡೆಗೆ ರೈಲು ಲಕ್ಷ್ಯಕೊಡುವದಿಲ್ಲ. ಕಮಿಟಿಯು ಉಪಾಯಗಳನ್ನು ಸೂಚಿಸುವುದಿಲ್ಲೆಂದು ಬಹು ಕಷ್ಟದಿಂದ ಹೇಳಬೇಕಾಗುತ್ತದೆ. "ಪ್ರಯಾಣಿಕರ ಸೌಕರ್ಯ"ವೆಂದರೆ ಅವರನ್ನು ಮಾವನು ಅಳಿಯನನ್ನು ಆದರಾತಿಥ್ಯಮಾಡುವಂತೆ, ರೈಲ ಕಂಪೆನಿಯವರು ಮಾಡುವದಾಗಿ ಯಾರೂ ಅಭಿಪ್ರಾಯಪಡುವುದಿಲ್ಲ. ಮೇಲೆ ಹೇಳಿದಂತೆ ಕ್ಲಪ್ತ ಸ್ಥಳದಲ್ಲಿ ಕ್ಲಪ್ತ ಜನರನ್ನು ಕುಳ್ಳಿರಿಸುವುದು, ಶೌಚಕೂಪದ ವ್ಯವಸ್ಥೆಯನ್ನು ಸರಿಯಾಗಿಡುವುದು, ಮೊದಲಾದ ಸಾಧಾರಣ ವಿಷಯಗಳಾದರೂ ರೈಲ ಪ್ರಯಾಣಸ್ಥರಿಗೆ ಅಗತ್ಯ ಇವೆ. ಈ ಮೂರು ನಾಲ್ಕು ಸಂಗತಿಗಳನ್ನು ಬಿಟ್ಟರೆ ನೀರಿನ ಪೂರವಣೆ ಮುಂತಾದ ಒಂದೆರಡು ಸಂಗತಿಗಳ ವಿಷಯದಲ್ಲಿ ಕಮಿಟಿಯು ಅದಷ್ಟು ಸಮಾಧಾನಕರವಾದ ಅಭಿಪ್ರಾಯವನ್ನು ಕೊಟ್ಟಿದೆ.

ಮಹಾ ಕವಿಗಳ ಅರಸರು.

ಲೇಖಾಂಕ ೧.

ನಮ್ಮೀ ಆರ್ಯಭೂಮಿಯು ಅನಾದಿಕಾಲದ್ದು. ಭೂಮಿಯು ಮಟ್ಟಿಗೆ ಭೂಮಿ ಎಲ್ಲವೂ ಅನಾದಿಕಾಲದ್ದಾದರೂ "ಆರ್ಯಭೂಮಿ"ಯೆಂಬ ಮಾತಿನಲ್ಲಿ ಭೂಪ್ರದೇಶ, ಗಿರಿ-ವನ, ನದಿ-ನದ ಇಷ್ಟನ್ನೇ ಸೇರಿಸಿಕೊಂಡರೆ ಸಾಲದು; 'ಆರ್ಯಭೂಮಿ"ಯೆಂಬ ಮಾತಿನಲ್ಲಿ ಭಾರತೀಯರ ಸಮಾಜ, ವಿದ್ಯೆ, ಕಲೆ, ಶಾಸ್ತ್ರ, ತತ್ವಜ್ಞಾನ, ಸಂಸ್ಕೃತಿ ಮೊದಲಾದವುಗಳ ಸಮಾವೇಶವಾಗುತ್ತದೆ. ಇದೇ ಅಭಿಪ್ರಾಯದಿಂದ ಆರ್ಯಭೂಮಿಯು ಅನಾದಿಕಾಲದ್ದೆಂದು ಮೇಲೆ ಹೇಳಿದೆ. ಐತಿಹಾಸಿಕಕಾಲಕ್ಕಿಂತಲೂ ಪೂರ್ವದಲ್ಲಿ ಈ ಆರ್ಯಭೂಮಿಯ ಅವಸ್ಥೆಯು ಹ್ಯಾಗಿತ್ತೆಂಬುದನ್ನು ಇತಿಹಾಸಭಕ್ತರಿಗೆ ಐತಿಹಾಸಿಕ ಪ್ರಮಾಣಗಳಿಂದ ಒಪ್ಪಿಸುವುದು ಸ್ವಲ್ಪ ಅಸಾಧ್ಯವಾದರೂ ಆದ್ಯವಾಙ್ಮಯವಾದ ಋಗ್ವೇದದಿಂದಾಗಲಿ ಇಲ್ಲವೇ ಅದೇ ತರದ ಪ್ರಾಚೀನ ವಾಙ್ಮಯದಿಂದಾಗಲಿ ವಿವೇಕಿಗಳಿಗೆ ಮತ್ತು ಜಿಜ್ಞಾಸುಗಳಿಗೆ ಆ ವಿಷಯದ ತತ್ವ ನಿರ್ಣಯಕ್ಕೆ ಸಾಹ್ಯವಾಗುವಂತೆ ಎಷ್ಟೋ ಸಂಗತಿಗಳನ್ನು ಎತ್ತಿ ತೋರಿಸಬಹುದು. "ದೇವರು ಇಂದ್ರನನ್ನು ಅರಸನನ್ನಾಗಿ ಆರಿಸಿಕೊಂಡರು" ಎಂಬದೊಂದು ಮಾತು ವೇದದಲ್ಲಿದೆ. ಕೆಲವುಕಾಲ ವೃತ್ರನು ಸ್ವರ್ಗದ ಅರಸನಾದದ್ದೂ, ದೇವತೆಗಳು ಇಂದ್ರನನ್ನೇ ಇಚ್ಛಿಸಿದ್ದೂ, ಪುನಃ ಇಂದ್ರನು ತನ್ನ ಪಟ್ಟವನ್ನು ಕೈವಶಮಾಡಿದ್ದೂ ಇವೇ ಮುಂತಾದ ಎಷ್ಟೋ ಮನೋರಂಜಕ ಕಥೆಗಳು ಋಗ್ವೇದದಲ್ಲಿ ಕಂಡು ಬರುತ್ತವೆ. ದೇವತೆಗಳು ಇಂದ್ರನನ್ನು ಆರಿಸಿದ ಸಂಗತಿಯಿಂದ ಪ್ರಜಾ ಪ್ರತಿನಿಧಿಯ ತತ್ವವು ಆ ಕಾಲದಲ್ಲಿ ಮಾನ್ಯವಿದ್ದು ಈಗಿನ ಸುಧಾರಿಸಿದ ನಮೂನೆಯ ಸ್ವರಾಜ್ಯವನ್ನೇ ಅವರು ಉಪಭೋಗಿಸುತ್ತಿರಬಹುದೆಂಬದೊಂದು ಅನುಮಾನವನ್ನು ಮಾಡಿದರೆ ಅದು ಕೇವಲ ಅಬದ್ಧವಾಗಲಾರದು. ಪ್ರಾಚೀನ ಕಾಲದಲ್ಲಿ ಸ್ವರಾಜ್ಯವೇ ಗೊತ್ತಿದ್ದಿಲ್ಲೆಂದು ಹೇಳಿ ನಮ್ಮ ಮೇಲಿನ ಅನುಮಾನವನ್ನು ತಳ್ಳಿ ಹಾಕುವವರಿಗೆ "ಸ್ವಸ್ತಿ ಸಾಮ್ರಾಜ್ಯಂ ಭೋಜ್ಯಂ ಸ್ವಾರಾಜ್ಯಂ * * * * * * ಸಮಂತಪರ್ಯಾಯೀ ಸ್ಯಾತ್" ಇತ್ಯಾದಿ ವೈದಿಕ ಮಂತ್ರಗಳಲ್ಲಿಯ ಸ್ವರಾಜ್ಯದ ಉಲ್ಲೇಖವನ್ನು ತೋರಿಸಿ ಅವರ ಬಾಯಿಯನ್ನು ಮುಚ್ಚಿಸಬಹುದಾಗಿದೆ. ಈ ಮೇಲಿನ ಸಂಗತಿಗಳಿಂದ ರಾಜ್ಯಶಾಸನ ಕ್ರಮವು ತಿಳಿದು ಬರುವಂತೆ "ಸಮಾನೀ ವ ಆಕೂತಿಃ ಸಮಾನಾಹೃದಯಾನಿವಃ । ಸಮಾನಮಸ್ತುವೋಮನೋ ಯಥಾವಃ ಸುಸಹಾಸತಿ ॥" ಎಂದರೆ ನಿಮ್ಮೆಲ್ಲರ ಅಭಿಪ್ರಾಯ, ಹೃದಯ, ಮನಸ್ಸು ಇವು ಒಂದೇ ಆಗಿದ್ದು ಅದರಿಂದ ನಿಮ್ಮಲ್ಲಿ ಸಂಘ ಶಕ್ತಿಯು ಬೆಳೆಯಲಿ' ಎಂದು ಹೇಳುವ ಮೇಲಿನ ಋಙ್ಮಂತ್ರದಿಂದ ಸಾಮಾಜಿಕ ಮತೈಕ್ಯ, "ವಸಿಷ್ಠಸ್ಯಯಥಾರುಂಧತೀ ತಥಾ ತ್ವಮಪಿಭರ್ತರಿ" ಈ ಮಂತ್ರದಿಂದ ಗೃಹಸಂಸ್ಥೆಯಲ್ಲಿ ಪತಿಪತ್ನಿಗಳ ಐಕ್ಯ, ಪ್ರೀತಿ, ಸುಶಿಕ್ಷಣ, ಮತ್ತು ಉಪನಿಷತ್ತುಗಳಿಂದ ತತ್ವಜ್ಞಾನ ಈ ಎಲ್ಲ ಸಂಗತಿಗಳ ವಸ್ತುಸ್ವರೂಪವು ತಿಳಿದು ಬರುವುದು, ವೇದಕಾಲವನ್ನೇ ಬಿಟ್ಟು ಸ್ಮೃತಿಕಾಲದಲ್ಲಿ ಬಂದರೆ ಆರ್ಯ ಸಂಸ್ಕೃತಿಯ ಉನ್ನತ ಸ್ವರೂಪವು ಇನ್ನೂ ಸ್ಪಷ್ಟವಾಗಿ ಗೋಚರಕ್ಕೆ ಬರುವವು. ಮನುವು ಹೇಳುವ ರಾಜ್ಯಶಾಶನ, ಕಾಯಿದೆ-ಕಾನೂನುಗಳು, ಆಚಾರವಿಚಾರಗಳು ತತ್ತತ್ಕಾಲೀನ ಸಮಾಜದ ಸಂಸ್ಕೃತಿಯನ್ನು ತೋರಿಸುತ್ತವೆ. ಅಲ್ಲದೆ, 'ರಾಜಧರ್ಮ'ವೆಂಬದೊಂದೇ ವಿಷಯವನ್ನಿಟ್ಟುಕೊಂಡು ಮನುವು ಚರ್ಚಿಸಿದ ಸಂಗತಿಗಳನ್ನು ನೋಡಿದರೆ ಅತಿ ಪ್ರಾಚೀನ ಕಾಲದಲ್ಲಿ ಕೂಡ ಆರ್ಯರ ರಾಜ್ಯ ವ್ಯವಸ್ಥೆಯು ಎಷ್ಟು ಸುಧಾರಿಸಿದ ಕ್ರಮದಲ್ಲಿತ್ತೆಂಬುವುದು ನಿಭ್ರಾಂತವಾಗಿ ಗೊತ್ತಾಗುತ್ತದೆ. ಮನುವಿನ "ರಾಜ ಧರ್ಮ"ವನ್ನು ನಾವು ಹಿಂದಿನಿಂದ ವಾಚಕರಿಗೆ ಸ್ವತಂತ್ರ ಲೇಖಗಳ ಮೂಲಕವಾಗಿ ತಿಳಿಸುವವರಿದ್ದ ಕಾರಣ ಈಗ ನಮಗೆ ಅರಸರ ವಿಷಯದಲ್ಲಿ ಮಹಾ ಕವಿಗಳು ಏನು ಅಭಿಪ್ರಾಯಪಡುತ್ತಾರೆಂಬುದನ್ನೇ ಈ ಲೇಖದಲ್ಲಿ ಮುಖ್ಯವಾಗಿ ತೋರಿಸಬೇಕಾಗಿದೆ.

ಹೀಗೆ ತೋರಿಸುವುದರ ನಮ್ಮ ಮುಖ್ಯ ಉದ್ದೇಶವೇನೆಂದರೆ, ಹಿಂದು ಜನರಲ್ಲಿ ಉಚ್ಚ ತರದ ಸಂಸ್ಕೃತಿಯಿದ್ದಿಲ್ಲ, ಉದಾತ್ತ ವಿಚಾರದ ಛಾಯೆ ಕೂಡ ಇದ್ದಿಲ್ಲ, ಇಲ್ಲವೆ ಉನ್ನತ ಭಾವನೆಯ ಮೊಳಿಕೆಯೂ ಹುಟ್ಟಿದ್ದಿಲ್ಲ; ಈ ತರದ ಸ್ಥಿತಿಯು ಹಿಂದು ಸಮಾಜದಿದ್ದುದರಿಂದ ಆ ಹಿಂದು ಅರಸರಲ್ಲಿ ಪ್ರಜಾಹಿತದ ಆಲೋಚನೆಗಳೇ ಮೂಡುತ್ತಿದ್ದಿಲ್ಲ. ಹಿಂದು ಅರಸರು ಕೇವಲ ತಮ್ಮ ಐಶ್ವರ್ಯ ಸುಖದ ಆಳುಗಳಾಗಿ ಪ್ರಜೆಗಳ ದುರವಸ್ಥೆಯ ವಿಷಯದಲ್ಲಿ ಅಂಧರೂ ಆಕ್ರೋಶದ ಕಡೆಗೆ ಕಿವುಡರೂ ಆಗಿದ್ದರು; ಹೆಚ್ಚೇನು ಹೇಳುವುದು, ಅರಸರಲ್ಲಿಯೂ ಪ್ರಜೆಗಳಲ್ಲಿಯೂ ಇರಬೇಕಾದ ಪಾಲ್ಯ ಪಾಲಕ ಭಾವ ಸಂಬಂಧದ ತಂತುಗಳೇ ಕಡಿದುಹೋಗಿ ಅರಸರ ಮಟ್ಟಿಗೆ ಅರಸರು ಮತ್ತು ಪ್ರಜೆಗಳ ಮಟ್ಟಿಗೆ ಪ್ರಜೆಗಳು; ಇಂಥ ಪರಿಸ್ಥಿತಿಯು ಇತ್ತು. ಈ ಸ್ಥಿತಿಯಲ್ಲಿ ಲೋಕಮತದ ಕಡೆಗೆ ಶಾಸಕ ವರ್ಗಕ್ಕೆ ಕಣ್ಣೆತ್ತಿ ನೋಡುವ ಅವಶ್ಯಕತೆಯೇ ಇದ್ದಿಲ್ಲ. ಆ ಕಾಲದ ಅರಸರು ಹೇಳಿದ್ದೇ ಕಾಯಿದೆಗಳು, ಮಾಡಿದ್ದೇ ತೀರ್ಮಾನವು ಮತ್ತು ವಿಧಿಸಿದ್ದೇ ಶಿಕ್ಷೆಯು. ಯಾರ ಜೋಡುಗಳು ಯಾರ ಕಾಲಿಗಿದ್ದರೂ ಕೇಳುವವರು ಯಾರೂ ಇದ್ದಿಲ್ಲ, ನ್ಯಾಯ, ನೀತಿ, ಭೂತದಯೆ, ಲೋಕೋಪಕಾರ ಇವೆಲ್ಲ ಗುಣಗಳು ವಾಚಕರೂಪದಿಂದ ಕೋಶಗಳಲ್ಲಿಯೇ ಇದ್ದವಲ್ಲದೆ ಅವರ ಕಾರಭಾರದಲ್ಲಿ ಇವುಗಳಿಗೆ ಪೂರ್ಣ ಬಹಿಷ್ಕಾರವಿಲ್ಲದಿದ್ದರೂ ಅರ್ಧಚಂದ್ರವೇ ಇತ್ತು! ಸಾರಾಂಶ ಪೂರ್ವಿಕ ಹಿಂದು ಅರಸರ ಶಾಸನ ಕ್ರಮವು ಅನುದಾರಭಾವದ್ದಾಗಿತ್ತೆಂದು ವಿದೇಶೀಯರಲ್ಲಿ ಹಲವರು ಮತ್ತು ನಮ್ಮಲ್ಲಿ ಅನೇಕರು ಅಭಿಪ್ರಾಯಪಡುವರು. ಈ ತರದ ಅಭಿಪ್ರಾಯವು ಉಂಟಾಗಲಿಕ್ಕೆ ಕಾರಣವೇನೆಂದರೆ, ನಮ್ಮ ಪ್ರಾಚೀನ ವಾಙ್ಮಯವನ್ನು ಚಿಕಿತ್ಸಕ ದೃಷ್ಟಿಯಿಂದ ಓದುವವರು ಅತಿ ವಿರಳ. ವಸ್ತುಸ್ಥಿತಿಯು ಹೀಗಿರುವಾಗ ಈ ತರದ ದುರಭಿಪ್ರಾಯದ ಕತ್ತಲೆಯು ಅವರ ಹೃದಯಾಕಾಶವನ್ನು ವ್ಯಾಪಿಸಿಕೊಳ್ಳುವುದು ಸಹಜವೇ. ಆದರೆ ಇದು ನಮ್ಮ ರಾಷ್ಟ್ರೀಯ ಸಮುನ್ನತಿಗೆ ತೀರ ಹಾನಿಕರವು. ಇದನ್ನು ಹೋಗಲಾಡಿಸುವುದು ಪ್ರತಿ ಒಬ್ಬ ದೇಶಶುಭ ಕಾಂಕ್ಷಿಯ ಕರ್ತವ್ಯವಾಗಿರುತ್ತದೆ.

ಇದೇ ಕಾರಣದಿಂದ ನಾವು ಈ ಮುಂದಿನ ಲೇಖಗಳಲ್ಲಿ ಮಹಾ ಕವಿಗಳು ಅರಸರ ವಿಷಯದಲ್ಲಿ ಏನು ಅಭಿಪ್ರಾಯಪಡುತ್ತಾರೆಂಬುದನ್ನು ವಾಚಕರೆದುರಿನಲ್ಲಿಡಲು ಆಲೋಚಿಸಿದ್ದೇವೆ. ಮಹಾ ಕವಿಗಳ ವರ್ಣನೆಯಾಗಲಿ, ಅಭಿಪ್ರಾಯವಾಗಲಿ ಇದು ಇತಿಹಾಸವಲ್ಲೆಂಬ ಸಂಗತಿಯು ನಮಗೂ ಗೊತ್ತೇ ಇದೆ. 'ಇತಿಹಾಸ'ವೆಂಬ ಗಂಭೀರವಾದ ಹೆಸರನ್ನು ಕೊಟ್ಟು ಬರೆದ ಸಂಗತಿಗಳಲ್ಲಿ ಎಷ್ಟೋ ವಿಷಯಗಳು ಅಸತ್ಯ, ಅಪ್ರಾಮಾಣಿಕ ಮತ್ತು ಅಪಲಾಪಾತ್ಮಕ ವೃತ್ತಾಂತಗಳಿಂದ ತುಂಬಿಹೋಗಿವೆಂದು ಶೋಧಕ ವಾಚಕರಿಗೆ ಬೇರೆ ಹೇಳಬೇಕಾದ್ದಿಲ್ಲ. ಹ್ಯಾಗೂ ಇರಲಿ, ನಾವು ಮುಂದೆ ತೋರಿಸಲಿಕ್ಕಿರುವ ಮಹಾ ಕವಿಗಳ ಮಾತುಗಳು ಇತಿಹಾಸದ ಹೆಸರಿನ ಕೆಳಗೆ ಬರುವುದಿಲ್ಲವೆಂಬುವುದು ನಿಜವಿದ್ದರೂ ಆ ಮಹಾ ಕವಿಗಳ ಉಕ್ತಿಗಳಿಂದ ಆಯಾ ವರ್ಣನೆಗಳು ಅಥವಾ ವಿಧಾನಗಳು ಅವ್ಯವಹಾರ್ಯವಿದ್ದಿಲ್ಲ, ಕಿಂಬಹುನಾ ಶ್ರೇಷ್ಠರಾದ ಅರಸರ ಕರ್ತವ್ಯದ ವಿಷಯದಲ್ಲಿ ಆ ಕವಿಗಳ ಕಲ್ಪನೆಯು ಎಷ್ಟು ಸುಧಾರಿಸಿದ್ದಿತ್ತು ಮತ್ತು ಬಹು ಜನ ಸಮಾಜದಲ್ಲಿ ಸಹಾ ಅದೇ ಹ್ಯಾಗೆ ಪ್ರಚಾರದಲ್ಲಿ ಬಂದಿತ್ತೆಂಬ ವಿಷಯಗಳನ್ನು ನಿರ್ವಿಕಾರ ಮನಸ್ಕರು ತಿಳಿದುಕೊಳ್ಳಬಹುದಾಗಿದೆ. ಒಬ್ಬ ಅರ್ವಾಚೀನ ಪಾಶ್ಚಾತ್ಯ ತತ್ವಜ್ಞನು ಹೇಳುವಂತೆಯೇ ನಮ್ಮ ಪ್ರಾಚೀನ ಉಪನಿಷತ್ತಿನಲ್ಲಿ ಸಹಾ ಹೇಳಿದ್ದೇನೆಂದರೆ, "ಯನ್ಮನಸಾಧ್ಯಾಯತಿ ತದ್‌ವಾಚಾವದತಿ" ಎಂದರೆ ಒಬ್ಬನು ಮನಸ್ಸಿನಿಂದ ಯಾವುದನ್ನು ಧ್ಯಾನಿಸುವನೊ ಅದನ್ನೇ ಆಡಿ ತೋರಿಸುವನು. ಮನಸ್ಸಿನಲ್ಲಾದರೂ ಅವಸ್ತುವಿನ ಧ್ಯಾನವು—ಚಿಂತನವು ಅಸಾಧ್ಯವು. ಈ ನ್ಯಾಯದಿಂದ ನೋಡಿದರೆ ಕವಿಗಳು ಕಣ್ಣೆದುರಿನಲ್ಲಿದ್ದುದನ್ನೇ ಧ್ಯಾನಿಸುತ್ತಾರೆ ಮತ್ತು ಆಡಿ ತೋರಿಸುತ್ತಾರೆಂದು ನಿಃಸಂಶಯವಾಗಿ ಹೇಳಬಹುದು. ಹೀಗಿರುವುದರಿಂದ ಕವಿಗಳ ಮಾತೆಂದರೆ ಕೇವಲ ಕಲ್ಪನಾಕಥೆಯೆಂದು ತಿಳಿದುಕೊಳ್ಳುವುದು ಶುದ್ಧ ತಪ್ಪಾಗಿದೆ. ರಾಷ್ಟ್ರದ ಮೇಲೆ ನಾನಾ ತರದ ಆಪತ್ತುಗಳು ಬಂದು ಒದಗುವಾಗ ಅವುಗಳನ್ನು ಬಗೆಹರಿಸಲು ಪ್ರಾಜ್ಞರಿಗೆ ಅಥವಾ ಬಲವಂತರಿಗೆ ಪ್ರೇರಿಸುವವು ಮಹಾ ಕವಿಗಳ ಮಾತುಗಳೇ ಸರಿ. ಈ ನಮ್ಮ ~~ವಿಧಾನವು ಪಾಶ್ಚಾತ್ಯ ದೇಶದ ಇತಿಹಾಸವನ್ನು ಕಲಿತವರಿಗೆ ನವೀನವಾಗಿ ತೋರಲಾ~~ರದು. ಒಟ್ಟಾರೆ ಹೇಳುವ ತಾತ್ಪರ್ಯವೇನೆಂದರೆ, ಕವಿಗಳ ಮಾತು ನಿರ್ಮಾಲ್ಯವಲ್ಲ, ಆದರೆ ಸತ್ಯಪೂರ್ಣವಾದ ಹಿತೋಕ್ತಿಗಳು. ಅವರು ಬೇರೆ ಬೇರೆ ವಿಷಯದಲ್ಲಿ ಅಭಿಪ್ರಾಯಪಡುವಂತೆ ಅರಸರ ವಿಷಯದಲ್ಲಿಯೂ ಯಾವ ಅಭಿಪ್ರಾಯಪಡುತ್ತಾರೆಂಬುವುದು ನೋಡುವುದು ಅಪ್ರಯೋಜಕವೆಂದು ಯಾರೂ ಹೇಳಲಾರರು. ಆದುದರಿಂದ ಬರುವ ಸಂಚಿಕೆಯಲ್ಲಿ ಈ ವಿಷಯದ ಮಹಾ ಕವಿಗಳ ಮಾತುಗಳನ್ನು ಕೊಟ್ಟು ಅಲ್ಲಲ್ಲಿ ಸಂದರ್ಭಾನುಸಾರ ನಮ್ಮ ವಿಚಾರಗಳನ್ನು ಸಹಾ ತೋರಪಡಿಸಬೇಕೆಂಬ ಉದ್ದೇಶವನ್ನಿಟ್ಟುಕೊಂಡಿದ್ದೇವೆ. ಇಷ್ಟೇ ಪ್ರಸ್ತಾವನೆಯು ಸಾಕು!

ಅತಿ ಅವಮಾನಕರ ಗುಹ್ನೆಯು!

ಗುಹ್ನೆ ಮಾಡುವುದು ಎಂದರೆ ಅಪರಾಧಮಾಡುವುದು ಅವಮಾನಕರವೇ! ಮತ್ತು ಆ ಅಪರಾಧವು ಕಳ್ಳತನ, ಲೂಟಿ, ಫೋರ್ಜರಿ ಮುಂತಾದ್ದು ಯಾವುದೇ ಇರಲಿ. ಅದರಲ್ಲಿಯೂ ದೇಶದ ಸಂರಕ್ಷಣೆಗಾಗಿ ಆತ್ಮಾರ್ಪಣೆಯನ್ನು ಮಾಡುವವರಾಗಿ ಯುದ್ಧಭೂಮಿಯಲ್ಲಿ ಕಾದಾಡುತ್ತಿದ್ದ ಬಂಟರಿಗೆ ಸಾಹ್ಯಾರ್ಥವಾಗಿ ಕಳುಹಿಸಿಕೊಡುವ ಜಿನಸುಗಳನ್ನು ಅಪಹರಿಸುವುದು ಇನ್ನೂ ಅವಮಾನಕರವು; ಪುನಃ ಅದರಲ್ಲಿಯೂ ಆ ಜಿನಸುಗಳನ್ನು ಕಾಯಲಿಕ್ಕಿದ್ದ ಮೇಲಾಧಿಕಾರಿಗಳಾದವರೇ ಅವುಗಳನ್ನು ಕದಿಯುವುದು ಬಹಳೇ ಅವಮಾನಕರವು; ಮತ್ತು ಆ ಅಧಿಕಾರಿಗಳು ಯುರೋಪಿಯನರಂಥ ಉಚ್ಚ ಜನಾಂಗದವರಾಗಿದ್ದುವಂತು ಅತಿ ಅವಮಾನಕರವು. ಆದರೆ ಇಂಥಾ ಅತಿ ಅವಮಾನಕರವಾದ ನಿಂದ್ಯಸಂಗತಿ ಕೂಡಾ ಮುಂಬೈ ಬಂದರದಲ್ಲಿಯೇ ನಡೆದು ಆ ಅಪರಾಧಿಗಳಿಗೆ ತಕ್ಕ ಶಿಕ್ಷೆಯು ಕೂಡಾ ಸರಕಾರದವರಿಂದ ವಿಧಿಸೋಣಾಯಿತೆಂದು ಮುಂಬೈಯಿಯ ಕಡೆಯ ವೃತ್ತಪತ್ರಿಕೆಗಳು ಹೇಳುತ್ತವೆ. ಮೆಸಪೊಟಾಮಿಯಾ ಎಂಬಲ್ಲಿಯ ಸೈನ್ಯಕ್ಕೆ ಕಳುಹಿಸಬೇಕಾದ ಧಾನ್ಯ ಮುಂತಾದ್ದು ಅದನ್ನು ಮೊದಲು ಮುಂಬಯಿ ಬಂದರದ ವಖಾರೆಗಳಲ್ಲಿ ತುಂಬಿಸಿ ಅಲ್ಲಿಂದ ಅದು ಮುಂದೆಹೋಗುತ್ತದೆ. ಈ ವಖಾರೆಗಳ ರಖವಾಲಿಗಾಗಿ ನೇಮಿಸಲ್ಪಟ್ಟ ಆರು ಜನರು ಆ ವಖಾರೆಯೊಳಗಿನ ಮಾಲನ್ನು ಕಳವುಮಾಡುತ್ತಿದ್ದ ಸಂಗತಿಯು ಕೆಲವು ದಿವಸಗಳ ಮುಂಚೆ ಬಹಿರಂಗಕ್ಕೆ ಬಂದು ಅವರಿಗೆ ಆರು ತಿಂಗಳ ಮೊದಲು ಮಾಡಿ ಐದು ವರ್ಷಗಳ ಕಠಿಣ ಸಜೆಯು ವಿಧಿಸೋಣಾಯಿತು. ಈ ಅಪರಾಧಿಗಳ ಸ್ಮಿಥ, ಗೆಪ್ಪ, ಅರ್ಲ ಮುಂತಾದ ಹೆಸರುಗಳನ್ನು ನೋಡುವಾಗ ಇವರು ಹಿಂದಿಗಳಲ್ಲ, ಯುರೋಪಿಯನರೇ ಆಗಿರಬೇಕು. ಹಿಂದೀ ಜನರಲ್ಲಿ ಪ್ರಾಮಾಣಿಕತ್ವವು ಕಡಿಮೆಯೆಂದು ತಿಳಿದುಕೊಂಡು ಈ ಕೆಲಸದಲ್ಲಿ ಈ ಜನರ ಯೋಜನೆಯನ್ನು ಮಾಡಿದ್ದಾಗಿರಬಹುದು. ಆದರೆ ಇವರು ತೋರಿಸಿದ ಪ್ರಾಮಾಣಿಕತನವಂತು ಈಗ ಎಲ್ಲರಿಗೆ ಗೊತ್ತೇ ಆಯಿತು. ಈ ವಿಷಯವಾಗಿ ಲಕ್ಷ್ಯದಲ್ಲಿಡತಕ್ಕ ಇನ್ನೊಂದು ಸಂಗತಿಯಾವುದೆಂದರೆ, ಈ ಆರು ಅಪರಾಧಿಗಳಲ್ಲಿ ಇಬ್ಬರು ಪೂರ್ವಾಪರಾಧಿಗಳೇ. ಒಬ್ಬನು ಮೊದಲು ಮೂರುಸಾರಿ ಜೈಲ ರಂಗಸ್ಥಲವನ್ನು ಅಲಂಕರಿಸಿದ್ದನು! ಇನ್ನೊಬ್ಬನು ಮಾತ್ರ ಒಂದೇ ಸಾರಿ! ಈ ಸಂಗತಿಗಳನ್ನು ಪರ್ಯಾಲೋಚಿಸಿದರೆ ಸಿ. ಐ. ಡಿ. ಯವರಂಥಾ ಇಲಾಖೆಯವರು ಇಂಥವರ ವಿಷಯದಲ್ಲಿ ಎಷ್ಟು ಉದಾಸೀನರಾಗಿದ್ದಾರೆಂಬುವುದು ಸ್ಪಷ್ಟವಾಗುತ್ತದೆ. ಅದೇ ಹಿಂದೀ ಗುಹ್ನೇಗಾರನಿಗೆ ಇಂಥಾದ್ದೊಂದು ಕೆಲಸವು ಸಿಗುವಹಾಗಿದೆಯೇ? ಹಿಂದೀ ರಾಜಕೀಯ ಗುಹ್ನೆಗಾರರ ನೆರಳಿದ್ದಲ್ಲೆಲ್ಲ ತಿರುಗಾಡಿಕೊಂಡಿದ್ದು ಅವರ ಕುಲಗೋತ್ರಗಳ ಚರಿತ್ರೆಯನ್ನು ಸಾಂಗವಾಗಿ ಕಲಿತುಕೊಂಡಿರುವ ಸಿ. ಐ. ಡಿ. ಖಾತೆಗೆ ಇಂಥಾ ಯುರೋಪಿಯನ ಅಪರಾಧಿಗಳ—ಅದರಲ್ಲಿಯೂ ನೈತಿಕದೃಷ್ಟಿಯಿಂದ ಹೀನವಾದ ಅಪರಾಧಗಳನ್ನು ಮಾಡಿದವರ—ಸಂಗತಿಯು ಈ ಹೊಸ ಶಿಕ್ಷೆಯಾಗುವದಕ್ಕಿಂತ ಮೊದಲು ಲವಮಾತ್ರವೂ ತಿಳಿದಿರದೆ ಇರುವಂಥಾದ್ದು ಅತ್ಯಂತ ಖೇದಕರವು.

ಪಂಗಡದವರು.

ನಮ್ಮ ಕನ್ನಡಾ ಜಿಲ್ಲೆಯಲ್ಲಿ ಅನೇಕ ಪಂಗಡದ ಜನರು ಇರುತ್ತಾರೆ. ಪಂಗಡಗಳಿಗೆ ಮುಖ್ಯಸ್ಥರು ಇರುವರು. ಪಂಗಡಕ್ಕೆ ಸೇರಿದ ಜನರ ಹಿತವನ್ನು ಬಯಸಿ ಕಾರ್ಯಸಾಧನ ಮಾಡುವವರು ಮುಖಂಡರು. ಪಂಗಡದವರು ಮುಖಂಡರ ಮತದಂತೆ ತಮ್ಮ ಜಾತಿಯ ಧರ್ಮದ ಮತದ ಕಟ್ಟಳೆಗಳಿಗೆ ಅನುಕೂಲವಾಗಿ ನಡಕೊಳ್ಳುತ್ತಾರೆ. ಒಂದು ರಾಜ್ಯವನ್ನು ನಡಿಸುವಷ್ಟು ಘನತರವಾದ ಪ್ರಯತ್ನವು ಮುಖಂಡರು ಮಾಡಬೇಕಾಗಿರುತ್ತದೆ. ಇಂಥಾ ಪದ್ಧತಿಯು ನಮ್ಮಲ್ಲಿ ಪೂರ್ವದಿಂದಲೂ ನಡೆದು ಬಂದಿದೆ. ಪ್ರತಿ ಗ್ರಾಮದಲ್ಲಿಯೂ ಇದೇ ರೀತಿ ಪಂಗಡಗಳು ಇರುತ್ತವೆ. ಹತ್ತೆಂಟು ಜಾತಿಗಳವರು ಒಂದು ಸ್ಥಳದಲ್ಲಿ ಸೇರುವದು ಅಗತ್ಯವಿರುವದಾದರೆ ಆಯಾಯ ಜಾತಿಯ ಮುಖಂಡರಿಗೆ ಜರಮಾಡಿದರೆ ಮುಖಂಡರು ತಮ್ಮ ಪಂಗಡದವರನ್ನು ಕೂಡಿ ಬರುವದುಂಟು. ಮುಖಂಡರು ತಮ್ಮ ಜಾತಿಯಲ್ಲಿ ನಡಿಯುವ ಶುಭಕಾರ್ಯಗಳಲ್ಲಿ ಮತ್ತು ಮರಣಕ್ಕೆ ಸಂಬಂಧವಾದ ಕಾರ್ಯಗಳಲ್ಲಿ ಪ್ರತಿಒಂದು ಕಾಲದಲ್ಲಿ ಹಾಜ

ಹೀಗೆ ತೋರಿಸುವುದರ ನಮ್ಮ ಮುಖ್ಯ ಉದ್ದೇಶವೇನೆಂದರೆ, ಹಿಂದು ಜನರಲ್ಲಿ ಉಚ್ಚ ತರದ ಸಂಸ್ಕೃತಿಯಿದ್ದಿಲ್ಲ, ಉದಾತ್ತ ವಿಚಾರದ ಛಾಯೆ ಕೂಡ ಇದ್ದಿಲ್ಲ, ಇಲ್ಲವೆ ಉನ್ನತ ಭಾವನೆಯ ಮೊಳಿಕೆಯೂ ಹುಟ್ಟಿದ್ದಿಲ್ಲ; ಈ ತರದ ಸ್ಥಿತಿಯು ಹಿಂದು ಸಮಾಜದಿದ್ದುದರಿಂದ ಆ ಹಿಂದು ಅರಸರಲ್ಲಿ ಪ್ರಜಾಹಿತದ ಆಲೋಚನೆಗಳೇ ಮೂಡುತ್ತಿದ್ದಿಲ್ಲ. ಹಿಂದು ಅರಸರು ಕೇವಲ ತಮ್ಮ ಐಶ್ವರ್ಯ ಸುಖದ ಆಳುಗಳಾಗಿ ಪ್ರಜೆಗಳ ದುರವಸ್ಥೆಯ ವಿಷಯದಲ್ಲಿ ಅಂಧರೂ ಆಕ್ರೋಶದ ಕಡೆಗೆ ಕಿವುಡರೂ ಆಗಿದ್ದರು; ಹೆಚ್ಚೇನು ಹೇಳುವುದು, ಅರಸರಲ್ಲಿಯೂ ಪ್ರಜೆಗಳಲ್ಲಿಯೂ ಇರಬೇಕಾದ ಪಾಲ್ಯ ಪಾಲಕ ಭಾವ ಸಂಬಂಧದ ತಂತುಗಳೇ ಕಡಿದುಹೋಗಿ ಅರಸರ ಮಟ್ಟಿಗೆ ಅರಸರು ಮತ್ತು ಪ್ರಜೆಗಳ ಮಟ್ಟಿಗೆ ಪ್ರಜೆಗಳು; ಇಂಥ ಪರಿಸ್ಥಿತಿಯು ಇತ್ತು. ಈ ಸ್ಥಿತಿಯಲ್ಲಿ ಲೋಕಮತದ ಕಡೆಗೆ ಶಾಸಕ ವರ್ಗಕ್ಕೆ ಕಣ್ಣೆತ್ತಿ ನೋಡುವ ಆವಶ್ಯಕತೆಯೇ ಇದ್ದಿಲ್ಲ. ಆ ಕಾಲದ ಅರಸರು ಹೇಳಿದ್ದೇ ಕಾಯಿದೆಗಳು, ಮಾಡಿದ್ದೇ ತೀರ್ಮಾನವು ಮತ್ತು ವಿಧಿಸಿದ್ದೇ ಶಿಕ್ಷೆಯು. ಯಾರ ಜೋಡುಗಳು ಯಾರ ಕಾಲಿಗಿದ್ದರೂ ಕೇಳುವವರು ಯಾರೂ ಇದ್ದಿಲ್ಲ, ನ್ಯಾಯ, ನೀತಿ, ಭೂತದಯೆ, ಲೋಕೋಪಕಾರ ಇವೆಲ್ಲ ಗುಣಗಳು ವಾಚಕರೂಪದಿಂದ ಕೋಶಗಳಲ್ಲಿಯೇ ಇದ್ದವಲ್ಲದೆ ಅವರ ಕಾರಭಾರದಲ್ಲಿ ಇವುಗಳಿಗೆ ಪೂರ್ಣ ಬಹಿಷ್ಕಾರವಿಲ್ಲದಿದ್ದರೂ ಅರ್ಧಚಂದ್ರವೇ ಇತ್ತು! ಸಾರಾಂಶ ಪೂರ್ವಿಕ ಹಿಂದು ಅರಸರ ಶಾಸನ ಕ್ರಮವು ಅನುದಾರಭಾವದ್ದಾಗಿತ್ತೆಂದು ವಿದೇಶೀಯರಲ್ಲಿ ಹಲವರು ಮತ್ತು ನಮ್ಮಲ್ಲಿ ಅನೇಕರು ಅಭಿಪ್ರಾಯಪಡುವರು. ಈ ತರದ ಅಭಿಪ್ರಾಯವು ಉಂಟಾಗಲಿಕ್ಕೆ ಕಾರಣವೇನೆಂದರೆ, ನಮ್ಮ ಪ್ರಾಚೀನ ವಾಙ್ಮಯವನ್ನು ಚಿಕಿತ್ಸಕ ದೃಷ್ಟಿಯಿಂದ ಓದುವವರು ಅತಿ ವಿರಳ, ವಸ್ತುಸ್ಥಿತಿಯು ಹೀಗಿರುವಾಗ ಈ ತರದ ದುರಭಿಪ್ರಾಯದ ಕತ್ತಲೆಯು ಅವರ ಹೃದಯಾಕಾಶವನ್ನು ವ್ಯಾಪಿಸಿಕೊಳ್ಳುವುದು ಸಹಜವೇ. ಆದರೆ ಇದು ನಮ್ಮ ರಾಷ್ಟ್ರೀಯ ಸಮುನ್ನತಿಗೆ ತೀರ ಹಾನಿಕರವು. ಇದನ್ನು ಹೋಗಲಾಡಿಸುವುದು ಪ್ರತಿ ಒಬ್ಬ ದೇಶಶುಭ ಕಾಂಕ್ಷಿಯ ಕರ್ತವ್ಯವಾಗಿರುತ್ತದೆ.

ಇದೇ ಕಾರಣದಿಂದ ನಾವು ಈ ಮುಂದಿನ ಲೇಖಗಳಲ್ಲಿ ಮಹಾ ಕವಿಗಳು ಅರಸರ ವಿಷಯದಲ್ಲಿ ಏನು ಅಭಿಪ್ರಾಯಪಡುತ್ತಾರೆಂಬುದನ್ನು ವಾಚಕರೆದುರಿನಲ್ಲಿಡಲು ಆಲೋಚಿಸಿದ್ದೇವೆ. ಮಹಾ ಕವಿಗಳ ವರ್ಣನೆಯಾಗಲಿ, ಅಭಿಪ್ರಾಯವಾಗಲಿ ಇದು ಇತಿಹಾಸವಲ್ಲೆಂಬ ಸಂಗತಿಯು ನಮಗೂ ಗೊತ್ತೇ ಇದೆ. 'ಇತಿಹಾಸ'ವೆಂಬ ಗಂಭೀರವಾದ ಹೆಸರನ್ನು ಕೊಟ್ಟು ಬರೆದ ಸಂಗತಿಗಳಲ್ಲಿ ಎಷ್ಟೋ ವಿಷಯಗಳು ಅಸತ್ಯ, ಅಪ್ರಾಮಾಣಿಕ ಮತ್ತು ಅಪಲಾಪಾತ್ಮಕ ವೃತ್ತಾಂತಗಳಿಂದ ತುಂಬಿಹೋಗಿವೆಂದು ಶೋಧಕ ವಾಚಕರಿಗೆ ಬೇರೆ ಹೇಳಬೇಕಾದ್ದಿಲ್ಲ. ಹ್ಯಾಗೂ ಇರಲಿ, ನಾವು ಮುಂದೆ ತೋರಿಸಲಿಕ್ಕಿರುವ ಮಹಾ ಕವಿಗಳ ಮಾತುಗಳು ಇತಿಹಾಸದ ಹೆಸರಿನ ಕೆಳಗೆ ಬರುವುದಿಲ್ಲವೆಂಬುವುದು ನಿಜವಿದ್ದರೂ ಆ ಮಹಾ ಕವಿಗಳ ಉಕ್ತಿಗಳಿಂದ ಆಯಾ ವರ್ಣನೆಗಳು ಅಥವಾ ವಿಧಾನಗಳು ಅವ್ಯವಹಾರ್ಯವಿದ್ದಿಲ್ಲ, ಕಿಂಬಹುನಾ ಶ್ರೇಷ್ಠರಾದ ಅರಸರ ಕರ್ತವ್ಯದ ವಿಷಯದಲ್ಲಿ ಆ ಕವಿಗಳ ಕಲ್ಪನೆಯು ಎಷ್ಟು ಸುಧಾರಿಸಿದ್ದಿತ್ತು ಮತ್ತು ಬಹು ಜನ ಸಮಾಜದಲ್ಲಿ ಸಹಾ ಅದೇ ಹ್ಯಾಗೆ ಪ್ರಚಾರದಲ್ಲಿ ಬಂದಿತ್ತೆಂಬ ವಿಷಯಗಳನ್ನು ನಿರ್ವಿಕಾರ ಮನಸ್ಕರು ತಿಳಿದುಕೊಳ್ಳಬಹುದಾಗಿದೆ. ಒಬ್ಬ ಅರ್ವಾಚೀನ ಪಾಶ್ಚಾತ್ಯ ತತ್ವಜ್ಞನು ಹೇಳುವಂತೆಯೇ ನಮ್ಮ ಪ್ರಾಚೀನ ಉಪನಿಷತ್ತಿನಲ್ಲಿ ಸಹಾ ಹೇಳಿದ್ದೇನೆಂದರೆ, "ಯನ್ಮನಸಾಧ್ಯಾಯತಿ ತದ್ವಾಚಾವದತಿ" ಎಂದರೆ ಒಬ್ಬನು ಮನಸ್ಸಿನಿಂದ ಯಾವುದನ್ನು ಧ್ಯಾನಿಸುವನೊ ಅವನ್ನೇ ಆಡಿ ತೋರಿಸುವನು. ಮನಸ್ಸಿನಲ್ಲಾದರೂ ಅವಸ್ತುವಿನ ಧ್ಯಾನವು—ಚಿಂತನವು ಅಸಾಧ್ಯವು. ಈ ನ್ಯಾಯದಿಂದ ನೋಡಿದರೆ ಕವಿಗಳು ಕಣ್ಣೆದುರಿನಲ್ಲಿದ್ದುದನ್ನೇ ಧ್ಯಾನಿಸುತ್ತಾರೆ ಮತ್ತು ಆಡಿ ತೋರಿಸುತ್ತಾರೆಂದು ನಿಃಸಂಶಯವಾಗಿ ಹೇಳಬಹುದು. ಹೀಗಿರುವುದರಿಂದ ಕವಿಗಳ ಮಾತೆಂದರೆ ಕೇವಲ ಕಲ್ಪನಾಕಥೆಯೆಂದು ತಿಳಿದುಕೊಳ್ಳುವುದು ಶುದ್ಧ ತಪ್ಪಾಗಿದೆ. ರಾಷ್ಟ್ರದ ಮೇಲೆ ನಾನಾ ತರದ ಆಪತ್ತುಗಳು ಬಂದು ಒದಗುವಾಗ ಅವುಗಳನ್ನು ಬಗೆಹರಿಸಲು ಪ್ರಾಜ್ಞರಿಗೆ ಅಥವಾ ಬಲವಂತರಿಗೆ ಪ್ರೇರಿಸುವವು ಮಹಾ ಕವಿಗಳ ಮಾತುಗಳೇ ಸರಿ. ಈ ನಮ್ಮ ವಿಧಾನವು ಪಾಶ್ಚಾತ್ಯ ದೇಶದ ಇತಿಹಾಸವನ್ನು ಕಲಿತವರಿಗೆ ನವೀನವಾಗಿ ತೋರಲಾರದು. ಒಟ್ಟಾರೆ ಹೇಳುವ ತಾತ್ಪರ್ಯವೇನೆಂದರೆ, ಕವಿಗಳ ಮಾತು ನಿರ್ಮಾಲ್ಯವಲ್ಲ, ಆದರೆ ಸತ್ಯಪೂರ್ಣವಾದ ಹಿತೋಕ್ತಿಗಳು. ಅವರು ಬೇರೆ ಬೇರೆ ವಿಷಯದಲ್ಲಿ ಅಭಿಪ್ರಾಯಪಡುವಂತೆ ಅರಸರ ವಿಷಯದಲ್ಲಿಯೂ ಯಾವ ಅಭಿಪ್ರಾಯಪಡುತ್ತಾರೆಂಬುವುದು ನೋಡುವುದು ಅಪ್ರಯೋಜಕವೆಂದು ಯಾರೂ ಹೇಳಲಾರರು. ಆದುದರಿಂದ ಬರುವ ಸಂಚಿಕೆಯಲ್ಲಿ ಈ ವಿಷಯದ ಮಹಾ ಕವಿಗಳ ಮಾತುಗಳನ್ನು ಕೊಟ್ಟು ಅಲ್ಲಲ್ಲಿ ಸಂದರ್ಭಾನುಸಾರ ನಮ್ಮ ವಿಚಾರಗಳನ್ನು ಸಹಾ ತೋರಪಡಿಸಬೇಕೆಂಬ ಉದ್ದೇಶವನ್ನಿಟ್ಟುಕೊಂಡಿದ್ದೇವೆ. ಇಷ್ಟೇ ಪ್ರಸ್ತಾವನೆಯು ಸಾಕು!

ಅತಿ ಅಪಮಾನಕರ ಗುನ್ಹೆಯು!

ಗುನ್ಹೆ ಮಾಡುವುದು ಎಂದರೆ ಅಪರಾಧಮಾಡುವುದು ಅವಮಾನಕರವೇ! ಮತ್ತು ಆ ಅಪರಾಧವು ಕಳ್ಳತನ, ಲೂಟಿ, ಫೋರ್ಜರಿ ಮುಂತಾದು ಯಾವುದೇ ಇರಲಿ. ಅದರಲ್ಲಿಯೂ ದೇಶದ ಸಂರಕ್ಷಣೆಗಾಗಿ ಆತ್ಮಾರ್ಪಣೆಯನ್ನು ಮಾಡುವವರಾಗಿ ಯುದ್ಧಭೂಮಿಯಲ್ಲಿ ಕಾದಾಡುತ್ತಿದ್ದ ಬಂಟರಿಗೆ ಸಾಹ್ಯಾರ್ಥವಾಗಿ ಕಳುಹಿಸಿಕೊಡುವ ಜೀನಸುಗಳನ್ನು ಅಪಹರಿಸುವುದು ಇನ್ನೂ ಅವಮಾನಕರವು; ಪುನಃ ಅದರಲ್ಲಿಯೂ ಆ ಜೀನಸುಗಳನ್ನು ಕಾಯಲಿಕ್ಕಿದ್ದ ಮೇಲಾಧಿಕಾರಿಗಳಾದವರೇ ಅವುಗಳನ್ನು ಕದಿಯುವುದು ಬಹಳೇ ಅವಮಾನಕರವು; ಮತ್ತು ಆ ಅಧಿಕಾರಿಗಳು ಯುರೋಪಿಯನರಂಥ ಉಚ್ಚ ಜನಾಂಗದವರಾಗಿರುವುದಂತು ಅತಿ ಅವಮಾನಕರವು ಆದರೆ ಇಂಥಾ ಅತಿ ಅವಮಾನಕರವಾದ ನಿಂದ್ಯಸಂಗತಿ ಕೂಡಾ 'ಮುಂಬೈ ಬಂದರದಲ್ಲಿಯೇ ನಡೆದು ಆ ಅಪರಾಧಿಗಳಿಗೆ ತಕ್ಕ ಶಿಕ್ಷೆಯು ಕೂಡಾ ಸರಕಾರದವರಿಂದ ವಿಧಿಸೋಣಾಯಿತೆಂದು ಮುಂಬೈಯಿಯ ಕಡೆಯ ವೃತ್ತಪತ್ರಿಕೆಗಳು ಹೇಳುತ್ತವೆ. ಮೆಸಪೊಟಾಮಿಯಾ ಎಂಬಲ್ಲಿಯ ಸೈನ್ಯಕ್ಕೆ ಕಳುಹಿಸಬೇಕಾದ ಧಾನ್ಯ ಮುಂತಾದ್ದು ಅದನ್ನು ಮೊದಲು ಮುಂಬಯಿ ಬಂದರದ ವಖಾರೆಗಳಲ್ಲಿ ತುಂಬಿಸಿ ಅಲ್ಲಿಂದ ಅದು ಮುಂದೆಹೋಗುತ್ತದೆ. ಈ ವಖಾರೆಗಳ ರಖವಾಲೆಗಾಗಿ ನೇಮಿಸಲ್ಪಟ್ಟ ಆರು ಜನರು ಆ ವಖಾರೆಯೊಳಗಿನ ಮಾಲನ್ನು ಕಳವುಮಾಡುತ್ತಿದ್ದ ಸಂಗತಿಯು ಕೆಲವು ದಿವಸಗಳ ಮುಂಚೆ ಬಹಿರಂಗಕ್ಕೆ ಬಂದು ಅವರಿಗೆ ಆರು ತಿಂಗಳ ಮೊದಲು ಮಾಡಿ ಐದು ವರ್ಷಗಳ ಕಠಿಣ ಸಜೆಯು ವಿಧಿಸೋಣಾಯಿತು. ಈ ಅಪರಾಧಿಗಳ ಸ್ಮಿಥ, ಗೆಸ್ಟ್, ಅರ್ಲ ಮುಂತಾದ ಹೆಸರುಗಳನ್ನು ನೋಡುವಾಗ ಇವರು ಹಿಂದಿಗಳಲ್ಲ, ಯುರೋಪಿಯನರೇ ಆಗಿರಬೇಕು. ಹಿಂದೀ ಜನರಲ್ಲಿ ಪ್ರಾಮಾಣಿಕತ್ವವು ಕಡಿಮೆಯೆಂದು ತಿಳಿದುಕೊಂಡು ಈ ಕೆಲಸದಲ್ಲಿ ಈ ಜನರ ಯೋಜನೆಯನ್ನು ಮಾಡಿದ್ದಾಗಿರಬಹುದು. ಆದರೆ ಇವರು ತೋರಿಸಿದ ಪ್ರಾಮಾಣಿಕತನವಂತು ಈಗ ಎಲ್ಲರಿಗೆ ಗೊತ್ತೇ ಆಯಿತು. ಈ ವಿಷಯವಾಗಿ ಲಕ್ಷ್ಯದಲ್ಲಿಡತಕ್ಕ ಇನ್ನೊಂದು ಸಂಗತಿಯಾವುದೆಂದರೆ, ಈ ಆರು ಅಪರಾಧಿಗಳಲ್ಲಿ ಇಬ್ಬರು ಪೂರ್ವಾಪರಾಧಿಗಳೇ. ಒಬ್ಬನು ಮೊದಲು ಮೂರುಸಾರಿ ಜೈಲ ರಂಗಸ್ಥಲವನ್ನು ಅಲಂಕರಿಸಿದ್ದನು! ಇನ್ನೊಬ್ಬನು ಮಾತ್ರ ಒಂದೇ ಸಾರಿ! ಈ ಸಂಗತಿಗಳನ್ನು ಪರ್ಯಾಲೋಚಿಸಿದರೆ ಸಿ. ಐ. ಡಿ. ಯವರಂಥಾ ಇಲಾಖೆಯವರು ಇಂಥವರ ವಿಷಯದಲ್ಲಿ ಎಷ್ಟು ಉದಾಸೀನರಾಗಿದ್ದಾರೆಂಬುವುದು ಸ್ಪಷ್ಟವಾಗುತ್ತದೆ. ಅದೇ ಹಿಂದೀ ಗುನ್ಹೇಗಾರನಿಗೆ ಇಂಥಾದ್ದೊಂದು ಕೆಲಸವು ಸಿಗುವಹಾಗಿದೆಯೇ? ಹಿಂದೀ ರಾಜಕೀಯ ಗುನ್ಹೆಗಾರರ ನೆರಳಿದ್ದಲ್ಲೆಲ್ಲ ತಿರುಗಾಡಿಕೊಂಡಿದ್ದು ಅವರ ಕುಲಗೋತ್ರಗಳ ಚರಿತ್ರೆಯನ್ನು ಸಾಂಗವಾಗಿ ಕಲಿತುಕೊಂಡಿರುವ ಸಿ. ಐ. ಡಿ. ಖಾತೆಗೆ ಇಂಥಾ ಯುರೋಪಿಯನ ಅಪರಾಧಿಗಳ—ಅದರಲ್ಲಿಯೂ ನೈತಿಕದೃಷ್ಟಿಯಿಂದ ಹೀನವಾದ ಅಪರಾಧಗಳನ್ನು ಮಾಡಿದವರ—ಸಂಗತಿಯು ಈ ಹೊಸ ಶಿಕ್ಷೆಯಾಗುವದಕ್ಕಿಂತ ಮೊದಲು ಲವಮಾತ್ರವೂ ತಿಳಿದಿರದೆ ಇರುವಂಥಾದ್ದು ಅತ್ಯಂತ ಖೇದಕರವು.

ಪಂಗಡದವರು.

ನಮ್ಮ ಕನ್ನಡಾ ಜಿಲ್ಲೆಯಲ್ಲಿ ಅನೇಕ ಪಂಗಡದ ಜನರು ಇರುತ್ತಾರೆ. ಪಂಗಡಗಳಿಗೆ ಮುಖ್ಯಸ್ಥರು ಇರುವರು. ಪಂಗಡಕ್ಕೆ ಸೇರಿದ ಜನರ ಹಿತವನ್ನು ಬಯಸಿ ಕಾರ್ಯಸಾಧನೆ ಮಾಡುವವರು ಮುಖಂಡರು. ಪಂಗಡದವರು ಮುಖಂಡರ ಮತದಂತೆ ತಮ್ಮ ಜಾತಿಯ ಧರ್ಮದ ಮತದ ಕಟ್ಟಳೆಗಳಿಗೆ ಅನುಕೂಲವಾಗಿ ನಡಕೊಳ್ಳುತ್ತಾರೆ. ಒಂದು ರಾಜ್ಯವನ್ನು ನಡಿಸುವಷ್ಟು ಘನತರವಾದ ಪ್ರಯತ್ನವು ಮುಖಂಡರು ಮಾಡಬೇಕಾಗಿರುತ್ತದೆ. ಇಂಥಾ ಪದ್ಧತಿಯು ನಮ್ಮಲ್ಲಿ ಪೂರ್ವದಿಂದಲೂ ನಡೆದು ಬಂದಿದೆ. ಪ್ರತಿ ಗ್ರಾಮದಲ್ಲಿಯೂ ಇದೇ ರೀತಿ ಪಂಗಡಗಳು ಇರುತ್ತವೆ. ಹತ್ತೆಂಟು ಜಾತಿಗಳವರು ಒಂದು ಸ್ಥಳದಲ್ಲಿ ಸೇರುವದು ಅಗತ್ಯವಿರುವದಾದರೆ ಆಯಾಯ ಜಾತಿಯ ಮುಖಂಡರಿಗೆ ಬರಮಾಡಿದರೆ ಮುಖಂಡರು ತಮ್ಮ ಪಂಗಡದವರನ್ನು ಕೂಡಿ ಬರುವದುಂಟು. ಮುಖಂಡರು ತಮ್ಮ ಜಾತಿಯಲ್ಲಿ ನಡಿಯುವ ಶುಭಕಾರ್ಯಗಳಲ್ಲಿ ಮತ್ತು ಮರಣಕ್ಕೆ ಸಂಬಂಧವಾದ ಕಾರ್ಯಗಳಲ್ಲಿ ಪ್ರತಿಬಂದು ಕಾಲದಲ್ಲಿ ಹಾಜ

ರಿದ್ದು ತಮ್ಮ ಕರ್ತವ್ಯದ ಕಡೆಗೆ ದೃಷ್ಟಿಯಿಟ್ಟು ಎಲ್ಲಾ ಕೆಲಸಗಳನ್ನು ಸಾಂಗವಾಗಿ ಪೂರೈಸಲಿಕ್ಕೆ ಪ್ರಯತ್ನಿಸುತ್ತಾರೆ. ಹೀಗೆ ಮುಖಂಡರು ಪ್ರಯತ್ನಪಡುವಾಗ ಜಾತಿಯವರು ಮುಖಂಡರ ಆಲೋಚನೆಗಳಿಗೆ ಸಹಕಾರಿಯಾಗಿರುವರು. ಇವರುಗಳಿಗೆ ಸಿಕ್ಕುವ ಪ್ರತಿಫಲವು ಬರೀ ಮರ್ಯಾದೆ ಮಾತ್ರ. ಹಣಕಾಸಿನ ಆಸೆಗೆ ಕೆಲಸಮಾಡುವದಾದರೆ ಮುಖಂಡರಿಗೆ ಮರ್ಯಾದೆ ಸಿಕ್ಕಲಾರದು. ಸಾಧಾರಣವಾಗಿ ಮುಖಂಡರು ಜಾತಿಯಲ್ಲಿ ಸ್ವಾರ್ಥವನ್ನು ಬಿಟ್ಟು ಕಾರ್ಯವನ್ನು ನಡಿಸುವವರೇ. ಮುಖಂಡರು ವಿನಹ ಜಾತಿಯ ಯಾವ ಕೆಲಸವೂ ಸರಳವಾಗಿ ನಡೆಯಲಾರದು. ಯಾವದೋ ಒಂದು ಕಾಲದಲ್ಲಿ ಉಂಟಾದ ಈ ವಹಿವಾಟವು ಇನ್ನೂ ನಡೆದುಬರುತ್ತದೆ. ಕುಟುಂಬ ಪಾರಂಪರ್ಯ ಮುಖಂಡರು, ಜಾತಿಯವರಿಂದ ಆರಿಸಲ್ಪಟ್ಟ ಮುಖಂಡರೂ ಇರುವರು. ಮುಖಂಡರು ಜಾತಿಯ ಒಳ್ಳೇದನ್ನು ಬಯಸಿ ಸೂಚಿಸುವ ಸೂಚನೆಗಳಿಂದ ಪ್ರತಿಷ್ಠಿತರಾಗುತ್ತಾರೆ. ಅನೇಕಸಾರಿ ಮುಖಂಡರು ಹಳೇ ಪದ್ಧತಿಗಳಿಗೆ ಅನುಕೂಲವಾಗಿ ನಡೆಯುವರು. ಹೊಸ-ಕ್ರಮಗಳನ್ನು ಏರ್ಪಡಿಸುವಾಗ ಮುಖಂಡರು ತಮ್ಮ ಜಾತಿಯ ಹತ್ತುಸಮಸ್ತರ ಅಭಿಪ್ರಾಯವನ್ನು ಕೇಳಿ ತಿಳಕೊಂಡು ಅಗತ್ಯವುಳ್ಳ ತಬ್ದೀಲಿಗಳನ್ನು ಮಾಡಬೇಕಾಗಿ ಬರುತ್ತದೆ. ಮುಖಂಡರು ಅಂದರೆ ಸ್ವಾರ್ಥವಿಲ್ಲದ ಕುಟುಂಬದ ಯಜಮಾನನಂತೆ ಇರುವವರು. ಕುಟುಂಬದ ಯಜಮಾನನು ತನ್ನ ಕುಟುಂಬದ ಪ್ರತಿ ಒಬ್ಬನ ಒಳ್ಳೇದನ್ನು ಇಚ್ಛಿಸುವಂತೆ ಮುಖಂಡನು ತನ್ನ ಪಂಗಡದ ಪ್ರತಿ ಒಬ್ಬನ ಹಿತವನ್ನೇ ಬಯಸುತ್ತಾನೆ. ಪಂಗಡಗಳು ಯಾವಾಗ ಉಂಟಾದವು ಎಂಬದನ್ನು ತಿಳಿಯಲಿಕ್ಕೆ ಬಹುಕಷ್ಟ. ಮುಖಂಡರು ಮೊದಲಿನಿಂದಲೂ ನಡೆದುಬಂದ ರೀತಿಯನ್ನು ಅನುಸರಿಸುವಾಗ ತಮ್ಮ ಪಂಗಡದಲ್ಲಿ ಕೆಲವು ಹೊಸ ತಬ್ದೀಲಿಗಳು ಅಗತ್ಯವುಂಟೆಂತ ಯೋಚಿಸುವದು ಅಗತ್ಯ. ದೃಷ್ಟಾಂತವಾಗಿ ಈಗಿನ ಕಾಲದ ಮುಖಂಡರು ತಮ್ಮ ಜಾತಿಯಲ್ಲಿ ಜನಿಸಿದ ಮಕ್ಕಳ ವಿದ್ಯಾಭಿವೃದ್ಧಿಯ ಕೆಲಸವನ್ನು ಪ್ರಾರಂಭಿಸಿದ್ದಾರೆ. ಜಾತಿಯ ಅಭಿವೃದ್ಧಿಯು ಮುಖಂಡರ ಮೇಲೆ ಆಧರಿಸಿರುತ್ತದೆ. ಜಾತಿಯ ಮಕ್ಕಳ ವಿದ್ಯಾಭ್ಯಾಸವನ್ನು ತಾವು ಕೈಕೊಂಡದ್ದು ಶ್ಲಾಘ್ಯವೇ. ಆದರೂ ಪ್ರಾಥಮಿಕ ವಿದ್ಯಾಭ್ಯಾಸ ಪ್ರತಿಒಬ್ಬ ವ್ಯಕ್ತಿಗೂ ಖಡ್ಡಾಯವಾಗಿ ಸಿಕ್ಕುವಂತೆ ಪ್ರಯತ್ನಪಡುವವು ಕಾರ್ಯಾರಂಭವು ಯಾವ ಮುಖಂಡರೂ ಮಾಡಲಿಕ್ಕೆ ತೊಡಗಲಿಲ್ಲ. ಪ್ರತಿ ಒಂದು ಕುಟುಂಬದ ಯಜಮಾನನು ತನ್ನ ಆಸ್ತಿ ಎಷ್ಟು, ಕುಟುಂಬದ ಮನುಷ್ಯರು ಎಷ್ಟು, ಅವರ ಲಾಲನೆ ಪೋಷಣೆ ಹ್ಯಾಗೆ ಆಗಬೇಕು, ವಿದ್ಯಾಭ್ಯಾಸದ ವ್ಯವಸ್ಥೆ ಏನು, ಶುಭ ಶೋಭನಗಳಿಗೆ ಬೇಕಾದ ಉತ್ಪನ್ನ ಇರುವದೋ, ಇನ್ನು ಕುಟುಂಬವು ಹೆಚ್ಚುತ್ತಾ ಇರುವಾಗ ಜೀವನದ ಉಪಾಯವು ಯಾವದು ಎಂಬ ಅನೇಕ ಚಿಕ್ಕದೊಡ್ಡ ಕುಟುಂಬಕ್ಕೆ ಸಂಬಂಧವಾದ ಕಾರ್ಯಗಳ ಯೋಚನೆಮಾಡುವಂತೆ ಈಗಿನ ಮುಖಂಡರು ಸಹ ಇದೇ ರೀತಿಯಿಂದ ಆಲೋಚಿಸುವದು ತಮ್ಮ ಕರ್ತವ್ಯ. ಹೀಗೆ ವಿಚಾರಿಸುವ ಮುಖಂಡರು ತಮ್ಮ ಜಾತಿಯ ಜನಸಂಖ್ಯೆ ಪ್ರಥಮತಾ ತಿಳಿಯಬೇಕು. ಜಾತಿಪ್ರತಿವ್ಯಕ್ತಿಯ ಉತ್ಪನ್ನ, ವೃತ್ತಿ, ಜೀವನಕ್ಕೆ ಇರುವ ಉಪಾಯಗಳು ತಿಳಿದಿರಬೇಕು. ಜಾತಿಯವರ ವಿದ್ಯಾಭಿವೃದ್ಧಿಯನ್ನು ಚಿಂತಿಸಬೇಕು. ಪ್ರಾಥಮಿಕ ಶಿಕ್ಷಣವು ಖಡ್ಡಾಯವಾಗಿ ಸಿಕ್ಕುವಂತೆ ಪ್ರಯತ್ನಿಸುವದು, ಮೇಲು ತರದ ವಿದ್ಯಾಭ್ಯಾಸಕ್ಕೆ ವೇತನಗಳನ್ನು ಉಂಟುಮಾಡುವದು, ಜೀವನ ವೃತ್ತಿಗಳನ್ನು ಕಲ್ಪಿಸುವದು, ಇವೇ ಮೊದಲಾದ ತಬ್ದೀಲಿಗಳು ತಮ್ಮ ಪಂಗಡದವರಲ್ಲಿ ಜಾರಿಗೆ ತರುವದು. ಮುಖ್ಯ ಆಹಾರವಾಗಿರುವ ಅಕ್ಕಿಯು ಪ್ರತಿ ಒಬ್ಬನಿಗೆ ಸುಲಭ ಕ್ರಯಕ್ಕೆ ಸಿಕ್ಕುವ ವ್ಯವಸ್ಥೆ. ಹೀಗೆ ಮುಖಂಡರು ತಮ್ಮ ಜಾತಿ ಅಭಿವೃದ್ಧಿಯ ಕೆಲಸಗಳನ್ನು ಪ್ರಾರಂಭಿಸಿದರೆ ಪ್ರತಿ ಒಬ್ಬನು ತನ್ನ ಜೀವನವನ್ನು ನಡಿಸಲಿಕ್ಕೆ ಯೋಗ್ಯನಾಗುವನು. ಮುಖಂಡರು ಆರಂಭಿಸಿದ ಕಾರ್ಯವು ಮುಂದರಿಸುತ್ತಾ ಇರುವಾಗ ಜಿಲ್ಲೆಯ ಪ್ರತಿ ಒಬ್ಬನು ಯೋಗ್ಯಗೃಹಸ್ಥನಾಗಿರಲಿಕ್ಕೆ ಅಡಚಣೆ ಬರಲಾರದು. ಸ್ವಾರ್ಥವಿಲ್ಲದೆ ನಡಿಸುವ ಕಾರ್ಯಕ್ಕೆ ದೇವರ ಸಹಾಯ ಉಂಟು.

ಗ.ರಿಕಾರ.

ಪತ್ರವ್ಯವಹಾರ.

ಒಂದು ಕಸಬಾ ಗ್ರಾಮದ ನೂತನ ನ್ಯಾಯ.

ಗ್ರಾಮ ಪಂಚಾಯತಿ ಕೋರ್ಟಿನಲ್ಲಿ.

ವಾದಿ—ಪುಕ್ಕ ಚರಡಪ್ಪ ... ... ಪ್ರತಿವಾದಿ—ಕುರುಡ ವರಸಯ್ಯಾ

Judgment:—ಇವರೊಳಗಿನ ವಿವಾದದ ರಿಕಾರ್ಡು ಪರಾಂಬರಿಸಿ, ಅಗತ್ಯವಿರುವಲ್ಲಿ ಗೃಹಸ್ಥರನ್ನು ಸಾಕ್ಷಿಯಾಗಿ ವಿಚಾರಿಸಿ, ನಾವು ಈ ಕೆಳಗಿನ ಅಭಿಪ್ರಾಯಪಟ್ಟು, ನಮ್ಮ ನಿಷ್ಪಕ್ಷವಾದ ತೀರ್ಮಾನವನ್ನು ಕೊಟ್ಟಿದ್ದೇವೆ.

ವಾದಿ ಪ್ರತಿವಾದಿಯರು ಸೋದರಿಕೆಯ ಭಾವ ಮೈದುನರಾಗಿ ಬಾಲ್ಯದಿಂದ ಒಟ್ಟಿಗೆ ಆಟಗಳನ್ನು ಆಡುತ್ತಾ ಪಾಠಗಳನ್ನು ಮಾಡುತ್ತಾ, ಹಿರಿಯರ ಕಾಲದಿಂದ ಬಹು ವರ್ಷಗಳ ವರೆಗೆ ಇದೇ ಗ್ರಾಮದಲ್ಲಿ ಏಕ ಗೃಹಕೃತ್ಯದಲ್ಲಿ ಇರುತ್ತಿದ್ದರೆಂತಲೂ, ನಂತರ ವಾದಿಯ ಅಣ್ಣನಿಂದ ಪ್ರತಿವಾದಿಯು ಈ ಸಂಸಾರ ಸಾಗರದಲ್ಲಿ ಅನೇಕ ಸಹಾಯವನ್ನು ಪಡದಿದ್ದೆಂತಲೂ, ಸಾಕ್ಷಿ ರುಜುವಾತಿನಿಂದ ಸ್ಪಷ್ಟವಾಗುತ್ತದೆ. ಹೀಗಿರುತ್ತ ಪ್ರಕೃತ ವಿವಾಹಕ್ಕೆ ಅರ್ಹಳಾದ ವಾದಿಯ ಕನ್ನಿಕೆಯನ್ನು ಪ್ರತಿವಾದಿಯ ಮಗನಿಗೆ ಕೊಟ್ಟು ವಿವಾಹವಾಗಬೇಕೆಂದು ಬಹುಕಾಲದಿಂದ ಚರ್ಚೆ ನಡಿಯುತ್ತಿತ್ತು. ಅನಂತರ ಪ್ರತಿವಾದಿಯು ತನ್ನ ಇತರ ಮಕ್ಕಳಿಗೆ ಪಡದ ವರದಕ್ಷಿಣೆಯಕ್ಕಿಂತ ಮೂರು ನಾಲ್ಕರಷ್ಟು ಪಾಲು ಜಾಸ್ತಿ ವರದಕ್ಷಿಣೆಯನ್ನು ಪಡದು ಲಗ್ನ ನಿರ್ಣಯಿಸಿ ಆಮಂತ್ರಣ ಪತ್ರಗಳು ಎಲ್ಲಾ ನೆಂಟರಿಷ್ಟರಿಗೆ ಕೊಡಲ್ಪಟ್ಟವು.

ತನ್ಮಧ್ಯ ಪ್ರತಿವಾದಿಯ ಹೊಸ ಸ್ನೇಹಿತನೊಬ್ಬನು ಆತನಿಗೆ ಸೂಚಿಸಿದ ಮತಾಚಾರದ ನ್ಯಾಯವೆಂಬದಾಗಿ ಒಂದು ನೂತನ ಯುಕ್ತಿಯನ್ನು ಬರೆದಿರುವ ಪತ್ರವನ್ನು ಶಿರಸಾವಹಿಸಿಕೊಂಡು ಪ್ರತಿವಾದಿಯು ತನ್ನ ಪೂರ್ವಾಪರವನ್ನು ನೆನಸದೆ ಹೊಸ ಬೀಗನು ತನ್ನ ಬಾಲ್ಯ ಸ್ನೇಹಿತ ಮತ್ತು ಹಿತಚಿಂತಕನೆಂಬದನ್ನು ಮರೆತು, ಹೊಸ ವೈದಿಕ ಸ್ನೇಹಿತನ ಮೇಲೆ ಹೆಚ್ಚು ಅಭಿಮಾನವಿಟ್ಟು; ಆತನ ಅಪೇಕ್ಷೆಯ ಪ್ರಕಾರ ವಾದಿಗೆ ಒಂದು ಪತ್ರವನ್ನು ಬರೆದ್ದಾಗಿ ತೋರುತ್ತದೆ. ಆ ಪತ್ರದಲ್ಲಿ ತಾವಿಬ್ಬರು ಮಾನ್ಯ ಕುಟುಂಬದವರಾಗಿದ್ದು ತಮ್ಮ ಕೀರ್ತಿ ಕಾಶಿ ರಾಮೇಶ್ವರದ ವರೆಗೆ ಇರುವದರಿಂದ ಇಂಥಾ ಮಂಗಲಕಾರ್ಯಗಳ ಸಮಯ ಮತಾಚಾರಗಳನ್ನು ತೀರ್ಮಾನಿಸುವ ಶ್ರೀ ಸಂಸ್ಥಾನಕ್ಕೆ ಬರಕೊಂಡು ಅವರ ಅಪ್ಪಣೆ ಪ್ರಕಾರ ಪ್ರಾಯಶ್ಚಿತ್ತ ಪಡೆದ ವಿನಹಾ ತನಗೆ ದಿಬ್ಬಣ ಹೊರಟು ಬರಲು ಅನುಕೂಲವಿಲ್ಲಾ ಎಂಬದಾಗಿ ಇರುತ್ತದೆ.

ವಾದಿ ಪ್ರತಿವಾದಿಯರು ತಮ್ಮ ಗುಣನಾಮಕ್ಕೆ ಸರಿಯಾಗಿ ಪತ್ರವ್ಯವಹಾರದಲ್ಲಿ ಬರೆದ ರೀತ್ಯಾ ಶ್ರೀ ಸಂಸ್ಥಾನಕ್ಕೆ ವಧುಪಿತನಾದ ವಾದಿಯು ಬರಕೊಂಡದ್ದಕ್ಕೆ ಶ್ರೀ ಸಂಸ್ಥಾನದ ಅಧಿಪತಿಗಳು ಬಾಲ್ಯಪ್ರಾಯದಲ್ಲಿರುವದ್ದರಿಂದ ಮತಾಭಿಮಾನಿಗಳಾದ ಅಲ್ಲಿಯ ಪೊಕ್ತೇಸರರು ಕೊಟ್ಟ ಅಪ್ಪಣೆಯೇನೆಂದರೆ:—ಅರ್ಜಿದಾರ ವಾದಿಯು ನಿರಪರಾಧಿಯೆಂತ ಸಂಸ್ಥಾನದಲ್ಲಿರುವ ರಿಕಾರ್ಡುಗಳಿಂದ ಕಂಡು ಬರುತ್ತದೆ, ಆದರೆ ಬಹು ಪ್ರಾಕು ರಿಕಾರ್ಡು ಹುಡುಕಿದ್ದಲ್ಲಿ ಅರ್ಜಿದಾರನ (ವಾದಿಯ) ಗ್ರಾಮ ಪಟೇಲ ಉಗ್ರಾಣಿ ಶ್ಯಾನಭಾಗ ಮತ್ತು ಇತರ ನಿವಾಸಿಗಳು ದೋಷಾರೋಪಿಗಳೆಂದು ಸ್ವರ್ಗಸ್ಥನಾದ ಒಬ್ಬ ಮಾನ್ಯ ಗೃಹಸ್ಥನ ಅರ್ಜಿಯಿಂದ ಕಂಡು ಬರುತ್ತದೆ, ಆದ್ದರಿಂದ ಅರ್ಜಿದಾರ ವಾದಿಯು ಸದರಿ ಪಟೇಲ ಉಗ್ರಾಣಿ ಮೊದಲಾದ ಗ್ರಾಮಸ್ಥರನ್ನು ದಿಗರ್ ಗ್ರಾಮಸ್ಥರನ್ನೂ ಸಮಾಧಾನಪಡಿಸಿ ಅವರ ಒಪ್ಪಿಗೆ ನಿಶಿ ಪ್ರಾಯಶ್ಚಿತ್ತಕ್ಕೆ ಅರ್ಜಿಮಾಡಿಕೊಂಡಲ್ಲಿ ಅವರೆಲ್ಲರಿಗೆ ತಾರತಮ್ಯಾನುಸಾರ ಗೋಮೂತ್ರ ಕುಡಿಸಿ ದಂಡ ಪ್ರಾಯಶ್ಚಿತ್ತವನ್ನು ಮಾಡಿಸಿದ ನಂತರ ಲಗ್ನ ಕಾರ್ಯವನ್ನು ಸಾಂಗ್ಯ ರೀತಿಯಿಂದ ನಡಿಸಲು ಅಪ್ಪಣೆ ಕೊಡಲಾಗುವದೆಂತ ಪ್ರತಿ ಉತ್ತರ ದಯಪಾಲಿಸಿದಾಗಿ ತೋರುತ್ತದೆ.

ವಾದಿಯ ಮನೆಯಲ್ಲಿ ಬೇರೆ ಮಂಗಲಕಾರ್ಯ ನಡೆಯುವ ಸಮಯ ಟಪ್ಪಾಲಿನವನು ಈ ಉತ್ತರ ತಂದುಕೊಟ್ಟದ್ದರಿಂದ ಅದನ್ನು ಓದಿನೋಡುತ್ತಲೆ ಮನೆಯಲ್ಲೆಲ್ಲಾ ಭಯಂಕರವಾದ ಅಲ್ಲೋಲಕಲ್ಲೋಲವಾಯಿತು. ಇದನ್ನು ಸಹಿಸಲಾರದೆ, ನೆಂಟಸ್ಥಿಕೆ ನಿರ್ಣಯಮಾಡುವಾಗ ಹಾಜರಿದ್ದ ಗೃಹಸ್ಥರ ಪೈಕಿ ಒಬ್ಬನು ಪ್ರತಿವಾದಿಗೆ ತಂತಿ ಮೂಲಕವಾಗಿಯೂ ಪತ್ರಮೂಲಕವಾಗಿಯೂ ತಿಳಿಸಿದ್ದೇನೆಂದರೆ:—ಸದರಿ ವಾದಿ-ಪ್ರತಿವಾದಿರು ನೆಂಟಸ್ಥಿಕೆಯನ್ನು ನಿಶ್ಚೈಸಿ ವರದಕ್ಷಿಣೆಯನ್ನು ವಸೂಲು ಕೊಡುವ ಕಾಲದಲ್ಲಿ ಪ್ರಾಯಶ್ಚಿತ್ತಕ್ಕೆ ಪಾತ್ರರಾದ ಪಟೇಲ ಉಗ್ರಾಣಿ ಮತ್ತು ತಾನು ಸಹಾ ಹಾಜರಿದ್ದು, ಪ್ರತಿವಾದಿಯು ತಮ್ಮೆಲ್ಲರನ್ನು ಊಟಕ್ಕೆ ನಿಲ್ಲಿಸಿಕೊಂಡು ಸಹಪಂಕ್ತಿಯಲ್ಲಿ ಪ್ರತಿವಾದಿಯು ಊಟಮಾಡಿರುತ್ತಾ ಈಗ ಮಾತ್ರ ತಾನು ಪರಿಶುದ್ಧನೆಂತ ಹೇಳಿ, ವಾದಿ ಮತ್ತು ಗ್ರಾಮಸ್ಥರು ಮಾತ್ರ ಪ್ರಾಯಶ್ಚಿತ್ತ ಮಾಡಬೇಕೆಂತ ಹೇಳುವದು ನೀತಿಯಲ್ಲ. ಇದಲ್ಲದೆ ಪ್ರತಿವಾದಿಯು ವಿಲಾಯತಿಕಾರರಲ್ಲಿ ಸಂಪರ್ಕ ಆದ್ದಕ್ಕೆ ಕಲೆಕ್ಟರ್ ದೊರೆಗಳವರೇ ಸಾಕ್ಷಿಯಾಗ ನುಡಿಯುವುದರಿಂದ ಠಕ್ಕು ನೇವನ ಮಾಡಿ ನೆಂಟಸ್ಥಿಕೆ ತಪ್ಪಿಸಿದ ಪಕ್ಷಕ್ಕೆ ನಾಳೆ ಬರುವ ವಿವಾಹದಲ್ಲಿ ನೀವೆಲ್ಲರೂ ನಿಮ್ಮ ಕೊಳಕು ಬಟ್ಟೆಗಳನ್ನು ರಾಜಸ್ಥಾನದಲ್ಲಿ ತೊಳೆಯುವ ಸಮಯವು ಒದಗುವುದು. ಆ ಕಾಲದಲ್ಲಿ ತನ್ನನ್ನು ಸಾಕ್ಷಿಯಾಗಿ ವಿಚಾರಿಸುವಾಗ ತನ್ನ ಬಾಯಿಂದ ಹೊರಡುವ ಸಂಗತಿಗಳೆಲ್ಲಾ ಪ್ರತಿವಾದಿಗೆ ಅಹಿತಕರವಾದೀತೆಂತ ಸಹ ಬರೆದಿತ್ತು. ಇವೆಲ್ಲಾ ಸಂಗತಿಗಳನ್ನು ನೋಡುತ್ತಲೇ ಪ್ರತಿವಾದಿಯು ನಾಚಿಕೊಂಡು ಮೌನದಿಂದ ದಿಬ್ಬಣ ಹೊರಟು ಬಂದು ಲಗ್ನ

ಕಾರ್ಯವನ್ನು ವಿಘ್ನವಿಲ್ಲದೆ ನೆಂಟರಿಷ್ಟರೆಲ್ಲರ ಕೂಡುವಿಕೆಯಿಂದ ಸಾಂಗ್ಯವಾಗಿ ನಡೆದಿರುತ್ತದೆ.

ವಾದಿಯು ಲಗ್ನಕಾರ್ಯವು ವ್ಯಾಜ್ಯದ ಮಧ್ಯಕಾಲದಲ್ಲಿ ಸಾಂಗ್ಯವಾಗಿ ನಡದ್ದರಿಂದ ತನ್ನ ನಷ್ಟದ ದಾವೆಯನ್ನು ಬಿಟ್ಟಿರುವದಾಗಿಯೂ, ಇನ್ನು ಮುಂದೆ ಲಗ್ನಕ್ಕೆ ವಿಘ್ನ ತರುವ ಹಾವಳಿಯನ್ನು ನಿಲ್ಲಿಸುವ ಹಾಗೆ ಮಾತ್ರ ಒಂದು ಕಾಯಂ ಇಂಜೆಂಕ್‌ಶನ್ ಕೊಡಿಸಬೇಕಾಗಿ ಅರ್ಜಿಮಾಡಿರುತ್ತಾನೆ.

ಆದ್ದರಿಂದ ನಮ್ಮ ಆಖೈರ ತೀರ್ಮಾನವೇನೆಂದರೆ, ಜನರು ತಮ್ಮ ತಮ್ಮ ಬುದ್ಧಿಯಿಂದ ತಂದುಕೊಳ್ಳುವ ಸ್ವಯಂಕೃತ ಕಷ್ಟಗಳಿಗೆ ಯಾರೂ ಏನೂ ಮಾಡತಕ್ಕದಿಲ್ಲ, ಮತ್ತು ನೂತನ ನ್ಯಾಯದ ಸಂಚಿಕೆಯಲ್ಲಿ ಏನೂ ಉಪಾಯ ಕಾಣಬರುವುದಿಲ್ಲ. ಆದರೆ ಪ್ರಕೃತ ಮದುವೆ ಚಪ್ಪರಗಳಲ್ಲಿ ವಿನೋದಾರ್ಥವಾಗಿ ಲಗ್ನದ ನಂತರ ವರನು ವಧುವಿನ ಮೈಮೇಲಿದ್ದ ನಗವನ್ನು ಕಳವು ಮಾಡಿದೆಂಬ ಹಾಗೂ ಆ ತಪ್ಪಿಗೆ ಅವನ ಮೇಲೆ ಫಿರ್ಯಾದು ಸಾಕ್ಷಿ ತಪ್ಪು ಮೊದಲಾದನ್ನು ತೋರಿಸುವ ನಾಟಕ ಮಾಡುವ ಬದಲಿಗೆ, "ಲಗ್ನಕ್ಕೆ ಬರುವ ವಿಘ್ನ ಪ್ರತಿಬಂಧಕ ನಾಟಕ" ಎಂಬ ಈ ಒಂದು ನಾಟಕವನ್ನು ಮಾಡಿ ಆಡಿದ ಪಕ್ಷಕ್ಕೆ ಪುರುಷರು ನಾಚಿಕೊಂಡು ಇನ್ನುಮುಂದೆ ಈ ತರದ ಯುಕ್ತಿಗಳು ಕಡಿಮೆಯಾಗುತ್ತಾ ಬಂದು ಮುಂದಕ್ಕೆ ಕನ್ಯಾರತ್ನಗಳಿಗೆ ಕ್ಷೇಮ ಉಂಟಾಗುವುದೆಂತ ನಮಗೆ ಪೂರ್ಣ ಅಭಿಪ್ರಾಯವಾಗಿರುತ್ತದೆ. ಆದ್ದರಿಂದ ನಿರಾಪರಾಧಿಗಳಾದ ಕನ್ನಿಕೆಯರ ಮೇಲೆ ಅಭಿಮಾನವಿರುವವರೆಲ್ಲರು ಇದನ್ನು ಜ್ಯಾರಿಗೆ ತರತಕ್ಕದ್ದು.

ಇದರ ವಿನಹಾ ಇನ್ನು ಮುಂದೆ ಸಂಸಾರ ಸಾಗರದಲ್ಲಿರುವವರಿಗೆ ಬರುವ ಲಗ್ನದ ಕೊರತೆಗಳನ್ನು ತಪ್ಪಿಸುವ ಬಗ್ಗೆ ಉದಾರ ಗೃಹಸ್ಥರೆಲ್ಲರೂ ಒಂದು (Commission) ನ್ನು ಅಂದರೆ "ಪರುಷರಾಮ ಕ್ಷೇತ್ರ ಆರ್ಯ ವಿಪ್ರ ಮಹಾಮಂಡಲ" ಎಂಬ ಒಂದು ಸಭೆಯನ್ನು ಕೂಡಿಸಿ ತಕ್ಕ ನಿವಾರಣೆ ಮಾಡುವ ಯೋಚನೆಯನ್ನು ಮಾಡುವರಾಗಿ ನಾವು ಕೋರುತ್ತೇವೆ.

ಸತ್ಯಂ ಭಟ್ಟ,
ಗ್ರಾಮ ಪಂಚಾಯತಿ ಕೋರ್ಟ ಅಧ್ಯಕ್ಷ.

ಮಂಗಳೂರ್ಕು ಮುನ್ಸಿಪಾಲಿಟಿ ಕಂಬಳದ ಸಂಕಕ್ಕೆ ಗತಿ ಏನು?

ಪತ್ರಾಧಿಪರೇ,

ಕಳದ ಸರ್ತಿ ಮುನ್ಸಿಪಲ್ ವಿಷಯಗಳ ಕುರಿತು 'ಯಕ್ಷಗಾನಿ'ಯ ಗಾಯನವನ್ನು ಕೇಳಿ ಮುಗಿಯುವಷ್ಟರೊಳಗೆ ಇನ್ನೊಂದು ಬಗೆಯ ಗಾಯನವು ಊರೆಲ್ಲಾ ಕೇಳಹತ್ತಿರುವದು. ಇನ್ನೊಂದು ಬಗೆಯ ಗಾಯನ! ಸ್ವಾಮಿ, ಇದು ಗಾಯನವಲ್ಲ! ಪಶುಗಳ ರೋಧನ, ಗಾಡಿಎತ್ತುಗಳು ಘೋ ಎಂದೂ, ಈ ಎತ್ತುಗಳ ಮೂಲಕ ಜೀವನಮಾಡುವಂಥವರು ಅಯ್ಯೋ ಎಂದೂ ಮತ್ತು ಪಶುವರ್ಗಕ್ಕೆ ಸೇರಿರುವ ಮೂಕ ಪ್ರಾಣಿಗಳಾದ ಕುದುರೆಗಳು ತಮಗೆ ನೈಸರ್ಗಿಕವಾದ ಸ್ವರಗಳಿಂದಲೂ ಒಂದೇ ಬಾರಿ ಕೂಗಹತ್ತಿವೆ. ಮಳೆಗಾಲ. ಈ ಕಾಲದಲ್ಲಿ ಹುಲ್ಲುಗಾವಲುಗಳಲ್ಲಿ ತಿಂಡಿದೊರಕುವ ಸುಯೋಗವು ಪಶುಗಳಿಗೆ ಒಂದೊದಗುತ್ತಿದ್ದೆಯಾದರೂ ಮಿಕ್ಕ ವಿಷಯಗಳಲ್ಲಿ ಈ ಕಾಲವು ಅವುಗಳಿಗೆ ಅನುಕೂಲವೆಂತ ಹೇಳಕಾರಣವಿಲ್ಲ. ಅದರಲ್ಲಿಯೂ ಈ ಹುಲ್ಲುಗಾವಲುಗಳಲ್ಲಿ? ಪಟ್ಟಣದ ದೂಳು ಕೆಸರುಗಳನ್ನು ಮೂಸುತ್ತಾ ಬೇಸತ್ತು ಬಾಯಿಯಿಂದ ನೊರೆಕಾರುವ ಎತ್ತು ಕುದುರೆಗಳ ಸಂಚಾರವೆಲ್ಲಿ? ಇಂಥಾ ಕಾಲದಲ್ಲಿ ಮಾರ್ಗಗಳ ದುರುಸ್ತಿಯಂತೆ! ದುರುಸ್ತಿಯ ವಿಧಾನವಾದರೋ ಬಹಳ ಭಯಂಕರವಾದದ್ದೆ ಸರಿ. ವನಸ್ಪತಿಗಳಲ್ಲಿ ಮನುಷ್ಯರಲ್ಲಿದ್ದ ಹಾಗೆಯೇ ಸಜೀವಾವಸ್ಥೆಯನ್ನು ತೋರಿಸುವ ಅಲೆಗಳು ಇವೆಯೆಂತ ನಮ್ಮ ಭಾರತೀಯ ಭ್ರಾತೃಗಳಲ್ಲೊಬ್ಬರು ರುಜುಪಡಿಸಿರುವರು. ಹಾಗೆಯೇ ಪಶುಗಳ ಕೂಸು, ಅವುಗಳ ಕಣ್ಣುಗಳಿಂದ ಧಾರೆ ಹಿಡಿದು ಬೀಳುತ್ತಿರುವ ಕಣ್ಣೀರು, ಅವುಗಳ ಮುಖಗಳ ಛಾಯೆ, ಇವುಗಳ ಮೂಲಕ ಪಶುಭಾಷೆಯೊಂದನ್ನು ಯಾರಾದರೂ ನಿರ್ಣಯಿಸುತ್ತಿದ್ದರೆ ಪ್ರಪಂಚಕ್ಕೂ ಆ ಮೂಕಪ್ರಾಣಿಗಳಿಗೂ ಬಹಳ ಉಪಕಾರವಾಗುತ್ತಿತ್ತು. ಮಂಗಳೂರಿನಲ್ಲಿ ಈಗಿನ ಮಾರ್ಗಗಳ ಸ್ಥಿತಿಯಿಂದ ಪಶುಗಳಿಗೆ ಭಾಷೆಯು ಪ್ರಾಪ್ತವಾಗುತ್ತಲಿದೆ. ಮಾರ್ಗದುರುಸ್ತಿ ಇಲಾಖೆಯವರ ಇದೊಂದು ಮಹದುಪಕಾರವೇ ಸರಿ! ಭಾಷೆಯ ಮಾತುಗಳೇನು? ಅವುಗಳ ಅರ್ಥವನ್ನಾದರೋ ನಾನು ಈ ರೀತಿ ಮಾಡಿರುವೆನು—ಮನುಷ್ಯರೇ, ನೀವು ಸಹ ನಮ್ಮಂತೆಯೇ ಪ್ರಾಣಿಗಳು, ನಮ್ಮನ್ನೂ ನಿಮ್ಮನ್ನೂ ಸೃಷ್ಟಿಸಿದ ಪರಮಾತ್ಮನು ಒಬ್ಬನೇಯಾಗಿರುವನು. ನಮ್ಮ ಮೂಲಕ ನೆರವೇರುವಂಥ ಆತನ ಉದ್ದೇಶಗಳು ಇವೆ. ಮಾನವಜನ್ಮದ ಉದ್ದೇಶಗಳಾದರೋ ನಮ್ಮಕ್ಕಿಂತ ಎಷ್ಟೋ ಮಹತ್ವವುಳ್ಳವುಗಳಾಗಿರುವವು. ನಾವು ಅಂಥಾ ಮಾನವ ವರ್ಗದ ಸಹಕಾರಿಗಳು. ನಮ್ಮ ಪಾಲನೆಯನ್ನು ದೇವರು ಮನುಷ್ಯರಿಗೆ ಒಪ್ಪಿಸಿಕೊಟ್ಟಿರುವನು. ಮತ್ತು ಇತರ ಯಾವ ಪ್ರಾಣಿವರ್ಗಕ್ಕಾದರೂ ಕೊಡದ ಧಿಶಕ್ತಿ ಮತ್ತು ಮಿದುಳನ್ನು ಮನುಷ್ಯನಿಗೆ ದಯಪಾಲಿಸಿರುವನು. ನಮ್ಮಿಂದ ಮಾನವರಿಗೆ ಸರ್ವವಿಧಾನಗಳಲ್ಲಿಯೂ ಉಪಕಾರವೇ ಆಗುವದು. ಹೀಗಿರುತ್ತಾ ನಮ್ಮ ಮೇಲೆ ಇಷ್ಟೇಕೆ ಸಿಟ್ಟು ಮತ್ತು ನಿಷ್ಕರುಣೆ! ಮಾರ್ಗಗಳನ್ನು ದುರುಸ್ತಿ ಮಾಡುವಿರಿ. ಇದು ಸತ್ಯ. ಈಗ ಮಳೆಕಾಲದಲ್ಲಿ ಮಾಡಿದ ದುರುಸ್ತಿಯಿಂದ ಬೇಸಿಗೆಯಲ್ಲಿ ಪ್ರಯೋಜನ ಉಂಟೆಂದು ಹೇಳುವಿರಿ. ಆದರೆ ಮಳೆಗಾಲದಲ್ಲಿ—ಈ ದುರುಸ್ತಿ ಕಾಲದಲ್ಲಿ—ಗಾಡಿಗಳನ್ನು ಎಳೆದು ಬದುಕಿದನಂತರವಲ್ಲ ಬೇಸಿಗೆ? ಮಹಾ ಸ್ವಾಮಿಗಳೇ, ನಮ್ಮ ಮೇಲೆ ಕೃಪೆಯಿಡಿರಿ. ಮುನ್ಸಿಪಾಲಿಟಿಯ ಮಾರ್ಗಗಳು ಅಲ್ಲಲ್ಲಿ ಕುಸಿದು ಬಿದ್ದಿವೆ. ಒಂದೇ ಸರ್ತಿ ಕೆಲವು ಮಾರ್ಗಗಳಲ್ಲಿ ಬರಕೂಡದೆಂದು ಬೇಲಿ ಹಾಕಿದ್ದಾರೆ. ಆದ್ದರಿಂದ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗಬೇಕಾದರೆ ಸುತ್ತು ಸುತ್ತಾಗಿ ಹೋಗಬೇಕು. ಅಲ್ಲಲ್ಲಿ ಕೆಸರು, ಅದರ ಮೇಲೆ ಹೊಯಿಗೆಯ ರಾಶಿ. ಗಾಡಿಯನ್ನು ಎಳೆಯುವಾಗ ಚಕ್ರಗಳು ಹುಗಿದುಹೋಗಿ ಎಳೆಯಲಿಕ್ಕಾಗದೆ ಪೇಚಾಡುತ್ತಿರುವಾಗ ಕೊರಡೆಯಿಂದ ಯಜಮಾನರು ಬೆನ್ನ ತೊಗಲನ್ನು ತೆಗೆಯುವರು. ಹೆಗಲಲ್ಲಿ ಹುಣ್ಣುಬಿದ್ದು ನಮ್ಮ ಅವಸ್ಥೆಯೋ ಹೇಳತೀರದು. ಪರಮೇಶ್ವರನೇ ಕಾಪಾಡು!

ಪಶುಗಳ ಭಾಷೆಯ ಅರ್ಥವನ್ನು ಈ ರೀತಿ ಮಾಡಿರುವೆ. ಇಷ್ಟೆಲ್ಲ ಸಾಲದೆಂಬಂತೆ ಕಂಬಳದ ಸಂಕಕ್ಕೆ ಸಂಕಷ್ಟ ಬಂದುಬಿದ್ದಿದೆ. ಅದರ ದುರುಸ್ತಿಯ ಆಲೋಚನೆಗೆ ಎಷ್ಟು ವರುಷಗಳು ಬೇಕೋ, ನಂತರ ಅದನ್ನು ಸರಿಪಡಿಸಲಿಕ್ಕೆ ಎಷ್ಟು ಸಮಯ ತಗಲುವದೋ? ಸ್ವಾಮಿ ಪತ್ರಕರ್ತರೇ, ಎತ್ತು ಕುದುರೆಗಳ ದೂರು ಹಾಗಿರಲಿ. ಇನ್ನು ಕೆಲವು ದಿವಸಗಳಲ್ಲಿ ಮನುಷ್ಯರ ಸಂಚಾರವು ಸಹ ಈ ಸಂಕದ ಮೇಲಿಂದ ಅಸಾಧ್ಯವಾಗುವದು. ಈಗ ನಾದುರುಸ್ತಿ ಸ್ಥಿತಿಯಲ್ಲಿರುವ ಸಂಕದ ಒಂದು ಕಮಾನಿನ ಎರಡು ಕಡೆಗಳಲ್ಲಿ ಹೊಂಡತೆಗದಿರುವರು. ಕಮಾನಿನ ಕಲ್ಲುಗಳು ಈ ಹೊಂಡಗಳಲ್ಲಿ ಕಾಣುತ್ತಿವೆ. ಹೊಂಡಗಳನ್ನು ಯಾಕೆ ತೆಗದದ್ದು ತಿಳಿಯದು. ಆದರೆ ಈ ಹೊಂಡಗಳಿಂದ ಒಂದು ಪ್ರಯೋಜನ ಉಂಟೆಂತ ಹೇಳಬಹುದು. ಮಳೆನೀರು ಈ ಹೊಂಡಗಳಲ್ಲಿ ತುಂಬಿಕೊಂಡು ಕಲ್ಲುಗಳು, ಕಮಾನಿನ ಕಲ್ಲುಗಳು ಅಲ್ಲಿಯೇ ನುರಿಯುತ್ತ ಬಂದರೆ ಕಮಾನು ತನ್ನಷ್ಟಕ್ಕೇನೇ ಜರಿದು ಬೀಳುವದು. ಆಗ ಹೊಸ ಸಂಕವೇ ಬೇಕಾಗುವದು. ಇದು ಸರಿ, ಆದರೆ ಸಂಕಗಳ ದುರುಸ್ತಿ ಅಥವಾ ಅವುಗಳನ್ನು ಹೊಸತಾಗಿ ಕಟ್ಟಿಸುವದೆಂದರೆ ನಮ್ಮ ಮುನ್ಸಿಪಾಲಿಟಿಯವರಿಗೆ ಒಂದುವೇಳೆ ಸರಕಾರದವರು ದ್ರವ್ಯಸಹಾಯ ಮಾಡಲಿಕ್ಕಿದ್ದರೂ ಹಲವು ಶತಮಾನ ಅಲ್ಲ, ದಶಮಾನಗಳಾದರೂ ಬೇಕಾದಾವು. ಅಷ್ಟರ ತನಕ ಕಂಬಳದ ಸಂಕಕ್ಕೆ ಗತಿ ಏನು? ನಮ್ಮಲ್ಲಿ ೧೮ ಮತ್ತು ೧೯ನೇ ಶತಮಾನಗಳಲ್ಲಿ ಒಂದೆರಡು ಸಂಕಗಳಾಗಿವೆ. ರಾ। ಪೇಜಾವರ ಭೋಜರಾಯರ ಮನೆಹತ್ತಿರ ಕಂಬಳದ ಹೊಸಮಾರ್ಗದ ಸಂಕವು ೨೧ನೇ ಶತಮಾನದಲ್ಲಿ ಆಗಬಹುದೆಂತ ಹೇಳಿದರೆ ಈ ಲೆಕ್ಕದಲ್ಲಿ ಕಂಬಳದ ಸಂಕವು ೨೫ನೇ ಶತಮಾನದಲ್ಲಿ [illegible]ಕಟ್ಟಿಸಿ ಅಥವಾ ದುರುಸ್ತಿಮಾಡಿಸಿ ಆದೀತೆಂತ ಖಂಡಿತವಾಗಿ ಹೇಳಬಹುದು. ಅಷ್ಟರ ತನಕ ಅಂದರೆ ಮುನ್ಸಿಪಾಲಿಟಿಯಲ್ಲಿರುವ ಆಲದ ಮರಗಳು ಸಹ ಮೂಲವಾಗಿ ನಾಶವಾಗುವ ತನಕ ಸಂಕ ಮುರಿದ್ದಲ್ಲಿ ಬೇಲಿಗಳನ್ನು ಅಥವಾ ಅಡ್ಡ ಮರಗಳನ್ನು ಹಾಕುತ್ತ ಜನರ ಎಂಥಾ ಅನನುಕೂಲತೆಗಾದರೂ ಕಿವಿಗೊಡದೆ, ಸುಪರವ್ಯಾಸರ್, ಸೆಕ್ರೆಟರಿ, ಮೊದಲಾದ ದೊಡ್ಡ ಸಿಬಂದಿಯನ್ನು ಇಟ್ಟುಕೊಂಡು ಬಡ ಕಂಟ್ರಾಕ್ಟದಾರರಿಗೆ ಆಗಿಂದಾಗ್ಯೆ ಕೆಲಸಕೊಡುತ್ತ ಮಾರ್ಗ ದುರುಸ್ತಿ ಬಗ್ಯೆ ಇಷ್ಟು ಸಾವಿರ ರೂಪಾಯಿಗಳು ಖರ್ಚಾದವು, ಇನ್ನೇನು ಅಡಚಣೆ, ಎಂತ ಖರ್ಚಿನ ದೊಡ್ಡ ಅಂಕೆಗಳನ್ನು ನೋಡಿ ಮುನ್ಸಿಪಾಲ್ ಕೌನ್ಸಿಲಿನವರು ಸುಮ್ಮನಿರಲಿ! ನಾವಾದರೋ ಕಂಬಳದ ಸಂಕಕ್ಕೆ ಇನ್ನು ಗತಿಯೇನು? ಎಂತ ಹೇಳುತ್ತ ಹೇಳುತ್ತ ತೃಪ್ತಿಗೊಳ್ಳುವ. ಸ್ವಾಮಿ, ಪತ್ರಬೆಳೆಯಿತು, ನನ್ನ ಲೇಖವು ಇಲ್ಲಿಗೆ ಮುಗಿಯಲೇ ಬೇಕು. ಸೂಚಿಸಿದ ಸಂಕಷ್ಟಗಳು ಯಾವಾಗ ಮುಗಿಯುವವೋ?

ಶ್ರೀಧರ.

ಯೂರೋಪದ ಮಹಾಯುದ್ಧ.

ಪೂರ್ವ ಪಶ್ಚಿಮ ರಣರಂಗಗಳೆರಡರಲ್ಲಿಯೂ ಕಳೆದ ವಾರ ಪ್ರಾಮುಖ್ಯವಾದ ಕದನಗಳು ನಡೆದು ಮಿತ್ರಮಂಡಲಿಯವರು ಜರ್ಮನರ ನೆಲೆಗಳನ್ನು ಒಡೆದುಮುಂದೊತ್ತಿರುವರು. ಜರ್ಮನರು ೨ ವರ್ಷಗಳಿಂದ ಬಲಕಾಯಿಸಿಕೊಂಡಿದ್ದು ಯಾರಿಂದಲೂ ಒಡೆಯಲು ಅಸಾಧ್ಯವೆಂದು ಬಡಾಯಿಕೊಚ್ಚಿಕೊಳ್ಳುತ್ತಿದ್ದ ಪೊಜಿಯರ್‌ನಿಂದ ಲೊಂಗ್ವಿಲ್ಲೆ ವರೆಗಿನ ರಣರಂಗಗಳು ಈಗ ಬ್ರಿಟಿಷರಸ್ವಾಧೀನವಾಗಿವೆ. ತದ್ರೀತಿ ಫ್ರೆಂಚರು ಕೂಡಾ ತಮ್ಮ ರಣರಂಗವನ್ನು ಸೊಮ್ಮೆನದಿಯ ಉತ್ತರ ದಡದಿಂದ ಹೆಮ್ ಎಂಬ ಸ್ಥಳದ ಪೂರ್ವದ ವರೆಗೆ ವಿಸ್ತರಿಸಿ ಆ ಪ್ರಾಂತ್ಯಗಳನ್ನೆಲ್ಲಾ ಸ್ವಾಧೀನಮಾಡಿಕೊಂಡು ಮೊನಾಕ್ ಫಾರ್ಮಿನ ಮೇಲ್ಬಾಯುತ್ತಿರುವ ಶತ್ರುಗಳನ್ನು ಹಿಂದಕ್ಕೆ ಅಟ್ಟುತ್ತಿದ್ದಾರೆ. ಬ್ರಿಟಿಷರು ನುಗ್ಗಿಹೋಗಿ ರೋಷಾವೇಶದಿಂದ ಶತ್ರುಗಳೊಡನೆ ಕದನಮಾಡುತ್ತಿರುವದರಿಂದ ವೆರ್ಡನಿನ ಮೇಲೆ ಅಭಿಯೋಗ ಮಾಡುವ ಜರ್ಮನ ಸೇನೆಯ ಬಲವು ಕುಂದಿದಂತಾಗಿದೆ. ಜರ್ಮನರು ಇಲ್ಲಿ ಫ್ರೆಂಚರ ಎರಡನೇ ಸೇನಾಸಾಲನ್ನು ನುಗ್ಗಿದನಂತರ ಅಂದರೆ ಡೊವಾಮೊಂಟ್ ಮತ್ತು ವಾಕ್ಸ್‌ಕೋಟೆಗಳ ಹಿಂದಿನ ಸಾಲನ್ನು ಹಿಡಿದನಂತರ ಕೆಲವು ಸಾರಿ ಮೇಲ್ಬಾಯಿದರೂ ಯಾವದೊಂದು ವಿಧದ ಪ್ರಯೋಜನವನ್ನು ಹೊಂದಲಿಲ್ಲ. ಇದರಿಂದ ಜರ್ಮನರ ಬಲವು ಕುಂದಿರಬೇಕೆಂದು ಊಹಿಸಬೇಕಾಗುತ್ತದೆ. ಕಳೆದ ಕೆಲವು ದಿವಸಗಳಿಂದ ಫ್ರೆಂಚರು ಜರ್ಮನರ ಮೇಲೆ ಅಲ್ಲಲ್ಲಿ ಬೀಳುತ್ತಿರುವ ಕೆಲಸದಲ್ಲೇ ತೃಪ್ತರಾಗದೆ ನುಗ್ಗಿಹೋಗಿ ಕದನ ಮಾಡುತ್ತಲಿರುವರು. ಈ ತಿಂಗಳಾರಂಭದಿಂದಲೇ ೭೦೦೦ ಶತ್ರುಸೇನಿಕರು ಫ್ರೆಂಚರ ಸೆರೆಬಿದ್ದಿರುವರಲ್ಲದೆ ಕಳೆದ ತಿಂಗಳಲ್ಲಿ ಕಳಕೊಂಡ ಎಲ್ಲಾ ಸ್ಥಳಗಳನ್ನು ಫ್ರೆಂಚರು ಪುನಃ ಹಿಂದಕ್ಕೆ ಪಡಕೊಂಡಿರುತ್ತಾರೆ. ಇದನ್ನೆಲ್ಲಾ ನೋಡುವಾಗ ಮಿತ್ರಮಂಡಲಿಯವರು ಬೇಗನೇ ಜಯಪತಾಕೆಯನ್ನು ಹಿಡಿಯುವದರಲ್ಲಿ ಅನುಮಾನವಿಲ್ಲ ಎಂದು ಹೇಳಬೇಕಾಗಿದೆ.

ಪಶ್ಚಿಮ ರಣರಂಗದಲ್ಲಿ.

ಪೊಜಿಯರ್‌ನಿನ ಪೂರ್ವದಲ್ಲಿ ಬ್ರಿಟಿಷರು ಮುಂದರಿಯುತ್ತಿದ್ದಾರೆ. ಕದನವು ಎಡೆಬಿಡದೆ ನಡೆಯುತ್ತಿದೆ. ಶತ್ರುಗಳು ಬ್ರಿಟಿಷ ಸೇನೆಯ ಹೊಸ ಕಂದಕಗಳನ್ನು ಅಭಿಯೋಗಮಾಡಲೆತ್ನಿಸಿ ಸೋತು ಹೋಗಿರುತ್ತಾರೆ. ಬ್ರಿಟಿಷ ಸೇನಿಕರು ಗೆದ್ದುಕೊಂಡ ಸ್ಥಳಗಳನ್ನು ಬಲಕಾಯಿಸುತ್ತಲಿದ್ದಾರೆ.

ಬಿಜಂಟಿನ್‌ಲಾ ಪೆಟಿಟಿನ ಉತ್ತರದಲ್ಲಿ ಬ್ರಿಟಿಷರು ಕೆಲವು ಸ್ಥಳಗಳನ್ನು ಪಡಕೊಂಡಿರುವರು. ಡೆಲ್‌ವಿಲ್ಲೆ ಅರಣ್ಯದಲ್ಲಿ ಮೇಲ್ಬಾಯಿದ ಶತ್ರುಗಳನ್ನು ಬ್ರಿಟಿಷರು ಹಿಂದಕ್ಕೆ ಓಡಿಸಿರುತ್ತಾರೆ. ಡೆಲ್‌ವಿಲ್ಲೆ ಅರಣ್ಯದಲ್ಲಿ ಶತ್ರುಗಳ ನಾಲ್ಕು ಸೇನಾಂಗಗಳು ರಾತ್ರಿಕಾಲ ಬ್ರಿಟಿಷರ ಮೇಲೆ ಅಭಿಯೋಗಮಾಡಿದಲ್ಲಿ ಬ್ರಿಟಿಷರು ಅವರನ್ನು ಹತ್ತಿರ ಬರಬಿಟ್ಟು ನಂತರ ಫಿರಂಗಿಗಳನ್ನು ಹಾರಿಸಿದ್ದರಿಂದ ಶತ್ರುಗಳು ಭೀಕರವಾದ ನಷ್ಟಪಟ್ಟು ಓಡಿಹೋದರು.

ಸೊಮ್ಮೆಯಲ್ಲಿಯೂ ಭೀಕರವಾದ ಕದನಗಳು ನಡೆದಿರುವವು. ಜರ್ಮನರು ಹೆಮ್‌ಅರಣ್ಯ ಮತ್ತು ಮೊನಾಕುಫಾರ್ಮಿನಲ್ಲಿ ಫ್ರೆಂಚರ ಮೇಲೆ ಅಭಿಯೋಗಮಾಡಿದರು. ಆದರೆ ಯಾವ ಪ್ರಯೋಜನವನ್ನೂ ಹೊಂದಲಿಲ್ಲ. ಫ್ರೆಂಚರು ಗೆದ್ದುಕೊಂಡ ಸ್ಥಳಗಳನ್ನು ಕಾಪಾಡಿಕೊಂಡಿರುವರು. ಸೊಮ್ಮೆಯ ದಕ್ಷಿಣದಲ್ಲಿ ಜರ್ಮನರ ಒಂದು ಕಂದಕವನ್ನು ಸ್ವಾಧೀನಮಾಡಿಕೊಂಡಿರುತ್ತಾರೆ. ಮ್ಯೂಸಿನ ಬಲಕಡೆಯಲ್ಲಿ ಜರ್ಮನರು ಭೀಕರವಾಗಿ ತೋಪುಗಳನ್ನು ಹಾರಿಸಿ ಥಿಯಾಮೊಂಟಿನಲ್ಲಿ ಫ್ರೆಂಚರು ಬಲಕಾಯಿಸಿಕೊಂಡಿದ್ದ ಕೆಲಸಗಳನ್ನು ಹಾಳುಮಾಡಬೇಕೆಂತ ಯತ್ನನಡಿಸಿದರು. ಆದರೆ ಫ್ರೆಂಚರ ತೋಪುಗಳು ಅವರ ಎಲ್ಲಾ ಪ್ರಯತ್ನಗಳು ನಿಷ್ಪ್ರಯೋಜಕವಾಗುವಂತೆ ಮಾಡಿದವು. ಜರ್ಮನರ ಸೇನಿಕರ ಕೆಲವು ಸಣ್ಣ ತಂಡಗಳು ಫ್ರೆಂಚರ ಕಂದಕಗಳ ಬಳಿಗೆ ತಲಪಿದವು. ಆದರೆ ಫ್ರೆಂಚರು ಕೂಡಲೇ ಅವನ್ನೆಲ್ಲಾ ಅಟ್ಟಿಬಿಟ್ಟಿರುತ್ತಾರೆ. ಥಿಯಾ ~~ಮೊಂಟಿನಲ್ಲಿಯೂ ಫ್ರೆಂಚರು ಮುಂದರಿದಿರುವರು. ಬ್ರಿ.ಶ್.ಡ.~~ ಹೆಮ್ ಮತ್ತು ಮೊನಾಕುಫಾರ್ಮಿನ ಮಧ್ಯೆ ಫ್ರೆಂಚರು ಶತ್ರುಗಳ ಬಲವಾದ ನೆಲೆಯನ್ನು ಸ್ವಾಧೀನಮಾಡಿಕೊಂಡು ಬಿನೆಕೊರ್ಟನಲ್ಲಿ ಒಂದು ಕಂದಕವನ್ನು ಹಿಡಿದಿರುತ್ತಾರೆ. ಜರ್ಮನ ಸೇನಿಕರೂ ಫ್ರೆಂಚರ ಸೆರೆಬಿದ್ದಿರುವರು. ವಾಕ್ಸ್-ಚಾಪ್ಟರ್-ಚೆನೊಯಿಸಿನಿಂದ ಡಾವ್‌ಲೊಪಿನ ವರೆಗೆ ಘೋರಕಾಳಗವು ನಡೆಯುತ್ತಿದೆ. ಶತ್ರುಗಳು ವಿಷಗ್ಯಾಸನ್ನು ಪ್ರಯೋಗಿಸಿ ಹಲವುಸಾರಿ ಹಲ್ಲೆಮಾಡಿ ನಿಷ್ಪ್ರಯೋಜಕರಾದರು. ಆದರೆ ಕಡೆಗೆ ಒಂದು ಕಡೆಯಲ್ಲಿ ಸ್ವಲ್ಪ ಮುಂದರಿದರು. ಇತರ ಎಲ್ಲಾ ಕಡೆಗಳಲ್ಲಿ ಬಹಳ ನಷ್ಟಪಟ್ಟು ಹಿಂದೆ ಓಡಿರುತ್ತಾರೆ. ಇಲ್ಲಿ ಶತ್ರುಗಳ ನೂರು ಸೇನಿಕರು ಫ್ರೆಂಚರ ಸೆರೆಬಿದ್ದಿರುವರು. ಮೊನಾಕುಫಾರ್ಮಿನಲ್ಲಿ ಮೇಲ್ಬಾಯಿದ ಶತ್ರುಗಳೂ ಹಿಮ್ಮೆಟ್ಟಿರುತ್ತಾರೆ ಫ್ರೆಂಚರು ಹೆಮ್‌ಅರಣ್ಯದ ಮತ್ತು ಮೊನಾಕು ಅರಣ್ಯದ ಮಧ್ಯೆ ನೆಲೆಗಳನ್ನು ಕಳ್ಕೊಂಡಿರುವರು. ಮ್ಯೂಸಿನ ಬಲಕಡೆಯಲ್ಲಿ ಫ್ರೆಂಚರು ಪಡಕೊಂಡ ಕಂದಕಗಳನ್ನು ಹಿಂದಕ್ಕೆ ಕಿತ್ತುಕೊಳ್ಳಲು ಜರ್ಮನರು ರೋಷಾವೇಶದಿಂದ ಹಲ್ಲೆಮಾಡಿದರು. ಆದರೆ ಫ್ರೆಂಚರು ತೋಪುಗಳಿಂದಲೂ ರೈಫಲ್ ಕೋವಿಗಳಿಂದಲೂ ಶತ್ರುಗಳ ಮೇಲೆಬಿದ್ದು ಅವರನ್ನು ಹಿಂದಕ್ಕೆ ಓಡಿಸಿದರು.

ಥಿಯಾಮೊಂಟ್-ಪ್ಲುರೆಯಲ್ಲಿ ಅತಿ ಭೀಕರವಾದ ಕದನವು ನಡೆಯುತ್ತಿದೆ. ಜರ್ಮನರು ರಾತ್ರಿಕಾಲ ಜೀವದ ಆಸೆ ಇಲ್ಲದೆ ಫ್ರೆಂಚರ ಮೇಲೆ ಹಲ್ಲೆಮಾಡಿದರು. ಥಿಯಾಮೊಂಟಿನಲ್ಲಿ ಜರ್ಮನರು ಅಭಿಯೋಗಮಾಡಿ ವಿಶೇಷ ನಷ್ಟಪಟ್ಟು ಹಿಮ್ಮೆಟ್ಟಿದರು. ಪ್ಲೂರೆಯಲ್ಲಿ ನಡೆದ ಕದನವೂ ಅತಿ ಭೀಕರವಾಗಿದೆ. ಪ್ಲೂರೆಯಿಂದ ಫ್ರೆಂಚರನ್ನು ಓಡಿಸಲು ಜರ್ಮನರು ಮಾಡಿದ ಪ್ರಯತ್ನವೂ ಸಾಧ್ಯವಾಗದೆ ಹೋಗಿದೆ.

ಪೂರ್ವ ರಣರಂಗ.

ಸ್ಟೊಕೋಡಿನ ಪಶ್ಚಿಮದಲ್ಲಿ ಜರ್ಮನರು ರೋಷಾವೇಶದಿಂದ ರುಶ್ಯನರ ಮೇಲೆ ಹಲ್ಲೆಮಾಡಿ ವಿಶೇಷ ನಷ್ಟಪಟ್ಟು ಹಿಮ್ಮೆಟ್ಟಿರುತ್ತಾರೆ. ರುಶ್ಯನರು ಸ್ಟೊಕೋಡನ್ನು ದಾಟಿ ಕೊವೆಲಿನ ಕಡೆಗೆ ೧೦ ಮೈಲು ಮುಂದರಿದಿರುತ್ತಾರೆ. ಸ್ಟೊಕೋಡಿನಲ್ಲಿ ಇನ್ನೂ ಎಡೆಬಿಡದೆ ಘೋರ ಕಾಳಗವು ನಡಿಯುತ್ತಿದೆ. ಸ್ಟವರ್ ನದಿಯನ್ನು ದಾಟಲು ಯತ್ನಿಸುತ್ತಿದ್ದ ಶತ್ರುಗಳೊಡನೆ ರುಶ್ಯನರು ಕಠಿಣ ಕಾಳಗ ಮಾಡಿ ಅವರನ್ನು ಹಿಂದಕ್ಕೆ ಓಡಿಸಿರುವರು. ಸ್ಟೊಕೊಡಿನ ಉಪನದಿಯ ಬಳಿ ರುಶ್ಯನರು ೬೦೦ ಜರ್ಮನರನ್ನೂ ೧೨ ಯಂತ್ರಚಾಲಿತ ಫಿರಂಗಿಗಳನ್ನೂ ಹಿಡಿದಿರುತ್ತಾರೆ.

ಟರ್ಕಿ.

ಕೌಕಾಸಸಿನಲ್ಲಿ ರುಶ್ಯನರು ಎರ್ಜಿಂಗಾನಿನ ಪಶ್ಚಿಮದಲ್ಲಿ ಸಿವಾಸಿನ ಕಡೆಗೆ ಮುಂದರಿಯುತ್ತಲಿದ್ದಾರೆ

ದಿಯಾರ್‌ಬಿಕಾರಿನ ಪ್ರಾಂತ್ಯದಲ್ಲಿ ರುಶ್ಯನರು ತುರ್ಕರೊಡನೆ ಸನೀಸು ಕಾಳಗಮಾಡಿ ತುರ್ಕಿ ಸೇನಿಕರನ್ನು ಸೋಲಿಸಿರುತ್ತಾರೆ. ಮುಶ್ ಮತ್ತು ಮಮಾಖಾತುನಿನಲ್ಲಿ ೩೦೦ ತುರ್ಕಿ ಸೇನಿಕರನ್ನು ಸೆರೆಹಿಡಿದಿರುತ್ತಾರೆ.

ಇಟೆಲಿ.

ಮೊಂಟೆಸಿಮೊನೆಯಲ್ಲಿ ಶತ್ರುಗಳು ಇಟಲಿಯನರ ಮೇಲೆ ಅಭಿಯೋಗಮಾಡಿ, ವಿಶೇಷ ನಷ್ಟಪಟ್ಟು ಹಿಮ್ಮೆಟ್ಟಿರುವರು. ಹೆಚ್ಚಿನ ವಿಶೇಷ ವರ್ತಮಾನಗಳು ಈ ರಣರಂಗದಿಂದ ಬಂದಿರುವದಿಲ್ಲ.

ಬಾಲ್ಕನ್.

ಇಟಲಿಯನರ ವಾಯುನಾವೆಗಳು ಡುರಾಜ್ಜೊದ ಮೇಲೆ ಹಲ್ಲೆಮಾಡಿರುವವು.

ಪೂರ್ವ ಆಫ್ರಿಕ

ಬೆಲ್ಜಿಯನ್ ಸೇನಿಕರು ಕಿಗೋಮ ಮತ್ತು ಉಜಿಜ ಎಂಬ ಟಂಗಾನಾಯಿಕ ಸರೋವರದ ಬಳಿ ಇದ್ದ ಜರ್ಮನರ ಸ್ಥಳಗಳನ್ನು ಸ್ವಾಧೀನಮಾಡಿಕೊಂಡಿರುತ್ತಾರೆ.

ಜಲಾಂತರ್ಗಾಮಿ ನಾವೆಗಳು.

ಡಚ್ಚರ "ಜೀಲೇಂಡ್" ಎಂಬ ಹಡಗವು ಜರ್ಮನರ ಜಲಾಂತರ್ಗಾಮಿ ನಾವೆಗೆ ತುತ್ತಾಗಿದೆ. ಇಂಗ್ಲಿಷರ ೬ ಟ್ರಾವಲರ್ಸ್ ದೋಣಿಗಳೂ ಇಟಲಿಯನರ "ಹೆಟೇಂಬ್ರೊ" ಹಡಗವೂ ನೋರ್ವೆಯವರ ೨ ಟ್ರಾವಲರ್ಸ್ ದೋಣಿಗಳೂ ಸ್ವೀಡನಿನವರ "ಹಿಡರ್ಕ್ಸ್ ವಾಲ್" ನಾವೆಯೂ ಇನ್ನು ಕೆಲವು ನಾವೆಗಳೂ ಶತ್ರುಗಳ ಜಲಾಂತರ್ಗಾಮಿ ನಾವೆಗಳಿಗೆ ತುತ್ತಾಗಿವೆ ಎಂಬ ವರ್ತೆ ಬಂದಿದೆ.

ವಾಯುನಾವೆಗಳು.

ಇಂಗ್ಲಾಂಡಿನ ಪೂರ್ವ ಕರಾವಳಿಯಲ್ಲಿ ಜರ್ಮನರ ವಾಯುನಾವೆಗಳು ಕಾಣಿಸಿಕೊಂಡು ಕೆಲವು ಬೊಂಬುಗಳನ್ನು ಹಾಕಿರುತ್ತವೆ. ಆದರೆ ವಿಶೇಷ ನಷ್ಟವಾದ ವಾರ್ತೆಗಳು ಬಂದಿರುವದಿಲ್ಲ. ೯ ಕುದುರೆಗಳು ಹತವಾದವು. ೩ ಕುದುರೆಗಳು ಗಾಯ ಒಡೆದವು. ಒಟ್ಟಿಗೆ ೬ ವಾಯುನಾವೆಗಳು ಈ ಕೆಲಸದಲ್ಲಿ ನಿರತವಾಗಿದ್ದಿರಬೇಕೆಂದೂ ಸುಮಾರು ೫೦ ಬೊಂಬುಗಳನ್ನು ಹಾಕಿರಬೇಕೆಂದೂ ಅಂದಾಜಾಗಿದೆ.

ಈಜಿಪ್ತ.

ಶತ್ರುಗಳ ೨ ವಾಯುನಾವೆಗಳು ಆಗೋಸ್ತು ತಾ. ೩ರಲ್ಲು ಸುವೇಜ್‌ಕಾಲುವೆಯ ಬಳಿ ಟಿಮ್ಸ ಸರೋವರ ಮತ್ತು ಇಸ್ಮಾಲಿಯ ಪಟ್ಟಣದ ಮೇಲೆ ಬೊಂಬುಗಳನ್ನು ಬಿಸಾಡಿರುತ್ತವೆ. ಆದರೆ ನಷ್ಟವೇನೂ ಸಂಭವಿಸಲಿಲ್ಲ ಎಂತ ಜನರಲ್ ಮುರ್ರೆಯವರು ಪ್ರಕಟಿಸಿರುತ್ತಾರೆ.

ತಾ. ೩ನೇ ಮಧ್ಯರಾತ್ರಿಯಿಂದ ಸುಮಾರು ೧೪ ಸಾವಿರ ಸೇನಿಕರ ಬಲವುಳ್ಳ ತುರ್ಕ ಸೇನೆಯು ಪೋರ್ಟುಸೆಡ್ಡಿನ ಪೂರ್ವದಲ್ಲಿ ಸುಮಾರು ೬-೮ ಮೈಲುಗಳ ರಣರಂಗದಲ್ಲಿ ಬ್ರಿಟಿಷ ನೆಲೆಗಳ ಮೇಲೆ ಹಲ್ಲೆಮಾಡಿರುವವು. ಆದರೆ ಬ್ರಿಟಿಷರು ಬಲಕಾಯಿಸಿಕೊಂಡಿದ್ದ ಈ ನೆಲೆಗಳಿಗೆ ಅವರ ಅಭಿಯೋಗದಿಂದ ಏನೊಂದೂ ಅಪಾಯವಾಗಲಿಲ್ಲ. ದಕ್ಷಿಣ ಪಾರ್ಶ್ವದಲ್ಲಿ ನಡೆಯುವ ಕದನವೂ ಬ್ರಿಟಿಷರ ಅನುಕೂಲವಾಗಿಯೇ ಇದೆ. ಸುಮಾರು ೪೦೦—೫೦೦ ತುರ್ಕಿಸೇನಿಕರು ಬ್ರಿಟಿಷರ ಸೆರೆಬಿದ್ದಿರುವರು. ಟಿನ್ಸಾ ಅಖಾತದಲ್ಲಿರುವ ಬ್ರಿಟಿಷ ಯುದ್ಧಹಡಗಗಳಿಂದ ಬ್ರಿಟಿಷರ ಭೂಸೇನೆಗೆ ಬಹಳ ಸಹಾಯವಾಗುತ್ತಿದೆ. ಬ್ರಿಟಿಷರು ಶತ್ರುಗಳನ್ನು ಹಿಂದಟ್ಟುತ್ತಿದ್ದಾರೆ. ಈಗ ಯುದ್ಧನಡೆಯುತ್ತಿರುವ ರೊಮಾನಿ ಎಂಬ ಸ್ಥಳವು ಸುವೇಜ್ ಕಾಲುವೆಗೆ ೧೮ ಮೈಲು ಪೂರ್ವದಲ್ಲಿ ಇದೆ.

ತಾ. ೪-೫ರಲ್ಲಿ ನಡೆದ ಕದನಗಳಲ್ಲಿ ಗಾಯ ಒಡೆಯದ ೩೧೦೦ ತುರ್ಕಿ ಸೇನಿಕರು ಬ್ರಿಟಿಷರ ಸೆರೆಬಿದ್ದಿರುತ್ತಾರೆ. ಬ್ರಿಟಿಷರು ತುರ್ಕರನ್ನು ೧೮ ಮೈಲುಗಳವರೆಗೆ ಓಡಿಸಿಕೊಂಡು ಹೋಗಿರುವರು. ಅದಲ್ಲದೆ ಸುವೇಜ್ ಕಾಲುವೆಯ ಬಳಿ ಇರುವ ಎಲ್ಲಾ ಬಾವಿಗಳು ಬ್ರಿಟಿಷರ ಸ್ವಾಧೀನವಾಗಿರುವದರಿಂದ ತುರ್ಕಿ ಸೇನಿಕರು ರೋಮಾನಿಗೆ ೧೦ ಮೈಲುಗಳ ದೂರದಲ್ಲಿರುವ ಅಂಗಾರ್ತಿನ ಎಂಬಲ್ಲಿಂದ ಮೆಲ್ಲನೆ ನಡೆಯಬಹುದಾದ ಒಂಟೆಗಳ ಮೂಲಕ ನೀರು ತರಬೇಕಾಗಿದೆ. ಇಲ್ಲಿ ಶತ್ರುಗಳ ಸುಮಾರು ೧೪,೦೦೦ ಸೇನಿಕರು ಇರಬಹುದಾದರೂ ಜನರಲ್ ಮುರ್ರೆಯವರ ಅಪಾರ ಸೇನೆಯನ್ನು ಎದುರಿಸಲು ಅವರಿಗೆ ಶಕ್ತಿಸಾಲದು.

ಉತ್ತರ ಹಿಂದೂಸ್ಥಾನ.

ಜುಲಾಯಿ ತಾ. ೨೯ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ೨೧೭೦ ಮಂದಿಗೆ ಪ್ಲೇಗಬೇನೆಯು ಸೋಂಕಿ ೧೫೪೩ ಮಂದಿ ಮೃತರಾದರು. ಈ ಪೈಕಿ ಮುಂಬಾಯಿ ಸಂಸ್ಥಾನದಲ್ಲಿ ೫೪೩, ಮದ್ರಾಸ್ ೭೦, ಬಂಗಾಳ ೧, ಬಿಹಾರ್ ೩೩, ಸಂಯುಕ್ತ ಸಂಸ್ಥಾನ ೨೫, ಪಂಜಾಬು ೨೭, ಬರ್ಮ ೧೧೯, ಮಧ್ಯ ಸಂಸ್ಥಾನ ೨೬, ಮೈಸೂರು ೨೨೨, ಹೈದರಾಬಾದ್ ೪೯೨ ಮರಣಗಳಾಗಿರುವವು

ಕಾಥಿವಾಡದಲ್ಲಿ ದನಗಳ ಗೋಶಾಲೆಗಳು ವಿಶೇಷವಾಗಿ ಸ್ಥಾಪಿಸೋಣಾಗಿರುತ್ತವೆ. ಭಾವನಗರದ ಮಹಾಜನಗಳು ಸುಮಾರು ೧೦,೦೦೦ ರೂಪಾಯಿ ವೆಚ್ಚದಿಂದ ಆ ಪ್ರಾಂತ್ಯದ ದನಕರುಗಳನ್ನು ಉಚಿತವಾಗಿ ಕಾಪಾಡಬೇಕೆಂದು ಯೋಚಿಸಿರುತ್ತಾರೆ.

ಸರ್. ಎಲ್. ರೋಜರೆಂಬವರು ವಾಂತಿಭೇದಿ ರೋಗಕ್ಕೆ ಹೈಪರ್ ಟಾನಿಕ್ ಸಲೈನ್ ಎಂಬ ಒಂದು ಔಷಧವನ್ನು ಕಂಡುಕೊಂಡಿರುತ್ತಾರೆ. ಇದನ್ನು ಬರ್ಮದೇಶದ ಮತ್ತು ಮಾಂಡಲೆಯ ಅನೇಕ ಆಸ್ಪತ್ರೆಗಳಲ್ಲಿ ಉಪಯೋಗಿಸಿದ್ದಲ್ಲಿ ಸೇಕಡಾ ೬೬ರಂತೆ ಗುಣಕಂಡುಬಂದಿರುವದು.

ಬೊಂಬಾಯಿ ಸರಕಾರದ ವ್ಯವಸಾಯ ಶಾಖೆಯ ರಸಾಯನ ಶಾಸ್ತ್ರಜ್ಞರಾದ ಮಿ॥ ಹೆರೊಲ್ಡ್ ಮ್ಯಾನ್ ಎಂಬವರು ಹಿಂದೂಗಳಿಂದ ತಾಂಬೂಲ ಚರ್ವಣಕ್ಕಾಗಿ ಉಪಯೋಗಿಸುವ ವೀಳ್ಯದೆಲೆಯನ್ನು ರಸಾಯನ ವಿದ್ಯೆಯ ಮೂಲಕ ಪರಿಶೋಧಿಸಿ ಅದರಲ್ಲಿ ದೇಹಕ್ಕೆ ಬೇಕಾದ ಸ್ನಿಗ್ಧ ಪದಾರ್ಥಗಳೂ ಸಕ್ಕರೆಯೂ

ವದೆಂದೂ ಇವುಗಳು ಸೂರ್ಯೋದಯದ ಮೊದಲು ಹೆಚ್ಚು ಪರಿಮಾಣದಲ್ಲಿದ್ದು ಸೂರ್ಯೋದಯದನಂತರ ಕಡಿಮೆಯಾಗುವದೆಂದೂ ಆದುದರಿಂದ ಸೂರ್ಯೋದಯದ ಮೊದಲು ಕಿತ್ತಿಟ್ಟುಕೊಳ್ಳುವದು ಉತ್ತಮವೆಂದೂ ತಿಳಿಸಿರುತ್ತಾರೆ. ಇದರಿಂದ ಹಿಂದೂಗಳ ತಾಂಬೂಲ ಚರ್ವಣವು ಹಿಂದೂ ಶಾಸ್ತ್ರ ಸಮ್ಮತವಾಗಿರುವದಲ್ಲದೆ ವೈದ್ಯಶಾಸ್ತ್ರ ಸಮ್ಮತವೂ ಆಗಿರುವದೆಂದು ವ್ಯಕ್ತವಾಗುತ್ತದೆ.

ಚಂದ್ರನಗರದಲ್ಲಿ ಒಬ್ಬ ಸರಕಾರಿ ನೌಕರನು ಮೋಟರ್ ಗಾಡಿಯಲ್ಲಿ ಕುಳಿತು ಹೋಗುತ್ತಿದ್ದಾಗ ಬೀದಿಯಲ್ಲಿ ೫ ವರ್ಷದ ಬಾಲಕನೊಬ್ಬನು "ಏರ್ ಗನ್" ಎಂಬ ಆಡುವ ಕೋವಿಯನ್ನು ಹಿಡಿದುಕೊಂಡು ಆಡುತ್ತಿದ್ದನು. ಇದನ್ನು ಆ ನೌಕರನು ಕಂಡು ಕೂಡಲೇ ಗಾಡಿಯಿಂದಿಳಿದು ಅಲ್ಲಿನ ಫ್ರೆಂಚ ಪೋಲೀಸು ಠಾಣೆಗೆ ಹೋಗಿ ಸದರಿ ಹುಡುಗನು ತನಗೆ ಗುರಿಯಿಟ್ಟು ತುಪಾಕಿಯನ್ನು ಹಿಡಿದಿದ್ದನೆಂದು ತಿಳಿಸಿದನು. ಮಾರಣೇ ದಿನ ಆ ಬಾಲಕನು ತುಪಾಕಿ ಸಹಿತವಾಗಿ ಪೋಲಿಸ್ ಆಫೀಸಿಗೆ ತರಿಸಲ್ಪಟ್ಟನು. ಪೋಲೀಸು ಆಫೀಸರರೆಲ್ಲರೂ ಆ ಹುಡುಗನನ್ನು ನೋಡಿ ನಕ್ಕುಬಿಟ್ಟರು. ಪೋಲೀಸ್ ಕಮಿಷನರ್ ಸಾಹೇಬರು ಅಪರಾಧಿಯಾದ ಆ ಬಾಲಕನಿಗೆ ನಾಲ್ಕಾಣೆಯನ್ನು ಇನಾಮಾಗಿ ಕೊಟ್ಟು ಕಳುಹಿಸಿಬಿಟ್ಟರು.

"ಇಂಡಿಯನ್ ಕನ್ಸಾಲಿಡೇಶನ್ ಬಿಲ್" ಎಂಬ ಮಸೂದೆಯು ಈಚೆಗೆ ಬ್ರಿಟಿಷ ಪಾರ್ಲಿಮೆಂಟ ಸಭೆಯ ಮುಂದೆ ತರಲ್ಪಟ್ಟಿರುವದೆಂದೂ ಈ ಮಸೂದೆಯಲ್ಲಿ ಹಿಂದೀ ಜನರಿಗೆ ಬಾಧಕರವಾಗಿರುವ ಕೆಲವು ವಿಷಯಗಳನ್ನು ತೆಗೆದುಹಾಕಬೇಕೆಂಬುದಾಗಿ ಹಿಂದೂಸ್ಥಾನದಲ್ಲಿ ಸಾರ್ವಜನಿಕ ಸಭೆಗಳು ಕೂಡುತ್ತಿರುವವೆಂದೂ ಹಿಂದಿನ ಸಂಚಿಕೆಯಲ್ಲಿ ತಿಳಿಸಿರುವೆವಷ್ಟೆ. ಈ ತಿದ್ದುಪಡಿ ಮಸೂದೆಯ ಕುರಿತು ತಕ್ಕ ಆಲೋಚನೆ ನಡಿಸಿ ಅಭಿಪ್ರಾಯಗಳನ್ನು ಬ್ರಿಟಿಷ ಸರಕಾರದವರಿಗೆ ಸೂಚಿಸುವ ಉದ್ದೇಶದಿಂದ ಒಂದು ಕಮಿಟಿಯು ಏರ್ಪಡಿಸೋಣಾಗಿತ್ತು. ಈ ಕಮಿಟಿಯವರು ತಕ್ಕ ಆಲೋಚನೆ ನಡಿಸಿ, ತಿದ್ದುಪಡಿ ಮಸೂದೆಯಲ್ಲಿ ಹಿಂದೀ ಜನರಿಗೆ ವಿಶೇಷ ಬಾಧಕಕರವಾಗಿರುವ ಅಂದರೆ ಸ್ಟೇಟ್ ಸೆಕ್ರೆಟರಿಯವರ ಮೇಲೆ ಹಿಂದೀ ಜನಗಳು ದಾವೆ ಮಾಡಕೂಡದೆಂಬ ಕಲಮನ್ನೂ ಯಾವದಾದರೂ ವ್ಯಾಪಾರ ಸಂಘಕ್ಕೆ ಸಂಬಂಧಪಟ್ಟವನು ಕಾರ್ಯನಿರ್ವಾಹಕ ಸಭೆಗೆ ನೇಮಿಸಲ್ಪಡಬಹುದೆಂಬ ಕಲಮನ್ನೂ ತೆಗೆದುಹಾಕಬೇಕಾಗಿ ಸೂಚಿಸಿರುತ್ತಾರೆ ಎಂತ ತಿಳಿದುಬಂದಿರುತ್ತದೆ. ಇದರಿಂದ ಹಿಂದೀ ಜನರು ಬ್ರಿಟಿಷ ಕಾರ್ಯಭಾರದ ಆನಾದಿಯಿಂದ ಅನುಭವಿಸಿಕೊಂಡು ಬಂದಿದ್ದ ಹಕ್ಕು ಇನ್ನೂ ಉಳಿದಂತಾಯಿತು. ಆದರೆ ದೇಶೀಯ ಸಂಸ್ಥಾನಗಳ ಪ್ರಾಜರನ್ನು ಬ್ರಿಟಿಷ ಹಿಂದೂಸ್ಥಾನದ ನ್ಯಾಯವಿಧಾಯಕ ಸಭೆಗೆ ಆರಿಸಬಹುದು ಎಂಬಿತ್ಯಾದಿ ಆಕ್ಷೇಪಕರವಾದ ವಿಷಯಗಳೂ ಇನ್ನೂ ಆ ಮಸೂದೆಯಲ್ಲಿ ಹಾಗೆಯೇ ಉಳಿದಿವೆ.

ಜೆಡ್ಡ ಬಂದರದೊಡನೆ ವ್ಯಾಪಾರಮಾಡಬಹುದೆಂತ ಇಂಡಿಯಾ ಸರಕಾರದವರು ಪ್ರಕಟಿಸಿರುತ್ತಾರೆ. ಹಾಜಿ ಯಾತ್ರೆಗೆ ಹೋಗುವ ಯಾತ್ರಿಕರ ವಿಷಯವಾಗಿಯೂ ತಕ್ಕ ಏರ್ಪಾಡುಗಳು ಮಾಡಲ್ಪಟ್ಟಿವೆ.

ಅಲ್ಲಹಾಬಾದಿನ ವಿದ್ಯಾಖಾತೆಯ ಡಿರೆಕ್ಟರರವರ ಇದೊಬಿಸಸ್ ಡೆಲಾ ಫೊಸ್ಸೆಯವರು ನಾನಿಟಾಲಿ ಅರ್ಥವನ್ನಾದು.

ನಿಂದ ಲಕ್ನೋ ನಗರಕ್ಕೆ ಅಗ್ಗಾಡಿಮೇಲೆ ಪ್ರಯಾಣಮಾಡುತ್ತಿರುವಾಗ ಅವರ ಕಂಪಾರ್ಟಮೆಂಟಿನಲ್ಲಿ ಅವಿತು ಕುಳಿತಿದ್ದ ಒಬ್ಬ ಕಳ್ಳನು ಅವರ ಹಣ ಇತ್ಯಾದಿಗಳನ್ನು ಕೊಡಬೇಕೆಂದು ಬೆದರಿಸಿದನು. ಆದರೆ ಆ ಹೆಂಗಸು ಎದುರಿಸಿದ್ದರಿಂದ ಕಳ್ಳನು ಅವಳೊಡನೆ ಹೋರಾಡಿ ಕಾಲಿನ ಕೀಲನ್ನು ನೋವುಪಡಿಸಿ, ಹತ್ತಿರದ ಕೋಣೆಗೆ ಬಲತ್ಕಾರದಿಂದ ಎಳದುಹಾಕಿ, ಅವಳ ಒಡವೆಗಳನ್ನು ಕಿತ್ತುಕೊಂಡು ಪರಾರಿಯಾಗಿರುವನು ಎಂಬ ವಾರ್ತೆ ಬಂದಿದೆ.

ಕುರುಡ ಮತ್ತು ಮೂಗ ಬಾಲಕರಿಗೆ ವಿದ್ಯಾಭ್ಯಾಸ ಕೊಡುವ ಸಂಬಂಧ ಹೆಚ್ಚಿನ ಸಿಗಾ ಕೊಡುವಂತೆ ಇಂಡಿಯಾ ಸರಕಾರದವರು ಸ್ಥಳಿಕ ಸರಕಾರಗಳಿಗೆ ಸೂಚಿಸಿರುತ್ತಾರೆ. ಹಿಂದೂಸ್ಥಾನದಲ್ಲಿ ಕಳೆದ ಖಾನೆಸುಮಾರಿ ಲೆಖ್ಖದಪ್ರಕಾರ ೫-೧೪ ವರ್ಷ ವಯಸ್ಸಿನ ೪೧,೫೫೮ ಕುರುಡರಾದ ಮಕ್ಕಳೂ ೨೨,೨೦೪ ಕಿವುಡ ಮೂಗ ಮಕ್ಕಳೂ ಇದ್ದಾರೆ. ಬ್ರಿಟಿಷ ಹಿಂದೂಸ್ಥಾನದಲ್ಲಿ ಇಂಥಾ ಮಕ್ಕಳಿಗಾಗಿ ೧೮ ಶಾಲೆಗಳು ಮಾತ್ರ ಇವೆ. ಸುಮಾರು ಇಂಥಾ ೫೦೦ ಮಕ್ಕಳು ಮಾತ್ರ ವಿದ್ಯಾಭ್ಯಾಸಮಾಡುತ್ತಿದ್ದಾರೆ. ಆದುದರಿಂದ ಈ ವಿಷಯದಲ್ಲಿ ಸರಕಾರದವರು ಹೆಚ್ಚಿನ ಸಹಾಯ ಮಾಡಿ ಈ ಮಕ್ಕಳಿಗೆ ವಿದ್ಯಾಭ್ಯಾಸ ಕೊಡುವದು ಶ್ಲಾಘ್ಯವಾದುದೆಂದು ಇಂಡಿಯಾ ಸರಕಾರದವರು ಅಭಿಪ್ರಾಯಪಟ್ಟು ಸ್ಥಳಿಕ ಸರಕಾರಗಳವರಿಗೆ ಈ ವಿಷಯವಾದ ತಮ್ಮ ಅಭಿಪ್ರಾಯಗಳನ್ನು ತಿಳಿಯಪಡಿಸಿರುತ್ತಾರೆ.

ಹಿಂದೂಸ್ಥಾನದ ವೈಸರಾಯರಾಗಿದ್ದ ಹಾರ್ಡಿಂಜ ಪ್ರಭುಗಳವರಿಗೆ ಡಿಲ್ಲಿಯಲ್ಲಿ ಬೊಂಬು ಬಿಸಾಡಿ ಆದ ಗಾಯಗಳಿಂದ ಅವರು ಗುಣಪಟ್ಟ ಸಂತೋಷಾರ್ಥವಾಗಿ ಏರ್ಪಡಿಸೋಣಾದ ಫಂಡಿನಲ್ಲಿ ಕೂಡಿದ ಸುಮಾರು ಒಂದೂವರೆ ಲಕ್ಷ ರೂಪಾಯಿಯು ಹಾರ್ಡಿಂಜ ಪ್ರಭುಗಳವರಿಗೆ ಕೊಡೋಣಾಗಿತ್ತು. ಹಾರ್ಡಿಂಜ ಪ್ರಭುಗಳವರು ಈಗತಾನೇ ಈ ರೂಪಾಯಿಗಳನ್ನು ಡಿಲ್ಲಿಯಲ್ಲಿ ಸ್ಥಾಪಿಸೋಣಾದ ಲೇಡಿ ಹಾರ್ಡಿಂಜ ಆಸ್ಪತ್ರೆಗೆ ದಾನಮಾಡಿರುತ್ತಾರೆ.

ಅಲ್ಲಹಾಬಾದಿಗೆ ಸೇರಿದ ಯುನಾವೊ ಡಿಸ್ಟ್ರಿಕ್ಟಿನ ಹಿಂದೂಗಳು ಸಭೆಕೂಡಿ ಮುನ್ಸಿಪಲ್ ಕೌನ್ಸಿಲರ ಚುನಾವಣೆಗೆ ಹಿಂದೂ ಮೆಂಬರರು ನಿಲ್ಲಕೂಡದೆಂದೂ ಕೌನ್ಸಿಲಿನಲ್ಲಿದ್ದ ಎಲ್ಲಾ ಹಿಂದೂ ಮೆಂಬರರು ರಾಜಿನಾಮೆ ಕೊಡಬೇಕೆಂದೂ ನಿರ್ಣಯಿಸಿರುತ್ತಾರೆ. ಹೊಸ ಮುನ್ಸಿಪಾಲ್ ಆಕ್ಟಿಗೆ ವಿರೋಧವಾಗಿ ಆ ಮುನ್ಸಿಪಾಲಿಟಿಯ ೬ ಮಂದಿ ಹಿಂದೂ ಮೆಂಬರರೂ ರಾಜಿನಾಮೆ ಕೊಟ್ಟಿರುತ್ತಾರೆ.

ದಕ್ಷಿಣ ಹಿಂದೂಸ್ಥಾನ.

ಮದ್ರಾಸಿನಲ್ಲಿ ಎಕೌಂಟಾಂಟ್ ಜನರಲರಾಗಿದ್ದು ಈಗ ತಾನೇ ಕೆಲಸದಿಂದ ನಿವೃತ್ತರಾಗಿರುವ ರಾ। ಕೆ. ಎಲ್. ದತ್ತರವರು ಮೈಸೂರು ಸಂಸ್ಥಾನದ ಲೆಕ್ಕ ಪರಿಶೋಧನಾ ಇಲಾಖೆಯನ್ನು ಏರ್ಪಡಿಸುವರೆ ತಿಂಗಳು ೧ಕ್ಕೆ ೨೫೫೦ ರೂಪಾಯಿ ಸಂಬಳದ ಮೇಲೆ ಕರೆಯಿಸಲ್ಪಟ್ಟಿರುವರು. ಈ ನೇಮಕವು ಮೂರು ತಿಂಗಳ ಮಾತಿಗಾಗಿರುವದು.

ಇದೇ ತಾ. ೩ರಲ್ಲು ಮದ್ರಾಸ್ ನ್ಯಾಯವಿಧಾಯಕ ಸಭೆಯು ಕೂಡಿ ಬಂತು. ನ್ಯಾಯವಿಧಾಯಕ ಸಭೆಗೆ ಆರಿಸಲ್ಪಟ್ಟ ಮತ್ತು ನೇಮಿಸಲ್ಪಟ್ಟ ಹೊಸ ಮೆಂಬರರು ನಿಯಮಕ್ಕನುಸಾರವಾಗಿ ಪ್ರತಿಜ್ಞೆ ಮಾಡಿಕೊಂಡು ಆಸೀನರಾದ ನಂತರ ಮದ್ರಾಸ್ ಇರಿಗೇಷನ್ ಸೆಸ್ ಆಕ್ಟು, ಮದ್ರಾಸ್ ಸಿವಿಲ್ ಕೋರ್ಟು ಆಕ್ಟು, ಮದ್ರಾಸ್ ಡಿಸ್ಟ್ರಿಕ್ಟ್ ಮುನ್ಸಿಪಾಲಿಟಿ ಆಕ್ಟುಗಳಿಗೆ ಗವರ್ನರ ಜನರಲರ ಸಮ್ಮತಿ ಸಿಕ್ಕಿರುವದೆಂತ ಸಭಾ ಪ್ರೆಸಿಡೆಂಟರು ತಿಳಿಯಪಡಿಸಿದರು. ಬಳಿಕ ಮಾನ್ಯ ಸರ್. ಹರೋಲ್ಡ ಸ್ಟುಅರ್ಟರವರು ೧೮೮೨ನೇ ಇಸವಿಯ ಪ್ರೆಸಿಡೆನ್ಸಿ ಸ್ಮಾಲ್‌ಕೋಸ್ ಕೋರ್ಟು ಆಕ್ಟನ್ನು ತಿದ್ದುಪಡಿ ಮಾಡಬೇಕೆಂಬ ಸೂಚನೆಯನ್ನು ಸಭೆಯ ಮುಂದಿಟ್ಟರು. ಈ ವಿಷಯ ಚರ್ಚೆ ನಡೆದು ಬಹುಮತದಿಂದ ಇವರ ಸೂಚನೆಗೆ ಸಮ್ಮತಿ ದೊರೆಯಿತು. ತರುವಾಯ ಗವರ್ನರ ಪ್ರಭುಗಳವರು ಹೊಸ ಮೆಂಬರರಿಗೆ ಕಾಲೋಚಿತ ಭಾಷಣವನ್ನು ಕೊಟ್ಟರು. ಕಡೆಗೆ ಗವರ್ನರ್ ಜನರಲ್ ಕೌನ್ಸಿಲಿಗೆ ಮೆಂಬರರನ್ನು ಚುನಾಯಿಸುವ ಕೆಲಸವು ನಡೆಯಿತು. ಈ ಚುನಾವಣೆಯಲ್ಲಿ ಮಾನ್ಯ ವಿ. ಎಸ್. ಶ್ರೀನಿವಾಸ ಶಾಸ್ತ್ರಿಯವರಿಗೆ ೧೭ ಓಟುಗಳೂ ಮಾನ್ಯ ಬಿ. ಎನ್. ಶರ್ಮ ೧೭ ಓಟುಗಳೂ, ಮ। ರಾ। ಸಿ. ವಿಜಯರಾಘವಾಚಾರ್ಯರಿಗೆ ೧೪ ಓಟುಗಳೂ, ಡಾಕ್ಟರ್ ನಾಯರರಿಗೆ ೧೦ ಓಟುಗಳೂ ದೊರಕಿದವು. ಹೀಗೆ ಮಾನ್ಯ ವಿ. ಎಸ್. ಶಾಸ್ತ್ರಿಯವರೂ ಮಾನ್ಯ ಬಿ. ಎನ್. ಶರ್ಮರವರೂ ಶ್ರೇಷ್ಠ ನ್ಯಾಯವಿಧಾಯಕ ಸಭೆಯ ಮೆಂಬರರಾಗಿ ಆರಿಸಲ್ಪಟ್ಟರು.

ಕೊಚ್ಚಿನ್ ರಾಜರವರು ಕಿಚನರ್ ಮೆಮೋರಿಯಲ್ ಫಂಡಿಗೆ ರೂ. ೧೦೦೦ ವಂತಿಗೆ ಕೊಟ್ಟಿರುವರು.

ಮದ್ರಾಸಿನ ಡೆಡ್‌ಲೆಟರ್ ಆಫೀಸಿನ ಮೆನೇಜರ್ ಮಿ। ವೈ. ಎಲಿಯೊಟ್ ಎಂಬವರು ಮದ್ರಾಸಿನ ಪಾಚಪ್ಪ ಕಾಲೇಜಿನ ವಿದ್ಯಾರ್ಥಿ ಕೃಷ್ಣಸ್ವಾಮಿ ಐಯ್ಯರ್ ಎಂಬವನಿಗೆ ಹೊಡದಕೊಬದಾಗಿ ವಿಚಾರಣೆಗೆ ಗುರಿಮಾಡಲ್ಪಟ್ಟು ೫ ರೂಪಾಯಿಯ ಜುಲುಮಾನೆಯನ್ನು ಕೊಟ್ಟರು. ಕೃಷ್ಣಸ್ವಾಮಿಯು ಚೆಟ್‌ಪುಟ್ ಸ್ಟೇಶನಿಂದ ಫೋರ್ಟು ಸ್ಟೇಶನಿಗೆ ಪ್ರಯಾಣಮಾಡಲಿಕ್ಕೆ ಟಿಕೇಟು ತಕ್ಕೊಂಡು ೩ನೇ ತರಗತಿಯ ರೈಲ್ವೇಗಾಡಿಯೊಳಗೆ ನುಗ್ಗಿದಾಗ ಆಪಾದಿತನು ಕೃಷ್ಣಸ್ವಾಮಿಗೆ ಅವಾಚ್ಯಮಾತಿನಿಂದ ಬೈದು ತಲೆಯ ಮೇಲೆಯೂ ಮುಖದಮೇಲೆಯೂ ಹೊಡೆದನು ಎಂಬದಾಗಿ ಈ ಮೊಕದ್ದಮೆಯಲ್ಲಿ ಮುದ್ದೈಯ ವಾದವಾಗಿತ್ತು. ಮುದ್ದೈಯು ಯೂರೋಪಿಯನರಿಗಾಗಿ ರಿಜರ್ವ ಮಾಡಲ್ಪಟ್ಟ ಕಂಪಾರ್ಟಮೆಂಟಿಗೆ ನುಗ್ಗಿ ತನ್ನನ್ನು ಅವಮಾನಪಡಿಸಿದ್ದರಿಂದ ಸಿಟ್ಟುಗೊಂಡು ತಾನು ಹಾಗೆ ಮಾಡಿದೆನೆಂದು ಆಪಾದಿತನ ವಾದವಾಗಿತ್ತು. ಆದರೆ ಮೇಜಿಸ್ಟ್ರೇಟರು ಕೃಷ್ಣಮೂರ್ತಿಯು ಆಪಾದಿತನನ್ನು ಅವಮಾನಪಡಿಸಿದ್ದು ಹೇಗೆ ಎಂದು ಆಪಾದಿತನನ್ನು ಕೇಳಿದ್ದಲ್ಲಿ ತಕ್ಕದಾದ ಉತ್ತರವು ದೊರಕದ್ದರಿಂದ ಆಪಾದಿತನಿಗೆ ೫ ರೂ. ಜುಲುಮಾನೆ ವಿಧಿಸಿದರು.

ದಕ್ಷಿಣ ಕನ್ನಡ.

WANTED.

A permanent Shroff for the Canara Bank, Limited, Mangalore. Decent Salary. Security wanted.

For particulars apply to the undersigned.

P. Gopal Naik.
Secretary.

P. D. LIMA.

Dental Surgeon, Mangalore.

ಇವರು ಈಗ ತಾನೇ ಸರ್ಕೀಟಿನಿಂದ ಹಿಂತೆರಳಿ ಬಂದಿರುವರು. ಅಮೇರಿಕದಿಂದ ಭಾರೀ ಕೃತಕ ಧಂತಗಳನ್ನು ತರಿಸಿಕೊಂಡಿಟ್ಟಿರುವರು. ಈ ಸುಸಮಯವನ್ನು ಕಳಕೊಳ್ಳಬೇಡಿರಿ. ಮಿತವಾದ ದರದಲ್ಲಿ ಹಲ್ಲುಗಳನ್ನು ಸರಿಪಡಿಸಿಕೊಡುವರು.

ಪಿ. ಡಿ. ಲಿಮಾ.
ದಂತ ವೈದ್ಯರು, ಒಡೆಯರರ ಆಫೀಸಿನ ಬಳಿ,
ಮಂಗಳೂರು

FOR IMMEDIATE SALE.

A Mulgeni property, near Kadri Post Office, yeilding a net income of Rs. 211—3—0.

Apply to:—

Dr. A. A. PEREIRA,
Camp Sidapur,
COORG.

ಮಾರಾಟಕ್ಕಿದೆ.

ಕದ್ರಿ ಪೋಸ್ಟ ಆಫೀಸಿನ ಬಳಿ ರೂ. 211—3—0 ಐನ ಹುಟ್ಟುವಳ್ಳಿ ಇರುವ ಒಂದು ಮೂಲಗೇಣಿ ಆಸ್ತಿಯು ತ್ವರ್ಯದಲ್ಲಿ ಮಾರೋಣಾಗುವದು—ಬೇಕಾದವರು ಕೆಳಗಿನ ವಿಳಾಸಕ್ಕೆ ಬರಿಯುವದು.

ಡಾಕ್ಟರ್ ಎ. ಎ. ಪೆರೇರ,
ಕ್ಯಾಂಪ್ ಸಿದ್ಧಾಪುರ,
ಕೊಡಗು.

ನೋಟೀಸು.

ಮೆಸರ್ಸ್ ಸ್ಟೀವನ್ ಎಂಡ್ ಸನ್,
ಬಿಸ್ಕುಟು ಮೆನ್ಯುಫೆಕ್ಚರರು.

ಇವರು ತಮ್ಮ ಶಾಪನ್ನು ಬಲ್ಮಠ ರಸ್ತೆಯಲ್ಲಿರುವ ಮೆ| ಜೊಕಿನ್ ಲೊರೆನ್ಸ್ ಸಾಲ್ಡಾಂಞರ ಮನೆಯ ಎದುರಿರುವ ಮೆ| ಮೋನ ಪ್ಯಾಸರ ಕಟ್ಟಡಕ್ಕೆ ವೈದಿರುತ್ತಾರೆ.

ಸ್ಟಿವನ್ ಎಂಡ್ ಸನ್.
ಮಂಗಳೂರು.

ನೋಟೀಸು.

ಸ್ವದೇಶಾಭಿಮಾನಿ ಪತ್ರಿಕೆಯ ಆಗೋಸ್ತು ತಾ. 4ನೇ ಸಂಚಿಕೆಯೊಂದಿಗೆ ಸಪ್ಲಿಮೆಂಟಾಗಿ ಇಟ್ಟ ರಾ| ಎನ್. ಎ. ಶೀನಪ್ಪ ಹೆಗ್ಗಡೇರ ಜ್ಯಾಹಿರಾತಿನಲ್ಲಿ ಮುಲ್ಕಿ ಕವಿ ರಾಮಕೃಷ್ಣಯ್ಯನವರಿಂದ ರಚಿಸಲ್ಪಟ್ಟ ವೆಂಕಟಗಿರಿ ಮಹಾತ್ಮೆ ಪ್ರತಿ ಒಂದಕ್ಕೆ ರೂ. 2—1—0 ಎಂತಲೂ ಸದರಿ ಪುಸ್ತಕವು ತಮ್ಮಲ್ಲಿ ಮಾರಾಟಕ್ಕೆ ದೊರೆಯುವದೆಂತಲೂ ಸೂಚಿಸೋಣಾಗಿದೆ. ನಾವು ಸದರಿ ಪುಸ್ತಕವನ್ನು ಅವರಲ್ಲಿ ಮಾರಾಟಕ್ಕೆ ಇಟ್ಟದ್ದಿಲ್ಲ. ಮತ್ತು ಅದರ ಬೆಲೆಯು ರೂ. 1—8—0 ಮಾತ್ರನಾಗಿರುತ್ತದೆ ಎಂಬದನ್ನು ಈ ಮೂಲಕ ಸೂಚಿಸೋಣಾಗುತ್ತದೆ.

ತಾ. 9—8—16. **Kavi & Sons.**

ಪೆರ್ಡಾಲ:—ಹವ್ಯಕ ದ್ರಾವಿಡ ಬ್ರಾಹ್ಮಣರಿಂದ ಸ್ಥಾಪಿಸಲ್ಪಟ್ಟ ಪೆರ್ಡಾಲ ಮಹಾಜನ ಸಂಸ್ಕೃತ ಪಾಠಶಾಲೆಯಲ್ಲಿ ತಾ. ೬-೮-೧೬ನೇ ಆದಿತ್ಯವಾರ ಮಧ್ಯಾಹ್ನ ೧ ಘಂಟೆಗೆ ಒಂದು ಮಹಾ ಸಭೆಯು ಜರಗಿತು. ಅನೇಕ ಪಂಡಿತರು, ವೈದಿಕರು, ಗೃಹಸ್ಥರೂ ಸಹ ಬಂದು ಸಭೆಯನ್ನು ಅಲಂಕರಿಸಿದ್ದರು. ಕೆಲವು ಕಾಲ ತಂಜಾವೂರಿನಲ್ಲಿದ್ದುಕೊಂಡು ಸಂಗೀತಾಭ್ಯಾಸವನ್ನು ಮಾಡಿ ಈಗ ಊರಿಗೆ ಬಂದಿರುವ ಗಾನವಿದ್ಯಾವಿಶಾರದರಾದ ಮ| ರಾ| ರಾ| ನೆಲ್ಲಿಕುಂಜೆ ಗುತ್ತಿನ ಗೋವಿಂದ ಭಟ್ಟರವರು ಸಭ್ಯರ ಕೋರಿಕೆಯಂತೆ ಸಭಾಧ್ಯಕ್ಷಸ್ಥಾನವನ್ನು ವಹಿಸಿದರು. ಶಾಲೆಯ ಪ್ರಧಾನಾಧ್ಯಾಪಕರಾದ ಮಹೋಪಧ್ಯಾಯ ಕೆ. ಎಸ್. ಪರಮೇಶ್ವರ ಶಾಸ್ತ್ರಿಗಳವರು ೧೯೧೧ನೇ ಜೂನು ತಿಂಗಳಿಂದ ೧೯೧೬ನೇ ಮಾರ್ಚಿ ಆಖೈರವರೇಗಿನ ಆಯುವ್ಯಯವನ್ನು ಓದಿ ಹೇಳಿ ಸಭೆಯ ಮುಂದೆ ವ್ಯಕ್ತಗೊಳಿಸಿದರು. ಕನ್ನಡ ಪಂಡಿತ ಪಿ. ಕೃಷ್ಣಯ್ಯನವರು ಘಂಡಿಗೆ ಸಾಗ್ಡಾನ ಮಾಡಿದವರಿಂದ ವಸೂಲಾದ ಬಡ್ತಿ ಅಸಲು ವಗೈರೆ ಲೆಖ್ಖಗಳನ್ನು ಸಭೆಯ ಗೋಚರಕ್ಕೆ ತಂದರು. ಇಂಗ್ಲಿಷ್ ಮಾಸ್ತರರು ಎನ್. ಕೇಶವಭಟ್ಟರವರು ಮದ್ರಾಸ್ ಯುನಿವರ್ಸಿಟಿ ಕೆಲೆಂಡರನ್ನು ನೋಡಿ ಸಂಸ್ಕೃತ ವಿದ್ವಾನ್ ಕ್ಲಾಸಿಗೆ ಬೇಕಾದ ಪುಸ್ತಕ ವಗೈರೆ ಸಂಗತಿಗಳನ್ನು ಸಭೆಯಲ್ಲಿ ಸೂಚಿಸಿದರು. ವಿದ್ವಾನ್ ಕ್ಲಾಸು ಇಡುವಳಿಗೆ ಉಪಾಧ್ಯಾಯರ ಸಂಖ್ಯೆ ಹೆಚ್ಚು ಬೇಕೆಂತ ಯೋಚಿಸಿ ಅನಂತಶಯನ ಸಂಸ್ಕೃತ ಕೋಲೆಜಿನಲ್ಲಿ ಕಲಿತು ವ್ಯಾಕರಣ ಮಹೋಪಧ್ಯಾಯ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಆರ್ಯನಡ್ಕ ಪಿ. ಶಂಕರ ಶಾಸ್ತ್ರಿಗಳನ್ನು ವ್ಯಾಕರಣ ಅಸಿಸ್ಟಾಂಟ್ ಪಂಡಿತರಾಗಿಯೂ; ಈ ಶಾಲೆಯಲ್ಲಿ ವಿದ್ವಾನ್ ಕ್ಲಾಸು ಇಡಬೇಕೆಂತಲೂ; ಕೆಲ ಬಡ ಜನರ ಅಪೇಕ್ಷೆ ಮೇರೆಗೆ ಅವರ ಹುಡುಗರಿಗೆ ತತ್ಕಾಲ ಸಂಬಳ (ಸ್ಕೂಲ್ ಫೀಸ್) ಮಾಫಿಮಾಡಬೇಕೆಂತಲೂ ಮ| ರಾ| ಖಂಡಿಗೆ ಈಶ್ವರ ಭಟ್ಟರೇ ಮೊದಲಾದ ಮಹನೀಯ ಸಭ್ಯರ ಅನುಮತಿ ಮೇರೆಗೆ ತೀರ್ಮಾನಿಸೋಣಾಯಿತು. ಈ ಪ್ರಕೃತ ಬಂದು ಒದಗಿರುವ ಘೋರ ಯುದ್ಧದಲ್ಲಿ ಜಯಲಕ್ಷ್ಮಿಯು ನಮ್ಮ ಅಣ್ಮರಾದ ಜೋರ್ಜ ಚಕ್ರವರ್ತಿಗಳನ್ನು ವರಿಸುವಂತೆ ಈಶ್ವರ ಸಹಾಯ ಉಂಟಾಗಲೆಂದು ಶ್ರೀ ಉದನೇಶ್ವರನನ್ನು ಪ್ರಾರ್ಥಿಸುತ್ತಾ ಸರ್ವರೂ 'ಜಯ ಜಯ ಜೋರ್ಜ ಸಾರ್ವಭೌಮ' ಎಂದು ಐಕ್ಯ ಕಂಠ್ಯದಿಂದ ಹೇಳಿದರು. ಅನಂತರ ಸಭಾಧ್ಯಕ್ಷರು ಚತುರ ಭಾಷಣದಿಂದ ಸಂತೋಷಗೊಳಿಸಿ ಕೆಲವು ಪ್ರಾರ್ಥನಾ ಪದ್ಯಗಳಿಂದ ಸಂಗೀತ ರೀತಿಯಿಂದ ಸಭ್ಯರನ್ನು ಸಂತೋಷಪಡಿಸಿದರು. ಈಗ ವಿದ್ವನ್ ಕ್ಲಾಸನ್ನು ಇಡುವ ವೃತ್ತಾಂತವನ್ನು ತಿಳಿಸಿ ಈ ಶಾಲೆಯ ಕ್ರಮಾಗತ ಅಭಿವೃದ್ಧಿಯನ್ನು ನೋಡಿ ಸಂಸ್ಕೃತ ಪಕ್ಷಪಾತಿಗಳಾದ ಸಹೃದಯ ಸಮಾಜಕ್ಕೆ ತಿಳಿಸಲು ತುಂಬಾ ಸಂತೋಷಪಡುತ್ತೇನೆ.

~~~~~

ತುಂಬೆ:—ಇದೇ ಬರುವ ಸಪ್ಟಂಬರ ತಾ. ೧ರಿಂದ ಮಂಗಳೂರಿನಿಂದ ಸಾಯಂಕಾಲ ಘಂಟೆ ೫-೧೫ಕ್ಕೆ ಬಿಡುವ ಪೆಟಲ್ (ಮೊಟರ್) ರೈಲುಗಾಡಿಯು ೫ ನಿಮಿಷ ಮುಂಚಿತವಾಗಿ ಘಂಟೆ ೫-೧೦ಕ್ಕೆ ಬಿಡುವದಾಗಿಯೂ ಸಾಯಂಕಾಲ ಘಂಟೆ ೬-೫ಕ್ಕೆ ಮಂಗಳೂರಿಗೆ ತಲಪುವ ಮದ್ರಾಸಿನ ಮೈಲುಗಾಡಿಯು ಘಂಟೆ ೬-೫೦ಕ್ಕೆ ತಲಪುವದಾಗಿ ಸಹಾ ಪ್ರಕಟಿಸೋಣಾಗಿದೆ. ಇದರಿಂದ ಮುಂಚೇಶ್ವರದಲ್ಲಿ ಈಗ ಕೂಡುತ್ತಿರುವ ಮೈಲು ಪ ಪೆಟಲ್ ರೈಲು ಗಾಡಿಗಳು ಮೇಲಿನ ತಾರೀಕಿನಿಂದ ಇಲ್ಲಿ ಒಟ್ಟು ಕೂಡುವವು.

ಕಳೆದ ಜುಲಾಯಿ ತಾ. ೩೧ರಲ್ಲು ಇಲ್ಲಿಯ ಪರಸ್ಪರ ಸಹಾಯಕ ಸಂಘದ ಜನರಲ್ ಮಿಾಟೆಂಗ್ ಸಂಘದ ಆಫೀಸಿನಲ್ಲಿ ಕೂಡಿಬಂದಿತ್ತು. ಸಂಘದಲ್ಲಿ ೨೨೫ ಮೆಂಬರರು ೪೪೧ ಪಾಲುಗಳನ್ನು ಪಡೆದಿರುವದಾಗಿಯೂ ಹಾಲಿ ೫,ನೂರು ೮|| ಸಾವಿರ ರೂಪಾಯಿಗಳ ಲೇವಾದೇವಿಯು ಸರಿಯಾಗಿ ನಡೆಯುವದೆಂತಲೂ ತಿಳಿಯುತ್ತದೆ. ಜೂನ್ ಆಖೈರಾದ ಒಂದು ವರ್ಷಕ್ಕೆ ಶಿಬಂದಿ ಪ ಲಾಗುವಾಡು ವಗೈರೆ ಎಲ್ಲಾ ಕರ್ಚುಗಳು ಹೋಗಲಾಗಿ ರೂಪಾಯಿ ೧೯೦ ಐನ್ ಮುನಾಫೆಯಾಗಿರುತ್ತದೆ. ಇದು ಸ್ಥಾಪಿಸಿ ಒಂದೂವರೆ ವರ್ಷ ಪೂರ್ಣವಾಗದಿದ್ದರೂ ಇಷ್ಟು ಬೇಗನೇ ಅಭಿವೃದ್ಧಿಗೆ ತರುವರೆ ಇದರ ಪ್ರೆಸಿಡೆಂಟರೇ ಕಾರಣವೆಂತ ತಿಳಿಸುವರೆ ಆನಂದವಾಗುತ್ತದೆ.

~~~~~

ಬಂಟ್ವಾಳ:—ಕಳೆದ ವಾರದಲ್ಲಿ ಬಹುಮಾನ ಪಟ್ಟ ಭಟ್ಟರವರು ಇಲ್ಲಿಗೆ ಚಿತ್ತೈಸಿದ್ದು ಅವರ ಬಗ್ಗೆ ಸ್ವಾಗತ ಸಂಭ್ರಮಗಳು ಜರುಗಿದುವು. ಇಲ್ಲಿಯ ಕ್ಲಬ್ಬಿನಲ್ಲಿ ಊರ ಪ್ರಮುಖರೆಲ್ಲರೂ ರಾಜೇಶ್ರೀಯವರನ್ನು ಸ್ವಾಗತಮಾಡಿಕೊಂಡ ಮೇಲೆ, ಆಹಾರೋಪಚಾರಗಳು ಮುಗಿಯಲು, ಕ್ಲಬ್ಬಿನ ಅಧ್ಯಕ್ಷರಾಗಿರುವ ರಾ| ಕೆ. ಕೃಷ್ಣರಾಯರವರು ಸಭಿಕರ ಪರವಾಗಿ ಅತಿಥಿಯರಾದ ಸದ್ಗೃಹಸ್ಥರಿಗೆ ವಂದನೆಗಳನ್ನರ್ಪಿಸಿ, ಅವರ ಸದ್ಗುಣಗಳನ್ನೂ ಕಾರ್ಯಸಾಧನಾ ಶಕ್ತಿಯನ್ನೂ ಇಂದು ಅವರ ಚುನಾವಣೆಯ ದೆಸೆಯಿಂದ ನಮ್ಮ ಜಿಲ್ಲೆಗುಂಟಾದ ಅಪೂರ್ವ ಬಹುಮಾನವನ್ನೂ ಕೊಂಡಾಡಿದರು. ಪ್ರತ್ಯುತ್ತರರೂಪವಾಗಿ ಬಹುಮಾನಿತರು ಕನ್ನಡದಲ್ಲಿ ಒಂದು ಸ್ವಾರಸ್ಯವಾದ ಭಾಷಣದ ಮೂಲಕ—ಸಭಿಕರನ್ನು ಪ್ರತಿನಮಸ್ಕರಿಸಿ ಚುನಾವಣೆಯೊಡನೆಯೆ ತಾನು ಹೊರಲಿಕ್ಕೆ ಇರುವ ಮಹಾಭಾರದ ಅಂಶಾಂಶಗಳನ್ನಾದರೂ ಹೇಗೆ ತಾನೆ ಅಗತ್ಯವಾಗಿಯೂ ಮತದಾತರು (ವೋಟರ್‌ರು) ವಹಿಸಿಕೊಳ್ಳಬೇಕಾಗಿದೆಯೆಂದೂ, ಸದ್ಯ ಅಗತ್ಯವಿರುವ ಸುಧಾರಣೆಗಳಾವುವೆಂದೂ ಸ್ಪಷ್ಟವಾಗಿ ಅರುಹಿದರು. ಬಂಟವಾಳಕ್ಕೆ ಕಚೇರಿ 'ಬಂದ'ಮೇಲೆ ಭಟ್ಟರವರ ಪರಿಚಯವು ಇಲ್ಲಿಯವರಿಗೆ ಅನಾವಶ್ಯಕವಾದುದು. ಸಾಧಕಶ್ರೇಷ್ಠರಾದ ಇವರು ಎಂತಹ ಕತ್ತಿಯನ್ನಾದರೂ ನುಂಗುವವರೆಂದು ನಮಗೆ ತಿಳಿದೇ ಇದೆ. ವಕ್ಕಿಗಾರರ ರುಸುಮನ್ನು ಪಡೆದು ಕೋರ್ಟಿನಲ್ಲಿ ವ್ಯಾಜ್ಯಗಳನ್ನು ವ್ಯವಹರಿಸಿ ಯಥೋಚಿತರಾಗಿ ಧನಾಢ್ಯರಾದ ಇವರು, ಇಡೀ ಜಿಲ್ಲೆಯ ಪರವಾಗಿ ಸರ್ವಸಾಮಾನ್ಯವಾದ ವಕಾಲತ್ತನ್ನು ರುಸುಮಿಲ್ಲದೆ ಪಡೆದು ನ್ಯಾಯವಿಧಾಯಕ ಸಭೆಯಲ್ಲಿ ಹೋರಾಡಲು ಸೊಂಟಕಟ್ಟಿರುವರೆಂದು ಮಾತ್ರ ನಾವು ಸಂತೋಷದಿಂದ ಉಪಚಾರಮಾಡಿದರೆ ನಮ್ಮ ಧರ್ಮವು ಮುಗಿಯಲಿಲ್ಲ. ಕನ್ನಡಜಿಲ್ಲೆಯೆಂಬುವ ಪ್ರಜಾಪುರುಷನ ನಾಲಗೆಯಂತೆ ಇವರಿರುವ ಸಮಯದಲ್ಲಿ, ಆ ನಾಲಿಗೆಯು ಯುಕ್ತವಾದುದನ್ನು ಆಡುವಂತೆ ಅದಕ್ಕೆ ಭಾವನೆಗಳನ್ನು ಬೇಕಾದಂತೆ ಒದಗಿಸಿಕೊಡುವ ಭಾರವು ಪ್ರಜಾಪುರುಷನ ಇತರ ಅಂಗಗಳ ಕರ್ತವ್ಯವೆಂಬುದನ್ನು ನಾವು ಮರೆಯದಂತೆ ಇವರು ಎಚ್ಚರಿಸಿದುದು ನಮಗೆ ನೆನಪಿರಲಿ. ಪರರ ಗುಣಗಳ ಪರಮಾಣುಗಳನ್ನು ಪರ್ವತದಂತೆ ಎಣಿಸಿ ಶ್ಲಾಘಿಸಿರುವ ಈ ಮಹನೀಯರ ಸೌಜನ್ಯವು ಕ್ಷಣಕಾಲದೊಳಗೆ ನಮಗೆ ವ್ಯಕ್ತವಾಯಿತು. ಇಂತಹ ಸಾಧುಗಳೂ ಸಾಧಕರೂ ಬಹುಕಾಲ ಬದುಕಿ, ಪ್ರಜಾಸೇವೆಯಲ್ಲಿ ಕೃತಕೃತ್ಯರಾಗಲೆಂದು ಪ್ರಾರ್ಥಿಸುವೆವು.

ಮಂಗಳೂರು.

ಮ॥ ರಾ॥ ಹಂದಾಡಿ ರಾಮಯ ಸೆಟ್ಟಿ, ಮ॥ ರಾ॥ ಎಮ್. ಸುಬ್ಬಯಸೆಟ್ಟಿ, ಮ॥ ರಾ॥ ಪಿ. ಶ್ರೀನಿವಾಸ ನ್ಯಾಕ—ಈ ಮೂರು ಮಂದಿ ಕುಂದಾಪುರ ತಾಲೂಕು ಬೋರ್ಡು ಮೆಂಬರರಾಗಿ ಆರಿಸಲ್ಪಟ್ಟಿರುತ್ತಾರೆ.

ಮಿ॥ ಜೆ. ವಿ. ಅಲ್ವಾರೀಸರು ಇಲ್ಲಿಯ ಮುನ್ಸಿಪಾಲ್ ಕೌನ್ಸಿಲ ಮೆಂಬರರಾಗಿ ಆರಿಸಲ್ಪಟ್ಟಿರುತ್ತಾರೆ.

ಕಲೆಕ್ಟರ್ ಆಫೀಸಿನ ಹೆಡ್ ಆಡಿಟರರಾಗಿದ್ದ ಮ॥ ರಾ॥ ಎ. ಶಿವರಾಯರು ರಿಟಾಯರ್ ಆದುದರಿಂದ ಅವರ ಬದಲಿಗೆ ಕಲೆಕ್ಟರ್ ಆಫೀಸಿನ IV ಕಾರಸ್ಪಂಡೆಂಟ ಕ್ಲಾರ್ಕರಾದ ಮ॥ ರಾ॥ ಜಿ ಮಾಧವ ಪ್ರಭು, ಬಿ. ಎ. ಯವರು ಹೆಡ್ ಆಡಿಟರರಾಗಿಯೂ V ಕಾರಸ್ಪಂಡೆಂಟ ಕ್ಲಾರ್ಕರಾಗಿದ್ದ ಮಿ॥ ಕೆ. ಎಲ್. ನಾಜರೇಥರು IV ಕಾರಸ್ಪಂಡೆಂಟ ಕ್ಲಾರ್ಕರಾಗಿಯೂ I ಗ್ರೇಡ್ ರೆವಿನ್ಯೂ ಇನ್ಸ್ಪೆಕ್ಟರರಾದ ರಾ॥ ಎಮ್. ಸುಬ್ಬರಾವ್, ಬಿ ಎ. ರವರು V ಕಾರಸ್ಪಂಡೆಂಟ ಕ್ಲಾರ್ಕರಾಗಿಯೂ II ಗ್ರೇಡ್ ರೆವಿನ್ಯೂ ಇನ್ಸ್ಪೆಕ್ಟರರಾದ ಎಮ್. ಅಣ್ಣಪ್ಪ ಕಾಮತ್, ಬಿ ಎ. ರವರು I ಗ್ರೇಡ್ ರೆವಿನ್ಯೂ ಇನ್ಸ್ಪೆಕ್ಟರರಾಗಿಯೂ IX ಕಾರಸ್ಪಂಡೆಂಟ ಕ್ಲಾರ್ಕರಾದ ವಿಕ್ಟರ್ ಸಾಲ್ಡಾಂಞಾ, ಬಿ. ಎ. ರವರು II ಗ್ರೇಡ್ ರೆವಿನ್ಯೂ ಇನ್ಸ್ಪೆಕ್ಟರರಾಗಿಯೂ ನೇಮಿಸಲ್ಪಟ್ಟಿರುತ್ತಾರೆ.

ಇಲ್ಲಿಯ ಮುನ್ಸಿಪಾಲ್ ಚೇಯರ್ಮೇನರ ಚುನಾವಣೆಯು ಇನ್ನೂ ಗಜೇಟಿನ ಮೂಲಕ ಸರಕಾರದವರಿಂದ ಪ್ರಕಟಿಸಲ್ಪಡದೆ ಇರುವದರಿಂದ ವ್ಯಾಸ್ ಚೇಯರ್ಮೇನರೇ ಮುನ್ಸಿಪಾಲ್ ಆಡಳಿತೆಯನ್ನು ನೋಡುತ್ತಿರುವರು.

ಗೋರಕ್ಷಣೆ ಅಥವಾ ಗೋ ಅಭಿವೃದ್ಧಿಯನ್ನು ಈ ಪ್ರಾಂತ್ಯಗಳಲ್ಲಿ ಹೇಗೆ ಕೈಕೊಳ್ಳಬಹುದೆಂಬ ವಿಷಯವನ್ನು ಆಲೋಚಿಸುವರೆ ಈ ಪ್ರಜಜನರ ಮಹಾಸಭೆಯು ಕಳೆದ ಆದಿತ್ಯವಾರ ಕೆನರಾ ಹ್ಯಾಸ್ಕೂಲಿನ ಭುವನೇಂದ್ರ ಸದನದಲ್ಲಿ ಕೂಡಿತು. ಮ॥ ರಾ॥ ರಾ ಉಳ್ಳಾಲ ಬಾಬುರಾವ್ ರವರು ಸಭಾಧ್ಯಕ್ಷಸ್ಥಾನವನ್ನು ವಹಿಸಿಕೊಂಡಿದ್ದರು. ಜಾನುವಾರುಗಳ ಅಭಿವೃದ್ಧಿಗೆ ಬೇಕಾದ ಏರ್ಪಾಡುಗಳನ್ನು ಮಾಡುವದು ಅಗತ್ಯವೆಂತಲೂ ಇವುಗಳನ್ನು ಹ್ಯಾಗೆ ಮಾಡಬಹುದೆಂಬುದನ್ನು ನಿರ್ಣಯಿಸಿರುವರೆ ಒಂದು ಕಮಿಟಿಯನ್ನು ಆರಿಸಬೇಕೆಂತಲೂ ಈ ಕಮ್ಮಿಟಿಯವರು ಈ ವಿಷಯ ಬೇಕಾದ ಸ್ಥಾಪನೆಯು ಕ್ರಮ ಇತ್ಯಾದಿಗಳನ್ನು ಇನ್ನು ಒಂದು ತಿಂಗಳೊಳಗೆ ಕೂಡುವ ಮಹಾ ಸಭೆಯ ಮುಂದಿರಿಸಬೇಕೆಂತಲೂ ನಿರ್ಣಯಿಸಿರುವರು. ಮ॥ ರಾ॥ ಪಡಮುನ್ನೂರು ರಾಮಚಂದ್ರರಾಯರ ಟ್ರಸ್ಟಿ ಫಂಡಿನ ೭ ಜನ ಗೃಹಸ್ಥರೂ ಇನ್ನು ೧೨ ಜನರು ಒಟ್ಟು ೧೯ ಜನರ ಕಮಿಟಿಯು ಏರ್ಪಡಿಸಲ್ಪಟ್ಟಿರುತ್ತದೆ.

ಉಡ್ಪಿಯಿಂದ ಕುಂದಾಪುರದ ವರೆಗೆ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿಯವರು ಮೋಟರ್ ಬಂಡಿಗಳ ಚಲಾವಣೆಯನ್ನು ಇನ್ನು ಸದ್ಯದಲ್ಲಿಯೇ ನಡಿಸುವರಾಗಿ ತಿಳಿಯುತ್ತೇವೆ. ಈ ಬಗ್ಯೆ ಕುಂದಾಪುರ ಕಡೆಯಲ್ಲಿ ಸುಮಾರು ೧೨೦೦ ಕಂಪೆನಿಯ ಪಾಲುಗಳು ವಿಕ್ರಿತವಾಗಿವೆ.

ಬೆಂಗಳೂರಿನ ಲಂಡನ್ ಮಿಶ್ಯನ್ ಹ್ಯಾಸ್ಕೂಲಿನಲ್ಲಿ ಸುಮಾರು ೧೦ ವರ್ಷಗಳಿಂದಿತ್ತಲಾಗೆ ಉಪಾಧ್ಯಾಯರಾಗಿದ್ದ ಮ॥ ರಾ॥ ಕೇಳ ದೇವರಾಯರು ಇದೇ ತಿಂಗಳ ಮೊದಲನೇ ವಾರದಲ್ಲಿ ವಿಷಮಜ್ವರದಿಂದ ಕಾಲಾಧೀನರಾದರೆಂಬ ಸಮಾಚಾರವನ್ನು ಬರೆಯುವದಕ್ಕೆ ನಾವು ತುಂಬಾ ವ್ಯಸನಪಡುತ್ತೇವೆ. ಬಂಟ್ವಾಳದಲ್ಲಿ ಹುಟ್ಟಿ ಮಂಗಳೂರು ಗವರ್ನಮೆಂಟ ಕಾಲೇಜಿನಲ್ಲಿಯೂ ಮದ್ರಾಸ್ ಪ್ರೆಸಿಡೆನ್ಸಿ ಕಾಲೇಜಿನಲ್ಲಿಯೂ ವಿದ್ಯಾಭ್ಯಾಸವನ್ನು ಮುಗಿಸಿ ಗ್ರಾಜ್ಯುಯೇಟರಾಗಿ, ನಮ್ಮಿ ಪ್ರಾಂತ್ಯದಲ್ಲಿ ಗಣಿತಶಾಸ್ತ್ರದಲ್ಲಿ ಬಹು ಸಮರ್ಥರೆಂದೆನ್ನಿಸಿಕೊಂಡು ಇವರು ವಿದ್ಯೆಗೆ ವಿನಯವೇ ಭೂಷಣವೆಂಬಂತೆ ನಮ್ರಭಾವ ಉಳ್ಳವರಾಗಿಯೂ ಈ ಜಿಲ್ಲೆಯಿಂದ ಬೆಂಗಳೂರಿಗೆ ಆಗಾಗ ಹೋಗುತ್ತಿರುವ ಅನೇಕರಿಗೆ ಸಹಾಯಕರಾಗಿಯೂ ಇದ್ದರು. ಇವರು ಇಂಟರ್ಮಿಡಿಯೇಟ್ ವಿದ್ಯಾರ್ಥಿಗಳಿಗೋಸ್ಕರ ರಚಿಸಿರುವ ಗಣಿತಪುಸ್ತಕಗಳಿಂದ ಇವರ ವಿದ್ವತ್ತಿಕೆಯು ಗಣಿತದಲ್ಲಿ ಇವರು ಮಾಡಿದ ವ್ಯವಸಾಯವೇ ಸ್ಪಷ್ಟವಾಗುತ್ತದೆ. ಇವರ ವಿಯೋಗದಿಂದ ಹಲುಬುವ ಇವರ ವಿಧವೆಗೂ ನಾಲ್ಕು ಮಂದಿ ಗಂಡುಮಕ್ಕಳಿಗೂ ನಮ್ಮ ಮನಸ್ಸಿನ ಸಂತಾಪವನ್ನು ಈ ಮೂಲಕ ವಿಶದಪಡಿಸುತ್ತೇವೆ.

ಮಂಗಳೂರು ತಾಲೂಕು ಬೋರ್ಡಿಗೆ ಮಂಗಳೂರು ಸರ್ಕಲಿನಿಂದ ಮೆಂಬರರನ್ನು ಆರಿಸುವ ಚುನಾವಣೆಗೆ ಮ॥ ರಾ॥ ರಘುಚಂದ್ರ ಬಲ್ಲಾಳರವರೂ ಮ॥ ರಾ॥ ಮುಲ್ಕಿ ದೊಡ್ಡಮನೆ ಶೇಸುಶೆಟ್ಟಿಯವರೂ ಉಮೇದ್ವಾರರಾಗಿ ನೇಮಿಸಲ್ಪಟ್ಟಿರುವರು. ಈ ಸಂಬಂಧ ಏನಾದರೂ ಆಕ್ಷೇಪಣೆಗಳಿದ್ದರೆ ಇದೇ ಆಗೋಸ್ತು ತಾ. ೧೪ನೇ ಸೋಮವಾರ ಸಾಯಂಕಾಲ ೫ ಗಂಟೆಯ ಒಳಗೆ ರೆವಿನ್ಯೂ ಡಿವಿಜನಲ್ ಆಫೀಸರರಿಗೆ ತಿಳಿಸಬೇಕೆಂದೂ ಈ ಆಕ್ಷೇಪಣೆಗಳ ಇತ್ಯರ್ಥವು ಆಗೋಸ್ತು ತಾ. ೧೭ನೇ ಗುರುವಾರ ಮಧ್ಯಾಹ್ನ ೧೨ ಗಂಟೆಯಿಂದ ಸಾಯಂಕಾಲ ೪ ಗಂಟೆಯ ವರೆಗೆ ನಡೆಯುವದೆಂದೂ ರೆವಿನ್ಯೂ ಡಿವಿಜನಲ್ ಆಫೀಸರರು ಪ್ರಕಟಿಸಿರುತ್ತಾರೆ.

ಬಂಟ್ವಾಳದ ಚೆರಿಯ ಅಲಿ ಮತ್ತು ೮ ಮಂದಿ ಕೂಡಿ ಕೆ. ಡಿ. ಕೊಡಿಯ ಮತ್ತು ಕೆ. ಡಿ. ಕಾದ್ರಿಯನ್ನು ಹೊಡೆದು ಕೊಂದ ಖೂನಿಮೊಕದಮೆಯು ಇಲ್ಲಿಯ ಸೆಶ್ಯನ್ಸ್ ಕೋರ್ಟಿನಲ್ಲಿ ತನಿಖೆ ನಡೆದು ಜಡ್ಜರು ೧, ೪, ೬ನೇ ಅಪಾದಿತರಿಗೆ ಜೀವಾಂತ ಬಂಕೋಲೆ ಶಿಕ್ಷೆಯನ್ನು ವಿಧಿಸಿ ಉಳಿದ ಐದು ಅಪಾದಿತರನ್ನು ಖುಲಾಸುಪಡಿಸಿದರು.

ಆಗೋಸ್ತು ತಿಂಗಳ ಸೆಶ್ಯನ್ಸ್ ಮೊಕದಮೆಗಳ ತನಿಖೆಯು ಕಳೆದ ಸೋಮವಾರ ದಿನ ಪ್ರಾರಂಭವಾಯಿತು. ಒಂದನೇ ಮೊಕದಮೆಯು ಬೆಳ್ತಂಗಡಿ ಸಬ್ ಮೇಜಿಸ್ಟ್ರೇಟರಿಂದ ಕಮಿಟ್ ಮಾಡಲ್ಪಟ್ಟದ್ದಾಗಿತ್ತು. ಈ ಮೊಕದಮೆಯಲ್ಲಿ ನಲ್ಕೆಹೊಲೆಯ ಜಾತಿಯ ಗುಳ್ಳಿ ಹೆಂಗಸನ್ನು ಇಟ್ಟುಕೊಂಡಿದ್ದ ಅಂಗರ ಎಂಬ ಕ್ಷೌರಿಕನ ಕುಟುಂಬದವರಾದ ೧ನೇ ೨ನೇ ಅಪಾದಿತರು ಗುಳ್ಳಿ ಹೆಂಗಸಿಗೆ ಹೊಡೆದು ಅವಳನ್ನು ವೀರಮಂಗಲ ಕಡವಿನಲ್ಲಿ ಹಾಕಿಹೋಗಿದ್ದಾರೆಂದು ಅಪಾದಿಸಲ್ಪಟ್ಟಿದ್ದರು. ಜಡ್ಜರು ೨ನೇ ಅಪಾದಿತನಿಗೆ ೧೦ ವರ್ಷಗಳ ಕಠಿಣ ಸಜೆಯನ್ನೂ ೩ನೇ ಅಪಾದಿತನಿಗೆ ೫ ವರ್ಷಗಳ ಕಠಿಣ ಸಜೆಯನ್ನೂ ವಿಧಿಸಿದರು.

ಕಳೆದ ಶುಕ್ರವಾರವು ಯುದ್ಧ ಪ್ರಾರಂಭದ ೨ನೇ ವರ್ಷದ ದಿನವಾದ್ದರಿಂದ ಇಲ್ಲಿಯ ಶ್ರೀ ವೆಂಕಟ್ರಮಣ ದೇವಸ್ಥಾನದಿಂದ ನಗರ ಸಂಕೀರ್ತನೆಯ ಮೆರವಣಿಗೆಯು ಸಂಭ್ರಮದಿಂದ ನಡದು ಸಾಯಂಕಾಲ ಪುನಹಾ ದೇವಸ್ಥಾನವನ್ನು ಪ್ರವೇಶಿಸಿದರು. ಶ್ರೀ ದೇವರಿಗೆ-ಬ್ರಿಟಿಷ ರಾಜ್ಯಕ್ಕೆ ಕ್ಷಿಪ್ರದಲ್ಲೆ ಜಯವು ಲಭಿಸುವಂತೆ ಪ್ರಾರ್ಥನೆಯನ್ನು ಮಾಡಿ ಪೂಜೆಯನ್ನು ಸಾಂಗ್ಯವಾಗಿ ನೆರವೇರಿಸಿ ಶ್ರೀ ದೇವರ ಪ್ರಸಾದವನ್ನು ನೆರದಿದ್ದ ಸುಮಾರು ೧೫೦೦ ಜನರಿಗೆ ಹಂಚೋಣಾಯಿತು. ಶ್ರೀ ಮಹಾಮ್ಮಾಯಿ ದೇವಸ್ಥಾನದಲ್ಲಿಯೂ. ಶ್ರೀ ಉಮಾಮಹೇಶ್ವರ ಇತ್ಯಾದಿ ಇತರ ಎಲ್ಲಾ ದೇವಸ್ಥಾನಗಳಲ್ಲಿ ಈ ದಿನ ಪೂಜೆಯು ಬಹಳ ವಿಜ್ರಂಭಣೆಯಿಂದ ನೆರವೇರಿರುವದು.

ಇಲ್ಲಿಯ ಪ್ರೊಟೆಸ್ಟಾಂಟ ಹಿಂದೀ ಕ್ರೈಸ್ತ ದೇವಾಲಯಗಳಲ್ಲಿಯೂ ಕಳದ ಶುಕ್ರವಾರ ಬೆಳಿಗ್ಗೆ ೯ ಗಂಟೆಗೆ ದೇವತಾರಾಧನೆಯು ನಡೆದು ಮಿತ್ರ ಮಂಡಳಿಯವರಿಗೆ ಜಯವಾಗುವಂತೆ ಪ್ರಾರ್ಥನೆಗಳನ್ನು ಮಾಡಿ ಕಡೆಗೆ ಸಭಿಕರಿಂದ ಕೂಡಿಬಂದ ವಂತಿಗೆ ಹಣವನ್ನು ಮದ್ರಾಸ್ ಯುದ್ಧ ಹಡಗ ಫಂಡಿಗೆ ಕಳುಹಿಸಿಕೊಟ್ಟಿರುವರು.

Savings Bank Account opened for any sum not less than 4 As. and multiples thereof and interest paid @ 4½%.

Loans granted on proper securities and pledges.

Canara Bank Ltd.,
Mangalore, 1st. August 1916.

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡವುದಲ್ಲದೆ ಹಿಸೆ ಮೌಲ್ಯಗಳಿಂದ ಕೇಳಲ್ಪಡದಿರುವ ರೂ. 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 28,485—0—0 ಸರಕಾರದ ರೂ. 29,300ರದ ಭದ್ರತಾಪತ್ರಗಳಲ್ಲಿ ಠೇವಣಾತಿ ಮಾಗಿಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಸೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುದಾರರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ 7 ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ "ಬೋನಸ್" ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡೆಕೊಳ್ಳಲಾಗುವವು.

ಒಂದು ತಿಂಗಳ ನಂತರ ಹಿಂದಕ್ಕೆ ಪಡೆಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾಗುವವು.

"ಕರೆಂಟ್ ಎಕೌಂಟ್" ಎಂಬ ಚಾಲ್ತಿಠೇವಣಾತಿಗಳು ಠೇವಣೆದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾಯಿತು. ಈ ಠೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡೋಣಾಗುವುದು. ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ.

P. Gopal Naik,
Secretary.

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾವಸಂತ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಪದಕಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ.

೨. ಪ್ರಮೇಹರಿಪು ಬಿಂದು. ಉರಿಯುವ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಚಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨-೮-೦

೩. ಪಂಚಬಾಣ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ಶೀಘ್ರ ಗುಣಪಡಿಸುವದು. ರಾತಲಿಗೆ ೨ ರೂ.

೪. ಸೂರಣಾವಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪ್ರಖ್ಯಾತವಾಗಿದೆ. ರಾತಲಿಗೆ ೨ ರೂ.

೫. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಆಪಾಯವಿಲ್ಲದೆ ಚಳಿಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

ತಮ್ಮ ವಿಳಾಸ:—ಬಿ ಎಮ್. ನಾಥ್ ಮತ್ತು ಕಂಪೆನಿ.

೮. ಸುದರ್ಶನ ಜ್ವರಾಂಕುಶ ಮಾತ್ರೆ. ಚಳಿಜ್ವರ, ಪರಿಸರೂ ಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವಲೇಹ. ಕೆಮ್ಮು, ಗುರ್ಬುಗ್ಲಾಸ, ಕಫ, ಕ್ಷಯಗಳ ಮೇಲೆ ಅಸಮಾನವು. ರಾತಲಿಗೆ ೨ ರೂ.

೧೦. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಹತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿಶ್ಶಕ್ತಿ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೧. ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟ ನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೨. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ಲೇಪಗಳೊಳಗಾಗಿ ಗೆಲ್ಲುವದು. ಉರಿಯೇನೂ ಇಲ್ಲ ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೩. ನವ್ವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪. ಬ್ರಾಹ್ಮೀ ಸಾರಸ್ವತ ಘೃತ. ಉನ್ಮಾದ, ಅಪಸ್ಮಾರ, ಉಗ್ಗು ಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

B. M. Nath & Co., *Ayurvedic Chemists,*
Vepery Post, MADRAS.

ಸ್ವದೇಶಾಭಿಮಾನಿ

ಮಂಗಳೂರು ಶುಕ್ರವಾರ ತಾರೀಕು 18ನೇ ಆಗೋಸ್ತು 1916.

ಪೆರಿಸ ಕೊನ್ಫರನ್ಸೂ, ಹಿಂದೂಸ್ಥಾನವೂ.

ಪೆರಿಸ ಪಟ್ಟಣದಲ್ಲಿ ಇಡೀ ಸಾಮ್ರಾಜ್ಯದೊಂದು ಪರಿಷತ್ತು ಸೇರಲಿಕ್ಕಿದ್ದ ಸಂಗತಿಯನ್ನು ನಾವು ನಾಲ್ಕೈದು ತಿಂಗಳ ಹಿಂದೊಮ್ಮೆ ವಾಚಕರಿಗೆ ತಿಳಿಸಿದ್ದೇವೆ. ಪ್ರಕೃತ ಯುದ್ಧವು ಮುಗಿದ ನಂತರ ಆಗತಕ್ಕ ಒಪ್ಪಂದಿನಲ್ಲಿ ತಮಗೆ ಯಾವಯಾವ ದರ್ಜೆಯು ವಿಹಿತವಾದುದು, ತಮ್ಮ ಕೋರಿಕೆಗಳು ಯಾವವು, ವ್ಯಾಪಾರ ಮತ್ತು ರಾಜಕೀಯ ಸಂಗತಿಗಳಲ್ಲಿ ತಮ್ಮ ದರ್ಜೆಯು ಯಾವುದು ಇವೇ ಮೊದಲಾದ ಮಹತ್ವದ ಪ್ರಶ್ನೆಗಳನ್ನು ಮುಂದಾಗಿಯೇ ಚರ್ಚಿಸಿಕೊಂಡು ನಿರ್ಣಯಿಸುವುದಕ್ಕಾಗಿ ಇಂಗ್ಲಂಡ ಮತ್ತು ವಸಾಹತಿಗಳು ಹಾಗೂ ಮಿತ್ರಸಂಘದ ರಾಷ್ಟ್ರಗಳು ಈ ಕೊನ್ಫರನ್ಸನ್ನು ಸೇರಿಸಲಿಕ್ಕಿದ್ದಾವೆ. ಎತ್ತು ತಪ್ಪಿಸಿಕೊಂಡು ಓಡಿದ ಮೇಲೆ ಜಾಗರಣಮಾಡಿದಂತೆ ಒಪ್ಪಂದ ಆದ ನಂತರ ತಮ್ಮ ರಾಷ್ಟ್ರಕ್ಕೆ ಆ ಹಕ್ಕು ಬೇಕಿತ್ತು, ಈ ಹಕ್ಕು ಬೇಕಿತ್ತೆಂದು ಮುಂದೆ ಶುಷ್ಕ ಕಂಠಶೋಷ ಮಾಡುತ್ತ ಕೂಡ್ರುವದಕ್ಕಿಂತ ಈಗಲೇ ತಂತಮ್ಮ ತೊಂದರೆಗಳನ್ನೂ, ಕಾಂಕ್ಷೆಗಳನ್ನೂ, ದರ್ಜೆಯನ್ನೂ ವ್ಯವಸ್ಥೆಗೊಳಿಸುವುದಕ್ಕಾಗಿ ಮೇಲಿನ ರಾಷ್ಟ್ರಗಳು ಪೆರಿಸ ಪಟ್ಟಣದಲ್ಲಿ ಈ ತರದ ಸಭೆಯನ್ನು ಸೇರಿಸುವುದು ಯುಕ್ತವೇ ಸರಿ. ಈ ಯುಕ್ತವಾದ ಕಾರ್ಯದಲ್ಲಿ ಒಂದು ಸಂಗತಿ ಮಾತ್ರ ಅಷ್ಟೊಂದು ಯುಕ್ತವಾಗಲಿಲ್ಲೆಂತ ಹೇಳಬೇಕಾಗುತ್ತದೆ. ಈ ಪೆರಿಸ ಕೊನ್ಫರೆನ್ಸಿನಲ್ಲಿ ಇಂಗ್ಲಂಡದ ಪ್ರತಿನಿಧಿಗಳು ಬರುತ್ತಾರೆ; ಆಸ್ಟ್ರೇಲಿಯಾ—ಕೆನಡಾ ಮೊದಲಾದ ವಸಾಹತುಗಳ ಪ್ರತಿನಿಧಿಗಳೂ ಬರುತ್ತಾರೆ; ಇನ್ನು ಬೇರೆ ಮಿತ್ರಸಂಘದ ಪ್ರತಿನಿಧಿಗಳು ಬರುತ್ತಾರೆ. ಆದರೆ ನಮ್ಮ ಈ ಹಿಂದೂಸ್ಥಾನಕ್ಕೆ ಮಾತ್ರ ಅದರಲ್ಲಿ ಎಡೆಯಿಲ್ಲ. ಹಿಂದುಕಟ್ಟಳೆ ಪ್ರಕಾರ ಒಂದು ಮಂಗಲಕಾರ್ಯದಲ್ಲಿ ಒಬ್ಬ ಆಶೌಚಿಗೆ ಬರಲು ಹ್ಯಾಗೆ ಪ್ರತಿಬಂಧವಿದೆಯೋ ಅಥವಾ ಒಂದು ಮಂಗಲಪ್ರಸಂಗದಲ್ಲಿ ಅನಾಥ ವಿಧವೆಗೆ ಹ್ಯಾಗೆ ಪ್ರವೇಶಸಿಗಲಾರದೋ ಹಾಗೆಯೆ ಈ ರಾಷ್ಟ್ರಭೋಜನದ ಪಂಕ್ತಿಯಲ್ಲಿ ನಮ್ಮ ಹಿಂದೂಸ್ಥಾನಕ್ಕೆ ಇಷ್ಟರ ವರೆಗೆ ಒಂದು ಖುರ್ಚಿಯಾಗಲಿ; ಮಣೆಯಾಗಲಿ ಇಲ್ಲವೆ ಒಂದು ಚಿಕ್ಕ ಎಲೆಯಾಗಲಿ ಸಿಕ್ಕಿದ್ದು ಕಾಣುವುದಿಲ್ಲ. ಈ ಘೋರ ಯುದ್ಧದಲ್ಲಿ ಹಿಂದೂಸ್ಥಾನವು ಯಾವ ಸಾಹಾಯ್ಯವನ್ನೂ ಮಾಡದೆ ಸುಮ್ಮನೆ ಕುಳಿತುಕೊಂಡಿದೆಯೋ? ವಸಾಹತುಗಳು ಮಾಡುತ್ತಿರುವಷ್ಟು ಸಾಹಾಯ್ಯವನ್ನು ಅಥವಾ-ಬೇರೆಯವರೊಡನೆ ತುಲನೆ ಬಿಟ್ಟು ಹೇಳುವುದಾದರೆ-ತನ್ನಿಂದ ಕೂಡಿದಷ್ಟು ಸಾಹಾಯ್ಯವನ್ನು ಈ ದೇಶವು ಮಾಡಿದೆ; ಮಾಡುತ್ತಿದೆ; ಸಂದರ್ಭಬಿದ್ದರೆ ಇದಕ್ಕೂ ಹೆಚ್ಚಿನ ಸಾಹಾಯ್ಯವೂ ಮಾಡಲು ಸಿದ್ಧವಾಗಿದೆ. "ಸರ್ವೋಪಿ ಆತ್ಮಾನಂ ಕಾಂತಂ ಪಶ್ಯತಿ" ಈ ಕಾಲಿದಾಸನ ಮಾತಿನಂತೆ ಹಿಂದೂಸ್ಥಾನವು ತಾನುಮಾಡಿದ ಸಾಹಾಯ್ಯವನ್ನು ತಾನೇ ಹೊಗಳಿಕೊಳ್ಳುತ್ತದೆಂದು ಯಾರೂ ನೆನಸುವುದು ಅಗತ್ಯವಿಲ್ಲ. ವೈಸರಾಯರಂಥಾ ಇಲ್ಲಿಯ ಶ್ರೇಷ್ಠ ಅಧಿಕಾರಿಗಳೂ, ಪಾರ್ಲಿಮೆಂಟಿನ ಮೆಂಬರರೂ ಹಿಂದೂದೇಶದ ಈ ಸಾಹಾಯ್ಯವನ್ನು ಬಹು ಅಭಿಮಾನದಿಂದ ಕೊಂಡಾಡಿದ್ದಾರೆ. ಈ ಸಂಗತಿಗೆ ಕೆಲವು ಆಂಗ್ಲೋ ಇಂಡಿಯನ್ನರ ಅಥವಾ ಒಬ್ಬಿಬ್ಬ ಕಚ್ಚದ ಕಡೆಯ ಇಂಗ್ಲಿಷ ವ್ಯಾಪಾರಿ ಸಂಘದವರ ಅಪವಾದವನ್ನು ತೋರಿಸಬಹುದು. ಆದರೆ ಅವು ಅಪವಾದವೇ. ಇರಲಿ. ಹೀಗಿರುವಾಗ ಮೇಲಿನ ಪರಿಷತ್ತಿನಲ್ಲಿ ಹಿಂದೂಸ್ಥಾನಕ್ಕೆ ಮಾತ್ರ ಅವಕಾಶವಿಲ್ಲ. ಇದು ಯಾಕೆ?

ಈ ಪ್ರಶ್ನೆಯು ನಮಗೆ ಮಾತ್ರ ಬಂದಿದೆಂತಲ್ಲ. ಕೆಲವು ದಿವಸಗಳ ಹಿಂದೆ ಹಿಂದುಸ್ಥಾನದ ಕೋಶಮಂತ್ರಿಗಳಾದ ಸರ್ ವಿಲ್ಯಮ ಮೇಯರ ಮತ್ತು ವ್ಯಾಪಾರ ಮಂತ್ರಿಗಳಾದ ಸರ್ ಜಾರ್ಜ ಬಾರ್ನೆಸ ಈ ಉಭಯತರು ಮುಂಬಯಿ ಪಟ್ಟಣಕ್ಕೆ ದಯಮಾಡಿದಾಗ ಅಲ್ಲಿಯ ಹಿಂದೀ ವ್ಯಾಪಾರಿ ಸಂಘದವರು ಇದೇ ಪ್ರಶ್ನೆಯನ್ನು ಸರದ್ವಯಕ್ಕೆ ಕೇಳಿದರು. ಪೆರಿಸ ಕೊನ್ಫರೆನ್ಸಿನಲ್ಲಿ ವಸಾಹತುಗಳ ಪ್ರತಿನಿಧಿಗಳಾದ ಮಿ. ಹ್ಯೂಜಿಸ್ ಮತ್ತು ಫೊಸ್ಟರ ಇವರಿಬ್ಬರ ಸಮಾವೇಶವಾಗಬಹುದು. ಆದರೆ ಹಿಂದೀ ವ್ಯಾಪಾರಿಗಳ ಪ್ರತಿನಿಧಿಯನ್ನು ಮಾತ್ರ ಬಿಟ್ಟದ್ದು ಯಾಕೆ? ಇದು ನ್ಯಾಯವೆ? ಸಾಮ್ರಾಜ್ಯಾಂತರ್ಗತವಾದ ರಾಷ್ಟ್ರಗಳಲ್ಲಿ ಒಂದಕ್ಕೆ ಒಂದು ನಮೂನೆ, ಇನ್ನೊಂದಕ್ಕೆ ಇನ್ನೊಂದು ನಮೂನೆ ಹೀಗೆ ಪಕ್ಷಪಾತವು ಯಾಕೆ? ಹಿಂದೀ ವ್ಯಾಪಾರಿ ಸಂಘದವರ ಈ ಪ್ರಶ್ನೆಗಳಿಗೆ ಮೇಲಿನ ಅಧಿಕಾರಿಗಳು ಏನೂ ಉತ್ತರ ಕೊಡಲಿಲ್ಲೆಂತ ಮಾತ್ರ ವಾಚಕರು ನೆನಸಬಾರದು. ವ್ಯಾಪಾರ ಮಂತ್ರಿಗಳಾದ ಸರ್ ಜಾರ್ಜ ಬಾರ್ನೆಸ ಇವರು ಮೇಲಿನ ಪ್ರಶ್ನೆಗಳಿಗೆ ಉತ್ತರ ಕೊಟ್ಟರು. ಆದರೆ ಆ ಉತ್ತರವು ಅಷ್ಟೊಂದು ಸಮರ್ಪಕ ಮಾತ್ರ ಇದ್ದಿಲ್ಲ. ಉತ್ತರದ ಆಶಯವೇನೆಂದರೆ—"ವಸಾಹತಿಯ ಮಂತ್ರಿಗಳು ಪೆರಿಸ ಸಭೆಗೆ ಪ್ರತಿನಿಧಿಗಳಾಗಿ ಹೋದದ್ದಲ್ಲ, ಆದರೆ ಬ್ರಿಟಿಷ ಸಾಮ್ರಾಜ್ಯದ ಕಡೆಯಿಂದ ಹೋಗಬೇಕಾದ ಪ್ರತಿನಿಧಿಗಳಲ್ಲಿ ಅವರ ಸಮಾವೇಶವಾಗಿತ್ತಲ್ಲದೆ ಅದಕ್ಕೆ ಬೇರೆ ಕಾರಣವಿದ್ದಿಲ್ಲ." ಈ ರೀತಿಯಿಂದ ಸರ್ ಬಾರ್ನೆಸರು ಉತ್ತರಕೊಟ್ಟಿರುವರು. ಈ ಉತ್ತರವನ್ನು ಕೇಳಿ ಯಾರಾದರೂ "ಹಿಂದೂಸ್ಥಾನದ ಪ್ರತ್ಯೇಕ ಪ್ರತಿನಿಧಿಗಳೆಂತೆ ಬೇಡ; ಮಿ. ಹ್ಯೂಜಸ ಮೊದಲಾದವರಂತೆಯೇ ಇಲ್ಲಿಂದಲೂ ಸಾಮ್ರಾಜ್ಯ ಪ್ರತಿನಿಧಿಗಳಲ್ಲಿ ಸಮಾವೇಶಿಸಲ್ಪಡುವಂತೆ ಯಾರನ್ನಾದರೂ ಕಳಿಸಬಹುದಿತ್ತಲ್ಲ? ಹೀಗೆ ಮಾಡಲು ಅಡ್ಡಿ ಇತ್ತೋ? ಅಡ್ಡಿ ಇಲ್ಲದಿದ್ದರೆ ತಪ್ಪಿದ್ದು ಯಾಕೆ?" ಎಂತ ಕೇಳಬಹುದು. ಈ ಮಾತಿಗೆ ಉತ್ತರವಾಗಿ ವ್ಯಾಪಾರ ಮಂತ್ರಿಗಳು ಆಶ್ವಸನಾ ಪೂರ್ವಕ ಸಮಾಧಾನ ಕೊಡುವುದೇನೆಂದರೆ—"ಈ ಕೊನ್ಫರನ್ಸ ಕೇವಲ ಪ್ರಸ್ತಾವನಾರೂಪವಾದುದು. ಗ್ರಂಥರೂಪವಾದ ಎಂದರೆ ನಿಜವಾದ ಕೊನ್ಫರನ್ಸು ಇನ್ನು ಮುಂದೆ ಆಗುವುದೇ ಇದೆ, ಮತ್ತು ಆ ಸಮಯದಲ್ಲಿ ಹಿಂದುಸ್ಥಾನದ ಪ್ರತಿನಿಧಿಗೆ ಅವಶ್ಯವಾಗಿ ಆಮಂತ್ರಣೆ ಬರುವುದು!"

ಜಾರ್ಜಬಾರ್ನೆಸ ದೊರೆಗಳ ಈ ಉತ್ತರವನ್ನು ಕೇಳಿ ಪ್ರಬುದ್ಧರಾದವರಿಗೆ ಅದರಿಂದ ಸಮಾಧಾನವುಂಟಾಗಲಿಕ್ಕಿಲ್ಲ. ಪ್ರಾಸ್ತಾವಿಕ ಸಭೆಯಲ್ಲಿ ಮಿ. ಹ್ಯೂಜಸ ಪ್ರಭೃತಿಯರು ಹೋಗಬಹುದು, ಹಿಂದುಸ್ಥಾನದವರಿಗೆ ಅದಷ್ಟೊಂದು ಮಹತ್ವದ್ದಲ್ಲ—ಈ ಮಾತಿನ ನಿಜವಾದ ಅರ್ಥವೇನೆಂದು ಗೊತ್ತಾಗುವುದಿಲ್ಲ. ಪ್ರಾಸ್ತಾವಿಕ ಸಭೆಯಂಥಾ ಕ್ಷುಲ್ಲಕ ಸಂಗತಿಗಳಲ್ಲಿ ಹಿಂದೀ ಪ್ರತಿನಿಧಿಗಳು ತಮ್ಮ ಅಮೂಲ್ಯ ಸಮಯವನ್ನು ವೆಚ್ಚ ಮಾಡುವುದು ಯೋಗ್ಯವಲ್ಲೆಂತ ಸರ ದೊರೆಗಳ ಅಭಿಪ್ರಾಯವೋ ಏನೋ? ಆದರೆ ನಾವು ಹೇಳುವುದೇನೆಂದರೆ "ಪ್ರಥಮ ಗ್ರಾಸೇ ಮಕ್ಷಿಕಾಪಾತಃ" ಎಂದರೆ ಮೊದಲಿನ ತುತ್ತಿನಲ್ಲಿಯೇ ನೊಣವು ಬೀಳುವಂತೆ ಪೆರಿಸ ಕೊನ್ಫರನ್ಸಿನ ಪ್ರಾಥಮಿಕ ಅಧಿವೇಶನದಲ್ಲಿ ಅದು ಪ್ರಸ್ತಾವನೆಯೆಂಬ ನೆವದಿಂದ ಕಂಬಹನಾ ವಿಘ್ನದಿಂದ ಹಿಂದೀ ಪ್ರತಿನಿಧಿಗಳಿಗೆ ಪ್ರವೇಶವು ತಪ್ಪಿಹೋಗುತ್ತದೆ ಅಥವಾ ತಪ್ಪಿಯೇ ಹೋಯಿತೆಂತಾದರೆ ಮುಂದಿನ ಪ್ರಸಂಗಗಳಲ್ಲಿಯೂ ಇದೇ ಹಾಡಾಗುತ್ತದೋ ಏನೊ? "ಈ ಪ್ರಾಸ್ತಾವಿಕ ಸಭೆಗಾದರೂ ಮಿ. ಹ್ಯೂಜಿಸ ಮತ್ತು ಫೊಸ್ಟರ ಇವರನ್ನು ಕಳುಹಿಸಿರುವಂತೆ ಬಹುಮಾನ ಪಟ್ಟ ವಾಚ್ಛಾ ಇಲ್ಲವೆ ಸರ್ ದೊರಾಬ ಟಾಟಾ ಮುಂತಾದವರನ್ನು ಬ್ರಿಟಿಷ ಸಾಮ್ರಾಜ್ಯದ ಪ್ರತಿನಿಧಿಗಳಾಗಿ ಯಾಕೆ ಕಳುಹಿಸಕೂಡದಿತ್ತು?" ಎಂಬದೊಂದು ಪ್ರಶ್ನೆಯನ್ನು ಕೆಲವು ಪತ್ರಕಾರರು ಕೇಳಿದ್ದಾರೆ. ಪ್ರತಿನಿಧಿಗಳಾಗಿ ಹೋಗಲಿಕ್ಕೆ ಬಹುಮಾನ ಪಟ್ಟ ವಾಚ್ಛರಂಥವರು ಇಲ್ಲವೇ ಬೇರೆ ಜನರು ಹಿಂದುಸ್ಥಾನದಲ್ಲಿ ಇದ್ದಾರೆ ಮತ್ತು ಹಾಗೆ ಕಳುಹಿಸಿಕೊಟ್ಟಲ್ಲಿ ಅವರು ಹೋಗಲೂ ಬಹುದಿತ್ತು. ಆದರೆ ಅವರನ್ನು ಕಳುಹಿಸಿಕೊಡುವ ಮನಸ್ಸು ಇರಬೇಕಾಯಿತಲ್ಲವೇ? ಅದೇ ಇಲ್ಲವಾದರೆ 'ಅವರು ಹೋಗಬಹುದಿತ್ತು, ಇವರು ಯೋಗ್ಯರಿದ್ದರು; ಮುಂತಾದ ಆಶಾಂಕುರಗಳನ್ನು ವ್ಯಕ್ತಪಡಿಸುವುದರಲ್ಲಿ ಪ್ರಯೋಜನವೇನು? ಎಂದರೆ ಬ್ರಿಟಿಷ ಮುತ್ಸದಿಗಳಲ್ಲಿ ಹಿಂದೀ ಪ್ರತಿನಿಧಿಗಳನ್ನು ಕಳುಹಿಸುವ ಮನಸ್ಸು ಇಲ್ಲವೇ ಇಲ್ಲೆಂತ ನಾವು ಹೇಳಲಾರೆವು ಮತ್ತು ಹಾಗೆ ಹೇಳುವುದು ಸಹಾ ನಮಗೆ ಚಂದಕಾಣುವುದಿಲ್ಲ. ಆದರೆ ಒಂದು ಕೃತಿಯಿಂದ ಒಬ್ಬನ ಮನಸ್ಸನ್ನು ಕಂಡು ಹಿಡಿಯುವಂತೆ ಇಷ್ಟರ ವರೆಗೆ ಎಂದರೆ ಆ ಪ್ರಾಸ್ತಾವಿಕ ಸಭೆಯಲ್ಲಿ ಸರಕಾರದವರು ಇಲ್ಲಿಯ ಪ್ರತಿನಿಧಿಗಳಿಗೆ ಸ್ಥಾನವನ್ನು ಕೊಡಲಿಲ್ಲೆಂಬ ಸಂಗತಿಯನ್ನು ಆಧರಿಸಿಕೊಂಡು ಹೇಳುವುದಾದರೆ ಮೇಲಿನಂತೆ ನಿರುಪಾಯವಾಗಿ ಹೇಳಬೇಕಾಗುತ್ತದೆ. ಹ್ಯಾಗೂ ಇರಲಿ. ಇಷ್ಟರ ವರೆಗೆ ಆ ಪೆರಿಸ ಸಭೆಯಲ್ಲಿ ನಮ್ಮ ಪ್ರತಿನಿಧಿಗಳು ಹೋಗಿಲ್ಲೆಂಬ ವಿಷಯವು ನಿಜ. ಇನ್ನು ಮುಂದಿನ ಗ್ರಂಥಾತ್ಮಕವಾದ ಅಧಿವೇಶನದಲ್ಲಿ ಮೊನ್ನೆ ಸರ್ ಬಾರ್ನೆಸ ದೊರೆಗಳು ಹಿಂದೀ ವ್ಯಾಪಾರಿ ಸಂಘಕ್ಕೆ ಅಭಿವಚನಿಸಿದಂತೆ ನಮ್ಮ ಪ್ರತಿನಿಧಿಗಳಿಗೆ ಸ್ಥಾನವು ಅವಶ್ಯವಾಗಿ ಲಭಿಸುವುದೆಂದು ನಂಬುವುದೇ ನಮ್ಮ ಕರ್ತವ್ಯವಾಗಿದೆ.

ಮಹಾ ಕವಿಗಳ ಅರಸರು.

ಲೇಖಾಂಕ ೨.

ಕಳೆದ ಸಂಚಿಕೆಯಲ್ಲಿ ಪ್ರಸ್ತಾಪಿಸಿದ್ದಂತೆ ಮಹಾಕವಿಗಳು ಅರಸರ ವಿಷಯದಲ್ಲಿ ಯಾವ ಅಭಿಪ್ರಾಯಪಡುತ್ತಾರೆಂಬುದನ್ನು ಈಗ ನೋಡಬೇಕಾಗಿದೆ. ಸಂಸ್ಕೃತದಲ್ಲಿ ಮಹಾಕವಿಗಳಾದವರು ಕನಿಷ್ಠಪಕ್ಷಕ್ಕೆ ನಾಲ್ಕೈದು ಜನರಿದ್ದರೂ ನಾವು ಈ ಲೇಖದಲ್ಲಿ ಕಾಳಿದಾಸ ಮತ್ತು ಭವಭೂತಿ ಈ ಇಬ್ಬರ ಅಭಿಪ್ರಾಯಗಳನ್ನೇ ತೋರಿಸಲಿದ್ದೇವೆ.

ಮೊದಲು ಕವಿ ಕಾಳಿದಾಸನ ಅರಸರು ಹ್ಯಾಗಿದ್ದರೆಂಬುದನ್ನು ನೋಡೋಣ. ಬೇರೆ ಅರಸರಂತೆಯೇ ಕಾಳಿದಾಸನ ಅರಸರಾದರೂ ಛತ್ರಚಾಮರಾದಿ ರಾಜಚಿನ್ಹೆಗಳುಳ್ಳವರು, ಆನೆ, ಕುದುರೆ ಮುಂತಾದ ಚತುರಂಗ ಸೇನೆಯುಳ್ಳವರು, ಸಂಧಿ, ವಿಗ್ರಹ ಮೊದಲಾದ ರಾಜೋಪಾಯಗಳಲ್ಲಿ ನಿಪುಣರು, ವಿದ್ಯಾಕಲಾ ಪ್ರವೀಣರು, ವಿಶ್ವಜಿದ್ಯಜ್ಞ ಮಾಡಿ ಸಾರ್ವಭೌಮ ಪದವನ್ನು ಪಡೆದವರು. ಒಂದೇ ಮಾತಿನಿಂದ ಹೇಳುವುದಾದರೆ, ಇತಿಹಾಸ ಕಾಲದ ಅಥವಾ ಈಗಿನ ಕಾಲದ ಅರಸರಂತೆಯೇ ಕಾಳಿದಾಸನ ಅರಸರು ಸಹಾ ರಾಜಸಂಪತ್ತಿ, ರಾಜವೈಭವ ಮತ್ತು ರಾಜಾಧಿಕಾರ ಇವುಗಳಿಂದ ಒಪ್ಪುತ್ತಿರುವರು. ಅರಸರೆಂತೆಂದ ಮೇಲೆ ಅವರಿಗೆ ಈಗ ಹೇಳಿದ ಈ ಮೂರು ಸಂಗತಿಗಳು, ಒಂದು ಒಡವೆಗೆ ಅದರ ನೆರಳಿನಂತೆ ಸ್ವಯಂ ಸಿದ್ಧವಾಗಿಯೇ ಇವೆ. ಅವುಗಳಿಗೆ ಕವಿಗಳ ವರ್ಣನಾ ಪ್ರಸಾದವು ಅಗತ್ಯವಿಲ್ಲ. ಅರಸರ ಅಧಿಕಾರತಾರತಮ್ಯದ ವಿಚಾರ ಮಾಡುವಾಗ ಈ ಮೂರು ಸಂಗತಿಗಳ ಆವಶ್ಯಕತೆಯು ಕಂಡುಬರುವುದರಿಂದ ಅವು ಎಲ್ಲ ರಾಜರಲ್ಲಿ ಸ್ವಲ್ಪ ಹೆಚ್ಚು ಕಡಿಮೆಯಾಗಿ ಇದ್ದೇ ಇರುತ್ತವೆ. ಆದುದರಿಂದ ಅವುಗಳಿಗೆ "ರಾಜಸಾಮಾನ್ಯ ವಿಷಯಗಳೆ"ನ್ನಬಹುದು. ಇಂಥಾ ಸಾಮಾನ್ಯ ವಿಷಯದಲ್ಲಿ ಕಾಳಿದಾಸ ಮೊದಲಾದವರ ಮಾತನ್ನು ತೋರಿಸಿ ಅದನ್ನು ವಿಮರ್ಶಿಸುತ್ತ ಕೂಡ್ರುವುದಕ್ಕಿಂತ ಅನ್ಯಾಸಾಧಾರಣ ವಿಷಯದಲ್ಲಿ ಅವರ ಅಭಿಪ್ರಾಯವೇನೆಂದು ನೋಡುವುದು ಯುಕ್ತವಾಗಿದೆ.

ಆ ಅನ್ಯಾಸಾಧಾರಣ ವಿಷಯವು ಯಾವುದು? ಬೇಕಷ್ಟು ಸಂಪತ್ತಿ, ವೈಭವ, ಅಧಿಕಾರ ಇವುಗಳಿದ್ದ ಮೇಲೆ, ಕಳೆದ ಸಂಚಿಕೆಯಲ್ಲಿ ಆಕ್ಷೇಪಕರ ಅನುವಾದದಲ್ಲಿ ಹೇಳಿದ್ದಂತೆ ಅರಸರು ಪ್ರಜೆಗಳ ವಿಪತ್ತುಗಳ ಕಡೆಗೆ ಕಿವಿಗೊಡುವುದು ಸಾಮಾನ್ಯವಾಗಿ ಅಪರೂಪವು. ಕಾರಣ, ಸಂಪತ್ತಿನ ವಸ್ತುಸ್ವರೂಪವು ಹೆಚ್ಚಾಗಿ ಉನ್ಮಾದಜನಕವಾಗಿದೆ. ನೂರಕ್ಕೆ ಇಪ್ಪತ್ತರಂತೆ ಈ ನಿಯಮಕ್ಕೆ ಅಪವಾದಗಳಿರಬಹುದು. ಆದುದರಿಂದ ನಿಯಮ ಶರೀರದಲ್ಲಿ 'ಹೆಚ್ಚಾಗಿ' ಎಂಬ ಶಬ್ದವು ಸೇರಿಸಲ್ಪಟ್ಟಿದೆ. ಇಚ್ಛಾನುಸಾರ ಸಂಪತ್ತು ಮೊದಲಾದುದು ಮತ್ತು ನಿರಂಕುಶವಾದ ಅಧಿಕಾರವು ಇವು ಕೈಯಲ್ಲಿರುವಾಗ ಲೋಕಹಿತದ ಕಡೆಗೆ ತಮ್ಮ ಸಾಮರ್ಥ್ಯವನ್ನು ಖರ್ಚುಮಾಡುವವರು ವಿರಳರು. ಪ್ರಜೆಗಳ ಸುಸ್ಥಿತಿ, ಸಂತೋಷ ಮತ್ತು ಸೌಖ್ಯ ಇವೇ ತಮ್ಮ ರಾಜವೈಭವವೆಂದು ತಿಳಿದುಕೊಳ್ಳುವ ಪರಲೋಕಸ್ಥರಾದ ವಿಕ್ಟೋರಿಯಾ ಮಹಾರಾಜ್ಞಿಯರಂತೆ ಪ್ರಜಾವಾತ್ಸಲ್ಯವುಳ್ಳ ಅರಸರು ಬಹು ಅಪರೂಪ. ಇಂಥವರನ್ನೇ ನಾವೀಗ ಅನ್ಯಾಸಾಧಾರಣರೆನ್ನುತ್ತೇವೆ. ಕಾಳಿದಾಸನ ಅರಸರು ಇದೇ ವರ್ಗಕ್ಕೆ ಸೇರಿದವರಿದ್ದರೆನ್ನಬಹುದು. ಇವರಿಗೆ ಪ್ರಜೆಗಳಿಂದ ವಸೂಲು ತಕ್ಕೊಳ್ಳತಕ್ಕ ಕಂದಾಯ ಮುಂತಾದ್ದರಲ್ಲಿ ಎಷ್ಟು ಆಸಕ್ತಿ ಇರುವುದೋ ಅಷ್ಟೇ ಪ್ರಜೆಗಳ ಹಿತವನ್ನು ಸಾಧಿಸುವುದರಲ್ಲಿತ್ತೆಂದು ಕಂಡು ಬರುತ್ತದೆ. ಇದೇ ಅಸಾಧಾರಣ ವಿಷಯವು.

ಈ ಸಂಗತಿಯನ್ನು ಕವಿಕಾಳಿದಾಸನು ಯಾವ ಯಾವ ಪ್ರಸಂಗದಲ್ಲಿ ಹ್ಯಾಗೆ ಹ್ಯಾಗೆ ತೋರಿಸಿರುವನೆಂಬುದನ್ನು ನೋಡೋಣ. "ರಘುವಂಶ"ವೆಂಬದೊಂದು ಅವನ ಮಹಾಕಾವ್ಯವಿದೆ. ಅದರಲ್ಲಿ ಕಾಳಿದಾಸನು ಸೂರ್ಯವಂಶದ ದಿಲೀಪ ಮೊದಲು ಮಾಡಿಕೊಂಡು ಅಗ್ನಿವರ್ಣನ ವರೆಗಿನ ಅರಸರನ್ನು ವರ್ಣಿಸಿರುವನು. ಮೊದಲು ದಿಲೀಪನ ಸಂಗತಿಗಳನ್ನು ಹೇಳುವಾಗ ಅವನ ಶರೀರ ಸಾಮರ್ಥ್ಯ, ಬುದ್ಧಿಮತ್ತೆ, ನಿಗ್ರಹಾನುಗ್ರಹದಕ್ಷತೆ, ರಾಜ್ಯಕಾರಭಾರದ ಕೌಶಲ ಮುಂತಾದ ರಾಜ ಸಾಮಾನ್ಯ ವಿಷಯಗಳನ್ನು ವಿವರಿಸಿ ಕವಿಯು ಒಂದು ಮಾತನ್ನು ಹೇಳುತ್ತಾನೆ:

> ಪ್ರಜಾನಾಂ ವಿನಯಾಧಾನಾದ್ರಕ್ಷಣಾದ್ ಭರಣಾದಪಿ ।
> ಸಪಿತಾ ಪಿತರಸ್ತಾಸಾಂ ಕೇವಲಂ ಜನ್ಮಹೇತವಃ ॥

ಜನ್ಮವನ್ನು ಕೊಡುವುದಲ್ಲದೆ ಮಕ್ಕಳ ವಿಷಯದಲ್ಲಿ ತಂದೆಯಂದಿರ ಮೂರು ಕರ್ತವ್ಯಗಳಿರುವವು. ೧ ಸನ್ಮಾರ್ಗಪ್ರವರ್ತನೆ ೨ ರಕ್ಷಣೆ ಮತ್ತು ೩ ಪೋಷಣೆ. ಪ್ರಜೆಗಳ ಈ ಮೂರು ಕೆಲಸಗಳನ್ನು ದಿಲೀಪನೇ ಮಾಡುತ್ತಿದ್ದ. ಕಾರಣ ಆ ಕಾಲದ ತಂದೆಯಂದಿರು ಬರೆ ಜನ್ಮವನ್ನು ಮಾತ್ರ ಕೊಡುವವರಾಗಿದ್ದರು ಎಂದರೆ ಅಪತ್ಯ ಸಂಬಂಧದ ಮುಂದಿನ ಭಾರವನ್ನು ಅರಸನೇ ವಹಿಸಿದ್ದನು. ಈ ಮಾತಿನಿಂದ ಪ್ರಜೆಗಳಿಗೆ ಸಂಬಂಧಪಟ್ಟ ಅರಸರ ಕರ್ತವ್ಯಗಳು ಯಾವವೆಂಬುದನ್ನು ಕವಿಯು ಸ್ಪಷ್ಟವಾಗಿ ಸೂಚಿಸಿದ್ದಾನೆ. ಪ್ರಜೆಗಳಲ್ಲಿ ಸನ್ಮಾರ್ಗ ಪ್ರವೃತ್ತಿಯುಂಟಾಗಬೇಕಾದರೆ ವಿದ್ಯಾದಾನವು ಅವಶ್ಯವೆಂಬುದು ಸ್ಪಷ್ಟವಾಗುತ್ತದೆ. ಶತ್ರುಗಳ ಭಯದಿಂದಾಗಲಿ, ವನ್ಯಪಶುಗಳ ಭಯದಿಂದಾಗಲಿ ಅಥವಾ ರೋಗಗಳ ಭಯದಿಂದಾಗಲಿ ಅವರನ್ನು ದಿಲೀಪನು ರಕ್ಷಿಸುತ್ತಿದ್ದನು. ಶತ್ರುಗಳಿಂದ ರಕ್ಷಿಸಿಕೊಳ್ಳಲಿಕ್ಕೆ ಅವರಿಗೆ ಯುದ್ಧದ ಶಿಕ್ಷಣವು ಅವಶ್ಯವಿದೆ; ವನ್ಯಪಶುಗಳಿಂದ ರಕ್ಷಿಸಿಕೊಳ್ಳಲು ಅವರ ಕೈಯಲ್ಲಿ ಆಯುಧಗಳು ಧಾರಾಳವಾಗಿದ್ದಿರಬೇಕು. ಈ ರೀತಿಯಿಂದ ವಿದ್ಯಾದಾನ ಮತ್ತು ರಕ್ಷಣೆಯನ್ನು ಮಾಡುವಾಗಲೇ ದಿಲೀಪನು ಅವರನ್ನು ಪೋಷಿಸುತ್ತಲೂ ಇದ್ದನು. ಇದರ ಅರ್ಥವೇನೆಂದರೆ, ಪ್ರಜೆಗಳು ಉದ್ಯೋಗಶೀಲರಾಗಿದ್ದುದರಿಂದ ಬರಗಾಲದ ಭೀತಿಯು ಇದ್ದಿಲ್ಲ. ಒಂದುವೇಳೆ ಅನಾವೃಷ್ಟಿಯಿಂದ ಬರಗಾಲವು ಬಂದು ಒದಗಿದ್ದೇ ಆದರೆ ದಿಲೀಪನೇ ತನ್ನ ಪ್ರಜೆಗಳ ಪೋಷಣೆಯನ್ನು ಮಾಡುತ್ತಿದ್ದನು.

ಪ್ರಜಾಹಿತದ ದೃಷ್ಟಿಯಿಂದ ನೋಡಿದರೆ ಅವರಿಗೆ ಬೇಕಾದ ಸಂಗತಿಗಳು ಸುಶಿಕ್ಷಣೆ, ರಕ್ಷಣೆ, ಪೋಷಣೆ ಈ ಮೂರೇ ಮತ್ತು ಅವುಗಳನ್ನು ಕಾಳಿದಾಸನ ದಿಲೀಪನು ಸರಿಯಾಗಿ ಸಾಧಿಸಿದ್ದನು. ಇದೇ ರಾಜನ ಕರ್ತವ್ಯವು. ನಿರಂಕುಶಾಧಿಕಾರವನ್ನು ಪ್ರದರ್ಶಿಸುವುದು ರಾಜತ್ವವಲ್ಲ; ಪ್ರಜಾಹಿತದಲ್ಲಿ ಸರಿಯಾದ ಜಾಗರೂಕತೆಯನ್ನಿಟ್ಟುಕೊಂಡಿರುವುದೇ ರಾಜತ್ವವೆಂದು ಕಾಳಿದಾಸನ ಮುಖ್ಯ ಸಿದ್ಧಾಂತವಿತ್ತೆಂದು ಹೇಳಲು ಏನೂ ಸಂಕೋಚ ತೋರುವುದಿಲ್ಲ. ಯಾಕೆಂದರೆ, ದಿಲೀಪನ ಅನಂತರ ಪಟ್ಟಕ್ಕೆ ಬಂದ ರಘುರಾಜನ ವಿಷಯದಲ್ಲಿ ಅವನು "ತಥೈವಸೋಭೂದನ್ವರ್ಥೋ ರಾಜಾಪ್ರಕೃತಿರಂಜನಾತ್" ಎಂದರೆ 'ಪ್ರಜೆಗಳ ರಂಜನೆ ಸಂತೋಷ-ಸೌಖ್ಯ ಇದನ್ನು ಸಾಧಿಸಿ ರಘುವು ತನ್ನ ರಾಜಪದವನ್ನು ಅನ್ವರ್ಥಗೊಳಿಸಿದ್ದನು! ಹೀಗೆಂದು ಅಭಿಪ್ರಾಯಪಡುತ್ತಾನೆ. ಈ ತರದ ಅಭಿಪ್ರಾಯವನ್ನು ಕಾಳಿದಾಸನು ಆರನೇ ಸರ್ಗದ ಪರಂತಪನ ವೃತ್ತಾಂತದಲ್ಲಿ ಸಹಾ "ರಾಜಾ ಪ್ರಜಾರಂಜನ ಲಬ್ಧವರ್ಣಃ" ಎಂಬುವುದರಿಂದ ವ್ಯಕ್ತಗೊಳಿಸಿದ್ದಾನೆ. ರಘುವಿನ ಅನಂತರ ಬಂದ ಅಜನ ಕುರಿತು, ಅವನ ಮಗನಾದ ದಶರಥನ ವಿಷಯದಲ್ಲಿ ಸಹಾ ಕವಿಯು ಈ ಪ್ರಜಾರಂಜನೆಯ ಉಲ್ಲೇಖವನ್ನು ಮಾಡಿರುವನು. ಮಾತ್ರವಲ್ಲ ಮುಂದಿನ ರಾಜರಿಗಾದರೂ ಕಾಳಿದಾಸನು ಈ ಪ್ರಕೃತಿರಂಜನೆಯ ಕವಚವನ್ನೇ ಹಾಕಿದ್ದಾನೆ. ಈ ಸಂಗತಿಗಳನ್ನು ಆಲೋಚಿಸುವಾಗ, ಕಾಳಿದಾಸನಿಗೆ ಈ ಪ್ರಕೃತಿರಂಜನೆಯ ಹುಚ್ಚು ಯಾಕೆ ಹತ್ತಿದ್ದಿರಬಹುದು? ಅವನು ಪ್ರಕೃತಿರಂಜನೆಯೇ ಅರಸರ ಮುಖ್ಯ ಲಕ್ಷಣವೆಂದು ಹೇಳುತ್ತಾನಲ್ಲಾ, ಅವನಿಗೆ ಈ ಪ್ರಕೃತಿರಂಜನೆಯಲ್ಲಿ ಅಷ್ಟು ದೊಡ್ಡ ಯಾವ ಇಂದ್ರಜಾಲವು ತೋರಿರಬಹುದು? ಈ ಪ್ರಶ್ನೆಗಳು ಬರುತ್ತವೆ. ಆದುದರಿಂದ ಪ್ರಕೃತಿರಂಜನೆಯ ವಿಷಯದಲ್ಲಿ ಕೆಳಗೆ ಒಂದೆರಡು ಮಾತುಗಳನ್ನು ಬರೆದರೆ ಅವು ಅಸ್ಥಾನದಲ್ಲಾಗಲಾರವು.

ಇಡೀ ಜನಾಂಗದ ಮೇಲೆ ಒಬ್ಬ ರಾಜನು ಅಥವಾ ಅವನ ಹತ್ತೆಂಟು ಮಂತ್ರಿಮಂಡಲದವರು ಕಾರಭಾರವನ್ನು ನಡಿಸುವುದೆಂದರೆ ಕೊಂಚ ಕಷ್ಟವೇ ಸರಿ. ಪ್ರಜೆಗಳಲ್ಲಿ ಅನೇಕ ಮತಗಳು, ಪಕ್ಷಗಳು ಮತ್ತು ಸ್ವಭಾವಗಳು ಇರುವುದರಿಂದ ಎಲ್ಲರನ್ನು ಏಕಸಮಯಾವಚ್ಛೇದೇನ ಸಂತೋಷಪಡಿಸುವುದು ಸುಲಭಸಾಧ್ಯವಲ್ಲ. ಇಂಥಾ ಸಂದರ್ಭದಲ್ಲಿ ಶಾಸಕ ವರ್ಗವು ಯಾವದಾದರೊಂದು ಪಕ್ಷವನ್ನು ಹಿಡಿದು ಅದರ ಲಾಭಕ್ಕನುಗುಣವಾಗಿಯೇ ವರ್ತಿಸ ಹೋದರೆ ಇನ್ನೊಂದು ಪಕ್ಷದವರಲ್ಲಿ ಕ್ಷೋಭವುಂಟಾಗುವುದು. ಆ ಕ್ಷೋಭವು ದಿನೇ ದಿನೇ ವೃದ್ಧಿಂಗತವಾಗುವುದು. ನೀರೊಳಗೆ ಒಂದು ಹುಂಡು ಎಣ್ಣೆಯು ಪೂರಾ ಪಸರಿಸುವಂತೆ ಪ್ರಜೆಗಳ ಅಸಂತೋಷವು ಮತ್ತು ಅಪ್ರೀತಿಯು ಸರ್ವತ್ರ ಹಬ್ಬಿಹೋಗುವವು. ಈ ಸ್ಥಿತಿಯು ಶಾಸಕ ವರ್ಗದ ಸ್ಥಿರತ್ವಕ್ಕೆ ಬಹು ಅಪಾಯಕರವು. ಆದುದರಿಂದಲೇ ಕಾಳಿದಾಸನು ಹೇಳುತ್ತಾನೆ: "ರಾಜಾಪ್ರಕೃತಿ ರಂಜನಾತ್" ಪ್ರಕೃತಿ ರಂಜನೆ ಎಂದರೆ ಪ್ರಜೆಗಳ ಸಂತೋಷವನ್ನು ಸಂಪಾದಿಸುವವನೇ ರಾಜನು. 'ರಾಜ್' ಧಾತುವಿನ ಮೂಲಾರ್ಥವು ಕೂಡ ಇದೇ ಸರಿ.

ಕಾಳಿದಾಸನಿಗೆ ಮಾತ್ರ ಈ ಪ್ರಕೃತಿ ರಂಜನೆಯ ಹುಚ್ಚಿತ್ತೆಂದು ನೆನಸಕೂಡದು. ಮೋಗಲ ಬಾದಶಹರಲ್ಲಿ ಲೋಕಪ್ರಿಯನಾದ ಅಕಬರನ ಆಳಿಕೆಯೊಳಗಿನ ಒಂದು ಚಿಕ್ಕ ಕಥೆಯು ಪ್ರಸಿದ್ಧವಿದೆ. ಅಕಬರನ ಆಳಿಕೆಯಲ್ಲಿ ಒಬ್ಬ ಭವಿಷ್ಯವಾದಿಯು ಇದ್ದನು. ಅವನು ಸಾಂಸಾರಿಕ ಉಪಸರ್ಗಗಳನ್ನೆಲ್ಲ ತ್ಯಜಿಸಿ ದೇವರ ಧ್ಯಾನಕ್ಕಾಗಿ ವನಕ್ಕೆ ಹೋಗಿದ್ದನು. ಅವನ ಹಿತೋಪದೇಶವು ಆ ಕಾಲದಲ್ಲಿ ಎಲ್ಲರಿಗೆ ಬಹುಮಾನ್ಯವಾಗಿತ್ತು. ಮೊದಲಿನಿಂದ ಪ್ರಸಿದ್ಧನಾದ ಅವನ ಭವಿಷ್ಯಕಥನದಿಂದಲೂ, ಈಗಿ

ಪಶಸ್ತ್ರ ರಣೆಯಿಂದಲೂ ಅವನ ಕೀರ್ತಿಯು, ಅವನು ಕಾಡಿನಲ್ಲಿರುವವನಾದರೂ ರಾಜಗೃಹದ ವರೆಗೆ ಹೋಗಿತ್ತು. ಒಮ್ಮೆ ಅಕಬರನಿಗೆ ತನ್ನ ರಾಜ್ಯಕ್ಕೆ ಆಯುಷ್ಯವೆಷ್ಟೆಂದು ತಿಳಿದುಕೊಳ್ಳುವ ಕುತೂಹಲವುಂಟಾದ ಕಾರಣ ತನ್ನ ಪ್ರಧಾನನನ್ನು ಅವನಿದ್ದಲ್ಲಿಗೆ ಕಳುಹಿಸಿದನು. ಪ್ರಧಾನನು ಆ ಫಕೀರನಿದ್ದಲ್ಲಿ ಹೋಗುವಾಗ ತನ್ನ ಸಂಗಡ ಬೇಕಷ್ಟು ಪರಿವಾರವನ್ನು ತಕ್ಕೊಂಡು ಹೋದನು. ಕಡಿಮೆ ಸಂಖ್ಯೆಯನ್ನು ಹೇಳುವುದಾದರೆ ಆ ಪ್ರಧಾನನ ಸಂಗಡ ೧೦೦ ಜನರಾದರೂ ಇರಬಹುದು. ಪ್ರಧಾನನು ಫಕೀರನ ಭೇಟಿಯನ್ನು ತಕ್ಕೊಂಡು ಅರಸನು ಕೇಳಲಿಕ್ಕೆ ಹೇಳಿದ್ದ ಪ್ರಶ್ನೆಯನ್ನು ಸನ್ಯಾಸಿಗೆ ಶ್ರುತಪಡಿಸಿದನು. ಪ್ರಶ್ನೆಯನ್ನು ಕೇಳಿ ಮುಗುಳು ನಗೆಯಿಂದ ಆ ಫಕೀರನು 'ಇಲ್ಲಿಂದ ಪೂರ್ವಕ್ಕೆ ಅರ್ಧ ಮೈಲಿನ ಅಂತರದಲ್ಲಿ ಒಂದು ದೊಡ್ಡ ಗೋಳಿಮರವಿದೆ. ಅಲ್ಲಿ ಹೋಗಿ ನೀವೆಲ್ಲರು ನಿಂತುಕೊಳ್ಳಬೇಕು. ಆ ಮರವು ಒಣಗಿ ಬಿದ್ದ ಮೇಲೆ ಈ ಪ್ರಶ್ನೆಗೆ ನಾನು ಉತ್ತರವನ್ನು ಕೊಡುವೆನು' ಎಂದು ಹೇಳಿ ಪ್ರಧಾನಾದಿಕರನ್ನು ಆ ಮರದ ಕಡೆಗೆ ಕಳುಹಿಸಿದನು. ಅವರಿಗೆ ಅಲ್ಲಿ ಹೋಗದೆ ಉಪಾಯವಿದ್ದಿಲ್ಲ. ಬಾದಶಹನ ಪ್ರಶ್ನೆಯ ಉತ್ತರವನ್ನು ತೆಕೊಳ್ಳದೆ ಬಾದಶಹನಿಗೆ ಮೋರೆ ತೋರಿಸುವುದು ಹ್ಯಾಗೆಂದು ಆಜ್ಞಾನತತ್ಪರನಾದ ಪ್ರಧಾನನಿಗೆ ಯೋಚನೆ. ಫಕೀರನು ಹೇಳಿದ ಸಂಗತಿ ಎಂತೂ ಆಕಾಶಕ್ಕೆ ಏಣಿ ಏರಿಸುವುದೇ ಸರಿ! ಹೀಗೆ ಆಲೋಚಿಸುತ್ತಾ ಆ ಪ್ರಧಾನಿಯು ನೂರಾರು ಸೇವಕರೊಡನೆ ಆ ಮರದ ಕೆಳಗೆ ದಿವಸಗಳನ್ನು ಕಳೆಯಹತ್ತಿದನು. ಒಂದೆರಡು ತಿಂಗಳುಗಳು ದಾಟಿದವು. ಪಟ್ಟಣದಿಂದ ಆಹಾರ ಸಾಧನೆಗಳನ್ನು ತರಿಸುತ್ತಲೇ ಇದ್ದರು. ಮನೆಯಿಲ್ಲ, ಪಟ್ಟಣವಿಲ್ಲ, ಪೇಟೆಯಿಲ್ಲ. ಕಾಡಿನಲ್ಲಿ ನಿಂತು ದಿವಸಗಳನ್ನು ಕಳೆಯುವುದು ಆ ರಾಜಸೇವಕರಿಗೆ ಸ್ವಲ್ಪ ಬೇಸರದ್ದಾಯಿತು. ಪ್ರಿಯ ಮತ್ತು ಆಪ್ತಜನರ ವಿಯೋಗದಿಂದ ಅವರ ಆ ಬೇಸರವು ಇನ್ನಷ್ಟು ವೃದ್ಧಿಯಾಯಿತು. ಪ್ರತಿ ದಿವಸ ಎಲ್ಲರೂ ಎದ್ದ ಕೂಡಲೇ ಹೇಳುವ ಮಾತು "ದೇವರೇ ಈ ದುಷ್ಟ ಮರವು ಯಾಕೆ ಬೀಳುವುದಿಲ್ಲ. ನಮ್ಮೆಲ್ಲರ ಸಂಕಟಕ್ಕೆ ಕಾರಣವಾಗಿದೆ" ಇದೆ ಆಗಿತ್ತು. ಅಲ್ಲಿದ್ದ ನೂರಾರು ಅಂತಃಕರಣಗಳು ಏಕತ್ರ ಸೇರಿ ಶಪಿಸುವುದೂ ಜಪಿಸುವುದೂ ಇದೊಂದೇ ಸಂಗತಿಯು. ಆದರೆ ದೈವವಶಾತ್ ನಾಲ್ಕು ತಿಂಗಳು ದಾಟುವಷ್ಟರೊಳಗೆ ವಿಶಾಲವಾದ ಆ ಮರದ ಎಲ್ಲ ಎಲೆಗಳು ಒಂದೊಂದಾಗಿ ಬೀಳಹತ್ತಿದವು. ಮರದ ಪಸೆಯು ಕಡಮೆಯಾಯಿತು; ಕೊಂಬೆಗಳು ಒಂದೊಂದು ನೆವದಿಂದ ತನ್ನಷ್ಟಕ್ಕೆ ಬೀಳಹತ್ತಿದವು. ಮತ್ತು ಆರು ತಿಂಗಳು ದಾಟುವಷ್ಟರೊಳಗೆ ಆ ಮರವು ಒಂದು ದಿನ ಭೂಮಿಯ ಮೇಲೆ ಬಿತ್ತು! ಆಗ ಅಲ್ಲಿದ್ದ ಪ್ರಧಾನ ಮುಂತಾದ ಎಲ್ಲರಿಗೆ ಬಹು ಸಂತೋಷವಾಯಿತು. ಕೂಡಲೆ ಅವರು ಆ ಫಕೀರನಿದ್ದಲ್ಲಿಗೆ ಬಂದು ಮರವು ಬಿದ್ದ ಸಂಗತಿಯನ್ನು ಹೇಳಿದರು.

ಅದನ್ನು ಕೇಳಿ ಫಕೀರನು ಪ್ರಧಾನಿಗೆ ಹೇಳಿದನು. ನೀವು ಆರು ತಿಂಗಳು ಹಿಂದೆ ಆ ಮರದ ಬುಡಕ್ಕೆ ಹೋದಾಗ ಆ ಮರವು ಬಹು ವಿಶಾಲವಾಗಿಯೂ ಸಜೀವವೂ ಆಗಿತ್ತು. ಆದರೆ ದೃಶ್ಯವಾದ ಯಾವ ಉಪಾಯವೂ ಇಲ್ಲದೆ ಆ ಮರವು ಇಷ್ಟು ಚಿಕ್ಕ ಅವಧಿಯಲ್ಲಿ ಬಿದ್ದುಹೋಯಿತು. ಇದಕ್ಕೆ ಕಾರಣವೇನೆಂದು ನೆನೆಸುವಿರಿ? ನಿಮ್ಮೆಲ್ಲರ ಶಾಪವೇ ಸರಿ. ಪ್ರತಿದಿನ ನೀವೆಲ್ಲರು ಎದ್ದಕೂಡಲೆ ಮಲಗುವ ತನಕ ಮಾತ್ರವಲ್ಲ ನಿದ್ರೆಯಲ್ಲಿ ಕೂಡ "ಈ ಮರವು ಬೇಗ ಸಾಯಲಿ" ಎಂತಲೇ ನೆನೆಸುತ್ತಿದ್ದಿರಿ. ಯಾವಾಗಲೂ ಮರದ ಕಡೆಗೆ ನೋಡಿ ಅದನ್ನು ಶಪಿಸುತ್ತಿದ್ದಿರಿ. ಇದು ಒಬ್ಬನ ಸಂಗತಿಯಲ್ಲ. ನೀವು ನೂರಾರು ಜನರು ಕೂಡಿ ಇದನ್ನೇ ಬಯಸುತ್ತಿದ್ದಿರಿ. ನಿಮ್ಮೆಲ್ಲರ ಆ ಅಂತಃಕರಣಗಳ ಸಂತಾಪವು ಏಕತ್ರ ಸೇರಿ ಮರಕ್ಕೆ ಒಂದು ಕೊಡ್ಲಿಯಾಗಿ ಆ ಮರವನ್ನು ಸಮೂಲವೇ ಕಿತ್ತಿತು. ಇದೇ ನ್ಯಾಯವನ್ನು ನಿಮ್ಮ ಬಾದಶಹನಿಗೆ ತಿಳಿಸಬೇಕು. ಪ್ರಜೆಗಳು ನಿನ್ನನ್ನು ಪ್ರೀತಿಸುವಷ್ಟರ ವರೆಗೆ ನಿನ್ನ ರಾಜ್ಯಕ್ಕೆ ಬಾಧಕವಿಲ್ಲ. ಪ್ರಜೆಗಳ ಸಂತೋಷವೇ ನಿನ್ನ ರಾಜ್ಯವು. ಆ ಸಂತೋಷವು ಅವರಲ್ಲಿ ಯಾವಾಗಲೂ ನಿಲ್ಲುವಂತೆ ಯತ್ನಿಸು. ಅದಕ್ಕೆ ಭಂಗ ತರಬೇಡ"

ಈ ಚಿಕ್ಕ ಕಥೆಯು ಕಾಲಿದಾಸನ "ಪ್ರಕೃತಿರಂಜನೆ"ಗೆ ಚನ್ನಾಗಿ ಪ್ರಕಾಶ ಕೊಡುತ್ತದೆ. ಅರಸರಿಗೆ ಪ್ರಜಾನುರಂಜನೆಯೇ ಮುಖ್ಯವಾದ ಬಂಡವಾಳವಾಗಿದೆ. ಆದುದರಿಂದ ಕಾಲಿದಾಸನ ಅರಸರು ಈ ಬಂಡವಾಳವನ್ನು ಇಟ್ಟುಕೊಂಡೆ ರಾಜತಂತ್ರದ ವ್ಯಾಪಾರವನ್ನು ಮಾಡುತ್ತಿದ್ದರು.

ಈ ಪ್ರಸಂಗದಲ್ಲಿ ಒಂದು ಚಿಕ್ಕ ಮಾತನ್ನು ಹೇಳಿ ಈ ಹೊತ್ತಿನ ಲೇಖಾಂಕವನ್ನು ನಮಗೆ ಮುಗಿಸಬೇಕಾಗಿದೆ. ಈ ಇಪ್ಪತ್ತನೇ ಶತಮಾನದಲ್ಲಿ ಎಲ್ಲಾ ಅರಸರು ತಮ್ಮ ತಮ್ಮ ಪ್ರಜೆಗಳ ಸಂತೋಷವೇ ತಮ್ಮ ಸ್ಥಿರತ್ವಕ್ಕೆ ಕಾರಣವೆಂದು ತಿಳಿದೇ ಆ ರೀತಿಯಿಂದ ಅಹರ್ನಿಶ ಯತ್ನಿಸುತ್ತಿದ್ದಾರೆ. ಇದಕ್ಕೆ ಈಗಿನ ನಮ್ಮ ದಯಾಳುಗಳಾದ ಇಂಗ್ಲಿಷ್ ಪ್ರಭುಗಳ ಸಹಾನುಭೂತಿ ಪ್ರೇರಿತವಾದ ಮತ್ತು ಉದಾತ್ತ ತತ್ವವನ್ನೆ ಆದರಿಸಿಕೊಂಡಿರುವ ರಾಜ್ಯಶಾಸನವೇ ಸಾಕ್ಷಿಯಾಗಿದೆ. ಇದು ಸ್ವರಾಜ್ಯವಲ್ಲದಿದ್ದರೂ ಸುರಾಜ್ಯವೆಂಬುದಕ್ಕೆ ಅಡ್ಡಿಯಿಲ್ಲ.

ಮ. ರಾ. ತಿಲಕರಿಂದ ಪಡಕೊಂಡ ಜಾಮೀನು.

ಮ. ರಾ. ಬಾಲಗಂಗಾಧರ ತಿಲಕರವರು ಕಳೆದ ಮೇ ತಿಂಗಳಿನಲ್ಲಿ ಬೆಳಗಾಂವ ಮತ್ತು ಅಹಮದ ನಗರದಲ್ಲಿ "ಸ್ವರಾಜ್ಯ ಅಥವಾ ಹೋಮರೂಲ್" ಈ ವಿಷಯದ ಕುರಿತು ಕೊಟ್ಟ ಉಪನ್ಯಾಸಗಳು ಇ. ಪಿ. ಕೋ. ೧೨೪ (ಅ) ಕಲಮಿಗೆ ಒಳಪಡುವುದರಿಂದ ಅವು ರಾಜದ್ರೋಹಕಾರಕವಾಗಿವೆಂದು ಹೇಳಿ ಪೂನಾ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಆಗೋಸ್ತ ೧೬ನೇ ತಾರೀಕಿಗೆ ಮ. ರಾ. ತಿಲಕರಿಂದ ಜಾಮೀನು ತಕ್ಕೊಳ್ಳುವ ವಿಷಯದಲ್ಲಿ ಹುಕುಮನ್ನು ಕೊಟ್ಟ ಸಂಗತಿಯು ಪ್ರಾಯಃ ಈಗೆಲ್ಲರಿಗೆ ತಿಳಿದಿದೆ. ತಿಲಕರ ಉಪನ್ಯಾಸಗಳಾದದ್ದು ಮಹಾರಾಷ್ಟ್ರ ಭಾಷೆಯಲ್ಲಿ; ಮಹಾರಾಷ್ಟ್ರ ಭಾಷೆಯು ಶೋರ್ಟ್‌ಹೆಂಡರೈಟರರು ಅವನ್ನು ಟಿಪ್ಪಣಿಸಿದ್ದು; ಆ ಟಿಪ್ಪಣಿಯಿಂದ ಉಪನ್ಯಾಸವನ್ನು ತಯಾರಿಸಿ, ಆ ಉಪನ್ಯಾಸವನ್ನು ಇಂಗ್ಲಿಷ್ ಭಾಷೆಯಲ್ಲಿ ಪರಿವರ್ತಿಸಿ, ಆ ಪರಿವರ್ತನೆಯ ಆಧಾರದಿಂದ ಮೂಲ ಉಪನ್ಯಾಸದಲ್ಲಿ ರಾಜದ್ರೋಹವನ್ನು ಕಂಡುಹಿಡಿದು ಮೇಜಿಸ್ಟ್ರೇಟರು ಜಾಮೀನನ್ನು ಕೊಡಲು ಅಪ್ಪಣೆ ಮಾಡಿರುತ್ತಾರೆ. ಈ ಉದ್ದವಾದ ದ್ರಾವಿಡ ಪ್ರಾಣಾಯಾಮವನ್ನು ನೋಡುವಾಗ ಮೂಲ ಉಪನ್ಯಾಸಕ್ಕೂ, ಕೋರ್ಟಿನಲ್ಲಿ ಬಂದ ಈ ಪರಿವರ್ತನೆಗೂ ಎಷ್ಟು ಸಾಮ್ಯವಿದೆಂದು ಹೇಳಲು ಸಾಧ್ಯವಿಲ್ಲ.

ಅವರ ಉಪನ್ಯಾಸವನ್ನು ನೋಡುವಾಗ ಅವರು ಆ ಉಪನ್ಯಾಸಗಳಲ್ಲಿ ಮುಖ್ಯವಾಗಿ ಇಲ್ಲಿಯ ಬ್ಯೂರೋಕ್ರಸಿಯ ವಿಷಯದಲ್ಲಿಯೂ, ಅಂತರ್ಗತ ರಾಜ್ಯಕಾರಭಾರವು ಹಿಂದೀ ಜನರ ಕೈಯಲ್ಲಿರಬೇಕಾಗಿಯೂ ಮಾತಾಡಿರುವರೆಂತ ತೋರುತ್ತದೆ. ಮತ್ತು ಅದೇ ಸಮಯದಲ್ಲಿ ಹಿಂದೂಸ್ಥಾನಕ್ಕೆ ಇಂಗ್ಲಿಷರ ಹೊರತು ಗತಿಯಿಲ್ಲ; ಇವರ ಪ್ರಭುತ್ವವು ನಮಗೆ ಅಗತ್ಯ; ಇವರ ಮೇಲ್‌ತನಕೆಯು ನಮಗೆ ಬೇಕಾದುದು ಎಂದು ಮುಂತಾಗಿ ಸ್ಪಷ್ಟ ವಿಧಾನಗಳನ್ನು ಮಾಡಿರುವರು. ಸಾಮಾನ್ಯವಾಗಿ ಅಧಿಕಾರಿಗಳ ದೋಷಗಳನ್ನು ಪ್ರದರ್ಶಿಸುವುದರಿಂದ ರಾಜರ ವಿಷಯದಲ್ಲಿ ಅಥವಾ ಸರಕಾರದ ವಿಷಯದಲ್ಲಿ ಜನರೊಳಗೆ 'ಅಪ್ರೀತಿ'ಯು ಉಂಟಾಗುವುದು ಹ್ಯಾಗೆ? ರಾಷ್ಟ್ರೀಯ ಸಭೆಯ ಯಾವ ನಿರ್ಣಯವನ್ನು ನೋಡಿದರೂ ಅದರಲ್ಲಿ ಅಧಿಕಾರಿಗಳ ವರ್ತನದ ಮೇಲೆ ಟೀಕೆಯು ಇದ್ದೇ ಇರುವುದು. ಹಾಗಾದರೆ ಅವುಗಳೆಲ್ಲ ರಾಜದ್ರೋಹಕರವೋ? ಅಧಿಕಾರಿಗಳ ನಿಜವಾದ ದೋಷಗಳನ್ನು ರಾಜ್ಯದ ಸ್ಥಿರತ್ವಕ್ಕೆ ಅಪಾಯಬಾರದ ರೀತಿಯಿಂದ—ಹೇಳುವುದೆಲ್ಲ ರಾಜದ್ರೋಹಕರವೆಂದ ಮೇಲೆ ಪ್ರಜೆಗಳು ಅಧಿಕಾರಿಗಳ ವಿಷಯದಲ್ಲಿ ಯಾವ ಮಾತನ್ನೂ ಆಡಕೂಡದು, ಬರೆಯಲೂ ಕೂಡದೆಂದು ಬೇರೆ ವಿಧಿಸಬೇಕಾದುದಿಲ್ಲ. ಹೀಗಿರಲು ಬ್ರಿಟಿಷರು ತಾವು ಹಿಂದೀ ಜನರಿಗೆ ಭಾಷಣ ಮತ್ತು ಲೇಖನ ಸ್ವಾತಂತ್ರ್ಯವನ್ನು ಕೊಟ್ಟಿದ್ದೇವೆಂದು ಹೇಳುವುದು ಹೇಗೆ?

ರಾಜದ್ರೋಹದ ಕಲಮಿನ ಆಲೋಚನೆ ಮಾಡುವಾಗ ಮಾತಾಡುವವನ ಉದ್ದೇಶ ಮತ್ತು ಆ ಮಾತಿನ ಪರಿಣಾಮ ಇವುಗಳ ಕಡೆಗೆ ನಾವು ದೃಷ್ಟಿಕೊಡಬೇಕಾಗುತ್ತದೆ. ಹಾಗೆ ಈ ಪ್ರಸಂಗದಲ್ಲಿ ನೋಡುವಾಗ ತಿಲಕರವರು ಇಂಗ್ಲಿಷ ಸರಕಾರವು ಹಿಂದುಸ್ಥಾನದಲ್ಲಿ ದೃಢಮೂಲವಾಗಿರಬೇಕೆಂಬುದಾಗಿ ಸ್ಪಷ್ಟ ರೀತಿಯಿಂದ ಉದ್ದೇಶಪಡುತ್ತಾರೆ; ಅವರ ಮಾತಿನ ಪರಿಣಾಮವು ಯಾವ ದಂಗೆ ಅಥವಾ ಅಸಂತೋಷ ಮುಂತಾದರಲ್ಲಿ ಉಂಟಾದುದು ಕಂಡುಬರುವದಿಲ್ಲ. ಈ ರೀತಿಯಿಂದ ಉದ್ದೇಶ ಮತ್ತು ಪರಿಣಾಮಗಳನ್ನೂ ಲಕ್ಷ್ಯದಲ್ಲಿ ತಂದು ನೋಡುವಾಗ ಪೂನಾ ಮ್ಯಾಜಿಸ್ಟ್ರೇಟರು ಜಾಮೀನು ವಿಧಿಸಿದ್ದು ವಿಷಾದಕರವೇ ಸರಿ. ಈ ವಿಷಯದಲ್ಲಿ ಪೂನೆಯ ಮ್ಯಾಜಿಸ್ಟ್ರೇಟರು ಅಷ್ಟೊಂದು ಸ್ವತಂತ್ರರಲ್ಲೆಂದು ನಾವು ಭಾವಿಸುತ್ತೇವೆ. ಮುಂಬಯಿ ಸರಕಾರವೇ ಈ ವಿಷಯದಲ್ಲಿ ಜವಾಬದಾರವಾಗಿದೆ. ಆದರೆ ಆ ಮುಂಬಯಿ ಸರಕಾರದ ಇಂಥಾ ಒಂದೆರಡು ಕೆಲಸಗಳನ್ನು ನೋಡುವಾಗ ಈ ಮಹಾಯುದ್ಧದ ಸಮಯದಲ್ಲಿಯಾದರೂ ಅದನ್ನು ತಾಳ್ಮೆಯನ್ನು ತಾಳಲು ಅದಕ್ಕೆ ವೈಸರಾಯರು ಯೋಗ್ಯೋಪದೇಶವನ್ನು ಕೊಡುವರೆಂದು ನಾವು ಭಾವಿಸುತ್ತೇವೆ.

ಪತ್ರವ್ಯವಹಾರ.

ದಯಮಾಡಿ ಈ ಕಡೆಗೆ ಲಕ್ಷ್ಯಕೊಡಿರಿ!!

ಅಯ್ಯಾ ಪತ್ರಕರ್ತರೇ,

ಈ ಪತ್ರಿಕೆಯ ಕಳೆದ ಬಗೆಯ ಸಂಚಿಕೆಯಲ್ಲಿ "ಹುಚ್ಚರು ಹೆಚ್ಚುವುದರ ಕಾರಣವೇನು?" ಎಂಬುವುದರ ಕುರಿತು ಪ್ರಕಟವಾದ ಲೇಖನದಲ್ಲಿ—ಈಗಿನ ಕಾಲದ ಜನರಲ್ಲಿ ಪ್ರಬಲಿಸುತ್ತಾ ಬರುವ ವಿವಿಧ ದುರಭ್ಯಾಸಗಳೇ ಕಾರಣವೆಂದು ರುಜುಪಡಿಸಿತ್ತು. ಮದ್ಯಪಾನವು, ಚಹಾ, ಪೀಡಿ, ಸಿಗರೇಟುಗಳೂ ವಿಲಾಯತಿ ಜನರಲ್ಲಿ ಹುಚ್ಚುತನವನ್ನು ಹೆಚ್ಚಿಸುತ್ತಿರುವುದಾದರೆ ಭಾರತೀಯರಾದ ನಮಗೆ ನಮ್ಮ ಪ್ರಾಣಕ್ಕಿಂತಲೂ ಅಮೂಲ್ಯವಾದ ಧರ್ಮವನ್ನೇ ಭ್ರಷ್ಟಗೊಳಿಸಿರುತ್ತದಲ್ಲವೇ? ಅವುಗಳಲ್ಲಿ ಹಿಂದಲ್ಲ ಒಂದನ್ನು (ಗಾಂಜಾ, ಭಂಗಿ, ಅಫೀಮು ಮೊದಲಾದುವನ್ನು ಸಹ) ಅನೇಕರು ಪ್ರೀತಿಯಿಂದ ಸೇವಿಸಿ ಸಕಲ ಸುಖ ಭೋಗಗಳಿಗೂ ಅತೀ ಅವಶ್ಯವಾದ ತಮ್ಮ ಶರೀರವನ್ನೇ ಕೆಡಿಸಿಕೊಂಡು, ಆಲಸ್ಯ, ಬುದ್ಧಿಮಾಂದ್ಯ, ನಿಸ್ತೇಜ, ನಿರುತ್ಸಾಹವೇ ಮೊದಲಾದ ಮಾನಸಿಕ ರೋಗಗಳಿಂದ ಪೀಡಿತರಾಗಿರುವವರನ್ನು ನಾವು ಎಲ್ಲೆಲ್ಲಿಯೂ ಕಾಣಬಹುದು! ಅಶಿಕ್ಷಿತರಾದ ಜನರಂತೂ, ತಮ್ಮ ಅಜ್ಞಾನದಿಂದ ಬರಮಾಡಿಕೊಳ್ಳುವ ವಿವಿಧ ಸಂಕಷ್ಟಗಳ ಜೊತೆಗೆ ಮದ್ಯಪಾನ ಮತ್ತು ನಿಶಾ ಸೇವನೆಗಳಿಂದ ಇನ್ನಷ್ಟು ದುರ್ಗತರಾಗುತ್ತಾರೆ! ಸುಶಿಕ್ಷಿತರಾದರೋ ನವನಾಗರೀಕತನದ ಸುಖ ಲಂಪಟಕ್ಕಾಗಿ ಅವನ್ನು ಸೇವಿಸಿ, ಆರೋಗ್ಯ, ಧನ, ಮಾನ ಹೀನರಾಗುತ್ತಾ ಬರುತ್ತಾರೆ! ಆತ್ಮ, ಜೀವ, ಮನಸ್ಸು, ಶರೀರಾದಿಗಳ ಕುರಿತು ದೊಡ್ಡದೊಡ್ಡ ಭಾಷಣಗಳನ್ನು ಮಾಡುವ ಕೆಲವು ತತ್ವಜ್ಞಾನಿಗಳೂ, ಹರಿದಾಸರೂ, ಗಾಂಜಾ, ಭಂಗಿ, ಹೊಗೆಸೊಪ್ಪು ನಶೆ ಇತ್ಯಾದಿ ದುರ್ವ್ಯಸನಗಳ ಕಡೆಗೆ ಕ್ಷಣಕ್ಷಣಕ್ಕೂ ಓಡುವ ತಮ್ಮ ಮನಸ್ಸನ್ನು ಹಿಂದಿಷ್ಟು ಬಿಗಿಹಿಡಿಯಲಾರದ ನಾಚಿಕೆಗೇಡಿಗಳಾಗಿ ಅವುಗಳ ಗುಲಾಮರಾಗಿದ್ದಾರೆ! ತಾವು ಯಜ್ಞೋಪವೀತವನ್ನು ಹಾಕಿಕೊಂಡು ಗಾಯತ್ರೀ ಜಪದ ಮೂಲಕ ಪರಿಶುದ್ಧರಾದವರೆಂದೂ, ಉತ್ತಮ ವರ್ಣದವರೆಂದೂ, ಹೇಳಿಕೊಳ್ಳುವ ಹಿಂದೂ ಧರ್ಮದವರನೇಕರು—"ಮದ್ಯಪಾನವು ಪಂಚಮಹಾ ಪಾತಕಗಳಲ್ಲಿ ಒಂದು" ಎಂಬ ತಮ್ಮ ಧರ್ಮಶಾಸ್ತ್ರ ವಿಧಿಯನ್ನೇ ಮೀರಿ—ಪ್ರಥಮತಃ ಔಷಧಿಗೆಂದು ವೈನು, ಬ್ರಾಂಡಿಗಳ ಶೀಸೆಯನ್ನು ಸ್ವಲ್ಪ ಸ್ವಲ್ಪವೇ ಕುಡಿದು ಖಾಲಿಮಾಡುತ್ತಾ, ಕ್ರಮೇಣ ಶರಾಬು, ಸೇಂದಿಗಳ ಭಕ್ತರಾಗಿ ಚಂಡಾಲರಾಗುತ್ತಿರುತ್ತಾರೆ!! ತಾವು ಮುಸಲ್ಮಾನರೆಂದು ಹೇಳಿಸಿಕೊಳ್ಳುವವರನೇಕರು—ಶರೀರದ ಯಾವ ಸ್ಥಾನಕ್ಕೆ ಮದ್ಯಪಾನವು ಸ್ಪರ್ಶವಾಗುತ್ತದೋ, ಆ ಸ್ಥಾನವನ್ನೇ ಕೊಯಿದು ತೆಗೆಯಬೇಕೆಂದು ಆಜ್ಞಾಪಿಸಿದ—ತಮ್ಮ ಪವಿತ್ರ ಘನವುಳ್ಳ, ಮಹಮ್ಮದ್ ಗುರುವಿನ ಮತ್ತು ಖುರಾನಿನ ಆಜ್ಞೆಯನ್ನೇ ಉಲ್ಲಂಘಿಸಿ ಪ್ರಾರಂಭದಲ್ಲಿ ಮದ್ಯಪಾನದ ಅಂತರಂಗ ಭಕ್ತರಾಗಿದ್ದು, ಈಗೀಗ ಬಹಿರಂಗವಾಗಿ ಕುಡಿದು ಕಾಫರರಾಗುತ್ತಿರುತ್ತಾರೆ! ಹಿಂದೀ ಕ್ರೈಸ್ತರಲ್ಲನೇಕರಾದರೋ ಊರಿನ ಶೇಂದಿ ಶರಾಬು ಕುಡಿಯೋಣವೂ, ಹೊಗೆಸೊಪ್ಪು ಪೀಡಿಯ ಸೇವನೆಯೂ, ನೇಟಿವ್ ಜನರ ಪದ್ಧತಿಯೆಂದು ಹೇಸಿ, ಬ್ರಾಂಡಿ, ವ್ಹಿಸ್ಕಿ, ವೈನು, ಬೀರುಗಳನ್ನೂ, ಸಿಗರ್ ಸಿಗರೇಟುಗಳನ್ನೂ ಯಥೇಚ್ಛ ಸೇವಿಸಿ, ಮೋರೆ ಕೆಂಪುಮಾಡಿಕೊಂಡು, ಯುರೋಪಿಯನರಾಗಲು ತುಂಬಾ ಪೇಚಾಡುತ್ತಿರುತ್ತಾರೆ! ಮತ್ತು ತಮ್ಮ ಗೃಹಕೃತ್ಯವನ್ನು ನರಕವನ್ನಾಗಿ ಮಾಡಿ, ತಾವು ಸೈತಾನರಾಗುತ್ತಿರುತ್ತಾರೆ!!

ಆಹಾ! ಇದೆಂತಹ ಘಾತುಕ ಪರಿಣಾಮ! ಕಾಲ ಮಹಿಮೆಯೋ? ಕಲಿಮಹಿಮೆಯೋ? ಅಜ್ಞಾನ ಮಹಿಮೆಯೋ? ವಾಚಕರೇ ನೀವೇ ನಿಮ್ಮಷ್ಟಕ್ಕೆ ತೀರ್ಮಾನಿಸಿರಿ. ಯಾವ ಪುಣ್ಯಭೂಮಿಯು ಧರ್ಮ, ನೀತಿ, ನ್ಯಾಯ, ಪವಿತ್ರತೆಗೆ ಸಕಲ ದೇಶಗಳಿಗೂ ಮಾತೃಸ್ಥಾನದಲ್ಲಿರುವುದೋ ಆ ನಮ್ಮ ಭಾರತ ಭೂಮಾತೆಗೆ ಇವೆಲ್ಲಾ ಎಷ್ಟೋ ಅಪಮಾನವೂ ದುಃಖವೂ ದುರ್ಗತಿಯೂ ಆಗಿರುವುದಲ್ಲವೇ? ನಮ್ಮೂರಿನ ಎಲ್ಲಾ ಧರ್ಮಾನುಯಾಯಿಗಳನ್ನು ಈ ಪ್ರಕಾರ ಧರ್ಮಭ್ರಷ್ಟರನ್ನಾಗಿ ಮಾಡಿದ ಆ ದುಷ್ಟ ವ್ಯಸನಪಿಶಾಚಿಯನ್ನು ನಿರ್ನಾಮಗೊಳಿಸಿ ಧರ್ಮೋದ್ಧಾರ ಮಾಡುವುದು ಪ್ರತಿ ಒಬ್ಬ ಧರ್ಮಾಭಿಮಾನಿಯ ಕರ್ತವ್ಯವಲ್ಲವೇ?

ಪಂಜಾಬು ದೇಶದಲ್ಲಿ ಈ ವ್ಯಸನ ಪಿಶಾಚಿಯ ಹಾವಳಿಯನ್ನು ಅಡಗಿಸಲು ಎಲ್ಲಾ ಧರ್ಮದವರೂ ಒಂದಾಗಿ ಪ್ರತೀ ಜಿಲ್ಲೆಯಲ್ಲಿಯೂ ಒಂದೊಂದು ಸಂಸ್ಥೆಯನ್ನು ಸ್ಥಾಪಿಸಿರುತ್ತಾರೆ. ಈ ಸಂಸ್ಥೆಗಳಲ್ಲಿ ಆಯಾ ಧರ್ಮದ ಲೋಕಮಾನ್ಯರಾದ ಮಹಾ ಮಹಾ ವಿದ್ವಾಂಸರೇ ಕಾರ್ಯನಿರ್ವಾಹಕರಾಗಿರುವರು. ಇವರಲ್ಲಿ ರಾಜಕೀಯ ಮತ್ತು ಧಾರ್ಮಿಕ ವಿಷಯಗಳಲ್ಲಿ ಎಷ್ಟೇ ಮತಭೇದಗಳಿದ್ದರೂ, ಜನರನ್ನು ಧರ್ಮಬಾಹಿರರನ್ನಾಗಿ ಮಾಡುವ ಈ ಮದ್ಯ ನಿಶಾ ವ್ಯಸನ ನಿವಾರಣೆಗೆ ಎಲ್ಲರೂ ಒಮ್ಮನಸ್ಸಿನಿಂದಲೇ ಕಾರ್ಯ ಸಾಧಿಸುತ್ತಾರೆ. ಅಮೃತಸರದಲ್ಲಿ ಈ ಬಗ್ಗೆ ಎಲ್ಲಾ ಧರ್ಮದವರೂ ಒಗ್ಗಟ್ಟಾಗಿ, ಒಂದು ಪ್ರಧಾನ ಕಾರ್ಯ ಕ್ಷೇತ್ರವನ್ನೇರ್ಪಡಿಸಿ ಮಹಾ ಮಂದಿರವನ್ನು ನಿರ್ಮಿಸಿದ್ದಾರೆ. ಈ ಮಂದಿರದ ಪ್ರವೇಶೋತ್ಸವವು ಕಳೆದ ಎಪ್ರಿಲ್ ತಿಂಗಳಲ್ಲಿ ಜರಗಿಸಲ್ಪಟ್ಟಾಗ, ಸಾವಿರಾರು ಹಿಂದೂ, ಮುಸಲ್ಮಾನ, ಸಿಕ್, ಕ್ರೈಸ್ತ ಧರ್ಮೀಯರು ಒಂದೇ ತಾಯಿಯ ಮಕ್ಕಳಂತೆ, ಪ್ರೇಮದಿಂದ ಕೂಡಿದ್ದರು. ಆಗ ಅಲ್ಲಿ ಪಂಡಿತ ಬನ್ನಿಯಾಲಿದತ್ತರವರು ಹಿಂದೂಗಳ ಪರವಾಗಿಯೂ ಮೌಲ್ವಿ ಸನ್‌ವುಲ್ಲಾರವರು ಮಹಮ್ಮದೀಯರ ಬಗ್ಗೂ, ಸರದಾರ್ ಆರೂರ್ ಸಿಂಗರವರು ಸಿಕ್ಕ್ ಧರ್ಮೀಯರ ಬಗ್ಗೂ ಮತ್ತು ರೆವರೆಂಡ್ ಡಾಕ್ಟರ್ ಡವಿಸರವರು ಕ್ರೈಸ್ತ ಧರ್ಮೀಯರ ಬಗ್ಗೂ ಒಂದೇ ಸ್ಥಳದಲ್ಲಿ ಸೇರಿ ಏಕಕಾಲದಲ್ಲಿಯೇ ಅವರವರ ಧರ್ಮ ಪ್ರಕಾರ, ಪೂಜಾ, ಜಪ, ಧ್ಯಾನ, ಪ್ರಾರ್ಥನಾದಿಗಳಿಂದ ಪ್ರತಿಷ್ಠಾ ಸಂಸ್ಕಾರವನ್ನು ನೆರವೇರಿಸಿದರು. ಅಹಹಾ! ಈ ಎಲ್ಲಾ ಮತ ಪುರೋಹಿತರು ತಮ್ಮ ತಮ್ಮ ಮತಾಭಿಮಾನವನ್ನು ಒತ್ತಟ್ಟಿಗಿಟ್ಟು ಮದ್ಯ ನಿಶಾ ರಕ್ಕಸನ ಸೆರೆಯಿಂದ ತಮ್ಮ ದೇಶಬಂಧುಗಳನ್ನು ಬಿಡುಗಡೆಮಾಡಲು ಈ ರೀತಿ ಯತ್ನೈಸಿದ್ದು ಕಾಣುವಾಗ ಅವರ ಕಾರ್ಯಸಾಧನೆಗೆ ಎಲ್ಲೆಲ್ಲಿಯೂ ಸತ್ಫಲವಾಗುವುದರಲ್ಲಿ ಸಂಶಯವಿದ್ದೀತೇ? ಪ್ರಿಯ ವಾಚಕರೇ, ದೇಶಾಭಿಮಾನಿಗಳೇ, ನಮ್ಮ ಜಿಲ್ಲೆಗೆ ಇಂತಹ ಸುದಿನವು ಯಾವಾಗ ಬಂದೀತು?

ಮೋಹನ ತಿಂಗಲಾಯ.

ಅಯ್ಯಾ,

ಪುತ್ತೂರು ಗೃಹಸ್ತರು ಮ|| ರಾ|| ಬಿ. ಆನಂದರಾಯರು ತಮ್ಮ ಪತ್ರದಲ್ಲಿ ವಿವರಿಸಿದ "ಶಾಲಾ ಹಾಸಲು ಠೇವಣಾತಿಗಳು" ಎಂಬ ಹೊಸ ವಿಧದ ಠೇವಣಾತಿಗಳ ವಿಷಯ ಕುಲಂಕುಶ ಓದಿ ನೋಡಿದೆ. ಈ ವಿಧದ ಠೇವಣಾತಿಯಿಂದ ಒಬ್ಬ ಮನುಷ್ಯನು "ಸಹಕಾರ ಸಂಘದಲ್ಲಿ" ದರ ವರುಷ ಒಂದಕ್ಕೆ ರೂಪಾಯಿಗಳು ೧೨ರಂತೆ ಹದಿನಾಲ್ಕು ವರುಷಗಳಲ್ಲಿ ರೂಪಾಯಿ ೧೬೮ ಠೇವಣಾತಿ ಇಡುವನು. ಠೇವಣಾತಿ ಇಡಲಿಕ್ಕೆ ಶುರು ಮಾಡಿದಂದಿನಿಂದ ೧೪ ವರುಷದೊಳಗೆ ಕಟ್ಟಿದ ಐವಜು ಬಡ್ಡಿಸಮೇತ ವಾಪಸು ಸಿಕ್ಕುವದು. ಸಹಕಾರ ಸಂಘದವರು ತೆರುವ ಬಡ್ಡಿಯ ಮೊಬಲಗು ರೂಪಾಯಿ ೫೫ ಆಗುತ್ತದೆ. ಅಸಲು ಹಣದ ರೂಪಾಯಿ ೧೬೮ ಇದರ ಬಡ್ಡಿ ರೂಪಾಯಿ ೫೫ ಕೂಡಿ ಜುಮ್ಲಾ ಮೊಬಲಗು ರೂಪಾಯಿ ೨೨೩ ಆಗುವದು. ಠೇವಣಾತಿದಾರಗೆ ಆತ ಕಟ್ಟಿದ ಮೊಬಲಗಿನ ದಾಮಾಶಾಯಿ ಮೇರೆಗೆ ದರ ವರುಷ ಒಂದರ ಶೇಕಡಾ ನೂರಕ್ಕೆ ೬ರ ದರದ ಬಡ್ಡಿ ಶಿಕ್ಕುವುದು. ಹೆತ್ತವರು ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ ಕಷ್ಟಪಡುವ ಕಾಲದಲ್ಲಿ ಇಂಥಾ ಠೇವಣಾತಿಗಳು ಆಗತ್ಯವೆಂತ ಬೇರೆ ಹೇಳಬೇಕಾದ್ದಿಲ್ಲ. ಒಂದು ಮಗು ಜನಿಸಿದ ಕೂಡಲೇ ಮಗುವಿನ ಪೋಷಣೆ ಮತ್ತು ವಿದ್ಯಾಭ್ಯಾಸದ ಕುರಿತು ಆಲೋಚಿಸುವದು ತಂದೆತಾಯಿಗಳ ಸಹಜವಾದ ಕರ್ತವ್ಯ. ಮೇಲೆ ನಮೂದಿಸಿದ ಠೇವಣಾತಿಗಳು ಮಕ್ಕಳ ವಿದ್ಯೆಗೆ ಪ್ರಯೋಜನಕಾರಿಯಾಗುವವು. ತಂದೆತಾಯಿಗಳು ತಮ್ಮ ಮಕ್ಕಳಿಗೆ ಶಾಲೆಗೆ ಹೋಗುವ ಸಮಯ ಒದಗಿದ ನಂತರ ಮಕ್ಕಳ ಶಾಲಾ ಸಂಬಳದ ವಿಷಯ ಆಲೋಚಿಸುತ್ತಾರೆ. ಶಾಲೆಗೆ ಹೋಗುವ ಹುಡುಗನ ಸಂಬಳವು ಪ್ರಾರಂಭದಲ್ಲಿ ಇರುವುದಕ್ಕಿಂತ ಪ್ರತಿ ವರುಷ ಎಂಬಂತೆ ಹೆಚ್ಚುತ್ತಾ ಹೋಗುವದು. ಆಗ ತಂದೆತಾಯಿಗಳಿಗೆ ಹುಡುಗನ ಶಾಲಾ ಸಂಬಳ ಏರಿದ ದರದಲ್ಲಿ ಉತ್ಪನ್ನವು ಹೆಚ್ಚುವದಿಲ್ಲ. ತಂದೆತಾಯಿಗಳು ಸಂಕಷ್ಟಪಡಬೇಕಾಗುತ್ತದೆ. ಮಕ್ಕಳ ವಿದ್ಯೆ ದ್ರವ್ಯಾನುಕೂಲವಿಲ್ಲದೆ ನಿಂತು ಹೋಗುವ ಸಂಭವ ಉಂಟು. ಕೆಲವು ಸಾರಿ ಧರ್ಮಿಷ್ಟರು ಇಂಥಾ ಮಕ್ಕಳಿಗೆ ಸಹಾಯಮಾಡುವರು. ಧರ್ಮಿಷ್ಟರು ಸಹಾಯಕ್ಕೆ ಮುಂದೆ ಬಾರದೆ ಇರುವದಾದರೆ ವಿದ್ಯಾರ್ಥಿಗಳು ಭಗ್ನಮನೋರಥರಾಗುವರು. ಆಗ ಹುಡುಗನ ಜನ್ಮ ವ್ಯರ್ಥವಾಗುವದು. ಪುತ್ತೂರಿನ ಗೃಹಸ್ಥರು ಸೂಚಿಸಿದ ಠೇವಣಾತಿಗಳಿಂದ ನಾವು ಪ್ರಯೋಜನ ಹೊಂದಿ ನಮ್ಮ ಮಕ್ಕಳ ವಿದ್ಯಾಭ್ಯಾಸವನ್ನು ಸ್ವಾವಲಂಬಿಗಳಾಗಿ ನಾವೇ ಪೂರೈಸಲಿಕ್ಕೆ ಪ್ರಯತ್ನಿಸುವದು ಬಹಳ ಉತ್ತಮ. ಈ ಠೇವಣಾತಿಗಳಿಂದ ಹುಡುಗನ ಸ್ಕೂಲ್ ಫೈನಲ್ ಪರೀಕ್ಷೆ ಪಾಸಾಗಲಿಕ್ಕೆ ಮುಟ್ಟುವ ಸಂಬಳದ ಖರ್ಚು ಶೇಖರಿಸಿದಂತಾಗುವದು. ಮತ್ತು ಹುಡುಗನು ಶಿಕ್ಕಿದ ವಿದ್ಯೆಯಿಂದ ಯಾವದೊಂದು ಜೀವನ ವೃತ್ತಿಯನ್ನು ಪ್ರಾರಂಭಿಸಲಿಕ್ಕೆ ಯೋಗ್ಯನಾದಂತಾಗುವದು.

ಹಿತಕಾರಿ.

ಯೂರೋಪದ ಮಹಾಯುದ್ಧ.

ಇಟಲಿಯನರ ಜಯಾಪಜಯಗಳ ವಿಷಯವಾಗಿ ವಿಶೇಷ ವರ್ತಮಾನಗಳು ಈ ವರೆಗೆ ಇಲ್ಲವಾದರೂ ಆಸ್ಟ್ರಿಯನರು ಒಂದು ವರ್ಷದಿಂದ ಬಲಕಾಯಿಸಿಕೊಂಡಿದ್ದ ಇಸನ್ಜೊ ಪ್ರಾಂತ್ಯದಲ್ಲಿ ಇಟಲಿಯಾನರು ಜಯಪ್ರದರಾಗಿ ಇಸನ್ಜೊವನ್ನು ಎರಡೇ ದಿವಸಗಳ ಕದನಗಳಲ್ಲಿ ಸ್ವಾಧೀನಮಾಡಿಕೊಂಡರೆಂಬ ಮಹತ್ವದ ವಾರ್ತೆಯು ಈಗ ತಾನೇ ಬಂದಿರುತ್ತದೆ. ಕೆಲವು ತಿಂಗಳ ಹಿಂದೆ ಆಸ್ಟ್ರಿಯನರು ಈ ರಣರಂಗದಲ್ಲಿ ಬಹಳ ಅಹಮ್ಮನ್ನು ತೋರಿಸುತ್ತಿದ್ದು, ಗೆಲೀಸಿಯದಲ್ಲಿ ನುಗ್ಗಿ ಬರುತ್ತಿರುವ ರುಶ್ಯನರನ್ನು ಹಿಂದೆ ಅಟ್ಟಿಬಿಡುವ ವರೆಗೆ ಇಟಲಿಯನರು ಮುಂದರಿಯದ ಹಾಗೆ ಮಾಡುವರೆ ಇಸನ್ಜೊ ಪ್ರಾಂತ್ಯವೇ ಭದ್ರಸ್ಥಾನವೆಂದು ಹೇಳಿಕೊಂಡು ತಮ್ಮ ರಿಜರ್ವ್ ಸೇನೆಗಳನ್ನೆಲ್ಲಾ ಅಲ್ಲಿ ಕೂಡಹಾಕಿ ಆ ಸ್ಥಳವನ್ನು ಬಲಕಾಯಿಸಿಕೊಂಡಿದ್ದರು. ಇಸನ್ಜೊ ಪ್ರಾಂತ್ಯವು ನೈಸರ್ಗಿಕವಾದ ಬಲಸ್ಥಾನವೂ ಆಗಿತ್ತು. ಇಟಲಿಯನರ ಸೇನಾಧಿಪತಿಗಳ ಕೆಲವು ಅಭಾವಗಳಿಂದ ಕಳೆದ ವರ್ಷ ಇಲ್ಲಿ ಮುಂದೊತ್ತಿಕೊಂಡು ಹೋಗಲು ಅಸಾಧ್ಯವಾಗಿ ಹೋಗಿ ಅವರು ಆಸ್ಟ್ರಿಯನರ ಗೇಲಿಯನ್ನು ಕಿವಿಮುಚ್ಚಿ ಕೇಳಬೇಕಾಯಿತು. ಆದರೆ ೧೯೧೬ನೇ ಇಸವಿಯಲ್ಲಿ ಆಸ್ಟ್ರಿಯನರ ಯುದ್ಧಸಾಧನೆಗಳಿಗೆ ತೊಡಕುಗಲುಂಟಾದವು. ಆಸ್ಟ್ರಿಯನರು ಟ್ರೆಂಟಿನೋದಿಂದ ಮುಂದೆನುಗ್ಗಿ ಇಟಲಿಯನರಿಗೆ ಕಡೆಗಾಣಿಸಬೇಕೆಂದು ಮಾಡಿದ ಪ್ರಯತ್ನವು ಕೈಗೂಡಲಿಲ್ಲ. ಇಲ್ಲಿ ಆಸ್ಟ್ರಿಯನರು ಜಯಪ್ರದರಾಗುತ್ತಿದ್ದರೆ ಇಟಲಿಯನರು ತಾವು ಬಂದ ದಾರಿಯನ್ನು ಹಿಡಿಯಬೇಕಿತ್ತು. ಆದರೆ ಆಸ್ಟ್ರಿಯನರು ಇಟಲಿಯನರ ಬಲವನ್ನು ಗೊತ್ತುಮಾಡಿಕೊಳ್ಳದೆ ಮುಂದೆ ನುಗ್ಗಿಹೋದರು, ಅತ್ತಕಡೆ ಗೆಲೀಸಿಯದಲ್ಲಿ ರುಶ್ಯನರು ನುಗ್ಗಿಬಂದು ಪ್ರಿವೆಟಿನ ಬಳಿ ಆಸ್ಟ್ರಿಯನರಿಗೆ ದೊಡ್ಡ ಪೆಟ್ಟನ್ನು ಕೊಟ್ಟರು. ಹೀಗೆ ಟ್ರೆಂಟಿನೋದಲ್ಲಿ ಆಸ್ಟ್ರಿಯೂನರ ಉದ್ದೇಶವು ಸಫಲವಾಗಲಿಲ್ಲ. ಇಟಲಿಯನರು ಮುಂದೆ ನುಗ್ಗಿಹೋಗಿ ಆಸ್ಟ್ರಿಯನರನ್ನು ಅವರ ನೆಲೆಗಳಿಂದ ಹಿಂದಕ್ಕೆ ಓಡಿಸಿದರು. ಆದರೂ ಇಟಲಿಯನರಿಗೆ ಇಸನ್ಜೊ ನೆಲೆಯ ಮೇಲೆ ನುಗ್ಗಬರುವಷ್ಟು ಸಾಮರ್ಥ್ಯವಿಲ್ಲವೆಂತ ಆಸ್ಟ್ರಿಯನರು ಭಾವಿಸಿದರು. ಪರಂತು, ಇಟಲಿಯನರು ಇಸನ್ಜೊ ನೆಲೆಯನ್ನೂ ಎರಡು ದಿವಸಗಳಲ್ಲೇ ಸ್ವಾಧೀನಮಾಡಿಕೊಂಡರು. ಟ್ರೆಂಟಿನೋ ರಣರಂಗವು ಪರ್ವತಾವಳಿಗಳಿಂದ ಸುತ್ತಲ್ಪಟ್ಟು ತಕ್ಕ ದಾರಿ ಇತ್ಯಾದಿಗಳು ಇಲ್ಲದ ಪ್ರಾಂತ್ಯವಾಗಿದೆ. ಅಲ್ಲಿರುವ ಡೊಲಮೈಟ್ಸ್, ಜುಲಿಯಟ್, ಮತ್ತು ಕಾರ್ನಿಕ್ ಆಲ್ಪ್ಸ ಪರ್ವತಧಾರಿಗಳನ್ನು ದಾಟಿಕೊಂಡು ಹೋಗಲು ಅಸಾಧ್ಯವಾದದ್ದರಿಂದ ಉತ್ತರದಲ್ಲಿ ನುಗ್ಗಿಹೋಗುವದು ಕನಸಿನೊಳಗಿನ ಗಂಟೇ ಸರಿ. ಆದರೆ ಈಗ ಇಟಲಿಯನರು ಇಸನ್ಜೊ ಮತ್ತು ಕಾರ್ಸೊ ಪ್ರಾಂತ್ಯವನ್ನು ಸ್ವಾಧೀನಮಾಡಿಕೊಂಡಿರುವದರಿಂದ ಪೂರ್ವ ದಿಕ್ಕಿನಿಂದ ಇಟಲಿಯನರು ಸುಲಭವಾಗಿ ಮುಂದೆ ಸಾಗಬಹುದು. ಕಾರ್ಸೊ ಪ್ರಸ್ಥಭೂಮಿಯಿಂದ ಟ್ರಿಸ್ಟಿಗೆ ಹೋಗಬಹುದು. ಟ್ರಿಸ್ಟ ಆಸ್ಟ್ರಿಯನರ ಪ್ರಾಮುಖ್ಯ ಸ್ಥಳ. ಹೀಗೆ ಈ ಅರ್ಧದ್ವೀಪವನ್ನು ಅಂದರೆ ಇಸ್ಟ್ರಿಯನ್ ಅರ್ಧದ್ವೀಪವನ್ನು ಇಟಲಿಯನರು ಸ್ವಾಧೀನಮಾಡಿಕೊಂಡರೆ ಆಸ್ಟ್ರಿಯನರ ರಾಜಧಾನಿಯಾಗಿರುವ ವಿಯೆನ್ನಾಕ್ಕೆ ಮುಂದರಿಯಬಹುದು. ವಿಯೆನ್ನಾಕ್ಕೆ ಮುಂದರಿಯುವದೆಂದರೆ ಈ ಹೊತ್ತು ನಾಳೆ ಎಂತ ನೆನೆಸಲಾಗದು. ಯಾಕೆಂದರೆ ಸ್ವಾಭಾವಿಕವಾದ ಪರ್ವತಗಳ ಸಾಲಿನಲ್ಲಿ ಬಲಕಾಯಿಸಿಕೊಂಡ ಆಸ್ಟ್ರಿಯೂನರ ನೆಲೆಗಳನ್ನೆಲ್ಲಾ ಇಟಲಿಯನರು ಒಡೆದು ಮುಂದೆಹೋಗುವದೆಂದರೆ ಸುಲಭವಾದ ಕೆಲಸವಲ್ಲ. ಪರಂತು ಇಸನ್ಜೊ ನೆಲೆಯು ಇಟಲಿಯನರ ಸ್ವಾಧೀನವಾದುದರಿಂದ ಈ ಕಡೆಯಲ್ಲಿ ಇಟಲಿಯೂನರೂ ಆ ಕಡೆಯಲ್ಲಿ ರುಶ್ಯನರೂ ಈಗಿನಂತೆಯೇ ಮುಂದೆಸಾಗುತ್ತಾ ಬಂದರೆ ಆಸ್ಟ್ರಿಯನರಿಗೆ ಬಹುಬೇಗನೇ ಸ್ವಸ್ಥಾನವಲ್ಲದೆ ಬೇರೆಗತಿಯಾಗಲಾರದು.

ಪಶ್ಚಿಮ ರಣರಂಗದಲ್ಲಿ.

ಈ ರಣರಂಗದಲ್ಲಿಯೂ ಬ್ರಿಟಿಷರು ಮತ್ತು ಫ್ರೆಂಚರಿಗೆ ಜಯದ ಮೇಲೆ ಜಯವಾಗುತ್ತಲಿದೆ. ಪೋಜಿಯರ್‍ಸಿನ ಪೂರ್ವದಲ್ಲಿ ಬ್ರಿಟಿಷರು ಮಾರ್ಟಿನ್‌ಪಿಂಚ್ ಎಂಬ ಸ್ಥಳದ ಕಡೆಯಿಂದ ಮುಂದರಿದಿರುತ್ತಾರೆ. ಪೋಜಿಯರ್‍ಸಿನ ಉತ್ತರದಲ್ಲಿ ಬ್ರಿಟಿಷರು ಗೆದ್ದುಕೊಂಡಿದ್ದ ಸ್ಥಳಗಳನ್ನು ಪಡೆಯಬೇಕೆಂದು ಜರ್ಮನರು ಎರಡಾವರ್ತಿ ಹಲ್ಲೆಮಾಡಿ ಸೋತುಹೋದರು ಬ್ರಿಟಿಷರು ಶತ್ರುಗಳ ಕಂದಕಗಳ ಮೇಲೆ ದಾಳಿಮಾಡಿ ಶತ್ರುಗಳಲ್ಲಿ ಬಹಳ ಮಂದಿಯನ್ನು ಹತಪಡೆದಿರುವರು. ಸೊಮ್ಮೆ ಮತ್ತು ಎಂಕ್ರೆಯ ಮೇಲೆ ಶತ್ರುಗಳು ಫಿರಂಗಿಗಳನ್ನು ಎತ್ತಿಕಟ್ಟಿ ಗುಂಡುಹಾರಿಸುತ್ತಲಿದ್ದಾರೆ. ಪೋಜಿಯರ್‍ಸಿನ ಉತ್ತರದಲ್ಲಿ ಶತ್ರುಗಳು ಬ್ರಿಟಿಷರ ಹೊಸ ನೆಲೆಗಳ ಮೇಲೆ ಹಲ್ಲೆಮಾಡಿ ಕೆಲವು ಕಡೆಗಳಲ್ಲಿ ಕೆಲವು ಕಂದಕಗಳನ್ನು ನುಗ್ಗಿದರು. ಆದರೆ ಬ್ರಿಟಿಷ ಸೇನಿಕರು ಎದೆಗುಂದದೆ ಪುನಃ ಶತ್ರುಗಳ ಮೇಲೆ ಬಿದ್ದು ಶತ್ರುಸೇನೆಯಲ್ಲಿ ವಿಶೇಷ ನಷ್ಟಪಡಿಸಿ ಕಂದಕಗಳಿಂದ ಅವರನ್ನು ಹಿಂದೆ ಓಡಿಸಿದರು. ಗುಲ್ಲೆಮೊಂಟಿನ ದಕ್ಷಿಣದಲ್ಲಿ ಬ್ರಿಟಿಷರು ೪೦೦ ಗಜ ಮುಂದೆ ಒತ್ತಿರುವರು. ಪೋಜಿಯರ್‍ಸಿನಲ್ಲಿ ನಾಲ್ಕು ಸಾರಿ ಶತ್ರುಗಳು ಹಲ್ಲೆಮಾಡಿ ಮೂರಾವರ್ತಿ ಸೋತುಹೋದರು. ನಾಲ್ಕನೇ ಸಾರಿ ೫೦ ಗಜ ಕಂದಕಗಳನ್ನು ಸ್ವಾಧೀನಮಾಡಿಕೊಂಡರು. ಪೋಜಿಯರ್‍ಸಿನಲ್ಲಿ ಬ್ರಿಟಿಷರು ಪುನಃ ಹೆಚ್ಚಿನ ಸ್ಥಳಗಳನ್ನು ಗೆದ್ದುಕೊಂಡು, ಗೆದ್ದುಕೊಂಡ ಸ್ಥಳಗಳನ್ನು ಬಲಕಾಯಿಸಿಕೊಳ್ಳುತ್ತಿದ್ದಾರೆ. ಈ ಸ್ಥಳಗಳಲ್ಲಿ ನಡೆಯುವಂಥಾ ಕದನಗಳು ಬಹಳ ಭೀಕರವಾದಂಥವುಗಳೇ ಆಗಿವೆ. ಕೆಲವು ಸಾರಿ ಕೈಕೈಕಾಳಗ ನಡೆದು ರಕ್ತಪಾತವೇ ಆಗಿರುವದು. ಆದರೂ ಬ್ರಿಟಿಷರು ಗೆದ್ದುಕೊಂಡ ಸ್ಥಳಗಳ ವಿಶೇಷತ್ವವನ್ನು ಲೆಕ್ಕಿಸುವದಾದರೆ ಈ ಕದನಗಳಲ್ಲಿ ಸಂಭವಿಸಿದ ಜನನಷ್ಟವೇನೋ ಅತೀ ಅಲ್ಪವೆಂದೇ ಹೇಳಬೇಕಾಗಿದೆ.

ವೆರ್ಡನಿನ ಬಳಿ ಅಂದರೆ ಅದರ ಸುತ್ತಮುತ್ತಲಿರುವ ಥಿಯಾಮೊಂಟ, ಫ್ಲುರೆ, ಚಿಪೀಟಿ, ಮತ್ತು ಚಿನ್ಹೊಸ್ ಬಳಿ ಶತ್ರುಗಳು ಭೀಕರವಾದ ಗುಂಡುಗಳನ್ನು ಹಾರಿಸುತ್ತಲಿದ್ದಾರೆ. ವೆರ್ಡನ್ ಪ್ರಾಂತ್ಯದಲ್ಲಿ ಫ್ರೆಂಚರ ವಾಯುನಾವೆಗಳು ಶತ್ರುಗಳ ಎರಡು ವಾಯುನಾವೆಗಳನ್ನು ಕೆಳಗೆ ಇಳಿಸಿರುತ್ತವೆ. ಥಿಯಾಮೊಂಟಿನಲ್ಲಿ ಮೇಲ್ಪಾಯಿದ ಶತ್ರುಗಳನ್ನು ಫ್ರೆಂಚರು ಹಿಂದಕ್ಕೆ ಓಡಿಸಿರುವರು ವಾಕ್ಸ್ ಅರಣ್ಯದಲ್ಲಿ ಮೇಲ್ಪಾಯಿದ ಶತ್ರುಗಳೂ ಪೂರ್ಣವಾಗಿ ಸೋತುಹೋಗಿರುತ್ತಾರೆ. ಜರ್ಮನರ ಮೂರು ವಾಯುನಾವೆಗಳು ಸೊಮ್ಮೆಯಲ್ಲಿ ಕೆಳಪೊಬ್ಬಲ್ಪಟ್ಟಿರುವವು.

ಹೆಮ್ ಅರಣ್ಯದ ಬಳಿ ಫ್ರೆಂಚರು ಶತ್ರುಗಳ ಮೇಲೆ ಹಲ್ಲೆಮಾಡಿ ೧೨೦ ಸೈನಿಕರನ್ನೂ ಯಂತ್ರಚಾಲಿತ ಫಿರಂಗಿಗಳನ್ನೂ ಹಿಡಿದಿರುವರು. ಫ್ರೆಂಚರು ಥಿಯಾಮೊಂಟಿನಲ್ಲಿ ಪುನಃ ಮುಂದರಿದು ಇನ್ನೂ ಕೆಲವು ಯಂತ್ರಚಾಲಿತ ಫಿರಂಗಿಗಳನ್ನು ಹಿಡಿದಿರುವರು. ಫ್ಲುರೆಯಿಂದ ಥಿಯಾಮೊಂಟಿನ ಉತ್ತರದವರೆಗಿನ ರಣರಂಗಗಳಲ್ಲಿ ಅತಿಭೀಕರವಾದ ಕದನಗಳು ನಡೆಯುತ್ತಿವೆ. ಬ್ರಿಟಿಷರು ಗುಲ್ಲೆಮೊಂಟ್ ದಿನ್ನೆಯ ಮೇಲೆ ಹಲ್ಲೆಮಾಡುತ್ತಿರುವಾಗ ಫ್ರೆಂಚರು ದಿನ್ನೆ ೧೩೯ರ ಮೇಲೆ ಹಲ್ಲೆಮಾಡಿರುವರು. ಫ್ರೆಂಚರು ಸ್ವಾಧೀನಮಾಡಿಕೊಂಡ ಕಂದಕಗಳ ಮೇಲೆ ಅಭಿಯೋಗಮಾಡಿದ ಶತ್ರುಗಳು ವಿಶೇಷ ನಷ್ಟಪಟ್ಟು ಹಿಮ್ಮೆಟ್ಟಿರುವರು. ಫ್ರೆಂಚರು ಥಿಯಾಮೊಂಟಿನಲ್ಲಿ ಅತಿ ಶೂರತನವನ್ನು ತೋರಿಸಿ ಶತ್ರುಗಳನ್ನು ಎದುರಾಯಿಸುತ್ತಿದ್ದಾರಲ್ಲದೆ ಶತ್ರುಗಳು ವಶಮಾಡಿಕೊಂಡಿದ್ದ ಕಂದಕಗಳ ಮೇಲೆಬಿದ್ದು ಅವನ್ನು ಪುನಃ ಗೆದ್ದುಕೊಂಡಿರುತ್ತಾರೆ. ವಾಕ್ಸ್—ಚಪಿಟ್ರೆಲ್ ಚೆನೋಯಿಸಿನಲ್ಲಿ ಫ್ರೆಂಚರು ಕಂದಕಗಳ ಎರಡು ಸಾಲುಗಳನ್ನು ಸ್ವಾಧೀನಮಾಡಿಕೊಂಡು ೨೦೦ ಸೇನಿಕರನ್ನು ಶೆರೆಹಿಡಿದಿರುವರು. ಹೆಮ್ ಅರಣ್ಯದ ಉತ್ತರದಲ್ಲಿ ಶತ್ರುಗಳು ಕೋಟೆಕೊತ್ತಲುಗಳಿಂದ ಬಲಕಾಯಿಸಿಕೊಂಡ ಸ್ಥಳಗಳನ್ನೂ ಫ್ರೆಂಚರು ಗೆದ್ದುಕೊಂಡಿರುವರು.

ಪೂರ್ವ ರಣರಂಗದಲ್ಲಿ.

ರುಶ್ಯನರು ಬ್ರೋಡಿಯನ್ನು ಗೆದ್ದುಕೊಂಡು ಅದರ ದಕ್ಷಿಣದಲ್ಲಿ ಜಯಪಡೆದಿರುವದರಿಂದ ಟಾರ್ನಪೂಲ್—ಲೆಂಬರ್ಗ್ ರೈಲ್ವೆಗೆ ರುಶ್ಯನರು ಈಗ ೧೪ ಮೈಲುಗಳ ದೂರದಲ್ಲಿ ಇರುವ ಹಾಗಾಯಿತು. ಈ ಕಾರಣದಿಂದ ಆಸ್ಟ್ರಿಯನರು ಟಾರ್ನಪೂಲಿನಿಂದ ಜೊಲ್ಟೋಫ್ ಕಡೆಗೆ ಹಿಂದೆ ಸರಿಯುತ್ತಿದ್ದಾರೆಂಬ ವಾರ್ತೆ ಬಂದದೆ. ಜರ್ಮನರ ಮೂರು ಡಿವಿಜನ್ ಸೇನೆಗಳು ಜೊಲ್ಟೋಫಿನಲ್ಲಿರುವ ಆಸ್ಟ್ರಿಯನರ ಸಹಾಯವಾಗಿ ಹೋಗಿರುತ್ತದೆಂತ ಶೆರೆಬಿದ್ದ ಶತ್ರುಸೇನಿಕರು ಹೇಳುವರು.

ಸ್ಟೊಕೊಡ್ ಪ್ರಾಂತ್ಯದಲ್ಲಿ ಕಂದಕಗಳಲ್ಲಿದ್ದ ಜರ್ಮನ ಮತ್ತು ಆಸ್ಟ್ರಿಯ ಸೇನಿಕರನ್ನು ರುಶ್ಯನರು ಕಂದಕಗಳಿಂದ ಹೊರ ಅಟ್ಟಿ ೨೦೦೦ ಮಂದಿಯನ್ನು ಶೆರೆಹಿಡಿದಿರುತ್ತಾರೆ. ಭೀಕರ ಕಾಳಗವು ನಡೆಯುತ್ತಿದೆ.

ನೀಸ್ಟರಿನ ದಕ್ಷಿಣದಲ್ಲಿ ರುಶ್ಯನರಿಗೆ ಒಂದು ವಿಶೇಷ ಜಯವಾಗಿರುವದು. ಇಲ್ಲಿ ರುಶ್ಯನರು ಶತ್ರುಗಳ ೧೬ ಮೈಲುಗಳ ವಿಸ್ತೀರ್ಣದ ರಣರಂಗವನ್ನು ಗೆದ್ದುಕೊಂಡು ಕೊಲೊಮಿಯ—ಸ್ಟಾನಿಸ್ಲಾ ರೈಲ್ವೇ ಲ್ಯಾನುಗಳನ್ನು ಸ್ವಾಧೀನಮಾಡಿಕೊಂಡು ಅದರ ಆಚೇ ಮಗ್ಗುಲಲ್ಲಿರುವ ಗುಡ್ಡಪ್ರಾಂತ್ಯಗಳನ್ನು ಹಿಡಿದಿರುತ್ತಾರೆ. ಶೆರೆಬಿದ್ದ ಶತ್ರುಸೇನಿಕರಲ್ಲಿ ೨೦೦೦ ಜರ್ಮನ ಸೇನಿಕರು ಸೇರಿರುವರು. ಸ್ಟಾನಿಸ್ಲಾ ರೈಲ್ವೇಲ್ಯಾನಿನ ದಕ್ಷಿಣದಲ್ಲಿರುವ ಚೆಂಪ್ಲಿನ್ ಎಂಬ ಪ್ರಾಮುಖ್ಯ ರೈಲ್ವೆಸ್ಟೇಶನೂ ರುಶ್ಯನರ ಸ್ವಾಧೀನವಾಗಿದೆ. ಶತ್ರುಗಳು ಕಂಗೆಟ್ಟು ಓಡುತ್ತಿದ್ದಾರೆ.

ರುಶ್ಯನರು ಸ್ಟಾನ್‌ಸ್ಲೊದ ಪಶ್ಚಿಮದಲ್ಲಿ ತೈಸ್‌ಮೆನೀಕೆ ಎಂಬ ಸ್ಥಳವನ್ನು ಸ್ವಾಧೀನಮಾಡಿಕೊಂಡು ಪುನಃ ೭೪೦೦ ಶತ್ರುಸೇನಿಕರನ್ನೂ ೬೩ ಯಂತ್ರಚಾಲಿತ ಫಿರಂಗಿಗಳನ್ನೂ ಶೆರೆಹಿಡಿದಿರುವರು. ಇಲ್ಲಿ ಶೆರೆಬಿದ್ದ ಶತ್ರುಸೇನಿಕರಲ್ಲಿ ೩೫೦೦ ಜರ್ಮನರು. ರುಶ್ಯನರು ಸ್ಟಾನಿಸ್ಲೊದಲ್ಲಿ ಆಗೋಸ್ತು ತಾ. ೪ರಿಂದ ೧೪ ಸಾವಿರ ಶತ್ರುಸೇನಿಕರನ್ನು ಶೆರೆಹಿಡಿದಿರುತ್ತಾರೆ.

ನೀಸ್ಟರಿನ ದಕ್ಷಿಣದಲ್ಲಿ ರುಶ್ಯನರು ನಿಜನೋಫ್ ಎಂಬ ಪಟ್ಟಣವನ್ನೂ ೬ ಗ್ರಾಮಗಳನ್ನೂ ಗೆದ್ದುಕೊಂಡಿರುವರು. ಇಲ್ಲಿ ರುಶ್ಯನರು ೧೧೦ ಚದೌಕ ಮೈಲು ವಿಸ್ತೀರ್ಣದ ಪ್ರಾಂತ್ಯಗಳನ್ನು ಸ್ವಾಧೀನಮಾಡಿಕೊಂಡಿರುತ್ತಾರೆ.

ಇಟಲಿ.

ಎಷ್ಟೋ ವರ್ಷಗಳ ಮೇಲಿನ ಇಸನ್ಜೊದ ಮಧ್ಯೆ ಇಟಲಿಯನರಿಗೂ ಆಸ್ಟ್ರಿಯನರಿಗೂ ಕಠಿಣ ಕಾಳಗ ನಡೆದು ಇಟಲಿಯನರು ಶತ್ರುಗಳ ೩ ಫಿರಂಗಿಗಳನ್ನೂ ಕೆಲವು ಡಜನ್ ಯಂತ್ರಚಾಲಿತ ಫಿರಂಗಿಗಳನ್ನೂ ಅನೇಕ ರೈಫಲ್ ಕೋವಿ ಮತ್ತು ಗುಂಡು ಮದ್ದುಗಳನ್ನೂ ೩೬೦೦ ಸೇನಿಕರನ್ನೂ ೧೫೦ ಆಫೀಸರರನ್ನೂ ಶೆರೆಹಿಡಿದಿರುತ್ತಾರೆ. ಒಂದು ಕಡೆಯಲ್ಲಿ ಭೀಕರವಾದ ಕೈದುಹುಕಿನ ಕಾಳಗ ನಡೆದು ಒಂದು ಪರ್ವತವನ್ನು ಇಟಲಿಯನರು ಗೆದ್ದುಕೊಂಡರು. ಇಟಲಿಯನರು ಆಗೋಸ್ತು ತಿಂಗಳ ತಾ. ೪ರಿಂದ ಶತ್ರುಗಳ ಮೇಲೆ ನುಗ್ಗಿಹೋಗಲು ಪ್ರಾರಂಭಿಸಿ ಇಸನ್ಜೊದ ಮೇಲೆ ಗುಂಡುಗಳ ಸಿಂಹಗರ್ಜನೆಯನ್ನು ಮಾಡುತ್ತಲಿದ್ದಾರೆ ಇಟಲಿಯಾನರ ಸೇನಿಕರು ಮುಂದೆ ನುಗ್ಗಿ ಪರ್ವತಗಳನ್ನು ಹತ್ತಿ ಶತ್ರುಗಳ ೧ನೇ ೨ನೇ ಸೇನಾನೆಲೆಗಳನ್ನು ಬಹು ಶೂರತನದಿಂದ ಗೆದ್ದುಕೊಂಡರು. ಶತ್ರುಗಳು ಕಂಗೆಟ್ಟು ಓಡುತ್ತಿದ್ದಾರೆ. ಮೊಂಟ್‌ಫೊಲ್ಕೊನಿನಿಂದ ಗೊರಿಜ್ಜದ ವರೆಗೆ ರೋಷಾವೇಷದಿಂದ ಕಾಳಗ ನಡೆಯುತ್ತಿದೆ. ಒಟ್ಟಿಗೆ ೬೨ ಮೈಲುಗಳ ರಣರಂಗದಲ್ಲಿ ಕದನ ನಡೆಯುತ್ತಿದೆ. ಶತ್ರುಗಳು ಒಂದು ವರ್ಷದಿಂದ ಬಲಕಾಯಿಸಿಕೊಂಡಿದ್ದ ಸಬಸ್ಟಿನೊ, ಪೊಡ್‌ಗೊರ, ಸಾನ್‌ಮಿಕಯೇಲ್ ಮತ್ತು ಒಸ್ಲಾವಿಯ ಮೊದಲಾದ ಪ್ರಾಮುಖ್ಯ ನೆಲೆಗಳು ಇಟಲಿಯನರ ಒಂದೆರಡು ದಿನಗಳ ಅಭಿಯೋಗದಲ್ಲಿ ಬಿದ್ದುಹೋದವು. ೨೦೦೦ ಅಡಿ ಎತ್ತರದ ಸಬಸ್ಟಿನೊದಲ್ಲಿ ಇಟಲಿಯನರು ತೋರಿಸಿದ ಪರಾಕ್ರಮವನ್ನು ಶತ್ರುಗಳು ನೋಡಿ ಬೆಚ್ಚಿಹೋದರು. ಅದಲ್ಲದೆ ಇಟಲಿಯನರು ೬೫೦ ಅಡಿ ಉದ್ದದ ಒಂದು ಸುರಂಗವನ್ನು ಒಳಗಿಂದೊಳಗೆ ತೋಡಿ ಈ ಸುರಂಗದಿಂದ ಫಕ್ಕನೇ ಶತ್ರುಗಳ ಕಂದಕಗಳ ಮೇಲೆ ಬಿದ್ದು ಆಸ್ಟ್ರಿಯನರನ್ನು ದಿಗಿಲುಪಡಿಸಿದರು.

ಇಟಲಿಯನರು ಗೊರಿಜ್ಜವನ್ನು ಗೆದ್ದುಕೊಂಡು ೧೨ ಸಾವಿರ ಸೇನಿಕರನ್ನು ಶೆರೆಹಿಡಿದಿರುತ್ತಾರೆ. ಶತ್ರುಗಳು ಗೊರಿಜ್ಜದಲ್ಲಿ ರಾಶಿರಾಶಿ ಯುದ್ಧಸಾಮಾಗ್ರಿಗಳನ್ನು ಬಿಟ್ಟು ಓಡಿಹೋಗಿರುತ್ತಾರೆ. ಕಾರ್ಸೊದಲ್ಲಿರುವ ಬೊಸ್ಚಿನಿ ಎಂಬ ಸ್ಥಳವೂ ಇಟಲಿಯಾನರ ಸ್ವಾಧೀನವಾಗಿದೆ.

ಟರ್ಕಿ.

ಈ ರಣರಂಗದಿಂದ ವಿಶೇಷ ವರ್ತಮಾನಗಳೇನೂ ಬಂದಿರುವದಿಲ್ಲ.

ಈಜಿಪ್ತ್.

ಕಾಟ್ಯ ಎಂಬ ಸ್ಥಳಕ್ಕೆ ೬ ಮೈಲುಗಳ ಪಶ್ಚಿಮದಲ್ಲಿ ಬ್ರಿಟಿಷ ಸೇನಿಕರು ತುರ್ಕಿ ಸೇನಿಕರನ್ನು ಕಂದಕಗಳಿಂದ ಓಡಿಸಿ ಅನೇಕ ಯುದ್ಧ ಸಾಮಾಗ್ರಿಗಳನ್ನು ಸ್ವಾಧೀನಮಾಡಿಕೊಂಡಿರುವರು. ಶತ್ರುಗಳ ವಾಯುನಾವೆಗಳು ಸೂವೆಜ್ ಕಾಲುವೆ ಮತ್ತು ಪೋರ್ಟುಸೆಡ್ಡಿನ ಮೇಲೆ ಬೊಂಬುಗಳನ್ನು ಹಾಕಿರುತ್ತವೆ. ಹೇಳತಕ್ಕ ನಷ್ಟವೇನೂ ಆಗಲಿಲ್ಲ. ಬ್ರಿಟಿಷರು ಈಗ ಕಾಟ್ಯಾ ಡಿಸ್ಟ್ರಿಕ್ಟಿನಲ್ಲಿ ಶತ್ರುಗಳನ್ನು ಅಟ್ಟುತ್ತಿದ್ದಾರೆ. ಅನೇಕ ಮಂದಿ ಶತ್ರುಸೇನಿಕರು ಬ್ರಿಟಿಷರ ಶೆರೆಬಿದ್ದಿರುವರು. ಶತ್ರುಗಳ ಹಿಂದಿನ ಸಾಲಿನ ಕಾವಲು ಸೇನಿಕರು ಈಗ ಉತ್ತರ ಮತ್ತು ದಕ್ಷಿಣದಲ್ಲಿರುವ ಬೀರ್-ಎಲ್-ಅಬೋ ಎಂಬಲ್ಲಿಗೆ ಸರಿದಿರುವರು. ಇದು ಕಾಟ್ಯಕ್ಕೆ ೧೫ ಮೈಲು ಪೂರ್ವದಲ್ಲಿದೆ. ರೋಮಾನಿಯದ ಕೆಲವು ಕಡೆಗಳಲ್ಲಿ ತುರ್ಕರು ಮುಂದೆಂದು ಬ್ರಿಟಿಷ ಸೇನಿಕರನ್ನು ಶರಣಾಗತರಾಗಬೇಕೆಂದು ಹೇಳಿದರು. ಆದರೆ ಬ್ರಿಟಿಷ ಸೇನಿಕರು ಅವರ ಮೇಲೆ ಎದುರಾಗಿ ಫಿರಂಗಿ ಹಾರಿಸಿ ಹಿಂದಕ್ಕೆ ಓಡಿಸಿದರು. ತುರ್ಕರು ಬಾಯಾರಿಕೆಗೆ ನೀರು ಸಿಕ್ಕದೆ ಬಹಳವಾಗಿ ಕಷ್ಟಪಟ್ಟರೆಂದೂ ಒಂಟೆಗಳನ್ನು ಕೊಂದು ಅದರ ರಕ್ತ ಕುಡಿಯಬೇಕಾಯಿತೆಂದೂ ವಾರ್ತೆ ಬಂದದೆ.

ಬಾಲ್ಕಾನ್.

ಬ್ರಿಟಿಷರ ರೋಂದಿನಲ್ಲಿದ್ದ ಸೇನಿಕರು ಡೋರಿಯನ್ ಗ್ರಾಮದ ದಕ್ಷಿಣದಲ್ಲಿದ್ದ ಬಲ್ಗೇರಿಯನರ ಮೇಲೆ ಬಿದ್ದು ಅವರನ್ನು ಓಡಿಸಿರು ತಳು. ಫ್ರೆಂಚರು ಡೋರಿಯಾನ್ ನಗರದ ಮೇಲೆ ಗುಂಡು ಹಾರಿ ಸಲು ಪ್ರಾರಂಭಿಸಿದ್ದಾರೆ. ಡೋರಿಯಾನಿನ ದಕ್ಷಿಣದಲ್ಲಿರುವ ಪಟ್ಟ ಣಕ್ಕೆ ಒಂದು ದಿನ್ನೆಯನ್ನು ಫ್ರೆಂಚರು ಸ್ವಾಧೀನಮಾಡಿಕೊಂ ಡಿರುವರು.

ಪೂರ್ವ ಆಫ್ರಿಕ.

ಜರ್ಮನ್ ಪೂರ್ವ ಆಫ್ರೀಕದ ವಾಯುವ್ಯ ಸರಹದ್ದನ್ನೆಲ್ಲಾ ಶತ್ರುಗಳು ಬಿಟ್ಟು ಹೋಗಿ, ಟಬೋರದ ಕಡೆಗೆ ಸರಿಯುತ್ತಿದ್ದಾರೆಂತ ಬೆಲ್ಜಿಯನ್ ಜನರಲ್ ಟೂಬಿಯರ್‌ರವರು ವರದಿ ಕಳುಹಿಸಿರು ತ್ತಾರೆ.

ಜಲಂತರ್ಗಾಮಿ ನಾವೆಗಳು.

ಬ್ರಿಟಿಷರ „ಮಾಂಟ್‌ಕೊನಿಸ್ಟನ್" „ಟೊಟ್ಟೆನ್‌ಹಾಮ್" „ಶಪೋನಿಯನ್" ಗ್ರೀಕರ „ಟ್ರಿಕೊಪಿಸ್" „ಸಿಯಾನ್ನ" ಡೇನಿಶರ „ಜಗರನ್ಯಾರ್ಗ್" „ಯುಡಿತ್ಸ" ಹಡಗಗಳು ಬ್ರಿಟಿಷರ ಇನ್ನೂ ಕೆಲವು ಹಡಗಗಳೂ ಜರ್ಮನರ ಜಲಂತರ್ಗಾಮಿ ನಾವೆಗಳಿಗೆ ತುತ್ತಾಗಿವೆ

ವಾಯುನಾವೆಗಳು.

ಶತ್ರುಗಳ ವಾಯು ನಾವೆಗಳು ಇಂಗ್ಲಾಂಡ್ ಕರಾವಳಿಯ ಮೇಲೆ ಮಾಡಿದ ದಾಳಿಯಲ್ಲಿ ಒಬ್ಬ ಗಂಡಸು, ಒಬ್ಬ ಹೆಂಗಸು, ಮೂರು ಮಕ್ಕಳು ಹತರಾಗಿರುವರು. ೫ ಗಂಡಸರು, ೬ ಹೆಂಗ ಸರು, ೬ ಮಕ್ಕಳು ಗಾಯಪಟ್ಟಿರುವರು. ನಾಲ್ಕು ಸಣ್ಣ ಮನೆ ವ ಗುಡಿಸಲುಗಳಿಗೆ ಸ್ವಲ್ಪ ಜಕಂ ಆಗಿದೆ.

~~~~~

ವಿದೇಶ ವೃತ್ತಾಂತ

ಬ್ರಿಟಿಷ ಕೆಬಿನೆಟ್ ಮಂತ್ರಿ ಸಭೆಯ ಲೇನ್ಸ್‌ಡೌನ್ ಪ್ರಭುಗಳು ಅನಾರೋಗ್ಯ ಸಂಬಂಧ ಬೇಗನೇ ರಾಜೀಕೊಡ ಲಿಕ್ಕಿದ್ದಾರೆಂಬ ವಾರ್ತೆ ಇದೆ.

~~~~~

ಕಿಚನರ್ ಪ್ರಭುಗಳ ಜ್ಞಾಪಕಾರ್ಥ ಫಂಡಿಗೆ ಈವರೆಗೆ ೨೧೩,೦೦೦ ಪವನುಗಳು ಕೂಡಿರುತ್ತವೆ.

~~~~~

ಜರ್ಮನರ ರೊಡೆನ್‌ಸ್ಟೈನ್ ಎಂಬಲ್ಲಿಯ ಆಯುಧ ಶಾಲೆಯಲ್ಲಿ ಸಿಡಿತ ಉಂಟಾಗಿ ಇಡೀ ಕೋಠಡಿಯು ನಾಶ ವಾಗಿರುವದು. ೫೭ ಮಂದಿ ಹತರಾಗಿರುವರು. ೭೩ ಮಂದಿ ಗಾಯಪಟ್ಟಿರುವರು.

~~~~~

ಶತ್ರುಗಳ ಬಲಗುಂದಿದ ಚಿನ್ಹೆಗಳು ತೋರುತ್ತಿವೆ. ಅವರು ಈಗ ತಮ್ಮ ಕಡೇಯ ರಿಜರ್ವ್ ಸೇನೆಯನ್ನು ಪ್ರಯೋಗಿಸುತ್ತಿದ್ದಾರೆ. ನಮಗೆ ಜಯವಾಗುವದು ನಿಶ್ಚ ಯ. ಜರ್ಮನ ಸೇನೆಯ ಎರಡು ಮೂರನೇ ಅಂಶವು ಇನ್ನೂ ಪಶ್ಚಿಮ ರಣರಂಗದಲ್ಲಿದೆ ಎಂತ ಫ್ರೆಂಚರ ಜನ ರಲ್ ಜೊಫ್ರೆಯವರು ಹೇಳಿರುವರು.

~~~~~

ವಿಂಬೋರ್ನೆ ಪ್ರಭುಗಳು ಪುನಃ ಐರ್ಲ್ಯಾಂಡಿನ ಲೋರ್ಡ ಲೆಪ್ಟನೆಂಟರಾಗಿ ನೇಮಿಸಲ್ಪಟ್ಟರು.

~~~~~

ಬ್ರಿಟಿಷ ಕೆಬಿನೆಟ್ ಮಂತ್ರಿ ಸಭೆಯಲ್ಲಿ ವಿದ್ಯಾಭ್ಯಾಸ ಸಂಬಂಧವಾದ ಬೋರ್ಡಿನ ಮಂತ್ರಿಯಾಗಿರುವ ಮೆ| ಹೆಂ ಡರ್‌ಸನರವರು ರಾಜಿನಾಮೆ ಕೊಟ್ಟಿರುವದರಿಂದ ಕ್ರೂ ಪ್ರಭುಗಳು ವಿದ್ಯಾಭ್ಯಾಸ ಸಂಬಂಧವಾದ ಮಂತ್ರಿಯಾಗಿ ನೇಮಿಸಲ್ಪಡುವರೆಂತ ತಿಳಿದುಬರುತ್ತದೆ.

~~~~~

ಯೂರೋಪ ಖಂಡದ ಘೋರ ಯುದ್ಧ ಪ್ರಾರಂಭ ವಾದ ೬೬೬ನೇ ದಿನ ಜರ್ಮನರಿಗೂ ಸಮ್ಮಿಳಿತರಾಷ್ಟ್ರದವ ರಿಗೂ ನೌಕಾ ಯುದ್ಧವು ನಡೆಯಿತು. ಬ್ರಿಟಿಷ ಯುದ್ಧ ಮಂತ್ರಿಯಾಗಿದ್ದ ಕಿಚನರ್ ಪ್ರಭುಗಳವರು ತಮ್ಮ ೬೬ನೇ ವಯಸ್ಸಿನಲ್ಲಿ ಜಲಸಮಾಧಿಯನ್ನು ಹೊಂದಿದರು. ಸಮು ದ್ರದಲ್ಲಿ ಮುಣುಗಿಹೋದ ಹೆಮ್‌ಶಯರ್ ಹಡಗದಲ್ಲಿ ೬೬೬ ಮಂದಿ ಯೋಧರೇ ಮೊದಲಾದ ಪ್ರಯಾಣಿಕರಿ ದ್ದರು. ಈ ಸಮರಶೂರರ ಮರಣವಾರ್ತೆಯು ತಾರೀಕು ೬-೬-೧೯೬ನೇ ದಿನ ಗಂಟೆ ೬ನೇ ಸಮಯದಲ್ಲಿ ಪ್ರಕಟ ವಾಯಿತು. ಮೇಲೆ ಹೇಳಿದ ಸೂಚನೆಗಳೆಲ್ಲವೂ ಅರ ರಲ್ಲಿಯೇ ನಡೆದುದು ಆಶ್ಚರ್ಯವಾಗಿದೆ.

~~~~~

ಯೂರೋಪ ಖಂಡದಲ್ಲಿ ಧಾರಣೆವಾಸಿಗಳು ಹೆಚ್ಚಾ ಗದ ಹಾಗೆ ಏರ್ಪಾಡು ಮಾಡಬೇಕೆಂದು ಅಲ್ಲಿನ ಸರಕಾರ ದವರು ತಕ್ಕ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಧಾನ್ಯ ಗಳು ಅಗ್ಗವಾಗಿ ದೊರೆಯುವ ಸ್ಥಳಗಳಿಂದ ಅವನ್ನು ತರಿಸಿ ಕೊಂಡು ಸುಲಭವಾದ ದರದಲ್ಲಿ ಮಾರುತ್ತಾ ಬಂದರೆ ಅದರಿಂದ ಒಂದೆರಡು ಕೋಟಿ ರೂಪಾಯಿಗಳು ನಷ್ಟವಾ ದರೂ ಜನಗಳಿಗೆ ಕ್ಷೇಮವಾಗುವದು. ಪ್ರಕೃತ ಯುದ್ಧ ಗೋಸ್ಕರ ದಿನಗಕ್ಕೆ ೬,೦೦೦,೦೦೦ ಪವನುಗಳನ್ನು ಖರ್ಚುಮಾಡಲು ಸಿದ್ಧವಾಗಿರುವ ಸರಕಾರದವರಿಗೆ ಮೇಲೆ ಹೇಳಿದ ರೀತಿಯಲ್ಲಿ ಏರ್ಪಾಡಮಾಡುವದು ಕಷ್ಟವಾಗಿಲ್ಲ.

~~~~~

ಅಮೇರಿಕ ಖಂಡದಲ್ಲಿ ಬಾಂಬುಗಳೆಂಬ ಸಿಡಿಮದ್ದಿನ ಗುಂಡುಗಳು ವಿಚಿತ್ರವಾದ ರೀತಿಯಲ್ಲಿ ತಯಾರಾಗು ತ್ತಿವೆ. ಈಚೆಗೆ ಸ್ಯಾನ್‌ಫ್ರಾನ್ಸಿಸ್ಕೊ ಎಂಬ ಪಟ್ಟಣದಲ್ಲಿ ಒಂದು ಅತ್ಯಂತ ಸೂಕ್ಷ್ಮವಾದ ಬಾಂಬು ನಿರ್ಮಿಸಲ್ಪಟ್ಟು ಅಂಚೆಯ ಕಾಗದದಲ್ಲಿ ಇಡಲ್ಪಟ್ಟಿತ್ತು. ವಿಳಾಸದಾರನು ಅದನ್ನೊಡೆಯುವಾಗ ಅದು ಸಿಡಿದು ೬ ಜನರು ಸತ್ತು ಹೋದರೆಂತಲೂ ೨೫ ಜನಗಳಿಗೆ ಗಾಯಗಳಾಗಿವೆ ಎಂ ತಲೂ ತಿಳಿದುಬರುತ್ತದೆ.

~~~~~

ಉತ್ತರ ಹಿಂದೂಸ್ಥಾನ.

ಅಗೋಸ್ತು ತಾ. ೫ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ೨೦೩೩ವರೆಗೆ ಪ್ಲೇಗಬೇನೆಯು ಸೋಂಕಿ ೧೫೩೭ ಮಂದಿ ಮೃತಪಟ್ಟರು. ಈ ಪೈಕಿ ಮುಂಬಾಯಿ ೭೦೩, ಮದ್ರಾಸ್ ೭೨, ಬಿಹಾರ್ ೩೪, ಸಂಯುಕ್ತಸಂಸ್ಥಾನ ೪೭, ಬರ್ಮ ೭೮, ಮಧ್ಯಸಂಸ್ಥಾನ ೮೬, ಮೈಸೂರು ೧೭೭, ಹೈದರಾಬಾದ್ ೪೭೦ ಮರಣ ಗಳಾಗಿರುವವು.

~~~~~

ಮ| ರಾ| ತಿಲಕರವರಿಂದ ಪೂನೆಯ ಡಿಸ್ಟ್ರಿಕ್ಟ್ ಮೇಜಿ ಸ್ಟ್ರೇಟರು ೨೦,೦೦೦ ರೂಪಾಯಿಗಳ ಸ್ವತಹಾ ಜಮಿನಾನು, ೧೦,೦೦೦ ರೂಪಾಯಿಗಳ ಇತರ ಎರಡು ಜಮಿನಾನು ಕೇಳಿರುವರೆಂದು ತಿಳಿಸಿತ್ತಷ್ಟೆ. ಈ ವಿಷಯ ವಿಚಾರಣೆ ನಡೆದು ತಿಲಕರವರು ಜಾಮಿನಾನು ಕೊಡಬೇಕಂದು ಕಳೆದ ಶನಿವಾರ ಮೇಜಿಸ್ಟ್ರೇಟರು ತೀರ್ಮಾನಿಸಿದ್ದರಿಂದ ತಿಲಕ ರವರು ಜಾಮೀನು ಕೊಟ್ಟಿರುವರು.

~~~~~

ಡಕ್ಕಾದಲ್ಲಿ ಸ್ಥಾಪಿಸಲ್ಪಡಲಿಕ್ಕಿರುವ ವಿದ್ಯಾಲಯಕ್ಕೆ ೫೯ ಲಕ್ಷ ರೂಪಾಯಿಗಳು ಬೇಕಾಗುವದೆಂತ ನಿರ್ಧರಿಸ ಲ್ಪಟ್ಟದೆ. ಆರಂಭ ಕಾರ್ಯಗಳಿಗೆನೇ ೪೮೪,೦೦೦ ರೂ ಪಾಯಿಗಳು ಬೇಕಾಗುವವು.

~~~~~

ಕೂಚ್‌ಬಿಹಾರ್ ಸಂಸ್ಥಾನದ ಅರಮನೆಯಲ್ಲಿರುವ ನಗಗಳನ್ನು ಕಳವು ಮಾಡಿದ ವ್ಯಾಜ್ಯವು ವಿಚಾರಣೆಯಲ್ಲಿ ದ್ದಿತಷ್ಟೆ. ಅದರಲ್ಲಿ ಅಪರಾಧಿಗಳಾಗಿ ಸಿಕ್ಕಿದ ರಾಜ ಬಂಧು ವರ್ಗದವರು ತಮ್ಮ ಮೇಲಿನ ತಪ್ಪನ್ನು ಮನ್ನಿಸ ಬೇಕೆಂದೂ ತಾವು ದೇಶವನ್ನೇ ಬಿಟ್ಟು ಹೊರಟು ಹೋಗು ತ್ತೇವೆಂತಲೂ ಮಹಾರಾಜರನ್ನು ಪ್ರಾರ್ಥಿಸಿಕೊಂಡಿರು ವರು.

~~~~~

ಭರತ ಖಂಡದ ರಕ್ಷಣ ಶಾಸನದ ಪ್ರಕಾರ ಹಿಡಿಯ ಲ್ಪಟ್ಟವರ ಸಂಖ್ಯೆ ೧೯೩ ಆಗಿರುತ್ತದೆ. ಬಂಗಾಳ ಆಧಿಪತ್ಯ ದಲ್ಲಿ ಜುಲಾಯಿ ತಿಂಗಳೊಂದರಲ್ಲೇ ೧೦೫ ಮಂದಿ ಸದರಿ ಶಾಸನಾವಿಧಿಗನುಸಾರವಾಗಿ ಹಿಡಿಯಲ್ಪಟ್ಟಿರುವರು. ಇದ ರಲ್ಲಿ ೧೬ ಮಂದಿ ಜಾಮೀನಿನ ಮೇಲೆ ಬಿಡಲ್ಪಟ್ಟಿರುವರು. ೬೦ ಮಂದಿಗೆ ಶಿಕ್ಷೆ ಆಗಿರುತ್ತದೆ. ೨ ಮಂದಿ ಖುಲಾಸು ಮಾಡಲ್ಪಟ್ಟಿರುವರು. ೩ ಮಂದಿಯ ವಿಷಯ ಪರ್ಯಾ ಲೋಚಿಸಲ್ಪಡುತ್ತಿರುವದು.

~~~~~

ಬಂಗಾಳ ಕಾಂಗ್ರೆಸ್ ಕಮಿಟಿಯವರು ಮ| ರಾ| ಅಂಬಿಕಚರಣ ಮುಜುಮುದಾರರನ್ನು ರಾಷ್ಟ್ರೀಯ ಸಭೆಯ ಅಧ್ಯಕ್ಷರನ್ನಾಗಿ ಆರಿಸಬಹುದೆಂತ ನಿರ್ಧರಿಸಿರುವರು.

~~~~~

ವರಿಷ್ಠ ಕಾರ್ಯನಿರ್ವಾಹಕ ಸಭೆಯ ಮೆಂಬರರಾಗಿ ರುವ ಸರ್ ಶಂಕರನ್ ನಾಯರರು ಕಲ್ಕತ್ತೆಗೆ ಹೋಗಿರು ವರು. ಕಲ್ಕತ್ತ ಯುನಿವರ್ಸಿಟಿ ವ್ಯಾಸ್ ಚೆನ್ಸಲ್ಲರವರು ಸೆನೆಟ್ ಹೌಸಿಗೆ ಸರ್ ಶಂಕರನ್ ನಾಯರರನ್ನು ಆಮಂ ತ್ರಿಸಿ ಉಪಚರಿಸಿದರು.

~~~~~

ಮಾನ್ಯ ಬಾಲಗಂಗಾಧರ ತಿಲಕರವರು ಮೇಜಿಸ್ಟ್ರೇ ಟರ ತೀರ್ಮಾನದಮೇಲೆ ಹೈಕೋರ್ಟಿಗೆ ಅಪೀಲುಮಾಡ ಬೇಕೆಂದಿರುವರೆಂತ ತಿಳಿದುಬರುತ್ತದೆ.

~~~~~

ಬೆನಾರಿಸಿನ ಹಿಂದೂ ವಿಶ್ವವಿದ್ಯಾನಿಲಯಕ್ಕೆ ಮ್ಯೂರ್ ಸೆಂಟ್ರಲ್ ಕಾಲೇಜಿನ ಸಂಸ್ಕೃತ ರಿಟಾಯರ್ಡ ಪ್ರೊಫೆ ಸರರೂ ಬೆನಾರಿಸ್ ಕಾಲೇಜಿನ ರಿಟಾಯರ್ಡ ರೆಕ್ಟರರೂ ಆಗಿದ್ದ ಮಹೋಪಾಧ್ಯಾಯ ಪಂಡಿತ ಆದಿತ್ಯರಾಮ್ ಭಟ್ಟಾ ಚಾರ್ಯರವರು ಪ್ರೊ ವೈಸ್ ಚೆನ್ಸಲ್ಲರಾಗಿ ನೇಮಿಸಲ್ಪಟ್ಟಿ ರುವರು.

~~~~~

ಮದ್ರಾಸ್ ಕಾಂಗ್ರೆಸ್ ಕಮಿಟಿಯವರು ಮ| ರಾ| ಗೋವಿಂದರಾಘವ ಅಯ್ಯರವರನ್ನು ಬರುವ ರಾಷ್ಟ್ರೀಯ ಸಭೆಯ ಅಧ್ಯಕ್ಷರಾಗಿ ಆರಿಸಬಹುದೆಂತ ನಿರ್ಧರಿಸಿರುವರು.

~~~~~

ದಕ್ಷಿಣಾ ಹಿಂದೂಸ್ಥಾನ.

ಮದ್ರಾಸ್ ಸಂಸ್ಥಾನದ ವರ್ಗದಾರರ ಪರವಾಗಿ ವರಿಷ್ಠ ನ್ಯಾಯವಿಧಾಯಕ ಸಭೆಗೆ ಮಾನ್ಯ ಕೆ. ವಿ. ರಂಗ ಸ್ವಾಮಿ ಅಯ್ಯಂಗಾರರು ಮೆಂಬರರಾಗಿ ಆರಿಸಲ್ಪಟ್ಟಿರು ತ್ತಾರೆ. ಮಾನ್ಯ ಕೆ. ವಿ. ರಂಗಸ್ವಾಮಿ ಅಯ್ಯಂಗಾರರು ಸಂಭಾವಿತ ಕುಟುಂಬಕ್ಕೆ ಸೇರಿದವರು ಮಾತ್ರವೇ ಅಲ್ಲ; ಪ್ರಜಾಜನರ ಪ್ರೀತಿಮನ್ನಣೆಗೂ ಪಾತ್ರರಾದ ಕುಟುಂಬದ ವರು. ಮ| ರಾ| ಅಯ್ಯಂಗಾರರ ತಂದೆ ಮಾಜಿ ವಾಸು ದೇವ ಅಯ್ಯಂಗಾರರು ಮದ್ರಾಸ್ ನ್ಯಾಯವಿಧಾಯಕ ಸಭೆಯಲ್ಲಿ ಸರಕಾರದವರಿಂದ ನೇಮಿಸಲ್ಪಟ್ಟ ಮೆಂಬರರಾ

ಗಿದ್ದು ಪ್ರಜಾಜನರ ಪರವಾಗಿ ಮುಖ್ಯವಾಗಿ ವಿದ್ಯಾಭ್ಯಾಸವನ್ನು ಅಭಿವೃದ್ಧಿಗೆ ತರುವರೆ ಬಹಳವಾಗಿ ಪೇಚಾಡಿದವರು.

ದಕ್ಷಿಣ ಕನ್ನಡ.

WANTED.

For the Kalasa Medical Fund, a Compounder Pay Rs. 12/ per mensem. Apply stating age and qualifications, with copies of testimonials to the undersigned.

W. H. REED.
KALASA POST, MYSORE STATE.

P. D. LIMA.

Dental Surgeon, Mangalore.

ಇವರು ಈಗ ತಾನೇ ಸೆರ್ಕೀಟಿನಿಂದ ಹಿಂತೆರಳಿ ಬಂದಿರುವರು. ಅಮೇರಿಕದಿಂದ ಭಾರೀ ಕೃತಕ ದಂತಗಳನ್ನು ತರಿಸಿಕೊಂಡಿಟ್ಟಿರುವರು. ಈ ಸುಸಮಯವನ್ನು ಕಳಕೊಳ್ಳಬೇಡಿರಿ. ಮಿತವಾದ ದರದಲ್ಲಿ ಹಲ್ಲುಗಳನ್ನು ಸರಿಪಡಿಸಿಕೊಡುವರು.

ಪಿ. ಡಿ. ಲಿಮಾ.,
ದಂತ ವೈದ್ಯರು, ಒಡೆಯರರ ಆಫೀಸಿನ ಬಳಿ,
ಮಂಗಳೂರು

FOR IMMEDIATE SALE.

A Mulgeni property, near Kadri Post Office, yeilding a net income of Rs. 211—3—0.

Apply to:—

Dr. A. A. PEREIRA,
Camp Sidapur,
COORG.

ಮಾರಾಟಕ್ಕಿದೆ.

ಕದ್ರಿ ಪೋಸ್ಟ ಆಫೀಸಿನ ಬಳಿ ರೂ. 211—3—0 ವಾನ ಹುಟ್ಟುವಳಿ ಇರುವ ಒಂದು ಮೂಲಗೇಣಿ ಆಸ್ತಿಯು ತ್ವರ್ಯದಲ್ಲಿ ಮಾರೋಣಾಗುವದು—ಬೇಕಾದವರು ಕೆಳಗಿನ ವಿಳಾಸಕ್ಕೆ ಬರಿಯುವದು.

ಡಾಕ್ಟರ್ ಎ. ಎ. ಪೆರೇರ,
ಕ್ಯಾಂಪ್ ಸಿದ್ಧಾಪುರ,
ಕೊಡಗು.

ಶ್ರೀವಿಷ್ಣು ಸಹಸ್ರನಾಮಾವಲೀ ಕೃಷ್ಣಸ್ತೋತ್ರ ಸಹಿತವಾದ

ಶ್ರೀ. ಕೃಷ್ಣಾಷ್ಟಮಿ ಪೂಜಾ

ಎಂಬ ನೂತನವಾದ ಪುಸ್ತಕವು ಈಗಲೇ ಅಚ್ಚಾಗಿ ಮಾರಾಟಕ್ಕೆ ಸಿದ್ಧವಿರುವುದು.

ಕ್ರಯ ಪುಸ್ತಕ ಒಂದಕ್ಕೆ 0—3—0.

ವ್ಯಾಪಾರಸ್ಥರಿಗೆ ರೂಪಾಯಿ ಒಂದಕ್ಕೆ ಎರಡಾಣೆ ಡಿಸ್ಕೌಂಟು. ವಿಳಾಸ:—

ಶಾರದಾ ಛಾಪಖಾನೆ, ಮಂಗಳೂರು.

ಪೊಳಲಿ:— ದಕ್ಷಿಣಕನ್ನಡಾ ಜಿಲ್ಲಾ ಪೊಳಲಿ ಶ್ರೀ ರಾಜರಾಜೇಶ್ವರಿ ದೇವಸ್ಥಾನ ಮೂಡುಪಾರ್ಶ್ವದಲ್ಲಿ ಅನಾದಿಯಿಂದಲೂ ಕೆಂಬುಳ (ಕೆಂಪುಳ್ಳ) ಬೆಟ್ಟು ಎಂತ ಕರೆಯಲ್ಪಡುವ ಕೆಂಪುಗುಡ್ಡೆ ಎಂಬ ಸ್ಥಳದಲ್ಲಿ ಬೆಲೆಯುಳ್ಳ ಕೆಂಪುಕಲ್ಲುಗಳು ಹೇರಳ ಸಿಕ್ಕುತ್ತವೆಯೆಂತಲೂ, ಅದನ್ನು ತೆಗಿಯಲಿಕ್ಕೆ ಮನಸ್ಸುಳ್ಳವರು ದಕ್ಷಿಣಕನ್ನಡಾ ಜಿಲ್ಲಾ ಕಲೆಕ್ಟರವರಿಗೆ ಅರ್ಜಿಮಾಡಿ ಲೈಸೆನ್ಸು ಪಡಕೊಳ್ಳಬಹುದೆಂತಲೂ ಈ ಕೆಂಪುಗಳು ಬೆಲೆಯುಳ್ಳವುಗಳೆಂದು ರೆವಿನ್ಯು ಬೋರ್ಡಿನಲ್ಲಿ ಪಾಸಾಗಿ ಬಂದಿರುತ್ತದೆಂದೂ ತಿಳಿಯಬರುತ್ತದೆ.

ಕಾಪು:— ಈತನಕ ಪೋಸ್ಟಾಫೀಸುಗಳಲ್ಲಿ ಮಾತ್ರ ಮಲೆಜ್ವರದ ರೋಗಿಗಳಿಗೆ ಬೇಕಾದ ಕ್ವಿನೀನು ಪ್ರಾಯ ಮಾರಾಟಕ್ಕೆ ಜನರು ಪಡೆಯಬಹುದಾಗಿತ್ತಷ್ಟೆ. ಇನ್ನು ಮುಂದೆ ಪೋಸ್ಟಾಫೀಸುಗಳಲ್ಲಿ ಅಲ್ಲದೆ ಪ್ರತಿ ಬೋರ್ಡು ಶಾಲೆಯ ಹೆಡ್‌ಮಾಸ್ತರರ ಹತ್ತಿರ ವ ಡಾಕಿನ ವೆಕ್ಸಿನೇಟರರ ಕೈಯ ಮಾರಾಟಕ್ಕೆ ಸಿಕ್ಕುತ್ತದೆಂಬದಾಗಿ ತಿಳಿಯುತ್ತೇನೆ.

ಇಲ್ಲಿಯ ಬೋರ್ಡು ಕನ್ನಡಾ ಶಾಲೆಯನ್ನು ಉಡ್ಪಿ ರೇಂಜು ಸ್ಕೂಲುಗಳ ಸಬ್ ಅಸಿಸ್ಟಾಂಟ್ ಇನ್ಸ್‌ಪೆಕ್ಟರರಾಗಿದ್ದ ಮ| ರಾ| ಕೋಟೆಕಾರ ರಾಮರಾಯರವರು ಸಂದರ್ಶಿಸಿ ವರ್ಷಾವಧಿ ಪರೀಕ್ಷೆಯನ್ನು ಮಾಡಿರುವರು. IVನೇ ತರಗತಿಯಲ್ಲಿ ಸರ್ಟಿಫಿಕೇಟು ಪರೀಕ್ಷೆಗೆ ನಿಂತ ೬ ಹುಡುಗರಿಗೂ ಸರ್ಟಿಫಿಕೇಟು ಸಿಕ್ಕಿರುತ್ತದೆ. ಶಾಲಾಸ್ಥಿತಿಗತಿಯನ್ನು ನೋಡಿ ಹರ್ಷಿತರಾಗಿ ಆಸ್ಪಾಸಿನ ಶಾಲೆಗಳ ಪರೀಕ್ಷೆಯನ್ನು ಮಾಡಿ ಉಡ್ಪಿಗೆ ಹಿಂತೆರಳಿರುವರು.

ಮಳೆ, ಗಾಳಿ ಚೆನ್ನಾಗಿ ಬಂದ ಪ್ರಯುಕ್ತವೋ ಏನೋ ಬೆಳೆಗಳಿಗೆ ಹಿಡಿದಿದ್ದ ನೊಣಗಳ ಕಾಟವು ಕಮ್ಮಿಯಾಗಿ ಶ್ವೇತ ವರ್ಣದಂತಿರುವ ಬೆಳೆಗಳೆಲ್ಲಾ ಹಸುರು ವರ್ಣಕ್ಕೆ ಮಾರ್ಪಾಟಾಗಿವೆ ಎಂಬುದನ್ನು ತಿಳಿಸುವರೆ ಆನಂದಪಡುತ್ತೇನೆ.

ಪಡುಬಿದ್ರೆ ಶ್ರೀ ಗಣಪತಿ ದೇವಸ್ಥಾನದ ಆಡಳಿತೆಯು ಈಗಿನ ಮಾನ್ಯ ಪಟೇಲರಾದ ರಾ| ಆದಿರಾಜ ಅರಸು ಯಾನೆ ಕಿನ್ನಿಯಕ್ಕ ಬಲ್ಲಾಳರವರ ಹಸ್ತ ದೇವಸ್ಥಾನಗಳ ಕಮಿಟಿ ಮೆಂಬರರಿಂದ ಕೊಡೋಣಾದಂದಿನಿಂದ ದೇವಸ್ಥಾನದ ಆಡಳಿತೆ, ವಿನಿಯೋಗ, ಉತ್ಸವಾದಿಗಳು ಯೋಗ್ಯ ರೀತಿಯಲ್ಲಿ ನಡಿಯುತ್ತಲಿವೆ. ಆದರೆ ಅಲ್ಲಿಯ ಮೊಕ್ತೇಸರರ ಪೈಕಿ ಬಂಟರ ಜಾತಿಯವರಿಗೂ ಕಮ್ಮಿಟಿ ಮೆಂಬರರಿಗೂ ಪರಸ್ಪರ ಸಂಬಂಧವಿರುವ ಪ್ರಯುಕ್ತ ಸದರಿ ಆಡಳಿತೆ ಕರಾರಿಗೆ ಸಂಪೂರ್ಣ ಹಕ್ಕು ಸಿಕ್ಕಿದಂತೆ ಕಂಡುಬಂದಿಲ್ಲ. ಆದ್ದರಿಂದ ಎಲ್ಲಾ ಕಮಿಟಿ ಮೆಂಬರರು ಏಕಚಿತ್ತತೆಯಿಂದ ದೇವಸ್ಥಾನದ ಜೀರ್ಣೋದ್ಧಾರದ ಕುರಿತು ಕೆಲಸ ನಡಿಸಿದ್ದಲ್ಲಿ ಸರ್ವರಿಗೂ ಆನಂದವೇ ಸರಿ.

ಪಡುಬಿದ್ರೆ ಪೇಟೆಯಲ್ಲಿರುವ ಕೆಲವರಿಗೆ ಪೇಟೆ ಸಮೀಪ ಬರುವ ಹಂದಿಗಳನ್ನು ಕೊಲ್ಲುವ ಹುಕುಂ ಬಂದಿದೆಯಾಗಿ ಕೇಳಿದಾಗ್ಯೂ ಪೇಟೆಯಲ್ಲಿ ತಿರುಗುತ್ತಲಿರುವ ಹಂದಿಗಳಿಗೆ ಲೆಖ್ಖವೇ ಇಲ್ಲ. ಅವುಗಳ ಉಚ್ಛಿಷ್ಟದಿಂದ ಕಾಲುಹಾಕಲು ಸ್ಥಳವಿಲ್ಲದೆ ಹೋಗಿಯದೆ.

ಯರ್ಮಾಳದಲ್ಲಿ ತಿರಿಗಿ ಟಪ್ಪಾಲಾಫೀಸು ತೆರೆಯುವರೆ ಈಗಿನ ಟಪ್ಪಾಲು ಇನ್ಸ್‌ಪೆಕ್ಟರವರು ಪ್ರಯತ್ನವಿಡುವರೆಂಬದಾಗಿ ಕೇಳಿ ಮಾನ್ಯ ಇನ್ಸ್‌ಪೆಕ್ಟರವರ ಈ ದಯೆಯ ಕುರಿತು ನಿವಾಸಿಕರು ಎಷ್ಟು ಶ್ಲಾಘಿಸಿದರೂ ಸಾಲದೆನ್ನಬೇಕು.

ಮಟ್ಟು:— ಇದೇ ತಿಂಗಳಿನ ತಾ. ೨೬ನೇ ದಿನ ಮಟ್ಟು ಎಲಿಮೆಂಟರಿ ಶಾಲೆಯಲ್ಲಿ ಉಪಾಧ್ಯಾಯರ ಸಮ್ಮೇಳನವು ಜರಗುವದು. ಸದರಿ ಸಭೆಗೆ ಉಡ್ಪಿರೇಂಜು ಸ್ಕೂಲುಗಳ ಸಬ್ ಅಸಿಸ್ಟಾಂಟ್ ಇನ್ಸ್‌ಪೆಕ್ಟರವರಾದ ರಾ| ಕೋಟೆಕಾರ ರಾಮರಾಯರವರು ಅಧ್ಯಕ್ಷರಾಗುವರು. ಎಲ್ಲಾ ಉಪಾಧ್ಯಾಯರುಗಳಿಗೂ ಸುಸ್ವಾಗತವಿದೆ.

ಕಲ್ಯಾಣಪುರ:— ಕಲ್ಯಾಣಪುರ ಸೆಕೆಂಡರಿ ಶಾಲೆಯು ಸ್ಥಾಪನೆಯಾದಂದಿನಿಂದ ದಿನೇದಿನೇ ವೃದ್ಧಿಯಾಗಿ ಬಂದು ಬಹಳ ಒಳ್ಳೇತರದಲ್ಲಿ ನಡಿಯುತ್ತದೆ. ಆದರೆ ಈ ಶಾಲೆಗೆ ರಿಕೊಗ್ನಿಶನ್ ಸಿಕ್ಕಕೂಡದೆಂಬದಾಗಿ ವಿರೋಧ ಪಕ್ಷದವರು ಸಾಧಿಸಿದರೂ ಇದೇ ತಿಂಗಳ ತಾ. ೩ರಲ್ಲಿ ಸರಕಾರದವರು ರಿಕೊಗ್ನಿಶನ್ ಕೊಟ್ಟರೆಂಬ ಹುಕುಂ ಬಂದು ತಲ್ಪಿತು. ಶಾಲಾಧಿಕಾರಿಗಳು ಕೂಡಲೇ ಶಾಲೆಗೆ ರಜೆ ಕೊಟ್ಟರು. ತಾ. ೫ರಲ್ಲಿ ಇಲ್ಲಿಯ ದೇವಾಲಯದಲ್ಲಿ ಸಭೆಕೂಡಿ ನಮ್ಮ ಊರಿಗೆ ಈ ಶಾಲೆಯಿಂದ ಆಗುವ ಮುಂದಿನ ಪ್ರಯೋಜನವನ್ನು ಸೂಚಿಸಿ ರಿಕೊಗ್ನಿಶನ್ ಸಿಕ್ಕಿದಕ್ಕಾಗಿ ದೇವರಿಗೆ ಸ್ತೋತ್ರಮಾಡಿ ತೆದೆವುಮ್ ಎಂಬ ಗಾಯನವು ಬಹಳ ಸಂತೋಷದಿಂದ ನಡೆಯಿತು. ಶಾಲೆಯ ಹುಡುಗರಿಗೆ ಮಿಠಾಯಿಯನ್ನು ಹಂಚಿ ಹುಡುಗರನ್ನು ಸಂತೋಷಪಡಿಸಿದರು. ಈ ಶಾಲೆಯ ಮೆನೇಜರರಾದ ಫಾದರ್ ಸಿ. ಪಿ. ಗೊನ್ಸಾಲಿಸರು ಮಾಡಿದ ಈ ಪ್ರಯತ್ನಕ್ಕೆ ಸದಾ ವಂದಿಸುತ್ತೇವೆ.

ಕಲ್ಯಾಣಪುರದಲ್ಲಿ ಇರುವ ಈಸ್ಟರ್ನ್ ಡಿವಲೊಪ್‌ಮೆಂಟ್ ಎಂಬ ಧೂಪದ ಕಂಪೆನಿಯಲ್ಲಿ ರಾತ್ರಿ ಹಗಲು ನಿಲ್ಲದೆ ಕೆಲಸ ನಡಿಯುತ್ತದೆ. ಈ ವರ್ಷ ಬಂದ ಕಾಯಿಗಳು ಇಂತಿಷ್ಟೇ ಎಂತ ಲೆಕ್ಕವಿಲ್ಲ. ಈ ವರ್ಷ ಬಡವರು ಸುಮಾರು ೨೦೦ ಜನರು ಕೆಲಸಮಾಡುತ್ತಿದ್ದಾರೆ.

ಕಾಸರಗೋಡು:— ಬಹು ಕಾಲದಿಂದ ಅಡ್ಕತ್ತಬೈಲ ಗ್ರಾಮದ ಪಟೇಲರಾಗಿದ್ದ ಮ. ರಾ. ಬಿ. ದೇವಪ್ಪಯ್ಯನವರು ಸಕ್ಕರೆ ರೋಗದಿಂದ ಇದೇ ಕಳೆದ ಜುಲಾಯಿ ತಾ. ೩೧ನೇ ಸೋಮವಾರ ಸ್ವರ್ಗಸ್ಥರಾದರು. ಇವರು ಸರಕಾರಿ ಕೆಲಸದಲ್ಲಿರುವಾಗ ಮೇಲಾಧಿಕಾರಿಗಳ ವಿಶ್ವಾಸಕ್ಕೂ ಜನಗಳ ಪ್ರೀತಿಗೂ ತುಂಬಾ ಪಾತ್ರರಾಗಿದ್ದರು. ಈ ಮಹನೀಯರ ಮರಣವನ್ನು ಕುರಿತು ಸರ್ವರೂ ವಿಷಾದಪಡುತ್ತಿರುವರು. ಇವರ ವೈಕುಂಠ ಸಮಾರಾಧನೆಯು ಈ ತಿಂಗಳ ತಾ. ೧೧ಕ್ಕೆ ಜರಗಿತು. ಸುಮಾರು ೩೫೦೦ ಜನರಿಗೆ ಸಮಾರಾಧನೆ ನಡೆಯಿತು. ಪೈಕಿ ೬೦೦ ಜನಕ್ಕಿಂತ ಜಾಸ್ತಿ ಪಂಚಮರಿಗೆ ಕುರಿತಾಗಿ ವಿಲೆವಾರಿ ಮಾಡೋಣಾಗಿತ್ತು. ಶ್ರೀದೇವರು ಮೃತರ ಆತ್ಮಕ್ಕೆ ಶಾಂತಿಯನ್ನೂ, ಪಿತೃವಿಯೋಗದಿಂದ ವ್ಯಸನಾಕ್ರಾಂತರಾದ ಇವರ ಏಕಪುತ್ರರಾದ ಮ. ರಾ. ಬಿ. ರಾಮಚಂದ್ರರಾಯರವರಿಗೆ ಸಮಾಧಾನವನ್ನೂ ಈಯಲಿ!

ಜಿಲ್ಲಾ ಕಲೆಕ್ಟರ ದೊರೆಗಳವರು ನಾಲ್ಕೈದು ದಿನಗಳ ಹಿಂದೆ ಇಲ್ಲಿಗೆ ಚಿತ್ತೈಸಿರುವರು. ತಾಲೂಕು ಕಚೇರಿಯನ್ನೂ ಆಸ್ಪತ್ರೆಯನ್ನೂ ಸಂದರ್ಶಿಸಿರುವರು. ಕಾಸರಗೋಡು ಪಟ್ಟಣಕ್ಕೆ ಯೂನಿಯನ್ ಜಾರಿಗೆ ತರುವ ಕುರಿತು ಕಲೆಕ್ಟರ ದೊರೆಗಳವರು ಪಟ್ಟಣದ ಪ್ರಾಮುಖ್ಯ

ಮನುಷ್ಯರನ್ನು ಬರಮಾಡಿಕೊಂಡು ನಿನ್ನೆ ತಾಲೂಕು ಖಚೇರಿಯಲ್ಲಿ ಒಂದು ಸಭೆಯನ್ನು ಜರಗಿಸಿದರು. ಸದ್ಯಕ್ಕೆ ಯೂನಿಯನಿನ ವಿಷಯ ಮೂಲೆಗೊತ್ತಿಬಿಟ್ಟರೆಂಬ ವಾರ್ತೆ ಕೇಳಿರುತ್ತೇನೆ.

ಮಂಗಳೂರು.

ಇಲ್ಲಿಯ ಮುನ್ಸಿಪಾಲ್ ಚೇರ್ಮನರ ಚುನಾವಣೆಯು ಸರಕಾರದವರಿಂದ ಗಜೇಟಿನ ಮೂಲಕ ಈಗ ತಾನೇ ಪ್ರಕಟಿಸೋಣಾಗಿರುವದರಿಂದ ರಾವ್ ಸಾಹೇಬ್ ಡಾಕ್ಟರ್ ಪಿ. ವರ್ಗೀಸರವರು ಮುನ್ಸಿಪಾಲಿಟಿಯ ಚೇರ್ಮೇನರ ಕೆಲಸ ನೋಡುತ್ತಿರುವರು.

ಇಲ್ಲಿಯ ಟೌನ್ ಮೇಜಿಸ್ಟ್ರೇಟರಾಗಿದ್ದ ಮ| ರಾ| ರಗಡೆ ಶಿವರಾಯರು ತಾಲೂಕು ಮೇಜಿಸ್ಟ್ರೇಟರಾಗಿಯೂ ತಾಲೂಕು ಮೇಜಿಸ್ಟ್ರೇಟರಾಗಿದ್ದ ಮ| ರಾ| ತಿಮ್ಮಪ್ಪ ಪೂಂಜರವರು ಟೌನ್ ಮೇಜಿಸ್ಟ್ರೇಟರಾಗಿಯೂ ನೇಮಿಸಲ್ಪಟ್ಟಿರುವರು.

ಇಲ್ಲಿಯ ಪೋಲೀಸ ಲೈನಿನ ಹಿಂಭಾಗದಲ್ಲಿರುವ ಮಸೀದಿಯ ಸಣ್ಣ ತೋಟದ ಸಮೀಪ ಕುಳಿತು ಮಲ ವಿಸರ್ಜನೆ ಮಾಡುತ್ತಿದ್ದ ಒಬ್ಬ ಪೋಲೀಸ್ ಜವಾನನನ್ನು ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಮೆ| ಚವ್ಹಾಣರವರು ನ್ಯೂಸೆನ್ಸ್ ಆಕ್ಟಿನ ಮೇಲೆ ಕೈದುಮಾಡಿ ಅವನನ್ನು ಜಾಮೀನಿನ ಮೇಲೆ ಬಿಟ್ಟಿರುವರೆಂತ ತಿಳಿಯುತ್ತೇವೆ. ನ್ಯೂಸೆನ್ಸ್ ಆಕ್ಟು ಪ್ರಜಾಜನರಿಗೆ ಮಾತ್ರವಲ್ಲ; ಪ್ರಜಾಜನರ ನೆಮ್ಮದಿಯನ್ನು ಕಾಪಾಡತಕ್ಕ ಪೋಲೀಸ ಜವಾನರಿಗೆ ಕೂಡಾ ಲಗಾವಾಗುತ್ತದೆ ಎಂಬುದನ್ನು ಮೆ| ಚವ್ಹಾಣರವರು ಉದಹರಿಸಿಕೊಟ್ಟದ್ದು ಶ್ಲಾಘ್ಯವೇ ಆಗಿದೆ.

ಕ್ಲಾರಿಕ ಪೇದುನೋಬವನು ಇದೇ ತಾ. ೧೦ನೇ ಗುರುವಾರ ಕಂಕನಾಡಿಯಲ್ಲಿರುವ ಆತನ ಮನೆಯಿಂದ ಬೇಗ್ಗೆ ಪೇಟೆಯ ದಾರಿಹಿಡಿದು ಬರುತ್ತಿರುವಾಗ ಏನೋ ದ್ವೇಷದಿಂದ ಕೊರಗಸೆಟ್ಟಿ, ಬೊಗ್ಗಸೆಟ್ಟಿ ವಗೈರೆಯು ಅವನ ಮೇಲೆ ಬಿದ್ದು ಹೊಡೆದು ಕಠಿಣ ಗಾಯಪಡಿಸಿರುವರೆಂತಲೂ ಸದರಿ ಪೇದುನನು ಆಸ್ಪತ್ರೆಯಲ್ಲಿ ಶೈತೋಪಚಾರ ಹೊಂದುತ್ತಿರುವನೆಂತಲೂ ತಿಳಿಯುತ್ತೇವೆ.

ಕೆ. ಡಿ. ಶ್ಯಾಮ ಯಾನೆ ರಾಮ ವಗೈರೆಯು ತಾ. ೧೨ನೇ ರಾತ್ರಿ ಪಾಂಡೇಶ್ವರ ದೇವಸ್ಥಾನದ ಬೀಗ ಮುರಿದು ಒಳನುಗ್ಗಿ ದೇವಸ್ಥಾನದ ತಾಂಬ್ರದ ಪಾತ್ರೆ ಇತ್ಯಾದಿಗಳನ್ನು ಕಳವುಮಾಡಿರುವರೆಂತಲೂ ಪೋಲೀಸಿನವರು ಕೆಲವು ಕಳವುಮ್ಹಾಲುಗಳ ಸಹಿತ ಅವರನ್ನು ಕೈದುಮಾಡಿ ರಿಮಾಂಡಿನಲ್ಲಿಟ್ಟಿರುವರೆಂತಲೂ ತಿಳಿಯುತ್ತೇವೆ.

ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಶಾಂತಾರಾಮರಾಯರಿಗೆ ಉಪ್ಪಿನಂಗಡಿಗೆ ವರ್ಗವಾಗಿಯದೆ.

ಹಿಂದೀ ಪ್ರೊಟೆಸ್ಟಾಂಟ ಕ್ರೈಸ್ತರ ಬಲ್ಮಠ ಶಾಂತಿದೇವಾಲಯದ ಮಾಡಿನ ತವರದ ತಗಡುಗಳನ್ನು ಕದ್ದುಕೊಂಡು ಪೇಟೆಯಲ್ಲಿ ಮಾರಿದ್ದರೆಂಬದಾಗಿ ವಿಚಾರಣೆಗೆ ಗುರಿಮಾಡಲ್ಪಟ್ಟ ಲಾಜರ್ ಚಿನ್ನಪ್ಪನಿಗೆ ೬ ವಾರಗಳ ಸಜೆಯೂ ಅಂಬ್ರೋಸನಿಗೆ ೬ ವಾರಗಳ ಸಜೆಯೂ ವಿಧಿಸೋಣಾಗಿದೆ.

ಲೋಕಲ್ ಫಂಡ್ ಆಸ್ಪತ್ರೆಗಳಲ್ಲಿ ಕಂಪೌಂಡರರಾಗಿರುವವರಿಗೆ ಜೀನಸುಗಳ ಬೆಲೆ ಏರಿರುವ ಸಮಯದಲ್ಲಿ ಇತರ ಇಲಾಖೆಗಳಲ್ಲಿರುವಂತೆ ಮಂಗಾಯಿ ಭತ್ತೆಯನ್ನು ಕೊಡುವ ಸಾಂಪ್ರದಾಯವು ಈವರೆಗೆ ಇದ್ದಿಲ್ಲ. ಆದರೆ ಮಂಗಳೂರು ತಾಲೂಕು ಬೋರ್ಡಿನ ಪ್ರೆಸಿಡೆಂಟರವರು ಈ ವಿಷಯವನ್ನು ಎತ್ತಿಹಿಡಿದು ಈ ನೌಕರರಿಗೆ ಕೂಡಾ ಇತರ ಇಲಾಖೆಗಳ ನೌಕರರಂತೆ ಮಂಗಾಯಿ ಭತ್ತೆಯನ್ನು ಕೊಡಿಸಬೇಕೆಂದು ಮದ್ರಾಸ್ ಸರಕಾರದವರಿಗೆ ಕೊಟ್ಟ ಸೂಚನೆಯನ್ನು ಸರಕಾರದವರು ಮಾನ್ಯಮಾಡಿ ಮದ್ರಾಸ್ ಸಂಸ್ಥಾನದ ಎಲ್ಲಾ ಲೋಕಲ್ ಫಂಡ್ ಆಸ್ಪತ್ರೆಯಲ್ಲಿರುವ ಕಂಪೌಂಡರರುಗಳಿಗೆ ಮಂಗಾಯಿ ಭತ್ತೆಯನ್ನು ಕೊಡಬಹುದೆಂತ ನಿರ್ಧರಿಸಿರುವರೆಂತ ತಿಳಿಯುತ್ತೇವೆ.

ಈ ತಿಂಗಳ ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗ್ ಇದೇ ತಿಂಗಳ ತಾ. ೨೨ನೇ ಮಂಗಳವಾರ ಕೂಡಿಬರುವದು.

ಮದ್ರಾಸ್ ಆಸ್ಪತ್ರೆಹಡಗ ಫಂಡಿಗೆ ಬಾಸೆಲ್ ಮಿಶ್ಯನ್ ನೇಯಿಗೆ ಕಾರಖಾನೆಯವರು ರೂ. ೧೦—೩—೦; ಮ| ರಾ| ಟಿ. ಭವಾನಿರಾಯರು ರೂ. ೧೦; ರಾವ್ ಬಹದ್ದೂರ್ ಎನ್. ಸುಬ್ಬರಾಯರು ರೂ. ೮; ಮ| ರಾ| ಎ. ಶ್ರೀನಿವಾಸ ಪೈ ರೂ. ೪; ಮ| ರಾ| ಎಮ್. ಮುಕುಂದರಾವ್ ಮತ್ತು ಎಮ್. ಎನ್. ಪ್ರಭು ರೂ. ೩; ಮ| ರಾ| ಕೆ. ಪಿ. ರಾಮರಾವ್ ರೂ. ೨; ಮೆ| ಎಮ್. ನೌರೋಜಿ ರೂ. ೨; ಮ| ರಾ| ರಾವ್ ಬಹದ್ದೂರ್ ಆರ್. ರಾಮರಾವ್ ರೂ. ೧; ಮ| ರಾ| ಜಿ. ಎನ್. ಸುವರ್ಣ ರೂ. ೧; ಮ| ರಾ| ಗೊಲ್ಲರಕೇರಿ ಕೃಷ್ಣರಾವ್ ರೂ. ೧; ಈ ರೀತಿ ವಂತಿಗೆ ಕೊಟ್ಟಿರುವರು.

ಕಳೆದ ಜೂನು ತಿಂಗಳ ಮುನ್ಸಿಪಾಲ್ ಮೀಟಿಂಗಿನಲ್ಲಿ ಕೆಥೊಲಿಕ ಯೂನ್ಯನ್ ಕ್ಲಬ್ಬಿನ ಹತ್ತರ ಬಲ್ಮಠ ಮಾರ್ಗ ಅಗಲಪಡಿಸಬೇಕೆಂತ ನಿರ್ಣಯಿಸೋಣಾಗಿತ್ತಷ್ಟೆ. ಈಗ ತಾನೇ ಈ ಮಾರ್ಗವನ್ನು ಅಗಲಪಡಿಸುವ ಕೆಲಸವು ಮುನ್ಸಿಪಾಲಿಟಿಯಿಂದ ಕೈಕೊಳ್ಳಲ್ಪಟ್ಟಿರುವದು.

ಮುನ್ಸಿಪಾಲಿಟಿಯ ಮಾರ್ಗಗಳ ಬದಿಯಲ್ಲಿದ್ದ ಗೋಳಿಮರಗಳು ಕುಂಬಾಗಿ ಮಳೆಗಾಳಿಯಲ್ಲಿ ಬೀದಿಗೆ ಬೀಳುವ ಸಂಭವವಿದ್ದುದರಿಂದ ಮುನ್ಸಿಪಾಲಿಟಿಯವರು ಬೀದಿಯ ಬದಿಯಲ್ಲಿರುವ ಅನೇಕ ಗೋಳಿಮರಗಳನ್ನು ಏಲಂ ಮೂಲಕ ಮಾರಿದುದು ಒಳ್ಳೇದೇ ಆಯಿತು. ಪರಂತು ಕಡಿದ ಮರಗಳ ಬದಲಿಗೆ ಬೇಸಿಗೆ ಕಾಲದಲ್ಲಿ ಬೀದಿಗೆ ನೆರಳು ಕೊಡತಕ್ಕ ಇತರ ಮರಗಳ ಸಸಿಗಳನ್ನು ಈ ಮಳೆಗಾಲದಲ್ಲಿಯೇ ನೆಟ್ಟು ಪೋಷಿಸುತ್ತಿದ್ದರೆ ಒಂದೆರಡು ವರ್ಷಗಳಲ್ಲೇ ಪುನಃ ಮರಗಳು ಬೆಳೆದು ಬೇಸಿಗೆ ಕಾಲದ ವಿಪರೀತ ತಾಪ ಪಟ್ಟಣಿಗರಿಗೆ ಕಡಿಮೆಯಾಗುವ ಸಂಭವವಿತ್ತು ಎಂತ ಒಬ್ಬ ಭಾತ್ಮೀದಾರರು ತಿಳಿಸಿರುವರು.

10 PRINCES ST., BOMBAY. 10 ಪ್ರಿನ್ಸೆಸ್ ಸ್ಟ್ರೀಟ್, ಬೊಂಬೇ.

ಪ್ಲೇಗನ್ನು ನಿರ್ಮೂಲಮಾಡಿ ತಿರುಗಿ ತಲೆದೋರದಂತೆ ಮಾಡತಕ್ಕ

ಸಿದ್ಧೌಷಧಗಳು.

ಇಂಡಿಯಾ, ಬರ್ಮಾ, ಸಿಲೋನ್, ಏಡನ್ ಮೊದಲಾದ ದೇಶಗಳಲ್ಲಿ 17 ವರ್ಷಗಳಿಂದ ಅನೇಕ ಪ್ರಾಣಿಗಳನ್ನು ಪ್ಲೇಗ್ ಎಂಬ ಮಹಾಸಾಂಕ್ರಾಮಿಕ ವ್ಯಾಧಿಯಿಂದ ಕಾಪಾಡಿದ

ಹೈಮಾದಿಪಾನಕ.

ಹೈಮಾದಿ ಪಾನಕವನ್ನು ಪ್ರತಿನಿತ್ಯವೂ ಹೇಳಿದಪ್ರಕಾರ ತಕ್ಕೊಳ್ಳುವದರಿಂದ ಪ್ಲೇಗ್ ಜ್ವರವು ಹತ್ತರ ಬರುವದಿಲ್ಲ. ವಿಷಮಜ್ವರ, ಶೀತಜ್ವರ ಇವುಗಳನ್ನು ತಪ್ಪದೆ ಗುಣಮಾಡುತ್ತದೆ.

ಬೆಲೆ 6 ಔನ್ಸ್ ಸೀಸೆ 1 ಕ್ಕೆ ರೂ. 1. ಚಿಕ್ಕ ಸ್ಯಾಜ. ಆಣೆ 10. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.



ಶತಧೌತ ಘೃತ

ಗಳೆಂಬ ಈ ಘೃತವು ಪ್ಲೇಗ್ ಬ್ಯೂಬೊ ಎಂಬ ಗೆಡ್ಡೆಯನ್ನೂ ಹುಚ್ಚುನಾಯಿ ಕಡಿತಗಳನ್ನೂ ಪ್ಲೇಗ್ ವೃಣ ಮತ್ತು ನಾರುವ ಹುಣ್ಣುಗಳನ್ನೂ ಹೋಗಲಾಡಿಸುವವು.

ಬೆಲೆ 1 ಔನ್ಸ್ ಡಬ್ಬಿ 1 ಕ್ಕೆ ಆಣೆ 12. ಚಿಕ್ಕ ಸ್ಯಾಜು ಆಣೆ 8. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು ಎ. ವಿ. ಎಸ್. ಎ. ಎಮ್. ಪಿ.
ಪ್ರಿನ್ಸಿಪಾಲ್ ಆಯುರ್ವೇದಿಕ್ ಕಾಲೇಜ್, ಮದರಾಸ್.
ಆಯುರ್ವೇದಾಶ್ರಮ,
55 ಆಚಾರಪ್ಪನ ಬೀದಿ
ಜಾರ್ಜ್ ಟೌನ್, ಮದರಾಸ್.

ತಂತಿ ವಿಳಾಸ:— "ಪಂಡಿಟ್" ಮದರಾಸ್.

ಡಾಕ್ಟರ್ ನವರತ್ನರ

ಪಕ್ಕಾ ಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ. 5 ನಿಮಿಷದೊಳಗೆ ಕೂದಲು ಕಪ್ಪಾಗಿ ಮೃದುವಾಗುತ್ತದೆ. ಇದಕ್ಕೆ ಸಮಾನವಾಗಿ ಎದುರು ಬರುವಂಥಾ ಇತರ ತೈಲಗಳಿಲ್ಲ. ಪ್ರಯೋಗಿಸಲು ಸುಲಭವಾಗಿದೆ ಪರಿಮಳ, ಕೆಡದ ಬಣ್ಣ ಬಹಳ ಅಗ್ಗ. ಕಪ್ ಮತ್ತು

ಬ್ರುಷ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ. 1. ಟಪ್ಪಾಲು ಚಾರ್ಜು 0—4—0

Dr. Navaratna & Sons,
Kalbadevi Road, BOMBAY.

ಏಜಂಟರು:—ಡಿ. ಊಲನ್ ಮಾರ್ಟ್,
ಮಾಧವ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು.

B. Narasimha Prabhu,
Bantval, (SOUTH CANARA).
AGENT FOR
Malabar and South Canara.

ಖಿಜಾಬೆ ಮುಶ್ಕಾ ಎಂಬ

ಕೂದಲು ರಂಗು.

ನಮ್ಮ ಈ ಕೂದಲು ರಂಗನ್ನು ಸರಿತ ಬಿಳೀ ಕೂದಲಿಗೆ ಲೇಪಿಸುವುದರಿಂದ ಬಿಳೀ ಕೂದಲುಗಳು 5 ನಿಮಿಷದೊಳಗೆ ಕಪ್ಪಾಗಿ ರೇಷ್ಮೆಯಂತೆ ನುಣುಪಾಗುವವು. ಈ ಕೂದಲು ರಂಗಿನಲ್ಲಿ ಎಸಿಡ್ ಸೇರಿಸಿಲ್ಲ.



ಕೂದಲಿಗೆ, ಹಲ್ಲುಗಳಿಗೆ, ಚರ್ಮಕ್ಕೆ ಬಾಧಕವಿಲ್ಲ. ದುರ್ವಾಸನೆಯು ಇದಕ್ಕಿಲ್ಲ. ಬಣ್ಣವು ಸ್ವಾಭಾವಿಕ ಬಣ್ಣದಂತೆ ಕಪ್ಪಾಗುವದು. ದೀರ್ಘಕಾಲ ಬಣ್ಣ ಉಳಿಯುವದು. ಅನಂತರ ಕೂದಲು ಕೆಂಪು ಯಾ ತವುಡು ಬಣ್ಣಕ್ಕೆ ಮಾರ್ಪಡದು. ಒಂದು ಸಲ ಪರೀಕ್ಷಿಸಿ ನೋಡಿರಿ.

ಪೆಟ್ಟಿಗೆ ಒಂದರ ಕ್ರಯ ರೂ. 1—0—0. ಒಂದು ಡಜನ್ ಪೆಟ್ಟಿಗೆಗಳಿಗೆ ರೂ. 9—0—0. ವಿ. ಪಿ. ಚಾರ್ಜು ಬೇರೆ. ಕಾಗದ ಪತ್ರಾದಿಗಳನ್ನು ಇಂಗ್ಲಿಷಿನಲ್ಲಿ ನಡೆಯಿಸಬೇಕು.

Address:—
Hakim Sayed Khaki Shah,
Doongri Bazar Road,
Opposite Karimbhai Ibhram Orphanage,
Bombay.

MALARIANA.

"ಮಲೇರಿಯಾನ" ಇದು ಸರ್ವ ಪ್ರಕಾರದ ಮಲೆಜ್ವರಗಳನ್ನೂ ಅವುಗಳ ಪರಿಣಾಮಗಳನ್ನೂ ನಿಸ್ಸಂದೇಹವಾಗಿ ನಿರ್ಮೂಲಪಡಿಸುವದರಲ್ಲಿಯೂ ಅದು ಬಾರದ ಹಾಗೆ ತಡೆಕಟ್ಟುವದರಲ್ಲಿಯೂ ಅನುಪಮವಾದ ಔಷಧ. ಇದು ಮಲೆಜ್ವರಕ್ಕೆ ಪ್ರಖ್ಯಾತಿಪಟ್ಟ ಔಷಧಿಗಳ ಮತ್ತು ಇತರ ನಾಚೀಕರಣ ಗುಣವುಳ್ಳ ವನಸ್ಪತಿ ಜೀನಸ್ಸುಗಳಿಂದ ತಯಾರಿಸಲ್ಪಟ್ಟದ್ದಾಗಿದೆ. ಇಪ್ಪತ್ತು ವರ್ಷಗಳ ಪೂರ್ವದಿಂದ ನೆರೆಕರೆಯ ಮಲೆ ಪ್ರಾಂತ್ಯಗಳಲ್ಲೆಲ್ಲಾ ಬೇರೆ ಜ್ವರಹಾರಕಗಳಿಂದ ಗುಣವಾಗದಂಥಾ ಸಂಗತಿಗಳಲ್ಲಿ ಸಹ ತನ್ನ ಕರ್ತವ್ಯವನ್ನು ಯಾವಾಗಲೂ ಏಕಪ್ರಕಾರ ತಪ್ಪದೆ ನಡಿಸಿ ಮುಂಬಾಯಿಯ ಕತ್ಯಾವಾರ್, ಬಸ್ರದಲ್ಲಿ ಸಹ ತನ್ನ ಅಮೂಲ್ಯ ಗುಣಗಳನ್ನು ವಿಸ್ತರಿಸಿಯದೆ. ಬಾಟ್ಲಿ 1ರ ಕಿಮ್ಮತು ರೂ. 1—8—0. ಅಂಚೆ ಹಾಸಲು ಆಣೆ 6.

ವಿಳಾಸ:—
J. M. D. Vas, Kankanady. S. C.
ಜೆ. ಎಮ್. ಡಿ. ವಾಸ್, ಕಂಕನಾಡಿ, ದ. ಕ.

ಪಂಡಿತ್ ಟಿ. ಬಾಬುರಾಯರ

ಟೋನಿಕ್ ವೈನ್.

ಇದರಲ್ಲಿ ಯಾವ ತರದ ಮಾದಕ ವಸ್ತುಗಳೂ ಸೇರಿರುವದಿಲ್ಲ. ಕಸ್ತೂರಿ ಮಿಶ್ರವಾದ ಈ ಔಷಧದ ಸೇವನೆಯಿಂದ ಶ್ವಾಸಖಾಸ, ಕ್ಷಯ, ಕೆಮ್ಮು, ದಮ್ಮು, ಅರುಚಿ, ಚರ್ದಿ, ಅಗ್ನಿಮಾಂದ್ಯ, ಗ್ರಹಣಿ, ಗುಲ್ಮ, ಭಗಂದರ, ವಾತ, ಪಾಂಡುರೋಗ, ಕಾಮಿಲೆ, ಕುಷ್ಠ, ಮೂಲವ್ಯಾಧಿ, ಮೇಹ, ಶೀಮೂತ್ರ, ಮೂತ್ರಕೃಚ್ಛ್ರ, ಧಾತುಕ್ಷಯ, ಇದಲ್ಲದೆ ಉದರ ವ್ಯಾಧಿಗಳು ನಿಸ್ಸಂದೇಹವಾಗಿ ಗುಣವಹವು. ಕೃಶಾಂಗರು ದೃಢಕಾಯರಾಗುವರು. ಬಂಜೆ ಸ್ತ್ರೀಯರು ಪುತ್ರವತಿಯರಾಗುತ್ತಾರೆ. ಇದರಿಂದ ತೇಜಸ್ಸೂ, ಬಲವೂ, ಧಾತುವರ್ಧನೆಯೂ ಉಂಟಾಗುತ್ತದೆ.

ಸೀಸೆ 1ರ ಕ್ರಯ 14 ಆಣೆ. ವಿ. ಪಿ ಖರ್ಚು ಪ್ರತ್ಯೇಕ.

ವಿಳಾಸ:—ಟಿ. ಬಾಬುರಾವ್ ಎಂಡ್ ಸನ್,
ವೈದ್ಯರು, ಕದ್ರಿ, ಮಂಗಳೂರು.
ಕಂಕನಾಡಿ ಪೋಸ್ಟು.

ಮುಂಬಾಯಿ ಲೈಫ್ ಎಸ್ಯುರೆನ್ಸ್ ಕಂಪೆನಿ,

(ಲಿಮಿಟೆಡ್).

(1908ರಲ್ಲಿ ಸ್ಥಾಪಿಸಲ್ಪಟ್ಟಿತು). ಪ್ರಧಾನ ಆಫೀಸು: ಮುಂಬಯಿ.

ಅಧ್ಯಕ್ಷರು:—ಬಹುಮಾನಪಟ್ಟ ಮಿ। ಲಲ್ಲುಬಾಯಿ ಸಾಮಲ್ ದಾಸರವರು, ಸಿ. ಐ. ಇ. ಜೆ. ಪಿ.

ಮೆನೇಜಿಂಗ್ ಡಿರೆಕ್ಟರರು:—ಫ್ರೇಮ್‌ರೋಜ್ ಛಡ್ ಜೋಶಿರವರು, ಜೆ. ಪಿ. ಒನರರಿ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು.

ಎಕ್ಚುವರಿ:—ಮಿ। ಜೋರ್ಜ್ ಕಿಂಗ್ ಎಫ್. ಎಫ್. ಎ. ಎಫ್. ಐ. ಎ.

ಇಂಡಿಯಾ ಸರಕಾರದ ಭದ್ರತೆಯಲ್ಲಿ ರೂ. 200,000ನ್ನು ಠೇವಣಿಯಾಗಿಟ್ಟಿರುವದು.

ಹಣ ಕಳುಹಿಸಿಕೊಡುವ ಏಜನ್ಸಿ ಬಗ್ಯೆ ಪತ್ರ ಇತ್ಯಾದಿಗಳನ್ನು ಬರೆಯಬೇಕಾದ ವಿಳಾಸ:—

ಕೊಚ್ಚಿಕಾರ್ ಬ್ರದರ್ಸ್, ಉಡುಪಿ,

ಪ್ರಾಮುಖ್ಯ ಏಜಂಟರು.

ಸೂಚನೆ:—ಮಂಗಳೂರಲ್ಲಿರುವ ಈ ಕಂಪೆನಿಯ ವಿಮೇದಾರರು ತಮ್ಮ ವಿಮೆ ವಂತಿಗೆಗಳನ್ನು ಮಂಗಳೂರಿನ ಕೆನರಾ ಬ್ಯಾಂಕಿನಲ್ಲಿ ವಸೂಲು ಕೊಟ್ಟು ಆ ಬಗ್ಗೆ ರಶೀದಿಯನ್ನು ಕೊಚ್ಚಿಕಾರ್ ಬ್ರದರ್ಸ್ ಇವರಿಗೆ ಕಳುಹಿಸಿಕೊಡಬಹುದು.

ಸೇಲಂ, ತಾ. 10—4—16.

ಮುಂಬಯಿ ಲೈಫ್ ಎಸ್ಯುರೆನ್ಸ್ ಕಂಪೆನಿಯ ಮೆನೇಜಿಂಗ್ ಡೈರೆಕ್ಟರಿಗೆ—

ನನ್ನ ಮಗಳ ಗಂಡನ ಪೋಲಿಸಿ ಪ್ರಕಾರ ನನ್ನ ಮಗಳಿಗೆ ಪಾವತಿಯಾಗತಕ್ಕ ಹಣವನ್ನು ಸದರಿಯವಳಿಗೆ ಪ್ರಾಯ ಬಂದೊಡನೆ ಮತ್ತು ಪೋಲಿಸಿ ಪ್ರಕಾರ ಬೇಕಾದ ಇತರ ರುಜುವಾತನ್ನು ಸಂಗ್ರಹಿಸಿ ಕೊಟ್ಟೊಡನೆ ಕೆತ್ತ ಬಗ್ಗೆ ಈ ಮೂಲಕ ನಿಮ್ಮನ್ನು ವಂದಿಸುತ್ತೇನೆ. ಪೋಲಿಸಿ ಕ್ಲೈಮು ಪ್ರಬಂಧ ಕೂಡಲೆ ಹಣವನ್ನು ವಿಮೇದಾರರಿಗೆ ಪಾವತಿಮಾಡುವ ವಿಶೇಷ ಗುಣವು ಈ ಕಂಪೆನಿಯಲ್ಲಿದೆಂಬುದನ್ನು ಅನುಭವತಃ ತಿಳಕೊಂಡು ಬಹಳ ಸಂತೋಷಪಟ್ಟಿರುವೆನು. ಇತರ ವಿಮೆ ಸಂಘಗಳಲ್ಲಿಲ್ಲದ ಹಲವು ಅನುಕೂಲತೆಗಳು ಈ ಕಂಪೆನಿಯಲ್ಲಿರುವವು. ಕ್ಲೈಮು ಪ್ರಕಾರ ಹಣವನ್ನು ವಿಮೇದಾರರ ಮನೆಗೆ ತಂದುಕೊಡುವಂಥಾದ್ದು ಈ ಕಂಪೆನಿಯ ಮತ್ತೊಂದು ವಿಶೇಷ ಲಕ್ಷಣವಾಗಿರುತ್ತದೆ. ಈ ಕಂಪೆನಿಯ ಇಲ್ಲಿಯ ಏಜಂಟರಾಗಿರುವ ರಾಜೇಶ್ರಿ ರಾಮರಾವ್ ಡಾಂಗೆ ಮತ್ತು ಕಂಪೆನಿಯವರಿಗೆ ಸದಾ ವಿಜಯ ಉಂಟಾಗಲೆಂದು ಕೋರುತ್ತೇನೆ.

ಡಬ್ಲ್ಯು ವೀರಸಾಮಿ ಅಯ್ಯರ್.
ಡಿಸ್ಟ್ರಿಕ್ಟ್ ಕೋರ್ಟು ಪ್ಲೀಡರ್, ಸೇಲಂ.

ಡೋಂಗರೆ ಇವರ ಬಾಲಾಮೃತ.

ಇದು ಬಹು ಮಧುರವಿರುವದರಿಂದ ಮಕ್ಕಳು ತವಕಪಟ್ಟು ತಕ್ಕೊಳ್ಳುವವು. ಇದರಿಂದ ಅಜೀರ್ಣಜ್ವರ, ಕೆಮ್ಮು, ಕೈಕಾಲುಗಳು ಕಿರಿದಾಗೋಣ, ನೆಗಡಿಯಿಂದ ಮೂಗು ಸುರಿಯೋಣ ಇತ್ಯಾದಿ ವಿಕಾರಗಳು ಹೋಗಿ ಕೂಸುಗಳು ಬಲವುಳ್ಳವು ಮತ್ತು ಸೊಗಸುಳ್ಳವು ಆಗುವವು.

ಈ ಪ್ರಶಂಸಾಪತ್ರವನ್ನು ನೋಡಿರಿ.

ಮಿ. ಎನ್. ಮಹಮ್ಮದ ಹುಸೇನ ಡಾಕ್ಟರ್, ಸುರಗಾಂ, ಜಿಲ್ಲಾ ಮುಜಫರಪುರ, ಬರೆಯುವದೇನಂದರೆ:—

"ಡಾಕ್ಟರ ಕೆಲಸ ಮಾಡುವ ನಾನು, ಖಾತ್ರಿಪೂರ್ವಕ ಹೇಳುವದೇನಂದರೆ:—ಸಣ್ಣ ಹುಡುಗರ ರೋಗಗಳಿಗೆ ಇಂದ್ರಜಾಲದಂಥ ಪರಿಣಾಮ ಕೊಡುವ ಔಷಧವಿದ್ದರೆ ಅದು ಡೋಂಗರೆ ಇವರ ಬಾಲಾಮೃತವೇ. ಅದಕ್ಕೆ ಸರಿಯಾದ ಮತ್ತ್ಯಾವದೊಂದು ಔಷಧವು ಗುಣಕಾರಕವಿಲ್ಲೆಂಬದನ್ನು ನಾನು ನಿಶ್ಚಯದಿಂದ ಹೇಳುತ್ತೇನೆ.

ಒಂದು ಕುಪ್ಪಿಯ ಕ್ರಯ ೧೨ ಆಣೆ, ಪೋಸ್ಟ ಖರ್ಚು ೪ ಆಣೆ.

ಊಲನ್ ಮಾರ್ಟ್, ಮಾಧವ ಬಿಲ್ಡಿಂಗ್ಸ್, ಮಂಗಳೂರು.

ಕೆ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.

ಇವರಲ್ಲಿಯೂ ದೊರಕುವದು.

ಒಂದು ಸಾರಿ ಕೊಂಡು ನೋಡಿರಿ!!

ಒಟ್ಟೊ ದಿಲ್-ಚಮಾನ್

(ರಿಜಿಸ್ಟರ್ಡ್.)

ಸುರಭಿಗಳಲ್ಲಿ ಮಕುಟವರ್ಧನ!

ಬಹಳ ಸುವಾಸನೆಯುಳ್ಳ **ಲೋಕ** ಪ್ರಖ್ಯಾತವಾದ ಮತ್ತು **ಈಗಿನ ಕಾಲ**ಕ್ಕನುಸಾರವಾದ ಸದಾ ಸುವಾಸನೆಯುಳಿವ ಸುಗಂಧವು. ಒಂದೆರಡು ತಟಕು **ಕೈ** ವಸ್ತ್ರದಲ್ಲಿ ತಾಗಿಸಿದ್ರೆ ಆದರೆ 8 **ದಿವಸ**ಗಳ ವರೆಗೂ ಪರಿಮಳವಿರುವದು.

		ರೂ.	ಆ.	ಪೈ.
ಕ್ರಯ ½ ಡ್ರಾಮ್ ಟ್ಯೂಬ್	.	0	8	0
1 ,,	.	0	12	0
½ ಔನ್ಸ್ ಟ್ಯೂಬ್ .	.	2	0	0
ಒಟ್ಟೊ ದಿಲ್-ಚಮಾನ್ ಪರಿಮಳದ ಕಾರ್ಡುಗಳು ಡಜನಿಗೆ .	.	0	12	0

ವಿ. ಪಿ. ಚಾರ್ಜು 0—4—0 ಬೇರೆ.

ಪ್ರಾಮುಖ್ಯ ಏಜಂಟರು—:

ಎಚ್. ಆರ್. ಮೋಡಿ ಎಂಡ್ ಕೋ,
10 ಪ್ರಿನ್ಸೆಸ್ ಸ್ಟ್ರೀಟ್, ಬೊಂಬೇ.

H. R. MODY & Co.,
10 Princes Street, BOMBAY

ವಿಶೇಷವು.

ನಾವು ಲೋಕ ಪ್ರಖ್ಯಾತ ಪೇಟೆಂಟ್ ಔಷಧಿಗಳಿಗೂ ಅತ್ತರು ಮೊದಲಾದ ಪರಿಮಳ ದ್ರವ್ಯಗಳಿಗೂ ಪ್ರಾಮುಖ್ಯ ಏಜಂಟರಾಗಿರುತ್ತೇವೆ.

ಎಕ್ಸೆಲ್ಸಿಯರ್ ಸಾರ್ಸಪರಿಲ್ಲಾ.

(ಐಯೋಡೈಸ್ಡ್)

ಎಂಬ

ರಕ್ತಶುದ್ಧಿಯ ದೀಪಕ.

ಕ್ರಯ ಬಾಟ್ಲಿಗೆ ರೂ. 1—4—0 ಮತ್ತು ರೂ. 2—0—0.

ಪಿಯರ್ಸ್ ನರ್ವೈನ್ ಟೋನಿಕ್ ಪಿಲ್ಸ್

(ಆದರ್ಶದೀಪಕ.)

ಆರೋಗ್ಯವನ್ನು ಉಂಟುಮಾಡುವದು, ಅಶಕ್ತಿಯನ್ನು ಹೋಗಗೊಳಿಸುವದು. ಅಶಕ್ತರಾದ ಬಾಲಕರಿಗೂ ಬಾಲಕಿಯರಿಗೂ ಬಹಳ ಪ್ರಯೋಜನಕಾರಿ!

ಕ್ರಯ 30 ಮಾತ್ರೆಗಳ ಸೀಸೆ 1ಕ್ಕೆ ರೂ. 1—8—0.

ರಾಮಬಾಣ ಗಜಕರ್ಣ ಮುಲಾಂ.

ಗಜಕರ್ಣಕ್ಕೆ ಅತ್ಯುತ್ಕೃಷ್ಟವಾದ ಮುಲಾಂ. ಡಬ್ಬಿ 1ಕ್ಕೆ 4 ಆಣೆ.

ಮೋಡಿಯವರ

ತಲೆಶಿಡಿತ ಬಿಲ್ಲೆಗಳು

ಒಂದೇ ನಿಮಿಷದಲ್ಲಿ ಗುಣ.

ಒಂದು ಬಿಲ್ಲೆಯನ್ನು ನೀರಿನಲ್ಲಿ ಹಾಕಿ ಸೇವಿಸಬೇಕು. 25 ಬಿಲ್ಲೆಗಳ ಸೀಸೆ 1ಕ್ಕೆ 0—12—0. ಇತರ ವಿಶೇಷ ಔಷಧಗಳ ಪಟ್ಟಿಗೆ ಬರಕೊಳ್ಳಿರಿ.

H. R. Mody & Co., *Chemists*, 10 PRINCES ST., BOMBAY.

ಎಚ್. ಆರ್. ಮೋಡಿ ಎಂಡ್ ಕೋ, ಕೆಮಿಸ್ಟ್ಸ್, 10 ಪ್ರಿನ್ಸೆಸ್ ಸ್ಟ್ರೀಟ್, ಬೊಂಬೇ.

ESTABLISHED JULY 1906.

THE CANARA BANK, LIMITED., MANGALORE.

ಕೆನರಾ ಬ್ಯಾಂಕ್ ಲಿಮಿಟಡ್, ಮಂಗಳೂರು;

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs.	300,000—0—0	ನಿಯಮಿತ ಮೂಲ ಧನವು ರೂಪಾಯಿ	300,000—0—0
Issued Capital	225,000—0—0	ಹುಟ್ಟಿಬಂದ ಮೂಲ ಧನವು „	225,000—0—0
Subscribed Capital	225,000—0—0	ಪ್ರತಿಜ್ಞಾತ ಮೂಲ ಧನವು „	225,000—0—0
Paid up Capital	200,000—0—0	ಆಗತ ಮೂಲ ಧನವು „	200,000—0—0
Deposits	370,018—12—9	ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು ...	370,018-12—9
Reserve Fund	40,442—8—0	ರಕ್ಷಿತ ಧನವು	40,442—8—0

Besides the uncalled capital of Rs. 25,000/- 25% of the net profits are added annually to the Reserve Fund. Rs. 28,485/- have been invested in Government Paper of the face value of Rs. 29,300/-.

Dividends of not less than 6% paid during the past years and a bonus of 1% to 2% paid in addition during the last seven years.

Fixed Deposits of Rs. 50/- and above in multiples of Rs. 5/ received for 3, 6, 12 and 24 months @ 4, 4½, 5 and 5½% respectively at the discretion of the managing committee.

Short-notice Deposits requiring one weeks notice of withdrawal after one month received @ 2½% per annum at the discretion of the managing committee.

Current Deposit Account opened free of charge.

Savings Bank Account opened for any sum not less than 4 As. and multiples thereof and interest paid @ 4½%.

Loans granted on proper securities and pledges.

Canara Bank Ltd.,

Mangalore, 1st. August 1916.

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡುವುದಲ್ಲದೆ. ಹಿಸೆ ಮೌಲ್ಯಗಳಿಂದ ಕೇಳಲ್ಪಡದಿರುವ ರೂ. 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 28,485—0—0 ಸರಕಾರದ ರೂ. 29,300ರ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಸೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುಮಾಲಿಕರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ 7 ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ "ಬೋನಸ್" ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

"ಕರೆಂಟ್ ಎಕೌಂಟ್" ಎಂಬ ಚಾಲ್ತಿ ಠೇವಣಾತಿಗಳು ಠೇವಣೆದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾದೀತು. ಈ ಠೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡೋಣಾಗುವುದು. ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಅಡಿವಿನ ಮೇಲೆ ಸಾಲಗಳು ಕೊಡ್ಲೋಣಾಗುತ್ತವೆ

P. Gopal Naik,
Secretary.

ಅನುಭವಸಿದ್ಧವಾದ ಔಷಧಗಳು.

೧. ಕುಂತಳಕುಸುಮ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ಪಾಲ್ಗೊಂಡು ಬಹುಮಾನ ಪಡೆದಿದೆ ... ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೬ ಬಾಟ್ಲಿಗೆ ೫ ರೂ. ೧೦ ಆಣೆ.

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಚಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨-೮-೦.

೩. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೪. ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪಾಷ್ಟಿಕವಾಗಿದೆ. ರಾತಲಿಗೆ ೨ ರೂ.

೫. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಆಪಾಯವಿಲ್ಲದೆ ಪಾತುಕಾವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ಸದೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

ಖಮ್ಮ ವಿಳಾಸ:—ಬಿ ಎಮ್. ನಾಥ್ ಮತ್ತು ಕಂಪೆನಿ,

ವೆಪರಿ ಪೋಸ್ಟು ಮದರಾಸು.

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ಮರಿಸೆಯ ಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವ ಲೇಹ. ಕೆಮ್ಮು, ಗುರ್ಲುಶ್ವಾಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೦. ಕಾಲ್ಕಲೀ ಪಾಕ. ಸ್ತ್ರೀಪ್ರಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಲಾಡಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೧. ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತ ಬಾಧೆಗಳನ್ನು ಕೂಡಲೆ ಗೆಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೨ ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮ ವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯುವದಿಲ್ಲ. ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೩ ಸರ್ವರಾಂಜನ (ಸುರುಮಾ). ಎಲ್ಲಾ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗುವಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲಾ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

B. M. Nath & Co., *Ayurvedic Chemists,*
Vepery Post, MADRAS.

ಸ್ವದೇಶಾಭಿಮಾನಿ

ಮಂಗಳೂರು ಶುಕ್ರವಾರ ತಾರೀಕು 25ನೇ ಅಗೋಸ್ತು 1916.

ಸಮತ್ವ ಭಾವನೆಗೆ ಇದೊಂದು ತೊಡಕಲ್ಲವೆ?

ಕಳೆದ ಸಂಚಿಕೆಯ ಅಗ್ರಲೇಖದಲ್ಲಿ ಫ್ರಾನ್ಸಿನ ಕೊನ್ಸರನ್ಸಿನ ವಿಷಯದಲ್ಲಿ ಬರೆಯುವಾಗ ನಾವು ಹಿಂದೂಸ್ಥಾನ ವಾಸಿಗಳು ಬ್ರಿಟಿಷ್ ಸಾಮ್ರಾಜ್ಯಕ್ಕೆ ಸೇರಿದವರಾದ ಕಾರಣ ಆ ಬ್ರಿಟಿಷ್ ಸಾಮ್ರಾಜ್ಯದಲ್ಲಿ ಒಂದು ಊಟವಾದರೆ ಅದರಲ್ಲಿ ನಮಗೂ ಪಂಕ್ತಿಪಾವನತ್ವವು ಬೇಕೆಂಬ ಸಂಗತಿಯನ್ನು ಬರೆದುದು ವಾಚಕರು ಮರೆತಿರಲಾರರು. ಸಹಸ್ರ ಭೋಜನದಲ್ಲಿ ಒಂದು ಮುಷ್ಟಿ ಅನ್ನ ಸಿಗದವನಿಗೆ ಅಪ್ತೇಷ್ಟರಿಗೆ ಮಾತ್ರ ತಯಾರಿಸಿದ ಕ್ಲಪ್ತ ಭೋಜನದಲ್ಲಿ ಸ್ವಲ್ಪವಾದರೂ ಲಭಿಸೀತೆ? ಅನಂತಶಯನದ ಪದ್ಮನಾಭನ ಪ್ರಸಾದಕ್ಕೆ ಅನರ್ಹನಾದವನು—ಅಲ್ಲಿಯ 'ಭೂರಿಭೋಜನ'ವನ್ನು ಹೊಂದದವನು ವಾಸುದೇವಶರ್ಮನಲ್ಲಿ ಹೋಗಿ ಬಾಯಿ ಬಡೆದು ಕೇಳುವುದರಲ್ಲಿ ಪ್ರಯೋಜನವಾದೀತೆ? ಇಡೀ ಸಾಮ್ರಾಜ್ಯದ ಪರಿಷತ್ತಿನಲ್ಲಿ ಸಭ್ಯದಲ್ಲಾದರೂ ಅವಕಾಶವನ್ನು ಹೊಂದದ ಹಿಂದೂಸ್ಥಾನವು ಆ ದೊರೆಗಳ, ಈ ದೊರೆಗಳ ಕೃಪೆಯ ಛತ್ರದಲ್ಲಿ ನಿಂತುಕೊಂಡೇನು, ಆ ಹಕ್ಕನ್ನು ಪಡೆದೇನು, ಈ ಶಿಷ್ಯ ವೃತ್ತಿಯನ್ನು ಹೊಂದೇನೆಂದು ಆಶೆಪಟ್ಟುಕೊಂಡಿದ್ದರೆ ಆ ಮೋದಕಗಳು ಇದರ ಕೈಗೆ ಬಂದಾವೇ? ಈ ಹಿಂದೂ ದೇಶವು ಬ್ರಿಟಿಷ್ ಸಾಮ್ರಾಜ್ಯದ ಒಂದು ದೊಡ್ಡದಾದ ಅವಯವವಾದುದರಿಂದ ಬೇರೆ ಬೇರೆ ಅವಯವಗಳಿಗೆ ಸಲ್ಲತಕ್ಕ ಹಕ್ಕುಗಳಾಗಲಿ, ಬೇಕಾದ ಪೋಷಕ ದ್ರವ್ಯಗಳಾಗಲಿ, ಇಲ್ಲವೆ ಅವಶ್ಯವಿರುವ ವ್ಯಾಯಾಮಗಳಾಗಲಿ ಇದಕ್ಕೂ ಅನುಕೂಲಪಡಿಸಿಕೊಡುವುದು ಸಾಮ್ರಾಜ್ಯಾಧಿಕಾರಿಗಳ ಕರ್ತವ್ಯವು. ಇದು ಬರೇ ಕರ್ತವ್ಯವಲ್ಲ, ನ್ಯಾಯ್ಯವಾದ ಕರ್ತವ್ಯವು. ಅದರಲ್ಲಿಯೂ ಈ ವಿಸ್ತಾರವಾದ ಸಾಮ್ರಾಜ್ಯದ ಮೇಲೆ ಮಹಾಯುದ್ಧದ ಗ್ರಹಣವು ಬಂದಾಗ ಆ ದೋಷ ಪರಿಹಾರಕ್ಕಾಗಿ ಬೇರೆ ಅವಯವಗಳಂತೆ ಈ ಹಿಂದೀ ದೇಶವು ಅವಶ್ಯ ಮತ್ತು ಶಕ್ಯವಾದ ಜಪತಪಗಳನ್ನೂ, ದಾನಮಾನಗಳನ್ನೂ ಮಾಡುತ್ತಿದೆ. ಈ ರೀತಿಯಿಂದ ಸಾಮ್ರಾಜ್ಯದ ಪ್ರಧಾನ ಅಂಗದೊಡನೆ ತನ್ನ ಐಕ್ಯವನ್ನು ವ್ಯಕ್ತಗೊಳಿಸುವಾಗ ಇನ್ನೂ ಕೆಲಕೆಲವು ಸಂಗತಿಗಳನ್ನು ಆ ಅವಯವಕ್ಕೆ ದೂರದಲ್ಲಿಯೇ ಇಡುವುದು ಸಮತ್ವದ ಉದಾತ್ತ ಭಾವನೆಗೆ ಸರಿಯೋ! ಇಲ್ಲಿ ಒಂದು ಸಂಗತಿಯನ್ನು ನಾವುಹೆಚ್ಚು ಒತ್ತಿಹೇಳಬೇಕಾಗಿದೆ. ಅದೇನೆಂದರೆ, ಈ ಮಹಾ ಯುದ್ಧದಲ್ಲಿ ಹಿಂದೂಸ್ಥಾನವು ಸಾಮ್ರಾಜ್ಯಕ್ಕೆ ಸಾಹಾಯ್ಯವನ್ನು ಮಾಡಿದ್ದು ತನಗೆ ಹಕ್ಕುಗಳು ಸಿಗಬೇಕು. ಈ ಕ್ಷುದ್ರ ಪ್ರತಿಫಲದ ಪ್ರತ್ಯಾಶೆಯಿಂದಲ್ಲ; ಶರೀರದ ಒಂದು ಅವಯವಕ್ಕುಂಟಾದ ಪೆಟ್ಟು ತನಗೇ ಎಂದು ನೆನಸಿ ಅದರ ನಿವಾರಣೆಗಾಗಿ ಮಾಡಬೇಕಾದ ಸಂಗತಿಗಳನ್ನು ಶ್ರೀಕೃಷ್ಣನು ಗೀತೆಯಲ್ಲಿ ಹೇಳಿದಂತೆ, ಸ್ವಕರ್ತವ್ಯದ ಬುದ್ಧಿಯಿಂದ ಅದು ಇಷ್ಟರವರೆಗೆ ಮಾಡುತ್ತಾಬಂದಿದೆ; ಮತ್ತು ಇನ್ನು ಮುಂದೆಯಾದರೂ ಇದನ್ನೇ ಆಚರಿಸೀತು. ಆದರೆ ಇಲ್ಲಿ ಪ್ರಶ್ನೆ ಏನೆಂದರೆ, ಒಬ್ಬನು ತನ್ನ ಕರ್ತವ್ಯವೆಂದು ತಿಳಿದು ಕೆಲವು ಒಳ್ಳೇ ಸಂಗತಿಗಳನ್ನು ಮಾಡುವಾಗ ಹಲವು ಉಪಕಾರಗಳನ್ನು ಮಾಡುವಾಗ ಅವನ ಕೇರಿಯಲ್ಲಿಯೇ ಅಲ್ಲ, ನೆರೆಯಲ್ಲಿಯೂ ಅಲ್ಲ, ಮನೆಯಲ್ಲಿ ಐಕ್ಯಭಾವದಿಂದಿರುವ ಅವನ ಯಜಮಾನನು, ಮಾಡಿದ ಉಪಕಾರಕ್ಕೆ ಪ್ರತ್ಯುಪಕಾರವೆಂತಲ್ಲ, ತನ್ನ ಕರ್ತವ್ಯವೆಂದು ತಿಳಿದು ತಾನು ಸಹಾ ಹಲವು ಒಳ್ಳೇ ಸಂಗತಿಗಳನ್ನು ಮಾಡಬೇಕಲ್ಲವೆ? ಕ್ರಿಸ್ತನು ಒಂದು ಕಡೆಯಲ್ಲಿ ಹೇಳುವನು, ನೆರೆಯವರು ತನ್ನೊಡನೆ ಯಾವ ರೀತಿಯಿಂದ ನಡಕೊಳ್ಳಬೇಕೆಂದು ನೀನು ಅಪೇಕ್ಷಿಸುವಿಯೋ ಹಾಗೆಯೇ ನೀನು ಅವರೊಡನೆ ವರ್ತಿಸು. ಈ ಮಾತಿನ ಅರ್ಥದಂತೆ ಅನು ಉಪಕಾರವಮಾಡುವಾಗ ಬನುಕೂಡ ತನ್ನಿಂದಾದ ಮತ್ತು ನ್ಯಾಯ್ಯವಾದ ಉಪಕಾರಗಳನ್ನು ಮಾಡುವುದು ಉಚಿತವೆಂದು ಯಾರೂ ಹೇಳಬಲ್ಲರು. ಇದರಂತೆ ಹಿಂದುಸ್ಥಾನವು ಸಾಧ್ಯವಾದ ಸಾಮ್ರಾಜ್ಯದ ಮತ್ತು ಇಂಗ್ಲಂಡದ ಹಿತಗಳನ್ನು ಮಾಡಲು ಸೊಂಟ ಕಟ್ಟಿದ್ದಲ್ಲಿ ಸಾಮ್ರಾಜ್ಯವು ಮತ್ತು ಇಂಗ್ಲಂಡವೂ ಇದರ ಹಿತವನ್ನು ಮಾಡುವದು ಕರ್ತವ್ಯಪ್ರಾಪ್ತವೆಂತ ಕಾಣುತ್ತದೆ. ಆದರೆ ನಮಗೆ ಎಂದರೆ ಹಿಂದುಸ್ಥಾನಕ್ಕೆ ಉಪಕಾರ ಮಾಡುವಾಗ ಈ ಪ್ರತ್ಯುಪಕಾರದ ಆಕಾಂಕ್ಷೆ ಬೇಡೆಂಬ ಸಂಗತಿಯನ್ನು ನಾವು ಮೇಲೆಯೇ ಹೇಳಿದ್ದೇವೆ. ಅದು ತನ್ನ ಕರ್ತವ್ಯವೆಂತಲೇ ಸಾಹಾಯ್ಯ ಮಾಡುತ್ತಿದೆ. ಹೀಗಿರಲು ಇಂಗ್ಲಂಡವು ಮಾತ್ರ ಇನ್ನೂ ಕೆಲಕೆಲವು ಸಂಗತಿಗಳಲ್ಲಿ ಸಮತ್ವದ ಭಾವನೆಯನ್ನು ವ್ಯಕ್ತಗೊಳಿಸುವುದಿಲ್ಲ. ಇದು ಖೇದದ ಮಾತಾಗಿದೆ.

ಈ ಹೊತ್ತು ಈ ಆಲೋಚನೆಗಳು ಬರಲು ಕಾರಣವೇನೆಂದರೆ, ಸಿಸಿಲರ್ಹೋಡಸ್ ಎಂಬವರು ಮೊದಲು ೮ ಲಕ್ಷ ರೂ.ಗಳ ಬಡ್ಡಿಯಿಂದ ವಸಾಹತುಗಳ ೬೦, ಅಮೇರಿಕೆಯ ೩೨ ಮತ್ತು ಜರ್ಮನಿಯ ೧೫ ವಿದ್ಯಾರ್ಥಿಗಳಿಗೆ ಒಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಒತ್ತಟ್ಟಿಗೆ ಸೇರಿ ವಿದ್ಯಾರ್ಜನ ಮಾಡುವುದಕ್ಕಾಗಿ ಏರ್ಪಡಿಸಿದ್ದರು. ಜರ್ಮನಿಗೆ ಸಲ್ಲತಕ್ಕ ೧೫ ಶಿಷ್ಯವೃತ್ತಿಗಳು ಈ ಯುದ್ಧದಿಂದ ನಿಲ್ಲಿಸಲ್ಪಟ್ಟವು; ಅವು ಹಿಂದೂಸ್ಥಾನಕ್ಕೆ ಸಿಗಬೇಕೆಂದು ಕೇಳಿದ್ದಲ್ಲಿ ಅಲ್ಲಗಳೆಯೋಣವಾಯಿತು. ಈ ಸಿಸಿಲರ್ಹೋಡಸರ ವಿಷಯದ ಒಂದೆರಡು ಮಾತುಗಳು ವಾಚಕರಿಗೆ ತಿಳಿದಿರುವುದು ಒಳ್ಳೇದು. ಇವರು ಕೋಟ್ಯಧೀಶರಾದ ಇಂಗ್ಲಂಡದ ಮುತ್ಸದ್ದಿಗಳಾಗಿದ್ದರು. ಬ್ರಿಟಿಷ್ ಸಾಮ್ರಾಜ್ಯಾಭಿಮಾನವು ಇವರಲ್ಲಿ ನಖಶಿಖಾಂತ ತುಂಬಿಹೋಗಿತ್ತು. ಬ್ರಿಟಿಷ್ ಸಾಮ್ರಾಜ್ಯದ ವಿಸ್ತಾರ, ತರಗತಿ, ಕೀರ್ತಿ, ಲೌಕಿಕ ಇವು ಹ್ಯಾಗೆ ದಿನೇದಿನೇ ಹೆಚ್ಚಾದಾವು ಇದೇ ಆಲೋಚನೆಯು ಯಾವಾಗಲೂ ಅವರ ತಲೆಯಲ್ಲಿರುತ್ತಿತ್ತು. ಈ ಹ್ರೋಡಸ ದೊರೆಗಳ ಪ್ರೇರಣೆಯಿಂದಲೂ, ಸಾಹಾಯ್ಯದಿಂದಲೂ ಟ್ರಾನ್ಸವಾಲಿನ ಉತ್ತರದಿಕ್ಕಿನ ಪ್ರದೇಶವನ್ನು ಜಯಿಸಿ ಬ್ರಿಟಿಷರು ಸಾಮ್ರಾಜ್ಯಕ್ಕೆ ಸೇರಿಸಿ ಸ. ಹ್ರೋಡಸ ದೊರೆಗಳ ಸಾಮ್ರಾಜ್ಯಾಭಿಮಾನದ ಸ್ಮಾರಕಾರ್ಥವಾಗಿ ಆ ಜಯಿಸಿದ ಪ್ರದೇಶಕ್ಕೆ "ಹ್ರೋಡೇಶಿಯಾ" ಎಂಬ ಹೆಸರನ್ನು ಕೊಟ್ಟಿರುವರು. ಈ ಹ್ರೋಡಸರು ತಮ್ಮ ಜೀವಮಾನದಲ್ಲಿಯೇ ಸಾಮ್ರಾಜ್ಯಾಭಿಮಾನದ ಇನ್ನೊಂದು ಕೃತ್ಯವನ್ನು ಮಾಡಿದರು. ಬ್ರಿಟಿಷ್ ಸಾಮ್ರಾಜ್ಯವು ಚಿರಸ್ಥಾಯಿಯಾಗುವಂತೆಯೂ ಅದಕ್ಕೆ ಯಾರು ಶತ್ರುಗಳು ಅಥವಾ ಕಂಟಕರು ಆಗದಂತೆಯೂ ತಮ್ಮ ಜೀವಮಾನದಲ್ಲಿ ಸಂಪಾದಿಸಿದ ಅಗಣಿತ ಸಂಪತ್ತಿಯಿಂದ ಮೇಲೆ ಹೇಳಿದಂತೆ ೮ ಲಕ್ಷ ರುಪಾಯಿಗಳನ್ನು ವಸಾಹತು, ಅಮೇರಿಕಾ, ಜರ್ಮನ ಈ ರಾಷ್ಟ್ರಗಳ ವಿದ್ಯಾರ್ಥಿಗಳು ತಮ್ಮಲ್ಲಿ ಏಕತ್ರ ಸೇರುವಂತೆ ಶಿಷ್ಯವೃತ್ತಿಗಳನ್ನು ಕಲ್ಪಿಸಿದ್ದರು. ಒಂದೇ ಘಂಟಿನ ಶಿಷ್ಯವೃತ್ತಿಯನ್ನು ಹೊಂದುವ ಒಬ್ಬ ವಸಾಹತೀಯನು, ಅಮೇರಿಕನನೂ ಮತ್ತು ಜರ್ಮನನು ಒಂದು ಕಡೆಯಲ್ಲಿ ಸೇರಿ ವಿದ್ಯಾವ್ಯಾಸಂಗ ಮಾಡುವುದರಿಂದ ಅವರ ಸ್ನೇಹಾಭಿವೃದ್ಧಿಯಾಗಿ ಅದು ಸಾಮ್ರಾಜ್ಯದ ದೃಢತ್ವಕ್ಕೆ ಕಾರಣವಾದೀತೆಂದು ಅವರ ಕಲ್ಪನೆಯಿತ್ತು. ಆದರೆ ಇದು ಎಷ್ಟರ ಮಟ್ಟಿಗೆ ಫಲಿಸಿತೆಂಬುವುದು ಇಂಗ್ಲಂಡದ ವಿರುದ್ಧವಾಗಿ ಯುದ್ಧಕ್ಕೆ ನಿಂತ ಜರ್ಮನೇ ಜಗತ್ತಿಗೆ ಈಗ ಹೇಳುತ್ತಿದೆ! ಇರಲಿ. ಹ್ರೋಡಸ ದೊರೆಗಳು ಮೇಲಿನ ಶಿಷ್ಯವೃತ್ತಿಗಳನ್ನು ಏರ್ಪಡಿಸುವಾಗ ಹಿಂದುಸ್ಥಾನದ ಹೆಸರು ಪಟ್ಟಿಯಲ್ಲಿ ಬೀಳಲಿಲ್ಲ. ಆಗ ಒಂದುವೇಳೆ ಸಮತ್ವದ ತತ್ವವು ಅಷ್ಟೊಂದು ಜಾರಿಯಲ್ಲಿ ಇದ್ದಿಲ್ಲೆಂದು ಹೇಳಬಹುದು. ಈಗಾದರೆ "ನೀವು ನಮ್ಮ ಸಾಮ್ರಾಜ್ಯಕ್ಕೇ ಸೇರಿದವರು. ನಾವು ನೀವು ಒಂದೇ." ಎಂಬ ಉಪದೇಶವು ಜಾರಿಗೆ ಬಂದಾಗ 'ಆ ಶಿಷ್ಯವೃತ್ತಿಗಳ ಪಟ್ಟಿಯಲ್ಲಿ ಹಿಂದುಸ್ಥಾನದ ಹೆಸರನ್ನು ಸೇರಿಸಿರಿ.' ಎಂದು ಹೇಳಿದರೆ ಅದಕ್ಕೆ ಕೊಟ್ಟ ಉತ್ತರವು ಬೇಸರಹುಟ್ಟಿಸುವಂಥಾದ್ದಾಗಿದೆ. ಇಷ್ಟರ ವರೆಗೆ ಯಾರ ಪ್ರಸನ್ನತೆಗಾಗಿ ಈ ಶಿಷ್ಯವೃತ್ತಿಗಳಲ್ಲಿ ಕೆಲವನ್ನು ವಿನಿಯೋಗಿಸುತ್ತಿದ್ದರೋ ಆ ಜರ್ಮನಿಯ ಅಂತರಂಗವು ಈಗಸ್ಪಷ್ಟವಾಗಿ ಗೊತ್ತಾಯಿತು; ಮತ್ತು ಕೂಡಲೆ ಅದನ್ನು ನಿಲ್ಲಿಸಬೇಕಾಯಿತು. ಇದು ವಿಹಿತವೇ. ಆದರೆ ಈ ರೀತಿಯಿಂದ ನಿಲ್ಲಿಸಲ್ಪಟ್ಟ ಶಿಷ್ಯವೃತ್ತಿಗಳನ್ನು ಬಡ ಹಿಂದುಸ್ಥಾನಕ್ಕೆ ಕೊಡಬಹುದಲ್ಲವೇ ಎಂದು ಕೇಳಿದ್ದಕ್ಕೆ ಪ್ರಧಾನ ಮಂತ್ರಿಗಳಾದ ಆಸ್‌ಕ್ವಿತ ದೊರೆಗಳು ಉತ್ತರ ಕೊಟ್ಟಿದ್ದೇನೆಂದರೆ, "ಸಾಮ್ರಾಜ್ಯದ ಯಾವ ಭಾಗಗಳಿಗೆ ಇಷ್ಟರವರೆಗೆ ಈ ಫಂಡಿನ ಉಪಯೋಗವು ಸಿಗುತ್ತಿದ್ದಿಲ್ಲವೋ ಅವುಗಳಿಗೆ ಈಗ ಅದನ್ನು ಕೊಡಬಹುದೆಂತ ನನಗೆ ಕಾಣುವುದಿಲ್ಲ." ಈ ಮಾತನ್ನು ಕೇಳಿ ಯಾರಿಗೆ ತಾನೆ ಸಂತೋಷವಾಗುವ ಹಾಗಿದೆ? ಹಿಂದೀ ಜನರು ಬ್ರಿಟಿಷರಿಗೆ ಪರಕೀಯರೋ? ಅವರು ಬ್ರಿಟಿಷ ಸಾಮ್ರಾಜ್ಯದ ನಾಗರೀಕರಲ್ಲವೋ? ಈ ಪ್ರಶ್ನೆಗಳಿಗೆ ನಾವು ಉತ್ತರಕೊಡುವುದಾದರೆ ಹಿಂದೀ ಜನರು ಪರಕೀಯರಲ್ಲ. ಬ್ರಿಟಿಷ ಸಾಮ್ರಾಜ್ಯದ ನಾಗರಿಕರೇ ಹೌದು. ಹೀಗಿರುವಾಗ ಮಿ. ಆಸ್ಕ್ವಿತ ದೊರೆಗಳು ಮಾತ್ರ ಮೇಲಿನಂತೆ ಉತ್ತರ ಕೊಡುವುದು ಸಮತ್ವ ಭಾವನೆಗೆ ತೊಡಕಲ್ಲವೇ? ಇದನ್ನು ಪ್ರಾಜ್ಞರಾದ ಬ್ರಿಟಿಷ್ ಮುತ್ಸದಿಗಳು ಆಲೋಚಿಸಬೇಕು.

ಮಹಾ ಕವಿಗಳ ಅರಸರು.

ಲೇಖಾಂಕ ೩.

ಕಾಲಿದಾಸನ ರಘುವಂಶದ ಅರಸರನ್ನು ನೋಡಿದ ಮೇಲೆ ಶಾಕುಂತಲದ ದುಷ್ಯಂತನನ್ನು ತಿಳಿದುಕೊಳ್ಳುವ ಕುತೂಹಲವು ಸಹಜವಾಗಿಯೇ ಉಂಟಾಗುತ್ತದೆ. ಕಾಲಿದಾಸನ ಅರಸರು ರಘುವಂಶದಲ್ಲಿ ಮಾತ್ರ ಉದಾರತತ್ವವಾದಿಗಳೂ, ಸಮದೃಷ್ಟಿಯುವರೂ ಮತ್ತು ಪ್ರಕೃತಿ ರಂಜನಪರರೂ ಆಗಿರುವರೋ, ಅವನ ಬೇರೆ ಅರಸರೂ ಕೂಡ ಹಾಗೆಯೇ ಇರುವರೋ ಎಂಬುದನ್ನು ಪರೀಕ್ಷಿಸ ಹೋದರೆ ಅವರೆಲ್ಲರೂ ಒಂದೇ ಅಚ್ಚಿನವರೆಂದು ಹೇಳಲು ಪ್ರತಿಬಂಧವೇನೂ ತೋರುವುದಿಲ್ಲ. ಈ ಮಾತಿಗೆ ದೃಷ್ಟಾಂತವಾಗಿ, ಕಾಲಿದಾಸನ ವಿಕ್ರಮೋರ್ವಶೀ, ಮಾಲವಿಕಾಗ್ನಿಮಿತ್ರ ಮೊದಲಾದ ಕಾಲ್ಪನಿಕ ನಾಟಕೀಯ ವಸ್ತುಗಳನ್ನು ಬಿಟ್ಟು ಶಾಕುಂತಲದ ದುಷ್ಯಂತನ 'ಮರ್ಜಿ'ಯು ಹ್ಯಾಗಿದೆಂಬುದನ್ನು ನೋಡೋಣ. ಅಗ್ನಿಮಿತ್ರ ಪ್ರಭೃತಿಯರಂತೆ ದುಷ್ಯಂತ ವ್ಯಕ್ತಿಯು ಕಾಲ್ಪನಿಕವಲ್ಲ. ದುಷ್ಯಂತನು ಪ್ರಾಚೀನ ಐತಿಹಾಸಿಕ ಪುರುಷನು. ಇವನ ಆಳಿಕೆಯು ಜನರಿಗೆ–ಪ್ರಜೆಗಳಿಗೆ ಸುಖಾವಹವಾಗಿತ್ತು. ಚಾತುರ್ವರ್ಣ್ಯ ಧರ್ಮಕ್ಕೆ ಅನುಸಾರವಾಗಿಯೇ ಇವರ ಶಾಸನ ಕ್ರಮವಿತ್ತು. ಗುರು-ಹಿರಿಯರಲ್ಲಿ ಅವನು ತುಂಬಾ ಪೂಜ್ಯಭಾವವನ್ನು ತೋರಿಸುತ್ತಿದ್ದನು; ನ್ಯಾಯನೀತಿಗಳಲ್ಲಿ ತತ್ಪರನಾಗಿದ್ದನು; ಪ್ರಜಾಹಿತದಲ್ಲಿ ಸರ್ವಸ್ವವನ್ನೂ ವೆಚ್ಚ ಮಾಡುತ್ತಿದ್ದನು.

ಕಾಲಿದಾಸನ ದುಷ್ಯಂತನು ಈ ಗುಣಗಳನ್ನು ಯಾವ ಯಾವ ಪ್ರಸಂಗಗಳಲ್ಲಿ ಹ್ಯಾಗೆ ಹ್ಯಾಗೆ ವ್ಯಕ್ತಗೊಳಿಸಿದ್ದಾನೆ; ಇದನ್ನು ಈಗ ವಿಮರ್ಶಿಸೋಣ. ಒಮ್ಮೆ ಬೇಟೆಗಾಗಿ ಹೊರಟ ದುಷ್ಯಂತನು ಒಂದು ಜಿಂಕೆಯ ಬೆನ್ನು ಹಿಡಿದು ಓಡುವಾಗ ಆ ಜಿಂಕೆಯೊಡನೆ ಅವನು ಕಣ್ವ ಋಷಿಯ ಆಶ್ರಮದಲ್ಲಿ ಪ್ರವೇಶಿಸಿದನು. ಅವನು ಪ್ರವೇಶಿಸಿದಾಗ ಈಗಿನ ಮಾತುಗಳಿಂದ ಹೇಳುವುದಾದರೆ ರಿಸೆಪ್ಶನ್ ಕಮಿಟಿಯ ಎಂದರೆ ಸ್ವಾಗತ ಮಂಡಲದ ಅಧ್ಯಕ್ಷಸ್ಥಾನದಲ್ಲಿ ಕುಮಾರಿಕಾ ಶಕುಂತಲೆಯು ಇದ್ದಳು. ಅವಳು ಅರಸನನ್ನು ಸ್ವಾಗತೀಕರಿಸಿದಳು. ಅವಳ ಶೀಲ, ವಿನಯ, ಲಾವಣ್ಯ ಇವುಗಳಿಂದ ಅವಳಲ್ಲಿ ದುಷ್ಯಂತನ ಪ್ರೇಮವಾಯಿತು. ಶಕುಂತಲೆಯ ಸಖಿಗಳಿಂದ ಅವಳ ಜನ್ಮವೃತ್ತವನ್ನು ಅರಸನು ತಿಳಿದುಕೊಳ್ಳುವಾಗ ಆಶ್ರಮದಲ್ಲಿ ಉಂಟಾದ ಗಲಿಬಿಲಿಯನ್ನು ಕೇಳಿ ಶಕುಂತಲೆಯು ಸಖಿಗಳೊಡನೆ ಅತ್ತ ಹೊರಟು ಹೋದಳು. ಅರಸನು ಇತ್ತ ತನ್ನ ಡೇರೆಗೆ ಬಂದನು. ಆದರೆ ಅವನ ಮನಸ್ಸು ಶಕುಂತಲೆಯಲ್ಲಿ ಮಗ್ನವಾಗಿಯೇ ಇತ್ತು. ತನ್ನ ಸ್ನೇಹಿತನಾದ ವಿದೂಷಕನೊಡನೆ ಆಶ್ರಮದಲ್ಲಿ ನಡೆದ ಸಂಗತಿಗಳನ್ನೆಲ್ಲ ಹೇಳಿ ಶಕುಂತಲೆಯನ್ನು ವರ್ಣಿಸಿ 'ಒಮ್ಮೆಯಾದರೂ ಆ ಆಶ್ರಮದಲ್ಲಿಯೇ ನಿಂತುಕೊಳ್ಳುವಂತೆ ಯಾವ ಉಪಾಯವಿದೆ, ಯಾವ ನಿಮಿತ್ತವಿದೆ ಎಂದು ಅರಸನು ಕೇಳಿದ್ದಕ್ಕೆ ವಿದೂಷಕನು ಥಟ್ಟನೆ ಹೇಳುತ್ತಾನೆ:—"ಅರಸನಾದ ನಿನಗೆ ಇನ್ನೊಂದು ನಿಮಿತ್ತ ಬೇಕೆ? ನೀನು ಅರಸನು; ಆಶ್ರಮವಾಸಿಗಳೆಲ್ಲರು ನಿನ್ನ ಪ್ರಜೆಗಳು. ಅವರು ಅರಸನಿಗೆ ಸಲ್ಲಿಸಬೇಕಾದ ನೀವಾರ ಧಾನ್ಯದ ಆರನೇ ಭಾಗದ ಕಂದಾಯವನ್ನು ನೀನು ಕೇಳಬಹುದಲ್ಲವೇ? ಸುಲಭವಾದ ಈ ಉಪಾಯವಿರುವಾಗ ಆಶ್ರಮದಲ್ಲಿ ಇನ್ನೊಮ್ಮೆ ಪ್ರವೇಶಿಸಲು ಬೇರೊಂದು ಉಪಾಯವೇಕೆ?" ದುಷ್ಯಂತನು ವಿದೂಷಕನ ಈ ಮೂರ್ಖತ್ವದ ಉಪಾಯಕ್ಕೆ ಮೆಚ್ಚಲಿಲ್ಲ. ಅವನು ಕೂಡಲೆ ತನ್ನೀ ಸ್ನೇಹಿತನ ಕಣ್ಣಿಗೆ ಅಂಜನ ಹಾಕಿದನು. ಮೂರ್ಖನೇ, ಸಾಮಾನ್ಯರಂತೆ ತಾಪಸರಿಂದ ಧಾನ್ಯಭಾಗವನ್ನು ನಾವು ಕೇಳುವುದಿಲ್ಲ. ಚಾತುರ್ವರ್ಣ್ಯದ ಪ್ರಜೆಗಳು ಕೊಡುವ ಧಾನ್ಯರೂಪವಾದ ಕರಭಾರವು ಕ್ಷಣಿಕವಾದುದು. ಕಬ್ಬಿನಿಂದ ರಸವನ್ನು ಹಿಂಡುವಂತೆ ನಾವು (ದುಷ್ಯಂತನು ಹೇಳುವ ಮಾತು) ಪ್ರಜೆಗಳಿಂದ ಎಷ್ಟು ಸಂಪತ್ತನ್ನು ಎಳೆದರೂ ಅದು ನಿಲ್ಲುವುದಿಲ್ಲ. "ಯದುತ್ತಿಷ್ಠತಿ ವರ್ಣೇಭ್ಯೋ ನೃಪಾಣಾಂ ಕ್ಷಯಿ ತತ್ಫಲಮ್ | ತಪಃ ಷಡ್ಭಾಗಮಕ್ಷಯ್ಯಂ ದದತ್ಯಾರಣ್ಯಕಾ ಹಿನಃ" ಸಾಮಾನ್ಯ ಪ್ರಜೆಗಳಿಂದ ಬರುವ ಕ್ಷಣಿಕ ಫಲದಂತೆ ತಾಪಸರಿಂದಲೂ ಧಾನ್ಯವನ್ನೇ ತಕ್ಕೊಂಡರೆ ಆ ನಶ್ವರ ಧಾನ್ಯದಿಂದ ನಾವೇನು ಮಾಡುವುದು? ಆದುದರಿಂದ ಅವರು ತಮ್ಮ ಅಕ್ಷಯ್ಯವಾದ ತಪಸ್ಸಿನ ಆರನೇ ಭಾಗವನ್ನು ನಮಗೆ ಕೊಡುವರು. ಅದಕ್ಕಿಂತಲೂ ಶ್ರೇಷ್ಠವಾದುದು ಇನ್ನಾವುದಿದೆ?

ದುಷ್ಯಂತನ ಈ ಮಾತುಗಳನ್ನು ಮನಸಾ ಆಲೋಚಿಸಿದರೆ ಅವನಿಗೆ ಪೂಜ್ಯರ ವಿಷಯದಲ್ಲಿ ಎಷ್ಟು ಆದರವೂ, ಮನ್ನಣೆಯೂ ಮತ್ತು ವಿವೇಕವೂ ಇದ್ದವೆಂಬುದು ಗೊತ್ತಾಗುತ್ತದೆ. ದುಷ್ಯಂತನ ಈ ಗುಣಗಳೊಡನೆಯೇ ಅವನ ನ್ಯಾಯದಕ್ಷತೆಯನ್ನು ಕೂಡ ವಾಚಕರು ಆಸ್ವಾದಿಸಬಹುದಾಗಿದೆ. ಶಾಕುಂತಲ ನಾಟಕದ ಆರನೇ ಅಂಕದಲ್ಲಿ ಶಕುಂತಲೆಯ ವಿಯೋಗದಿಂದ ಖಿನ್ನನಾದ ದುಷ್ಯಂತನು ಅವಳ ಚಿತ್ರದಿಂದ ವಿನೋದಿಸುತ್ತಿರಲು ಪ್ರತಿಹಾರಿಯು ಅಮಾತ್ಯನ ಒಂದು ಪತ್ರವನ್ನು ತಂದುಕೊಡುವನು. ಆ ಪತ್ರದಲ್ಲಿ ಒಬ್ಬ ಸಾಹುಕಾರನು ಹಡಗದ ಅಪಘಡದಲ್ಲಿ ಬಿದ್ದು ಮೃತಪಟ್ಟಿರುವನೆಂತಲೂ, ಅವನಿಗೆ ಸಂತತಿಯಿಲ್ಲೆಂತಲೂ, ಅವನ ಆಸ್ತಿಯು ಸರಕಾರಕ್ಕೆ ಸೇರಿಸತಕ್ಕದ್ದೆಂತಲೂ ಬರೆದಿತ್ತು. ಪ್ರಧಾನಿಯ ಕಡೆಯಿಂದ ಬಂದ ಈ ಪತ್ರವನ್ನು ನೋಡಿ ಅರಸನು "ಈ ಮೂಲತೀರ್ಪೇ ಕಾಯಮ್" ಎಂದು ಹೇಳಬಹುದಿತ್ತು. ಆದರೆ ಕಾಲಿದಾಸನ ದುಷ್ಯಂತನು ಪ್ರಜಾವತ್ಸಲನು; ಅನ್ಯಾಯಕ್ಕೆ ಹೆದರಿದವನು; ಪರಲೋಕದ ಭೀತಿಯುಳ್ಳವನು. "ಮೂಲತೀರ್ಪೇ ಕಾಯಂ" ಎಂದು ಅವನು ನುಡಿಯಲಿಲ್ಲ. ಆ ವ್ಯಾಪಾರಿಯು ಶ್ರೀಮಂತ್ರನಿದ್ದ ಕಾರಣ ಅವನಿಗೆ ಅನೇಕ ಹೆಂಡಂದಿರಿರಬಹುದು. ಒಂದುವೇಳೆ ಆ ಹೆಂಡರಲ್ಲಿ ಯಾರಾದರೂ ಗರ್ಭಿಣಿ ಇದ್ದಾಳೊ ಎಂದು ತಿಳಿದುಕೊಳ್ಳಲು ದುಷ್ಯಂತನು ಹೇಳಿದನು. ಆ ವ್ಯಾಪಾರಿಯ ಹೆಂಡಂದಿರಲ್ಲಿ ಒಬ್ಬಳು ಗರ್ಭಿಣಿ ಇದ್ದ ಸಂಗತಿಯು ಆ ಪ್ರತಿಹಾರಿಗೆ ಗೊತ್ತೇ ಇತ್ತು. ಅವನು ಅದನ್ನು ತಿಳಿಸಲು ಅರಸನು ಆ ಸಾಹುಕಾರನ ಆಸ್ತಿಗೆ ಗರ್ಭವೇ "ಹಕ್ಕುದಾರ"ವೆಂದು ತೀರ್ಮಾನಿಸಿದನು. ಇರಲಿ. ಈ ತೀರ್ಮಾನವು ಅಷ್ಟೊಂದು ಆಶ್ಚರ್ಯಕರವಲ್ಲೆಂಬ ಸಂಗತಿಯು ನಮಗೂ ಗೊತ್ತೇ ಇದೆ. ಇದರಲ್ಲಿ ಶೋಧಕಾಧಿಕಾರಿಗಳ ಬುದ್ಧಿಚಾತುರ್ಯವಿಲ್ಲ; ಸಮಬಲವಾದ ಕಾಯಿದೆಗಳ ಅನ್ಯೋನ್ಯ ಒದ್ದಾಟವಿಲ್ಲ; ಶಬ್ದಗಳ ಅರ್ಥದ ಚಿಕಿತ್ಸೆಯಿಲ್ಲ; ಅದು ಇಲ್ಲ; ಇದು ಇಲ್ಲ, ಯಾವುದೂ ಇಲ್ಲ. ಆದರೂ ನಾವು ಈ ದೃಷ್ಟಾಂತಕ್ಕೆ ಇಷ್ಟು ಮಹತ್ವವನ್ನು ಯಾಕೆ ಕೊಟ್ಟಿದ್ದೇವೆಂಬುದರ ಮರ್ಮವು ವಾಚಕರಿಗೆ ತಿಳಿದೇ ಇರಬಹುದು. ಏನೆಂದರೆ, ಅರಸರಲ್ಲಿ ನ್ಯಾಯಬುದ್ಧಿಯು ಸದಾಸರ್ವದಾ ಜಾಗ್ರತವಾಗಿರಬೇಕೆಂಬುದು ಪ್ರಾಚೀನ ಮಹಾ ಕವಿಗಳ ಅಭಿಪ್ರಾಯವಿತ್ತು.

ಮಹಾಕವಿಯ ದುಷ್ಯಂತನ ನ್ಯಾಯಬುದ್ಧಿ ಇಲ್ಲವೆ ರಾಜ್ಯಶಾಸನ ದಕ್ಷತೆಯನ್ನು ಕುರಿತು ಆಲೋಚಿಸುವಾಗ ಶಕುಂತಲೆಯ ಸಖಿಗಳಾದ ಅನಸೂಯಾ ಮತ್ತು ಪ್ರಿಯಂವದಾ ಈ ಇಬ್ಬರ—ಶಕುಂತಲೆಯು ಭ್ರಮರಕ್ಕೆ ಹೆದರಿ 'ಕಾಪಾಡಿರಿ, ಕಾಪಾಡಿರಿ' ಎಂದು ಹೇಳಿದಾಗ—ಕಾಪಾಡಲು ನಾವಾರು? ರಾಜನಲ್ಲವೇ ರಕ್ಷಿಸಬೇಕಾದುದು? ಎಂಬೀ ಮಾತನ್ನು ಲಕ್ಷ್ಯದಲ್ಲಿ ತರುವಹಾಗಿದೆ. ತಪೋವನವೆಂದರೆ ಕಾಡಿನಲ್ಲಿರುವುದು. ಆ ಕಾಡಿನೊಳಗಿನ ತಪೋವನದಲ್ಲಿಯ ಮುಗ್ಧ ಬಾಲಿಕೆಯರ ಬಾಯಿಯಿಂದ ರಾಜಕರ್ತವ್ಯವು ಯಾವುದು ಎಂಬುದನ್ನು ಹೇಳಿಸಿ ಕವಿ ಕಾಲಿದಾಸನು ಪ್ರಜಾರಂಜಕ ಅರಸನ ಹೆಸರೂ ನೆನಪೂ ಹಳ್ಳಿಯವರಿಗೆ ಕೂಡ ಅಪರಿಚಿತವಿರದು ಎಂಬದನ್ನು ತೋರಿಸಿರುವನು. ಒಂದು ಚಿಕ್ಕ ಅಪರಾಧಕ್ಕೆ ಹಳ್ಳಿಯಲ್ಲಿ ಅರಸನ ಹೆಸರು ಬರಬೇಕಾದರೆ ಆ ಅರಸನು ಎಷ್ಟು ಲೋಕಪ್ರಿಯನಾಗಿರಬೇಕು? ಇಷ್ಟಲ್ಲದೆ, ಹಳ್ಳಿಯಲ್ಲಿ ಸಹ ಆದ ಯಾವ ಅಪರಾಧವೂ ಅರಸನ ಗೋಚರಕ್ಕೆ ಬಾರದೆ ಇರುತ್ತಿದ್ದಿಲ್ಲ. ಈ ಮಾತನ್ನೂ ಕವಿಯು ಸೂಚಿಸಿದ್ದಾನೆ. ಈಗಿನ ಕಾಲದಲ್ಲಿ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ನಡೆಯತಕ್ಕ ಖೂನಿಗಳಂತಹ ಮಹತ್ತಾದ ಪಾಪಗಳು ಎಷ್ಟೋ ಸಾರಿ ಅಡಗಿಹೋಗುತ್ತವೆ; ಅವುಗಳನ್ನು ಶೋಧಿಸಲು ಶೋಧಕಾಧಿಕಾರಿಗಳಿಗೆ ಒಂದೊಂದು ವೇಳೆ ಭಗೀರಥ ಪ್ರಯತ್ನವು ಬೀಳುತ್ತದೆ. ದೊಡ್ಡ ಪಟ್ಟಣಗಳ ಸ್ಥಿತಿಯೇ ಹೀಗಿರುವಾಗ ಹಳ್ಳಿಗಳ ವರ್ತಮಾನವನ್ನು ವಿವರಿಸುವುದು ಉಚಿತವೇ ಅಲ್ಲ. ಹಲವು ಸಾರಿ ಹಳ್ಳಿಗಳ ಗೊಡವೆಯು ಪಟ್ಟಣಗಳಿಗಿರುವುದಿಲ್ಲ. ಪಟ್ಟಣಗಳ ನೆನಪು ಹಳ್ಳಿಗಳಿಗೆ ಬರುವುದಿಲ್ಲ. ಈಗಿನ ಪರಿಸ್ಥಿತಿಯು ಇದು; ಆದರೆ ಕಾಲಿದಾಸನು ತೋರಿಸಿರುವ ಸ್ಥಿತಿಯು ನಿಜವಾಗಿ ಎಷ್ಟು ಸ್ಪೃಹಣೀಯವಾಗಿದೆ! ಈಗಿನ ಪರಿಸ್ಥಿತಿಯನ್ನು ನೋಡುವುದು ನಮ್ಮ ಪ್ರಸ್ತುತ ಉದ್ದೇಶವಲ್ಲ. ಇರಲಿ.

ಈ ಅಪ್ರಾಸಂಗಿಕ ಸಂಗತಿಯನ್ನು ಹೇಳುತ್ತ ಹೇಳುತ್ತ ಬಂದು ಪ್ರಾಸಂಗಿಕ ಸಂಗತಿಯು ಬಿಟ್ಟುಹೋಯಿತು. ಈ ಮಹಾಕವಿಯ ದುಷ್ಯಂತನು ಗುರುಹಿರಿಯರಲ್ಲಿ ಭಕ್ತಿ ಇರುವವನೂ, ನ್ಯಾಯಪ್ರಿಯನೂ ಆಗಿದ್ದಂತೆ ಲೋಕಮತಕ್ಕೆ ಬಹುಮಾನ ಕೊಡುವವನೂ ಇದ್ದನು. ಮಾತ್ರವಲ್ಲ, ಇವನ ಆಳಿಕೆಯಲ್ಲಿ ಜನರಿಗೆ ಭಾಷಣ ಸ್ವಾತಂತ್ರ್ಯವೂ ಬೇಕಷ್ಟು ಇತ್ತೆಂದು ಹೇಳಬಹುದಾಗಿದೆ. ನಾವು ಮೇಲೆಯೇ ತೋರಿಸಿದಂತೆ ಅರಸನು ಒಂದು ಜಿಂಕೆಯನ್ನು ಬೆನ್ನಟ್ಟಿಕೊಂಡೇ ಬರುವಾಗ ಜಿಂಕೆಯೂ ಅವನೂ ಋಷ್ಯಾಶ್ರಮದ ಸಮೀಪ ಬರಲು ಮೂವರು ಋಷಿಕುಮಾರರು ಬಂದು ಅರಸನಿಗೆ ಆ ಜಿಂಕೆಯನ್ನು ಕೊಲ್ಲಕೂಡದೆಂದು ಹೇಳುತ್ತಾರೆ. "ಅರಸನೇ ಇದು ಆಶ್ರಮದ ಮೃಗವು; ಇದನ್ನು ಕೊಲ್ಲಕೂಡದು. ಬಿಲ್ಲಿಗೆ ಜೋಡಿಸಿದ ಬಾಣವನ್ನು ಹಿಂದಕ್ಕೆ ತೆಕ್ಕೊಳ್ಳು. ನಿಮ್ಮ ಕೈಯಲ್ಲಿ ಶಸ್ತ್ರವಿರುವುದು ಪೀಡಿತರ ರಕ್ಷಣೆಗಾಗಿ ಅಲ್ಲದೆ ನಿರಪರಾಧಿಗಳನ್ನು ಕೊಲ್ಲಲು ಅಲ್ಲ." ಮುನಿಕುಮಾರನ ಈ ಮಾತುಗಳಿಂದ ದುಷ್ಯಂತನಿಗೆ ಸಿಟ್ಟುಬರಲಿಲ್ಲ. ಅವನು ಕೂಡಲೆ ಬಾಣವನ್ನು ಹಿಂದಕ್ಕೆಳೆದನು. ಭಾಷಣ ಸ್ವಾತಂತ್ರ್ಯವೆಂಬು

ದಿದೇ. ಅರಸನಿಗೆ ಅದು ಅಪ್ರಿಯವಿದ್ದಿಲ್ಲೆಂದು ಕಂಡುಬರುತ್ತದೆ. ಅಥವಾ, ಅರಸನೆಂದರೆ ಒಂದು ಭಯಸ್ಥಾನವು; ಅಲ್ಲಿ ಅವನನ್ನು ಹೊಗಳುವುದಲ್ಲದೆ ಅವನ ಬಾಲಿಶ ಕೃತ್ಯವನ್ನು ಯೋಗ್ಯ ಶಬ್ದಗಳಿಂದ ಕೂಡ ನಿಷೇಧಿಸಕೂಡದೆಂಬೀ ಮತದವನು ಕಾಲಿದಾಸನು ಖಂಡಿತ ಇದ್ದಿಲ್ಲ.

"ರಾಜಾಪ್ರಕೃತಿ ರಂಜನಾತ್" ಎಂಬ ರಘುವಂಶದೊಳಗಿನ ತನ್ನ ಸೂತ್ರವನ್ನೇ ಕಾಲಿದಾಸನು ಶಾಕುಂತಲದಲ್ಲಿ ಬಹು ಚೆನ್ನಾಗಿ ವಿವರಿಸಿರುವನು. ಕವಿಯು ಐದನೇ ಅಂಕದಲ್ಲಿ ಕಂಚುಕಿಯ ಮುಖದಿಂದ ದುಷ್ಯಂತನ 'ಲೋಕತಂತ್ರಾಧಿಕಾರ'ಕ್ಕೆ ಸ್ವಲ್ಪವೂ ವಿಶ್ರಾಂತಿಯಿಲ್ಲವೆಂಬುದಾಗಿ ಸೂಚಿಸಿ ಸೂರ್ಯ, ವಾಯು, ಶೇಷ ಇವರಂತೆ ಅರಸನೂ ಯಾವಾಗಲೂ ಲೋಕಕಾರ್ಯಮಗ್ನನಾಗಿಯೇ ಇರುವನೆಂಬ ಸೋದಾಹರಣ ದೃಷ್ಟಾಂತವನ್ನು ತೋರಿಸಿದ್ದಾನೆ. ಮುಂದೆ ಕವಿಯು ಇದೇ ಅಂಕದಲ್ಲಿ ರಾಜಕರ್ತವ್ಯಗಳನ್ನು ವಿಶದವಾಗಿ ವರ್ಣಿಸಿರುವನು. ಅದರ ತಾತ್ಪರ್ಯವನ್ನೇ ಹೇಳುವುದಕ್ಕಿಂತ ಕವಿಯ ಆ ಮಾತುಗಳನ್ನು ಕೊಡುವುದು ಕೊಂಚ ಉದ್ದವಾದರೂ ಒಳ್ಳೇದೆಂದು ತೋರುತ್ತದೆ.

> "ಸ್ವಸುಖನಿರಭಿಲಾಷಃ ಖಿದ್ಯಸೇ ಲೋಕಹೇತೋಃ।
> ಪ್ರತಿದಿನಮಥವಾ ತೇ ವೃತ್ತಿರೇವಂ ವಿಧೈವ ॥
> ಅನುಭವತಿ ಹಿ ಮೂರ್ಧ್ನಾ ಪಾದಪಸ್ತೀವ್ರಮುಷ್ಣಂ
> ಶಮಯತಿ ಪರಿತಾಪಂ ಛಾಯಯಾ ಸಂಶ್ರಿತಾನಾಮ್ ॥"

(ದುಷ್ಯಂತನನ್ನು ಕುರಿತು ಹೇಳುವ ಮಾತು). ರಾಜನೇ, ನೀನು ನಿನ್ನ ಸ್ವಂತ ಸುಖದ ವಿಷಯದಲ್ಲಿ ನಿಃಸ್ಪೃಹನಾಗಿ ಲೋಕಕಲ್ಯಾಣಕ್ಕಾಗಿ ನಿರಂತರ ಪರಿತಾಪವನ್ನು ಹೊಂದುತ್ತಿದ್ದಿ. ಅಥವಾ ನಿನ್ನಂತಹನಿಗೆ ಇದು ಸಹಜವೇ ಸರಿ. ಆಶ್ರಿತರಿಗೆ ನೆರಳು ಕೊಟ್ಟು ಅವರನ್ನು ಸಂತೋಷಪಡಿಸುವ ಮರವು ತಾನು ತೀವ್ರವಾದ ಬಿಸಿಲನ್ನು ಸಹಿಸುವುದಲ್ಲವೆ? ಹಾಗೆಯೇ ಮುಂದೆ 'ರಾಜನೇ ದುರ್ಮಾರ್ಗದಲ್ಲಿ ಪ್ರವರ್ತಿಸಿದವರನ್ನು ನಿಗ್ರಹಿಸುವಿ; ಜನರ ಪರಸ್ಪರ ಕಲಹವನ್ನು ಶಾಂತಪಡಿಸುವಿ; ಅವರ ರಕ್ಷಣೆಯನ್ನು ಮಾಡುವಿ. ಹೆಚ್ಚು ಹೇಳುವುದೇನು? ಸಂಪತ್ತು ಹೆಚ್ಚು ಇರುವಾಗ ನೆಂಟರು ಬಂದು ಸಾಹಾಯ್ಯ ಮಾಡುವದು ನಿಜವು; ಆದರೆ

> "ತ್ವಯಿ ತು ಪರಿಸಮಾಪ್ತಂ ಬಂಧುಕೃತ್ಯಂ ಪ್ರಜಾನಾಮ್"

ಪ್ರಜೆಗಳಲ್ಲಿ ಐಶ್ವರ್ಯವಿರಲಿ, ಇಲ್ಲದೆ ಇರಲಿ, ಅವರ ಬಂಧುಕೃತ್ಯಗಳು ನಿನ್ನಲ್ಲಿಯೇ ಮುಗಿದಿವೆ; ಅವರ ಆಪದ್‍ಬಂಧುವು ನೀನೇ ಸರಿ.

ಕಾಲಿದಾಸನ ಅರಸರು ಲೋಕಹಿತದಲ್ಲಿ ಎಷ್ಟು ತತ್ಪರರಾಗಿದ್ದರೆಂಬುವುದರ ಕಲ್ಪನೆ ಬರಬೇಕಾದರೆ ಕಾಲಿದಾಸನ ಶಬ್ದಗಳಿಂದಲೇ ಹುಟ್ಟಿಸುವುದು ಉಚಿತವು. ಆದುದರಿಂದ ವಾಚಕರಿಗೆ ಒಂದುವೇಳೆ ಬೇಸರ ಬಂದರೂ ಅದನ್ನು ಮನಸ್ಸಿಗೆ ತಾರದೆ ಕವಿಯ ಮಾತುಗಳನ್ನೂ ಸಂಸ್ಕೃತಾನಭಿಜ್ಞರಿಗಾಗಿ ಅವುಗಳ ತಾತ್ಪರ್ಯವನ್ನೂ ಮೇಲೆ ಕೊಟ್ಟಿದ್ದೇವೆ. ಹಿಂದಿನ ರಘುವಂಶದೊಳಗಿನ ಮತ್ತು ಇಲ್ಲಿಯ ಶಾಕುಂತಲದೊಳಗಿನ ಕಾಲಿದಾಸನ ಅರಸರೆಲ್ಲರು ಇಂಗ್ಲಂಡದೊಳಗಿನ ಪಾರ್ಲಿಮೆಂಟಿನ ಲಿಬರಲ್ ಪಕ್ಷದ ಮೆಂಬರರಂತೆ ಉದಾರಮತವಾದಿಗಳೂ, ಲೋಕಹಿತತತ್ಪರರೂ, ಪ್ರಗತಿಪ್ರಿಯರೂ ಆಗಿದ್ದರೆಂಬುದು ಸಾರಾಂಶವಾಗಿ ಹೇಳಬಹುದು. ಪ್ರಜಾಹಿತದ ತತ್ವವು ಪಶ್ಚಿಮದಿಂದಲೇ ಇಲ್ಲಿಯವರಿಗೆ ಗೊತ್ತಾದುದೆಂದು ಕೆಲವರು ಅಜ್ಞಾನದಿಂದ ಘೋಷಿಸುತ್ತಿರುವರು. ಅಂಥವರು ಮೇಲಿನಂಥ ಗ್ರಂಥಗಳನ್ನು ಕೊಂಚ ಸೂಕ್ಷ್ಮಬುದ್ಧಿಯಿಂದ ಓದಿದರೆ ಇಲ್ಲಿ ಮೊದಲೇ ಯಾವ ಯಾವ ತತ್ವಗಳು ರೂಢಮೂಲವಾಗಿದ್ದವೆಂಬುದು ಸೂರ್ಯಪ್ರಕಾಶದಂತೆ ಸರಿಯಾಗಿ ಕಣ್ಣಿಗೆ ಹೊಳೆಯುವುದು. ಭಾರತ ರಾಮಾಯಣ ಮುಂತಾದರಲ್ಲಿ ಹೇಳಿದ ರಾಜನೀತಿ, ರಾಜ್ಯಪದ್ಧತಿ; ರಾಜಧರ್ಮ ಮುಂತಾದವುಗಳನ್ನು ತಿಳಿದುಕೊಳ್ಳುವಷ್ಟು, ಆ ಗ್ರಂಥಗಳು ದೊಡ್ಡದಾದ ಕಾರಣ, ಸಾಮರ್ಥ್ಯವಿಲ್ಲದವರು ಮಹಾಕವಿಗಳ ಚಿಕ್ಕ ಚಿಕ್ಕ ಕಾವ್ಯಗಳನ್ನಾದರೂ, ಚಿಕಿತ್ಸಕ ದೃಷ್ಟಿಯಿಂದ ಓದಿದರೆ ಅವರ ಅಜ್ಞಾನವೂ ಭ್ರಮವೂ ಹೋಗಬಹುದು. ರಾಜಕಾರಣದ ಸಂಗತಿ ಮಾತ್ರವಲ್ಲ, ಬೇರೆ ವಿಷಯದಲ್ಲಿಯೂ ಉದಾರವಾದ ಮತ್ತು ಸಮದೃಷ್ಟಿಯ ಹಾಗು ವಿಶ್ವಬಂಧುತ್ವದ ತತ್ವಗಳು ಇಲ್ಲಿ ಪಶ್ಚಿಮದಿಂದಲೇ ಬಂದವೆಂದು ಪಶ್ಚಿಮದ ಮಿತಿಮೀರಿ ಅಭಿಮಾನಪಟ್ಟು ವಾದಿಸುವವರಿಗೆ ನಾವು ಕೇಳುವುದೇನೆಂದರೆ, ಇಲ್ಲಿಯವರಿಗೆ ಮೊದಲು ಮೊದಲು ಕಾಲುಗಳಿಂದ ನಡಿಯಬೇಕು ಹ್ಯಾಗೆಂಬುದು ಕೂಡ ಗೊತ್ತಿರಲಿಕ್ಕಿಲ್ಲ, ಅಲ್ಲವೆ? ಇದಕ್ಕೂ ಪಶ್ಚಿಮ ಸೂರ್ಯೋದಯವೇ ಕಾರಣ! ಇಂಥ ಅಜ್ಞಾನದ ಮತ್ತು ಅಭಿಮಾನಶೂನ್ಯವಾದ ಹಾಗು ಅಪ್ರಯೋಜಕವಾದ ಮತಗಳನ್ನು ತಮ್ಮ ಹೃದಯದಲ್ಲಿ ಕಟ್ಟಿಕೊಳ್ಳುವವರು ಮೇಲಿನ ಗ್ರಂಥಗಳನ್ನು ಓದಬೇಕು; ಮತ್ತು ತಮ್ಮ ದುರ್ಮತಗಳನ್ನು ತ್ಯಜಿಸಬೇಕು. ಆದುದರಿಂದಲೇ ಕಾಲಿದಾಸನ ಒಂದೆರಡು ಗ್ರಂಥಗಳೊಳಗಿನ ಈ ವಿಷಯದ ಮಾತುಗಳನ್ನು ಕೊಟ್ಟಿದ್ದೇವೆ. ಇನ್ನು ಗತಲೇಖದಲ್ಲಿ ಹೇಳಿದ್ದಂತೆ ಭವಭೂತಿಯ ಆಲೋಚನೆಗಳನ್ನು ಕೊಡುವುದು ಕ್ರಮಪ್ರಾಪ್ತವು. ಆದರೆ ಆ ವಿಷಯವು ಬರುವ ಸಂಚಿಕೆಯಲ್ಲಿ ವಿಸ್ತಾರವಾಗಿ ವಿವರಿಸಲ್ಪಡುವುದು.

ಜ್ಞಾನದ ಮಿಠಾಯಿ.

(೯ನೇ ಪುಟ್ಟಣ)

ಜೂಜಾಟ !!

ಈ ಹೊತ್ತಾಗಲಿ ನಾಳೆಯಾಗಲಿ ಚವತಿ ಅಲ್ಲ, ಭಾದ್ರಪದ ನಾಲ್ಕನೇ ದಿವಸ ಚವತಿ, ಪಂಚಾಂಗದಲ್ಲಿ ಬರುವುದು ಹೀಗೆಯೇ, ಗಣಪಣ್ಣನ ಮೂರ್ತಿಯನ್ನು ತಂದು ಪೂಜಿಸುವುದೂ ಅಂದೇ! ಆದರೂ ಈಗಲೆ ಆಚೀಚೆ ನೋಡಿದರೆ ಇದು ಚವತಿಯ ಸಮಯವೆಂಬುದು ಚನ್ನಾಗಿ ಗೊತ್ತಾಗುತ್ತದೆ. ಮಾರ್ಕೇಟಿನಲ್ಲಿ ಚವತಿಯ ಸಮಯದಲ್ಲಿ ಬರತಕ್ಕ ಕಾಯಿಪಲ್ಲೆಗಳೆಲ್ಲ ಗಿರಾಕಿಗಳನ್ನು ಕರೆಯುತ್ತಿರುತ್ತವೆ, ಒಮ್ಮೆ ಗಿರಾಕಿಗಳ ಬಾಯಿಯ ಸ್ವರ್ಗದ್ವಾರದಿಂದ ಹೊಟ್ಟೆಯ ಇಂದ್ರಪದವನ್ನು ಪಡೆಯುವೆಂಬಭಿಪ್ರಾಯದಿಂದಲೋ ಏನೋ! ಬಂದರದಲ್ಲಿ ಪುನಃ ವ್ಯಾಪಾರವು ಪ್ರಾರಂಭವಾಗುವ ಚಿಹ್ನೆಗಳು ಅಲ್ಲಲ್ಲಿ ಕಾಣುತ್ತವೆ, ಮಳೆಗಾಲದಲ್ಲಿ ಆಕಾಶವು ಮಾತ್ರ ಯಾಕೆ ಕಪ್ಪು ಮೋಡಗಳ ಹೊದಿಕೆಯನ್ನು ಹೊದ್ದುಕೊಳ್ಳುವುದು, ತಾವೇನು ಅಪರಾಧ ಮಾಡಿದ್ದು, (ಬೂದಿಬಣ್ಣದ) ಮಡಲಿನ ಹೊದಿಕೆಯನ್ನಾದರೂ ತಾವು ಹೊದ್ದುಕೊಳ್ಳುವೆಂದು ಧರಿಸಿದ 'ಛಾವಣಿ'ಗಳನ್ನು ಮೆಲ್ಲ ಮೆಲ್ಲನೆ ದೂರಕ್ಕೆ ಸರಿಸಿ ಆ 'ಬಂಡಸಾಲೆ'ಗಳು ಸ್ಟೀಮರನ್ನು ನಿರೀಕ್ಷಿಸುತ್ತಿರುವಂತೆ ಕಿಡಿಕಿಗಳಿಂದ ಪಶ್ಚಿಮದ ಕಡೆಗೆ ನೋಡಹತ್ತಿದ್ದಾವೆ. ಅರ್ಧ ಮಳೆ ಅರ್ಧ ಬಿಸಿಲು ಇಂಥಾ ಚವತಿಯ ಸಮಯದಲ್ಲಿ ಆಗತಕ್ಕ ಹುಡುಗರ ಮೆಚುಗಳು ಮೈದಾನಿನಲ್ಲಿ ಎಂದಿನಿಂದಲೇ ಸುರು ಆಗಿದ್ದಾವೆ. ಇವೇ ಚವತಿಯ ಕುರುಹುಗಳೆಂತಲ್ಲ. ಈ ಸಂಗತಿಗಳಲ್ಲಿ ಕೃತ್ರಿಮತ್ವವೇನೂ ಇಲ್ಲ. ಜನರು ತಮ್ಮ ವ್ಯವಹಾರಗಳನ್ನು ಆಯಾ ಋತುಮಾನಗಳಿಗೆ ಸರಿಯಾಗಿ ನಡಿಸಿಕೊಂಡು ಹೋಗುವರು. ಆದುದರಿಂದ ಕಾಯಿಪಲ್ಯ ಬರುವುದಾಗಲಿ, ವ್ಯಾಪಾರದ ಪುನರುಜ್ಜೀವನೆಯಾಗಲಿ ಇಲ್ಲವೆ ಮೆಚುಗಳೇ ಆಗಲಿ ಬೇಕೆಂತ ಆಚರಿಸಲ್ಪಡುವವುಗಳಲ್ಲ, ಅಕೃತ್ರಿಮ ಸಂಗತಿಗಳು:

ಆದರೆ ಕೆಲವು ಚವತಿಯ ಸಮಯದ ಕೃತ್ರಿಮ ಸಂಗತಿಗಳಿವೆ, ಅವು ಚವತಿಯ ಆಗಮನವನ್ನು "ಕಟಾಕಟಾ" ಎಂಬ ಶಬ್ದದಿಂದ ಸೂಚಿಸುವವು. ಈ ಸಮಯದಲ್ಲಿ ಗ್ರಾಮ್ಯರ ಯಾವ ಕೇರಿಗೆ ಹೋದರೂ ಸಮ, ಅಲ್ಲಿ ನಿಮಗೆ ಕಟಾಕಟಾ ಧ್ವನಿಯು ಕೇಳಿಸುವುದು! ಯಾಕೆ? ಚವತಿ ಸಮಯ "ಕಾಯಿಕಟ್ಟು"ವರಂತೆ ಮತ್ತು ಆ ಚವತಿ ಸಮಯದಲ್ಲಿ ಅದನ್ನು ಯಾರೂ ಆಕ್ಷೇಪಿಸಕೂಡದಂತೆ!! ಕೆಲವು ಗ್ರಾಮ್ಯರು ತಂತಮ್ಮೊಳಗೆ "ಕಾಯಿಗಳನ್ನು ಕಟ್ಟಿ"ದರೆ ಯಾರು ಆಕ್ಷೇಪಿಸುವರು? ಕಾಯಿಯನ್ನು ಮಾತ್ರ ಕಟ್ಟಿ ಸೋತವನ ಕಾಯಿ ಮಾತ್ರ ಹೋದರೆ ಅದೊಂದು ಆಕ್ಷೇಪಕರವಲ್ಲೆಂತನ್ನಬಹುದು. ಅದರ ಸಂಗಡಲೇ ಹಣವನ್ನೂ ಕಟ್ಟಿ ಕಾಯಿಗಳಂತೆಯೇ ತಲೆ ಮಂಡೆಗಳನ್ನು ಕೂಡ ಒಡೆದುಕೊಳ್ಳುವ ಪ್ರಸಂಗವನ್ನು ತಂದಿದ್ದಾದರೆ "ಚವತಿ ಸಮಯ ಯಾರೂ ಆಕ್ಷೇಪಿಸಕೂಡದು' ಎಂದು ಹೇಳಿದರೆ ಆ ಮಾತು ಹೇಗೆ ತಾನೆ ಮಾನ್ಯವಾದೀತು? ಇದು ಬರೆ "ಕಾಯಿಕಟ್ಟುವುದೊ" ಜೂಜೊ?

"ಜೂಜೊ" ಎಂಬ ಮಾತು ನೆನಪಿಗೆ ಬಂದ ಕೂಡಲೇ ಅದರ ಎಷ್ಟೋ ಮರಿಗಳ ಸ್ಮರಣೆಯಾಗದೆ ಇರದು. "ಶಿಷ್ಟ"ರೆನ್ನಿಸಿಕೊಳ್ಳುವವರು ಯಾರಿಗೆ ಹೆಚ್ಚು ತಿಳಿಯದ ಹಾಗೆ ಕಾಲಿದಾಸನು ಕಂಕಳೊಳಗೆ ಒಂದು ಪುಸ್ತಕವನ್ನು ಬಚ್ಚಿಟ್ಟಂತೆ "ಚಿತ್ರಮಯ ಭಗವದ್ಗೀತೆ"ಯ ಆಟವನ್ನು ಕೋಣೆಯ ಬಾಗಿಲುಗಳನ್ನು ಹಚ್ಚಿಕೊಂಡು ಆಡಿ ಧನ ಮಾನಗಳನ್ನು ಕಳಕೊಳ್ಳುವುದು ಅತಿಶೋಚನೀಯವಿದ್ದರೂ ಕೆಲವರಿಗೊಂದು ಭೂಷಣವೇ ಆಗಿದೆ. ಇದು ಎಷ್ಟು ದೂಷಣಾಸ್ಪದವಾಗಿದ್ದರೂ ವರನ ಲಕ್ಷಣದಲ್ಲಿ ಕುಲೀನತೆ, ವಿದ್ಯೆ, ದರ್ಶನೀಯತೆ ಮೊದಲಾದ "ಕೊಲಿಫಿಕೇಶನ"ಗಳ ಸಂಗಡಲೇ ಇದೊಂದನ್ನೂ ಕೂಡ ಮುಂದಿನ ಧರ್ಮಶಾಸ್ತ್ರಕಾರರಿಗೆ ಸೇರಿಸಬೇಕಾದೀತು!

ಇದಂತು ಶಿಷ್ಟರ ವಿಷಯ. ಅವರಗೋಜಿಗೆ ಹೋಗುವಷ್ಟು ನಮ್ಮ ಈ ಮಿಠಾಯಿ ಅಂಗಡಿಯವರಿಗೆ ಸಾಮರ್ಥ್ಯವಿಲ್ಲ. ಆದರೆ ದುಷ್ಪರದೊಂದು ವಿಷಯವಿದೆ. ಅದು ಕೇವಲ ಕೃಷ್ಣಸರ್ಪವೇ ಸರಿ! ಅವರ ಗೋಜಿಗೆ ಯಾರು ಹೋದಾರು? ಬೆಳಗ್ಗೆ ಎದ್ದ ಕೂಡಲೆ ಬಾಯೊಳಗೆ ಒಂದು ಹೊಗೆಬಿಡುತ್ತಿರುವ ಬೀಡಿಯನ್ನು ಕಚ್ಚಿಕೊಂ

ನಾಲ್ಕಾರು ಪಾರಿವಾಳಗಳನ್ನು ಕೈಯಲ್ಲಿ ಹಿಡಿದುಕೊಂಡು ಮನೆ ಮನೆ, ಕೇರಿ ಕೇರಿ ತಿರುಗಾಡಿ ಆ ಪಾರಿವಾಳಗಳ ಗಗನ ಸಂಚಾರದಿಂದ ಸಂತೋಷಪಡುತ್ತ ಸೂರ್ಯಾಸ್ತದ ವರೆಗೆ ಭ್ರಮಿಸುವ ಯುವಕರನ್ನು ನೋಡಿದರೆ ಈ—ಯಾರಿವರು? ದುಷ್ಟರೋ, ಪೋಲಿಗಳೋ, ಕೇಡಿಗಳೋ? ಯಾವ ಹೆಸರೆಂಬುದು ಗೊತ್ತಾಗುವುದಿಲ್ಲ, ಎಂತು ಈ ಗ್ರಾಮಕಂಟಕರ ನೆರಳುಕೂಡ ಭಯಾಸ್ಪದವಾಗಿದೆ. ತನ್ಮಧ್ಯೇ ಇವರು ಬೇರೆಯವರ ಬಟ್ಟೆಗಳನ್ನೂ ಪಾತ್ರೆಗಳನ್ನೂ ಜಾರಿಸುವುದಂತೂ ಹೋಗಲಿ, ಮೇಲೆ ಹೇಳಿದಂತೆ ವಿಕೃತ ವೇಷದಿಂದ ಮೋಲ್ಮುಖವಾಡಿಕೊಂಡು ಒಂದು ವಿಕಾರವಾದ ಸ್ವರದಿಂದ ಪಕ್ಷಿಗಳಂತೆ ಕರ್ಣಕಠೋರವಾಗಿ ಕೂಗುತ್ತ ತಿರುಗಾಡುವ ಈ ಅಮಂಗಲ ಪಿಶಾಚ ವಿಗ್ರಹಗಳನ್ನು ಕೇಳುವವರು ಯಾರೂ ಇಲ್ಲವೇ? ಇದರಿಂದ ದೇಶದ ಹಾನಿಯೆಷ್ಟು? ಜುಜಿಬಿನಲ್ಲಿ ಇದರ ಪರ್ಯವಸಾನವೆಷ್ಟಾಗಿದೆ? ಎಷ್ಟು ಯುವಕರ ಆಯುಷ್ಯವೂ, ಶರೀರ ಸಾಮರ್ಥ್ಯವೂ, ರಕ್ತವೂ ಒಂದು ಕಾಸಿನ ಪ್ರಯೋಜನವಿಲ್ಲದೆ ಹಾಳಾಗಿ ಹೋಗುತ್ತವೆ? ಇಂಥವರನ್ನು ಸರಕಾರದವರು ದಂಡಿಸಬಾರದೆ? ಈ ದುಷ್ಟ ಪದ್ಧತಿಗಳನ್ನು ನಿಲ್ಲಿಸಿ ಅವರನ್ನು ಶಿಕ್ಷಿಸುವುದು ಸರಕಾರದ ಕರ್ತವ್ಯವಲ್ಲವೇ?

ಈ "ಜೂಜಾಟದ ಪೊಟ್ಟಣ"ವನ್ನು ನಾವು ಶ್ರೀಮಂದ ಸರಕಾರದವರಿಗೆ ಕಾಣಿಕೆಯಾಗಿ ಕೊಟ್ಟಿರುವೆವು. ಅವರು ಈ ಪೊಟ್ಟಣವನ್ನು ಚನ್ನಾಗಿ ಆಸ್ವದಿಸಬೇಕು.

ಪತ್ರ ವ್ಯ ವ ಹಾ ರ.

ಪುತ್ತೂರು ವರ್ಗದಾರರ ಸಂಘ.

ನಮ್ಮ ಜಿಲ್ಲೆಯ ವಕೀಲರಾದ ಮ। ಕೆ. ಸದಾಶಿವ ಭಟ್ಟರವರು ಮದ್ರಾಸು ಗವರ್ನರರವರ ನ್ಯಾಯವಿಧಾಯಕ ಸಭೆಯ ಮೆಂಬರರಾಗಿರುವ ಸಂಗತಿ ಎಲ್ಲರಿಗೂ ಗೊತ್ತಿರುವದಷ್ಟೆ. ಬರುವ ಅಕ್ಟೋಬರ ತಿಂಗಳಿನಲ್ಲಿ ನ್ಯಾಯವಿಧಾಯಕ ಸಭೆಯು ಜರಗುವದು. ಆದ್ದರಿಂದ ನ್ಯಾಯವಿಧಾಯಕ ಸಭೆಯಲ್ಲಿ ಸದರಿ ಮ। ಸದಾಶಿವ ಭಟ್ಟರ ಪರಿಮುಖ ವರ್ಗದಾರರ ನ ಇತರ ಸಂಕಷ್ಟಗಳ ಮಾತನ್ನು ಎತ್ತಿ ಅಂಥಾ ಸಂಕಷ್ಟಗಳನ್ನು ಪರಿಹಾರ ಮಾಡುವಗೋಸ್ಕರ ರೈತರು ವಗೈರೆ ಎಲ್ಲಾ ಜನರು ಅವರವರ ಹಾಲಹವಾಲುಗಳನ್ನು ಮತ್ತು ಅವುಗಳನ್ನು ಯಾವ ರೀತಿಯಲ್ಲಿ ಪರಿಹಾರ ಮಾಡಬಹುದು ಎಂಬ ಸೂಚನೆಗಳನ್ನು ಮತ್ತು ಅಗತ್ಯವಿರುವ ಅನುಭವಗಳನ್ನು ಕೂಡಾ ಈ ಕೆಳಗೆ ಸಹಿಮಾಡಿದವರಿಗೆ ಇದೇ ಬರುವ ನವಂಬರ ತಾ. 15ರ ಒಳಗೆ ತಿಳಿಸಬೇಕಾಗಿ ಅಪೇಕ್ಷಿಸೋಣಾಗುತ್ತದೆ.

ಪುತ್ತೂರು ವರ್ಗದಾರರ ಸಂಘದ ಆಫೀಸು, ತಾ. 22—8—16.

ಮೊಳಹಳ್ಳಿ ಶಿವರಾವ್,
ಕಾರ್ಯದರ್ಶಿ.

ಸಂಚಯದ ಠೇವಣಾತಿಗಳು.

ಪುತ್ತೂರು ಸಹಕಾರ ಸಂಘದಲ್ಲಿ (Puttur Rural Credit Society) ಹೊಸತಾಗಿ ಮಕ್ಕಳ ವಿದ್ಯಾಭಿವೃದ್ಧಿಯಗೋಸ್ಕರ ಏರ್ಪಡಿಸಿದ ಶಾಲಾ ಹಾಸಲು ಠೇವಣಾತಿಗಳ ವಿಷಯವಾಗಿ ನಾನು ಇದೇ ತಿಂಗಳ ತಾ. ೪ನೇ ಸ್ವದೇಶಾಭಿಮಾನಿಯಲ್ಲಿ ಬರೆದಿದ್ದೆನಷ್ಟೆ? ಆದರೆ, ಹೆಣ್ಣುಮಕ್ಕಳ ಲಗ್ನಕಾರ್ಯಗಳಿಗೆ ಹಣ ಒದಗಿಸುವಂತೆ ನಾವು ಯಾವ ಏರ್ಪಾಡು ಮಾಡಿದ್ದೇವೆಯೆಂದು ಕೆಲವರು ವಿಚಾರಿಸಿದ್ದರಿಂದ ಈ ಪತ್ರವನ್ನು ಬರೆದಿದ್ದೇನೆ. ಮಿತವ್ಯಯದ ಪ್ರಯೋಜನವನ್ನು ಕಾರ್ಯತಃ ಬೋಧಿಸಿ ಮಾಹೇಯಾನ ಅಲ್ಪಸ್ವಲ್ಪ ಹಣವನ್ನು ಶೇಖರಿಸಿ ಶುಭಶೋಭನಾದಿಗಳು ಮುಂತಾದ ವಿಶೇಷ ಖರ್ಚಿನ ಬಾಬುಗಳಿಗೆ ಅನುಕೂಲಪಡಿಸುವುದಕ್ಕೋಸ್ಕರ ವಿಧವಿಧದ ಸಂಚಯದ ಠೇವಣಾತಿಗಳ ಕ್ರಮಗಳು ಕೂಡಾ ನಮ್ಮ ಸಂಘದಲ್ಲಿರುತ್ತವೆ. ೩೬, ೪೮, ೬೦ ಯಾ ೧೨೦ ತಿಂಗಳುಗಳ ವರೆಗೆ ತಿಂಗಳು ೧ರ ರೂಪಾಯಿ ೧ ಯಾ ಅದರ ಸಮ ಅಪವರ್ತ್ಯವಾಗುವ ಒಂದು ನಿರಖು ಮೊಬಲಗನ್ನು ಸಂಘಕ್ಕೆ ಪಾವತಿಮಾಡುವವನಿಗೆ ೩೬ನೇ, ೪೮ನೇ, ೬೦ನೇ, ಯಾ ೧೨೦ನೇ ತಿಂಗಳು ಅಂತ್ಯವಾದ ಕೂಡಲೇ ರೂ. ೩೫—೮—೦, ರೂ. ೫೦-೦-೦, ರೂ. ೧೦೨-೮-೦ ಯಾ ರೂ. ೧೮೦-೮-೦ ಅಥವಾ ಅವುಗಳಿಗೆ ತಾಳೆ ಬೀಳುವ ಸಮ ಅಪವರ್ತ್ಯಗಳಷ್ಟು ಐವಜುಗಳು ಕೊಡೋಣಾಗುವವು.

ಒಬ್ಬನಿಗೆ ಒಂದು ಹೆಣ್ಣು ಮಗು ಹುಟ್ಟಿದ ಕೂಡಲೇ ಮೇಲ್ಕಂಡ ೧೨೦ ತಿಂಗಳುಗಳ ಅವಧಿಯ ಠೇವಣಾತಿ ಕ್ರಮದಲ್ಲಿ ಮಾಹೇಯಾನ ಒಂದು ನಿರಖು ಮೊಬಲಗನ್ನು ಶೇಖರಿಸಿಡುತ್ತ ಒಂದರ್ಥೆ ಮುಂದೆ ಮಗುವಿನ ವಿವಾಹದ ಖರ್ಚಿನ ಬಗ್ಯೆ ಸಕಾಲದಲ್ಲಿ ಹಣ ಒದಗಿಸಿಕೊಳ್ಳಬಹುದು. ಪ್ರಕೃತದಲ್ಲಿ ಮಗುವಿಗೆ ನಾಲ್ಕೈದು ಯಾ ಹೆಚ್ಚು ವರ್ಷ ಪ್ರಾಯವಾಗಿದೆಯಾದರೆ ಪ್ರಾಯಕ್ಕೆ ಸರಿಯಾಗಿ ೬೦ ಯಾ ೪೮ ತಿಂಗಳುಗಳ ಅವಧಿಯ ಕ್ರಮದಲ್ಲಿ ಠೇವಣಿ ಇಡಲಿಕ್ಕೆ ಪ್ರಾರಂಭ ಮಾಡಬಹುದು.

ಪುತ್ತೂರು ಸಹಕಾರ ಸಂಘ, ತಾ. 21—8—1916.

ಬಿ. ಆನಂದರಾವ್,
ಅಧ್ಯಕ್ಷ.

ಅಯ್ಯಾ ಪತ್ರಾಧಿಪರೇ,

ಮಂಗಳೂರು ತಾಲೂಕು ಮಳಲಿ ಮಾಗಣೆಗೆ ಸೇರಿದ ಅಮ್ಮುಣಜೆ, ಕರಿಯಂಗಳ, ತೆಂಕುಳಿಪಾಡಿ, ಬಡಗುಳಿಪಾಡಿ ಎಂಬ ಗ್ರಾಮಗಳು ಈ ವರೆಗೆ ದಕ್ಷಿಣಕನ್ನಡ ಜಿಲ್ಲಾ ರಿಜಿಸ್ಟ್ರಿ ಆಫೀಸಿಗೆ ಒಳಪಟ್ಟಿದ್ದು ಇನ್ನು ಬಂಟ್ವಾಳ ಸಬ್ ರಿಜಿಸ್ಟ್ರಿ ಆಫೀಸಿಗೆ ಕೂಡಿಸುವ ವಿಲೆವಾರಿ ನಡಿಯುತ್ತದೆಂಬ ವದಂತಿ ಕೇಳುತ್ತೇನೆ. ಮುಜ್ಜೂರು ಗ್ರಾಮಗಳಿಂದ ಮಂಗಳೂರಿಗೆ ೧೫ ಮೈಲು ದೂರವಿದ್ದು ಬಂಟ್ವಾಳಕ್ಕೆ ೭ ಮೈಲು ಮಾತ್ರ ಇರುವದರಿಂದ ಸಮೀಪವಾದ ಬಂಟ್ವಾಳಕ್ಕೆ ಸೇರಿಸುವದರಿಂದ ಪ್ರಜೆಗಳಿಗೆ ಉಪಕಾರವೆಂದು ರಾಜಪ್ರತಿನಿಧಿಗಳವರ ಅಭಿಪ್ರಾಯವಾಗಿರಬಹುದು. ಆದರೆ ಅದು ಪ್ರಜೆಗಳಿಗೆ ಮಾತ್ರ ವಿಪರೀತಾವಸ್ಥೆಗೆ ಕಾರಣವಾಗುತ್ತದೆ. ಹ್ಯಾಗೆಂದರೆ,—ಮೇಲೆ ತೋರುವ ೪ ಗ್ರಾಮಗಳಿಗೂ ಫಲಗುಣಿ ನದಿಯು ಅಂಚಿನಲ್ಲಿದ್ದು ನಡಿಯಲಸಾಧ್ಯವಾದವರಿಗೆ ದೋಣಿಯಲ್ಲಿ ಮಂಗಳೂರಿಗೆ ಹೋಗಬಹುದು. ಹೊಳೆಯಲ್ಲಿ ನೀರು ಬತ್ತುವ ಸಮಯ ೩ ಮೈಲು ದೂರದೊಳಗೆ ಮಂಗಳೂರು ಮೂಡಬಿದ್ರೆ ರಾಜ ರಸ್ತೆಯು ಸಿಕ್ಕುವದರಿಂದ ಭಂಡಿಯಲ್ಲಿಯೂ ಹೋಗಬಹುದಾಗಿದೆ. ಹ್ಯಾಗೂ ಅಶಕ್ತರಿಗೆ ಹೆಚ್ಚೆಂದರೆ ೩ ಮೈಲು ನಡದರೆ ಸಾಕು. ಬಂಟ್ವಾಳಕ್ಕೆ ನಡದೇ ಹೋಗುವದಾದರೆ ಭರ್ತಿ ೭ ಮೈಲು ನಡಿಯಬೇಕಾಗುವದಲ್ಲದೆ ಭಂಡಿ ವ ದೋಣಿಗಳಲ್ಲಿ ಹೋಗುವದಾದರೆ ಒಂದಕ್ಕೆ ನಾಲ್ಕೆಂದಂತೆ ಸರಿಯಾಗಿ ೨೮ ಮೈಲು ದಾರಿಯಾಗುವದು. ಆದ್ದರಿಂದ ಸದರಿ ಗ್ರಾಮಗಳನ್ನು ಬಂಟ್ವಾಳಕ್ಕೆ ಕೂಡಿಸುವ ವಿಲೆವಾರಿಯನ್ನು ಪ್ರಕೃತ ಮುಂದರಿಸದೆ ಬಂಟ್ವಾಳ ಗುರುಪುರ ರಾಜರಸ್ತೆಯಾಗುವವರೆಗಾದರೂ ಪ್ರಜೆಗಳಿಗೆ ಉಪದ್ರವಾಗದಂತೆ ಮಂಗಳೂರು ರಿಜಿಸ್ಟ್ರಿ ಆಫೀಸಿಗೇ ಇರಗೊಡಿಸಬೇಕಾಗಿ ದೈನ್ಯವರಿತು ಬೇಡಿಕೊಳ್ಳುವವರ ಪೈಕಿ ನಾನೊಬ್ಬ.

ಪೊಳಲಿ, ತಾ. 16—8—16.

ಪ. ರ. ಬ.

ಮಾರಾಟಕ್ಕೆ ತಯ್ಯಾರದೆ.

ಕಾಸರಗೋಡು ತಾಲೂಕು ಮೊಗ್ರಾಲ್ ಮಾಗಣೆ ಕಸಬಾ ಗ್ರಾಮದಲ್ಲಿರುವ ಸಾವುಕಾರ ಕುಂಞಪಕ್ಕಿ ಬ್ಯಾರಿಗಳವರ ಬಾಬತು ಸದರಿ ತಾಲೂಕು ಪುತ್ತೂರು, ಕುಂಬುಡಾಜೆ, ಕನ್ನೂರು, ಬಾರೆ, ಕೂಡ್ಲು, ಪಳ್ಳಿಕೆರೆ ಈ ಗ್ರಾಮಗಳಲ್ಲಿರುವ ಆಸ್ತಿಗಳನ್ನು ಮಾರಾಟಮಾಡುವ ಬಗ್ಯೆ ಮಂಗಳೂರ ಶಹರ ಗೋಳಿಕಟ್ಟೆ ಬಜಾರದಲ್ಲಿರುವ ಸಿ. ಅಬ್ದುಲ್‌ರಹಿಮಾನ ಹಜಾರ ಬ್ಯಾರಿಗಳ ಮಗ ಸಿ. ಮುಹಮೂದ ಬ್ಯಾರಿಯಾದ ನಾನು ಪವರ್ ಓಪ್ ಯೆಟರ್ನಿ ಮೂಲಕ ಅಧಿಕಾರಪಟ್ಟಿರುತ್ತೇನೆ. ಅವಶ್ಯವಿರುವ ಎಲ್ಲಾ ಮಾಹಿತಿಯನ್ನು ನನ್ನ ಕೂಡೆ ಕೇಳಿ ತಿಳಕೊಳ್ಳಬಹುದು.

C. Mohomood,
C/o C. Abdul Rahiman Koragappa,
Hoige Bazar, Mangalore.

ಯೂರೋಪದ ಮಹಾಯುದ್ಧ.

—.o.—

ಮಿತ್ರರಾಷ್ಟ್ರಗಳವರು ಎಲ್ಲಾ ರಣರಂಗದಲ್ಲಿಯೂ ನುಗ್ಗಿ ಹೋಗಿ ಕದನ ಮಾಡುತ್ತಲಿದ್ದಾರಲ್ಲದೆ ಪ್ರತಿಕಡೆಯಲ್ಲಿಯೂ ದಿನೇ ದಿನೇ ಜಯಹೊಂದುತ್ತಲಿದ್ದಾರೆ. ಜಯಹೊಂದುತ್ತಲಿದ್ದಾರೆಂದರೆ ಬೆರ್ಲಿನಿಗೆ ಸಮೀಪಸ್ಥರಾಗುತ್ತಿದ್ದಾರೆಂದು ನೆನಸಲಾಗದು; ಮಿತ್ರರಾಷ್ಟ್ರಗಳವರು ಯುದ್ಧಕ್ಕೆ ಸನ್ನದ್ಧರಾಗಿಲ್ಲದ ವೇಳೆ ಶತ್ರುಗಳು ಮುಂದೆ ನುಗ್ಗಿಬಂದು ಬೆಲ್ಜಿಯಮ್, ಫ್ರಾನ್ಸ ಮೊದಲಾದ ದೇಶಗಳ ಕೆಲವು ಪ್ರಾಂತ್ಯಗಳನ್ನು ಸ್ವಾಧೀನಮಾಡಿಕೊಂಡಿರುವರಷ್ಟೆ. ಆ ಪ್ರಾಂತ್ಯಗಳಲ್ಲಿ ಬಲಕಾಯಿಸಿಕೊಂಡಿರುವ ಶತ್ರುಗಳನ್ನು ಅವರ ಬಲಸ್ಥಾನಗಳಿಂದ ಹೆಜ್ಜೆ ಹೆಜ್ಜೆ ಹಿಂದಕ್ಕೆ ಓಡಿಸುತ್ತಲಿದ್ದಾರೆಂತ ತಿಳಿಯಬೇಕು. ಇದು ಸಾಮಾನ್ಯವಾದ ಕೆಲಸವಲ್ಲ; ಯಾಕಂದರೆ ಬ್ರಿಟಿಷರಿಗೆ ಪೂರ್ವ ಆಫ್ರಿಕ, ಈಜಿಪ್ಟ, ಮೆಸಪಟಾಮಿಯ, ಡರ್ಡನೆಲ್ಸ ಮೊದಲಾದ ರಣರಂಗಗಳಲ್ಲಿ ಯುದ್ಧಕೊಡಬೇಕಾಗಿದೆ. ಫ್ರೆಂಚರಿಗೆ ಫ್ರಾನ್ಸಿನಲ್ಲಿ ಮಾತ್ರವಲ್ಲ; ಸಲೋನಿಕದಲ್ಲಿ ವಿಶೇಷ ಕಾರ್ಯವಿದೆ. ರುಶ್ಯನರು ೧೯೧೫ನೇ ಇಸವಿಯಲ್ಲಿ ಶತ್ರುಗಳಿಂದ ಸೋತು ಹಿಂದೆಸರಿದ ನಂತರ ಕೌಕಾಸಸಿನಲ್ಲಿ ದೊಡ್ಡ ಸೇನೆಯನ್ನು ಇಡಬೇಕಾಗಿ ಬಂದಿದೆಯಲ್ಲದೆ ಅತ್ತಕಡೆ ರುಶ್ಯ ರಣರಂಗದಲ್ಲಿ ಕಾದಾಡಬೇಕಾಗಿದೆ. ಈ ವಿಷಯಗಳನ್ನೆಲ್ಲಾ ಯೋಚಿಸುವಾಗ ಮಿತ್ರರಾಷ್ಟ್ರಗಳವರು ಮುಂದರಿಯುವದು ಸಾಮಾನ್ಯವಾದ ಕಾರ್ಯವಲ್ಲ; ಪರಂತು, ಜರ್ಮನರ ಹೆಮ್ಮೆಯನ್ನು ಮುರಿದು ಲೋಕದಲ್ಲಿ ನೀತಿಯನ್ನು ಕಾಪಾಡಬೇಕೆಂಬದೇ ಈ ಮಿತ್ರರಾಷ್ಟ್ರಗಳ ದೃಢಸಂಕಲ್ಪವಾಗಿರುವದರಿಂದ ಮಿತ್ರರಾಷ್ಟ್ರಗಳವರು ಮುಂದೆ ಇಟ್ಟ ಹೆಜ್ಜೆಯನ್ನು ಹಿಂದೆ ತೆಗೆಯುವಹಾಗಿಲ್ಲ. ಬ್ರಿಟಿಷ ಸರಕಾರದವರೆಂತೂ ಈಗ ಲೆಕ್ಕಿಸಲಾರದಷ್ಟು ಯುದ್ಧಸಾಮಾಗ್ರಿಗಳನ್ನು ನಿರ್ಮಿಸುತ್ತಿದ್ದಾರೆ. ಯುದ್ಧ ಪ್ರಾರಂಭವಾಗುವಾಗ ಬ್ರಿಟಿಷರಿಗೆ ಇದ್ದ ದೊಡ್ಡ ಫಿರಂಗಿಗಳ ಒಟ್ಟು ಸಂಖ್ಯೆಯ ಎರಡರಷ್ಟು ಫಿರಂಗಿಗಳು ಈಗ ತಾನೇ ತಿಂಗಳೊಂದಕ್ಕೆ ತಯಾರಾಗುತ್ತಿವೆ. ಯಂತ್ರಚಾಲಿತ ಫಿರಂಗಿಗಳು ಈಗ ೧೯೧೫ನೇ ಇಸವಿಯಲ್ಲಿ ತಯಾರಾಗುತ್ತಿದ್ದುದರ ೧೬ ಪಾಲಷ್ಟು ಹೆಚ್ಚಿಗೆ ತಯಾರಾಗುತ್ತಿವೆ. ಆದುದರಿಂದ ಯುದ್ಧಪ್ರಾರಂಭದಲ್ಲಾದಂತೆ ಈಗ ಮಿತ್ರರಾಷ್ಟ್ರಗಳವರಿಗೆ ಮುಂದೆ ನುಗ್ಗಲು ಯುದ್ಧಸಾಮಾಗ್ರಿಗಳ ತೊಡಕು ಇಲ್ಲವೇ ಇಲ್ಲ. ಇವನ್ನೆಲ್ಲಾ ಆಲೋಚಿಸುವಾಗ ಮಿತ್ರರಾಷ್ಟ್ರಗಳವರಿಗೆ ಈಗಿನಂತೆಯೇ ಜಯದ ಮೇಲೆ ಜಯವಾಗುತ್ತಾ ಹೋದರೆ ಶತ್ರುಗಳಿಗೆ ಬೇಗನೇ ಸ್ವಸ್ಥಾನ ಪ್ರಾಪ್ತಿಯಾಗುವದರಲ್ಲಿ ಸಂದೇಹವಿಲ್ಲ.

ಪಶ್ಚಿಮ ರಣರಂಗದಲ್ಲಿ.

ಪೊಜಿಯರ್ಸಿನ ಉತ್ತರದಲ್ಲಿರುವ ಹೆಚ್ಚುಕಡಿಮೆ ಎಲ್ಲಾ ಕಂದಕಗಳು ಈಗ ಬ್ರಿಟಿಷರ ಸ್ವಾಧೀನವಾಗಿವೆ.

ಜೋರ್ಜ ಸಾರ್ವಭೌಮರವರು ಫ್ರಾನ್ಸಿಗೆ ಹೋಗಿ ಯುದ್ಧ ನಡೆಯುವ ಪ್ರಾಂತಗಳನ್ನು ನೋಡಿಕೊಂಡು ಕಂದಕಗಳನ್ನು ಸಂದರ್ಶಿಸಿ ಬ್ರಿಟಿಷ ಸೇನಿಕರು ಮಾಡುತ್ತಿರುವ ಕದನಗಳಲ್ಲಿ ತೋರಿಸುತ್ತಿರುವ ಪರಾಕ್ರಮವನ್ನು ನೋಡಿ ಹರ್ಷಿತರಾಗಿ ಲಂಡನಿಗೆ ಹಿಂತಿರುಗಿ ಬಂದಿರುವರು. ಜೋರ್ಜ ಸಾರ್ವಭೌಮರು ಒಂದು ವಾರದ ತನಕ ಫ್ರಾನ್ಸಿನಲ್ಲಿ ಇದ್ದರು.

ಗುಲ್ಲಿಮೊಂಟಿನಲ್ಲಿ ಬ್ರಿಟಿಷರು ಪೂರ್ವ ಮತ್ತು ಆಗ್ನೇಯ ದಿಕ್ಕಿನಲ್ಲಿ ಮುಂದರಿದಿರುತ್ತಾರೆ. ಹೈವೂಡ್‍ಗೆ ಪಶ್ಚಿಮದಲ್ಲಿ ಬ್ರಿಟಿಷ ಸೇನಿಕರು ೩೦೦ ಗಜ ಕಂದಕಗಳನ್ನು ಹಿಡಿದಿರುತ್ತಾರೆ.

ಸೊಮ್ಮೆಯಲ್ಲಿ ಶತ್ರುಗಳ ತೋಪುಗಳು ಘೋರ ಗರ್ಜನೆಯನ್ನು ಮಾಡುತ್ತಿವೆ. ಪ್ಲುರೆ ಮತ್ತು ವಾರ್ಸ—ಚಾಪಿಟ್ರೆಯಲ್ಲಿಯೂ ಜರ್ಮನರು ರೋಷಾವೇಶದಿಂದ ಗುಂಡು ಹಾರಿಸುತ್ತಲಿದ್ದಾರೆ.

ಸೊಮ್ಮೆಯಲ್ಲಿ ಫ್ರೆಂಚರು ನುಗ್ಗಿಹೋಗಿ ಕದನಮಾಡಲು ಪ್ರಾರಂಭಿಸಿರುತ್ತಾರೆ. ಫ್ರೆಂಚರು ಸೊಮ್ಮೆಯ ಉತ್ತರದಲ್ಲಿ ಬ್ರಿಟಿಷ ಸೇನಿಕರೊಡನೆ ಕೂಡಿಕೊಂಡು ಒಂದು ಮೈಲು ರಣರಂಗದಲ್ಲಿ ಜರ್ಮನರ ನೆಲೆಗಳನ್ನು ಗೆದ್ದುಕೊಂಡಿರುವರು. ಸೊಮ್ಮೆಯ ದಕ್ಷಿಣದಲ್ಲಿ ಫ್ರೆಂಚರು ಒಂದೇ ಸಾರಿ ನುಗ್ಗಿಹೋಗಿ ಜರ್ಮನರು ಅತಿ ಬಲವಾಗಿ ಕಾಪಾಡಿಕೊಂಡಿದ್ದ ಕಂದಕಗಳನ್ನು ಹಿಡಕೊಂಡರು. ಒಂದು ಮೈಲು ವರೆಗೆ ಕಂದಕಗಳನ್ನು ಹಿಡಿದ ನಂತರ ಫ್ರೆಂಚರೂ ಬ್ರಿಟಿಷರೂ ಕೆಲವು ಕಡೆಗಳಲ್ಲಿ ಗಲಿಮೊಂಟ್—ಮೋರ್‌ಪಾಸ್ ದಾರಿಗೆ ತಲುಪಿದರು. ಅದಲ್ಲದೆ ಈ ಪ್ರಾಂತ್ಯದಲ್ಲಿ ಬ್ರಿಟಿಷರೂ ಫ್ರೆಂಚರೂ ಒಟ್ಟುಗೂಡಿ ಅತಿ ಭೀಕರ ಕಾಳಗಮಾಡಿ ಜರ್ಮನರನ್ನು ಸೋಲಿಸಿದರು. ಜರ್ಮನರಿಗೆ ಇಲ್ಲಿ ಅತಿರೇಕ ನಷ್ಟವಾಗಿರುವದು.

ಪೂರ್ವ ರಣರಂಗದಲ್ಲಿ.

ರುಶ್ಯನರು ಶೆರೆಟ್ ಮತ್ತು ಜ್ಲೋಟಲಿಪಾ ಪ್ರಾಂತ್ಯದಲ್ಲಿ ಮುಂದರಿಯುತ್ತಿದ್ದಾರೆ. ರುಶ್ಯನರು ನೀಸ್ಟರಿನ ವಾಯವ್ಯ ದಿಕ್ಕಿನಲ್ಲಿರುವ ಟುಸ್ಟೊಬಾಬ ಎಂಬ ಗ್ರಾಮದಮೇಲೆ ಹಲ್ಲೆಮಾಡಿ ಆ ಗ್ರಾಮವನ್ನು ನೆಲಸಮಮಾಡಿರುವರು. ರುಶ್ಯನರು ಇಲ್ಲಿ ಗಡುಗೊತ್ತಿಲ್ಲದಷ್ಟು ಕಂದಕಗಳಿಗೆ ತುಬಿಗಾಣಿಸಬೇಕಾದ್ದುದರಿಂದ ಬಹಳ ಕಠಿಣಕಾಳಗ ಮಾಡಬೇಕಾಯಿತು. ರುಶ್ಯನರು ಶತ್ರುಗಳನ್ನು ಸ್ಟೊಖ ಮತ್ತು ಕೊರೊಪಿಕ್ ನದಿಗಳ ಪ್ರಾಂತ್ಯಗಳಲ್ಲಿ ಅಟ್ಟುತ್ತಿದ್ದಾರೆ. ಕಾರ್ಪಥೇಯನಿನ ಅರಣ್ಯಗಳಿಂದ ಹಲ್ಲೆಮಾಡುತ್ತಿರುವ ಶತ್ರುಗಳು ಪ್ರತಿಕಡೆಯಲ್ಲಿಯೂ ಹಿಮ್ಮೆಟ್ಟಿರುವರು. ಈ ಅರಣ್ಯ ಪ್ರಾಂತ್ಯದಲ್ಲಿ ರುಶ್ಯನರು ಜಬ್ಲೋಂಟ್ಜ್ ಎಂಬ ಸ್ಥಳವನ್ನೂ ಅದರ ದಕ್ಷಿಣಕ್ಕಿರುವ ಪಟ್ಟಣವನ್ನೂ ಸ್ವಾಧೀನಮಾಡಿಕೊಂಡು ೧೦೪ ಮೈಲಿಯನ್ನು ಕೆರೆಹಿಡಿದಿರುವರು.

ರುಶ್ಯನರು ಜ್ಲೋಟಲಿಪ ಮತ್ತು ಬೈಸ್ಟ್ರಿಟ್ಜ ಸೊಲೊಟ್ವಿನಸ್ಕಾ ನದಿಗಳ ಪಶ್ಚಿಮ ದಡಗಳನ್ನು ದಾಟಿರುವರು. ಜೂನ್ ತಾ. ೪ ರಿಂದ ಅಗೋಸ್ತು ತಾ. ೧೨ರ ವರೆಗೆ ರುಶ್ಯನರ ಜನರಲ್ ಬ್ರುಸಿಲೊಫರು ಶತ್ರುಗಳ ೭೭೫೭ ಆಫೀಸರರನ್ನೂ ೩೫೦,೮೪೫ ಸೇನಿಕರನ್ನೂ ೪೦೫ ಫಿರಂಗಿಗಳನ್ನೂ ೧೩೨೬ ಯಂತ್ರಚಾಲಿತ ಫಿರಂಗಿಗಳನ್ನೂ ಇತರ ಬಹಳ ಯುದ್ಧಸಾಮಾನುಗಳನ್ನೂ ಸೆರೆಹಿಡಿದಿರುವರು.

ಶತ್ರುಗಳ ಜನರಲ್ ಬೋಹ್ಮರರ ಸೇನೆಯು ರುಶ್ಯನರು ಮುಂದರಿಯದಹಾಗೆ ಅತಿ ರೋಷಾವೇಶದಿಂದ ಎದುರಾಡುತ್ತಿದೆ. ಆದರೆ ರುಶ್ಯನರು ಜ್ಲೋಟಲಿಪ ಮತ್ತು ನೀಸ್ಟರ್ ನದಿಗಳ ಸಂಗಮದಲ್ಲಿ ಮುಂದರಿಯುತ್ತಿದ್ದಾರೆ.

ಗೆಲೀಸಿಯದಲ್ಲಿ ಶತ್ರುಗಳ ೩ನೇ ಸೇನಾಸಾಲುಗಳು ಹಿಂದೆ ಸರಿದಿರುತ್ತವೆಂತ ಯುದ್ಧ ನಿಪುಣರು ಹೇಳುತ್ತಾರೆ.

ಟರ್ಕಿ.

ಪರ್ಶಿಯಾದಲ್ಲಿ ತುರ್ಕರು ಬಲವಾಗಿ ಭದ್ರಪಡಿಸಿಕೊಂಡಿದ್ದ ಸಾಕ್ಕಿಜ್ ಎಂಬ ಪಟ್ಟಣವನ್ನು ರುಶ್ಯನರು ಹಿಡಿದಿರುತ್ತಾರೆ. ಹೆಚ್ಚಿನ ವಿಶೇಷ ವರ್ತಮಾನಗಳು ಈ ರಣರಂಗದಿಂದ ಬಂದಿರುವದಿಲ್ಲ.

ಬಾಲ್ಕಾನ್.

ಸಲೋನಿಕದಲ್ಲಿರುವ ಮಿತ್ರಸೇನಿಕರು ಪ್ರಿಸ್‍ಪಾಟೋ ಸರೋವರದಿಂದ "ಡೆಮಿರ್‌ಸಾರ್"ವರೆಗೆ ಇರುವ ಬಲ್ಗೇರಿಯನರ ಸೇನಾಸಾಲುಗಳನ್ನು ಮುಂದರಿಯದಹಾಗೆ ತಡೆದಿರುತ್ತಾರೆ. ಸಪ್ಟೆಂಬರ ತಾ. ೧ರಿಂದ ನವಂಬರ ತಾ. ೩೦ರವರೆಗೆ ಬಾಲ್ಕಾನ್ ರಣರಂಗದಲ್ಲಿ ಸರಾಗವಾಗಿ ಯುದ್ಧಮಾಡಬಹುದೆಂತ ಒಂದು ತಂತೀವಾರ್ತೆಯು ಹೇಳುತ್ತದೆ.

ಡೊರಿಯನ್ ಸರೋವರದ ದಕ್ಷಿಣದಲ್ಲಿರುವ ಬಲ್ಗೇರಿಯನರ ಸೇನಾನೆಲೆಯನ್ನು ಫ್ರೆಂಚ ಸೇನಿಕರು ಗೆದ್ದುಕೊಂಡು ಸರ್ವಿಯಾದೊಳಗೆ ಇರುವ ಡೊಲ್ಜೆಲ್ಲಿ ಎಂಬ ಗ್ರಾಮದ ಅಜುಬಾಜಿನಲ್ಲಿದ್ದ ಟೊರ್‌ಟ್ಯಾಸ್ ಗುಡ್ಡವನ್ನು ಬಲಕಾಯಿಸಿಕೊಂಡಿರುವರು. ಈ ಕದನದಲ್ಲಿ ಬಲ್ಗೇರಿಯನರಿಗೆ ವಿಶೇಷ ನಷ್ಟವಾಗಿರುವದು.

ಇಟಲಿ.

ಇಟಲಿಯನರು ಕಾರ್ಸೊದಲ್ಲಿ ಸಾನ್‍ಗ್ರೇಡೋ ಮೌಂಟ್ ಪೆಕಿನ್ಕಾವನ್ನೂ ಗೊರಿಜ್ಜದಲ್ಲಿ ೬೦೦ ಶತ್ರುಸೇನಿಕರನ್ನೂ ಹಿಡಿದಿರುತ್ತಾರೆ.

ಇಟಲಿಯನರ ವಾಯುನಾವೆಗಳು ಟ್ರಿಸ್ಟೆಯಮೇಲೆ ಬೊಂಬುಗಳನ್ನು ಹಾಕಿರುತ್ತವೆ.

ಪೂರ್ವ ಆಫ್ರಿಕ.

ಪೂರ್ವ ಆಫ್ರೀಕದ ಕಿಲೋಸ ಎಂಬಲ್ಲಿ ಬ್ರಿಟಿಷ ಸೇನಿಕರಿಗೆ ಜಯವಾಗಿರುವದೆಂಬ ವಾರ್ತೆ ಬಂದಿರುತ್ತದೆ.

ಈಜಿಪ್ತ.

ಈಜಿಪ್ತಿನ ಕಟ್ಯಾದಲ್ಲಿ ನಡೆದ ಯುದ್ಧದಲ್ಲಿ ಸುಮಾರು ೧೫,೦೦೦ ತುರ್ಕರು ಸೇರಿದ್ದರು. ಈ ಪೈಕಿ ತುರ್ಕರಿಗೆ ಅರ್ಧಾಂಶ ಸೇನಿಕರು ನಷ್ಟವಾಗಿರುವರು. ೩೯೩೦ ತುರ್ಕ ಸೇನಿಕರನ್ನು ಬ್ರಿಟಿಷರು ಸೆರೆಹಿಡಿದಿರುವರು. ೪೦೦೦ ಗುಂಡುಗಳ ಸಹಿತವಾದ ೭೫ ಬತ್ತೇರಿಗಳೂ, ಯಂತ್ರಚಾಲಿತ ಫಿರಂಗಿಗಳೂ, ೨೩೦೦ ರೈಫಲ್‌ಗಳೂ, ಒಂದು ಮಿಲಿಯ ತೋಟೆಗಳೂ, ೫೦೦ ಒಂಟೆಗಳೂ ಬ್ರಿಟಿಷರಿಗೆ ದೊರಕಿರುವವು.

ಮೆಸಪೊಟಾಮಿಯ.

ಈ ರಣರಂಗದ ಸ್ಥಿತಿಯು ಯುಫ್ರತೆಸ್ ಮತ್ತು ತೀಗ್ರಿಸ್ ನದಿಗಳ ಪ್ರಾಂತ್ಯದಲ್ಲಿ ಇದ್ದಕ್ಕಿದ್ದ ಹಾಗೆ ಇದೆ.

ನೌಕಾವಳಿ ಯುದ್ಧ.

ಜರ್ಮನರ ಯುದ್ಧನಾವೆಗಳು ಕಳೆದ ವಾರ ಬಂದರದಿಂದ ಹೊರಟು ಬಂದವು. ಆದರೆ ಬ್ರಿಟಿಷರ ಯುದ್ಧನಾವೆಗಳನ್ನು ನೋಡಿ ಹಿಂದಕ್ಕೆ ತಿರುಗಿದವು. ಬ್ರಿಟಿಷರ ಕ್ರೂಜರ್ "ನೋಟ್ಟಿಂಗ್ಹಾಮ್" ಮತ್ತು "ಫಾಲ್ಮೌತ್" ಯುದ್ಧ ಹಡಗಗಳು ಜರ್ಮನರ ಯುದ್ಧನಾವೆಗಳನ್ನು ಹುಡುಕುತ್ತಿರುವಾಗ ಜಲಂತರ್ಗಾಮಿ ನಾವೆಗಳಿಂದ ಮುಣುಗಿಸಲ್ಪಟ್ಟಿರುವವು. "ನೋಟ್ಟಿಂಗ್ಹಾಮ್" ಹಡಗದ ಎಲ್ಲಾ ಆಫೀಸರರು ರಕ್ಷಿಸಲ್ಪಟ್ಟಿರುವರು. "ಫಾಲ್ಮೌತ್" ಹಡಗದಲ್ಲಿದ್ದವರೆಲ್ಲರೂ ಬದುಕಿಕೊಂಡಿದ್ದಾರೆ. ಬ್ರಿಟಿಷರು ಜರ್ಮನರ ಒಂದು ಡಿಸ್ಟ್ರೋಯರ್ ನಾವೆಯನ್ನು ಮುಣುಗಿಸಿರುವರು. ಮತ್ತೊಂದಕ್ಕೆ ಜಡಿದಿರುವರು. ಬಹುಶ್ಯ ಅದೂ ಮುಣುಗಿಸಲ್ಪಟ್ಟಿರಬಹುದು.

ಜಲಂತರ್ಗಾಮಿ ನಾವೆಗಳು.

ಬ್ರಿಟಿಷರ ಡಿಸ್ಟ್ರೋಯರ್ "ಲಾಸ್ಸೊ" ಎಂಬ ಯುದ್ಧ ಹಡಗವು ಡಚ್ಚ ಕರಾವಳಿಯಲ್ಲಿ ಮುಣುಗಿಸಲ್ಪಟ್ಟಿರುತ್ತದೆ. ೪ ಆಫೀಸರರೂ ೪ ಸೇನಿಕರೂ ಕಾಣೆಯಾಗಿರುವರು. ಒಬ್ಬ ಆಫೀಸರನಿಗೂ ಒಬ್ಬ ಸೇನಿಕನಿಗೂ ಸಾಧಾರಣ ಗಾಯವಾಗಿದೆ.

ಜರ್ಮನರು ಕಳೆದವಾರ ಡೇನಿಸರ ೧, ಇಟಲಿಯನರ ೩, ನೋರ್ವೇಯವರ ೧, ಸ್ಪಾನಿಯರ ೧ ವ್ಯಾಪಾರ ಹಡಗಗಳನ್ನು ಮುಣುಗಿಸಿರುವರು.

~~~~

ವಿದೇಶ ವೃತ್ತಾಂತ

~~~~

ಮಿಸೆಸ್ ಅನ್ನಿಬಿಸೆಂತರವರನ್ನು ಡಿಫೆನ್ಸ ಅಫ್ ಇಂಡಿಯಾ ಆಕ್ಟಿನ ಮೇಲೆ ಮುಂಬಾಯಿ ಸಂಸ್ಥಾನವನ್ನು ಪ್ರವೇಶಿಸಕೂಡದೆಂತ ಮುಂಬಾಯಿ ಸರಕಾರದವರು ಹುಕುಂ ಮಾಡಲು ಕಾರಣವೇನೆಂತಲೂ ಇಂಡಿಯಾ ಸರಕಾರದವರು ಈ ಬಗ್ಗೆ ಯಾವ ಕಾರಣ ಕೊಟ್ಟಿರುತ್ತಾರೆಂತಲೂ ಬ್ರಿಟಿಷ ಪಾರ್ಲಿಮೆಂಟ ಸಭೆಯ ಮೆಂಬರರಾದ ಮಿ| ಸ್ನೋಡೆನರವರು ಕಾಮನ್ಸ ಸಭೆಯಲ್ಲಿ ಹಿಂದೂಸ್ಥಾನದ ಸ್ಟೇಟ್ ಸೆಕ್ರಟರಿಯವರಾದ ಮಿ| ಚೆಂಬರ್ಲೆನರವರನ್ನು ಕೇಳಿದರು. ಈ ಪ್ರಶ್ನೆಗೆ ಉತ್ತರವಾಗಿ ಮಿ| ಚೆಂಬರ್ಲೆನರವರು ಅನ್ನಿಬಿಸೆಂತರವರಿಗೆ ಇಂಡಿಯಾ ಸರಕಾರದ ಅನುಮತಿಯಿಂದ ಮುಂಬಾಯಿ ಸರಕಾರದವರು ಈ ಹುಕುಮನ್ನು ಕೊಟ್ಟಿರುತ್ತಾರೆ. ಇಂಥಾ ಕಟ್ಟಾಜ್ಞೆಯನ್ನು ಕೊಡುವ ಅಧಿಕಾರವು ಆಯಾ ಸ್ಥಳಿಕ ಸರಕಾರಗಳಿಗಿವೆ. ಡಿಫೆನ್ಸ ಒಫ್ ಇಂಡಿಯಾ ಆಕ್ಟಿನ ಪ್ರಕಾರ ಅದಕ್ಕೆ ತಕ್ಕ ಕಾರಣವನ್ನು ಕೊಡುವ ಅಗತ್ಯವಿಲ್ಲ ಎಂದು ಹೇಳಿರುವರು.

~~~~

ಹಿಂದೂಸ್ಥಾನದ ಕವಿ ಶ್ರೇಷ್ಠರಾದ ಸರ್ ರಬೀಂದ್ರನಾಥ ಟಾಗೋರರವರು ಈಗ ಜಾಪಾನಿನ ಟೊಕಿಯೋ ನಗರದಲ್ಲಿ ಇರುವರು. ಜಪಾನಿಯವರು ಟಾಗೋರರವರನ್ನು ಅತಿ ಮನ್ನಣೆಯಿಂದ ಕಾಣುತ್ತಿದ್ದಾರೆ.

~~~~

ಇಂಗ್ಲಾಂಡಿನ ಬ್ರಿಸ್ಟೊಲ್ ನಗರದಲ್ಲಿ ಬ್ಯುಬೋನಿಕ್ ಪ್ಲೇಗು ಸೋಂಕಿರುತ್ತದೆ.

~~~~

ಹಿಂದೂಸ್ಥಾನದಿಂದ ಫಿಜಿ ದ್ವೀಪಕ್ಕೆ ಹೋಗುವ ಕೂಲಿಯಾಳುಗಳಿಗೆ ಇಂಡಿಯನ್ ಇಮಿಗ್ರೇಶನ್ ಲಾಕ್ಕನುಸಾರವಾಗಿ ಬಂದಿಖಾನೆ ಶಿಕ್ಷೆಯನ್ನು ವಿಧಿಸಕೂಡದೆಂತ ಫಿಜಿ ಸರಕಾರದವರು ನಿರ್ಣಯಿಸಿರುವರೆಂತಲೂ ಜಮಾ
~~~~

ಯಿಕ, ಬ್ರಿಟಿಷ್‌ಗಿಯಾನ್ನ, ಟ್ರಿನಿದಾದ್ ದ್ವೀಪಗಳಲ್ಲಿಯೂ ಇದೇ ಕ್ರಮವನ್ನು ಜಾರಿಗೆ ತರುವ ಆಲೋಚನೆಯು ಅಲ್ಲಿಯ ಗವರ್ನರರಿಗೆ ಇದೆ ಎಂತಲೂ ಸ್ಟೇಟ್ ಸೆಕ್ರಟರಿಯವರು ಹೇಳಿರುತ್ತಾರೆ.

~~~

ಕಿಚನರ್ ಪ್ರಭುಗಳ ಫಂಡಿಗೆ ೨೫,೫೦೦ ಪವನು ವಂತಿಗೆಯಾಗಿರುತ್ತದೆ.

~~~

ಹಿಂದೂಸ್ಥಾನದ ಹೆಂಗಸರ ದುಃಸ್ಥಿತಿಯನ್ನು ಅರಿತು ಅವರ ಏಳಿಗೆಯನ್ನು ಮಾಡುವ ಬಗ್ಯೆ ತಕ್ಕ ಪ್ರಯತ್ನಗಳನ್ನು ಮಾಡುವರೆ ಲಂಡನಿನಲ್ಲಿ ಒಂದು ಸಂಘವು ಏರ್ಪಡಿಸೋಣಾಗಿದೆಯಷ್ಟೆ. ಈ (ಸಂಘದ ಸಭೆಯು ಲೇಡಿ ಮ್ಯೂರ್ ಮೆಕನ್ಜಿಯವರ ಅಧ್ಯಕ್ಷತೆಯಲ್ಲಿ ವೆಸ್ಟ್ ಮಿನಿಷ್ಟರಿನಲ್ಲಿ ಕೂಡಿಬಂದಿರುತ್ತದೆ. ಈ ಸಭೆಗೆ ಸರ್. ಕೃಷ್ಣಗುಪ್ತ, ಮೆ. ಯುಸುಫ್ ಆಲಿ ಮೊದಲಾದವರೂ ಹಲವು ಹಿಂದೀ ಹೆಂಗಸರೂ ಬಿಜೈಸಿದ್ದರು. ಲೇಡಿ ಮೆಕನ್ಜಿಯವರು ಹಿಂದೂಸ್ಥಾನದ ಹೆಂಗಸರ ದುಃಸ್ಥಿತಿಯನ್ನು ಸಭಿಕರಿಗೆ ಅನುಭವದಿಂದ ಉದಹರಿಸಿಕೊಟ್ಟು ಹಿಂದೂಸ್ಥಾನದಲ್ಲಿರುವ ೧೫೦ ಮಿಲಿಯ ಹೆಂಗಸರಿಗೆ ೪೦೦—೫೦೦ ಲೇಡಿ ದಾಕ್ತಾರರು ಮಾತ್ರ ಇರುವದು ಶೋಚನೀಯವಾಗಿದೆಂಬದನ್ನು ತಿಳಿಯಪಡಿಸಿದರು. ಸರ್. ಕೃಷ್ಣಗುಪ್ತರವರು ಹಿಂದೂಸ್ಥಾನದ ಹೆಂಗಸರ ಈಗಿನ ಕಾಲದ ಮತ್ತು ಹಿಂದಿನ ಕಾಲದ ಸ್ಥಿತಿಗತಿಗಳನ್ನು ತಿಳಿಯಹೇಳಿ ಈಗಿನ ವಿದ್ಯಾಭ್ಯಾಸದಲ್ಲಿರುವ ಕುಂದುಕೊರತೆಗಳನ್ನು ತೋರಿಸಿಕೊಟ್ಟು ಹಿಂದೂಸ್ಥಾನದ ಹೆಂಗಸರನ್ನು ಏಳಿಗೆಗೆ ತರುವದರ ಅವಶ್ಯಕತೆಯನ್ನು ಕುರಿತು ಭಾಷಣಮಾಡಿದರು. ಮೆ| ಯುಸುಫ್ ಅಲಿ, ಮೆ| ಸೈಯದ್ ಹುಸೇನ್‌ರವರೂ ಈ ಸಭೆಯಲ್ಲಿ ಹಿಂದೂಸ್ಥಾನದ ಹೆಂಗಸರ ದುಃಸ್ಥಿತಿಯನ್ನು ಕುರಿತಾಗಿ ಅರ್ಥಗರ್ಭಿತವಾದ ಭಾಷಣಗಳನ್ನು ಮಾಡಿದರು.

~~~

ಉತ್ತರ ಹಿಂದೂಸ್ಥಾನ.

~~~

ಬೀರಾರು ಮತ್ತು ಪಂಜಾಬು ಪ್ರೊವಿನ್ಸಿಯಲ್ ಕಾಂಗ್ರೆಸ್ ಕಮಿಟಿಯವರು ಬಹುಮಾನಪಟ್ಟ ಅಂಬಿಕಚರಣ ಮುಜುಮದಾರರನ್ನು ಬರುವ ರಾಷ್ಟ್ರೀಯ ಸಭೆಯ ಅಧ್ಯಕ್ಷರಾಗಿ ಆರಿಸಬಹುದೆಂತ ನಿರ್ಧರಿಸಿರುವರು.

~~~

ಮುಂಬಾಯಿ ಸಂಸ್ಥಾನದ ಶಾಲೆಗಳ ವಿದ್ಯಾರ್ಥಿಗಳು ಈ ಘೋರ ಯುದ್ಧದಿಂದ ಕಷ್ಟಗೊಳಗಾದ ಬೆಲ್ಜಿಯಮ್ ದೇಶದ ಮಕ್ಕಳ ಸಹಾಯವಾಗಿ ರೂ. ೭೭,೧೧೨ನ್ನು ಕೂಡಿಸಿ ಕೊಟ್ಟಿರುತ್ತಾರೆ. ಈ ಮಕ್ಕಳ ಸಹಾಯಾರ್ಥವಾಗಿ ಒಟ್ಟಿಗೆ ೧,೭೭,೦೭೮ ರೂಪಾಯಿಗಳು ಕೂಡಿರುತ್ತವೆ.

~~~

ಡಿಫೆನ್ಸ್ ಆಫ್ ಇಂಡಿಯಾ ಆಕ್ಟಿಗನುಗುಣವಾಗಿ ಬಿಹಾರಿನ ರಘುವೀರ ಪ್ರಸಾದಸಿಂಘರವರು ಕೈದುಮಾಡಲ್ಪಟ್ಟಿರುತ್ತಾರೆ. ಈ ಆಕ್ಟಿಗನುಸಾರವಾಗಿ ಬಿಹಾರಿನಲ್ಲಿ ಕೈದುಮಾಡಲ್ಪಟ್ಟವರಲ್ಲಿ ಇವರೇ ಮೊದಲನೆಯವರು.

~~~

ಇಂಡಸ್ಟ್ರಿ ಕಮಿಷನಿನ ಚೇಯರ್ಮೇನರವರು ಈಗ ತಾನೇ ಮುಂಬಾಯಿಗೆ ಹೋಗಿರುವರು. ಅಲ್ಲಿ ಒಂದು ವಾರದವರೆಗೆ ಇದ್ದು ಕೈಗಾರಿಕೆಗಳ ಸಂಬಂಧ ವಿಚಾರಿಸುವರೆಂತ ತಿಳಿದುಬರುತ್ತದೆ.

~~~

ಇದೇ ಆಗೋಸ್ತು ತಾ. ೧೨ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ೨೪೭೩ ಮಂದಿಗೆ ಪ್ಲೇಗ ಬೇನೆಯು ಸೋಂಕಿ ೧೮೭೮ ಮಂದಿ ಮೃತರಾದರು. ಈ ಪೈಕಿ ಮುಂಬಾಯಿಯಲ್ಲಿ ೮೧೧; ಮದ್ರಾಸ್ ೭೪; ಬಿಹಾರ್ ೬೪; ಸಂಯುಕ್ತಸಂಸ್ಥಾನ ೫೫; ಪಂಜಾಬು ೧; ಬರ್ಮ ೩೯; ಮಧ್ಯಸಂಸ್ಥಾನ ೩೩; ಮೈಸೂರು ೧೬೨; ಹೈದರಾಬಾದ್ ೫೫೫ ಮರಣಗಳಾಗಿರುವವು. ಬಂಗಾಳದಲ್ಲಿ ಪ್ಲೇಗು ಮರಣವಿದ್ದಿಲ್ಲ.

~~~

ಕಲ್ಕತ್ತಾ ಕ್ಸಾವಿಯರ್ಸ್ ಕಾಲೇಜಿನ ಫಾದರ್ ಎಚ್. ಹೊಸ್ಟೆನ್ ಜೆ. ಜೆ‌ರವರು ಮಹಮ್ಮದೀಯರಿಗೆ ಅನುರಂಜಕವಾದ ಒಂದು ವಿಷಯವನ್ನು ಕಂಡುಕೊಂಡಿರುವರು. ಹಿಂದೂಸ್ಥಾನದ ಚಕ್ರವರ್ತಿಯಾದ ಅಕ್ಬರನಿಗೆ ೧೬೪೨-೧೬೦೫ನೇ ಇಸವಿಯವರೆಗೆ ಒಬ್ಬ ಕ್ರಿಸ್ತೀ ಮತದ ಪತ್ನಿ ಇದ್ದಳು, ಅವಳು ಹಿಂದೀ ಕ್ರೈಸ್ತಳಲ್ಲ, ಅರ್ಮೇನಿಯ ಕ್ರೈಸ್ತಳು, ಅವಳ ಹೆಸರು ಮೆರಿಯಾಮ್ ಯಾಮಿನಿ ಬೇಗಮ್ ಎಂಬದಾಗಿ ಅವರು ಸಿದ್ಧಾಂತಪಡಿಸುವದರಲ್ಲಿದ್ದಾರೆ. ಇದರಿಂದ ಅನೇಕ ವಿಚಾರಗಳು ಹುಟ್ಟತಕ್ಕವಿವೆ. ಅಕ್ಬರನ ನಂತರ ಪಟ್ಟಕ್ಕೆಬಂದ ಚಕ್ರವರ್ತಿ ಜಹಂಗೀರನು ತನ್ನ ತಾಯಿ ಮರಿಯಾಮ್ ಯಾಮಿನಿ ಎಂದು ಕರೆಯುತ್ತಿದ್ದುದರಿಂದ ಜಹಂಗೀರನ ತಾಯಿ ಅವಳೇ ಆಗಿರಬೇಕೋ ಏನೆಂಬದು ಮುಖ್ಯ ವಿಚಾರವು. ಅಕ್ಬರನ ೩ನೇ ಮಗ ಪ್ರಿನ್ಸ್ ಡಾನಿಯೆಲ್ ೧೫೭೨ನೇ ಇಸವಿಯಲ್ಲಿ ಹುಟ್ಟಿದನು. ಅವನೂ ತನ್ನ ತಾಯಿಯನ್ನು ಬೀಬಿ ಮರಿಯಾಮ್ ಎಂದು ಹೇಳುತ್ತಿದ್ದನು. ಇದು ಮತ್ತೊಂದು ವಿಚಾರವು. ಈ ಸಂಬಂಧವಾಗಿ ಫಾದರ್ ಹೊಸ್ಟೆನರವರು ಬರುವ ತಿಂಗಳಲ್ಲಿ ಒಂದು ಉಪನ್ಯಾಸವನ್ನು ಕೊಡಲಿಕ್ಕಿದ್ದಾರೆ.

~~~

ಕರಾಚಿಯಲ್ಲಿ ಈಗತಾನೇ ಹುಟ್ಟಿದ ಒಂದು ಮಗುವಿನ ವಿವಾಹವು ಮಹಮ್ಮದೀ ಲಾಕ್ಕನುಸಾರವಾಗಿ ನಡೆದು ಸಿಂಧ್ ಜುಡಿಸಿಯಲ್ ಕೋರ್ಟಿನವರಿಂದ ಈ ವಿವಾಹವು ರದ್ದುಪಡಿಸೋಣಾಗಿರುತ್ತದೆ. ಈ ವಿವಾಹದಲ್ಲಿ ಮದುಮಗಳು ೧೦ ವರ್ಷ ವಯಸ್ಸಿನವಳು. ಮದುಮಗನು ೧೨ ತಿಂಗಳ ಮಗು. ಮದುಮಗಳ ತಂದೆಯು ತನ್ನ ಆಸ್ತಿಯನ್ನೆಲ್ಲಾ ದುರ್ನಡತೆಯಿಂದ ಕಳಕೊಂಡು ವರದಕ್ಷಿಣೆಯ ಆಸೆಯಿಂದ ಈ ವಿವಾಹವನ್ನು ನಡಿಸಿದನೆಂತ ರುಜುವಾಯಿತು. ಈ ಮೊಕದ್ದಮೆಯಲ್ಲಿ ಮದುಮಗಳ ತಾಯಿಯು ಮುದ್ದೈಯಾಗಿದ್ದು ವಿವಾಹವನ್ನು ರದ್ದುಮಾಡಬೇಕೆಂತ ದಾವೆ ತಂದಿದ್ದಳು. ಈ ವಿವಾಹವು ಕ್ರೂರವಾದುದೂ ಅಸಹ್ಯವೂ ಆಗಿದೆಂದು ಜಡ್ಜರು ಅಭಿಪ್ರಾಯಪಟ್ಟು ಮದುಮಗಳ ತಂದೆ ಮತ್ತು ಮದುಮಗನ ತಂದೆ ಅವರವರು ಈ ವ್ಯಾಜ್ಯದ ಖರ್ಚನ್ನು ನೋಡಿಕೊಳ್ಳಬೇಕೆಂದು ತೀರ್ಮಾನ ಹೇಳಿ ವಿವಾಹವನ್ನು ರದ್ದುಪಡಿಸಿದರು.

~~~

ಮುಂಬಾಯಿಯಲ್ಲಿ "ಸರ್ವೆಂಟ್ಸ್ ಆಫ್ ಇಂಡಿಯಾ" ಸೊಸ್ಯಾಟಿಯ ಮೆಂಬರರಾದ ರಾ| ಗೋಪಾಲಕೃಷ್ಣ ದೇವಧರರವರು ಮತ್ತು ಸಹಕಾರಿ ಚಳವಳಿಯ ಕೆಲವು ಪ್ರಮುಖರು ಸಹಕಾರಿ ಸಂಘಗಳ ಸೆಕ್ರೆಟರಿಗಳಿಗೆ ಶಿಕ್ಷಣ ಕೊಡುವ ಬಗ್ಗೆ ಒಂದು ವರ್ಗ ತೆಗೆಯುವ ವಿಚಾರಮಾಡಿರುವರು. ಇದೇ ತಿಂಗಳಲ್ಲಿ ಈ ವರ್ಗ ಕೂಡುವದು. ಮುಂಬಾಯಿ, ಗುಜರಾಥ ಮತ್ತು ಮಹಾರಾಷ್ಟ್ರದೊಳಗಿನ ಆರಿಸಿದ ಸಂಘಗಳ ಸೆಕ್ರೆಟರಿಗಳವರನ್ನು ಈ ವರ್ಗಕ್ಕೆ ಸೇರಿಸಿಕೊಳ್ಳಲಾದೀತು. ಮುಂಬಾಯಿಯಲ್ಲಿ ತೆಗೆದ ಈ ವರ್ಗದಂತೆ ಇತರ ಪ್ರಾಂತ್ಯಗಳ ಸಂಘಗಳ ಸೆಕ್ರೆಟರಿಗಳ ಶಿಕ್ಷಣಗೋಸ್ಕರ ಒಂದು ವರ್ಗ ತೆಗೆದರೆ ಬಹಳ ಉಪಯೋಗವಾದೀತು.

~~~

ಮುಂಬಾಯಿ ಗವರ್ನರರಾದ ವಿಲಿಂಗ್ಡನ್ ಪ್ರಭುಗಳವರು ಮಹಾರಾಷ್ಟ್ರದೊಳಗಿನ ಸರದಾರರ ದರಬಾರ ಕೂಡಿಸಿ, ಬೇಸಾಯದ ಸುಧಾರಣೆ, ಮತ್ತು ಸಹಕಾರಿತನದ ಬೆಳವಣಿಕೆ ಈ ಎರಡು ವಿಷಯಗಳಿಗೆ ಸಂಪೂರ್ಣ ಸಹಾನುಭೂತಿಯನ್ನು ತೋರಿಸಿ ಮಹಾರಾಷ್ಟ್ರದೊಳಗಿನ ಎಲ್ಲಾ ಸರದಾರರು ಈ ವಿಷಯ ಪರಿಶ್ರಮಮಾಡಿ ರೈತರ ಸ್ಥಿತಿಯನ್ನು ಸುಧಾರಿಸಬೇಕಾಗಿ ಸೂಚಿಸಿರುವರು.

~~~

ದಕ್ಷಿಣ ಕನ್ನಡ.

~~~

P. D. LIMA.

Dental Surgeon, Mangalore.

ಇವರು ಈಗ ತಾನೇ ಸರ್ಕೀಟಿನಿಂದ ಹಿಂತಿರಳಿ ಬಂದಿರುವರು. ಅಮೇರಿಕದಿಂದ ಭಾರೀ ಕೃತಕ ದಂತಗಳನ್ನು ತರಿಸಿಕೊಂಡಿಟ್ಟಿರುವರು. ಈ ಸುಸಮಯವನ್ನು ಕಳಕೊಳ್ಳಬೇಡಿರಿ. ಮಿತವಾದ ದರದಲ್ಲಿ ಹಲ್ಲುಗಳನ್ನು ಸ್ಥರಿಪಡಿಸಿಕೊಡುವರು.

ಪಿ. ಡಿ. ಲಿಮಾ.
ದಂತ ವೈದ್ಯರು, ಒಡೆಯರರ ಶಾಫಿನ ಬಳಿ,
ಮಂಗಳೂರು

WANTED.

For the Kalasa Medical Fund, a Compounder Pay Rs. 12/ per mensem. Apply stating age and qualifications, with copies of testimonials to the undersigned.

W. H. REED.
KALASA POST, MYSORE STATE.

ನೋಟೀಸು.

ಮೆಸರ್ಸ್ ಸ್ಟೀವನ್ ಎಂಡ್ ಸನ್,
ಬಿಸ್ಕುಟು ಮೆನ್ಯುಫೆಕ್ಚರರು.

ಇವರು ತಮ್ಮ ಶಾಪನ್ನು ಬಲ್ಮಠ ರಸ್ತೆಯಲ್ಲಿರುವ ಮೆ| ಜೊಕಿನ್ ಲೊರೆನ್ಸ್ ಸಾಲ್ಡಾಂಞರ ಮನೆಯ ಎದುರಿರುವ ಮೆ| ಮೋನ ಪ್ಯಾಸರ ಕಟ್ಟಡಕ್ಕೆ ವೈದಿರುತ್ತಾರೆ.

ಸ್ಟೀವನ್ ಎಂಡ್ ಸನ್.
ಮಂಗಳೂರು.

~~~

ಬಂಟ್ವಾಳ:—ಟಪ್ಪಾಲ ಇಲಾಖಾ ಸೂಪರಿನ್‌ಟೆಂಡೆಂಟ ದೊರೆಗಳು ಇಲ್ಲಿಯ ಪೋಸ್ಟಾಫೀಸನ್ನು ಸಂದರ್ಶಣೆ ಮಾಡುತ್ತಿರುವರು.

ಇಲ್ಲಿಂದ ೩ ಮೈಲುಗಳ ದೂರದಲ್ಲಿ ಹುಲಿಗಳ ಬಾಧೆಯಿಂದ ಹತ್ತೆಂಟು ದನಕರುಗಳು ಸತ್ತವು. ನೊನ್ನೆ ಒಂದು ಅರಡಿ ಉದ್ದದೊಂದು ಹುಲಿಯನ್ನು ಇಲ್ಲಿಯ ರಿಜಿಸ್ತ್ರಾರ ಕಚೇರಿಯ ಗುಮಾಸ್ತರು ರಾ| ಟಿ. ಎನ್. ಬಾಬುರವರು
~~~

ಗುಂಡಿನಿಂದ ಸುಟ್ಟುಕೊಂದು ಹುಲಿಯನ್ನು ಮೆರವಣಿಗೆ ಮಾಡಿಸಿದರು.

ಸರಕಾರದ ಹುದ್ದೇದಾರರೂ ಮನುಷ್ಯರಾಗಿರುವುದರಿಂದ ಅವರಿಗೆ ಸರಕಾರದವರು ವಸತಿಯಬಗ್ಯೆ ಕಟ್ಟಡಗಳನ್ನು ಕಟ್ಟಿಸಿಕೊಡುವ ವಾಡಿಕೆಯಿದೆ. ಜನಸಂದಣಿಯು ವಿಶೇಷವಾಗಿ ಇದ್ದವರಿಗೆ ನೆಲೆದೋರದಿರುವ ನಮ್ಮೂರಿನಲ್ಲಿ ಆಗಾಗ ವರ್ಗಹೊಂದಿಬರುವ ಹುದ್ದೇದಾರರಿಗೆ ಬಿಡಾರಗಳನ್ನು ಒದಗಿಸಿಕೊಡುವ ಭಾರವು ಸರಕಾರದ ಮೇಲೆ ಬೀಳುವಂತಿದೆ. ಊರಿನ ಮಧ್ಯಾಂಶವು ಹಿಂದೂಗಳ ಸ್ವತಂತ್ರ ಮನೆಗಳಿಂದ ತುಂಬಿರುವ ಕಾರಣ, ಇತರ ಮತಸ್ಥರು ಬಿಡಾರಗಳನ್ನು ಪಡೆವುದು ದುರ್ಲಭವು. ಆಯಾ ಕಚೇರಿಗೆ ಸಮೀಪವಾಗಿ ಆಯಾ ಹುದ್ದೇದಾರರಿರುವರಾದರೆ ಪ್ರಯೋಜನವು ಬಹಳ. ಹೀಗೆ ಇವನ್ನೆಲ್ಲಾ ಪರ್ಯಾಲೋಚಿಸಲೆಂದೇ, ಇಲ್ಲಿಯ ಆಸ್ಪತ್ರೆಯನ್ನು ಸಂದರ್ಶಿಸಿದ ಅಧಿಕಾರಿಗಳ ಟಿಪ್ಪಣಿಗಳೊಂದಿಗೆ ಇಲ್ಲಿಗೆ ಬರಬಹುದಾದ ವೈದ್ಯರುಗಳ ಬಗ್ಯೆ ಆಸ್ಪತ್ರೆಗೆ ಸಮೀಪದಲ್ಲಿ ಮನೆಕಟ್ಟಿಸಿಕೊಡಬೇಕಾಗಿ ಬೋರ್ಡಿಗೆ ವಿನಂತಿಸಿಕೊಂಡಿದೆ. ಈ ಮನೆಯು ಆಸ್ಪತ್ರೆಯ ವಠಾರದಲ್ಲೆ ಆಗುವ ಹಾಗೆ ಅನುಕೂಲವಿದೆ. ಹಿಂದೂಗಳಾದ ಈಗಿನ ವೈದ್ಯರು ಹೇಗೂ ಪೇಟೆಯಲ್ಲಿ ಬಿಡಾರಪಡೆಯಬಹುದಾದರೂ ಮುಂದೆ ಇತರಮತಸ್ಥರು ಬಂದರೆ, ಪಾಣೆಮಂಗಳೂರಿನ ಹೊಳೇ ಸಂಕವಾದನಂತರ ಆಚೇಕಡೆಯಲ್ಲೆ ಎಲ್ಲಿಯಾದರೂ ಮನೆಕಟ್ಟಿ ಇರಬೇಕಾಗುವುದು. ೧೮೬೫ರಿಂದ ಇಂದಿನವರೆಗೆ ಆಸ್ಪತ್ರೆಯನ್ನು ಸಂದರ್ಶಿಸಿದ ಕಲೆಕ್ಟರರೇ ಮೊದಲಾದ ಅಧಿಕಾರಿಗಳು ಡಾಕ್ಟರರಿಗೆ ಮನೆಯೇ ಇಲ್ಲವೆಂದು ಟೀಕಿಸಿರುವರು. ಕೆಪ್ಟನ್ ರಜಕ್‌ರು ಸೂಚಿಸಿದ ಸರ್ವೆನಂಬ್ರ 143/7ನೇ ಸ್ಥಳವು ನೆರೆಮುಚ್ಚುವ ಗದ್ದೆಯಾಗಿದೆ. ಆರೋಗ್ಯಪಾಲಕರಿಗೆ ಅನಾರೋಗ್ಯಕರವಾದ ಮನೆಗಳನ್ನು ಕಟ್ಟಿಸುವುದು ಸರಿಯಾಗಿಲ್ಲ. ಆದಕಾರಣ ಈಗ 143/2A-B ಜಾಗಗಳನ್ನು ಸರಕಾರಕ್ಕೆ ಸೂಚಿಸೋಣಾಗಿದೆ. ಆಸ್ಪತ್ರೆಯ ಒತ್ತಿನಲ್ಲಿ ಮಾರ್ಗದ ಬಳಿ ಈ ಸ್ಥಳವು ದೊರೆವುದು. ಗೇಟಿನೊಳಕ್ಕೇ ಮನೆಯಾಗುವುದು. ರೋಗಿಗಳ ಆರೈಕೆಗೂ ವೈದ್ಯರನ್ನು ಕರೆಯಬರುವವರಿಗೂ ಇದು ಸರಿಯಾದ ಸ್ಥಳವೆಂದು ಬೋರ್ಡಿನವರ ಪರಾಮರ್ಶೆಗೆ ತರಲಾಗಿದೆ.

ಬದ್ದೆಕಟ್ಟೆಬಳಿಗೆ ಹೋಗುವ ವಿಾನು ಪೇಟೆಯಲ್ಲಿ ಕಸದಗೂಡಿನ ಅಗತ್ಯವಿದೆ.

~~~~

ಮೂಡಬಿದ್ರಿ:—ಇಲ್ಲಿಯ ಜೈನ ವಿದ್ಯಾಲಯದಲ್ಲಿ ಸಂಸ್ಕೃತ ಕನ್ನಡಗಳನ್ನೆ ಕಲಿಸಲು ಉಪಾಧ್ಯಾಯರಿದ್ದಾರೆ. ಇಂಗ್ಲಿಷನ್ನೂ ಕಲಿಸುವದೆಂದು ಮೇಲು ತರಗತಿಯ ಉಪಾಧ್ಯಾಯರನ್ನು ತಂದಿದ್ದಾರೆ. ಇಂಗ್ಲಿಷ ಶಿಕ್ಷಣವು ಚೆನ್ನಾಗಿ ನಡೆಯುತ್ತಿದೆಯಂತೆ.

~~~~

ಹೊಸದುರ್ಗ:—ಇಲ್ಲಿಗೆ ಸಮೀಪವಿರುವ ಅಜಾನೂರು ಗ್ರಾಮದಲ್ಲಿರುವ ಬೆಳ್ಳಿಕೋಡಿಗೆ ಪಡುಭಾಗದಲ್ಲಿ ಒಂದು ದೊಡ್ಡ ಗದ್ದೆಬೈಲು ಮತ್ತು ಇದರ ಮಧ್ಯ ಒಂದು ಆಳವಾದ ತೋಡು ಸಹಾ ಇದೆ. ಈ ತೋಡು ಮಳೆಗಾಲದಲ್ಲಿ ನೀರಿನಿಂದ ತುಂಬಿ ಆಚೆ ಈಚೆ ಹೋಗಲಿಕ್ಕೂ, ಬರಲಿಕ್ಕೂ ಸಹ ಬಹಳ ಕಷ್ಟವಾಗುವದು ಮಾತ್ರವಲ್ಲ; ಬೆಂಚು ಕೋರ್ಟಿನಲ್ಲಿ ಇಡಲ್ಪಟ್ಟಿರುವ ನಂಬ್ರಗಳಿಗೆ ತಕ್ಕ ಸಮಯದಲ್ಲಿ ಹಾಜರಾಗಲಿಕ್ಕೂ, ಶಾಲಾ ಮಕ್ಕಳಿಗೆ ದಾಟಿ ಬರಲಿಕ್ಕೂ, ಪರಸ್ಪರ ಸಹಾಯ ಸಂಘಕ್ಕೆ ಕ್ರಮವಾಗಿ ವಾಯಿದೆಗೆ ಐವಜು ತೆರಲಿಕ್ಕೂ, ಅಡಿಯಾಗಿಯದೆ. ದನಕರುಗಳಿಗೆ ಮೇವಿಲ್ಲದೆ ಇದ್ದಲ್ಲಿ ಅಲೆದಾಡಿ ಮೇವಿನ ಆಶೆಗೆ ರೈಲ್ವೆಮಾರ್ಗದ ಬಳಿಗೆ ಹೋಗಿ ರೈಲ್‌ಗಾಡಿಗೆ ಆಹುತಿಯಾಗುತ್ತವೆ. ಹೀಗಿರುವ ಸಂಗತಿಗಳು ಮೇಲುದ್ಯೋಗಸ್ಥರಿಗೆ ತಿಳಿದುಬಂದದರಿಂದ ಕಳೆದ ಎರಡು ವರ್ಷದ ಮೊದಲು ಇಲ್ಲಿ ಒಂದು ರಸ್ತೆಯನ್ನು ಮಾಡಿಸಬೇಕಾಗಿ ರೂಪಾಯಿ ೨೧೦೦ ವರೇಗೆ ಶೇಂಕ್ಷನ್ ಮಾಡಿದರು. ಈ ಪ್ರಕಾರ ಎರಡು ಸರ್ತಿ ಶೇಂಕ್ಷನ್ ಆಗಿತ್ತು. ಆದರೆ ಏನೋ ಈ ಗ್ರಾಮಸ್ಥರ ನಿರ್ಭಾಗ್ಯದಿಂದ ಆ ನಿರ್ಣಯವನ್ನು ರದ್ದುಪಡಿಸಿ ಬೇರೆ ಕಡೆಗಳಲ್ಲಿ ಈ ಬಾಬತು ಹಣವನ್ನು ವಿನಿಯೋಗಿಸಿರುವುದಾಗಿ ಕೇಳುವದು ತುಂಬಾ ವ್ಯಸನವಾಗಿದೆ. ಆದ್ದರಿಂದ ದಯಾಳು ಸರಕಾರದವರು ಈ ಬಗ್ಯೆ ಬೇಕಾದ ತನಿಕೆಗಳನ್ನು ನಡಿಸಿ ನಮ್ಮೂರಿನಲ್ಲಿ ಒಂದು ರಸ್ತೆಯನ್ನು ಮಾಡಿಸಿ ಪಡು ರಸ್ತೆಯಿಂದ ಮೂಡು ರಸ್ತೆವರೇಗೆ ಮುಟ್ಟಿಸುತ್ತಿದ್ದರೆ ಬಹಳ ಉಪಕಾರವಾಗುತ್ತಿತ್ತು.

ಗದ್ದೆಬೈಲಿನ ಮಧ್ಯ ಒಂದು ತೋಡು ಇದೆಯೆಂಬದಾಗಿ ಹೇಳಿದೆ. ಈ ತೋಡಿಗೆ ಒಂದು ಸಂಕ ಸಹಾ ಮಳೆಗಾಲದಲ್ಲಾಗಲಿ ಬೇಸಿಗೆಯಲ್ಲಾಗಲಿ ಇಲ್ಲವೆಂತಲೇ ಹೇಳಬೇಕು. ನಮ್ಮೂರಿಗೆ ಮೂಡುಭಾಗದಿಂದ ಲಗ್ತವಾಗಿ ಹಾದು ಹೋಗುವ ಪುಂಬ್ಲಾರು ರಸ್ತೆಗೆ ಮುಟ್ಟಿಸಿರುವ ಪನತ್ತಡಿಯು ಇದೇ ಅಜಾನೂರ ಗ್ರಾಮದಲ್ಲೆ ಇರುವದರಿಂದ ಆ ರಸ್ತೆಯನ್ನು ಪಡುರಸ್ತೆಗೆ ಮುಟ್ಟಿಸಬೇಕಾಗಿ ಸರಕಾರದವರು ಬಲ್ಲಗ್ರಾಮದ ಒಂದು ಹಾದಿಯನ್ನು ಕಂಡುಹಿಡಿದಿದ್ದರಂತೆ. ಆದರೆ ಆ ದಾರಿ ಕಂಡು ಹಿಡಿಯುವದಕ್ಕಿಂತ ಈ ಅಜಾನೂರು ಗ್ರಾಮವಾಗಿ ಮೂಡು ರಸ್ತೆಗೆ ಮುಟ್ಟಿಸಲಿಕ್ಕೆ ಬಹಳ ಅನುಕೂಲತೆಯೂ, ಆದಾಯವೂ ಸಹಾ ಇರುತ್ತದೆ. ಈ ಪ್ರಕಾರ ಸರಕಾರದವರು ಮಾಡುತ್ತಿದ್ದರೆ ಮೇಲಿನ ತೊಂದರೆಗಳೆಲ್ಲಾ ಹೋಗಿ ಜನರಿಗೆಲ್ಲಾ ಬಹಳ ಉಪಕಾರವಾಗುತ್ತಿತ್ತು.

~~~~

ಕುಂಬಳೆ:—ಇದೇ ತಾ. ೧೬ನೇ ಸಾಯಂಕಾಲ ಅರಿಕಾಡಿ ಗ್ರಾಮದ ಇಬ್ರಾಯಿನಬ್ಯಾರಿ ಎಂಬವನು ಶಿರಿಯಾ ಸಂಕದ ಮೇಲೆ ಓಡಿಬರುವ ಶಟಲ್ ಟ್ರೈನಿನ ಅಡಿಯಲ್ಲಿ ಬಿದ್ದು ತಲೆಯೊಡದು ತಕ್ಷಣವೇ ಹೊಳೆಯಲ್ಲಿ ಬಿದ್ದನು. ಶವವು ಹೊಳೆಯಲ್ಲಿ ವ ಸಮುದ್ರದಲ್ಲಿ ಹುಡುಕಿ ಈ ವರೆಗೆ ಶಿಕ್ಕಲೇ ಇಲ್ಲಾ. ಈ ದೊಡ್ಡ ಸಂಕಕ್ಕೆ ಒಬ್ಬ ಗೇಟ್‌ಕೀಪರನು ಕಾವಲಿರುತ್ತಿದ್ದು ನಾಲ್ಕೈದು ವರುಷಗಳ ಹಿಂದೆ ಆತನೇ ರೈಲ್ವೆ ಟ್ರೈನಿನ ಅಡಿಯಲ್ಲಿ ಬಿದ್ದ ನಂತರ ರೈಲ್ವೆ ಕಂಪೆನಿಯವರು ಸದರಿ ಗೇಟನ್ನೇ ವಜಾ ಮಾಡಿರುತ್ತಾರೆ. ಇದು ಕೂಡಾ ಸದರಿ ಸಂಕದಲ್ಲಿ ನಾಲ್ಕು ಮರಣಗಳಾಯಿತೆಂತ ತಿಳಿದು ಬರುತ್ತದೆ.

ತಾ. ೨೨ಲ್ಲು ಪುತ್ತೂರು ಡಿವಿಜನಲ್ ಆಫೀಸರವರು ಸರ್ಕಿಟನಲ್ಲಿ ಇಲ್ಲಿಗೆ ಚಿತ್ತೈಸಿರುವರು. ತಾ. ೨೭ರ ವರೇಗೆ ಇಲ್ಲಿ ಮೊಕ್ಕಾಂ ಮಾಡುವರಾಗಿ ಕೇಳುತ್ತೇವೆ.

ಇಲ್ಲಿಯ ಬಿ. ಎಮ್. ಎಲಿಮೆಂಟರಿ ಶಾಲೆಯಲ್ಲಿ ಮೊದಲು ಹೆಡ್ ಮಾಸ್ತರಾಗಿದ್ದ ರಾ| ಕೆ. ರಂಗರಾಯರನ್ನು ಪುನಹಾ ಹೆಡ್ ಮಾಸ್ತರಾಗಿ ನೇಮಿಸಿದ್ದರಿಂದ ಶಾಲೆಯು ಕ್ರಮವಾದ ಸ್ಥಿತಿಗೆ ಬಂದೀತೆಂತ ನಂಬುತ್ತೇವೆ.

ರೈಲ್ವೆ ಕಲ್ವರ್ಟ್ ಬಳಿ ಶಹಾರ ರಸ್ತೆಯಲ್ಲಿ ಮಣ್ಣು ಬಿದ್ದಿರುವದರಿಂದ ಗಾಡಿಗಳ ಆಮದರಫ್ತಿಗೆ ಆತಂಕ ಉಂಟಾಗಿರುವ ಕಾರಣ ತ್ವರ್ಯದಲ್ಲೇ ಇದರ ದುರುಸ್ತಿಯು ಅಗತ್ಯವಾಗಿರುತ್ತದೆ.

~~~~

ಕಾಪು:—ಇಲ್ಲಿಂದ ಶಿರ್ವಕ್ಕೆ ರಾಜರಸ್ತೆ ಆಗುವದೆಂದು ಜನರು ಹಾರೈಸಿಕೊಂಡಿದ್ದರು. ಒಂದು ವರ್ಷದಿಂದೀಚೆ ಏನೊಂದೂ ವಿಲೆವಾರಿ ಬೋರ್ಡಿನವರಿಂದ ಆಗದೆ ಇದ್ದ ಪ್ರಯುಕ್ತ ಆಶೆ ನಿರಾಶೆಯಾಯಿತು. ಜನರಿಗೆಷ್ಟೋ ಉಪಕಾರವಾದ ಈ ಕೆಲಸಕ್ಕೆ ಇನ್ನಾದರೂ ಬೋರ್ಡಿನವರು ಆಲೋಚಿಸಿ ರಸ್ತೆಮಾಡಿಸಿದ್ದಲ್ಲಿ ತುಂಬಾ ಸಂತೋಷಾಸ್ಪದವೆನ್ನಬಹುದು.

~~~~

ಮಂಗಳೂರು.

~~~~

ಕಣ್ಣಾನೂರಿಗೆ ಸೇರಿದ ಚಿರಕಲಿನ ತಹಶೀಲದಾರರಾಗಿದ್ದ ಖಾನ್ ಸಾಹೇಬ್ ಪಿ. ಎ. ಅಮ್ಮು ಸಾಹೇಬರವರು ಡಿಪ್ಯುಟಿ ಕಲೆಕ್ಟರರಾಗಿ ನೇಮಿಸಲ್ಪಟ್ಟು ಇಲ್ಲಿಯ ಡಿವಿಜನಲ್ ಆಫೀಸರರಾಗಿ ವರ್ಗಾಯಿಸಲ್ಪಟ್ಟಿರುತ್ತಾರೆ.

ಕಲೆಕ್ಟರ್ ಆಫೀಸಿನ ೧ನೇ ಕಾರಸ್ಪಂಡೆಂಟ್ ಕ್ಲಾರ್ಕರಾಗಿರುವ ರಾ| ವಿಕ್ಟರ್ ಸಾಲ್ಡಾಂಞರವರು II ಗ್ರೇಡ್ ರೆವಿನ್ಯೂ ಇನ್ಸ್‌ಪೆಕ್ಟರರಾಗಿ ನೇಮಿಸಲ್ಪಟ್ಟಿರುವದರಿಂದ ಕಲೆಕ್ಟರ ಆಫೀಸಿನ ಟ್ಯಾಪಿಸ್ಟ ರಾ| ಎ. ಸುಬ್ರಾಯ ಹೆಗ್ಗಡೆಯವರು ೧ನೇ ಕಾರಸ್ಪಂಡೆಂಟ ಕ್ಲಾರ್ಕರಾಗಿ ನೇಮಿಸಲ್ಪಟ್ಟಿರುತ್ತಾರೆ.

ಪುತ್ತೂರು ತಾಲೂಕು ಬೋರ್ಡಿನವರು ಮ. ರಾ. ಕೆ. ನರಸಿಂಗ ನ್ಯಾಕರವರನ್ನು ಡಿಸ್ಟ್ರಿಕ್ಟ್‌ಬೋರ್ಡು ಮೆಂಬರರಾಗಿ ಆರಿಸಿರುತ್ತಾರೆ.

ಬಂಟ್ವಾಳದಲ್ಲಿ ಪೋಲೀಸ್ ಸಬ್ ಇನ್ಸ್‌ಪೆಕ್ಟರರಾಗಿದ್ದ ಯು. ತಿಮ್ಮಪ್ಪನವರಿಗೆ ಟೌನ್ ಪೋಲೀಸ್ ಸ್ಟೇಶನಿಗೆ ವರ್ಗವಾಗಿಯದೆ.

ಬಳ್ಳಾರಿ ಜಿಲ್ಲೆಯಲ್ಲಿ ಪೋಲೀಸ್ ಸಬ್ ಇನ್ಸ್‌ಪೆಕ್ಟರರಾಗಿದ್ದ ಅಬ್ದುಲ್ಲರಹಿಮಾನ್ ಸಾಹೇಬರಿಗೆ ಚಾರ್ಮಾಡಿಗೆ ವರ್ಗವಾಗಿಯದೆ.

ಮಂಗಳೂರು ತಾಲೂಕಿಗೆ ಸೇರಿದ ಮೂಡುಪೆರಾರ ಗ್ರಾಮದಲ್ಲಿ ತಾ. ೧೮—೮—೧೬ನೇ ರಾತ್ರಿ ಒಂದು ಖೂನಿ ನಡೆದಿರುವದು. ಆ ದಿನ ರಾತ್ರಿ ಬಬ್ಬು ಎಂಬವನು ಬಯ್ಯು ಎಂಬ ಹೆಂಗಸನ್ನು ತೋಡಿನ ಬಳಿ ಕರಕೊಂಡು ಹೋಗಿ ಅವಳನ್ನು ಕೊಂದು ಅವಳ ಮೈಮೇಲೆ ಇದ್ದ ಆಭರಣಗಳನ್ನು ಅಪಹರಿಸಿದನೆಂಬದಾಗಿ ತಿಳಿದು ಬಂದದೆ. ಪೋಲಿಸಿನವರು ಹೆಣವನ್ನು ಕಂಡುಕೊಂಡು ಬಬ್ಬುವನ್ನು ಆಭರಣ ಸಹಿತ ಕೈದುಮಾಡಿರುತ್ತಾರೆ.

ಮೂಳೂರು ಗ್ರಾಮದ ಗುರುಪುರ ಬಂಗ್ಲೆಯ ಸಮೀಪದ ಕಾಡಿನಲ್ಲಿ ಸೊಪ್ಪುಹೆಕ್ಕುತ್ತಿದ್ದ ಪೂವು ಎಂಬ ಹೆಂಗಸಿನ ಮೇಲೆ ಕೆ. ಡಿ. ಗುರುವಸೆಟ್ಟಿ ಎಂಬವನು ಬಿದ್ದು ಅವಳ ಸುಮಾರು ೧೫ ರೂಪಾಯಿ ಕ್ರಯಬಾಳುವ ಚಿನ್ನಾಭರಣಗಳನ್ನು ಅಪಹರಿಸಿದನೆಂಬದಾಗಿ ತಿಳಿದು ಬಂದದೆ. ಪೋಲಿಸಿನವರು ಸದರಿ ಕೆ. ಡಿ. ಗುರುವ ಸೆಟ್ಟಿಯನ್ನು ಆಭರಣ ಸಹಿತ ಕೈದುಮಾಡಿರುವರು.

ಕಳೆದ ಶನಿವಾರ ಕಾಳಮ್ಮ ದೇವಸ್ಥಾನದ ಬಳಿ ಒಂದು ಜಟ್ಕಾ ಅವಗಡವು ನಡೆದಿರುವದು. ಒಂದು ಜಟ್ಕವು ಒಬ್ಬ ಮಾಪಿಳ್ಳಾ ಹೆಂಗಸಿನ ಮೇಲೆ ಬಿದ್ದು ಹೆಂಗಸಿಗೆ ಗಾಯವಾಗಿರುತ್ತದೆಂತ ಕೇಳುತ್ತೇವೆ. ಬೀದಿಯಲ್ಲಿ

ಕಾವಲು ನಿಂತಿರುವ ಪೋಲೀಸಿನವರು ಜನರು ಕೂಡಿರುವ ಸ್ಥಳಗಳಲ್ಲಿ ನಾಗಾಲೋಟದಿಂದ ಓಡಿಸುವ ಜಟ್ಕಾಬಂಡಿಗಳ ಮೇಲೆ ಹೆಚ್ಚಿನ ನಿಗಾ ಕೊಡುವದಾದರೆ ಇಂಥಾ ಅವಗಡಗಳು ಕಡಿಮೆಯಾಗುವದರಲ್ಲಿ ಸಂದೇಹವಿಲ್ಲ.

ಕಳೆದ ಶುಕ್ರವಾರ ಮಧ್ಯಾನ್ಹದ ನಂತರ ರಥಬೀದಿಯಲ್ಲಿ ಒಂದು ಜಟ್ಕಾ ಅವಗಡವಾಗುವ ಸಂಭವವಿತ್ತು. ಪರಂತು, ಜಟ್ಕಾಡ್ರೈವರನು ಮೋಟರ್ ಸೈಕಲಿನ ಗಡಗಡ ಶಬ್ದಕ್ಕೆ ಬೆಚ್ಚಿ ಓಡುತ್ತಿದ್ದ ಕುದುರೆಯನ್ನು ಅತಿ ಜಾಗರೂಕತೆಯಿಂದ ಹತೋಟಿಯಲ್ಲಿಟ್ಟದ್ದರಿಂದ ಜಟ್ಕಾ ಬಂಡಿಯೇ ಶಾಲೆಗಳ ಸಬ್ ಅಸಿಸ್ಟಾಂಟ ಇನ್ಸ್‌ಪೆಕ್ಟರರ ಆಫೀಸಿನ ಹತ್ತಿರ ಬಿದ್ದುಬಿಟ್ಟದ್ದರಿಂದ ದಾರಿಗರಿಗೆ ಅಪಾಯ ಸಂಭವಿಸಲಿಲ್ಲ. ಜಟ್ಕಾ ಡ್ರೈವರನಿಗೆ ಮಾತ್ರ ಸ್ವಲ್ಪ ಪೆಟ್ಟಾಗಿರುವದು.

ಕಳೆದ ವಾರ ಮಂಗಳೂರು ಮುನ್ಸಿಪಾಲಿಟಿಯಲ್ಲಿ ಒಂದು ಪ್ಲೇಗು ಮರಣವಿತ್ತು.

ಕಳೆದ ಸಂಚಿಕೆಯಲ್ಲಿ ತಿಳಿಸಿದಂತೆ ಇದೇ ತಾ ೨೨ನೇ ಮಂಗಳವಾರ ಡಿಸ್ಟ್ರಿಕ್ಟ್ ಬೋರ್ಡ ಮೀಟಿಂಗ್ ಕೂಡಿ ಬಂತು. ಈ ಸಭೆಯಲ್ಲಿ ಅನೇಕ ದಾರಿಗಳ ದುರುಸ್ತಿ ಮತ್ತು ಕೆಲವು ಹೊಸ ದಾರಿಗಳನ್ನು ಕಡಿಯುವದಕ್ಕೆ ಬೇಕಾದ ಖರ್ಚಿನ ಅಂದಾಜು ಪಟ್ಟಿಗಳು ಬೋರ್ಡಿನವರಿಂದ ಮಂಜೂರಾತಿಯನ್ನು ಹೊಂದಿರುತ್ತದೆ.

ಉದ್ಯಾವರ ನದಿಗೆ ಸಂಕ ಹಾಕುವ ಸಂಬಂಧ ತಕ್ಕ ವಿಚಾರಣೆ ನಡಿಸುವದಕ್ಕೆ ಬೋರ್ಡಿನವರಿಂದ ರೂ. ೩೩೦ ಸೆಂಕ್ಷನ್ ಆಗಿರುವದು.

ನಂಪ್ರ ೭೭ನೇ ಕಲ್ಲಾರ್ ರಸ್ತೆಯನ್ನು ಪಂತೋಡಿ ವರೆಗೆ ವಿಸ್ತರಿಸುವದಕ್ಕೆ ರೂ. ೨೦೦೦ ಬೋರ್ಡಿನವರಿಂದ ಸೆಂಕ್ಷನ್ ಆಗಿರುವದು.

ಕಡೆಗೆ ಆರಿಸಿಕೆಯ ಮಂಗಳೂರು ರೈಲ್ವೆ ಸಂಬಂಧ ಡಿಸ್ಟ್ರಿಕ್ಟ್ ಬೋರ್ಡು ಸಭೆಯಲ್ಲಿ ಪ್ರಸ್ತಾಪವಿತ್ತು. ಈ ವಿಷಯ ವಿವರವನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವೆವು.

ಹಿಂದೂ ಟ್ರಾನ್ಸ್‌ಪೋರ್ಟ ಕಂಪೆನಿಯ ಮಾಲೀಕರಾದ ಪಿ. ಸುಬ್ಬಯ್ಯ ಶೆಟ್ಟರವರಿಗೆ ಮೋಟರ್ ಬಸ್ ಚಲಾವಣೆ ಮಾಡುವದಕ್ಕೆ ಅಧಿಕಾರಿಗಳಿಂದ ಅಪ್ಪಣೆ ಸಿಕ್ಕಿರುವದರಿಂದ ಅವರು ಬಂಟ್ವಾಳಕ್ಕೂ, ಅಲ್ಲಿಂದ ಬೆಳ್ತಂಗಡಿಗೂ; ಮಂಗಳೂರಿಂದ ಪುತ್ತೂರಿಗೂ ಮೋಟರ್ ಸರ್ವಿಸ್ ಸದ್ಯದಲ್ಲಿಯೇ ಇಡುವದೆಂಬದಾಗಿ ತಿಳಿಯುತ್ತೇವೆ.

ಮುನ್ಸಿಪಾಲಿಟಿಯೊಳಗೆ ಮಾಂಸ ಮಾರಾಟದ ಬಗ್ಯೆ ಆಡು ಕುರಿ ಇತ್ಯಾದಿಗಳನ್ನು ಕೊಯ್ಯಬೇಕಾದರೆ ಇಲ್ಲಿಯ ಡಿಸ್ಟ್ರಿಕ್ಟ್ ಸೆನಿಟರಿ ಆಫೀಸರರಿಂದ ಕೊಯ್ಯತಕ್ಕ ಪಶುಗಳನ್ನು ಪರೀಕ್ಷಿಸಬೇಕೆಂದು ನಿಯಮವಿದೆಯಷ್ಟೆ. ಆದರೆ ಈಚೆಗೆ ಕೆಲವರು ಇಂಥಾ ವೈದ್ಯರಿಂದ ಪರೀಕ್ಷೆ ಮಾಡಿಸದೆ ಕುರಿ ಆಡುಗಳನ್ನು ಕೊಂದು ಬಲ್ಮಠ ಕಂಕನಾಡಿ ಮೊದಲಾದ ಸ್ಥಳಗಳಲ್ಲಿರುವ ಮನೆಗಳಿಗೆ ಹೋಗಿ ಕಳ್ಳಿ ಕ್ರಯಕ್ಕೆ ಮಾಂಸಗಳನ್ನು ಮಾರುತ್ತಿರುವರೆಂದೂ ನಿನ್ನೆಯ ದಿನ ಒಬ್ಬನು ಈ ರೀತಿ ಕೊಯ್ದ ಆಡಿನ ಮಾಂಸವನ್ನು ರಾತ್ರಿಗೆ ೩ ಆಣೆ ಪ್ರಕಾರ ಬಲ್ಮಠ ಕಡೆಗೆ ಮಾರಬಂದಿರುವನೆಂದೂ ಆ ಮಾಂಸವು ನಾರುತ್ತಿತ್ತೆಂದೂ ಕೇಳುತ್ತೇವೆ. ಸಂಬಂಧಪಟ್ಟ ಅಫೀಸರರು ಈ ವಿಷಯ ತ್ವರ್ಯದಲ್ಲಿ ತಕ್ಕ ವಿಚಾರ ನಡಿಸಿ ಇಂಥಾ ಕೃತ್ಯಗಳು ಮುಂದೆ ನಡಿಯದಂತೆ ಮಾಡುವರೆಂದು ನಂಬಿದ್ದೇವೆ.

ಕಾಸರಗೋಡು:—ಇದೇ ಕಳೆದ ತಾ. ೧೩ನೇ ಆದಿತ್ಯವಾರ ಋಗುಪಾಕರ್ಮ ದಿವಸ ಇಲ್ಲಿಯ ಪ್ರಮುಖ ಗೃಹಸ್ಥರು ಕೂಡಿ "ಆಯುರ್ವೇದಿಕ್ ವೈದ್ಯಶಾಲಾ" ಎಂಬದೊಂದು ನೂತನವಾದ ಚಿಕಿತ್ಸಾಲಯವನ್ನು ಸ್ಥಾಪಿಸಿರುತ್ತಾರೆ. ಬಡವರಿಗೆ ಧರ್ಮಾರ್ಥವಾಗಿ ಔಷಧೋಪಚಾರವನ್ನು ಮಾಡುವದೇ ಇದರ ಮುಖ್ಯ ಉದ್ದೇಶವಾಗಿರುತ್ತದೆ.

ಬಡ ವಿದ್ಯಾರ್ಥಿಗಳಿಗೆ ಸಹಾಯಕ ಫಂಡು.

ಕಳೆದ ಜುಲಾಯಿ ತಾ. ೨೫ರ ನಂತರ ಈವರೆಗೆ ವಾಗ್ದಾನಮಾಡಿದವರ ಯಾ ವಸೂಲು ಕೊಟ್ಟವರ ಹೆಸರು ಮತ್ತು ಮೊಬಲಗು:— ೧. ಮ| ರಾ| ರಾ| ಬಸ್ರೂರು ಸಂಕ್ರಯ್ಯ ಶೆಟ್ರು (ವರ್ಷ ೧ಕ್ಕೆ) ರೂಪಾಯಿ ೨೪; ೨. ರಾ| ಬಡಿಲ್ಲ ದೂಮಪ್ಪೈಗಳು (ವ. ೧ಕ್ಕೆ) ರೂ. ೧೫. ೩. ರಾ| ವಕೀಲ ಕೆ. ಶ್ಯಾಮಶೆಟ್ರು (ವ. ೧ಕ್ಕೆ) ರೂ. ೧೨; ೪. ರಾ| ವಕೀಲ ಕೆ. ವೆಂಕಪ್ಪ ಶೆಟ್ರು (ವ. ೧ಕ್ಕೆ) ರೂ. ೧೨; ೫. ರಾ| ಕೊಡಿಯಾಲ ಗುತ್ತು ತಿಮ್ಮಯ್ಯ ಆಳ್ವರು (ವ. ೧ಕ್ಕೆ) ರೂ. ೧೦; ೬. ರಾ| ಮೂಲ್ಕಿ ಸುಬ್ಬಯ್ಯ ಶೆಟ್ರು (ವ. ೧ಕ್ಕೆ) ರೂ. ೬; ೭. ರಾ| ವಕೀಲ ಬಿ. ದಾಸಪೈಗಳು (ವ ೧ಕ್ಕೆ) ರೂ. ೬; ೮. ರಾ| ಮೂಲ್ಕಿ ಶೀನ ಶೆಟ್ರು (ವ. ೧ಕ್ಕೆ) ರೂ ೫; ೯. ಪಾವೂರ ಗುತ್ತಿನ ಕಾಂತಪ್ಪನಾಯ್ಕರು (ವ. ೧ಕ್ಕೆ) ರೂ. ೫; ೧೦ ರಾ| ಮೂಲ್ಕಿ ಚಂದಪ್ಪ ಶೆಟ್ರು (ವ. ೧ಕ್ಕೆ) ರೂ. ೫; ೧೧ ರಾ| ಕೆಂಜಾರ ಮಂಜಣ್ಣನಾಯ್ಕರು (ವ. ೧ಕ್ಕೆ) ರೂ. ೫; ೧೨. ರಾ| ಪಿ. ರಾಮಯ್ಯಕಾವರು (ವ. ೧ಕ್ಕೆ) ರೂ. ೫; ೧೩. ರಾ| ಮೂಲ್ಕಿ ಬಪ್ಪನಾಡು ತಿಮ್ಮಶೆಟ್ರು (ವ. ೧ಕ್ಕೆ) ರೂ. ೪; ೧೪. ಬಂಬ್ರಾಣ ಪಟ್ಟನಾಯ್ಕರು (ವ. ೧ಕ್ಕೆ) ರೂ. ೨.

ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನ, ಮಂಗಳೂರು ತಾ. 22—8—16. } ಮೂಲ್ಕಿ ರಾಮಣ್ಣ ಶೆಟ್ಟಿ. ಕಾರ್ಯದರ್ಶಿ.

ಮುಂಬಾಯಿ ಕನ್ನಡ ಗ್ರಂಥಾಲಯ ಸಂಘ.

ಈ ಸಂಘದ ಶ್ರೇಯಸ್ಸನ್ನು ಬಯಸಿ, ಅದರ ಪುಸ್ತಕ ಭಂಡಾರಕ್ಕೆ ಸಹಾಯ ಮಾಡಿದ ಕೆಳಗೆ ಹೆಸರು ತೋರಿಸಿರುವ ಗೃಹಸ್ಥರ ಉದಾರತೆಗಾಗಿ ಸಂಘದ ಕಾರ್ಯನಿರ್ವಾಹಕ ಸಭೆಯವರು ತಮ್ಮ ಕೃತಜ್ಞತೆಯನ್ನು ಈ ಮೂಲಕ ಪ್ರಕಟಗೊಳಿಸುವದಕ್ಕೆ ಸಂತೋಷಪಡುತ್ತಾರೆ. ಪುಸ್ತಕ ಸಹಾಯ:—ರಾ| ಕಣ್ಣಂಗಾರ ಜೋಗಿ ಬಂಗೇರರವರು ೧೪; ರಾ| ಬಪ್ಪನಾಡ ಕೊರಗಶೆಟ್ರು ೯; ರಾ| ಮುಲ್ಕಿ ಚೆಂದು ಸಾಲ್ಯಾಣ್ಣಾಯರು ೨; ರಾ| ದೊ. ಯರ್ಮಾಲ ಕೊರಗಪ್ಪನವರು ೧; ರಾ| ಮುಲ್ಕಿ ಸೀನಪ್ಪ ಪಳಾರನವರು ೧; ರಾ| ಹೆಜಮಾಡಿ ಕೃಷ್ಣತುಕ್ರನವರು ೧; ರಾ| ಗುಡ್ಡೆಕೊಪ್ಲ ದೂಜ ಇಸರನವರು ೧. ಧನ ಸಹಾಯ:—ರಾ| ಪೆರ್ಮುದೆ ಬಾಬು ಎ. ಸುವರ್ಣರವರು (೨ನೇ ಕಂತು) ರೂ. ೩; ರಾ| ಸುರತ್ಕಲ್ ಬಾಡುಶೆಟ್ಟಿಗಾರನವರು ರೂ. ೧; ಮಾಸಪತ್ರಿಕೆಗಳ ಸಹಾಯ:— ರಾ| ಮುಲ್ಕಿ ವೋಂಕ್ರನವರು ೧; ರಾ| ಬಪ್ಪನಾಡ ಪುವ್ವ ಚೆಂಪನವರು ೧; ರಾ| ಮಟ್ಟು ನಾರಾಯಣನವರು ೧; ರಾ| ಹೊಗೆ ಸೋಮಯ್ಯ ಮಂದಣ್ಣಾಯರು ೧. ಈ ರೀತಿಯಲ್ಲಿ ಕನ್ನಡ ಭಾಷಾಭಿವೃದ್ಧಿಗಾಗಿ ಸ್ಥಾಪಿಸಲ್ಪಟ್ಟು ಇನ್ನೂ ಬಾಲ್ಯಾವಸ್ಥೆಯಲ್ಲಿ ಉಳ್ಳ ಈ ಸಂಘಕ್ಕೆ ಪ್ರೋತ್ಸಾಹ ಕೊಡಲಿಚ್ಛಿಸುವವರು ತಮ್ಮಿಂದ ಅನುಕೂಲವಾದ ಕನ್ನಡ ಗ್ರಂಥಗಳನ್ನು ಈ ಕೆಳಗಿನ ವಿಳಾಸಕ್ಕೆ ರವಾನಿಸಿದಲ್ಲಿ ಅವು ಕೃತಜ್ಞತಾಪೂರ್ವಕವಾಗಿ ಸ್ವೀಕರಿಸಲ್ಪಡುವವು.

To the Secretary,
Bombay Canarese Literature Society.
Asraf Subban Khan House.
Pitha Street, FORT BOMBAY.

NOTICE.

In the court of the Dt. Munsif Kundapur.

ORIGINAL SUIT NO $\frac{273}{16}$

Subbanna Shetty Nephew of Mudlukatte Nandiappa Shetty, Residing in Kandavar Village Coondapoor Taluk. } **Plaintiff.**

Moideen Saiba son of Murdeshwar Maddan Mahammad Saheb, Residing in Ardi of Albadi Village, Coondapoor Taluk. } **Defendant.**

To the above named defendant.

Take notice that the pro-note executed by you for Rs. 200—0—0 in favour of Manjaya Shetty Nephew of Hadimane Chandaya Ballal of Hebri on 22—6—1915 having been assigned by the said Manjaya Shetty in favour of this plaintiff for Rs. 200—0—0 on 12th June 1916, the above named plaintiff has filed a suit against you for Rs. 225—0—0 being the principle amount of Rs. 200—0—0 and interest thereon from 23—6—1915 to 22—6—1916 and the suit is posted to 9—9—16 for trial

Coondapoor, 19—8—16. } **K. Venkappa Shetty.** *Pleader for plaintiff.*

ಜೀನಸು ಧಾರಣೆ.

(ರಖಂ).

ಮಸೂರಿ ಹೊಸ ಅಕ್ಕಿ	6—4—0ರಿಂದ	6—10—0
ಗಾಡಿ ರಾಶಿ ಹೊಸ ,,	5—12—0	5—14—0
ಗುಡ್ಡ ,, ,,	5—14—0	6—6—0
ಅವ್ವಲ್ ಬೆಳ್ತಿಗೆ ,,	6—8—0	6—12—0
ಗುಡ್ಡ ಬೆಳ್ತಿಗೆ ,,	5—12—0	6—0—0
ಊಚು ಸುಗ್ಗಿ ,,	6—3—0	6—6—0
ರಂಗೂನು ಬೆಳ್ತಿಗೆ ಗೋಣಿ ೧ರ	9—10—0	9—12—0
ಗೋಧಿ ಗೋಣಿ ೧ರ	11—12—0	12—0—0
ಹುರುಳಿ ಗೋಣಿ ೧ರ	6—2—0	6—8—0
ಕಡಲೆ ಗೋಣಿ ೧ರ ಬೊಂಬ್ಯ	8—12—0	10—8—0
ತೊಗರಿ ಗೋಣಿ ೧ರ		11—4—0
ತೊಗರಿ ಬೇಳೆ ಗೋಣಿ ೧ರ	12—8—0	14—8—0
ಉದ್ದು ಗೋಣಿ ೧ರ	10—8—0	11—4—0
ಊರುಬೆಲ್ಲ ಖಂಡಿ ೧ರ		50—0—0
ಉಪ್ಪು ಗೋಣಿ ೧ರ	4—8—0	4—10—0
ಕೊಬ್ಬರಿ ಖಂಡಿ ೧ರ	95—0—0	105—8—0
ಕೊಬ್ಬರಿಹಿಂಡಿ ಖಂಡಿ ೧ರ		16—8—0
ಎಳ್ಳಿಂಡಿ ಖಂಡಿ ೧ರ ಬೊಂಬ್ಯ	25—0—0	32—8—0
ಕೊಬ್ಬರಿ ಎಣ್ಣೆ ಮುಡಿ ೧ರ	7—6—0	7—12—0
ಎಳ್ಳೆಣ್ಣೆ ಮುಡಿ ೧ರ(ಕುರಾಸನ)		5—4—0
ಚಿಮಿಣಿ ಎಣ್ಣೆ ಪೆಟ್ಟಿಗೆ ೧ರ	6—0—0	6—11—0
ಮೋರಿಸ್ ಸಕ್ಕರೆ ಮುಡಿ ೧ರ		5—0—0
ಕಾಫಿ ಖಂಡಿ ೧ರ	225—0—0	235—0—0
ಹೊಸಬೀಗೋಟು ಖಂಡಿ೧ರ	82—0—0	85—0—0
ಹೊಸ ಗೇರುಬೀಜ ಮುಡಿ ೧ರ		2—12—6
ಕಟ್ಟಿಗ ಖಂಡಿ ೧ರ		75—0—0
ತಾಂಬ್ರ ತಗಡು ಮುಡಿ ೧ರ	26—0—0	30—0—0
ತಾಂಬ್ರ ಪಾತ್ರೆಗಳು ಮುಡಿ ೧ರ	23—0—0	28—0—0
ಚೀನಿ ಬೆಳ್ಳಿ ಶೇರು ೧ರ		24—0—0
ಪಚ್ಚೆಹೆಸರು ಮುಡಿ ೧ರ	5—4—0	5—6—0

Estd. 1888. **K. B. RELE & Cos.,—BOMBAY** ಸ್ಥಾಪನೆ 1888

ಕೆ. ಬಿ. ರೇಳೆ ಕಂಪೆನಿಕೃತ

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮಲಮು.

ಎಷ್ಟೋ ಹಳತ, ಕರಿ ಮತ್ತು ಹಟವಾರಿ ಗಜಕರ್ಣವು ಈ ಮಲಮಿನ ಒಂದೆ ಎರಡು ಸಾರಿ ಹಚ್ಚೋಣದಿಂದಲೇ ಫಕ್ತನಾಗುತ್ತೆವೆ. ೨೦-೨೫ ವರ್ಷಗಳ ಹಳತ, ಕೈಮಿನ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿ ಗಕ್ಕೆ ೪ ಆಣೆ. ಟಪ್ಪಾಲು ಖರ್ಚು ೮ ಬಾಟ್ಲಿಗಳ ವರೆಗೆ ನಾಲ್ಕೇ ಆಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು.

ಸಾರ್ಸಾಪರಿಲ್ಲೆಯು.

ಇದರಲ್ಲಿ ಪಾರಜವಿಲ್ಲಾ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರಿಂದಾ ದೋಷಗಳೆಲ್ಲ ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ಯಿಂದ, ಮೈಮೇಲೆ ಉಬ್ಬುವ ಚಕ್ಕೆಗಳೂ, ಜಖಮುಗಳೂ, ಬಾಯಿಗೆ ಮತ್ತು ಅಂಗಳಿಗೆ ತೂತು ಬೀಳೋಣ, ಪಿನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಸೈಯ ಸಂದು ನೋವೋಣ, ಕೈಕಾಲು ಒಡೆಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವೋಣ, ಕಿಲೆ ಕೈಕಾಲುಗಳು ಬಾತೋಣ. ಕೈಮೇಲೆ ಕರಿ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿ ಗಕ್ಕೆ ರೂ. ೧—೪—೦. ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರಪೂರ ಕಮಿಷನ್.

ಕೆ. ಬಿ. ರೇಳೆ ಸನ್ಸ ಕಂಪೆನಿ, ಗಿರಗಾಂವ ನಂ. ೪ ಮುಂಬಯಿ.

ಇದನ್ನು ಅವಶ್ಯವಾಗಿ ನೋಡಿ.

ಹೊಸ ನಮೂನೆ ಗಡಿಯಾರ! ಹೊಸ ನಮೂನೆ ಗಡಿಯಾರ!!

ಮುಂಚಿನ ಬೆಲೆ ರೂ. 4. ಈಗ ರೂ. 2.

ಲೇಡಿಸ್ ಪಾಕೆಟ್ ವಾಚ್.



ಈ ನಕ್ಷೆಯಲ್ಲಿ ಇದ್ದ ಗಡಿಯಾರವನ್ನು ನಮ್ಮ ಸ್ವಂತ ಆರ್ಡರ್ ಮೇಲೆ ಸೀಮೆಯಿಂದ ತರಿಸಿ ಇರುತ್ತೇವೆ. ಈ ಗಡಿಯಾರದ ಸಾಮಾನುಗಳು ಬಹು ದೃಢವಾಗಿ ಇರುತ್ತೆ. ಇಂಡಿಯಾ ದೇಶದಲ್ಲಿ ಅನೇಕ ಗಡಿಯಾರಗಳು ಖರ್ಚಾಗಿಯದೆ. ಇದು ನೋಡುವದಕ್ಕೆ ಸೊಗಸಾಗಿಯೂ ಇದೆ. ಗಂಟೆ ಸರಿಯಾಗಿ ತೋರಿಸುವದು. ನಮ್ಮ ಕಂಪೆನಿ ಪ್ರಖ್ಯಾತಿ ಹೊಂದುವದಕ್ಕಾಗಿ ಇದೇ ತಿಂಗಳ ಒಳಗೆ ತರಿಸಿಕೊಳ್ಳುವವರಿಗೆ ರೂ. 4—0—0 ಗಡಿಯಾರವನ್ನು ರೂ. 2—0—0 ಕೊಡುವೆವು. ಜಾಗ್ರತೆ ತರಿಸಿಕೊಳ್ಳಿ.

ವಿಳಾಸ:— ರಾಸ್ ವಾಚ್ ಕಂಪೆನಿ,
3 ಇರುಳಪ್ಪನ ಬೀದಿ,
ಮದರಾಸು.

1,000 ರೂಪಾಯಿಗಳು ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಬ್‌ಮಿಸ್ರಿ ಮುರಬ್ಬಾ

(ಗವರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ).

ಈ "ಸಾಲಾಬ್‌ಮಿಸ್ರಿ ಮುರಬ್ಬಾ"ವಿನ ಸೇವನೆಯಿಂದ—ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನದೋಷದ್ದಿಯಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಈ ಸಾಲಾಬ್‌ಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವದು. ಈ ಮುರಬ್ಬಾವು ಸಾಲಾಬ್‌ಮಿಸ್ರಿಯಿಂದ ತಯಾರಿಸಲ್ಪಟ್ಟದ್ದಲ್ಲವೆಂದು ವ್ಯಕ್ತಪಡಿಸುವವರಿಗೆ—

1,000

ರೂಪಾಯಿಗಳು ಬಹುಮಾನವಾಗಿ ಕೊಡಲ್ಪಡುವುವು. ಹಾಗೆ ವ್ಯಕ್ತಪಡಿಸಿಯೂ ಬಹುಮಾನದ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರಕಾರದ ಮೂಲಕ ನನ್ನಿಂದ ಪಡೆಯಬಹುದು.

ಕ್ರಯ ಡಬ್ಬಿ 1ಕ್ಕೆ ರೂ. 2—0—0. ಟಪ್ಪಾಲು ಖರ್ಚು ೧ ಡಬ್ಬಾದಿಂದ ೩ ಡಬ್ಬಿಗಳ ವರೆಗೆ 0—6—0. ಉಪಯೋಗಿಸುವ ವಿಧವು ಡಬ್ಬಿಯ ಜೊತೆಯಲ್ಲಿರುವುದು.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,
೫ ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ಆರೋಗ್ಯಕ್ಕೆ ಮೊದಲು ಸೋಪಾನವು.

ನಮ್ಮ ಅಪೂರ್ವವಾದ

ಕ್ರಯ ಹಾಸಲು

ಇಲ್ಲದೆ ಉಚಿತವಾಗಿ ಕಳುಹಿಸಲ್ಪಡುವ ವೈದ್ಯ ಬೋಧನೆಗಳಿರುವ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಓದುವದೇ ಯೋಗುವದು. ಈ ಪುಸ್ತಕಗಳು ಉತ್ತಮವಾಗಿ ಛಾಪಿಸಲ್ಪಟ್ಟು ಮುಫತ್ತಾಗಿ ಕಳುಹಿಸಲ್ಪಡುತ್ತೆ.

ಸಂಪೂರ್ಣ ಪುರುಷತ್ವಕ್ಕೆ ಮೊದಲು ಸೋಪಾನವು.

ಮದನಮಂಜರಿ ಮಾತ್ರೆಗಳು.

ಉಪಯೋಗಿಸುವದೇ ಯಾಗುವುದು. ಈ ಮಾತ್ರೆಗಳು ಬಲಹೀನತ್ವವನ್ನು ಹೋಗಲಾಡಿಸಿ ನರಗಳಿಗೆ ಬಲವನ್ನುಂಟು ಮಾಡಿ ರಕ್ತವನ್ನೂ ಪುರುಷನ ವೀರ್ಯವನ್ನೂ ವೃದ್ಧಿಗೊಳಿಸಿ ಸಂಪೂರ್ಣ ಪುರುಷತ್ವವನ್ನು ಕೊಡುವವು. ೪೦ ಮಾತ್ರೆಗಳು ರೂ. 1.

ರಾಜವೈದ್ಯ ನಾರಾಯಣಜಿ ಕೇಶವಜಿ.
ಆಯುರ್ವೇದೋದಯ ಔಷಧಾಲಯ,
ಪ್ರಧಾನ ಆಫೀಸು:—ಜಾಮನಗರ (ಕಾಠ್ಯಾವಾಡ್).

ಶಾಖೆ:—
ಮದನಮಂಜರಿ ಪಿಲ್ಸ್ ಆಫೀಸು,
20 ಚೈನಾಬಜಾರ್ ರಸ್ತೆ,
ಮದರಾಸು.

Rajavaidya Narayanji Keshavaji.
Ayurvedodaya Aushadhalaya,
Head Office:—JAMNAGAR, (KATHIAWAR).
Branch:—20 CHINA BAZAAR ROAD, MADRAS.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷದಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.



ಇಂಡಿಯಾದವರು ಮಾತ್ರವಲ್ಲ; ಬರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವಾ, ಫೀಜಿಐಲೆಂಡ್, ಈಸ್ಟಾಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ.

ಮಹಾಭಾಗ. ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಹಾತುಹಾತಿಗೂ ವೈದ್ಯರ ಸಮಯವನು ಕಾದು ಕೊರೆಯಿಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗೆಸಬೇನೆ, ಬಲಹೀನತ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತ ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 260 ಮಾತ್ರೆಗಳುಳ್ಳ ಕುಪ್ಪಿಗೆ ೮ ಆಣೆ ಮಾತ್ರ.

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—8—0.
ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—12—0.
ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 5—0—0.

ಯೋಗ್ಯತಾ ಪತ್ರಗಳು.

ಮ! ರಾ! ಡಾಕ್ಟರ್ ಪ್ರಭಾಕರ್ ಫೆಲೊ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರಾಜುಯೇಟ್ ಎನ್. ವೈ. ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ, ಐ. ಎನ್. ಆಫ್ ದಿ ಸ್ಯಾನಿಟರಿ ಇನ್‌ಸ್ಟಿಟ್ಯೂಟ್, ಲಂಡನ್ ಕನ್‌ಸಲ್ಟಿಂಗ್ ಕೆಮಿಸ್ಟ್, ಎಗಿಯರೀವೇನ್ ನಂ, 2. ಬೊಂಬೈ ಇವರು ಬರೆದಿರುವುದು. ತಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸುದರಲ್ಲಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯ ನೋವು, ಹೊಟ್ಟೆನೋವು, ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ, ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡುತ್ತೇನೆ.

ಮ! ರಾ! ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್, ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನ್‌ಮೆಂಟ್ ಇವರು ಬರೆದಿರುವುದು. ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧ ಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ವೈದ್ಯಶಾಲೆಯಲ್ಲಿ ಅನೇಕ ತರದ ಉಪಯುಕ್ತವಾದ ಕರ್ಣಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರು ಮಾಡುತ್ತಿರುತ್ತಾರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ. ಕ್ಯಾಟಲಾಗು ಉಚಿತ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಹಲ್ಲುನೋವುಗಳಿಗೆ ಖಾತ್ರಿಯಾದ ಔಷಧಿ

ಇದರ ಗುಣವನ್ನು ನೋಡಿರಿ
ಹಲ್ಲುಗಳು ಅಲ್ಲಾಡುವದಿಲ್ಲ
ಡೊಕ್ಟರಗಳ ಚಿಕಿತ್ಸೆ ವ ದಂತಚೂರ್ಣಗಳ ಅಗತ್ಯವಿಲ್ಲ
ದಂತವೈದ್ಯರಿಂದ ಹಲ್ಲು ದವಡೆಗಳು ತೆಗಿಸುವದು ಅನಾವಶ್ಯಕ
ಶುಲಭವಾದ ಔಷಧಿ
ಬಾಯಿಯೊಳಗೆ ವ ಹಲ್ಲುಗಳಿಗೆ ತಾಗಿಸುವ ಔಷಧವಲ್ಲ
ದೀರ್ಘಕಾಲದ ನೋವುಗಳಿಗೆ ಒಂದು ವಾರದ ಚಿಕಿತ್ಸೆ
ಕಿವಿಗಳಲ್ಲಿ 2, 3 ಬಿಂದುಗಳು ಹಾಕಿದರಿಂದಲೇ ಗುಣಹೊಂದುವದು
ಒಂದು ಶೀಷೆ ತರಿಸಿಕೊಳ್ಳಿ. ಇದರ ಗುಣವನ್ನು ಸ್ನೇಹಿತರಿಗೆ ಪ್ರಖ್ಯಾತಗೊಳಿಸಿ.

ಶೀಸೆ 1ರ ಕ್ರಯ ರೂಪಾಯಿ 1—4—0. ಟಪ್ಪಾಲು ಹಾಸಲು ಪ್ರತ್ಯೇಕ.

ಈ ಕೆಳಗಿನವರ

ಕೆಂಡಲ್ ಗಾರ್ಡನ್
ಮತ್ತು
ಹಂಪನ್‌ಕಟ್ಟೆ ಶೋಪುಗಳಲ್ಲಿ
ದೊರಕುವದು.

STANY BROTHERS
Sole Agents
C. M. C's, Toothache
Specific, Mangalore.

ಈಗಲೇ ಅಚ್ಚಾಗಿರುವದು! ನವೀನ ಪುಸ್ತಕ!! ವಿಕರಿಗೆ ಸಿದ್ಧವಾಗಿರುವದು!!!

ಕನ್ನಡ ಯಕ್ಷಗಾನ ಚಂದ್ರಮೌಳಿ ಕಾಳಗ.

ಈ ಪುಸ್ತಕವು ಸುಲಭವಾದ ಮತ್ತು ಮನೋರಂಜಕವಾದ ಯಕ್ಷಗಾನ ಪದಗಳಿಂದ ಒಳ್ಳೇ ಕಾಗದದಲ್ಲಿ ಸಕಲರಿಗೂ ತಿಳಿಯುವ ಹಾಗೆ ಛಾಪಾ ಮಾಡಲ್ಪಟ್ಟು ವಿಕರಿಗೆ ಸಿದ್ಧವಾಗಿರುತ್ತವೆ.

ಕ್ರಯ ಪ್ರತಿ 1ರ 4 ಆಣೆ.

ಹೆಚ್ಚು ಪ್ರತಿಗಳನ್ನು ಪಡಕೊಳ್ಳುವವರಿಗೂ ವ್ಯಾಪಾರಸ್ಥರಿಗೂ ಒಳ್ಳೇ ಕಮಿಷನ್ ಕೊಡಲಾದೀತು.

ಇವುಗಳಲ್ಲದೆ ಅನೇಕ ಪುಸ್ತಕ ವಗೈರೆ ಸಾಮಾನುಗಳು ಸುಲಭ ಧಾರಣೆಯಲ್ಲಿ ಸಿಕ್ಕುತ್ತವೆ.

ದಿ ಜನರಲ್ ಟ್ರೇಡಿಂಗ್ ಏಜನ್ಸಿ,
ವಿಟ್ಲ, ದಕ್ಷಿಣ ಕನ್ನಡ.

ಆತಂಕನಿಗ್ರಹ ಗುಳಿಗೆಗಳು.

ಅಯ್ಯಾ ವಾಚಕಮಹಾಶಯರೇ,—

ತಾವು ಅತಿ ಉತ್ತಮ ದೇಹದಿಂದ ಪ್ರಕಾಶಿಸುವಿರಾಗಬೇಕಾದರೆ, ಪ್ರಸ್ತುತದಲ್ಲಿ ಹಾಗು ತಮ್ಮ ದೇಹದಲ್ಲಿರುವ ಅನೇಕ ರೋಗಗಳನ್ನೆಲ್ಲ ಹೋಗಲಾಡಿಸುವ ಪ್ರಯತ್ನಪಡಬೇಕು. ಅಂಥಾ ಪ್ರಯತ್ನಗಳು ಹಾಗು ಉತ್ತಮಕರವಾದ ಔಷಧವನ್ನು ಸೇವಿಸುವಲ್ಲಿ ಗುಣ ಹೊಂದುವಿರಿ. ಅದಕ್ಕಾಗಿಯೇ

ಆತಂಕನಿಗ್ರಹ ಗುಳಿಗೆಗಳನ್ನು

ಹಗಲಿರುಳೂ ಪ್ರಿಯಬಾಂಧವನಾಗಿ ಮಾಡಿ ಸೇವಿಸುವಲ್ಲಿ ಉತ್ತಮರಾಗುವಿರಿ.

ಕ್ರಯ ೩೨ ಗುಳಿಗೆಗಳಿಗೆ ರೂ. ೧—೦—೦.

ವಿಳಾಸ:— ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, 157, ಬ್ರಾಡ್ವೇ, ಮದರಾಸು.
ಮತ್ತು 96, ಮೌಂಟ್ ರೋಡ್, ಮದ್ರಾಸು.

ಮೈಸೂರು ಏಜಂಟರು:—
ಮ! ಯಂ. ಸಿ. ಪದ್ಮನಾಭಯ್ಯಂಗಾರ್ಯರವರು,
ದಿ. ಚಾಂಪಿಯನ್ ಅಥ್ಲೆಟಿಕ್ ಏಜನ್ಸಿ ಮೈಸೂರು.

ಛಳಿಕಾಲ! (Best Shwals) ಭಯವಿಲ್ಲ!!

ಮೇಲಾದ ಶಾಲುಗಳು.

ಈ ಚಿತ್ರದಲ್ಲಿ ಇದ್ದ ಶಾಲು ಶೀಮೆಯಿಂದ ತರಿಸಿ ಇರುತ್ತೇವೆ. ಇದು ಛಳಿಕಾಲಕ್ಕೂ ಮಳೆಕಾಲಕ್ಕೂ ಹಿಮಕ್ಕೂ ಮೈಮೇಲೆ ಹಾಕಿಕೊಳ್ಳಬಹುದು. ಇದು ನೋಡುವದಕ್ಕೆ ಥಡುಲ್ ಆಗಿಯೂ ಬೆಲೆ ಸುಲಭವಾಗಿಯೂ ಎರಡು ವಿಧವಾದ ರಂಗಿನಲ್ಲಿ ತಯಾರಿಸಲ್ಪಟ್ಟದ್ದು. ಹೊಸ ನಮೂನೆ ಶಾಲು. ಇದುವರಿಗೂ ಇಂಡಿಯಾ ದೇಶಕ್ಕೂ ಬರಲಿಲ್ಲ. ಇದು ನಮಗಾಗಿ ಸೀಮೆಯಲ್ಲಿ ತಯಾರಿಸಿ ಕಳುಹಿಸಿರುತ್ತಾರೆ. ಇದರ ಅಂಚಿನಲ್ಲಿ ವಿಚಿತ್ರ ಕೆಲಸದಿಂದ ಮಾಡಿರುತ್ತೆ. ಬಣ್ಣ ಗ್ಯಾರಂಟಿ. ಎಲ್ಲರೂ ಕೊಂಡುಕೊಳ್ಳಬೇಕೆಂಬ ಪ್ರೋತ್ಸಾಹದಿಂದ ಪ್ರಚುರಪಡಿಸಿ ಇರುತ್ತೇವೆ. ಈ ಸಮಯ ಬಿಟ್ಟರೆ ಸಿಕ್ಕಲಿಕ್ಕಿಲ್ಲ. ಜಾಗ್ರತೆ ತರಿಸಿಕೊಳ್ಳಿ.

1½ ಮೊಳ ಉದ್ದ 6 ಮೊಳ ಅಗಲ ಇದ್ದ ಶಾಲು 1ಕ್ಕೆ ರೂ. 2—8—0 ವಿ. ಪಿ. ಖರ್ಚು 0—6—0 ಪ್ರತ್ಯೇಕ.

ವಿಳಾಸ:— ವ್ಯಾರಂ ಅಂಡು ಕಂಪನಿ,
3 ಇರುಳಪ್ಪನ ಬೀದಿ,
ಮದರಾಸು.

ಅರ್ಧ ಬೆಲೆ! ಅರ್ಧ ಬೆಲೆ!!

ಒಂದು ತಿಂಗಳು ಮಾತ್ರ.

ನಮ್ಮ ರೈಲ್ವೆ ರೆಗ್ಯುಲೇಟರ್ ವಾಚು ಒಳ್ಳೇ ಸಮಯ ಕೊಡು ವಂಥಾದ್ದು, ಸದ್ಗೃಹಸ್ಥರು ಧರಿಸಲು ಯೋಗ್ಯವಾದದ್ದು ಆಗಿದೆ. ಮೂರು ವರುಷದ ಗ್ಯಾರಂಟಿ ಇದೆ. ಕ್ರಯ ರೂ. 8. ಈಗ ರೂ. 4. ಬೊನಲಿವರ್ ವಾಚು ಕ್ರಯ ರೂ. 11. ಈಗ ರೂ. 5—8—0. ನಿಕಲ್ ಹಂಟಿಂಗ್ ವಾಚು ಕ್ರಯ ರೂ. 12. ಈಗ ರೂ. 6. ಬೆಸ್ಟ್‌ರಿಸ್ಟ್ ವಾಚು ಚರ್ಮದ ಸ್ಟ್ರಾಪ್ ಸಹಿತ ರೂ. 10. ಈಗ ರೂ. 5. ಲೇಡಿಸ್ 9 ಕರೆಟ್ ಚಿನ್ನದ ವಾಚು ಕ್ರಯ ರೂ. 32. ಈಗಿನ ರೂ. 16. ಲೇಡಿಸ್ ಬೆಳ್ಳಿ ವಾಚು ರೂ. 14. ಈಗ ರೂ. 7. ಗಟ್ಟಿ ಮತ್ತು ನಂಬಿಕೆಗೆ ಯೋಗ್ಯವಾದ 8 ದಿವಸಕ್ಕೊಮ್ಮೆ ಕೀ ಕೊಡುವ ಯೈಟ್ ಡೇಸ್ ವಾಚು ನಿಕಲ್‌ಕೇಸ್ ಒಪನ್ ಫೇಸ್ ರೂ. 18. ಈಗ ರೂ. 9. ಅದೇ ಬೆಳ್ಳಿಯ ಕೇಸ್ ಉಳ್ಳದ್ದು ರೂ. 24. ಈಗ ರೂ. 12. ಅದೇ ಬೆಳ್ಳಿ ಹಂಟಿಂಗ್ ಕೇಸ್ ರೂ. 30. ಈಗ ರೂ. 15. ರಿಸ್ಟ್ ವಾಚು ವಿನಹಾ ಇತರ ವಾಚುಗಳನ್ನು ಕೊಂಡುಕೊಳ್ಳುವ ಪ್ರತಿ ಗಿರಾಕಿಗಳಿಗೆ ಒಂದು ವಾಚುಸರಪಣಿಯೂ ಒಂದೇ ಸಲ 6 ವಾಚುಗಳನ್ನು ಕೊಂಡುಕೊಳ್ಳುವವರಿಗೆ ಒಂದು ವಾಚು ಪುಗಸಾಟೆಯಾಗಿಯೂ ದೊರಕುವದು.

The Century Watch Agency,
25, Madan Mitra Lane, CALCUTTA.

ಕೋಮಲ ವಿಲಾಸವು

ಎಂಬ ಹೆಸರಿನ ಬ್ರಾಹ್ಮಣರ ಖಾನಾವಳಿಯು.

ಪ್ರೊಪ್ರೈಟರ್ ಮತ್ತು ಮ್ಯಾನೇಜರ್—ಸೋಮೇಶ್ವರ ನರಸಿಂಗರಾವ್.

ಈ ಖಾನಾವಳಿಯಲ್ಲಿ ಬ್ರಾಹ್ಮಣ ಜಾತಿಯವರಿಗೂ, ಇತರ ಜಾತಿಯವರಿಗೂ, ಊಟವೂ, ಫಲಾಹಾರವೂ, ಕಾಫಿ, ಚಾ, ಮೊದಲಾದ ಪಾನಗಳೂ, ಉಳಕೊಳ್ಳಲಿಕ್ಕೆ ಜಾಗವೂ ದೊರಕುವದು.

ತಿಂಡಿ ಪದಾರ್ಥಗಳು ಕನಡಾ ಜಿಲ್ಲೆಯಲ್ಲಿ ಮಾಡುವ ಕ್ರಮದಲ್ಲಿ ಮಾಡೋಣಾಗುತ್ತವೆ. ದರ ಕಡಿಮೆ.

ಈ ಖಾನಾವಳಿಯು ಮದ್ರಾಸಿನಲ್ಲಿ ಹ್ಯಾಕೋರ್ಟಿಗೆ ಬಹಳ ಸಮೀಪವಾಗಿ ಫ್ರಾನ್ಸಿಸ್ ಜೊಸೆಫ್ ರಸ್ತೆ ನಂಬ್ರ 2ನೇ ಕಟ್ಟೋಣದಲ್ಲಿರುತ್ತದೆ. ಮದ್ರಾಸ್ ಪಟ್ಟಣಕ್ಕೆ ಬರುವ ಕಕ್ಷಿಗಾರರಿಗೂ, ವಿದ್ಯಾರ್ಥಿಗಳಿಗೂ, ಇತರ ಗೃಹಸ್ಥರಿಗೂ, ಕುಲಸ್ತ್ರೀಯರಿಗೂ ಬೇಕಾಗಿರುವ ಅನುಕೂಲತೆಗಳಿವೆ.

ಮದ್ರಾಸಿಗೆ ಬರುವವರು ಕೆಳಗೆ ಇಂಗ್ಲಿಷಿನಲ್ಲಿ ಬರೆದ ವಿಳಾಸಕ್ಕೆ ಕಾಗದ ಬರೆದರೆ ಅಥವಾ ತಂತೀ ಮೂಲಕ ತಿಳಿಸಿದರೆ ರೈಲ್ವೆ ಸ್ಟೇಶನಿಗೆ ನಮ್ಮ ಕಡೆಯಿಂದ ಜನರನ್ನು ಕಳುಹಿಸೋಣಾಗುವದು.

Telegraphic Address:—
"RESTAURANT"
(MADRAS).

"KOMALA VILAS"
No. 2. Francis Joseph Street,
Next Y.M.C.A. George Town,
MADRAS.

ಕೊಡ್‌ಲಿವರ್ ಎಣ್ಣೆ.



ಈ ಎಣ್ಣೆಯು ಕೊಡ್ ಎಂಬುದೊಂದು ಉತ್ಕೃಷ್ಟ ಜಾತಿಯ ಮತ್ಸ್ಯದ ಯಕೃತ್ತಿಯಿಂದ ಪಕ್ವಗೈದುದು. ಇದರಿಂದ ದೊರಕತಕ್ಕ ಲಾಭವಾದರೋ ಇದರಲ್ಲಿಯ ಎಷ್ಟನೆಯ ಅಂಶವು ಶಾರೀರಕ ಕ್ರಮದೊಡನೆ ಸೇರಿಕೊಳ್ಳುವುದೋ ಅದನ್ನು ತಾನೇ ಅವಲಂಬಿಸಿರುತ್ತದೆ. ಅಚ್ಚ ಕೊಡಲೀವರ್ ಎಣ್ಣೆಯೂ ಅದರಿಂದ ಪಕ್ವಗೈದ ಬೇರೆ ಔಷಧಗಳು ಹೊಲಸಾಗಿಯೂ ಕುತ್ಸಿತವಾಗಿಯೂ ಇರುವದರಿಂದ ಅವನ್ನು ಜನರು ಸೇವಿಸಲಾರರು ಮತ್ತು ಅವು ಸರಿಯಾಗಿ ಜೀರ್ಣವಾಗವಾದುದರಿಂದ ಅವನ್ನು ಸೇವಿಸುವದರಿಂದ ಅತಿಸಾರವು ಅನುಸರಿಸುತ್ತದೆ. ಆದರೆ ಅಂತಹ ಅಪಾಯಗಳಾದರು ಹೇವವಾದರೂ ಉಂಟಾಗದಂತೆ ಸೇವಿಸಲು ಯೋಗ್ಯವಾದ ಮಿಶ್ರಣವು ಪೋಟರ್ ಬರಿಯ ಕೊಡಲೀವರ್ ಮಿಶ್ರಣವೇ ಸರಿ. ಈ ಮಿಶ್ರಣದಲ್ಲಿ ಕೊಡಲೀವರ್ ಎಣ್ಣೆಯು ಪಚನ ಸುಲಭವಾದ ವಿಧದಿಂದ ಸೇರಿದ್ದು ಇದಕ್ಕೆ ಅರುಚಿಯಾಗಲಿ ಗಂಧವಾಗಲಿ ಇರುವದಿಲ್ಲ. ಇದರ ಉತ್ತರ ಫಲವು ಆಶ್ಚರ್ಯಕರವಾಗಿದೆ. ಶ್ವಾಸಕಾಸ, ಕ್ಷಯ ಯಾವ ಸರ್ವ ರೋಗಗಳಲ್ಲಿ ಕೊಡಲೀವರ್ ಎಣ್ಣೆಯನ್ನು ಸೇವಿಸುವದು ಅಗತ್ಯವಿದೆಯೋ ಅಂತಹ ಶ್ವಾಸಕಾಸ ಕ್ಷಯಾದಿ ರೋಗಗಳಲ್ಲಿಯೂ ಇತರ ರೋಗಗಳಲ್ಲಿಯಾದರೂ ಇದನ್ನು ಸೇವಿಸಬಹುದು. ಆದ್ದರಿಂದ ಕೊಡಲೀವರ್ ಎಣ್ಣೆಯು ನಿಮಗೆ ಎಂದೆಂದಿಗೆ ಬೇಕಾಗುವುದೋ ಆಗ್ಯೆ ಪೋಟರ್ ಬರಿಯ ಕೊಡಲೀವರ್ ಮಿಶ್ರಣವನ್ನೇ ಕೇಳಿಕೊಳ್ಳಿರಿ. ಈ ಮಿಶ್ರಣವು ಸುರಸವಾಗಿರುತ್ತದೆ. ಇದು ಎಲ್ಲಾ ಕಡೆಗಳಲ್ಲಿ ಮಾರಲ್ಪಡುವದು. ಮತ್ತು ಕನ್ನಡ ಬಲ್ಲವರೆಲ್ಲರು ಈ ಕೆಳಗೆ ಹಾಕಿರುವ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಬಾಟ್ಲಿ 1ಕ್ಕೆ 3—4—0. ಅರ್ಧ ಬಾಟ್ಲಿಗೆ 1—12—0.

ದಿ ಊಲನ್ ಮಾರ್ಟ್, ಮಂಗಳೂರು, ದ. ಕ.

ದರ್ಬಾರ್ ಸೋಪ್.

(ಯೂನಿವರ್ಸಲ್ ಹೇರ್ ಡಿಸ್ಸಾಯರ್ ಕೇಶನಾಶಿನಿ).

ಕೆಡಕಿಲ್ಲ! ಕಲೆಯಿಲ್ಲ!! ಉರಿಯಿಲ್ಲ!!!

ಇದು ಸ್ವಲ್ಪವೂ ಕೆಡಕೂ, ಕಲೆಯೂ, ಉರಿಯೂ ಇಲ್ಲದಂತೆ ಮೈಯಲ್ಲಿ ಯಾವ ಭಾಗದಿಂದಲಾದರೂ ಕೂದಲನ್ನು ನಾಶಮಾಡತಕ್ಕ ಸಾಬೂನುಗಳಲ್ಲಿ ಅತ್ಯುತ್ತಮವಾದದ್ದೆಂದು ಎಲ್ಲರೂ ಒಪ್ಪಿದ್ದಾರೆ. ನಿಮಿಷಮಾತ್ರವೇ ಹಾಕಿದರೂ ಸಾಕು. ಇದನ್ನು ಉಪಯೋಗಿಸುವ ವಿಧಾನವನ್ನು ನಾಲ್ಕು ಭಾಷೆಗಳಲ್ಲಿ ಇದರೊಡನೆ ಕಳುಹಿಸುತ್ತೇವೆ. ಪ್ರತಿ ಒಬ್ಬರಿಗೂ ಇದನ್ನು ಉಪಯೋಗಿಸುವ ವಿಧಾನವು ಸುಲಭವಾಗಿ ತಿಳಿಯುವನು. ಹೇಳಿರುವ ಪ್ರಕಾರ ಇದನ್ನು ಉಪಯೋಗಿಸಿದರೆ ಮನಸ್ಸಿಗೆ ಬಹಳ ತೃಪ್ತಿಕರವಾದ ಫಲವನ್ನು ಕೊಡತಕ್ಕ ಸಾಬೂನುಗಳಲ್ಲಿ ಇದು ಮೊದಲನೆಯದೆಂದು ಪ್ರಸಿದ್ಧವಾಗಿದೆ.

ಇದು ಹೇಳಿದಂತೆ ಗುಣಕಾರಿ ಇಲ್ಲವೆಂದು ಯಾರಾದರೂ ತಾವೇ ಉಪಯೋಗಿಸಿ ನಮಗೆ ಬರೆದರೆ ತಡಮಾಡದೆ ಅವರ ಹಣವನ್ನು ಅವರಿಗೆ ವಾಪಸ್ ಕಳುಹಿಸುವೆವು.

ಮೂರು ಸಾಬೂನುಗಳುಳ್ಳ ಪೆಟ್ಟಿಗೆ 1ಕ್ಕೆ ರೂ. 0—14—0. ಒಂದೇ ಬಾರಿಗೆ 2 ಪೆಟ್ಟಿಗೆ ತರಿಸಿಕೊಂಡರೆ 2ಕ್ಕೆ ರೂ. 1—10—0.

ಟಪ್ಪಾಲ್ ಹಾಸಲು ಬೇರೆ ಬೀಳುವದು. ವ್ಯಾಪಾರಸ್ಥರಿಗೆ ಅವರು ಹೆಚ್ಚಾಗಿ ತೆಗೆದುಕೊಂಡರೆ ಸ್ಪೆಶಲ್ ಕಮಿಶನ್ ಕೊಡುತ್ತೇವೆ.

ವಿಳಾಸ:— ರತ್ನಂ ಕಂಪೆನಿ,
3 ಇರುಳಪ್ಪನ ಬೀದಿ,
ಮದರಾಸು.

ಶ್ರೀಮತ್ ಕಲ್ಯಾಣ ಬಂಧುಗಳೇ!

ಈ ಕಡೆ ನೋಡಿರಿ.

ಕಲ್ಯಾಣಕಾರಕವೆಂಬ ಜಿನಭಿಷಗ್ರಂಥಾಧಾರದಿಂದಲೂ ಅನೇಕ ರಾಜವೈದ್ಯರುಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧೌಷಧಗಳು ಈ ಕೆಳಗಣ ವಿಳಾಸದಾರರಲ್ಲಿ ದೊರಿಯುವವು.

ಅಪೇಕ್ಷಕರು ಕೆಟಲಾಗನ್ನು ತರಿಸಿಕೊಂಡರೆ ಸಮಾಧಾನವಾಗುವದು.

ವಿಳಾಸ:— *Address:—*

ಎಸ್. ಪಿ. ರಾಜಾ ಮತ್ತು ಕಂಪೆನಿ, **S. P. RAJA & Co.,**
ಕಲ್ಯಾಣಕಾರಕ ಭಿಷಗ್ಮಂದಿರ, *Kalyanakaraka Bishagmandir.*
ಪೋಸ್ಟು ಪೊಳಲಿ, ದ. ಕ. POST POLALY, S. C.

ಕನ್ನಡ ಲಿಪಿಯ ಪುಸ್ತಕಗಳು.

ಋಗ್ವೇದ ಸಂಧ್ಯಾವಂದನ	0	3	0	ಗೋಪಿಕಾ ಗೀತ	0	1	0
ಯಜುರ್ವೇದ ಸಂಧ್ಯಾವಂದನ	0	4	0	ಶ್ರೀರಾಘವೇಂದ್ರ ಸ್ತೋತ್ರ ವಾದಿ			
ಋಗ್ವೇದ ಬ್ರಹ್ಮಯಜ್ಞ ವಗೈರೆ	0	3	0	ರಾಜಕವಚ	0	2	0
ದೇವಪೂಜಾ ಪದ್ಧತಿ	0	3	0	ಹರಿಕಥಾಮೃತಸಾರ ಮೂಲ	0	10	0
ಪ್ರಾತರಾಹ್ನಿಕ ಪದ್ಧತಿ	0	3	0	ಪುರಂದರ ದಾಸರ ಕೀರ್ತನೆಗಳು			
ಅಭಿಷೇಕ ಸೂಕ್ತಗಳು	0	2	0	3ನೇ ಭಾಗ	0	6	0
ಶ್ರೀಸೂಕ್ತ ಪುರುಷಸೂಕ್ತ	0	1	0	ಉದಯರಾಗ 1ನೇ ಭಾಗ	0	4	0
ವಾಯುಸ್ತುತಿ	0	2	0	ಲಕ್ಷ್ಮೀ ಶೋಭನ ಹಾಡು	0	2	0
ವಿಷ್ಣುಸಹಸ್ರನಾಮ ಸ್ತೋತ್ರ	0	2	0	ತುಲಸಿಸಂಕೀರ್ತನೆ ಪದಗಳು	0	2	0
ವಿಷ್ಣುಸಹಸ್ರನಾಮಾವಳಿ	0	2	0	ಹರಿಭಕ್ತಿಸಾರ	0	1	0
ದ್ವಾದಶ ಸ್ತೋತ್ರ	0	2	0	ಉಡುಪಿ ಶ್ರೀಕೃಷ್ಣಚರಿತ್ರೆ	0	3	0
ದ್ವಾದಶ ದ್ವಾದಶನಾಮ ಸ್ತೋತ್ರ	0	1	6	ಸ್ವಪ್ನಪದ ಮಧ್ವನಾಮ	0	1	6
ಗಜೇಂದ್ರ ಮೋಕ್ಷ	0	1	6	ಬೀಗರಹಾಡು ದೂರುವಪದಗಳು	0	2	0
ಪಾಂಡವ ಗೀತಾ	0	1	6	ಕುರುಕನ್ಯೋಪದೇಶ	0	2	0
ಹನುಮದ್ಭೀಮ ಮಧ್ವಾಸ್ತೋತ್ರ	0	2	0	ಆಚಾರದರ್ಪಣ	0	4	0

ಇವುಗಳಲ್ಲದೆ ಇನ್ನು ಅನೇಕ ಬಾಲಬೋಧ ಮತ್ತು ಕನ್ನಡ ಲಿಪಿಯ ಸಂಸ್ಕೃತ ಪ್ರಾಕೃತ ಪುಸ್ತಕಗಳೂ, ಶ್ರೀ ಮುದ್ರೆಗಳೂ ಪೂಜಾಸಾಮಗ್ರಿಗಳೂ ದೊರಕುತ್ತವೆ. ಬೇಕಾದವರಿಗೆ ಕೆಟಲಾಗು ಕಳುಹಿಸಬಹುದು.

ವಿಳಾಸ:— ಪಾವಂಜೆ ಗುರುರಾವ್,
ಶ್ರೀ ಮನ್ಮಧ್ವಸಿದ್ಧಾಂತ ಗ್ರಂಥಾಲಯ ಉಡುಪಿ, ದ. ಕ.

ಜೀವನಾನಂದವನ್ನು ಪ್ರತಿಯೊಬ್ಬರೂ ಸೇವಿಸಬೇಕು.

ಜೀವನಾನಂದವೆಂದರೇನು?

ಜೀವನಾನಂದವೆಂದರೆ 64 ಮೂಲಿಕೆಗಳಿಂದ ತಯಾರ್ಮಾಡಲ್ಪಟ್ಟ ಮಹೌಷಧ. ಮಾಧುರ್ಯವಾದುದು. ಮಧುರವಾದ ಸುವಾಸನೆಯುಳ್ಳದ್ದು. ಕೊಡಲೀವರ್ ಆಯ್ಲಿಗಿಂತ 16 ಪಾಲು ಬಲಕೊಡುವಂಥಾದ್ದು.

ಅದನ್ನು ಯಾರು ಸೇವಿಸಬೇಕು?

ರೋಗಿಗಳೂ, ನಿರೋಗಿಗಳೂ, ಮುದುಕರೂ, ಮಕ್ಕಳೂ, ಶೀರ್ಣದೇಹಿಗಳೇ ಮುಂತಾದ ಪ್ರತಿಯೊಬ್ಬರೂ ಸೇವಿಸಬೇಕು. ಇದರಿಂದ ರೋಗಿಗಳಿಗೆ ರೋಗ ನಾಶವಾಗುತ್ತದೆ. ರೋಗವಿಲ್ಲದವರಿಗೆ ದೇಹದಾರ್ಢ್ಯ, ದೇಹಕ್ಕೆ ಕಾಂತಿ, ಮನಸ್ಸಿಗೆ ಉಲ್ಲಾಸವೇ ಮುಂತಾದ ಮಾನವನ ಆಶೆಯ ಅಸಂಖ್ಯಾತ ಉತ್ಸಾಹತೆಯನ್ನು ಕೊಡುತ್ತದೆ. ಅಲ್ಲದೆ,

ಅದು ಏನು ಮಾಡುತ್ತದೆ?

ಅದು ಶರೀರದ ರೋಗಗಳನ್ನೆಲ್ಲ ನಿರ್ನಾಮ ಮಾಡುತ್ತದೆ. ಕೆಮ್ಮು, ಉಬ್ಬಸವೇ ಮುಂತಾದ ಶ್ವಾಸಕೋಶದ ರೋಗಗಳು, ಕ್ಷಯ, ಕೀಲುವಾತ, ಅಜೀರ್ಣ, ಬೇಸರಿಕೆ, ಮಲಬದ್ಧತೆ, ಪಿತ್ತಕೋಶದ ರೋಗಗಳು, ಧಾತು ನೀರಾಗುವಿಕೆಯೇ ಮುಂತಾದುವನ್ನೆಲ್ಲ ನಾಶಮಾಡುತ್ತದೆ.

ಇಂತಹ ಉಪಕಾರಿಯಾದ ಔಷಧಿಗೆ ಒಂದು ತಿಂಗಳ ಔಷಧಿಗಾದರೆ (ಮಕ್ಕಳಿಗಾದರೆ 4 ತಿಂಗಳಿಗಾಗುತ್ತದೆ) ಮೂರೇ ರೂಪಾಯಿ ಕ್ರಯವಿಟ್ಟಿದ್ದೇವೆ.

ಜೀವನ ಸಂಜೀವಿ.

ಜೀವನಾನಂದವನ್ನು ಸೇವಿಸಲಿಕ್ಕೆ ಚೈತನ್ಯವಿಲ್ಲದ ಗರೀಬರೂ, ಮೂತ್ರದ ಜೊತೆಯಲ್ಲಿ ಧಾತು ಬಿಂದುಬಿಂದುವಾಗಿ ಬೀಳುವಂಥವರೂ, ಒಳಜ್ವರ, ಶರೀರದ ಬಲಹೀನತೆ, ಮಲಬದ್ಧತೆಯುಳ್ಳವರೂ, ಕೃಶವಾದ ಮಕ್ಕಳೂ ಈ ಲೇಹವನ್ನು ಸೇವಿಸಬೇಕು.

ಸೇರಿಗೆ ಕ್ರಯ ರೂ. 1—8—0.

ದಂತ ಸಂಜೀವಿ.

ಪ್ರಖ್ಯಾತವಾದ ಈ ಔಷಧದಿಂದ ಅಲ್ಲಾಡುವ ಹಲ್ಲು ಗಟ್ಟಿಯಾಗುತ್ತದೆ. ಹಲ್ಲುನೋವು, ರಕ್ತ ಸುರಿಯುವಿಕೆ, ಬಾಯಿ ದುರ್ಗಂಧ ಮೊದಲಾದುವನ್ನು ಹೋಗಲಾಡಿಸಿ, ಅಂಟು ಜಾಡ್ಯಗಳು ಬಾರದಹಾಗೆ ತಡಿಸುತ್ತದೆ. ಹೊಗೆಸೊಪ್ಪು ತಿನ್ನುವುದೂ ಹಲ್ಲು ಕೀಳಿಸುವುದೂ ಬೇಡ. ಡಬ್ಬಿಗೆ ಐದೇ ಆಣೆ.

ಅಮೃತವಟಿಕಾ.

(ಅಥವಾ ಸರ್ವರೋಗಹರ ಮಾತ್ರೆ). ಇದರ ಸೇವನೆಯಿಂದ ಸುಖಭೇದಿಯಾಗಿ ಕೆಮ್ಮುಲು, ಉಬ್ಬಸ, ಶಿರೋರೋಗಗಳು, ಮುಟ್ಟು ಸರಿಯಾಗದಿರುವಿಕೆ, ವಿಷಜಂತುಗಳ ಕಡಿತಗಳನ್ನೆಲ್ಲ ನಿರ್ಮೂಲಮಾಡುವುದಲ್ಲದೆ ರಕ್ತಶುದ್ಧತೆಗೂ ಅಮೋಘೌಷಧಿ. ಭೇದಿಗೂ ಆಗುತ್ತದೆ. ಡಬ್ಬಿಗೆ 8 ಆಣೆ ಮಾತ್ರ.

ಕುಮುದಪುಷ್ಪ ತರುಲತಾದಿ ತೈಲ:—ಸ್ನಾನಕ್ಕೆ. ಇದರಿಂದ ತಲೆತಿಡಿತವೇ ಮುಂತಾದ ಶಿರೋರೋಗಗಳು, ಕಜ್ಜಿ, ಮುಂತಾದುವನ್ನೆಲ್ಲ ಗುಣಪಡಿಸಿ ಕೂದಲು ಕಪ್ಪಾಗುವಂತೆ ಮಾಡುತ್ತದೆ. ಮೆದುಳನ್ನು ತೀತಲವಾಗುವಂತೆ ಮಾಡುತ್ತದೆ.

15 ತೊಲೆಗೆ 10 ಆಣೆ ಮಾತ್ರ.

ದಿ ಜನರಲ್ ಹೆಲ್ಪಿಂಗ್ ಹೌಸ್,

ತಂತಿ ಎಡ್ರೆಸ್:— ಹೆಲ್ಪಿಂಗ್ ಹೌಸ್,
ಸೋಮವಾರಪೇಟೆ.

ಎಂ. ಡಿಪಾರ್ಟ್‌ಮೆಂಟ್,
ಸೋಮವಾರಪೇಟೆ, (ಕೊಡಗು.)

ಆರ್. ಮಾರ್ಟಿನ್ಸರ ಮಾತ್ರೆಗಳು ನಂ. 2.

ಡಮಿಯಾನ ಮತ್ತು ಕಂಪೌಂಡ್ ಫೊಸ್ಪರಸ್ ಕೂಡಿರುವ ಈ ಮಾತ್ರೆಗಳು ದಿವ್ಯವಾದ ಏಳು ಔಷಧಿಗಳಿಂದ ತಯಾರಿಸಲ್ಪಟ್ಟಿವೆ. ಇದು ಕೂಡಲೇ ಗುಣಪಡಿಸುವ ಶಕ್ತಿಯುಳ್ಳದ್ದಾಗಿದ್ದು ಮಲಬದ್ಧತೆ, ಬಾಡಿದ ಮುಖ, ತಲೆಶಿಡಿತ; ಅಜೀರ್ಣ, ಸ್ನಾಯುಗಳ ಬಲಹೀನತೆ, ಸರ್ವವಿಧದ ಹೆಂಗಸರ ಬಲಹೀನತೆ, ಮೊದಲಾದ ರೋಗಗಳಿಗೆ ಸಿದ್ಧೌಷಧವು. ಅದಲ್ಲದೆ ಮೂತ್ರ ರೋಗ, ಭ್ರಾಂತಿ, ಗಂಡಿಗೆ ಬಡಿಯೋಣ, ರಾತ್ರಿ ಬೆವರುವುದು, ಈ ರೋಗಗಳಿಗೂ ಗುಣಕಾರಿ. ಮೆದುಳು ಕೆಲಸ ಮಾಡುವವರಿಗೆ ಅತ್ಯುಪಕಾರಿ. ಪ್ರತಿ ಬಾಟ್ಲಿಯಲ್ಲಿ ೪೦ ಮಾತ್ರೆಗಳಿವೆ. ಬಾಟ್ಲಿಗೆ ರೂ. ೧—೮—೦.

ಆರ್ ಮಾರ್ಟಿನ್ಸರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮಲು ಗೂರಲು, ಶ್ವಾಸ, ಸೀತ, ನೆಗಡಿ, ಗಂಟಲುನೋವು, ಎದೆನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು.? ಒಂದೇ ಒಂದು ಸೀಸೆಯನ್ನು ತರಿಸಿ ಸೇವನೆಮಾಡಿ ಪರೀಕ್ಷಿಸಿ ನೋಡಲಿ. ಅನಂತರ ಯಾವ ಬೇರೆ ಔಷಧಕ್ಕೂ ಗಮನ ಕೊಡದಿರುವಿರಿ. ಎಲ್ಲಾ ವಿಧವಾದ ಕೆಮ್ಮಿಗೂ ರಾಣಿಯಾಗಿಯೂ, ಎದೆಗೆ ಬಲಕೊಟ್ಟು ಮೇಲ್ಕಂಡ ರೋಗಗಳು ತಲೆಯಿಕ್ಕದಂತೆ ಮಾಡುತ್ತವೆ.

೬೦ ಮಾತ್ರೆಗಳ ಸೀಸೆ ಒಂದಕ್ಕೆ ರೂ. ೧—೦—೦.

ಆರ್. ಮಾರ್ಟಿನ್ಸರ ಮೇಹರೋಗಕ್ಕೆ ಮಿಶ್ರಣ.

ಗಂಡಸರು ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡ ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ ಅಥವಾ ಹೊಸತಾಗಿದ್ದರೂ ಸರಿ. ಬಿಳಿಪು ಹೋಗುವುದು, ಉರಿಯುವುದು ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೇ ಮೂತ್ರ ಉರಿಯುವುದನ್ನು ನಿಲ್ಲಿಸಿ, ಮೂತ್ರವು ಬಿಳುಪಾಗಿ ನಿರ್ಮಲವಾಗುವುದಲ್ಲದೆ ರೋಗದ ಪಟ್ಟನ್ನೇ ಅಡಗಿಸಿಬಿಡುತ್ತದೆ. ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ. ಬೆಲೆ ಸೀಸೆ ಒಂದಕ್ಕೆ ರೂ. ೧—೮—೦. ವಿಳಾಸ:—

ಆರ್. ಡಿ. ಕಟ್ಲೆ ಮತ್ತು ಕಂಪೆನಿ, **R. D. Kately & Co.**

ನಂಬ್ರ ಡಿ. ಫ್ರೆಯರ್ ರೋಡ್, *No. D. Frere Road,*

ಮುಂಬಯಿ. *Near Wright & Co. Fort Bombay.*

ಮೈಸೂರು ಊದಬತ್ತಿಗಳು.

ಇಂಡಿಯಾ ದೇಶದಲ್ಲಿ ನಡದಿರುವ ಯಗ್ಜಬೀಶನ್ ಗಳಲ್ಲಿ ಸುಮಾರು 95 ಸರ್ಟಿಫಿಕೇಟುಗಳನ್ನು 32 ಮೆಡಲುಗಳನ್ನು ಹೊಂದಿರುವ ನಮ್ಮ ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕಸಮಯದಲ್ಲಿಯೂ ರಸಿಕರ ಉಲ್ಲಾಸ ಸಮಯದಲ್ಲಿಯೂ ಸಹ ಅತ್ಯವಶ್ಯಕವಾದ್ದರಿಂದ ಪ್ರತಿ ಒಬ್ಬರು ಈ ಕೆಳಗೆ ಇರುವ ಸುಗಂಧ ದ್ರವ್ಯಗಳನ್ನು ತರಿಸಿ ಆನಂದ ಹೊಂದುವದಲ್ಲದೆ ಸ್ವದೇಶ ವ್ಯಾಪಾರಕ್ಕೂ ಪ್ರೋತ್ಸಾಹಿಸುವರೆಂದು ನಂಬಿರುತ್ತೇವೆ.

ಊದಬತ್ತಿಗಳು 24 ರೂ. ತೂಕದ ಶೇರು 1ಕ್ಕೆ ರೂ. 12-0-0, 5-0-0, 3-0-0, 2—8—0, 1—4—0, 1—0—0

ಅರಗಜ ಮತ್ತು ಬಿಲ್ಲೆಗಳು ತೊಲಾ 1ಕ್ಕೆ 2—0—0, 1—0—0, 0—12—0, 0—6—0

ಸುಗಂಧಿ ಕಾಡ್ಡುರ್ 1ಕ್ಕೆ 0—1—0. **ಬಾಲಗ್ರಹ** ಧೂಪ ಟಿನ್ 1ಕ್ಕೆ 0—8—0. **ಸುವಾಸನೇ ಸುಣ್ಣ** ಶೀಸೆ 1ಕ್ಕೆ 0-2-0, ಇದಲ್ಲದೆ ಇನ್ನು **ಅನೇಕ ತರಹ ಸೆಂಟ್ಸು**ಗಳು, ಯಸೆನ್ಸ್‌ಗಳು, ಸುಗಂಧ ದ್ರವ್ಯಗಳು, ಬೆಳ್ಳಿಯಿಂದ ತಯಾರಿಸಿದ ಸಣ್ಣ ಸಣ್ಣ ವಿಗ್ರಹಗಳು, ಬಣ್ಣದ ಸಾಮಾನುಗಳು ಸಹ ಇರುತ್ತವೆ. ಮತ್ತು ವರ್ಷಕ್ಕೆ ಎರಡಾವರ್ತಿಗೆ ಕಡಿಮೆಯಿಲ್ಲದೆ

ಬಹುಮಾನ ಹಂಚಲ್ಪಡುತ್ತೆ.

ಟಿ. ಎಲ್. ಉಪಾಧ್ಯಾಯ ಎಂಡ್ ಸನ್ಸ್

ಸುಗಂಧಕಾರಿ, ಮೈಸೂರು.

☞ ಇದನ್ನು ದಯವಿಟ್ಟು ನಿಮ್ಮ ಸ್ನೇಹಿತರುಗಳಲ್ಲಿ ಪ್ರಚುರಪಡಿಸಿರಿ.

ಪಿ. ಸುಬ್ಬರಾಯಿಯವರ

ಲೋಕ ಪ್ರಸಿದ್ಧವಾದ ಆಯುರ್ವೇದ

ಔಷಧಗಳು.

ಪನ್ನೀರು ಗುಲಾಬಿ:— ಅದು ಅರ್ಧ ಔನ್ಸ್ ಚಿಕ್ಕ ಸೀಸೆಯಲ್ಲಿ ಇದೆ. ಅದರಲ್ಲಿರುವ (ಗುಲಾಬಿ) ಪನ್ನೀರನ್ನು 3 ದೊಡ್ಡ ಸೀಸೆ ನೀರಿನಲ್ಲಿ ಸೇರಿಸಿದರೆ ಅವ್ವಲ್ ರಖಂ ಗುಲಾಬಿ ಆಗುತ್ತದೆ, ಸೀಸೆ 1ಕ್ಕೆ 8 ಆಣೆ. ವಿ. ಪಿ. 1 ಸೀಸೆಯಿಂದ 3 ಸೀಸೆ ವರೆಗೂ 5 ಆಣೆ ಪ್ರತ್ಯೇಕ.

ಓದಿ ಕಲೋನ್:— ಇದು ವಿಲಾಯತಿಯಿಂದ ತರಿಸಿದ್ದಲ್ಲ. ನಮ್ಮ ಔಷಧಶಾಲೆಯಲ್ಲಿಯೇ ಸ್ವತಾ ತಯಾರಿಸಲ್ಪಟ್ಟಿದ್ದು ಮನಸ್ಸು ಸಂತೋಷವಾದಂತ ಸುವಾಸನೆಯಾದಂತಾದ್ದು. ಇದನ್ನು ದೇಹಕ್ಕೂ ಸವರಬಹುದು ಮತ್ತು ವಸ್ತ್ರಗಳಿಗೆ ಹಾಕಬಹುದು, ಇದರ ಉಪಯೋಗದಿಂದ ತಲೆಸೂಲಿ ಗುಣವಾಗುವದಲ್ಲದೆ ದೇಹಶ್ರಮವನ್ನು ತೀರಿಸುವದು. ಒಹಳ ಹೊತ್ತು ಇದನ್ನು ಉಪಯೋಗಿಸಿದವರನ್ನು ಸುತ್ತಲೂ ಅತಿವಾಸನೆಯಾಗಿರುವದು. ಸಾಧಾರಣವಾಗಿ ಅಂಗಡಿಗಳಲ್ಲಿ ಜಲಮಿಶ್ರವಾದಂತೆ ಇಲ್ಲದೆ ಇದೊಂದು ಸುಯವಾದ ವಾಸನೆಯಾದ ವಸ್ತುವು. ಅಂಗಡಿಗಳಲ್ಲಿ ಇರುವ ಓದಿಕಲೋನ್ 10 ತೊಟ್ಟು ಉಪಯೋಗಿಸುವದಕ್ಕಿಂತಲು ನಮ್ಮಿಂದ ತಯಾರಾಗಿ ಮಾರುತ್ತಿರುವ ಓದಿಕಲೋನ್‌ನನ್ನು 2 ತೊಟ್ಟು ಬಿಟ್ಟರೆ ಸಾಕಾಗುವದು. ಅರ್ಧ ಔನ್ಸು ಬುಡ್ಡಿಗಳಲ್ಲಿ ಮಾರಲ್ಪಡುವದು. ಕ್ರಯ ಬುಡ್ಡಿ 1ಕ್ಕೆ 8 ಆಣೆ. 1ರಿಂದ 6 ಬುಡ್ಡಿಗಳಿಗೆ ವಿ. ಪಿ. ಖರ್ಚು 5 ಆಣೆ ಬೀಳುವದು.

ವಾಸನೆ ಬಿಲ್ಲೆಗಳು:— ಅಸಲಾದ ಗುಲಾಬಿ, ಮೋತಿಯಾ, ಲಾವಂಡರ್ ಇಂಥಾ ವಾಸನೆ ದ್ರವ್ಯಗಳಿಂದ ಮಾಡಲ್ಪಟ್ಟಿದೆ. ಬಟ್ಟೆಗಳ ಸಂಗಡ ಇಟ್ಟಿದ್ದರೆ ಸುವಾಸನೆಯಾಗಿರುವುದು. ಡಬ್ಬಿ 1ಕ್ಕೆ 8 ಆಣೆಗಳು. ವಿ. ಪಿ. 1 ಡಬ್ಬಾ ಮೊದಲು 6 ಡಬ್ಬಾಗಳುವರಿಗೆ 5 ಆಣೆ.

ಬಟ್ಟೆಗಳಿಗೆ ಹಾಕುವ ಸುವಾಸನಾ ದ್ರವ್ಯಗಳು:— ಮನಮೋಹಿನಿ, ಮನೋರಂಜನಿ ಜಗನ್ಮೋಹಿನಿ, ಮದನವಿಲಾಸಿ, ಅಕ್‌ಬರ್‌ಚಿರಾಯಿ, ಷಾಜಹಾನ್ ಚಿರಾಯಿ, ಎಂಬ ಆರು ವಿಧ ಸುವಾಸನೆಗಳುಂಟು. ಈ ದಿನಸುಗಳು ಈಗ ಪುಷ್ಪಿಸಿದ ಪುಷ್ಪಗಳಂತೇ ಪರಿಮಳಿಸುವದು. ಯಾವದು ಬೇಕಾದರೂ ಸೀಸೆ 1ಕ್ಕೆ 8 ಆಣೆಗಳು ವಿ. ಪಿ. 1ರಿಂದ 3 ಸೀಸೆಗಳವರೆಗೂ 5 ಆಣೆಗಳು ಪ್ರತ್ಯೇಕವು.

ಕೇಸರಿ ಪವುಡರು:— ಇದು ಒಂದು ವಿಧವಾದ ಹೆಚ್ಚು ಬೆಲೆಯಾದ ಸುಗಂಧ ಮಿಶ್ರವು ಇದರಲ್ಲಿ ಸ್ವಲ್ಪ ಹುಡಿಯನ್ನು ತೆಗೆದು ನೀರಲ್ಲಿ ಆಗಲಿ ಶ್ರೀಗಂಧದಲ್ಲಿ ಆಗಲಿ ಸೇರಿಸಿ ದೇಹಕ್ಕೆ ಹಚ್ಚಿಕೊಂಡದ್ದೆ ಆದರೇ ಸರ್ವ ಜನಗಳಿಗೆ ಸಂತೋಷವನ್ನು ಹೊಂದುವಂತೇ ಸುವಾಸನೆಯನ್ನು ಕೊಡುವದು. ವಿವಾಹ ಪ್ರಸ್ಥ ಮೊದಲಾದ ಶುಭಪ್ರಯೋಜನಗಳಿಗೆ ಇದನ್ನು ಅವಶ್ಯ ಉಪಯೋಗಿಸಬೇಕು. ಇದನ್ನು ಶ್ರೀಗಂಧದಲ್ಲಿ ಸೇರಿಸಿದರೆ ಇತರ ಅತ್ತರು ಪನ್ನೀರು, ಕುಂಕುಮದ ಹೂವ್ವು ವಗೈರಾ ಯಾವ ಸುವಾಸನ ದ್ರವ್ಯಗಳ ಸೇರಿಸಬೇಕಾದವಶ್ಯವಿಲ್ಲ. ಕ್ರಯ ಸೀಸೆ 1ಕ್ಕೆ 8 ಆಣೆಗಳು 1 ಮೊದಲು 6 ಸೀಸೆವರೆಗೆ ವಿ. ಪಿ. ಚಾರ್ಜು 5 ಆಣೆ ಪ್ರತ್ಯೇಕವು.

☞ ಈ ಪ್ರಾಂತ್ಯದಲ್ಲಿ ಕನ್ನಡ, ತೆಲುಗು, ಮಲೆಯಾಳ ಈ ಭಾಷೆಗಳು ತಿಳಿಯುವದಿಲ್ಲವಾದುದರಿಂದ ಪೋಷಕರು ದಯವಿಟ್ಟು ಆರ್ಡರುಗಳನ್ನು ಮತ್ತು ಪತ್ರವ್ಯವಹಾರಗಳನ್ನು ಇಂಗ್ಲೀಷಿನಲ್ಲಾಗಲೀ, ತಮಿಳಿನಲ್ಲಾಗಲೀ ಸ್ಫುಟವಾಗಿ ತಿಳಿಯುವಂತೆ ಬರಿಯಬೇಕು.

MY ADDRESS.	ನಮ್ಮ ವಿಳಾಸ:—
P. SUBBA ROY.	ಪಿ. ಸುಬ್ಬರಾಯಿ,
Ayurvedic Pharmacy,	ಆಯುರ್ವೇದ ಔಷಧಶಾಲಾ,
Sri Perumalkoil,	ಶ್ರೀ ವೆಂಕಟೇಶ ಪೆರುಮಾಳ್ ದೇವಸ್ಥಾನ,
SANNATHY, TANJORE.	ಸನ್ನಧಿ, ತಂಜಾವೂರು.

ಇನಾಂ ಸಾಮಾನು 50. ಇನಾಂ ಸಾಮಾನು 50.

ಅನೇಕ ಯೋಗ್ಯತಾಪತ್ರಿಕೆಗಳನ್ನು ಹೊಂದಿರುವ (ರಿಜಿಸ್ಟರ್ಡ್)

ರಾಜಸುಂದರಿ ರೋಜ.

ಕೂದಲು ಬೆಳೆಯುವ ಪರಿಮಳ ತೈಲವು 50 ವಿಧವಾದ ಇನಾಂ ಸಾಮಾನುಗಳ ಸಮೇತ ಡಬ್ಬಿ 1ಕ್ಕೆ ರೂ. 1 ಮಾತ್ರ. ಯಾವ ಸ್ತ್ರೀಗಳಿಗೆ ತಲೆಕೂದಲು ಸುಂದರವಾಗಿ ಬೇಕೆಂಬ ಉದ್ದೇಶವಾಗಿಯೂ ಕೂದಲು ಉದ್ದವಾದದನ್ನು ತಪ್ಪದೆ ಕೋಮಲವಾಗಿ ಬೆಳೆಯಬೇಕೆಂಬ ಉದ್ದೇಶವಾಗಿರುವವರು ಬಜಾರಿನಲ್ಲಿ ದೊರೆಯುವ ಕೀಳು ತರವಾದ ಎಣ್ಣೆಗಳನ್ನು ಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ಕಲೆಯನ್ನೂ ಹಾಳು ಮಾಡಿಕೊಳ್ಳಬೇಡಿರಿ. ಈ ಲೋಕಪ್ರಖ್ಯಾತವಾದ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚೆನ್ನಾಗಿ ಉಜ್ಜಿ ತಲೆಯ ಕೂದಲಿಗೆ ಹಚ್ಚಿಕೊಂಡು ಹಾಚಿದರೆ ಅದರ ಸುವಾಸನೆ ಸುತ್ತು ಇರುವ ಮನೆಗಳಿಗೆ ಪರಿಮಳ ವಾಸನೆ ಹೋಗುವದು. ಇದರ ಪರಿಮಳ ವಾಸನೆ ಹೇಳುವವಕ್ಕೂ ಬರಿಯುವವಕ್ಕೂ ಆಗುವದಿಲ್ಲ. ಇದಲ್ಲದೆ ದೇಹದಲ್ಲಿ ಇರುವ ಉಷ್ಣವನ್ನು ತೆಗೆದು ಕಣ್ಣಿಗೆ ತಂಪು ಕೊಡುವದು. ಮುಖಕ್ಕೆ ಕಾಂತಿಯನ್ನು ದೇಹಕ್ಕೆ ಆರೋಗ್ಯವನ್ನು ಗೊಡುವ ತೈಲ ಇದು ಒಂದೇ. ಬೇರೊಂದಿಲ್ಲ. ಹೆಚ್ಚು ಮಾತುಗಳಿಂದ ಏನು ಪ್ರಯೋಜನ? ಒಂದನ್ನು ತರಿಸಿ ನೋಡಿದರೆ ನಿಜಸ್ಥಿತಿ ತಿಳಿಯುತ್ತೆ. ಇನಾಂ ಸಾಮಾನುಗಳ ತಪಸೀಲು:—ಸ್ತ್ರೀಯರು ಧರಿಸಿಕೊಳ್ಳುವ ಕೊಂಡಿಗೆ 6, ವೈಭೋಣಿ 1, ಅದ್ದಾ ಗಿ ತಾಂಬೂಲ ಮಾತ್ರೆ 30, ದಂತದ ಬಾಚಣಿಗೆ 1, ಸುವಾಸನೆಯುಳ್ಳ ಸೆಂಟ್ ಶೀಸೆ 1, ಇಂಗ್ಲೀಸು ಫೋಟೊಗಳು 6, ಸುವಾಸನೆ ಅತ್ತರು ಬಿಲ್ಲೆ 1, ಗಂಧದ ಬಿಲ್ಲೆ 1, ರಾಜಾರಾಣಿ ಕಾರನೇಷನ್ ಪೆಟ್ಟಿಗೆ 1.

ಒಂದೇ ಸಾರಿ 3 ತರಿಸಿಕೊಳ್ಳುವವರಿಗೆ ಇನಾಂ ಸಹಿತ 1 ಲಾವಂಡರ್ ಬಾಟ್ಲಿ ಇನಾಮಾಗಿ ಕಳುಹಿಸುತ್ತೇವೆ. ಒಂದೇ ಸಾರಿ 6 ತರಿಸಿಕೊಳ್ಳುವವರಿಗೆ ಇನಾಂ ಇಲ್ಲದಂತೆ 1 ರಾಸ್ ಸಾಕೆಟ್ ವಾಚ್ ಇನಾಮಾಗಿ ಕಳುಹಿಸುತ್ತೇವೆ.

ನಮ್ಮ ವಿಳಾಸ:— ವಿ. ಎ. ಎಸ್. ಪಾಣಿ,

3. ಇರುಲಪ್ಪನ್ ಬೀದಿ, ಮದರಾಸು.

ವಿನಾಮೂಲ್ಯ! ವಿನಾಮೂಲ್ಯ!! ವಿನಾಮೂಲ್ಯ!!!

ಆರ್ಯಚಿಕಿತ್ಸಾ ರಹಸ್ಯ.

ದೇಶೀಯ ಚಿಕಿತ್ಸೆಯನ್ನು ನಮ್ಮ ಜನಸಮುದಾಯದಲ್ಲಿ ಹ್ಯಾಗೆ ರೂಢಿಗೆ ತರಬೇಕೆಂಬುವರು ಈ ಗ್ರಂಥದಿಂದ ಸಮ್ಯಕ್ ವ್ಯಕ್ತವಾಗುವದು. ಕನ್ನಡ ನುಡಿಯು ಒಡನಾಟವಿರುವವರೆಲ್ಲರಿಗೂ ತಿಳಿಯುವಂತೆ ಈ ಗ್ರಂಥವು ಬರೆಯಲ್ಪಟ್ಟಿದೆ.

ಆರ್ಯಮಹಾಶಯರೇ, ಆರ್ಯಚಿಕಿತ್ಸೆಯಲ್ಲಿ ಪೂರ್ಣ ಗೌರವ ಮತ್ತು ಅಭಿಮಾನವನ್ನು ತೋರಿಸಿ ತಮ್ಮ ಆಯುಃಪ್ರಮಾಣದಲ್ಲಿ ಕಾಲುಭಾಗ ಸಮಯವನ್ನು ದೇಶಸೇವೆಗೋಸ್ಕರ ಕಳೆಯಿರಿ.

ಈ ಪುಸ್ತಕ ಬೇಕೆಂದಿರುವವರು ತಮ್ಮ ಪೂರ್ಣ ಎಡ್ರೆಸನ್ನು ಅರ್ಧಾಣೆ ಸ್ಟಾಂಪಿನೊಂದಿಗೆ ಈ ಕೆಳಗಿನ ವಿಳಾಸಕ್ಕೆ ಕಳುಹಿಸಿಕೊಟ್ಟರೆ ಈ ಪುಸ್ತಕವು ದೊರೆಯುವದು.

ಎಂ. ವಿ. ಶಾಸ್ತ್ರೀ, ಆಯುರ್ವೇದ ಭೂಷಣ,

ಮಂಗಳೂರು.

ಸುಲಭ ಬೆಲೆ! ಸದ್ಬೋಧಕ ಗ್ರಂಥಮಾಲೆ: ೧. ಸುಲಭ ಬೆಲೆ!!

ದೈವಭಕ್ತಿ.

ಭಗವದ್ಭಕ್ತಿಯನ್ನು ಚೆನ್ನಾಗಿ ಬೋಧಿಸುವುದು! ಮುದ್ದಾದ ಮುದ್ರಣ!! ಬೆಲೆ: ಒಂದಾಣೆ ಮಾತ್ರ!!! ಅಂಚೆಗೆ ೧ ಕಾಸು.

ಅಚ್ಚಿನಲ್ಲಿದೆ! ಸದ್ಬೋಧಕ ಗ್ರಂಥಮಾಲೆ: ೨. ಬೇಗ ಬರೆಯಿರಿ!!

ಸುಮಿತ್ರ.

ಈ ಹೆಸರಿನ ಮನೋಹರ ಕಾದಂಬರಿಯು ಬೇಗನೆ ಪ್ರಕಾಶಿಸಲ್ಪಡುವುದು. ಬೆಲೆ: ಮೂರಾಣೆ. ಆಗೋಸ್ಟು ಅಖೈರಿಯೊಳಗೆ ಹೆಸರನ್ನು ದಾಖಲ್ಮಾಡಿಕೊಳ್ಳುವವರಿಗೆ: ಎರಡು ಆಣೆ ಮಾತ್ರ.

ನಮ್ಮಲ್ಲಿ ದೊರೆಯುವ ಇತರ ಕನ್ನಡ ಗ್ರಂಥಗಳು.

ಭೂತಕಾಳವಾಂಧ್ಯರಾವನ ಅಳಿಯಕಟ್ಟು ೧-೪-೦. ಆಹ್ನಿಕಮಂಜರಿ (ಋಗ್ವೇದೀಯ ನಿತ್ಯಕರ್ಮ ಪದ್ಧತಿ ಪುಸ್ತಕ) ೧-೦-೦. ಜಯವಿಜಯ (ಅದ್ಭುತ ನವರಸ ಭರಿತವಾದ ಮನೋಹರ ಕಾದಂಬರಿ) ೦-೧೨-೦. ಗೋವಿನ ಚರಿತ್ರೆ (ಹೊಸ ಪುಸ್ತಕ) ೦-೨-೦.

ಇವುಗಳಲ್ಲದೆ ಬೇರೆ ಬಗೆಬಗೆಯ ಗದ್ಯ ಪದ್ಯಗಳ ಪುಸ್ತಕಗಳು; ಯಕ್ಷಗಾನ, ನಾಟಕ, ಕಾದಂಬರಿ, ಕಥೆ ಮೊದಲಾದ ಪುಸ್ತಕಗಳೂ; ಶಾಲಾ ಬಾಲಕರಿಗೆ ಬೇಕಾದ ಪಾಠಪುಸ್ತಕಗಳೂ; ಬರವಣಿಗೆ ಸಾಮಗ್ರಿಗಳೂ; ನಾಲಗೆಗೆ ರುಚಿಕರವಾದ ಅತ್ಯುತ್ತಮ ತಿಂಡಿಯ ಪದಾರ್ಥಗಳೂ; ಅಮೃತಾಂಜನ, ಜೋಂಗಿರೆಯವರ ಬಾಲಾಮೃತ, ಕಸ್ತೂರಿ ಮಾತ್ರೆ ಮೊದಲಾದ ಪೇಟೆಂಟ್ ಔಷಧಗಳು; ಉತ್ತಮ ತರದ ಸುಗಂಧ ದ್ರವ್ಯಗಳೂ; ತರತರದ ಸಾಬೂನುಗಳು, ಅನೇಕ ನಮೂನೆಯ ಅಂಗಿ ಗುಂಡಿಗಳು, ಜಂತಾನ, ದಂತಮಂಜನ, ಪೌತಿನ್ ಪೆನ್ಸಿಲ್ ವಗೈರೆ ವಿವಿಧ ಸಾಮಾನುಗಳು ಮಿತವಾದ ಕ್ರಯಕ್ಕೆ ಮಾರಲ್ಪಡುತ್ತವೆ. ಟಪ್ಪಾಲು ಖರ್ಚು ಬೇರೆ. ಅಪೇಕ್ಷಕರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ವಿಳಾಸ:— ಎಸ್. ಆರ್. ಹೆಬ್ಬಾರ ಎಂಡ್ ಬ್ರದರ್ಸ್,

ಜನರಲ್ ಮರ್ಚಂಟ್ಸ್, ಸುರತ್ಕಲ್, ದ. ಕ.

೧,೦೦೧ ರಾತ್ರೆ ಕಥೆಗಳು.

ಅರೇಬಿಯನ್ ನೈಟ್ಸ್ ಕಥೆ.

ಸಂಪೂರ್ಣ ಗ್ರಂಥ. ೧,೦೫೨ ಪುಟಗಳು.

ಎಲ್ಲರೂ ತರಿಸಿ ಓದಲೆಂದು ಕ್ರಯವನ್ನು ತುಂಬಾ ಕಡಿಮೆ ಮಾಡಿರುತ್ತೆ.

ಪೂರ್ವ ಕಾಲದಲ್ಲಿ ಅರಬ್ಬಿ ದೇಶದಲ್ಲಿ ಹೇಳಲ್ಪಟ್ಟ ಅನೇಕ ವಿಚಿತ್ರವಾದ ಕಥೆಗಳನ್ನು "ಅರೇಬಿಯನ್ ನೈಟ್ಸ್ ಎಂಟರ್‌ಟೇಯನ್‌ಮೆಂಟ್ಸ್" ಎಂದು ಇಂಗ್ಲೀಷ್ ಭಾಷೆಯಲ್ಲಿ ಪ್ರಚುರ ಪಡಿಸಿದಂಥಾದ್ದನ್ನು ನಮ್ಮ ಕರ್ನಾಟಕ ದೇಶೀಯರಿಗೆ ಸುಲಭವಾಗಿ ತಿಳಿಯುವಂತೆ ಭಾಷಾಂತರ ಮಾಡಿ ಕನ್ನಡದಲ್ಲಿ ರಚಿಸಿದೆ.

1. ಇದು ಪೂರ್ತಿಯಾಗಿ ಇದೆ. ಬೇರೆ ಬೇರೆ ಭಾಗಗಳಾಗಿ ಮಾಡದೆ ಪಟ್ಟಿಯಾಗಿರುವುದಕ್ಕೋಸ್ಕರ ಒಂದೇ ಬೈಂಡು ಮಾಡಿದೆ. 2. ಈ ಕಥೆಯನ್ನು ಓದುವದರಿಂದ ಅನೇಕ ವಿಷಯಗಳ ಪರಿಚಯವನ್ನುಂಟುಮಾಡುತ್ತದೆ. 3. ವಿವಿಧ ಯುಕ್ತಿ, ನೀತಿ, ಕುಶಲತೆ, ಕಾರ್ಯಾಕಾರ್ಯ ವಿವೇಚನೆ ಮುಂತಾದ ಲೌಕಿಕ ವ್ಯವಹಾರ ಜ್ಞಾನವನ್ನು ತಿಳಿಸುತ್ತದೆ. 4. ಆತುರವೆಂಬ ಗುಣವನ್ನು ತಪ್ಪಿಸಿ ತಾಳ್ಮೆಯನ್ನುಂಟುಮಾಡುವದಾಗಿದ್ದು, ದುರ್ಮಾರ್ಗದಲ್ಲಿ ಪ್ರವೇಶಿಸಬಹುದಾದ ಸಂಭವವನ್ನು ನಿವಾರಣೆಗೊಳಿಸುವದು. 5. ಬುದ್ಧಿ ಚಂಚಲದಲ್ಲಿರುವವರಿಗೆ ದೃಢಬುದ್ಧಿಯನ್ನು ಉಂಟುಮಾಡುವದಾಗಿಯೂ, ಸನ್ಮಾರ್ಗದಲ್ಲಿ ಎಳೆಯಂದು ಬಿಡುವದಾಗಿಯೂ ಇರುವದು. 6. ನವರಸಾಲಂಕೃತವಾಗಿ ಮೃದು ಮಧುರ ವಾಕ್ಯಬಂಧ ರಚನೆಯಿಂದ ರಸಿಕರಿಗೆ ಮನೋಹ್ಲಾದವನ್ನು ಉಂಟುಮಾಡುವದು. 7. ಕಥಾರೂಪದಲ್ಲಿ ಚಿತ್ರಕಥಾಚಮತ್ಕಾರಶೋಭಿತವಾಗಿ ಶುಲಭಶೈಲಿಯಿಂದ ಬರೆದಿರುವುದರಿಂದ ಪಂಡಿತರು ಪಾಮರರು ಎಂಬ ಭೇದವಿಲ್ಲದೆ ಗ್ರಾಹ್ಯಯೋಗ್ಯವಾಗಿರುವುದು. 8. ಲೋಕಾನುಭವಕ್ಕೆ ಬೇಕಾದ ಅನೇಕ ವಿಷಯಗಳು ಇದರಿಂದ ತಿಳಿಯುವುದರಿಂದ ದೇಶವಕ್ಕಲಿಗೆ ತುಂಬಾ ಸಹಾಯಕವಾಗಿರುವುದು. 9. ನವುಸ್ಥಳಗಳು ಉಪಯೋಗವಾಗಿರುವ ೧೦೫೨ ಪುಟಗಳುಳ್ಳ ಈ ಭಾರೀ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಇರತಕ್ಕ ಪುಸ್ತಕವಾಗಿದೆ. ಹೆಚ್ಚಾಗಿ ಹೇಳುವದರಿಂದೇನು? ಪುಸ್ತಕವನ್ನು ತರಿಸಿ ನೋಡಿದ ಮಾತ್ರಕ್ಕೇ ಮೇಲೆ ಹೇಳಿದ ವಿಷಯಗಳೆಲ್ಲಾ ಸೂಚಿತವಾಗಿ ಇಂಥಾ ದೊಡ್ಡ ಗ್ರಂಥವು ಎಲ್ಲರಿಗೂ ಉಪಯೋಗವಾಗಲೆಂದು ಬೆಲೆಯನ್ನು ಬಹಳ ಸುಲಭಮಾಡಿರುವುದು ಸಹ ತಿಳಿಯಬರುವದು. ಈ ಗ್ರಂಥವು ದಪ್ಪ ಕಾಗದದಲ್ಲಿ ಸ್ಫುಟವಾದ ಅಕ್ಷರಗಳಿಂದ ಪ್ರಿಂಟುಮಾಡಿ ಸೊಗಸಾದ ಬೈಂಡಿನಿಂದ ತಯಾರಾಗಿ ಬಿಕರಿಗೆ ಸಿದ್ಧವಾಗಿರುತ್ತದೆ. ಬೇಕಾದವರು ನಮ್ಮ ಕಂಪೆನಿಗೆ ಬರೆದು ವಿ. ಪಿ. ಪೋಸ್ಟು ಮುಖಾಂತರ ತರಿಸಿಕೊಳ್ಳಬಹುದು.

ದಪ್ಪ ಕಾಗದ ಪ್ರತಿ 1ಕ್ಕೆ ರೂ. 3. ಟಪ್ಪಾಲ್ ಖಾಸಲು ೬ ಆಣೆ. ಥಳಥಳಿಸುವ ದಪ್ಪ ಗ್ಲೇಜು ಕಾಗದ ಪ್ರತಿ 1ಕ್ಕೆ ರೂ. 4. ಟಪ್ಪಾಲ್ ಖಾಸಲು 8 ಆಣೆ.

ನಮ್ಮಲ್ಲಿ ಇನ್ನೂ ಅನೇಕ ವಿಧವಾದ ಕನ್ನಡ "ಲಾ" ಜಾನೂನ್ ಪುಸ್ತಕಗಳು, ವೇದಾಂತ ಗ್ರಂಥಗಳು, ಕಾವ್ಯ ಗ್ರಂಥಗಳು, ಶಿವಪುರಾಣಗಳು, ಅದ್ಭುತವಾದ ಕಥೆಗಳು, ಜ್ಯೋತಿಷ ಗ್ರಂಥಗಳು, ಯಕ್ಷಗಾನ ಗ್ರಂಥಗಳು, ವೀರಶೈವಮತ ಗ್ರಂಥಗಳು, ವೈಷ್ಣವಮತ ಗ್ರಂಥಗಳು, ನಾಟಕಗಳು, ಮುಂತಾದವುಗಳು ಸುಲಭ ಕ್ರಯದಿಗೆ ದೊರೆಯುವವು. ಬೇಕಾದ ಪುಸ್ತಕಗಳಿಗೆ ಬರೆದರೆ ವಿ. ಪಿ. ಪೋಸ್ಟು ಮುಖಾಂತರ ಕಳುಹಿಸುವೆವು. ನಮ್ಮ ಪುಸ್ತಕಗಳ (ಕ್ಯಾಟಲಾಗ್) ಕ್ರಯಪಟ್ಟಿಗೆ ಬರೆದರೆ ಕಳುಹಿಸಿಕೊಡುತ್ತೇವೆ.

ನಮ್ಮ ವಿಳಾಸ:— ಎಂ. ಆರ್. ಕೃಷ್ಣಸ್ವಾಮಿಶೆಟ್ಟಿ ಕಂಪನಿ,

ಬುಕ್ ಸೆಲ್ಲರ್ಸ್, ಬೆಂಗಳೂರು ಸಿಟಿ.

ದ್ರಾಕ್ಷೆಯ ಸಾರ.

(Pure Grape Juice).

ಅಮೇರಿಕೆಯೊಳಗಿನ ಭಾರಿ ಕಂಪೆನಿಯೊಳಗೆ ತಯಾರಿಸಿದ ದ್ರಾಕ್ಷೆ ಹಣ್ಣಿನಿಂದ ತೆಗೆದ ಈ ಸಾರವು ನಿರಾಶ ಸ್ಥಿತಿಯಲ್ಲಿರುವ ಕಠಿಣ ರೋಗಿಗಳಿಗೆ ಸ್ವಾಭಾವಿಕ ಆಹಾರವೂ ಔಷಧಿಯೂ ಆಗಿದೆ. ಎಲ್ಲಾ ವಿಧದ ಜ್ವರ, ಸನ್ನಿಪಾತಜ್ವರ, ನೇವಸ, ಮಲಬದ್ಧತೆ, ದೀರ್ಘಕಾಲದ ತಲೆಸಿಡಿತ, ಅಜೀರ್ಣ ರೋಗ, ಕ್ಷಯರೋಗ, ಕೆಮ್ಮು, ನೆಗಡಿ, ಕಲಿಜೆಯ ರೋಗಗಳು, ಚರ್ಮರೋಗಗಳು, ಹೆಂಗಸರ ಮುಟ್ಟಿನ ದೋಷಗಳು, ಗರ್ಭಧಾರಣೆ ಕಾಲದಲ್ಲಿನ ವಾಂತಿ, ಉಷ್ಣಭೇದಿ, ಅತಿಸಾರ. ಈ ಮೊದಲಾದ ರೋಗಗಳಿಗೆ ಕೈಕಂಡ ಔಷಧಿಯೂ ದುರ್ಬಲರಿಗೆ ಆಹಾರವೂ ಆಗಿದೆ. ಇದರಲ್ಲಿ ಅಲ್ಕೊಹೋಲ್ ಯಾ ಮದ್ಯ ಸೇರಿಲ್ಲ. ಮಕ್ಕಳೂ, ಹೆಂಗಸರೂ, ಮುದುಕರೂ ಧಾರಾಳವಾಗಿ ಸೇವಿಸಬಹುದು. ದೀರ್ಘಕಾಲದ ಅನೇಕ ಕ್ಷಯರೋಗಿಗಳು ಇದರ ಸೇವನೆಯಿಂದ ಗುಣಹೊಂದಿರುವರೆಂತ ಚಿಕಾಗೋ ನಗರದ ಡಾಕ್ಟರ್ ಫೋಸ್ಟರ್ ಎಮ್. ಡಿ. ಯವರು ಅನುಭವದಿಂದ ಹೇಳುವರು.

ಕ್ರಯ ಶೀಸೆ 1ಕ್ಕೆ ರೂ. 2—0—0. ವಿ. ಪಿ. ಬೇರೆ.

ಟ್ಯೂರಿಕ ಬ್.

ಮೆದುಳಿನ ಅಶಕ್ತಿ, ನರಗಳ ಬಲಹೀನತೆ, ತಲೆಸಿಡಿತ, ತಲೆನೋವು, ಶಿರೋಭ್ರಮಣ, ನಾಡಿ ತೀವ್ರವಾಗಿ ಬಡಿಯುವದು, ರಕ್ತಹೀನತೆ, ರಾತ್ರಿಯಲ್ಲಿ ಬೆವರುವದು,—ಪ್ರಮೇಹ, ಮೇಹ, ಅಸ್ಥಿಸ್ರಾವ, ಬಿಳೇ ಸೆರಗು ಹೋಗುವದು, ಬಿಳೇ ಮೇಹ, ಜನನೇಂದ್ರಿಯಗಳ ಬಲಹೀನತೆ, ಧಾತುನಷ್ಟ, ಇಂದ್ರಿಯಪತನ, ಸ್ವಪ್ನೇಂದ್ರಿಯ ಮೊದಲಾದ ಸಕಲ ರೋಗಗಳಿಗೆ ಇದಕ್ಕಿಂತ ಉತ್ತಮ ಔಷಧಿಯು ಬೇರೊಂದಿಲ್ಲವೆಂತ ಹೋಮಿಯೊಪತಿ ವೈದ್ಯರ ಅನುಭವದ ಸಿದ್ಧಾಂತ. ಅಜೀರ್ಣ, ಅಗ್ನಿಮಾಂದ್ಯಕ್ಕೆ ಇದು ಕೂಡ ಶಿಯೇ ಸರಿ. ಔಷಧಿಯ ಕ್ರಯ ಶೀಸೆ 1ಕ್ಕೆ ರೂ. 1-8-0; ವಿ. ಪಿ. ಸಹಿತ ರೂ. 1-12-0.

ವಿಳಾಸ:— ಏಜಂಟರು:—

ಇಕ್ಲಿಪ್ಸ್ ಏಜನ್ಸಿ, ಮಂಗಳೂರು. ಸುಗಂಧವಿಲಾಸ, ರಥಬೀದಿ, ಮಂಗಳೂರು.

Can be had at— **Electro Homeopathic Dispensary**, *Hampankatta, Mangalore.*

ಮಕ್ಕಳು ಆಡುವ ಸಾಮಾನುಗಳು.



ಈ ಸಾಮಾನುಗಳು ಹಿತ್ತಾಳೆ ಮತ್ತು ಕಂಚಿನಿಂದ ತಯಾರಾದವುಗಳು. ಮಕ್ಕಳ ಆಟಗಳಿಗೆ ಯೋಗ್ಯವಾದಂಥಾ ೩೬ ಸಾಮಾನುಗಳು ಇರುವ ಪೆಟ್ಟಿಗೆ ೧ಕ್ಕೆ ೧—೮—೦ ಮಧ್ಯಮ ತರದ ಪೆಟ್ಟಿಗೆ ೧ಕ್ಕೆ ೨-೦-೦. ದೊಡ್ಡ ಪೆಟ್ಟಿಗೆ ಉತ್ತಮ ತರಹ ೧ಕ್ಕೆ ರೂ ೪—೦—೦.

ಕಾಬುಲಿ ಇಂಗು.

ಉತ್ತಮ ತರಹ ರೂಪಾಯಿ ೧ಕ್ಕೆ ೪ ತೊಲೆ, ದ್ವಿತೀಯಂ ರೂಪಾಯಿ ೧ಕ್ಕೆ ೮ ತೊಲೆ, ತೃತೀಯಂ ರೂಪಾಯಿ ಒಂದಕ್ಕೆ ೧೦ ತೊಲೆ, ಚತುರ್ಥಂ ರೂಪಾಯಿ ೧ಕ್ಕೆ ೧೬ ತೊಲೆ.

ಇದಲ್ಲದೆ ಬೇರೆ ರೀತಿ ಸಾಮಾನುಗಳ ಕ್ಯಾಟಲಾಗನ್ನು ಕೇಳುವವರಿಗೆ ಉಚಿತವಾಗಿ ಕಳುಹಿಸಲಾದೀತು, ಪೋಸ್ಟು ಕರ್ಚು ಬೇರೆ.

ನಮ್ಮ ವಿಳಾಸ:—ಶ್ರೀರೋಮಣಿ ನಾರಾಯಣಚಾರ್ಯ ಮತ್ತು ಕಂಪೆನಿ, ಚೌಕಾಂಬಾ, ಕಾಶಿ.

SIROMANI NARAYANA CHARYA & CO, *Choukhambay*, BENARES CITY.

ಅತ್ತರು ಮತ್ತು ಸುರಭಿಗಳಲ್ಲಿ ಮಕುಟವರ್ಧನದಂತಿರುವ



ಒಟ್ಟೊ ಮೋಹಿನಿ.

(ರಿಜಿಸ್ಟರ್ಡ್.)

ಅನೇಕ ವಸ್ತುಪ್ರದರ್ಶನಗಳಲ್ಲಿ ಪ್ರದರ್ಶಿಸಲ್ಪಟ್ಟು ಕಡೆಗೆ ಅದರ ರಮ್ಯವಾದ ಅತ್ಯಂತ ಶಾಶ್ವತವಾದ ಪರಿಮಳಕ್ಕಾಗಿ ಚಿನ್ನ ಬೆಳ್ಳಿಯ ಪದಕಗಳನ್ನು ಪಡೆದಿದೆ. ವಲವಸ್ತ್ರದಲ್ಲಿ 4 ತಟಕುಗಳನ್ನು ತಾಗಿಸುವದರಿಂದ ಹಿಡಿ ತುಂಬಾ ಮಲ್ಲಿಗೆ ಹೂ ಇದ್ದ ಪರಿಮಳವುಂಟಾಗುವುದು. ಈ ಹೂಗಳು ಕೃತಕವಾದವುಗಳಾದರೂ ನೈಸರ್ಗಿಕ ಹೂವಿನಂತೆ ಪ್ರತಿ ಸಾಯಂಕಾಲ ಬಾಡಿಹೋಗದು. ಆದರೆ ತನ್ನ ಪರಿಮಳವನ್ನು 4 ದಿವಸಗಳಿಗಿಂತಲೂ ಹೆಚ್ಚಿಗೆ ಕೊಡುತ್ತಿರುವದು. ಆದುದರಿಂದ ಒಟ್ಟೊ-ಮೋಹಿನಿಯು ಶಾಶ್ವತವಾದ ಸುರಭಿಯೆಂದು ಕರೆಯಲ್ಪಟ್ಟು ಈ ಕಾಲಕ್ಕೆ ತಕ್ಕುದಾದ ಬಹುಮಾನವಾಗಿ ಕೊಡತಕ್ಕ ದ್ರವ್ಯವಾಗಿದೆ. ಇದರ ಪರಿಮಳವು ಶಾಶ್ವತವಲ್ಲವೆಂದು ದೃಢಮಾಡಿಕೊಡುವವರಿಗೆ 100 ರೂಪಾಯಿಗಳ ಬಹುಮಾನ ಕೊಡಲಾಗುವದು. ಆದುದರಿಂದ ಯಾಕೆ ಈ ಬಹುಮಾನವನ್ನು ಪಡೆಯಲು ಪ್ರಯತ್ನಿಸಲಾಗದು?

ಕ್ರಯ ಅರ್ಧ ಔನ್ಸ್ ಸೀಸೆಗೆ 2—0—0. 1 ಡ್ರಾಮ್ ಸೀಸೆಗೆ 0—12—0. ಪರಿಮಳದ ಕಾರ್ಡುಗಳು ಡಜನ್ 1ಕ್ಕೆ 0—12—0.

ಒಟ್ಟೊ ಅಲ್ಸೆನಿಯಾ, ಮಿನರ್ವಾ, ಸಬೀನಿಯಾ ಮತ್ತು ರೊಬಿನಿಯಾ ಇವುಗಳು ನಮ್ಮಲ್ಲಿ ಯಥೇಷ್ಟವಾಗಿ ಬಂದಿವೆ!

Proprietors:—**The Oriental Drug & Chemical Co.**
Sole Agents:—**MOHINI AGENCY,**
3 Fida Building, Jumma Musjid, BOMBAY.
Agents:—**Bhagavandas Choonilal & Co.,**
177 China Bazar Road, MADRAS.

ಪ್ರೊಪ್ರೈಟರರು:—ಓರಿಯಂಟಲ್ ಡ್ರಗ್ ಎಂಡ್ ಕೆಮಿಕಲ್ ಕೋ.
ಪ್ರಾಮುಖ್ಯ ಏಜಂಟರು:—ಮೋಹಿನಿ ಏಜನ್ಸಿ,
3 ಫಿಡಾ ಬಿಲ್ಡಿಂಗ್, ಜುಮ್ಮಾ ಮಸೀದ್, ಬೊಂಬಾಯಿ.
ಏಜಂಟರು:—ಭಗವಾನ್‌ದಾಸ್ ಚೂನಿಲಾಲ್ ಎಂಡ್ ಕೋ.,
177 ಚೀನಾ ಬಜಾರ ರಸ್ತೆ, ಮದ್ರಾಸು.

1916-17ನೇ ಇಸವಿಯ ಇಂಡಿಯಾ ಗವರ್ನಮೆಂಟ್ ಕನ್‌ವರ್ಶನ್ ಲೋನ್ ಎಂಬ ಮಾರ್ಪಡಿಸಬಹುದಾದ ಸಾಲವು.

ಪೋಸ್ಟ್ ಆಫೀಸು ಉಪಭಾಗವು.

1931ನೇ ಇಸವಿಗೆ ಮುಂಚಿತವಾಗಿ ಸಲ್ಲಿಸತಕ್ಕದ್ದಲ್ಲದ ಪರಂತು 1936 ನೇ ಇಸವಿಯೊಳಗಾಗಿ ನೂರಕ್ಕೆ ನೂರರಂತೆ ಪೂರಾ ಮರುಪಾವತಿಯಾಗತಕ್ಕ ಸಾಲವು.

ಸಾಲಿಯಾನಾ ವರ್ಷ ಒಂದರ ಸೇಕಡಾ 4 ರ ದರದ ಬಡ್ಡಿಯು ಅರ್ಧವರ್ಷಕ್ಕೊಮ್ಮೆ ಎಂದರೆ
ಎಪ್ರೀಲ್ 1ನೇ ತಾರೀಕಿನಲ್ಲಿಯೂ ಮತ್ತು ಅಕ್ಟೋಬರು 1 ನೇ ತಾರೀಕಿನಲ್ಲಿಯೂ ಸಲಾಯಿಸಲ್ಪಡುವುದು.

ಸೇಕಡಾ 3ರಂತೆ ಮತ್ತು 3½ಯಂತೆ ರೂಪಾಯಿ ನಾಣ್ಯದಲ್ಲಿರುವ ಸಾಲಗಳನ್ನು ಮಾರ್ಪಡಿಸಿಕೊಳ್ಳಲು ಅರ್ಜಿದಾರರು ಅರ್ಹರಾಗಿರುತ್ತಾರೆ.

ಅರ್ಜಿಗಳು 100 ರೂಪಾಯಿ-ಯಾ-ಅದರ ಅಪವರ್ತ್ಯಗಳ ಬಗ್ಗೆ (ಎಂದರೆ 200, 300 ಈ ಮೇರೆಗೆ) ಇದ್ದು 5,000 ರೂಪಾಯಿಗಳಿಗೆ ಮೀರಿರ ಕೂಡದು ಮತ್ತು ಸೇವಿಂಗ್ಸ್ ಬ್ಯಾಂಕ್ ಕೆಲಸವು ನಿರ್ವಹಿಸಲ್ಪಡುವ ಪ್ರತಿಯೊಂದು ಟಪ್ಪಾಲ್ ಆಫೀಸಿನಲ್ಲಿಯೂ 1916ನೇ ಇಸವಿಯ ಜೂನ್ 11ನೇ ತಾರೀಖಿನಿಂದ 1916ನೇ ಇಸವಿಯ ಸಪ್ಟಂಬರ್ 25ನೇ ತಾರೀಖಿನ (ಇದು ಸೇರಿ) ವರೆಗೆ ಅವು ಅಂಗೀಕರಿಸೋಣಾಗುವವು. ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟರನಾಗಿದ್ದರೂ ಅಲ್ಲದಿದ್ದರೂ ಸಾಯೀ ಯಾವನೇ ಆದರೂ ಅರ್ಜಿಮಾಡಬಹುದು.

ಎಷ್ಟು ಮೊಬಲಗುಗಳಿಗೆ ಅರ್ಜಿಮಾಡಲ್ಪಡುತ್ತದೋ ಆ ಪೂರಾ ಮೊಬಲಗುಗಳನ್ನು ಅರ್ಜಿಗಳ ಸಂಗಡ ಡಿಪಾಜಿಟ ಮಾಡತಕ್ಕದ್ದು ಮತ್ತು ಅಷ್ಟೇ ಮೊಬಲಗುಗಳ (ಗವರ್ನಮೆಂಟ್ ಸೆಕ್ಯೂರಿಟಿ) ಪತ್ರವು ಅರ್ಜಿದಾರರಿಗೆ ಕೊಡಲ್ಪಡುವುದು. ಡಿಪಾಜಿಟುಗಳು ರೊಕ್ಕವಾಗಿ ಕೊಡಲ್ಪಡಬಹುದು. ಅಥವಾ ಪೂರ್ತಿ ಯಾ ಒಂದು ಭಾಗವು ಪ್ರತ್ಯೇಕವಿರುವ ಸೇವಿಂಗ್ಸ್ ಬ್ಯಾಂಕ್ ಲೆಕ್ಕಗಳಿಂದ ವಿತ್‌ಡ್ರಾಯಲ್ ಯಾನೆ ಈಸುಕೊಳ್ಳುವದರ ಮೂಲಕವಾಗಿ ಕೊಡಲ್ಪಡಬಹುದು.

ಟಪ್ಪಾಲು ಆಫೀಸಿನ ಮುಖಾಂತರ ಪಡೆದ ಮತ್ತು ಟಪ್ಪಾಲು ಆಫೀಸಿನ ಅಧಿಕಾರಿಗಳ ವಶದಲ್ಲಿಯೇ ಇಡಲ್ಪಟ್ಟ ಹೊಸ ಸಾಲಪತ್ರಗಳ ಬಡ್ಡಿಯ ಮೇಲೆ ಇನ್‌ಕಮ್‌ಟ್ಯಾಕ್ಸು ಹೊರಿಸೋಣಾಗಲಿಕ್ಕಿಲ್ಲ.

ಅರ್ಜಿದಾರರಿಗೆ, ರೂಪಾಯಿ ನಾಣ್ಯದಲ್ಲಿರುವ ಇಂಡಿಯಾ ಗವರ್ನಮೆಂಟಿನವರ ಸೇಕಡಾ 3½ ಬಡ್ಡಿಯ ಸೆಕ್ಯೂರಿಟಿ ಪತ್ರಗಳನ್ನು ಹೊಂದಿದವರು ಅವುಗಳ ಅಂಕಿತ ಮೌಲ್ಯದ ಸೇಕಡಾ 95 ರೂಪಾಯಿ ಪ್ರಕಾರವೂ ಅಥವಾ ಸೇಕಡಾ 3ರ ಬಡ್ಡಿಯ ಸೆಕ್ಯೂರಿಟಿ ಪತ್ರಗಳನ್ನು ಹೊಂದಿದವರು ಅವುಗಳ ಅಂಕಿತ ಮೌಲ್ಯದ ಸೇಕಡಾ 82½ರ ಪ್ರಕಾರವೂ, ಅವರು ಪಡೆಯುವ ಹೊಸ ಸಾಲದ ಮೊಬಲಗಿಗೆ ಸಮಾನವಾಗುವಷ್ಟು ಮೊಬಲಗಿನ ಮಟ್ಟಿಗೆ ಪರಭಾರೆಮಾಡಿ ಹೊಸ ಸಾಲವಾಗಿ ಮಾರ್ಪಡಿಸುವ ಹಕ್ಕುಗಳು ಕೊಡಲ್ಪಡುವುವು.

ಮಾರ್ಪಡಿಸುವ ಹಕ್ಕುಗಳುಳ್ಳವರು ಮಾರ್ಪಡಿಸುವ ಬಗ್ಗೆ ಮಾಡುವ ಅರ್ಜಿಗಳು, 1916ನೇ ಇಸವಿಯ ಅಕ್ಟೋಬರ್ 16ನೇ ತಾರೀಖಿನಿಂದ 1917ನೇ ಇಸವಿಯ ಜನವರಿ 16ನೇ ತಾರೀಖಿನ (ಇದು ಸೇರಿ) ವರೆಗೆ ಅಂಗೀಕರಿಸಲ್ಪಡುವುವು. ಮಾರ್ಪಡಿಸೋಣಾಗುವ ಸೆಕ್ಯೂರಿಟಿ ಪತ್ರಗಳ ಬಾಬತು 1916ನೇ ಇಸವಿಯ ಸಪ್ಟಂಬರು 30ನೇ ತಾರೀಖಿನ ವರೆಗಿನ ಬಡ್ಡಿಯು ಮಾರ್ಪಡಿಸುವ ಕಾಲದಲ್ಲಿ ರೊಕ್ಕವಾಗಿ ಸಲಾಯಿಸಲ್ಪಡುವುದು. ಇವುಗಳ ಬದಲಾಗಿ ಸಾದರುಮಾಡಲ್ಪಟ್ಟ ಹೊಸ ಸಾಲದ ಮೇಲಣ ಬಡ್ಡಿಯು 1916ನೇ ಇಸವಿಯ ಅಕ್ಟೋಬರ 1ನೇ ತಾರೀಖಿನಿಂದ ಎಣಿಸಲ್ಪಡುವುದು.

ತಪಸೀಲು ಮಾಹಿತಿ ಅಡಗಿರುವ ನೋಟೀಸಿನ ನಕಲುಗಳು ಮತ್ತು ಅರ್ಜಿಯ ಫಾರಂಗಳನ್ನು ಸೇವಿಂಗ್ಸ್ ಬ್ಯಾಂಕ್ ಕೆಲಸವು ನಿರ್ವಹಿಸಲ್ಪಡುವ ಯಾವ ಪೋಸ್ಟಾಫೀಸಿನಿಂದಾದರೂ ಪಡೆಯಬಹುದು. ಬೇಕಾದರೆ ಇದಕ್ಕೆ ಅನುಬಂಧಿಸಿರುವ ಅರ್ಜಿಯ ಫಾರಮನ್ನೇ ಉಪಯೋಗಿಸಬಹುದು.

1916-1917ನೇ ಇಸವಿಯ ಇಂಡಿಯಾ ಗವರ್ನಮೆಂಟಿನವರು ತೆಗೆಯುವ ಸೇಕಡಾ 4ರ ಬಡ್ಡಿಯ ಕನ್‌ವರ್ಶನ್ ಲೋನ್ ಎಂಬ ಮಾರ್ಪಡಿಸಬಹುದಾದ ಸಾಲದ ಬಗ್ಗೆ ಪೋಸ್ಟು ಆಫೀಸುಗಳ ಪರಿಮುಖವಾಗಿ ಮಾಡುವ ಅರ್ಜಿಯ ನಮೂನೆ.

(ಸೇವಿಂಗ್ಸ್ ಬ್ಯಾಂಕ್ ಕೆಲಸವು ನಿರ್ವಹಿಸಲ್ಪಡುವ ಯಾವದೊಂದು ಪೋಸ್ಟ್ ಆಫೀಸಿನಲ್ಲಿ 1916ನೇ ಇಸವಿಯ ಸಪ್ಟಂಬರ 25ನೇ ತಾರೀಕು ದಾಟಿಹೋಗುವದರೊಳಗಾಗಿ ಹಾಜರು ಮಾಡಲ್ಪಡಬೇಕು. ಅವಶ್ಯವಿದ್ದರೆ ಇದೇ ಫಾರ್ಮನ್ನು ಕತ್ತರಿಸಿ ಉಪಯೋಗಿಸಬಹುದು).

.... ಬಹಳ ಸ್ಪಷ್ಟವಾಗಿ ಬರೆಯ ಬೇಕ್

.... ನಾದ

ನಾನು 1916ನೇ ಇಸವಿಯ ಜೂನ್ 8ನೇ ತಾರೀಕಿನ ಇಂಡಿಯಾ ಗಜೇಟಿನ ವಿಶೇಷ ಸಂಚಿಕೆಯಾಗಿ ಛಾಯಿಸ್ ಮಾಡಲ್ಪಟ್ಟ ಇಸ್ತಿಹಾರಿನಲ್ಲಿ ಪ್ರಕಟಿಸಲ್ಪಟ್ಟ 1916-17ನೇ ವರ್ಷದ ಸೇಕಡಾ 4ರ ಬಡ್ಡಿಯ ಕನ್‌ವರ್ಶನ್ ಲೋನ್ ಎಂಬ ಮಾರ್ಪಡಿಸಬಹುದಾದ ಸಾಲದ ಪೈಕಿ ರೂ. .... ಬಗ್ಗೆ ಈ ಮೂಲಕ ದರಖಾಸ್ತು (ಅರ್ಜಿ) ಮಾಡುತ್ತೇನೆ.

ನಾನು ದರಖಾಸ್ತು ಮಾಡಿದ ಸಾಲದ ಮೊಬಲಗಿನ ಬಗ್ಗೆ,

(1) ನಾನು ರೊಕ್ಕವಾಗಿ ರೂ. ....
ಚೆಕ್ ಮೂಲವಾಗಿ ರೂ. ....
ಈ ಮೂಲಕ ಒಪ್ಪಿಸುತ್ತೇನೆ.

(2) ಪೋಸ್ಟು ಆಫೀಸು ಸೇವಿಂಗ್ಸ್ ಬ್ಯಾಂಕಿನಲ್ಲಿ ನನ್ನ ಲೆಕ್ಕದಲ್ಲಿ ಜಮೆ ಇರುವ ಮೊಬಲಗಿನಿಂದ ರೂ. ....
ಈ ಬಗ್ಗಾಗಿ ಈಸುಕೊಳ್ಳಲು ನಾನು ಅಧಿಕಾರಗೊಳಿಸುತ್ತೇನೆ ಮತ್ತು ಪಾಸ್‌ಬೂಕನ್ನು ಇದರೊಂದಿಗೆ ಲಗತ್ ಮಾಡಿದ್ದೇನೆ.

ಜುಮಲಾ ... .

(ರೊಕ್ಕವಾಗಿ ಯಾ ಚೆಕ್ ಮೂಲವಾಗಿ ಪಾವತಿಮಾಡಿದ ಮೊಬಲಗುಗಳನ್ನು ಮತ್ತು ಸೇವಿಂಗ್ಸ್ ಬ್ಯಾಂಕ್ ಲೆಕ್ಕದಿಂದ ಈಸುಕೊಂಡು ಪಾವತಿಮಾಡಿದ ಮೊಬಲಗುಗಳನ್ನು ಆ ಬಗ್ಗೆ ಬಿಟ್ಟ ಸ್ಥಳಗಳಲ್ಲಿ ಪ್ರತಿಪ್ರತ್ಯೇಕವಾಗಿ ಕಾಣಿಸತಕ್ಕದ್ದು. ಅನಾವಶ್ಯಕವಾದ ವಾಕ್ಯಗಳು ಯಾವುವೂ ಇದ್ದರೆ ಅವನ್ನು ಹೊಡೆದುಬಿಡತಕ್ಕದ್ದು.)

A. ನನ್ನ ಬಳಿಯಿಂದ ಅಂಗೀಕರಿಸೋಣಾದ ಸಾಲದ ಮೊಬಲಗನ್ನು ನನ್ನ ಬಗ್ಗಾಗಿ ಪೋಸ್ಟ್ ಮತ್ತು ಟೆಲಿಗ್ರಾಫ್ ಇಲಾಖೆಯ ಅಕೌಂಟಾಂಟ್ ಜನರಲ್‌ರವರು ಇಟ್ಟುಕೊಳ್ಳಬಹುದಾಗಿ ಮತ್ತು ಆ ಬಾಬತು ಬಡ್ಡಿಯನ್ನು--

(i) .... ಪೋಸ್ಟ್ ಆಫೀಸಿನಲ್ಲಿ ತೆರೆದಿರುವ ನನ್ನ ಪ್ರತ್ಯೇಕದ ನಂ. .... ನೇ ಸೇವಿಂಗ್ಸ್ ಬ್ಯಾಂಕ್ ಲೆಕ್ಕದಲ್ಲಿ,
(ಅರ್ಜಿದಾರನಿಗೆ ಈ ಮೊದಲೇ ತೆರೆಯಲ್ಪಟ್ಟ ಲೆಕ್ಕವು ಇಲ್ಲದಿದ್ದರೆ (i)ನೇ ಕಲಮನ್ನು ಹೊಡೆದುಬಿಡತಕ್ಕದ್ದು).

(ii) .... ಪೋಸ್ಟ್ ಆಫೀಸಿನಲ್ಲಿ ಈ ಬಗ್ಗಾಗಿ ತೆರೆಯಲ್ಪಡುವ ಒಂದು ಸೇವಿಂಗ್ಸ್ ಬ್ಯಾಂಕ್ ಲೆಕ್ಕದಲ್ಲಿ, ಜಮಾ ದಾಖಲು ಮಾಡಬೇಕಾಗಿ ಅಪೇಕ್ಷಿಸುತ್ತೇನೆ.

B. ನನ್ನ ಬಳಿಯಿಂದ ಅಂಗೀಕರಿಸೋಣಾದ ಸಾಲದ ಮೊಬಲಗಿನ ಬಗ್ಗೆ .... ಖಜಾನೆಯಲ್ಲಿ ಬಡ್ಡಿ ಪಾವತಿಯಾಗುವಂತೆ ನಮೂದಿಸಲ್ಪಟ್ಟ ಈ ಕೆಳಗಿನ ಮೌಲ್ಯದ ಪ್ರಾಮಿಸರಿ ನೋಟುಗಳು ನನಗೆ ಕೊಡಲ್ಪಡಬೇಕಾಗಿ ಅಪೇಕ್ಷಿಸುತ್ತೇನೆ.

(A ಅಥವಾ B ಕಲಮನ್ನು ಭರಾಯಿಸಿ ಉಳಿದದ್ದನ್ನು ಹೊಡೆದು ಬಿಡತಕ್ಕದ್ದು.)

1916-17ನೇ ಇಸವಿಯ ಸೇಕಡಾ 4ರ ಬಡ್ಡಿಯ ಕನ್‌ವರ್ಶನ್ ಲೋನ್ ಎಂಬ ಮಾರ್ಪಡಿಸಬಹುದಾದ ಸಾಲದ ಬಗ್ಗೆ ನನ್ನಿಂದ ದರಖಾಸ್ತು ಮಾಡಲ್ಪಟ್ಟ ಮೊಬಲಗಿಗೆ ಸಮಾನವಾದಷ್ಟು ಮೊಬಲಗಿನಮಟ್ಟಿಗೆ ಸೇಕಡಾ 3½ ಯಾ 3ರ ಬಡ್ಡಿಯ ರೂಪಾಯಿ ನಾಣ್ಯದಲ್ಲಿರುವ ಇಂಡಿಯಾ ಗವರ್ನಮೆಂಟಿನವರ ಸೆಕ್ಯೂರಿಟಿ ಪತ್ರಗಳನ್ನು ಮಾರ್ಪಡಿಸಲು ಸ್ವಾತಂತ್ರ್ಯಗೊಳಿಸುವ ಒಂದು ಹುಕುಮು ಯಾನೆ ಅಧಿಕಾರಪತ್ರವನ್ನು ಸಹಾ ನನಗೆ ಕೊಡಿಸಬೇಕಾಗಿ ಅಪೇಕ್ಷಿಸುತ್ತೇನೆ.

ಹೆಸರು.................... ವಿಳಾಸ .... ತಾರೀಖು ....

ಪೋಸ್ಟ್ ಆಫೀಸಿನಲ್ಲಿ ಹಾಜರು ಮಾಡಿದ ತಾರೀಖು.................... ರಜಿಸ್ಟರು ನಂ. ....

(ಅಂಗೀಕರಿಸುವ ಪೋಸ್ಟ್ ಮಾಸ್ಟರನಿಂದ ನಮೂದಿಸಲ್ಪಡತಕ್ಕದ್ದು). (ಹೆಡ್ ಪೋಸ್ಟ್ ಮಾಸ್ಟರನಿಂದ ನಮೂದಿಸಲ್ಪಡತಕ್ಕದ್ದು).

ಹೆಡ್ ಆಫೀಸು ಸ್ಟಾಂಪು.

ಎಲ್. ಡೇವಿಡ್ಸನ್,
ಆಕ್ಟಿಂಗ್ ಚೀಫ್ ಸೆಕ್ರೆಟರಿ.

Printed & Published by V. S. Kamath at the Mangalore Trading Association's Sharada Press, Mangalore.